ಶ್ರೀ ಮಲ್ಲಿಕಾರ್ಜುನ ಖರ್ಗೆ : ಇವತ್ತು ನಾನು ಹೇಳುತ್ತಿದ್ದೇನೆ. ನೀವೂ ಕೂಡ ಒಪ್ಪಿಕೊಳ್ಳುತ್ತಿದ್ದೀರಿ. ಇವತ್ತು ಪ್ರೈಮ್ ಮಿನಿಸ್ಟರ್ ಕೂಡ ಒಪ್ಪಿಕೊಳ್ಳುತ್ತಾರೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನೀವು ಮಾಡಿರುವುದೆಲ್ಲಾ ಸರಿಯೇ. ನಮ್ಮನ್ನು ಜೈಲಿಗೆ ಹಾಕಿರುವುದೂ ಸರೀನೆ.

ಅಧ್ಯಕ್ಷರು : ಈ ಮನೆಯ ನಡವಳಿಕೆಗಳನ್ನು ಪರಿಪಾಲನೆ ಮಾಡುವುದು ನನ್ನ ಕರ್ತವ್ಯ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ಯಾವ ರೀತಿ ನಡೆದುಕೊಳ್ಳಬೇಕೆಂದು ಹೇಳಿ ನಿಯಮಾವಳಿಗಳಲ್ಲಿದೆ, ಅದರ ಪ್ರಕಾರ ನಾವು ನಡೆದುಕೊಳ್ಳುತ್ತೇವೆ. ಆ ನಿಯಮಾವಳಿಗಳಿಗೆ ನಾವೇನಾದರೂ ತಪ್ಪಿ ಅಲಿಗೇಷನ್ಸ್ ಮಾಡಿದಾಗ ತಾವು ಆಗ ಇರುತ್ತೀರಲ್ಲಾ.

ವಿತ್ತೀಯ ಕಾರ್ಯಕಲಾಪಗಳು

(ಅ) ಬೇಡಿಕೆಗಳ ಮೇಲಿನ ಚರ್ಚೆ

† ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಮಾನ್ಯ ಅಧ್ಯಕ್ಷರೇ, ನಾನು ಬೇಡಿಕೆ ನಂ. 50,51 ಮತ್ತು 25 ರ ಬಗ್ಗೆ ವಿಚಾರವನ್ನು ಮಂಡನೆ ಮಾಡುವುದರ ಮೊದಲು ನನ್ನ ಮನಸ್ಸಿನಲ್ಲಿ ಒಂದು ವಿಚಾರ ಇದೆ. ಅದನ್ನು ತಮ್ಮಿಂದ ಕ್ಲಾರಿಫೈ ಮಾಡಿಕೊಳ್ಳಬೇಕೆಂದು ನನ್ನ ಮನಸ್ಸಿಗೆ ಅನಿಸುತ್ತಿದೆ. ನಾವು ಎರಡನೇ ಸಲ ಗೆದ್ದು ಬಂದಿದ್ದೇವೆ. 5 ಸಲ, 6 ಸಲ, 7 ಸಲ 8 ಸಲ ಗೆದ್ದು ಬಂದಿರತಕ್ಕಂಥ ಸದಸ್ಯರುಗಳು ಎಲ್ಲರೂ ಕೂಡ ಇಲ್ಲಿದ್ದಾರೆ. ನಮಗೆ ಎಲ್ಲೋ ಒಂದು ಕ್ಷಣ ನನಗೇ ಅನ್ನಿಸುತ್ತಿದೆ. ಬೆಳಿಗ್ಗೆ 10-30 ಗಂಟೆಗೆ 48 ಬೇಡಿಕೆಗಳನ್ನು ಮಂಡನೆ ಮಾಡಿದ್ದಾರೆ. ಈಗಾಗಲೇ ಮಂಡನೆ ಮಾಡಿರುವ 10 ಬೇಡಿಕೆಗಳು, ಪ್ಲಸ್ ಈಗ ಮಂಡನೆಯಾಗಿರುವ 48 ಬೇಡಿಕೆಗಳು ಇದಕ್ಕೆ ಕೇವಲ 4 ಗಂಟೆ 5 ಗಂಟೆಗಳ ಕಾಲದೊಳಗೇ ನಾವು ಚರ್ಚೆಯನ್ನು ಮಾಡಿ ಆ ವಿಚಾರವನ್ನು ನಾವು ಮಂಡನೆ ಮಾಡಿ ಉತ್ತರವನ್ನೂ ತೆಗೆದುಕೊಳ್ಳುವ ವ್ಯವಸ್ಥೆಯನ್ನು ನೋಡಿದಾಗ ನಾನು ಹೊಡೆದ ಹಾಗೆ ಮಾಡುತ್ತೇನೆ, "ನೀ ಅತ್ತ ಹಾಗೆ ಮಾಡು" ಎನ್ನುವ ಗಾದೆಯ ಹಾಗೆ ಇಲ್ಲಿ ಚರ್ಚೆ ಆಗುತ್ತಾ ಇದೆಯೇ ಎಂದು ಹೇಳಿ ನೋವು ನನ್ನ ಮನಸ್ಸನ್ನು ಕಾಡುತ್ತಿದೆ. ಅದಕ್ಕೆ ಯಾರನ್ನೂ ಜವಾಬ್ದಾರಿ ಮಾಡುತ್ತಿಲ್ಲ. ನನ್ನನ್ನು ಸೇರಿಸಿಕೊಂಡು ಹೇಳುತ್ತಿದ್ದೇನೆ. ಇದು ಸಾವಿರಾರು ಕೋಟಿ ರೂಪಾಯಿಗಳ ಬೇಡಿಕೆಯನ್ನು ರಾಜ್ಯದ ರಕ್ಷಣೆಯನ್ನು ಮಾಡುವುದಕ್ಕೆ ಹೊರಟಂಥ ನಾವು ಜನಪ್ರತಿನಿಧಿಗಳು ಇದಕ್ಕೆ ಕೊಡುವ ಪ್ರಾಮುಖ್ಯತೆಯನ್ನು ನೋಡಿದಾಗ ನನಗೆ ಬಹಳ ನೋವಾಗುತ್ತಿದೆ.

ಅಧ್ಯಕ್ಷರು : ಅಧಿವೇಶನ 8ನೇ ತಾರೀಖು ಪ್ರಾರಂಭವಾಯಿತು. 8 ರಿಂದ 30ನೇ ತಾರೀಖಿನವರೆಗೂ ನಿಮ್ಮನ್ನು ಯಾರೂ ಮಾತನಾಡಬೇಡಿ ಎಂದು ಹೇಳಿದರೇ? ಮಾತನಾಡಿ, ಮಾತನಾಡಿ ಎಂದು ಹೇಳಿದರೂ ನೀವೇ ಮಾತನಾಡದಿದ್ದರೆ ನಾವೇನು ಮಾಡೋಣ.?

ಶ್ರೀ ಎ. ರಾಮದಾಸ್ : ಇರಲಿ ಬಿಡಿ. ನನ್ನ ಮನಸ್ಸಿನಲ್ಲಿರುವ ಭಾವನೆಗಳನ್ನು ನಿಮ್ಮ ಮುಂದೆ ಹೇಳಿಕೊಂಡೆ ಅಷ್ಟೆ. ಇವತ್ತು ಪ್ರಮುಖವಾಗಿ ನಾನು ಆಗಲೇ ಹೇಳಿದ ಹಾಗೆ ಆರೋಗ್ಯ ಮಂತ್ರಿಗಳು ಇಲ್ಲಿ ಬಂದಿದ್ದಾರೆ, ಮೆಡಿಕಲ್ ಎಜ್ಯುಕೇಷನ್ ಮಿನಿಸ್ಟರ್ ನಂ. *1* ಇಲ್ಲಿ ಇದ್ದಾರೆ. 2 ಬಗ್ಗೆ ಕೂಡ ಮಾತನಾಡುವುದು ಇದೆ. ಆ ದೃಷ್ಟಿಯಲ್ಲಿ ಅವರು ಇಲ್ಲ ಎನ್ನುವ ವಿಚಾರವನ್ನು ತಮ್ಮುಂದೆ ಹೇಳುತ್ತಾ ಇದರ ಜೊತೆಯಲ್ಲಿ ಎನರ್ಜಿಗೆ ಸಂಬಂಧಪಟ್ಟ ಬೇಡಿಕೆ ಸಂಖ್ಯೆ 25 ಈ

ಮೂರು ಅಂಶಗಳನ್ನು ತಮ್ಮ ಮೂಲಕ ತಮ್ಮ ಅಪ್ಪಣೆಯನ್ನು ಪಡೆದು ಸಭೆಯ ಮುಂದೆ ಇಡಲಿಕ್ಕೆ ಬಯಸುತ್ತೇನೆ. ಒಂದು, ಈ ರಾಜ್ಯದ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಯಾವ ರೀತಿ ರಾಜ್ಯದಲ್ಲಿ ಮುನ್ನಡೆಯುತ್ತಿದೆ ಎನ್ನುವಂಥದ್ದನ್ನು ಇಡೀ ದೇಶ ನೋಡುವಂಥ ಒಂದು ವ್ಯವಸ್ಥೆಯೊಳಗೆ ಇದೆ. ಕಾರಣ ಕರ್ನಾಟಕ ರಾಜ್ಯ ಎಜ್ಯುಕೇಷನ್‌ಗೆ ತನ್ನದೇ ಆದಂಥ ಒಂದು ಮಹತ್ವವನ್ನು ಕೊಟ್ಟಂಥ ರಾಜ್ಯ. ಆದರೆ ವೈದ್ಯರನ್ನು ಯಾರು ತಯಾರು ಮಾಡಬೇಕಾದ ಒಂದು ಇಲಾಖೆ ಇದೆ, ಅದು ವಿಶೇಷವಾಗಿ ಮೆಡಿಕಲ್ ಕಾಲೇಜುಗಳು ಇವೆ, ಆ ವೈದ್ಯಕೀಯ ಶಿಕ್ಷಣ ಯಾವ ರೀತಿಯಲ್ಲಿ ಮುಂದೆ ನಡೆಯುತ್ತಿದೆ ಎನ್ನುವುದನ್ನು ನೋವಿನಿಂದ ನನ್ನ ವಿಚಾರವನ್ನು ಮಂಡನೆ ಮಾಡಬೇಕಾದ ಅವಶ್ಯಕತೆ ಇದೆ.

> " Karnataka is producing half-baked doctors and admission policy is not clear. Hence we should open medical colleges and train our students in our own country. The students here are very poor since mushrooming of more medical colleges without infrastructure."

ಈ ಮಾತನ್ನು ನಾನು ಈ ಸದನದಲ್ಲಿ ಹೇಳುತ್ತಿಲ್ಲ. ಈ ಮಾತನ್ನು ಹೇಳಿದಂಥವರು ಶ್ರೀ ಮಾಥುರ್ ಮಹಮದ್, ಇವರು ಮಲೇಷಿಯಾದ ಪ್ರಧಾನಮಂತ್ರಿಗಳು. ಈ ರಾಜ್ಯಕ್ಕೆ ಅವರು ಬಂದಂಥ ಸಂದರ್ಭದಲ್ಲಿ ಅವರ ವಿದ್ಯಾರ್ಥಿಗಳ ಗುಣಮಟ್ಟವನ್ನು ಅಡ್ಮಿಷನ್ ಪಾಲಿಸಿಯಲ್ಲಿ ಆದಂಥ ಸಮಸ್ಯೆಯಿಂದ 123 ಜನ ವಿದ್ಯಾರ್ಥಿಗಳನ್ನು ಈ ದೇಶದಿಂದ ಮತ್ತೆ ಹಿಂದಕ್ಕೆ ಕರೆದುಕೊಂಡು ಹೋಗತಕ್ಕ ವ್ಯವಸ್ಥೆಗಳು ಆದಂಥ ಸಂದರ್ಭದಲ್ಲಿ ಆದಕ್ಕೆ ಎಂಸಿಐ ಪರ್ಮಿಷನ್ ಕೊಡದೇ ಇರುವ ಸಂದರ್ಭದಲ್ಲಿ ಹೇಳಿದಂಥ ಮಾತು. ಇದು ಕೇವಲ ಆಡಳಿತ ಪಕ್ಷಕ್ಕೆ, ನನಗೆ ಎನ್ನುವ ಭಾವನೆಗಳನ್ನು ತೆಗೆದುಕೊಳ್ಳುವುದಿಲ್ಲ. ಈ ಒಂದು ಮೆಡಿಕಲ್ ಎಜ್ಯುಕೇಷನ್ ಸಿಸ್ಟಂ ಬಗ್ಗೆ ಇಡೀ ರಾಜ್ಯ ಮತ್ತು ನಾವೆಲ್ಲರೂ ಕೂಡ ನಾಚಿಕೆಪಡುವಂಥ ವ್ಯವಸ್ಥೆಗಳು ಈ ಮಾತನ್ನು ಆ ಪ್ರಧಾನಿಗಳಿಂದ ಕೇಳಿ ನನ್ನ ಮನಸ್ಸಿಗೆ ಬಹಳ ಆಘಾತವಾಯಿತು. ಕಾರಣ ಇವತ್ತು ರಾಜ್ಯದಲ್ಲಿ ಪಾಲಿಸಿಯ ಪ್ರಕಾರದಲ್ಲೇ 3500 ಜನ ಪಾಪ್ಯುಲೇಷನ್ ಇದ್ದರೆ ಒಬ್ಬರು ಡಾಕ್ಟರ್ ಇರಬೇಕೆಂದು ಇದೆ. ನಮ್ಮ ರಾಜ್ಯದಲ್ಲಿ ಈ ವರ್ಷದ ಸೆನ್ಸಸ್ ಪ್ರಕಾರದಲ್ಲೇ 2150 ಜನಕ್ಕೆ ಒಬ್ಬ ಡಾಕ್ಟರ್ ಎಂದು ಈಗಾಗಲೇ ನಿರ್ಮಾಣವಾಗಿದೆ. ಅದರ ಜೊತೆಯಲ್ಲಿ ಅದಕ್ಕೆ ಸಂಬಂಧಪಟ್ಟ ಹಾಗೆ ಮೊದಲಿಯಾರ್ ಕಮಿಟಿ ಮತ್ತು ಸುಂದರ್ ಕಟಿಯಾರ್ ಸಿಂಗ್ ಕಮಿಟಿ, ಬಜಾಜ್ ಕಮಿಟಿ, ಎಂಸಿಐ ರಿಪೋರ್ಟ್ ಮತ್ತು ಈಗತಾನೇ ಮುಖ್ಯಮಂತ್ರಿಗಳು ಅವರ ಒಂದು ದೂರದ ದೃಷ್ಟಿಯಿಂದ ಆಯೋಜನೆ ಮಾಡಿದಂಥ ಒಂದು ಟಾಸ್ಕ್‌ಫೋರ್ಸ್. ಇವೆಲ್ಲಾ ಕೂಡ ಇವರ ಬಗ್ಗೆ ವರದಿಯನ್ನು ಕೊಟ್ಟಿದೆ. ಆ ವರದಿಯ ಪ್ರಕಾರದಲ್ಲಿ ಟಾಸ್ಕ್‌ಫೋರ್ಸ್ ಒಂದು ವರದಿಯನ್ನು ಕೊಟ್ಟಿತ್ತು. ಅದರ ಪ್ರಕಾರದಲ್ಲಿ No more medical colleges. ಎಂದು. ಹೌದು. ಸನ್ಮಾನ್ಯ ಖರ್ಗೆಯವರು ಇಲ್ಲಿ ಇದ್ದರು. ಅಪೋಜಿಷನ್‌ನಲ್ಲಿ ಇದ್ದಂಥ ಸಂದರ್ಭದಲ್ಲಿ ನಾವೂ ಅವರ ಜೊತೆ ಸೇರಿಕೊಂಡಿದ್ದೆವು. ಜೆ.ಹೆಚ್. ಪಟೇಲ್ ಸರ್ಕಾರ ಕೊನೆಯ ಹಂತದಲ್ಲಿ ಏಳು ಮೆಡಿಕಲ್ ಕಾಲೇಜುಗಳನ್ನು ಅನಾವಶ್ಯಕವಾಗಿ ಕೊಟ್ಟರು. ಇದು ಆಗಬಾರದು ಎನ್ನುವ ದೊಡ್ಡ ಕೂಗು ವಿಧಾನಸೌಧದೊಳಗೆ ಕೇಳಿಸಿತು. ಜೊತೆಯಲ್ಲಿ ಕಾಂಗ್ರೆಸ್ಸಿನ ಎಲ್ಲಾ ಶಾಸಕರುಗಳು ಅವರ ಪಕ್ಷದ ವತಿಯಿಂದ

ರಾಜ್ಯಪಾಲರನ್ನು ಭೇಟಿ ಮಾಡಿ ಈ ರಾಜ್ಯದಲ್ಲಿ ಮೆಡಿಕಲ್ ಸಿಸ್ಟಂನ್ನು ಹಾಳುಮಾಡುತ್ತಿದ್ದಾರೆಂದು ಹೇಳಿ ರಾಜ್ಯಪಾಲರಿಗೆ ಒಂದು ಮೆಮೊರಾಂಡಂನ್ನು ಕೂಡ ಕೊಟ್ಟಿದ್ದರು. ನಾನು ಮುಖ್ಯಮಂತ್ರಿಗಳು ಬಂದಂಥ ಸಂದರ್ಭದಲ್ಲಿ ಟಾಸ್ಕ್‌ಫೋರ್ಸ್‌ನ್ನು ಅವರು ನೇಮಕ ಮಾಡಿದಾಗ ನಾನು ಬಹಳ ಆಸೆಪಟ್ಟಿದ್ದೆ. ನಮ್ಮಲ್ಲಿರುವ ಡಾಕ್ಟರ್ಸ್. No more doctors ಆದರೂ ಪರರಾಗಿಲ್ಲ Half-baked doctors -- ಬೇಡ ಎನ್ನುವ ಆಸೆಯನ್ನು ನಾನು ವ್ಯಕ್ತಪಡಿಸಿದ್ದೆ. ಆದರೆ ಆದಂಥದ್ದು ಏನು? ಒಂದು ಕಮಿಟಿಯನ್ನು ಪ್ರಾರಂಭ ಮಾಡಿದಿರಿ. ಅದರಲ್ಲಿ ಕಾನೂನು ಮಂತ್ರಿಗಳು, ವೈದ್ಯಕೀಯ ಶಿಕ್ಷಣ ಮಂತ್ರಿಗಳು, ಆರೋಗ್ಯ ಮಂತ್ರಿಗಳು, ಗೃಹ ಸಚಿವರು ಮತ್ತು ಈಗಿನ ಹಿಂದಿನ ಕೋ-ಆಪರೇಷನ್ ಮಿನಿಸ್ಟರ್, ಇವರ ಐದು ಜನರ ಒಂದು ಕಮಿಟಿಯನ್ನು ಫಾರಂ ಮಾಡಿ ಈ ಮೆಡಿಕಲ್ ಕಾಲೇಜುಗಳ ಬಗ್ಗೆ ಹಿಂದಿನ ಜೆ.ಹೆಚ್. ಪಾಟೀಲ್ ಸರ್ಕಾರ ಏನು ಅನ್ಯಾಯವನ್ನು ಮಾಡಿದೆ, ಅದನ್ನು ಸರಿದೂಗುವ ವ್ಯವಸ್ಥೆಗೋಸ್ಕರವಾಗಿ ತಾವು ಸರಿ ಮಾಡುತ್ತೇವೆಂದು ಹೇಳಿ ಹೊರಟಿರಿ. ಆಗಿದ್ದೇನು? ಟಾಸ್ಕ್‌ಫೋರ್ಸ್ ತನ್ನ ವರದಿಯನ್ನು ಕೊಟ್ಟಿತು. ಈ ರಾಜ್ಯಕ್ಕೆ ಯಾವುದೇ ಕಾರಣಕ್ಕೂ ಹೆಚ್ಚಿನ ಮೆಡಿಕಲ್ ಕಾಲೇಜುಗಳು ಬೇಡ ಎಂದು. ಆದರೆ ಆಗಿದ್ದೇನು ಎಂದರೆ ಏಳು ಕಾಲೇಜುಗಳನ್ನು ಹಿಂದಿನ ಸರ್ಕಾರ ಕೊಡಲಿಕ್ಕೆ ಹೊರಟಿದ್ದನ್ನು ಅದರ ಜೊತೆಯಲ್ಲಿ ಎಂಟು ಕಾಲೇಜುಗಳು ಸೇರಿಸಿ 15 ಕಾಲೇಜುಗಳಿಗೆ ಒಂದು ಫೀಸಿಬಿಲಿಟಿ ರಿಪೋರ್ಟನ್ನು ಈ ಸರ್ಕಾರ ಕೊಡುವಂಥ ವ್ಯವಸ್ಥೆಯಾಯಿತು. ಇದು ಇವರ ಒಂದು ದೊಡ್ಡ ಸಾಧನೆ. ಇವತ್ತು ವಿಶೇಷವಾಗಿ ಈ ಒಂದು ಕಾಲೇಜುಗಳಲ್ಲಿ ಬೇಕಾಗಿರುವ 300 ಬೆಡ್‌ಗಳ ಆಸ್ಪತ್ರೆ ಇದೆಯೇ? ಸ್ವಂತ ಕಟ್ಟಡ ಇದೆಯೇ? 25 ಎಕರೆ ಅವರದೇ ಆದಂಥ ಒಂದು ಕ್ಯಾಂಪಸ್ ಇದೆಯೇ? ಇವೆಲ್ಲದರ ಬಗ್ಗೆ ಹೆಲ್ತ್‌ಇಂಟೆಲಿಜೆನ್ಸ್ ಬ್ಯುರೋ ಒಂದು ರಿಪೋರ್ಟ್‌ನ್ನು ಕೊಟ್ಟಿದೆ. ಸರ್ಕಾರವನ್ನು ನಾನು ಕೇಳುವುದಕ್ಕೆ ಇಚ್ಛಿಪಡುತ್ತೇನೆ. ದಯಮಾಡಿ ಈ ಸದನದ ಮುಂದೆ ಆ ಹೆಲ್ತ್ ಬ್ಯುರೋ ಏನು ಅವರು ರಿಪೋರ್ಟನ್ನು ಕೊಟ್ಟಿದ್ದಾರೆ, ಅದನ್ನು ಸದನದ ಮುಂದೆ ಇಟ್ಟರೆ ಎಲ್ಲರಿಗೂ ಕೂಡ ಈ ರಾಜ್ಯದವರಿಗೆ ಅರ್ಥವಾಗುತ್ತದೆ ಎನ್ನುವುದನ್ನು ತಮ್ಮ ಮುಂದೆ ಹೇಳುವುದಕ್ಕೆ ನಾನು ಬಯಸುತ್ತೇನೆ. ರಾಜ್ಯದಲ್ಲಿ ಇವತ್ತು ಒಂದು ದೊಡ್ಡ ವಿಚಾರ ಬಂದಿದೆ. ಅದು ಅಂಗ್ವಿಸ್ಟಿಕ್ ಮೈನಾರಿಟಿ ಮತ್ತು ರಿಲಿಜಿಯಸ್ ಮೈನಾರಿಟಿ. ಈ ಎರಡು ಹೆಸರಿನಲ್ಲಿ ಈ ರಾಜ್ಯದ ವಿದ್ಯಾರ್ಥಿಗಳು ಯಾರು ಮೆರಿಟ್ ವಿದ್ಯಾರ್ಥಿಗಳಿದ್ದಾರೆ, ಅವರಿಗೆ ಕೊಡಬೇಕಾದ ಸೀಟುಗಳನ್ನು ಕಸಿದುಕೊಂಡು ಮಾರಾಟ ಮಾಡುವುದಕ್ಕೆ ಏನು ಎಕ್ಸೆಸ್ ಆಕ್ಷನ್ ಮಾಡುತ್ತಾರಲ್ಲಾ, ಅದಕ್ಕಿಂತಲೂ ಹೆಚ್ಚಾಗಿ ಮೆಡಿಕಲ್ ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ಅವರ ಸೀಟುಗಳನ್ನು ಆಕ್ಷನ್ ಮಾಡುವ ವ್ಯವಸ್ಥೆ ಈ ರಾಜ್ಯದಲ್ಲಿ ಬಂದಿದೆ. ಇದರಲ್ಲಿ ಮಣಿಪಾಲ್, ಇದು ಡೀಮ್ಡ್ ಯೂನಿವರ್ಸಿಟಿ ಎನ್ನುವ ಮಾತನ್ನು ಅವರು ಹೇಳಿದರು. ನಾನು ಒಪ್ಪಿಕೊಳ್ಳುತ್ತೇನೆ. ತಮಿಳುನಾಡಿನಲ್ಲಿ ಈಗ ಒಂದು ಕೋರ್ಟ್ ಜಡ್ಜ್‌ಮೆಂಟ್ ಆಯಿತು. ಜಡ್ಜ್‌ಮೆಂಟಿನ ಪ್ರಕಾರದಲ್ಲಿ ಯಾವುದು ಡೀಮ್ಡ್ ಯೂನಿವರ್ಸಿಟಿ ಇದೆ, ಅದಕ್ಕೆ ಯು.ಜಿ.ಸಿ ಯವರು ಅಡ್ಮಿಷನನ್ನು ಮಾಡಬೇಕೆಂದು ಹೇಳಿದರು. ಈಗ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ ಅವರು ಮನವಿಯನ್ನು ಕೊಟ್ಟಿದ್ದಾರೆ. ನಮ್ಮದು ಡೀಮ್ಡ್ ಯೂನಿವರ್ಸಿಟಿ ಅಲ್ಲ, ಇದು ಮೈನಾರಿಟಿ ಇನ್ಸ್‌ಟಿಟ್ಯೂಷನ್. ಇನ್ನು ಮುಂದೆ ನಾವು ಯುಜಿಸಿ ಯಿಂದ ಅಡ್ಮಿಷನನ್ನು ಮಾಡುವುದಿಲ್ಲ, ನಾವೇ ಅಡ್ಮಿಷನ್ ಮಾಡಿಕೊಳ್ಳುವುದಕ್ಕೆ ಪ್ರಾವಿಷನನ್ನು ಮಾಡಿಕೊಡಿ ಎಂದು ಕೇಳಿದ್ದಾರೆ. ಈ ದ್ವಂದ್ವವಾದ ನೀತಿಯಿಂದ ರಾಜ್ಯದಲ್ಲಿ ಏನಾಗಿದೆ ಎಂದರೆ

ಹಿಂದೆ ಎಲ್ಲಾ ಅಬ್ಕಾರಿ ಲಾಬಿ ಇತ್ತು, ಮೆಡಿಕಲ್ ಲಾಬಿ ಇದೆ, ಇಡೀ ರಾಜ್ಯವನ್ನು ಒಂದು ಕಂಟ್ರೋಲ್ ಮಾಡುವಂಥ ವ್ಯವಸ್ಥೆ ಇವತ್ತು ಮೆಡಿಕಲ್ ಲಾಬಿಯಲ್ಲಿ ಇವತ್ತು ಪ್ರೈವೇಟ್ ಮ್ಯಾನೇಜ್‌ಮೆಂಟ್‌ಗಳಿಂದ ಬಂದಿದೆ ಎಂದು ನಾನು ಬಹಳ ನೋವಿನಿಂದ ಹೇಳಬೇಕಾಗಿದೆ.

11.10 ಎ.ಎಂ.

ಇವತ್ತು ತಮಿಳು ಮೈನಾರಿಟಿಗೆ ಎಂದು ಹೇಳಿ ಎಂ‌ಇಜಿ ಮೆಡಿಕಲ್ ಕಾಲೇಜು ಕೊಟ್ಟಿರಿ. ಅದು ಡಾ|| ಮೋಹನ್ ಅವರಿಗೆ. ತೆಲುಗು ಮೈನಾರಿಟಿ ಎಂದು ಹೇಳಿ ವೈದೇಹಿ ಮೆಡಿಕಲ್ ಕಾಲೇಜನ್ನು ಶ್ರೀ ಆದಿ ಕೇಶವುಲು ಅವರಿಗೆ ಕೊಟ್ಟಿರಿ. ಮತ್ತೊಂದು ತೆಲುಗು ಮೈನಾರಿಟಿ ಎಂದು ಹೇಳಿ ಕೆ.ಎಸ್.ಹೆಗಡೆ ಅವರಿಗೆ ಮಂಗಳೂರಿನಲ್ಲಿ ಕೊಟ್ಟಿರಿ. ಕೊಂಕಣಿ ಒಂದು ಭಾಷೆಗೋಸ್ಕರವಾಗಿ ಮಾಹೆಯನ್ನು ಇವತ್ತು ಕೊಟ್ಟಾಗಿದೆ. ಮಹಾರಾಷ್ಟ್ರದಲ್ಲಿ ಮರಾಠಿ ಭಾಷೆಗೋಸ್ಕರವಾಗಿ ಮಹಾರಾಷ್ಟ್ರ ಮಂಡಲಿಗೆ ಡೆಂಟಲ್ ಕಾಲೇಜನ್ನು ಕೊಟ್ಟಿದ್ದೀರಿ. ಇವೆಲ್ಲಾ ಕಾಲೇಜುಗಳಲ್ಲಿ ಇವತ್ತೂ ಕೂಡ ಆ ಮೈನಾರಿಟಿ ಹೆಸರಿನಲ್ಲಿ ಯಾವ ಮೈನಾರಿಟಿ ಸಮಾಜದ ಅಡ್ಮಿಷನ್ ಅನ್ನು 50 ಪರ್ಸೆಂಟ್ ಮಾಡಬೇಕು ಎಂದು ಇತ್ತು, ಇವತ್ತಿನ ವರೆಗೆ ಕೂಡ ರಾಜ್ಯ ಸರ್ಕಾರ ಆ ಮೈನಾರಿಟಿ ಭಾಷೆಯ ವಿದ್ಯಾರ್ಥಿಗಳಿಗೆ ಅಡ್ಮಿಷನ್ ಮಾಡುವಂತಹ ವ್ಯವಸ್ಥೆ ಆಗಿದೆಯಾ ಎಂದು ಯಾವತ್ತಾದರೂ ನೋಡಿದ್ದೀರಾ? ದಯಮಾಡಿ ಹೌದು ಮಾಡಿದ್ದೇವೆ ಎನ್ನುವುದಾದರೆ ನಾನು ಒಪ್ಪಿಕೊಳ್ಳುತ್ತೇನೆ. ಇಲ್ಲಿಯವರೆಗೂ ಕೂಡ ಮೈನಾರಿಟಿ ಕಮೀಷನ್ ಮಾಡಿದಿರಿ. ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಬಹಳ ಸಂತೋಷವಾಯಿತು. ಈ ರಾಜ್ಯದಲ್ಲಿರುವಂತಹ ಮೈನಾರಿಟೀಸ್ ಬಗ್ಗೆ ಹೆಚ್ಚಿನ ಕಾಳಜಿ ಕೊಡಬೇಕು ಎಂದು ಹೇಳಿ ಮೈನಾರಿಟಿ ಕಮೀಷನ್ ಬಗ್ಗೆ ಏನಾದರೂ ಕಿಂಚಿತ್ ಕಾಳಜಿ ಮಾಡಿದ್ದಾರಾ? ಮೈನಾರಿಟಿ ಹೆಸರಿನಲ್ಲಿ, ಲಿಂಗ್ವಿಸ್ಟಿಕ್ ಮೈನಾರಿಟಿ ಹೆಸರಿನಲ್ಲಿ ತೆಗೆದುಕೊಂಡಂತಹ ಒಂದೊಂದು ಸೀಟನ್ನು 20,15,25 ಲಕ್ಷ ರೂಪಾಯಿ ಈ ರೀತಿಯಲ್ಲಿ ಹರಾಜು ಮಾಡುವಂತಹ ವ್ಯವಸ್ಥೆಗಳು ಆದರೆ ಈ ಅಡ್ಮಿಷನ್ ಪಾಲಿಸಿಯನ್ನು ಮಾಡುವಂತಥವರು ಯಾರು? ವಿಶೇಷವಾಗಿ ಈ ರಾಜ್ಯದಲ್ಲಿ ಇರುವಂತಹ ವಿದ್ಯಾರ್ಥಿಗಳಿಗೆ ಕೊಡಬೇಕೆಂದು ಹೇಳಿ ನ್ಯಾಯಾಲಯದ ಜಡ್ಜ್‌ಮೆಂಟ್ ಆಯಿತು. ಇವತ್ತು ಕೂಡ ತಮಿಳುನಾಡು ಹಾಗೂ ಬೇರೆ ಬೇರೆ ಕಡೆಗಳಿಂದ ಬಂದಂತಹ ವಿದ್ಯಾರ್ಥಿಗಳಿಗೆ ನಮ್ಮಲ್ಲಿರುವ ಮೆರಿಟ್ ವಿದ್ಯಾರ್ಥಿಗಳಿಗೆ ಡಿನೈ ಮಾಡಿ ಅವರಿಗೆ ಕೊಡುವಂತಹ ವ್ಯವಸ್ಥೆಗಳು ಆಗಿವೆ. ಇವತ್ತು ರಿಲೀಜಿಯಸ್ ಮೈನಾರಿಟಿಗೆ ಏನೋಪೋಯಾ ಮೆಡಿಕಲ್ ಕಾಲೇಜ್, ಮಂಗಳೂರಿಗೆ ಕೊಟ್ಟಿದ್ದೀರಿ. ಹಾಗೆಯೇ ಖಾಜಿ ನವಾಬ್ ಬಂದ್ ಮೆಡಿಕಲ್ ಕಾಲೇಜು, ಗುಲ್ಬರ್ಗಾ, ಅಲ್-ಆಮೀನ್ ಮೆಡಿಕಲ್ ಕಾಲೇಜ್, ಬಿಜಾಪುರ, ಫಾದರ್‌ಮುಲ್ಲಾ ಮೆಡಿಕಲ್ ಕಾಲೇಜು, ಮಂಗಳೂರು, ಇವರಿಗೆ ಕೊಟ್ಟಿದ್ದೀರಿ. ಇಲ್ಲಿ 50 ಪರ್ಸೆಂಟ್ ವಿದ್ಯಾರ್ಥಿಗಳಿಗೆ ಮೆರಿಟನ್ ಆಧಾರದ ಮೇಲೆ ಕೊಡಬೇಕು. ಇವತ್ತೂ ಕೂಡ ಸಿಇಟಿಗೆ, ಸಿಇಟಿಯ ವಿದ್ಯಾರ್ಥಿಗಳಿಗೆ ಅಡ್ಮಿಷನ್ ಅನ್ನು ಸೆಂಟ್ ಜಾನ್ಸ್ ಮೆಡಿಕಲ್ ಕಾಲೇಜಿನಲ್ಲಿ ಕೊಡುತ್ತಿಲ್ಲ. ಇದರ ಬಗ್ಗೆ ಯಾವಾಗಲಾದರೂ ಸರ್ಕಾರ ಕ್ರಮ ತೆಗೆದುಕೊಳ್ಳುತ್ತಿದೆಯಾ? ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಬಿಲ್ ಅನ್ನು ಸರ್ಕಾರ ಇಲ್ಲಿ ತಂದಿದ್ದರೆ ನಾನು ತುಂಬಾ ಸಂತೋಷ ಪಡುತ್ತಿದ್ದೆ. ಅದನ್ನು ಕಂಟ್ರೋಲ್ ಮಾಡುವಂತಹ ವ್ಯವಸ್ಥೆ ಆಗಿದ್ದರೆ ನಾನು ತುಂಬಾ ಸಂತೋಷ ಪಡುತ್ತಿದ್ದೆ. ಇವತ್ತು ವಿಶೇಷವಾಗಿ ಆ ಮೈನಾರಿಟಿಯವರಿಗೆ, ಮುಸ್ಲಿಮ್ ಬಂಧುಗಳಿರಲಿ, ಕ್ರಿಶ್ಚಿಯನ್ ಬಂಧುಗಳಿಗೆ ಇರಲಿ, ಯಾವ ಬಂಧುಗಳಿಗೋಸ್ಕರವಾಗಿ ವಿದ್ಯಾರ್ಥಿಗಳಿಗೇ ಎಂದು ಕಾಲೇಜನ್ನು ಕೊಟ್ಟಿದೆ, ಆ ಕಾಲೇಜಿನಲ್ಲಿ ಬರುವಂತಹ 35 ಪರ್ಸೆಂಟ್ ಸೀಟುಗಳನ್ನು ದೇಶದ

ಬೇರೆ ಬೇರೆ ಕಡೆಗೆ ಮಾರಾಟ ಮಾಡುವಂತಹ ವ್ಯವಸ್ಥೆಗಳು, ಜಾಲ ದೊಡ್ಡದಾಗಿ ಬೆಳೆದಿವೆ. ಇದು ಎಂಇಜೆ ಮೆಡಿಕಲ್ ಕಾಲೇಜಿನ ಒಂದು ಉದಾಹರಣೆ. ನನಗೆ ಸಮಯ ಕಡಿಮೆ ಕೊಟ್ಟಿರುವುದರಿಂದ ನಾನು ಒಂದು ಉದಾಹರಣೆ ಕೊಡುತ್ತೇನೆ. ಪೂರಾ ಎಂಇಜೆ ಮೆಡಿಕಲ್ ಕಾಲೇಜು ಇರುವಂಥಹದ್ದು ಇಲ್ಲೇ ಪಕ್ಕದಲ್ಲಿಯೇ. ಆ ಕಾಲೇಜಿಗೆ ಇವತ್ತೂ ಅಡ್ಮಿಷನ್ ಅನ್ನು ಕೊಡಬಾರದು ಎಂದು ಹೇಳಿ ಯೂನಿವರ್ಸಿಟಿಯವರು ನಿರ್ಧಾರ ಮಾಡಿದ್ದರು. ಅದರ ಜೊತೆಯಲ್ಲಿಯೇ ರಾಜ್ಯ ಸರ್ಕಾರ ಸಹ ಯಾವುದೇ ಇನ್‌ಫ್ರಾಸ್ಟಕ್ಚರ್ ಅಲ್ಲಿ ಇಲ್ಲ, ಅವರಿಗೆ ಕೊಡಬಾರದು ಎಂದು ಹೇಳಿತ್ತು. ಎಂಇಜೆ ಕಾಲೇಜಿಗೆ ಆಗಿದ್ದೇನು? ಅವರ ಇಂಜಿನಿಯರಿಂಗ್ ಕಾಲೇಜನ್ನು ತೋರಿಸಿ ಮೆಡಿಕಲ್ ಕಾಲೇಜನ್ನು ತೆಗೆದುಕೊಂಡರು. ಅಲ್ಲಿಯ ಕ್ಯಾಂಪಸ್ ಅನ್ನು ಇವತ್ತು ತೋರಿಸಿ ಮೆಡಿಕಲ್ ಕಾಲೇಜು ತೆಗೆದುಕೊಂಡಿದ್ದಾರೆ. ಯಾವುದೇ ಇನ್‌ಫ್ರಾಸ್ಟಕ್ಚರ್ ಅಲ್ಲಿ ಇಲ್ಲ. ಆದರೂ ಕೂಡ ಬೆಂಗಳೂರು ಮಹಾ ನಗರದಲ್ಲಿ ಇಂತಹ ಒಂದು ಕಾಲೇಜು ನಡೆಯುತ್ತಿದೆ. ಇದಕ್ಕೆ ನೋಟಿಫಿಕೇಷನ್ ಮಾಡಿಲ್ಲ. ವಿದ್ಯಾರ್ಥಿಗಳನ್ನು ಅಡ್ಮಿಷನ್ ಮಾಡಿ ಎಂದು ಯಾವುದೇ ಪತ್ರಿಕೆಯಲ್ಲಿ ನೋಟಿಫಿಕೇಷನ್ ಮಾಡಿಲ್ಲ. ಟೆಸ್ಟ್‌ನ್ನು ಕಂಡಕ್ಟ್ ಮಾಡಿಲ್ಲ. 50 ಪರ್ಸೆಂಟ್ ವಿದ್ಯಾರ್ಥಿಗಳನ್ನು ಲಕ್ಷಾಂತರ ರೂಪಾಯಿಗೆ ಹಾಗೆಯೇ ಅಡ್ಮಿಷನ್ ಮಾಡುವಂತಹ ವ್ಯವಸ್ಥೆಗಳು ಈ ಕಾಲೇಜಿನಲ್ಲಿ ಆಗಿದೆ ಎನ್ನುವುದಾದರೆ ತೋರಿಸಿರುವಂತಹದ್ದು ಏನು? ಎಂಸಿಐಗೆ ತೋರಿಸಿರುವಂತಹದು ಎಚ್‌ಎಎಲ್ ಮತ್ತು ಐಟಿಐ ಆಸ್ಪತ್ರೆಗಳನ್ನು. ಅದು ಆಗುವುದಿಲ್ಲ ಎನ್ನುವಂತಹ ವರದಿಗಳನ್ನು ಕೊಟ್ಟಿದೆ. ಆದರೆ ಇಲ್ಲಿಯವರೆಗೂ ಕೂಡ ಅದಕ್ಕೆ ಸಂಬಂಧಪಟ್ಟ ಹಾಗೆ ಯಾವುದೇ ರೀತಿಯಾದಂತಹ ಕ್ರಮವನ್ನು ಸರ್ಕಾರ ಕೈಗೊಂಡಿಲ್ಲ. ಇದು ಒಂದು ಭಾಗ. ಇನ್ನೊಂದು ನನಗೆ ಅನಿಸುತ್ತದೆ. ಸರ್ಕಾರ ಇವತ್ತು ಯಾವುದರ ಒತ್ತಾಯದ ಮೇಲೆ ಮಣಿಯುತ್ತಿದೆ ನನಗೆ ಅನ್ನಿಸುತ್ತದೆ. ಟ್ರಸ್ಟ್‌ಗಳ ಆರ್ಥಿಕ ಒತ್ತಾಯದ ಮೇಲೆ ಸರ್ಕಾರ ಮಣಿಯುತ್ತಿದೆ ಎನ್ನುವಂತಹ ವ್ಯವಸ್ಥೆಗಳು ಎಂದು ನನಗೆ ಅನ್ನಿಸುತ್ತಿದೆ. ಇದೊಂದು ಭಾಗ. ಇದೊಂದು ಕರ್ಮ ಕಾಂಡ ಕಾಲೇಜುಗಳ ವಿಚಾರವಾದರೆ ಇನ್ನೊಂದು ಸೆಕ್ಷನ್ 45(5) ರ ವಿಚಾರ. ಸೆಕ್ಷನ್ 45(5) ಅನ್ನು ಉಪಯೋಗಿಸಿದ್ದೇವೆ ಎಂದು ಸರ್ಕಾರ ಹೇಳಿ, ಯಾವ ಕಾಲೇಜುಗಳಿಗೆ ಮೆಡಿಕಲ್ ಕಾಲೇಜನ್ನು ಕೊಡಬಾರದು ಎಂದು ಹೇಳಿದಂತಹ ಜಾಗದಲ್ಲಿ ಸರ್ಕಾರ ತನ್ನ ವೀಟೋ ಪವರ್‌ನಿಂದ ಕೊಟ್ಟಿದ್ದೇವೆ ಎಂದು ಆರ್ಡರ್‌ನಲ್ಲಿ ಈ ಕಾಲೇಜುಗಳಿಗೆ ಕೊಟ್ಟಿದ್ದೀರಿ. ಸೆಕ್ಷನ್ 45(5) ಏನು? ರಾಜೀವ್‌ಗಾಂಧಿ ಹೆಲ್ತ್ ಯೂನಿವರ್ಸಿಟಿಯ ಅಡಿಯಲ್ಲಿ ಸೆಕ್ಷನ್ 45(5) ಇರುವುದು ಪಾಲಿಸಿ ಡೈರೆಕ್ಟಿವ್ ಕೊಡುವುದಕ್ಕೆ ಮಾತ್ರ. ಯಾವುದೇ ಮೆಡಿಕಲ್ ಕಾಲೇಜು ಕೊಡುವುದಕ್ಕೆ ಅಲ್ಲ. ಈ ಒಂದು ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುವ ಮುಖಾಂತರದಲ್ಲಿ ತಾವಿಟ್ಟಿರುವ ಹೆಜ್ಜೆ ಬಹಳ ನೋವಿನ ಹೆಜ್ಜೆ. ಈ ಕಾಲೇಜುಗಳಿಗೆ ಹೊಸ ಮೆಡಿಕಲ್ ಕಾಲೇಜುಗಳನ್ನು ಕೊಡಬಾರದು ಎಂದು ಟಾಸ್ಕ್ ಫೋರ್ಸ್ ಏನು ಹೇಳಿದೆ, ಅದರ ಒಂದು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಆದರ ಅಫಿಲಿಯೇಷನ್ ಇವತ್ತು ಯೂನಿವರ್ಸಿಟಿ ರದ್ದು ಮಾಡಿದೆ. ಅದಕ್ಕೆ ಮಾನ್ಯತೆ ಕೊಡಬೇಕು ಎನ್ನುವ ವಿಚಾರವನ್ನು ಹೇಳುತ್ತೇನೆ. ಈ ಎಲ್ಲಾ ಕಾಲೇಜುಗಳಿಗೂ ಕೂಡ ಮಾನ್ಯತೆಯನ್ನು ಕೊಡುವುದಿಲ್ಲ ಎಂದು ಹೇಳಿ ಹಿಂದಿನ ಗೌರವಾನ್ವಿತ ವಿಸಿ ಅವರು ಸರ್ಕಾರಕ್ಕೆ ಪತ್ರ ಬರೆದರು. ಎಂತಹ ವ್ಯಕ್ತಿ ಅವರು? ಪ್ರಾಮಾಣಿಕವಾದಂತಹ ಒಬ್ಬ ವಿಸಿ ಅವರು ಸರ್ಕಾರಕ್ಕೆ ಪತ್ರ ಬರೆದು ನಾನು ಕಾನೂನು ಬಾಹಿರವಾಗಿ ಕೊಡುವುದಿಲ್ಲ ಎಂದು ಹೇಳಿದ್ದಕ್ಕೆ ರಿಟೈರ್‌ಮೆಂಟ್ ಆದರು

ಅಷ್ಟೇ, ಬೇರೆ ಏನೂ ಆಗಲಿಲ್ಲ ಹಿಂದಿನ ರಾಜೀವ್ ಗಾಂಧಿ ಯೂನಿವರ್ಸಿಟಿಯ ವಿಸಿ ಇದು ಒಂದು ಭಾಗ ಆದರೆ, ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿದ್ದಾರೆ. ಹಿಂದೆ ಬೆಂಗಳೂರು ಮಹಾನಗರದಲ್ಲಿ ಒಂದು ಕಾಲೇಜಿದೆ. ಈ ಕಾಲೇಜಿನ ಹೆಸರು ಎಲ್ಲರಿಗೂ ಕೂಡ ಆಶ್ಚರ್ಯ ತರುವಂಥಹದು ಅವರು ಸರ್ಕಾರಕ್ಕೆ ಬರಲಿಲ್ಲ. ಬೇರೆ ಯಾರ ಹತ್ತಿರವೂ ಪರ್ಮಿಷನ್ ಕೇಳಲಿಲ್ಲ. ಅವರಾಗಿಯೇ ಒಂದು ಕಾಲೇಜನ್ನು ಪ್ರಾರಂಭ ಮಾಡಿದರು. ಅದರ ಹೆಸರು ಸ್ವಪ್ನಿ ಮೆಡಿಕಲ್ ಕಾಲೇಜು. ಸ್ವಪ್ನಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್‌ಸ್ ಎಂದು ಹೆಸರು. ಇದು ಹಿಂದಿನ ಕಾಂಗ್ರೆಸ್ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಯಾರು ಅಧಿಕಾರಿಗಳು ಇದ್ದರು, ಅವರ ಇನ್‌ವಾಲ್ವ್‌ಮೆಂಟ್ ಎಲ್ಲಾ ಇದೆ. ಹೆಸರು ಹೇಳಬಾರದು ಎಂದು ತಾವು ಹೇಳಿದಿರಿ. ಆದ್ದರಿಂದ ನಾನು ಆ ಇನ್‌ವಾಲ್ವ್‌ಮೆಂಟ್ ಆಗಿರುವವರ ಹೆಸರು ಹೇಳಲಿಕ್ಕೆ ಬಯಸುವುದಿಲ್ಲ. ಅಂತಹ ದೊಡ್ಡ ದೊಡ್ಡ ವ್ಯಕ್ತಿಗಳಿರುವಂತಹ ಅವರು ಬೆಂಗಳೂರು ಮಹಾನಗರದಲ್ಲಿ ಸ್ವಪ್ನಿ ಇನ್ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸಸ್ ಎಂದು ಹೇಳಿ ಒಂದು ಕಾಲೇಜನ್ನು ಓಪನ್ ಮಾಡಿದರು. ಸುಮಾರು 70 ಜನ ವಿದ್ಯಾರ್ಥಿಗಳನ್ನು ಅಡ್ಮಿಷನ್ ಮಾಡಿರು. ನಾನು ಸರ್ಕಾರಕ್ಕೆ ಒಂದು ಪತ್ರ ಬರೆದೆ. ಇವತ್ತಿನವರೆಗೆ ಏನು ಕ್ರಮ ತೆಗೆದುಕೊಂಡಿದ್ದಾರೋ ನನಗೆ ಗೊತ್ತಿಲ್ಲ. ರಾಜೀವ್ ಗಾಂಧಿ ಯೂನಿವರ್ಸಿಟಿಯವರಿಗೆ ಒಂದು ಪತ್ರ ಬರೆದೆ. ಅವರು ರೈಡ್ ಮಾಡಿ ಆ ಕಾಲೇಜನ್ನು ನೋಡಿದಾಗ ಯಾವುದೇ ಅಫಿಲಿಯೇಶನ್ ಅವರಿಗೆ ಇರಲಿಲ್ಲ. ಅವರು ತೋರಿಸುತ್ತಿರುವುದು ಯೂನಿವರ್ಸಿಟಿ ಆಫ್ ಸಿಸಿಲೀಸ್ ಅಮೇರಿಕನ್ ಯೂನಿವರ್ಸಿಟಿಯಿಂದ ಅಫಿಲಿಯೇಷನ್ ತೆಗೆದುಕೊಂಡಿದ್ದೇವೆಂದು ಅವರು ಹೇಳುತ್ತಾರೆ. ಎಷ್ಟು ಧೈರ್ಯವಾಗಿ ಹೇಳಿದರು ಎಂದರೆ ಈ ರಾಜ್ಯ ಸರ್ಕಾರದ ಯಾವುದೇ ರೀತಿಯಾದಂತಹ ಪರ್ಮಿಷನ್ ಅವಶ್ಯಕತೆ ನನಗೆ ಇಲ್ಲ ಎನ್ನುವಂತಹ ಮಾತನ್ನು ಹೇಳಿದರು. ಅಂದರೆ ಈ ರಾಜ್ಯದಲ್ಲಿ ಏನು ನಡೆಯುತ್ತಿದೆ? ಮೆಡಿಕಲ್ ಎಜ್ಯುಕೇಷನ್ ಅನ್ನು ಇವತ್ತು ಒಂದು ಮಾರಾಟದ ವಸ್ತುವಾಗಿ ಇಟ್ಟುಕೊಂಡಿರುವಂಥದ್ದನ್ನು ನಾನು ನೋವಿನಿಂದ ಈ ಮಾತನ್ನು ಹೇಳುತ್ತೇನೆ. ಈಗಲಾದರೂ ಅದಕ್ಕೆ ಹಾಫ್ ಬೇಕಡ್ ಡಾಕ್ಟರ್ಸ್‌ನ್ನು ಪ್ರೊಡ್ಯೂಸ್ ಮಾಡುವುದಕ್ಕೆ ಒಂದು ಕಡಿವಾಣ ಹಾಕುವಂತಹ ಕೆಲಸ ಸರ್ಕಾರದಿಂದ ಆಗಬೇಕು ಎನ್ನುವಂತಹ ಅಂಶವನ್ನು ಹೇಳುತ್ತೇನೆ. ಇವತ್ತು ನಾನು ಆಗಲೇ ಹೇಳಿದೆ, ಮೆಡಿಕಲ್ ಎಜ್ಯುಕೇಷನ್ ನಂಬರ್-2, ಆ ಮಂತ್ರಿಗಳು ಇಲ್ಲ. ಆಯುರ್ವೇದಿಕೆಗೆ ಸಂಬಂಧಪಟ್ಟ ಹಾಗೆ ವಿಚಾರ. ಆಯುರ್ವೇದಿಕೆಗೆ ಸಂಬಂಧಪಟ್ಟ ಹಾಗೆ ಇವತ್ತು ಒಂದು ಭಾಗ ಅಡ್ಮಿಷನ್ ಎಂದು ಹೇಳಿದೆ. ಆದರೆ ಆಯುರ್ವೇದಿಕ್ ಕಾಲೇಜಿನಲ್ಲಿ ಪಿಜಿ ಮತ್ತು ಯುಜಿಗೆ ಸಂಬಂಧಪಟ್ಟ ಹಾಗೆ ಅಡ್ಮಿಷನ್ ಆಗುತ್ತಿರುವುದಕ್ಕೆ ಯಾವುದೇ ನಾರ್ಮ್ಸ್ ಇಲ್ಲ. ಯಾವುದೇ ಸಿಇಟಿ ಇಲ್ಲ. ಯಾವುದೇ ರೀತಿಯಾದಂತಹ ಅಡ್ಮಿಷನ್ ಪಾಲಿಸಿ ಇಲ್ಲದೇ ಯಾವ್ಯಾವ ಸೀಟುಗಳನ್ನು ಬೇಕಾದರೂ ಹರಾಜು ಮಾಡಿಕೊಳ್ಳಬಹುದು ಎನ್ನುವಂತಹ ವ್ಯವಸ್ಥೆ ಇವತ್ತು ಬಂದಿದೆ ಎಂದಾದರೆ ಅದಕ್ಕೆ ಸಂಬಂಧಪಟ್ಟಂತಹ ಉದಾಹರಣೆಗಳು ನನ್ನಲ್ಲಿ ಇವೆ. ಆ ಒಂದು ಎನ್‌ಕ್ವೈರಿ ಕಮಿಷನ್ ಮಾಡಿ. ಅದಕ್ಕೆ ಸಂಬಂಧಪಟ್ಟ ಹಾಗೆ ಎಲ್ಲವನ್ನೂ ತಮ್ಮ ಮುಂದೆ ಇಡಲು ಬಯಸುತ್ತೇನೆ. ಇವತ್ತು ತಾವು ಖಾತೆಯನ್ನು ಬದಲಾವಣೆ ಮಾಡಿದ್ದೀರಿ, ಸಂತೋಷ. ಈ ದೇಶದ ಆಯುರ್ವೇದ, ಈ ದೇಶದ ಮೂಲಭೂತವಾದಂತಹ ಆರೋಗ್ಯದ ವ್ಯವಸ್ಥೆಯನ್ನು ಸರಿ ಮಾಡಲು ತಾವು ಹೆಜ್ಜೆಯನ್ನು ಇಟ್ಟಿದ್ದೀರಿ. ಆಗುತ್ತಿರುವುದು ಏನು? ಇಲ್ಲಿ ಆಗುತ್ತಿರುವುದು ಒಂದು ಟ್ರಾನ್ಸ್‌ಫರ್ ಪಾಲಿಸಿಯನ್ನು ಮಾಡಿದರು. ಮೈಸೂರು ಮೆಡಿಕಲ್

ಕಾಲೇಜಿನಲ್ಲಿ ಎಕ್ಸ್‌ಪೀರಿಯೆನ್ಸ್ಡ್ ಡಾಕ್ಟರ್ಸ್ ಬೇಕು ಎಂದು ಹೇಳಿ ಅಲ್ಲಿ 10 ವರ್ಷ, 11 ವರ್ಷ ಕೆಲಸ ಮಾಡಿದವರನ್ನು ಪ್ರೊಫೆಸರ್ ಆಗಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ಅಲ್ಲಿನ ಟೀಚಿಂಗ್ ಫ್ಯಾಕಲ್ಟಿನಲ್ಲಿ ಇಟ್ಟಿದ್ದರು. ಮಾನ್ಯ ಮಂತ್ರಿಗಳು ಬಂದ ಕೂಡಲೇ ಮೊದಲ ಕೆಲಸಮಾಡಿದ್ದು ಎಂದರೆ 2 ವರ್ಷ 3 ವರ್ಷ ಆದವರು ಯಾರು ಹಳ್ಳಿಗಳಲ್ಲಿ ಇದ್ದಾರೆ ಅವರನ್ನೆಲ್ಲಾ ತೆಗೆದುಕೊಂಡು ಬಂದು ಮೆಡಿಕಲ್ ಕಾಲೇಜ್ ಆಸ್ಪತ್ರೆಗೆ ಹಾಕಿದರು. ಇಲ್ಲಿ 15 ವರ್ಷ, 16 ವರ್ಷ ಆದವರನ್ನು ಅಲ್ಲಿಗೆ ತೆಗೆದುಕೊಂಡು ಹೋಗಿ ಹಾಕಿದರು. ನಾನು ಆ ವಿಚಾರವನ್ನು ಹೇಳುತ್ತಿಲ್ಲ. ವಿದ್ಯಾರ್ಥಿಗಳಿಗೆ ಟೀಚ್ ಮಾಡಲು ಬೇಕಾಗಿರುವಂತಹ ವ್ಯವಸ್ಥೆಗಳು ಯಾವುದರ ಆಧಾರದ ಮೇಲೆ ಈ ಒಂದು ಟ್ರಾನ್ಸ್‌ಫರ್ಸ್ ಆಗಿದೆ? ಅದಕ್ಕೆ ಒಂದು ಉದಾಹರಣೆಯನ್ನು ಸನ್ಮಾನ್ಯ ಮುಖ್ಯಮಂತ್ರಿಗಳ ಮುಂದೆ ಇಡುತ್ತೇನೆ. ತಾವು ಹೇಳುತ್ತಿದ್ದೀರಿ. ಹೆಜ್ಜೆ ಹೆಜ್ಜೆಗೂ ಕೂಡ ಕರಪ್ಷನ್ ಹೋಗಬೇಕು ಎಂದು ಹೇಳುತ್ತಿದ್ದೀರಿ. ಒಂದು ಉದಾಹರಣೆಯನ್ನು ನಾನು ಕೊಡಲು ಬಯಸುತ್ತೇನೆ. ಈ ಪತ್ರ ಕೂಡ ನಿಮಗೆ ಬಂದಿದೆ ಎಂದು ನಾನು ಅಂದುಕೊಂಡಿದ್ದೇನೆ. ದಿನಾಂಕ 10.07.02ರಂದು ಸಂಜೆ ಡಾ|| ಬಿ. ಗುರುಸ್ವಾಮಿ, ನಿರ್ದೇಶಕರು, ಇವರು ಬೆಂಗಳೂರಿನಿಂದ ಮೈಸೂರಿನಲ್ಲಿದ್ದ ನನಗೆ ಸಂಜೆ ಫೋನ್ ಮಾಡಿ ದಿನಾಂಕ 11.07.2002 ರಂದು ಸಂಜೆ 8.00 ಗಂಟೆಗೆ ಬೆಂಗಳೂರಿನ ಗಾಂಧಿ ನಗರದಲ್ಲಿರುವಂತಹ ಕಾಮತ್ ಯಾತ್ರಿ ನಿವಾಸ್ ಹತ್ತಿರ ತುರ್ತಾಗಿ ಬರಲು ತಿಳಿಸಿದರು. ಅದರಂತೆ ನಾನು ಸಂಜೆ 8.00 ಗಂಟೆಗೆ ಹೋಗಿದ್ದೆ. 8.15 ರ ನಂತರ ಗುರುಸ್ವಾಮಿಯವರು, ನಿರ್ದೇಶಕರು ಹಾಗೂ ಜೆ. ಶ್ರೀನಿವಾಸ್, ಅಧೀನ ಕಾರ್ಯದರ್ಶಿ ಇಬ್ಬರೂ ಅಲ್ಲಿಗೆ ಒಟ್ಟಿಗೆ ಬಂದರು. ನಂತರ ನಿಮಗೆ ಉಪ ವಿಭಾಗಕ್ಕೆ ನಿರ್ದೇಶಕರನ್ನಾಗಿ ಹೆಚ್ಚುವರಿ ಪರಭಾರೆಯಾಗಿ ವಹಿಸಿ ಸರ್ಕಾರದಿಂದ ನೇಮಕದ ಆದೇಶ ಆಗಿರುತ್ತದೆ ಎಂದು ಆದೇಶದ ಪ್ರತಿಯನ್ನು ಜೆ. ಶ್ರೀನಿವಾಸ್ ಅವರು ನನಗೆ ತೋರಿಸಿದರು. ಅದರಲ್ಲಿ 11.07.2002 ಎಂದು ನಮೂದಿಸಿದ್ದು ಅಧೀನ ಕಾರ್ಯದರ್ಶಿಯವರು ಸಹಿ ಮಾಡಿರುವಂತಹ ಕೆಳಗಡೆ 12.07.2002 ಎಂದು ನಮೂದಿಸಲಾಗಿತ್ತು. ನಾನು ಈ ದಿವಸ 11ನೇ ತಾರೀಖು, ಆದರೆ ತಾವು ಸಹಿ ಮಾಡಿರುವುದು 12ನೇ ತಾರೀಖು ಎಂದು ಸಹಿ ಮಾಡಿದ್ದೀರಲ್ಲಾ ಎಂದು ಪ್ರಶ್ನಿಸಿದೆ. ಸಾರ್, ಇದನ್ನು ವಿಚಾರಿಸಿದ್ದಕ್ಕೆ ನಾನು ಮತ್ತೊಂದು ಬಾರಿ ಹೇಳುತ್ತಿದ್ದೇನೆ. ಈಗ ನೀವು 50 ಸಾವಿರ ರೂಪಾಯಿಗಳನ್ನು ನನಗೆ ಕೊಟ್ಟರೆ ಈ ಆದೇಶವನ್ನು ನಾಳೆ ನಿನಗೆ ನೀಡುತ್ತೇನೆ, ಇಲ್ಲದಿದ್ದರೆ ಡಾ|| ವಸಂತ್ ಕುಮಾರ್ ಉಪನಿರ್ದೇಶಕರು, ಮೈಸೂರು ಇವರನ್ನು ಕೋರ್ಟಿಗೆ ಹೋಗಲು ಹೇಳುತ್ತೇನೆ. ಇದು ನೇರವಾಗಿ ಒಬ್ಬ ಪ್ರಾಮಾಣಿಕ ಅಧಿಕಾರಿ ಸರ್ಕಾರಕ್ಕೆ ಪತ್ರವನ್ನು ಬರೆದರು. ಉಪ ನಿರ್ದೇಶಕನಾಗಿ ನೇಮಕ ಮಾಡಬೇಕಾದರೆ 50 ಸಾವಿರ ರೂಪಾಯಿಗಳನ್ನು ಡೈರೆಕ್ಟರ್ ಅವರು ಕೇಳಿದ್ದಾರೆ ಎಂದು ಹೇಳಿ ಸಹಿ ಮಾಡಿ ಸರ್ಕಾರಕ್ಕೆ ಒಂದು ಪತ್ರವನ್ನು ಬರೆದಿದ್ದಾರೆ ಇವತ್ತು ನಾನು ಸನ್ಮಾನ್ಯ ಮುಖ್ಯಮಂತ್ರಿಗಳವರ ಗಮನವನ್ನು ಸೆಳೆಯಲು ಬಯಸುತ್ತಿದ್ದೇನೆ. ಒಬ್ಬನಿಗೆ ಪ್ರಮೋಷನ್ ಕೊಡಬೇಕಾದರೆ 50 ಸಾವಿರ ರೂಪಾಯಿ ಎನ್ನುವುದಾದರೆ ಹಾಗಾದರೆ ಪ್ರಮೋಷನ್ ಅನ್ನು ಬೇರೆ ಬೇರೆ ಇಲಾಖೆಗಳಲ್ಲಿ ಕೊಟ್ಟಿದ್ದೀರಲ್ಲಾ, ಎಷ್ಟೆಷ್ಟು ಲಕ್ಷ ರೂ. ಯಾರು ಯಾರಿಗೆ ಟ್ರಾನ್ಸಕ್ಷನ್ಸ್ ಆಗಿದೆ? ದೊಡ್ಡ ಕಡಿವಾಣವನ್ನು ಹಾಕಲು ಯಾರು ಲೋಕಾಯುಕ್ತದವರು ಬೇರೆ ಬೇರೆ ಇಲಾಖೆಗಳಿಗೆ ಹೋಗಿ ರೈಡ್ ಮಾಡಿ ಇಷ್ಟೆಲ್ಲಾ ಹಿಡಿದುಕೊಂಡು ಬಂದಿದ್ದಾರೆ ಎಂದು ಹೇಳುತ್ತಾರೆ, ಯಾವ ವಿಧಾನಸೌಧದ ಒಳಗಡೆ 50 ಸಾವಿರ ರೂಪಾಯಿಗಳನ್ನು ಕೊಟ್ಟರೆ ಮಾತ್ರ ಪ್ರಮೋಷನ್ ಕೊಡುತ್ತೇನೆ

ಎಂದು ಹೇಳಿ, 50 ಸಾವಿರ ರೂಪಾಯಿಗಳ ಹಣವನ್ನು ಕೊಡದೇ ಇದ್ದಾಗ ಆ ಆರ್ಡರ್ ಅನ್ನು ಹರಿದು ಹಾಕಿದರು. ಆ ಆರ್ಡರ್‌ನ ಪ್ರತಿ ನನ್ನಲ್ಲಿ ಇದೆ. ಆ ಆರ್ಡರನ್ನು ಹರಿದು ಹಾಕಿ ಇವತ್ತು ಕೆವಿಟಿಗೆ ಬೇರೆಯವರನ್ನು ಕಳುಹಿಸಿದ್ದಾರೆ. ಸ್ಟೇ ತರುವಂತಹ ವ್ಯವಸ್ಥೆ ನಾನು ಆಗಲೇ ಹೇಳಿದ ಹಾಗೆ ಆಯುರ್ವೇದ ಇಲಾಖೆ ನಂಬರ್-2 ಮೆಡಿಕಲ್ ಎಜ್ಯುಕೇಷನ್ ಮಿನಿಸ್ಟರ್ ಅವರ ಖಾತೆಯಲ್ಲಿ ಆಗುತ್ತಿದೆ ಎಂದರೆ ಇದರ ವ್ಯವಹಾರ ಯಾರ್ಯಾರಿಗೆ ಇದೆ? ನಾವೆಲ್ಲರೂ ಕೂಡ ನೋವಿನಿಂದ ಹೇಳಬೇಕಾಗಿದೆ. ಈ ಇಲಾಖೆ ಒಳಗಡೆ ಇಷ್ಟೆಲ್ಲಾ ಪಾಲುದಾರರು ಯಾರು ಎನ್ನುವಂತಹ ವಿಚಾರವನ್ನು ಸರ್ಕಾರ ಗಮನಕ್ಕೆ ತರಬೇಕು. ಇದಕ್ಕೆ ಸಂಬಂಧಪಟ್ಟ ಹಾಗೆ ಸರ್ಕಾರಕ್ಕೆ ಈಗಾಗಲೇ ಪತ್ರ ದೊರಕಿದೆ. ಆದರೆ ಸರ್ಕಾರ ಈ ಕ್ಷಣದವರೆಗೆ ಯಾವುದೇ ಕ್ರಮವನ್ನು ಕೈಗೊಂಡಿಲ್ಲ, ಎಂದು ನೋವಿನಿಂದ ನಾನು ಹೇಳಬೇಕಾದಂತಹ ಅವಶ್ಯಕತೆ ಬಂದಿದೆ. ಇನ್ನು ಆರೋಗ್ಯ ಸಚಿವರು ಇಲ್ಲಿದ್ದಾರೆ. ನಾನು ಆರೋಗ್ಯ ಇಲಾಖೆಗೆ ಸಂಬಂಧಪಟ್ಟ ಹಾಗೆ ಬಹಳ ವಿಚಾರಗಳನ್ನು ಹೇಳಬೇಕು ಎಂದುಕೊಂಡಿದ್ದೆ. ಆದರೆ ಸಮಯದ ಅಭಾವದಿಂದ ಕೇವಲ ಎರಡು ವಿಚಾರಗಳನ್ನು ಹೇಳಲು ಬಯಸುತ್ತೇನೆ. ಆಕ್ಸಿಡೆಂಟ್ ಮತ್ತು ಎಮರ್ಜೆನ್ಸಿ ವಿಚಾರ. ಈಗಾಗಲೇ ತೀವು ಹೇಳಿದಿರಿ. ಟ್ರಾಫಿಕ್ ಪ್ರಾಬ್ಲಮ್ ಆಗಿ ಬಿಟ್ಟಿದೆ. ನನಗೆ ಭಯ ಆಯಿತು ಮಿನಿಸ್ಟರ್‌ಗೆ ಎಲ್ಲಿ ಆಕ್ಸಿಡೆಂಟ್ ಆಗಿದೆಯೋ ಎಂದು. ಆಗಬಾರದು. ಆದರೆ ಆಕ್ಸಿಡೆಂಟ್ ಆದಂತಹ ಸಂದರ್ಭದಲ್ಲಿ ಏನು ಮಾಡಬೇಕು ಎಂದು ಹೇಳಲಿಕ್ಕೆ 44 ಟ್ರಾಮಾ ಕೇರ್ ಸೆಂಟರ್ಸ್‌ನ್ನು ಮಾಡಲಿಕ್ಕೋಸ್ಕರವಾಗಿ ನ್ಯಾಷನಲ್ ಹೈವೇ ಮತ್ತು ಸ್ಟೇಟ್ ಹೈವೇಗಳಲ್ಲಿ 30 ಕೋಟಿ ರೂಪಾಯಿಗಳು ಖರ್ಚಾಗಿದೆ ಎಂದು ಹೇಳಿದ್ದಾರೆ. ದಯಮಾಡಿ ಆರೋಗ್ಯ ಮಂತ್ರಿಗಳು 30 ಕೋಟಿ ರೂಪಾಯಿಗಳು ಯಾವ್ಯಾವುದಕ್ಕೆ ಖರ್ಚಾಗಿದೆ ಎಂಬುದನ್ನು ಹೇಳಬೇಕು. ತಾವು ಈ ಟ್ರಾಮಾ ಕೇರ್ ಸೆಂಟರ್ ಬಗ್ಗೆ ಸರ್ಕಾರ ಕೈಗೊಂಡಿರುವಂತಹ ವ್ಯವಸ್ಥೆಗಳೇನು ಎಂಬುದನ್ನು ಹೇಳಬೇಕು ಇನ್ನು ಏಡ್ಸ್ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳು ಒಂದು ದೊಡ್ಡ ಆಂಧೋಲನವನ್ನು ಪ್ರಾರಂಭ ಮಾಡಿದ್ದಾರೆ. ನಿಜ, ಆ ಆಂಧೋಲನ ಎಲ್ಲಿಗೆ ಹೋಗಿ ಮುಟ್ಟುತ್ತಿದೆ? ಈ ಸರ್ಕಾರದ ಜವಾಬ್ದಾರಿ ಎನ್ನುವಂತಹ ವಿಚಾರಕ್ಕೆ ಅಲ್ಲ. ಕಳೆದ ಮೂರು ವರ್ಷಗಳಲ್ಲಿ ಕರ್ನಾಟಕ ಸರ್ಕಾರ ಇಡೀ ದೇಶದಲ್ಲಿ ಏಳನೇ ರಾಜ್ಯವಾಗಿತ್ತು ಏಡ್ಸ್ ವಿಚಾರದಲ್ಲಿ. ಈಗ ಈ ವರ್ಷದಲ್ಲಿ ನಮ್ಮ ದುರ್ದೈವ, ಎರಡನೇ ಸ್ಥಾನಕ್ಕೆ ನಾವು ಬಂದಿದ್ದೇವೆ. ಏಡ್ಸ್‌ನಲ್ಲಿ ರಾಜ್ಯ ಎರಡನೇ ಸ್ಥಾನಕ್ಕೆ ಬಂದಿದೆ. ಮಹಾರಾಷ್ಟ್ರ ಮಾತ್ರ ಮೊದಲನೇ ಸ್ಥಾನದಲ್ಲಿ ಇದೆ ಎನ್ನುವ ಮಾತನ್ನು ಹೇಳಬೇಕಾಗಿತ್ತು. ಕಳೆದ ವರ್ಷ ಮಣಿಪುರ ಎರಡನೇ ಸ್ಥಾನದಲ್ಲಿತ್ತು. ನಾವು ಆ ಎರಡನೇ ಸ್ಥಾನಕ್ಕೆ ಬಂದಿದ್ದೇವೆ. ಅಂದರೆ ಕೇವಲ ಘೋಷಣೆಯ ಮುಖಾಂತರದಲ್ಲಿ ಈ ಒಂದು ಕಾರ್ಯ ಎಲ್ಲೂ ಆಗಲಿಕ್ಕೆ ಸಾಧ್ಯವಿಲ್ಲ. ಏಡ್ಸ್‌ಗೋಸ್ಕರವಾಗಿ 100 ಪರ್ಸೆಂಟ್ ಸ್ಪಾನ್ಸರ್ಡ್ ಸ್ಕೀಮ್ಸ್ ಕೇಂದ್ರ ಸರ್ಕಾರದಲ್ಲಿ ಇದೆ. ಹೆಚ್‌ಐವಿ ಪಾಸಿಟೀವ್ ಬಗ್ಗೆ ತಾವು ಪ್ರತಿ ಒಂದು ಆಸ್ಪತ್ರೆಯಲ್ಲಿ ಯಾವ ರೀತಿ ಆದಂತಹ ವ್ಯವಸ್ಥೆಗಳನ್ನು ಮಾಡಿದೆ ಎಂದು ನೋಡಿದಾಗ ಇವತ್ತೂ ಕೂಡ ಜಿಲ್ಲಾ ಆಸ್ಪತ್ರೆಗಳಲ್ಲಿ ಯಾರಾದರೂ ಒಬ್ಬ ರೋಗಿ, ಅವನದ್ದು ಹೆಚ್‌ಐವಿ ಪಾಸಿಟೀವ್ ಎಂದು ಗೊತ್ತಾದರೆ ಅವನನ್ನು ಯಾವ ರೀತಿ ಅಲ್ಲಿ ನೋಡುವಂತಹ ನರಕ ಯಾತನೆ ಇವತ್ತು ನಡೆಯುತ್ತಿದೆ ಎಂಬುದನ್ನು ಆರೋಗ್ಯ ಇಲಾಖೆ ನಾಚಿಕೆಯಿಂದ ನೋಡಬೇಕಾದಂತಹ ಒಂದು ಪ್ರಸಂಗ ಬಂದಿದೆ. ಮಲೇರಿಯಾ ಎರಾಡಿ ಕೇಷನ್ ಪ್ರೋಗ್ರಾಮ್‌ನ ವಿಚಾರ. ಹೌದು ಸರ್ಕಾರದಲ್ಲಿ ಹಣ ಇಲ್ಲ ಎಂದು ನಾನು ಒಪ್ಪಿಕೊಳ್ಳುತ್ತೇನೆ. ಬಹಳ

ಕಠಿಣವಾದಂತಹ ಆರ್ಥಿಕ ಪರಿಸ್ಥಿತಿ ಸರ್ಕಾರಕ್ಕೆ ಬಂದಿದೆ. ಆದರೆ ಮಲೇರಿಯಾ ಎರಾಡಿಕೇಷನ್ ಪ್ರೋಗ್ರಾಮಿನಲ್ಲಿ ಕಳೆದ ಬಾರಿ ಕೊಟ್ಟಂತಹ ಹಣದಲ್ಲಿ 20 ಲಕ್ಷ ರೂಪಾಯಿಗಳು ಖರ್ಚಾಗದ ವ್ಯವಸ್ಥೆ ಆಯಿತು. ಕೇಂದ್ರ ಸರ್ಕಾರದಿಂದ ಬಂದಂತಹ ಹಣವನ್ನೂ ಕೂಡ ಉಪಯೋಗಿಸಲಿಲ್ಲ ಎನ್ನುವುದಾದರೆ ನಮ್ಮ ವ್ಯವಸ್ಥೆ ಹೇಗಾಗಿದೆ. ಎರಡನೆಯದು ಡೆಂಗ್ಯೂ ಜ್ವರ. ಆ ಜ್ವರದ ಬಗ್ಗೆ ಒಂದೇ ಒಂದು ರೂಪಾಯಿಯನ್ನೂ ಸಹ ರಾಜ್ಯ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ತೆಗೆದಿಟ್ಟಿಲ್ಲ ಎಂದರೆ ರಾಜ್ಯದಲ್ಲಿ ಡೆಂಗ್ಯೂ ಜ್ವರ ಇಲ್ಲವೆಂತಲ್ಲಾ? ಮೊನ್ನೆ ಎಲ್ಲ ಪತ್ರಿಕೆಗಳಲ್ಲೂ ವರದಿ ಆಗಿದೆ ಸುಮಾರು 260 ಜನ ಈಗಾಗಲೇ ಆ ಮಲೆನಾಡಿನ ಪ್ರದೇಶದಲ್ಲಿ ಈ ಒಂದು ಜ್ವರ ಬಂದಿದೆ ಎನ್ನುವ ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಮಾನ್ಯ ಮುಖ್ಯಮಂತ್ರಿಗಳ ಒಂದು ದೊಡ್ಡ ಪ್ರೋಗ್ರಾಮ್ ಇದೆ. ಅದು ವಿಶೇಷವಾಗಿ ಗ್ರಾಮೀಣ ಪ್ರದೇಶದಲ್ಲಿರುವಂತಹ ಮತ್ತು ಸ್ಲಮ್‌ನಲ್ಲಿರುವಂತಹ ಹೆಣ್ಣು ಮಕ್ಕಳಿಗೋಸ್ಕರವಾಗಿ ಸ್ಯಾನಿಟರಿ ನ್ಯಾಪ್‌ಕಿನ್ ಕೊಡುವಂತಹ ಒಂದು ಪ್ರೋಗ್ರಾಮ್. ಈ ಪ್ರೋಗ್ರಾಮ್ ಏನಾಯಿತು? ಮಾನ್ಯ ಮುಖ್ಯಮಂತ್ರಿಗಳ ಕಳೆದ ಬಾರಿ ಪ್ರೋಗ್ರಾಮ್ ಇತ್ತು. ಅದೇನದು? ಯಾವುದೋ ಕಂಪನಿಯಿಂದ 21 ರೂಪಾಯಿ 45 ಪೈಸೆಗೆ ಕೊಂಡುಕೊಳ್ಳುವುದು, ಆದರೆ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳಿಗೆ 10 ರೂಪಾಯಿಗೆ ಸರ್ಕಾರ ಮಾರಾಟ ಮಾಡಿದೆ. ಈ ಪ್ರೋಗ್ರಾಮನ್ನು ತಂದರು. ಏನಾಯಿತು ಆ ಪ್ರೋಗ್ರಾಮ್? ಸ್ಯಾನಿಟರಿ ನ್ಯಾಫ್‌ಕಿನ್, ಇದರಲ್ಲಿ ಆ ಯೋಜನೆಯನ್ನು ಜಾರಿಗೆ ತರಲಿಕ್ಕೆ ಆಗಿಲ್ಲ ಎಂದು ಹಿಂದಿನ ನಿರ್ದೇಶಕರು ಒಂದು ಪತ್ರವನ್ನು ಬರೆದರು. ಮಾನ್ಯ ಮುಖ್ಯಮಂತ್ರಿಗಳು ಒಂದು ಒಕ್ಕಣೆಯನ್ನು ಬರೆದರು. ಅದರಲ್ಲಿ ಏನಿದೆ ಅಂದರೆ, ಮುಖ್ಯಮಂತ್ರಿಗಳ ಒಕ್ಕಣೆಯ ಪ್ರಕಾರದಲ್ಲಿ ನಿರ್ದೇಶಕರು ನಿಧಾನ ದ್ರೋಹ ಗ್ರಾಮೀಣ ಮಹಿಳೆಯರಿಗೆ ಅನ್ಯಾಯ ಆದ್ದರಿಂದ ಡೈರೆಕ್ಟರ್ ಅವರನ್ನು ಸಸ್ಪೆಂಡ್ ಮಾಡಿ ಎಂದು ಸ್ವತಃ ಮಾನ್ಯ ಮುಖ್ಯಮಂತ್ರಿಗಳೇ ಪತ್ರವನ್ನು ಬರೆದರು. ಸಸ್ಪೆನ್‌ಷನ್ ಆಗಲಿಲ್ಲ. ಕಾರಣ ಬೇರೆ ಬೇರೆ ಬಂತು. ಆದರೆ ಅವರು ಹೇಳಿದಂತಹದ್ದು ಏನು? ಗ್ರಾಮೀಣ ಮಹಿಳೆಯರಿಗೆ ಹತ್ತು ರೂಪಾಯಿಗೆ ಅದನ್ನು ಮಾರಾಟ ಮಾಡಲಿಕ್ಕೆ ಸಾಧ್ಯವಿಲ್ಲ ನಾವು ಈಗಾಗಲೇ ಹೆಲ್ತ್ ವರ್ಕರ್ಸ್ ಅವರನ್ನು ಕಳುಹಿಸಿ ಸರ್ವೆ ಮಾಡಿದ್ದೇವೆ. ಅದರ ಪ್ರಕಾರದಲ್ಲಿ ಇದನ್ನು ಹತ್ತು ರೂಪಾಯಿಗೆ ಮಾರಾಟ ಮಾಡಲಿಕ್ಕೆ ಸಾಧ್ಯ ಇಲ್ಲ ಎಂದು ಪತ್ರವನ್ನು ಬರೆದರು. ಆದರೆ ಅವರ ಸಸ್ಪೆನ್‌ಷನ್ ಆಗುವಂತಹ ಮಟ್ಟಕ್ಕೆ ಬಂತು. ಏಕೆಂದರೆ ಆರೋಗ್ಯ ಇಲಾಖೆಯಲ್ಲಿ ಈಗಾಗಲೇ ಸುಮಾರು 5 ಕೋಟಿ ರೂಪಾಯಿಗಳ ನ್ಯಾಫ್‌ಕಿನ್ಸ್‌ನ್ನು ಪರ್ಚೇಸ್ ಮಾಡಿದ್ದಾರೆ. ಮೈಸೂರಿನಲ್ಲಿ ಎರಡು ಲಕ್ಷ ನ್ಯಾಫ್‌ಕಿನ್ಸ್ ಬಿದ್ದಿದೆ. ಬೆಂಗಳೂರಿನ ಮೆಡಿಕಲ್ ಕಾಲೇಜಿನ ಆಸ್ಪತ್ರೆಯಲ್ಲಿ ಎರಡು ಲಕ್ಷ ನ್ಯಾಫ್‌ಕಿನ್ಸ್ ಬಿದ್ದಿದೆ. ಇಷ್ಟೇ ಅಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ 25, 25 ಸಾವಿರ ನ್ಯಾಫ್‌ಕಿನ್ಸ್‌ಗಳು ಮಾರಾಟ ಮಾಡಲಾಗದೇ ಇವತ್ತೂ ಬಿದ್ದಿವೆ. ವಿಕ್ಟೋರಿಯಾ ಆಸ್ಪತ್ರೆ, ಬೋರಿಂಗ್ ಆಸ್ಪತ್ರೆಗಳಲ್ಲಿ ಒಂದೊಂದು ಲಕ್ಷ ನ್ಯಾಫ್‌ಕಿನ್ಸ್ ಬಿದ್ದಿದೆ. ಈ ಒಂದು ಕಂಪನಿಗೆ ಸಹಾಯ ಮಾಡಲಿಕ್ಕೋಸ್ಕರವಾಗಿ ಮಾಡಿರುವಂತಹ ಯೋಜನೆ ಇನ್ನೂ ಜಾರಿಯಲ್ಲಿ ಇದೆಯೇ ಎನ್ನುವಂತಹ ವಿಚಾರವನ್ನು ನಾನು ಕೇಳಲಿಕ್ಕೆ ಬಯಸುತ್ತೇನೆ. ಇವತ್ತು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಧನ್ಯವಾದಗಳನ್ನು ಹೇಳುತ್ತೇನೆ; ಕಾರಣ, ಯಾರಾದರೂ ಮುಖ್ಯಮಂತ್ರಿಗಳಿಗೆ ಪತ್ರ ಬರೆದರೆ ಅದಕ್ಕೆ ಉತ್ತರ ಕೊಡಬೇಕು. ನಾನು ಹಿಂದೆ ಇದ್ದಂತಹ ಮಾನ್ಯ ಮುಖ್ಯಮಂತ್ರಿಗಳಿಗೂ ಪತ್ರವನ್ನು ಬರೆಯುತ್ತಿದ್ದೆ. ಆದರೆ ಈ ಮುಖ್ಯಮಂತ್ರಿಗಳಿಗೂ ನಾನು ಪತ್ರವನ್ನು ಬರೆದಿದ್ದೆ. ಅವರು ನಾಲ್ಕು ಉತ್ತರಗಳನ್ನು ಬರೆದಿದ್ದಾರೆ. ಕಾರಣ ಎಂದರೆ

ಪವರ್ ಆ ಪೋರ್ಟ್ ಪೋಲಿಯೋ ಪವರ್‌ಫುಲ್ ಆಗಿರುವಂತಹ ಮಾನ್ಯ ಮುಖ್ಯಮಂತ್ರಿಗಳ ಕೈಯಲ್ಲಿ ಇದೆ ಎನ್ನುವಂತಹ ದೃಷ್ಟಿಯಿಂದ ನಾನು ಅವರಿಗೆ ಪತ್ರವನ್ನು ಬರೆದಿದ್ದೆ. ಅದಕ್ಕೆ ಅವರು ನಾಲ್ಕು ಉತ್ತರಗಳನ್ನು ಹತ್ತು ಪತ್ರಗಳಿಗೆ ಬರೆದಿದ್ದಾರೆ. ಇಲ್ಲಿ ಒಂದು ವಿಷಯವನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕೇಳಲು ಬಯಸುತ್ತೇನೆ. ವಿಶೇಷವಾಗಿ ಪವರ್‌ಗೆ ಸಂಬಂಧಪಟ್ಟ ಹಾಗೆ ಸಾಕಷ್ಟು ವಿಚಾರಗಳು ಇವೆ. ನಾನು ಮತ್ತು ನಮ್ಮ ನಾಯಕರು ಸಹಿ ಮಾಡಿ ನಿಯಮ 69ರ ಅಡಿಯಲ್ಲಿ ಕಳುಹಿಸಿದ್ದೇವೆ. ನಾನು ಹೆಚ್ಚಿನ ವಿಚಾರಗಳನ್ನು ಇದರ ಬಗ್ಗೆ ತೆಗೆದುಕೊಳ್ಳಲು ಬಯಸುವುದಿಲ್ಲ. ಅಲ್ಲಿ ಬಹಳ ವಿಚಾರಗಳು ಇದೆ ಈ ಎನರ್ಜಿ ವಿಚಾರ ಮಾತನಾಡಲು. ಇಲ್ಲಿ ಪ್ರಮುಖವಾಗಿ ಹೇಳುವಂತಹದು, ಈ ಬಾರಿ ಮಾನ್ಯ ಮುಖ್ಯಮಂತ್ರಿಗಳು ಇದೇ ಸದನದಲ್ಲಿ ಘೋಷಣೆ ಮಾಡಿದಿರಿ. ಏನೆಂದು ಘೋಷಣೆ ಮಾಡಿದಿರಿ? ಗ್ರಾಮೀಣ ಪ್ರದೇಶದ ರೈತನಿಗೆ 8 ಗಂಟೆಗಳ ಕಾಲ ವಿದ್ಯುತ್ತನ್ನು ನಾನು ಕೊಡುತ್ತೇನೆಂದು ಘೋಷಣೆ ಮಾಡಿದಿರಿ. ಅದೇನಾಯಿತು? ಶೇಕಡಾ 16.2 ಪರ್ಸೆಂಟ್ ಹೈಕನ್ನು ಮಾಡಿದಿರಿ. ಅದಕ್ಕೆ ತಾವು ಚುನಾವಣೆ ಮುಗಿಯುವವರೆಗೆ ತಡೆ ಆಜ್ಞೆ ಕೊಟ್ಟಿದ್ದೀರಿ. ಚುನಾವಣೆ ಮುಗಿದ ತಕ್ಷಣವೇ ಅದಕ್ಕೆ ಚಾಲನೆಯನ್ನು ಕೊಟ್ಟಿರಿ. ಮುಂದಕ್ಕೆ ಆಗಿದ್ದು ಏನು? 786 ಕೋಟಿ ರೂಪಾಯಿಗಳನ್ನು ಕೆಇಆರ್‌ಸಿಯವರು ತಮಗೆ ಈ ವರ್ಷದ 16.5. ಪರ್ಸೆಂಟ್‌ಗೆ ಕೊಟ್ಟಿದ್ದರು. ಸನ್ಮಾನ್ಯ ಅಧ್ಯಕ್ಷರೆ, ತಾವೂ ಕೂಡ ಗ್ರಾಮೀಣ ಪ್ರದೇಶದಿಂದ ಬಂದಂತಹವರು. ತಮಗೂ ಅನ್ನಿಸುತ್ತದೆ. ನಾನು ರಾಜ್ಯ ಸರ್ಕಾರದಿಂದ ನಿರೀಕ್ಷಣೆ ಮಾಡಿದ್ದೆ. ಭಾರೀ ರಿಫಾರ್ಮ್ಸನ್ನು ತರುತ್ತೇವೆ ಎಂದು ಘೋಷಣೆ ಮಾಡಿದಂತಹ ತಮ್ಮಿಂದ ಬಹಳ ವಿಚಾರಗಳು ಬರುತ್ತದೆ ಎಂದು ಅಂದುಕೊಂಡಿದ್ದೆ. ಸರ್ಕಾರ ಮತ್ತೊಂದು ಬಾರಿ ಏನು ಹೇಳಿತು? 480 ಕೋಟಿ ರೂಪಾಯಿಗಳ ಶಾರ್ಟೇಜ್ ಇದೆ. ಅದಕ್ಕೋಸ್ಕರವಾಗಿ ಮತ್ತೊಂದು ಬಾರಿ ಈ ವರ್ಷ 12.5 ಪರ್ಸೆಂಟ್ ಹೈಕ್‌ಗೋಸ್ಕರವಾಗಿ ಕೆಇಆರ್‌ಸಿ ಮುಂದೆ ಹೋಗಿದ್ದೀರಿ. ಅಲ್ಲಿ ಹೇಳಿರುವಂತಹ ಅಂಶವು ಏನು? ಟ್ರಾನ್ಸ್‌ಮಿಷನ್ ಅಂಡ್ ಡಿಸ್ಟ್ರಿಬ್ಯೂಷನ್ ಲಾಸ್. ಅದನ್ನು ತಡೆಯುವುದಕ್ಕೆ ನಮ್ಮ ಕೈಯಲ್ಲಿ ಆಗುವುದಿಲ್ಲ. ಹಾಗಾದರೆ ಕಳ್ಳತನವನ್ನು ನೀವು ನಿಲ್ಲಿಸಲಿಕ್ಕೆ ಆಗದೇ ಹೋದರೆ ನೀವೇಕೆ ಈ ರಿಫಾರ್ಮ್ಸನ್ನು ತಂದಿರಿ? ನಾವೆಲ್ಲರೂ ಕೂಡ ಆಡಳಿತ ಪಕ್ಷದವರು ಅಲ್ಲ. ನಾನೂ ಕೂಡ ಬೆಂಚು ಕುಟ್ಟಿ ಸ್ವಾಗತವನ್ನು ಮಾಡಿದ್ದೆ. Anti-theft law ಅನ್ನು ತಂದಂತಹ ಸಂದರ್ಭದಲ್ಲಿ ನಾನು ಸ್ವಾಗತ ಮಾಡಿದ್ದೆ. ಎಲ್ಲರೂ ಕೂಡ ಒಕ್ಕೊರಲಿನಿಂದ ಹೇಳಿದೆವು. ನಿಮ್ಮ Anti-thaft law ಏನಾಯಿತು? ಅವತ್ತು 24 ಪರ್ಸೆಂಟಿಗೆ ಕಳ್ಳತನವನ್ನು ನಿಲ್ಲಿಸಿ ಎಂದರೆ ತಾವು ನಿಲ್ಲಿಸಲಿಕ್ಕೆ ಆಗದಂತಹ ವ್ಯವಸ್ಥೆಗಳನ್ನು ಹೇಳಿ ಮತ್ತೊಂದು ಬಾರಿ ಕೆಇಆರ್‌ಸಿ ಮುಂದೆ ಹೇಳಿದ್ದೀರಿ. ನಮಗೆ 32 ಪರ್ಸೆಂಟಿನಷ್ಟು ಥೆಫ್ಟ್ ಮತ್ತು ಟಿ ಅಂಡ್ ಡಿ ಲಾಸ್‌ಗೆ ಪ್ರಾವಿಷನ್ ಮಾಡಿ ಕೊಡಿ ಎಂದು ಹೇಳಿದ್ದೀರಿ. ಇದರ ಅರ್ಥ ಏನು? ಬಿಲ್ ಬಗ್ಗೆ ಎಲ್ಲರೂ ಕುಳಿತು ಚರ್ಚೆ ಮಾಡಿ ಇಷ್ಟೆಲ್ಲಾ ಮಾತನಾಡಿ ವಿಧಾನಸಭೆಯಲ್ಲಿ ಪಾಸ್ ಮಾಡಿ ಕೊಟ್ಟೆವು. ಗ್ರಾಮೀಣ ಪ್ರದೇಶದ ಜನರ ಬದುಕಿಗೋಸ್ಕರ ಪಾಸ್ ಮಾಡಿ ಕೊಟ್ಟೆವು. ಗ್ರಾಮೀಣ ಪ್ರದೇಶದಲ್ಲಿರುವಂಥವರಿಗೆ ಶೇಕಡಾ 25 ಪರ್ಸೆಂಟ್ ತಾವು ಹೈಕನ್ನು ಕನ್ಸಿಷನ್ ಕೊಡಬೇಕು ಎಂದು ಕೇಳಿದರೆ ಅದನ್ನು ರಾಜ್ಯ ಸರ್ಕಾರ ವಿರೋಧ ಮಾಡಿದೆ. ಅಂದರೆ ತಾವು ಗ್ರಾಮೀಣ ಪ್ರದೇಶದ ವಿರೋಧಿಗಳಾ ಎನ್ನುವಂತಹ ವಿಚಾರಗಳು ಇವತ್ತು ನಮ್ಮ ಮುಂದೆ ಬಂದಿದೆ. ಏಕೆ ಹೀಗೆ? ನಾನು ಆಗಲೇ ಹೇಳಿದೆ ಏಕೆ ಹೀಗೆ ಆಗಿದೆ ಎನ್ನುವ ವಿಚಾರಕ್ಕೆ ಹೇಳಿದೆ. ಈ ರಾಜ್ಯದಲ್ಲಿ ಎರಡು ಲಾಬಿಗಳು ಇವೆ. ಒಂದು ಮೆಡಿಕಲ್

ಲಾಬಿ ಇನ್ನೊಂದು ಐಪಿಪಿ ಲಾಬಿಗಳು. ಇಂಡಿಪೆಂಡೆಂಟ್ ಪವರ್ ಪ್ರೊಡ್ಯೂಸರ್ಸ್ ಇವರು ಯಾರು? ತಣ್ಣೀರ್ ಬಾವಿ, ಟಾಟಾ, ಜಿಂದಾಲ್, ಏಟ್ರಿಯಾ, ಇವರೆಲ್ಲರೂ ಕೂಡ ಏಐಪಿಗಳು. ಇವರುಗಳ ರಾಜ್ಯವನ್ನು ಕಂಟ್ರೋಲ್ ಮಾಡುವಂತಹ ವ್ಯವಸ್ಥೆಗಳು ಬಂದಿವೆ. ಇದರಲ್ಲಿ ನಾನು ಆಗಲೇ ಹೇಳಿದ ಹಾಗೆ ಮಾನ್ಯ ಮುಖ್ಯಮಂತ್ರಿಗಳಿಗೂ ಧನ್ಯವಾದಗಳನ್ನು ಹೇಳಿದೆ. ಇದಕ್ಕೆ ಸಂಬಂಧಪಟ್ಟ ಹಾಗೆ ತಾವು ಪತ್ರವನ್ನೂ ಬರೆದಿದ್ದೀರಿ. ನಿನ್ನೆ ತಮಗೂ ಕೂಡ ಒಂದು ಪತ್ರವನ್ನು ಬರೆದು ಇದಕ್ಕೆ ಸಂಬಂಧಪಟ್ಟಂತಹ ವಿಚಾರವನ್ನು ಹೇಳಿದ್ದೇನೆ. ತಾವು ಒಂದು ಪ್ರಮುಖವಾದಂತಹ ವಿಚಾರದ ಬಗ್ಗೆ ಹೇಳಿದಿರಿ. ಈ ಗ್ರಾಮೀಣ ಪ್ರದೇಶದ ವಿಚಾರವಾಗಿ ತಾವೇನು ಹೇಳಿದಿರಿ? ನಾವೆಲ್ಲಾ ರಿಫಾರ್ಮ್ಸ್ಂ ಮಾಡುತ್ತೇವೆ. ಹೌದು, 3 ಜನ ಐಎಎಸ್ ಆಫೀಸರ್ಸ್ ಇದ್ದವರನ್ನು ನೀವು 18 ಜನ ಐಎಎಸ್ ಆಫೀಸರ್ಸ್ ಅವರನ್ನು ನೇಮಕ ಮಾಡಿದಿರಿ. K.E.B. ಇದ್ದುದ್ದನ್ನು K.P.T.C.L. ಮಾಡಿದಿರಿ, K.P.T.C.L. ಇದ್ದುದ್ದನ್ನು ಎಸ್ಕೋಸ್ ಮಾಡಿದ್ದೀರಿ, ಈಗ ನಾಲ್ಕು ಎಸ್ಕೋಸ್‌ಗಳಾಗಿವೆ. ಈ ನಾಲ್ಕು ಎಸ್ಕೋಸ್‌ಗಳಿಗೆ 18 ಜನ ಐ.ಎ.ಎಸ್ ಅಧಿಕಾರಿಗಳನ್ನು ನೀವು ನೇಮಕ ಮಾಡಿದಿರಿ. ಇದರಿಂದ ಏನು ಲಾಭ ಆಯಿತು? ಲಾಭ ಆಗಿದ್ದು ಬೇರೆಯವರಿಗೆ. ಇಂಡಿಪೆಂಡೆಂಟ್ ಪವರ್ ಪ್ರೊಡ್ಯೂಸರ್‌ಗಳು ಯಾರಿದ್ದಾರೋ ಅವರಿಗೆ ಬೇಕಾಗಿರುವಂತಹ ಹಣವನ್ನು ಕೊಡಲಿಕ್ಕೋಸ್ಕರವಾಗಿ ನಡೆದಿರುವಂತಹ ವ್ಯವಸ್ಥೆಗಳು ಇದಾಗಿವೆ. ನಮ್ಮ ರಾಜ್ಯದ ಎಕಾನಮಿ ಗ್ರೋತ್ ಅಂದರೆ ಜಿ.ಡಿ.ಪಿ. ಶೇಕಡ 7ರಷ್ಟು ಇದೆ. ನಾನು ಇದನ್ನು ಸ್ವಾಗತ ಮಾಡುತ್ತೇನೆ. ಆದರೆ ಅದರ ಹಿಂದೆ ಇರುವಂಥಾದ್ದು ಏನು? ಪ್ರಮುಖವಾಗಿ ಎಲೆಕ್ಟ್ರಿಸಿಟಿ ಜನರೇಷನ್ ಏನಿದೆ, ಅದಕ್ಕೆ ಬೇಕಾಗಿರುವಂತಹ accelerated development ಏನಾಗಿತ್ತೋ ಅದರ ಆಧಾರದ ಮೇಲೆ ಜಿ.ಡಿ.ಪಿ. ನಿಂತಿದೆ. ಅದಕ್ಕೆ ಸಂಬಂಧಪಟ್ಟ ಹಾಗೆ, ತಮಗೆ ನಾನು ಪತ್ರವನ್ನು ಬರೆಯುವಂತಹ ಸಂದರ್ಭದಲ್ಲೂ ಕೂಡ ಪ್ರಮುಖವಾದಂತಹ ಕೆಲವು ಅಂಶಗಳನ್ನು ತಮ್ಮ ಗಮನಕ್ಕೆ ತಂದಿದ್ದೆ. ತಣ್ಣೀರ್ ಬಾವಿಗೆ ಸಂಬಂಧಪಟ್ಟ ಹಾಗೆ ಮಾನ್ಯ ಮುಖ್ಯಮಂತ್ರಿಗಳು ಹಿಂದಿನ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ಇದಕ್ಕೆ ಪಿ.ಪಿ. ಸಹಿ ಮಾಡಿದ್ದರು ಎಂದು ಹೇಳಿದ್ದಾರೆ. ಇದನ್ನು ನಾನು ಒಪ್ಪುತ್ತೇನೆ. ಹಿಂದಿನ ಮಾನ್ಯ ಜೆ.ಹೆಚ್. ಪಟೇಲ್‌ರವರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ ದಿನಾಂಕ 15.12.97ರಲ್ಲಿ ಇದಕ್ಕೆ ಸಹಿ ಮಾಡಿದ್ದರು. ಇದರ ಆಗ್ರಿಮೆಂಟ್ ಆಗಿದ್ದು 30.09.99ರಲ್ಲಿ, ರಿವೈಸ್ಡ್ ಅಗ್ರಿಮೆಂಟ್ ಯಾರ ಕಾಲದಲ್ಲಿ ಆಯಿತು? ತಮ್ಮ ಸರ್ಕಾರ ಬಂದ ನಂತರದಲ್ಲಿ ರಿವೈಸ್ಡ್ ಆಗ್ರಿಮೆಂಟ್ ಅನ್ನು ಮಾಡಿಕೊಂಡಿರಿ. ನಾನು ಸ್ವಾಗತ ಮಾಡುತ್ತೇನೆ, ಮಾನ್ಯ ಮುಖ್ಯಮಂತ್ರಿಗಳು ಟಾಸ್ಕ್ ಫೋರ್ಸ್ ಮಾಡಿದರು, ಅಡ್ಮಿನಿಸ್ಟ್ರೇಟಿವ್ ರಿಫಾರ್ಮ್ಸ್ ಕಮಿಷನ್ ಮಾಡಿದರು, ಅದರ ಜೊತೆಯಲ್ಲಿ ಟ್ಯಾಕ್ಸ್ ರಿಫಾರ್ಮ್ಸ್ ಬಗ್ಗೆ ಒಂದು ಕಮಿಷನ್ ಮಾಡಿದರು. ಇವುಗಳ ವರದಿಯೆಲ್ಲಾ ಏನಾಯಿತು? ಅವು ಎಲ್ಲಿ ಬಿದ್ದಿವೆ ಎನ್ನುವುದನ್ನು ಆಮೇಲೆ ಚರ್ಚೆ ಮಾಡೋಣ. ಇದೆಲ್ಲದರ ಜೊತೆಯಲ್ಲಿ ದೀಪಕ್ ಪರೇಖ್ ಕಮಿಟಿ ಎಂದು ಮಾಡಿದರು. ಆಗ ನಾನು ತುಂಬಾ ಸಂತೋಷ ಪಟ್ಟಿದ್ದೆ. ಆ ದೀಪಕ್ ಪರೇಖ್ ಎಂಬ ಒಬ್ಬ ಎಕಾನಾಮಿಸ್ಟ್ ಅನ್ನು ಕರೆದುಕೊಂಡು ಬಂದು, ಅದಕ್ಕೆ ಅಧ್ಯಕ್ಷರನ್ನಾಗಿ ಮಾಡಿದಿರಿ. ಎನರ್ಜಿ ಎಕಾನಾಮಿಯಲ್ಲಿ ಎಕ್ಸ್‌ಪರ್ಟ್ ಆದಂತಹ ಸನ್ಮಾನ್ಯ ಜಯರಾಮ್ ರಮೇಶ್‌ರಂತಹ ವ್ಯಕ್ತಿಯನ್ನು ಕರೆದುಕೊಂಡು ಬಂದು ಆ ಕಮಿಟಿಯಲ್ಲಿ ಇರಿಸಿದಿರಿ. ದೀಪಕ್ ಪರೇಖ್ ಕಮಿಟಿ ವರದಿ ಬಂದಾಗ ಕ್ಯಾಬಿನೆಟ್‌ನಲ್ಲಿ

ಮೂರು ಗಂಟೆಗಳ ಕಾಲ ಚರ್ಚೆ ಮಾಡಿ ದೀಪಕ್ ಪರೇಖ್ ಕಮಿಟಿಯನ್ನು ಒಪ್ಪಬೇಕೆಂದು ನೀವು ನಿರ್ಣಯವನ್ನು ಕೈಗೊಂಡಿರಿ. ಅನಂತರದಲ್ಲಿ ಸನ್ಮಾನ್ಯ ಕೃಷ್ಣರವರು ಈ ಒಂದು ದೀಪಕ್ ಪರೇಖ್ ಕಮಿಟಿ ಭಗವದ್ಗೀತೆ ಅಲ್ಲ ಎನ್ನುವಂತಹ ಒಂದು ಮಾತನ್ನು ಹೇಳಿದರು. ನಾನು ಅವರಿಂದ ಈ ಮಾತು ಬರುತ್ತದೆ ಎಂದುಕೊಂಡಿರಲಿಲ್ಲ. ಶ್ರೀ ಕೃಷ್ಣರವರು ಭಗವದ್ಗೀತೆ ಬಗ್ಗೆ ಬಹಳ ವಿಚಾರಗಳನ್ನು ಇಟ್ಟುಕೊಂಡಿರುತ್ತಾರೆ ಎಂದು ನಾನು ಭಾವಿಸಿದ್ದೆ. ಇದು ಭಗವದ್ಗೀತೆ ಅಲ್ಲ ಎನ್ನುವ ಮಾತನ್ನು ಕೇಳಿ ನನಗೆ ಬಹಳ ಶಾಕ್ ಆಯಿತು. ಏಕೆ ಹಾಗೆಂದರು? ಅವರು ಮನಸಿಟ್ಟುಕೊಂಡು ಮನಸ್ಸಿನಲ್ಲಿ ಅನ್ನಲಿಲ್ಲ. ಆದರ ಹಿಂದೆ ಒಂದು ದೊಡ್ಡ ಸೋರ್ಸ್, ಯಾವುದೋ ಒಂದು ಕಾಣದ ಕೈ ದೆಹಲಿಯಿಂದ ಆಟವನ್ನು ಆಡಿತು. ಅದಕ್ಕೋಸ್ಕರವಾಗಿ ಅವರು ಆ ಮಾತನ್ನು ಹೇಳಬೇಕಾದಂತಹ ಪರಿಸ್ಥಿತಿ ಬಂದಿತು. ಈ ವಿಚಾರವಾಗಿ ಇವತ್ತು ನ್ಯಾಯಾಲಯಕ್ಕೆ ಹೋದರು. ನ್ಯಾಯಾಲಯದಲ್ಲಿ ನೀವು ಏನು ಹೇಳಿದಿರಿ, ನಿಮ್ಮ ಅಡ್ವೋಕೇಟ್ ಜನರಲ್‌ರವರು ಏನು ಹೇಳಿದರು? ಈ ರಾಜ್ಯದ ಹಿತವನ್ನು ಕಾಪಾಡುವಂತಹ ವ್ಯವಸ್ಥೆ ಇರುವಂತಹ ಸಮಯದಲ್ಲಿ ಅಡ್ವೋಕೇಟ್ ಜನರಲ್, ಇಲ್ಲಿ ಆಶ್ಚರ್ಯ ತರುತ್ತದೆ, ಯಾರು ಕೆ.ಪಿ.ಟಿ.ಸಿ.ಎಲ್.ಗೆ ಲೀಗಲ್ ಅಡ್ವೈಸರ್ ಇದ್ದಾರೋ ಅಥವಾ ಇಲ್ಲಿಯ ಲಾಯರ್ ಇದ್ದಾರೋ ಅವರು ಅಲ್ಲಿಯ ಲೀಗಲ್ ಅಡ್ವೈಸರ್ ಆಗಿದ್ದಾರೆ. ಹೀಗಿರುವಾಗ ನ್ಯಾಯ ಎಲ್ಲಿ ಬರುತ್ತದೆ? Hand in glove. ರಾಜ್ಯ ಸರ್ಕಾರ ದೀಪಕ್ ಪರೇಖ್ ಕಮಿಟಿಯ ಬಗ್ಗೆ ಒಂದೇ ಒಂದು ಪದವನ್ನು ನ್ಯಾಯಾಲಯದ ಮುಂದೆ ಹೇಳಲಿಲ್ಲ. ಈ ಬಗ್ಗೆ ನನ್ನ ಹತ್ತಿರ ಪೂರ್ತಿಯಾದಂತಹ ದಾಖಲಾತಿಗಳು ಇವೆ. ದೀಪಕ್ ಪರೇಖ್ ಕಮಿಟಿಯನ್ನು ನಾವು ನೇಮಕ ಮಾಡಿದ್ದೆವು. ಇದರ ವರದಿ ಹೀಗಿದೆ ಎಂದೂ ಕೂಡ ಸರ್ಕಾರ ನ್ಯಾಯಾಲಯದ ಮುಂದೆ ಹೇಳಲಿಲ್ಲ. ನ್ಯಾಯಾಲಯದ ಸಿಂಗಲ್ ಬೆಂಚ್ ಒಂದು ಜಡ್ಜ್‌ಮೆಂಟ್ ಕೊಟ್ಟಿತ್ತು ಎಂದು ಹೇಳಿ ಅದನ್ನು ಅಡ್ಮಿಟ್ ಮಾಡಬೇಕು ಎನ್ನುವಂತಹ ವಿಚಾರವನ್ನು ಹೇಳಿದಿರಿ. ಮಾನ್ಯ ಮುಖ್ಯಮಂತ್ರಿಗಳು ಬಹಳ ಒಳ್ಳೆಯ ವಿಚಾರವನ್ನು ಹೇಳುತ್ತಾ ನನಗೆ ಬರೆದಂತಹ ಪತ್ರದಲ್ಲಿಯ ಒಂದು ಪದವನ್ನು ಓದಲಿಕ್ಕೆ ನಾನು ಇಲ್ಲಿ ಇಚ್ಛೆ ಪಡುತ್ತೇನೆ. Government was then advised legally that there were no sufficient grounds to file the appeal and thereupon escrow was made operational in compliance of High Court Order. Appeal against the said High Court Order now does not arise. ಮಾನ್ಯ ಮುಖ್ಯಮಂತ್ರಿಗಳೇ, ರಾಷ್ಟ್ರ ಮಟ್ಟದಲ್ಲಿ ಬೆಳಕಿಗೆ ಬಂದ ಬೋಫೋರ್ಸ್ ಹಗರಣದಲ್ಲಿ ಕೇವಲ 60 ಕೋಟಿ ರೂಪಾಯಿಗಳ ವ್ಯವಹಾರ ಆಗಿತ್ತು. ಅದು ಒಂದು ಸಣ್ಣ ವಿಚಾರ. ಆದರೆ ಇಲ್ಲಿ 1040.80 ಕೋಟಿ ರೂಪಾಯಿಗಳ ವ್ಯವಹಾರ ನಡೆದಿದೆ. ಇಂತಹ ದೊಡ್ಡ ಮೊತ್ತ ಇನ್‌ವಾಲ್ವ್ ಆಗಿರುವಂತಹ ಪ್ರಕರಣದಲ್ಲಿ ರಾಜ್ಯ ಸರ್ಕಾರ ಒಂದು ಅಪೀಲ್ ಅನ್ನು ಹಾಕಲಿಕ್ಕೆ ಆಗುವುದಿಲ್ಲ ಎನ್ನುವುದಾದರೆ ಹೇಗೆ? ಯಾರು ಲೀಗಲ್ ಆಗಿ ಈ ಒಂದು ಒಪೀನಿಯನ್ ಅನ್ನು ಕೊಟ್ಟಿದ್ದಾರೆ? ಇದಕ್ಕೆ ದಾಖಲಾತಿ ಎಲ್ಲಿದೆ? ದಯಮಾಡಿ ಸದನದ ಮುಂದೆ ತಾವು ಹೇಳಬೇಕು. ಇದರಲ್ಲಿ ನ್ಯಾಯಾಲಯದಿಂದ ತೀರ್ಪು ಬಂದಿತು. ಬಂದ ಮೇಲೆ ಏನಾಯಿತು? ಬಂದ ಮೇಲೆ ಅಪೀಲ್ ಮಾಡಲಿಲ್ಲ? ರಾಜ್ಯ ಸರ್ಕಾರ ಏಕೆ ಅಪೀಲ್ ಹೋಗಲಿಲ್ಲ? ಕೆ.ಪಿ.ಟಿ.ಸಿ.ಎಲ್. ನ ಹಿಂದಿನ ಛೇರ್ಮನ್ ಮತ್ತು

ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಅವರು ಸರ್ಕಾರಕ್ಕೆ ನಿಖರವಾಗಿ ಒಂದು ಪತ್ರವನ್ನು ಬರೆದರು. ಯಾವುದೇ ಕಾರಣಕ್ಕೂ ಕೂಡ ತಣ್ಣೀರು ಬಾವಿ ಕೊಟ್ಟಿರುವಂತಹ ಮನವಿಯನ್ನು ಒಪ್ಪಲಿಕ್ಕೆ ಸಾಧ್ಯವಿಲ್ಲ. ಎಂದು ರಾಜ್ಯ ಸರ್ಕಾರಕ್ಕೆ ಅವರು ಒಂದು ಪತ್ರವನ್ನು ಬರೆದರು. ಅದಕ್ಕಾಗಿ ನಾನು ಇವತ್ತೂ ಕೂಡ ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ, ಅದರಲ್ಲಿ ಅವರು ಸ್ಪಷ್ಟವಾಗಿ ಏನು ಹೇಳಿದರು? ಅದರ origin ಪ್ರಾರಂಭವಾಗಿದ್ದುದ್ದು ಆಗಸ್ಟ್ 2, 2001ರಂದು. ಕೆ.ಪಿ.ಟಿ.ಸಿ.ಎಲ್.ಗೆ ಮೊದಲ ಬಿಲ್ಲನ್ನು ತಣ್ಣೀರು ಬಾವಿಯವರು ಕಳುಹಿಸಿ ಕೊಟ್ಟಾಗ ಈ ಡಿಸ್ಪೂಟ್ ಶುರು ಆಯಿತು. ತಣ್ಣೀರು ಬಾವಿ ಮತ್ತು ಸರ್ಕಾರದ ಜೊತೆಯಲ್ಲಿ ಆದಂತಹ ಪಿಪಿಎ ನಲ್ಲಿರುವಂತಹ ಪದವನ್ನೇ ನಾನು ಇಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. Section 7.4 of PPA:- The fixed charges shall be determined at the time of the financial closing and is subject to a ceiling of 0.04 US dollars/unit. Yes, ಇದನ್ನು ನಾನು ಇವತ್ತೂ ಒಪ್ಪುತ್ತೇನೆ. ಯಾರು ಬರೆದಿದ್ದು ಇದನ್ನು? ಯಾರೂ ಅಲ್ಲ? ಹಿಂದಿನ ಕೆ.ಪಿ.ಟಿ.ಸಿ.ಎಲ್‌ನ ಛೇರ್ಮನ್ ಮತ್ತು ಮ್ಯಾನೇಜಿಂಗ್ ಡೈರೆಕ್ಟರ್‌ರವರು ಇದನ್ನು ಮಾತ್ರ ಒಪ್ಪಲಿಕ್ಕೆ ಸಾಧ್ಯವಿದೆ, ಇದು ಸೀಲಿಂಗ್ ಲಿಮಿಟ್ ಎನ್ನುವಂತಹ ಮಾತನ್ನು ಹೇಳಿದರು. ಈ ರಾಜ್ಯದ ಬೊಕ್ಕಸವನ್ನು ಅವರು ಉಳಿಸಲಿಕ್ಕೆ ಹೊರಟರು. ಆ ವಿಚಾರದ ಬಗ್ಗೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ಕಾರಣವೇನೆಂದರೆ, ಸಮಯ ಇಲ್ಲ. ಆದರೆ ಇದೊಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ. ಅಲ್ಲಿರುವಂತಾದ್ದು ಯುಎಸ್ ಡಾಲರ್ ಎಕ್ಸ್‌ಚೇಂಜ್. ಯುಎಸ್ ಡಾಲರ್ ಎಕ್ಸ್‌ಚೇಂಜ್‌ಗೆ ಎಷ್ಟು ಹಣವನ್ನು ಕೊಡಬೇಕಾಗಿದೆ, ಫ್ಯೂಯಲ್ ಎಸ್ಕಲೇಷನ್ ಏನಾಗುತ್ತದೆ, ಅದಕ್ಕೆ ಹಣವನ್ನು ಕೊಡಬೇಕಾಗುತ್ತದೆ, ಈ ಎಲ್ಲಾ ಅಂಶಗಳನ್ನು ಹೇಳಿ, ಒಂದೇ ಒಂದು ಹೇಳಿದರು, 16% profit ensured. 747 ಕೋಟಿ ರೂಪಾಯಿಗಳ ಬಂಡವಾಳವನ್ನು ಹಾಕಿದ್ದಂತಹ ಈ ಸಂಸ್ಥೆ ತನ್ನ ಬಂಡವಾಳವನ್ನು 928 ಕೋಟಿ ರೂಪಾಯಿಗಳಿಗೆ enhancement ಮಾಡಿಕೊಂಡಿತು. ಆದರೆ ರಾಜ್ಯ ಸರ್ಕಾರ ಇದನ್ನು ಕೇಳಲಿಲ್ಲ. ಅದರ ಬಗ್ಗೆ ನಾನು ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ. 928 ಕೋಟಿ ರೂಪಾಯಿಗಳಿಗೆ 15% profit ಎಷ್ಟಾಯಿತು? ಪವರ್ ಚಾರ್ಜಸ್ ಬಿಟ್ಟು ಅಸಲು ಮತ್ತು ಬಡ್ಡಿ ಎರಡೂ ಸೇರಿ ಅವರಿಗೆ ಕೊಡಬೇಕಾದಂತದ್ದು ಕೇವಲ 1040 ಕೋಟಿ ರೂಪಾಯಿಗಳು ಮಾತ್ರ. 1040 ಕೋಟಿ ರೂಪಾಯಿಗಳ ಜೊತೆಯಲ್ಲಿ ಅಡಿಷನಲ್ಲಾಗಿ 104 ಕೋಟಿ ರೂಪಾಯಿಗಳು, ಅಂದರೆ ಒಟ್ಟಾರೆಯಾಗಿ 2081 ಕೋಟಿ ರೂಪಾಯಿಗಳನ್ನು ಈ ಸಂಸ್ಥೆಗೆ ಕೊಡುತ್ತೇವೆ ಎಂದು ಹೇಳಿ ಈ ರಾಜ್ಯದ ಆಡಳಿತ ಒಪ್ಪಿಕೊಂಡಿದೆ ಎನ್ನುವುದಾದರೆ ಇದರ ಹಿಂದೆ ಏನು ನಡೆದಿದೆ? ಸಣ್ಣ ವ್ಯವಸ್ಥೆಗಳೇ ಇದು? ನನಗಿನ್ನೂ ಅರ್ಥವಾಗುತ್ತಿಲ್ಲ. ಇವತ್ತು ಇದಕ್ಕೆ ಏನು ಇತ್ತು clause. PPA ನನ್ನ ಹತ್ತಿರ ಇದೆ. ಎಲ್ಲದರೂ ಕೂಡ ಕೆ.ಪಿ.ಟಿ.ಸಿ.ಎಲ್. ಮತ್ತು ತಣ್ಣೀರು ಬಾವಿಯ ಮಧ್ಯೆ ವಿವಾದ ಬಂದರೆ arbitrationಗೆ ಹೋಗಬೇಕೆಂದು ಇದೆ. ಅವರು arbitrationಗೆ ಹೋಗಬೇಕಾಗಿತ್ತು. ಆದರೆ ತಣ್ಣೀರು ಬಾವಿ ಕಂಪೆನಿಯವರು ಬಹಳ ಬುದ್ಧಿವಂತಿಕೆಯ ಕೆಲಸ ಮಾಡಿದರು. ದಿನಾಂಕ 12.09.2001 ರಂದು ಮುಖ್ಯಮಂತ್ರಿಗಳಿಗೆ ಕಂಪೆನಿ ಒಂದು ಪತ್ರವನ್ನೊಂದನ್ನು ಬರೆದು ನಮಗೂ ಮತ್ತು ಕೆ.ಪಿ.ಟಿ.ಸಿ.ಎಲ್.ಗೂ ತಕರಾರು ಬಂದಿದೆ, ಇದನ್ನು ಇತ್ಯರ್ಥ

ಮಾಡಿ ಎಂದು ಹೇಳಿತು. ರಾಜ್ಯದ ಮುಖ್ಯಮಂತ್ರಿಗಳ ಅಧಿಕಾರಕ್ಕೆ ಎಲ್ಲೂ ಕೂಡ ಚ್ಯುತಿಯಾಗಬಾರದು. ಆದರೆ, It is a contract between K.P.T.C.L and Thanner Bavi. ಇದರ ಮಧ್ಯದಲ್ಲಿ ಮುಖ್ಯಮಂತ್ರಿಗಳ ಪಾತ್ರ ಏನಿತ್ತು? ಮಾನ್ಯ ಮುಖ್ಯಮಂತ್ರಿಗಳು ಕಾನೂನಿನ ಪ್ರಕಾರವಾಗಿ arbitration ಹೋಗಿ ಎಂದು ಬರೆಯುತ್ತಾರೆಂದು ನಾನು ನಿರೀಕ್ಷಣೆ ಮಾಡಿದ್ದೆ. ಆದರೆ ಮಾನ್ಯ ಮುಖ್ಯಮಂತ್ರಿಗಳು ಬೇರೆ ಬರೆದರು. ಅವರ ಆಜ್ಞೆಯ ಪ್ರಕಾರವಾಗಿ, ದಿನಾಂಕ 1.12.2001ರಂದು ಎನರ್ಜಿ ಸೆಕ್ರೆಟರಿಯವರು ಇದಕ್ಕೆ ಒಪ್ಪಿಗೆ ಕೊಟ್ಟರು. ಹೇಗೆ ಕೊಟ್ಟರು? ಏನೇನೆಲ್ಲಾ ತಣ್ಣೀರು ಬಾವಿಯವರು ಹೇಳಿದ್ದರೋ ಅಷ್ಟನ್ನೂ ಕೂಡ, ಇಲ್ಲಿ Principal Secretary Observations ಎಂಬುದು ನನ್ನ ಮುಂದೆ ಇದೆ. ಏನೇನು observations ಇದೆ ಎಂದು ಓದಬೇಕಾದರೆ ಕೊನೆಯ ಪಕ್ಷ ನನಗೆ ಹತ್ತು ನಿಮಿಷ ಬೇಕಾಗುತ್ತದೆ. ಆದ್ದರಿಂದ ಅದನ್ನು ನಾನು ಇಲ್ಲಿ ಓದುವುದಿಲ್ಲ. ಆದರೆ ತಣ್ಣೀರು ಬಾವಿಯವರು ಹೇಳಿದ ಹಾಗೆ, 16% profit ಅಲ್ಲ, ನೀವು 1040 ಕೋಟಿ ರೂಪಾಯಿ ಅಲ್ಲ ಕೊಡುವುದು, 2081 ಕೋಟಿ ರೂಪಾಯಿಗಳು ರಾಜ್ಯ ಸರ್ಕಾರ ಕೊಡಬೇಕು, ಆದಕ್ಕೋಸ್ಕರವಾಗಿ ತಕ್ಷಣದಲ್ಲೇ ಈ ಕ್ರಮವನ್ನು ಕೈಗೊಳ್ಳಬೇಕು ಎಂದು ಎನರ್ಜಿ ಸೆಕ್ರೆಟರಿಯವರು ಪತ್ರವನ್ನು ಬರೆದು ಕೆ.ಪಿ.ಟಿ.ಸಿ.ಎಲ್.ಗೆ ಕಳುಹಿಸಿ ಕೊಟ್ಟರು. ಇದಕ್ಕೆ ವಿರೋಧ ಮಾಡಿದವರು ಯಾರು? ಇದನ್ನು ವಿರೋಧ ಮಾಡಿದವರಿಗೆ ರಾಜ್ಯ ಸರ್ಕಾರದಲ್ಲಿ ಏನು ಫಲ ಸಿಗುತ್ತದೆ ಎಂಬುದನ್ನು ನಾವು ನೋಡಬೇಕು. ಅವರಿಗೆ ಏನು ಫಲ ಸಿಕ್ಕಿತು ಅಂದರೆ ಆ ಸಂಸ್ಥೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದಂತಹ ಶ್ರೀಮತಿ ಕರ್ಲ ಫೈನಾನ್ಷಿಯಲ್ ಅಡ್ವೈಸರ್ ಅವರು ಈ ಪತ್ರ ಬಂದಂತಹ ಸಂದರ್ಭದಲ್ಲಿ ಒಂದು ಷರಾ ಬರೆದರು. ರಾಜ್ಯದ ಬೊಕ್ಕಸಕ್ಕೆ ಹಾನಿಯಾಗುವ ದೃಷ್ಟಿಯಿಂದ ಇದನ್ನು ಕೊಟ್ಟರೆ ಕೆಪಿಟಿಸಿಎಲ್ ಸಂಪೂರ್ಣವಾಗಿ ನಿರ್ನಾಮವಾಗುತ್ತದೆ ಎಂದು ಹೇಳಿದರು. ಆದಾದ ಮೂರು ದಿವಸಗಳಿಗೆ ಶ್ರೀಮತಿ ಕರ್ಲರವರಿಗೆ ಎಲ್ಲಿಗೆ ಕಳುಹಿಸಿದರು, ಬಲಿ ಪಶು ಆದರು. ಗುರು ಚರಣ್ ಏನಾದರು? ಬಲಿ ಪಶು ಆದರು. ಇಂತಹ ವಿಚಾರಗಳಿಗೆ ರಾಜ್ಯ ಸರ್ಕಾರ ಅಂತಹ ಒಳ್ಳೆಯ ಫೈನಾನ್ಷಿಯಲ್ ಕಂಟ್ರೋಲ್ ತರುವಂತಹ ಅಧಿಕಾರಿಗಳನ್ನು ಎತ್ತಂಗಡಿ ಮಾಡಿ ತಕ್ಷಣವೇ ಕೆಪಿಟಿಸಿಎಲ್‌ನಿಂದ ಹಣ ಬಿಡುಗಡೆ ಮಾಡುವುದಕ್ಕೋಸ್ಕರ ಒಂದು ವಿಚಾರ ಬಂದಿತ್ತು, ತಕ್ಷಣ ನಾನು ಕೆಇಆರ್‌ಸಿ ಮುಂದೆ ಫೈಲ್ ಮಾಡಿದೆ, ಯಾವುದೇ ಕಾರಣಕ್ಕೆ ಈ ಹಣ ಬಿಡುಗಡೆ ಮಾಡಬಾರದು ಎಂದು ಹೇಳಿದೆ. ಕೆಇಆರ್‌ಸಿಯಲ್ಲಿ ಹಿರಿಯರಿಂಗ್ ಆಯಿತು, ನನಗೆ ನ್ಯಾಯ ದೊರಕಿತು, ರಾಜ್ಯದ ಬೊಕ್ಕಸದ 1040 ಕೋಟಿ ಹಣ ಏನಿದೆ ಈ ಹಣವನ್ನು ಯಾವುದೇ ಕಾರಣಕ್ಕೂ ರಾಜ್ಯ ಸರ್ಕಾರ ಬಿಡುಗಡೆ ಮಾಡಬಾರದು ಇದಕ್ಕೆ ಆರ್ಬಿಟ್ರೇಷನ್ ನೇಮಕ ಮಾಡಬೇಕೆಂದು ಕೆಇಆರ್‌ಸಿ ಡಿಸಿಷನ್ ಕೊಟ್ಟರು, ರಾಜ್ಯ ಸರ್ಕಾರದವರು ನೇಮಕ ಮಾಡಿದರಾ? ಏತಕ್ಕಾಗಿ ಆರ್ಬಿಟ್ರೇಟರ್‌ನ್ನು ಇವತ್ತಿನವರೆಗೆ ನೇಮಕ ಮಾಡಲಿಲ್ಲ? ಬಹಳ ದಿನಗಳಿಂದ ಒಂದು ಮಾತನ್ನು ಹೇಳುವ ಅವಶ್ಯಕತೆ ಇದೆ. ಮೊನ್ನೆ ಶುಕ್ರವಾರ ರಾಜ್ಯದ ಬೊಕ್ಕಸದಿಂದ 40 ಕೋಟಿ ರೂಪಾಯಿಗಳನ್ನು ಯಾವುದೇ ಆಜ್ಞೆ ಇಲ್ಲದೆ ತಣ್ಣೀರು ಬಾವಿಯವರು ಡ್ರಾ ಮಾಡಿದ್ದಾರೆ. ಎಲ್ಲಿ ಆ ಎಕ್ಸಸ್ ಹಣ? ಇದಕ್ಕೆ ಸಂಬಂಧಪಟ್ಟ ಹಾಗೆ ಸಿಎಜಿ ವರದಿ ಕೂಡ ಬಂದಿತ್ತು. ಸಿಎಜಿ ಅಬ್ಸರ್ವೇಷನ್ ಆಪರೇಟಿಂಗ್ ದಿ ಎಸ್ಕ್ರೋ ಅಕೌಂಟ್ ಸಿಎಜಿಯವರು ಒಂದು ಮಾತನ್ನು ಹೇಳಿದರು.

> "PPA with Thanner Bavi provided for opening escrow account in which the Board has maintained amount equivalent to one month project tariff payment which was not envisaged in the guidelines of Central Government."

ಇಡೀ ರಾಜ್ಯದಲ್ಲಿ ಇಡೀ ದೇಶದಲ್ಲಿ ಇತಿಹಾಸದಲ್ಲಿ ಮೊದಲನೇ ಬಾರಿಗೆ ಕೇಂದ್ರ ಸರ್ಕಾರದ ಗೈಡ್‌ಲೈನ್ಸ್‌ಗೆ ವಿರುದ್ಧವಾಗಿ ಒಂದು ತಿಂಗಳಿಗೆ ಆಗುವಂತಹ 75 ಕೋಟಿ ರೂಪಾಯಿಗಳನ್ನು ಈ ಒಂದು ಎಸ್ಕ್ರೋ ಕವರೇಜ್‌ಗೆ ರಾಜ್ಯ ಸರ್ಕಾರ ಅನುಮತಿ ಕೊಟ್ಟಿದೆ. ಮೊನ್ನೆ ದಿವಸ 40 ಕೋಟಿ ರೂಪಾಯಿಗಳನ್ನು ಡ್ರಾ ಮಾಡಿದ್ದಾರೆ. ಇದರ ಹಿಂದೆ ಏನು ಇದೆ, ಒಂದು ಕಡೆ ರೈತ ಅವನದೇ ಆದ ಪರಿಸ್ಥಿತಿ ಎದುರಿಸುತ್ತಿದ್ದಾನೆ. ತಣ್ಣೀರು ಬಾವಿ ಬಗ್ಗೆ ಹೇಳುವಂತಹ ಸಂದರ್ಭದಲ್ಲಿ ಹೇಳಿದರು

" The Parkesh Committee appointed by the Government of Karnataka had also recommended in February, 2000 that no private power project in the State including Thanner Bavi should be accorded escrow cover."

ಇದನ್ನು ಸಿಎಜಿಯವರು ಸರ್ಕಾರಕ್ಕೆ ವರದಿ ಕೊಟ್ಟರು, ತಾವು ಮಂಡನೆ ಮಾಡಿದಿರಿ. 2000ನೇ ಫೆಬ್ರವರಿಯಲ್ಲಿ ಎಸ್ಕ್ರೋ ಕವರೇಜ್ ಕೊಡಬಾರದು ಎಂದು ಕೇಂದ್ರ ಸರ್ಕಾರದ ನಿರ್ಣಯದ ವಿರುದ್ಧ ಇದೆ ಎಂದು ಹೇಳಿದರು. ಸನ್ಮಾನ್ಯ ಹಿಂದಿನ ಸಿಎಮ್‌ಡಿಯವರು ಒಂದು ಪತ್ರ ಬರೆದಿದ್ದರು. ಆ ಪತ್ರದಲ್ಲಿ ರಾಜ್ಯ ಸರ್ಕಾರಕ್ಕೆ ಅವರು ಹೇಳಿದ್ದಾರೆ. ಆ್ಯಕ್ಚುಯಲ್ ಪೇಮೆಂಟ್ ಮಾಡಬೇಕಾಗಿರುವುದು ಎಷ್ಟು ಎನ್ನುವಂತಹ ಒಂದು ಟೇಬಲ್ ಕಳುಹಿಸಿಕೊಟ್ಟಿದ್ದರು. ಅವರ ಪ್ರಕಾರ ನಮ್ಮ ಒಪ್ಪಂದದ ಪ್ರಕಾರ 2001-02ಕ್ಕೆ 110.64 ಕೋಟಿ ರೂಪಾಯಿಗಳನ್ನು ಕೊಡಬೇಕಾಗಿತ್ತು. ಆದರೆ ತಣ್ಣೀರು ಬಾವಿಯವರು ಕೇಳಿದ್ದು 278.87 ಕೋಟಿ ರೂಪಾಯಿಗಳು. 2002-03ಕ್ಕೆ 301 ಕೋಟಿ ರೂಪಾಯಿಗಳು, ನಾವು ಕೊಡಬೇಕಾಗಿರುವುದು 165 ಕೋಟಿ ರೂಪಾಯಿಗಳು ಮಾತ್ರ. 2003-04ಕ್ಕೆ 158 ಕೋಟಿ ರೂಪಾಯಿಗಳು ನಮ್ಮ ಅಗ್ರಿಮೆಂಟ್ ಪ್ರಕಾರ ಕೊಡಬೇಕು. ಅವರು ಕೇಳಿರುವುದು 301.98 ಕೋಟಿ ರೂಪಾಯಿಗಳು. 2004-05ಕ್ಕೆ 161 ಕೋಟಿ ರೂಪಾಯಿಗಳು ಹೀಗೆ ಎಲ್ಲವನ್ನೂ ಕೇಳಿ ನಾವು ಕೊಡಬೇಕಾದ್ದುದ್ದು 1096.96 ಕೋಟಿ ರೂಪಾಯಿಗಳನ್ನು ನಮ್ಮ ಅಗ್ರಿಮೆಂಟ್ ಪ್ರಕಾರ ಕೊಡಬೇಕು. ಆದರೆ ತಣ್ಣೀರು ಬಾವಿಯವರು ಕೇಳಿರುವುದು 2137.77 ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ಡಿಸ್ಪ್ಯೂಟ್ ಅನ್ನು ರೈಸ್ ಮಾಡಿದ್ದಾರೆ. ಅಂದರೆ 16 ಪರ್ಸೆಂಟ್. ಬ್ಯಾಂಕಿನಲ್ಲಿ ಕೂಡ ಬಡ್ಡಿ ಕಡಿಮೆಯಾಗಿದೆ. ಇವರಿಗೆ ಅಸಲನ್ನು ಅಲ್ಲದೆ ಶೇಕಡ 65.8 ಪರ್ಸೆಂಟ್ ಬಡ್ಡಿ ರಾಜ್ಯ ಸರ್ಕಾರ ಕೊಡುತ್ತಿರುವುದು ಎಷ್ಟು 65.6 ಪರ್ಸೆಂಟ್ ಬಡ್ಡಿ ಕಟ್ಟುವುದರ ಜೊತೆಗೆ ದೊಡ್ಡ ವ್ಯವಹಾರದ ಹಿಂದೆ ಮುಖ್ಯ ಮಂತ್ರಿಗಳು ಪತ್ರ ಬರೆಯುವಂತಹ ಸಂದರ್ಭದಲ್ಲಿ ಒಂದು ಒಕ್ಕಣೆ ಬರೆದಿದ್ದಾರೆ. ಪಿಪಿಎ ಅವಶ್ಯಕತೆ ಇಲ್ಲವೆಂದು ಹೇಳಿದ್ದಾರೆ. ನಾನು ಒಂದು ಮನವಿ ಮಾಡುತ್ತೇನೆ, ಜಯಲಲಿತರವರ ವಿರುದ್ಧವಾಗಿ ನ್ಯಾಯಾಲಯದಲ್ಲಿ ಖಟ್ಲೆ ಇತ್ತು. ಅದು ಹೈಕೋರ್ಟಿನಲ್ಲಿ ಮತ್ತು ಸುಪ್ರೀಂಕೋರ್ಟಿನಲ್ಲಿ ವಜಾ ಆಯಿತು. ಇದು ಯಾವ ಗ್ರೌಂಡ್ ಮೇಲೆ? ಸರ್ಕಾರ ಆರ್ಥಿಕ ನಿರ್ಣಯವನ್ನು ಕೈಗೊಳ್ಳುವ ಸಂದರ್ಭದಲ್ಲಿ ಯಾವುದೇ ನ್ಯಾಯಾಲಯ ಇಂಟರ್‌ಫೀಯರ್ ಆಗಬಾರದು ಎಂಬ ಒಂದೇ ಒಂದು ಕಾರಣದಿಂದ ಕೇಸ್

ಹೈಕೋರ್ಟಿನಲ್ಲಿ ಮತ್ತು ಸುಪ್ರೀಂ ಕೋರ್ಟಿನಲ್ಲಿ ಡಿಸ್‌ಮಿಸ್ ಆಯಿತು. ಇದು ಸರ್ಕಾರದ ಆರ್ಥಿಕ ವ್ಯವಸ್ಥೆ ಅಲ್ಲವಾ? ಅದೇ ಗ್ರೌಂಡ್ ಮೇಲೆ ತಮಿಳುನಾಡು ಸರ್ಕಾರದಲ್ಲಿ ಆದಂಥ ಜಡ್ಜ್‌ಮೆಂಟ್ ಇದಕ್ಕೆ ಪೂರಕವಾಗಿ ಆದರೂ ಕೂಡ ಸುಪ್ರೀಂ ಕೋರ್ಟಿನಲ್ಲಿ ಇವತ್ತಿನವರೆಗೆ ಏತಕ್ಕೋಸ್ಕರವಾಗಿ ಫೈಲ್ ಮಾಡಲಿಲ್ಲ ಆ ಅಂಶವನ್ನು ತಮ್ಮ ಮುಂದೆ ಹೇಳುತ್ತಾ ನಾನು ಒಂದು ಮನವಿ ಮಾಡುತ್ತೇನೆ. ಪಿಪಿಎ ರಿವೈಸ್ ಮಾಡಿ ಅದಕ್ಕೆ ಪತ್ರ ಬರೆಯುವಾಗ ಹೇಳಿದರು.

"We have also suggested that all the PPAs with IPPs should be renegotiated by renegoiaxtion committee. Government will certainly look into PPA in light of the present policies which provides the procurement of power at least cost basis."

ಮಾನ್ಯ ಮುಖ್ಯಮಂತ್ರಿಗಳು ಪತ್ರ ಬರೆದಿರುವುದನ್ನು ನೋಡಿ ನನಗೆ ಬಹಳ ಸಂತೋಷವಾಯಿತು. ಆದರೆ ಮುಂದಿನ ಒಕ್ಕಣೆ ನೋಡಿ ನನಗೆ ಬೇಸರವಾಯಿತು.

"In my view renegotiation with non-starting projects will open Pandora's box and is, therefore, not advisable."

ನಾನ್ ಸ್ಟಾರ್ಟೆಡ್ ಕಂಪನಿಗಳ ಜೊತೆಯಲ್ಲಿ ರಿವೈಸ್ ಮಾಡಿ ಎಂದು ನಾನು ಕೇಳಲಿಲ್ಲ. ಮಹಾರಾಷ್ಟ್ರದಲ್ಲಿ ಎನ್ರಾನ್ ಜೊತೆಯಲ್ಲಿ ರಿವಿಷನ್ ಮಾಡಿದರು. ಎರಡು ರೂಪಾಯಿ 36 ಪೈಸೆಗೆ ಕರೆಂಟ್ ಕೊಡುತ್ತೇವೆಂದು ಎನ್ರಾನ್‌ನವರು ಮುಂದೆ ಬಂದಿದ್ದಾರೆ. ತಮಿಳುನಾಡಿನಲ್ಲಿ ಇದ್ದ ಪ್ರಾಜೆಕ್ಟ್ ನಮಗೆ ಕೂಡಿ ರಿನೆಗೋಷಿಯೇಟ್ ಮಾಡಿದರು. ಆಂಧ್ರಪ್ರದೇಶದಲ್ಲಿ ರಿನೆಗೋಷಿಯೇಟ್ ಮಾಡಿದರು. ಒರಿಸ್ಸಾದಲ್ಲಿ ಕೂಡ ರೀನೆಗೋಸಿಯೇಷನ್ ಮಾಡಿದರು. ನಮ್ಮ ರಾಜ್ಯದಲ್ಲಿ ಹಿಂದಿನ ಸರ್ಕಾರ ಅನ್ಯಾಯ ಮಾಡಿದ್ದರೆ ನೀವು ಏಕೆ ತಲೆ ಮೇಲೆ ಹೊತ್ತಿಕೊಳ್ಳುತ್ತೀರಿ? ಆ ಸರ್ಕಾರ ಮಾಡಿದ್ದರೆ, ದಯಮಾಡಿ ತಾವು ಮಾಡಿಕೊಂಡಿರುವ ಪಿಪಿಎ ಯಾರ್‍ಯಾರ ಜೊತೆಯಲ್ಲಿ ಇದೆ, ತಣ್ಣೀರು ಬಾವಿ, ಜಿಂದಾಲ್, ಟಾಟಾ, ರಾಯಲ್ ಸೀಮಾ ಇವರೆಲ್ಲರ ಜೊತೆ ಪಿಪಿಎ ಮಾಡಿಕೊಂಡಿದ್ದೀರಿ, ಈ ಒಂದು ಪಿಪಿಎಗಳನ್ನು ದಯಮಾಡಿ ನೆಗೋಷಿಯೇಟ್ ಮಾಡಿ. ಟ್ರಾನ್ಸಫರೆನ್ಸಿ ಸರ್ಕಾರ ಎಂದು ತಾವು ಹೇಳುತ್ತಿದ್ದೀರಿ. yes, let it be a transport. ರಾಜ್ಯದ ಪ್ರತಿಯೊಬ್ಬರಿಗೂ ಕೂಡ ಹಿಂದಿನ ಸರ್ಕಾರ ಹೀಗೆ ಮಾಡಿತ್ತು, ನೀವು ಹೀಗೆ ಮಾಡಿದ್ದೀರಿ ಎಂದು ಹೇಳಿ ವಿರೋಧ ಪಕ್ಷದಲ್ಲಿದ್ದರೂ ಕೂಡ ಬೆಂಚನ್ನು ಕುಟ್ಟಿ ತಮ್ಮ ಸರ್ಕಾರವನ್ನು ಸ್ವಾಗತ ಮಾಡುತ್ತೇವೆ. ಪವರ್ ತಮ್ಮ ಕೈಯಲ್ಲಿ ಇದೆ. ರಾಜ್ಯದ ಆರ್ಥಿಕ ವ್ಯವಸ್ಥೆ ಇಷ್ಟು ಕಠಿಣವಾಗಿದೆ, ಸಂಬಳ ಕೊಡುವುದೂ ಕೂಡ ಕಠಿಣವಾಗಿದೆ. ಎಕ್ಸೈಸ್ ಡಿಪಾರ್ಟ್‌ಮೆಂಟ್ ಇರಬಹುದು, ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಇರಬಹುದು, ರಾಜ್ಯ ಸರ್ಕಾರ ದಿನೇ ದಿನೇ ಕಠಿಣವಾದ ಆರ್ಥಿಕ ಪರಿಸ್ಥಿತಿಗೆ ಬಂದಿರುವಂತಹ ವ್ಯವಸ್ಥೆಗಳು ಇರುವಂತಹ ಸಂದರ್ಭದಲ್ಲಿ ತಾವು ಎಸ್ಕ್ರೋ ಆಪರೇಷನ್‌ಗೆ ಬಿಟ್ಟರೆ ಹೇಗೆ ಸಾಧ್ಯ? ಒಂದು ಪ್ರಶ್ನೆಯನ್ನು ನಾನು ಕೇಳಲಿಕ್ಕೆ ಬಯಸುತ್ತೇನೆ. It is not a tripalite agreement. ಜಯರಾಮ್ ರಮೇಶ್‌ರವರ ಬಗ್ಗೆ ನಮಗೂ ಗೌರವ ಇದೆ, ತಾವೂ ಕೂಡ ಪ್ಲ್ಯಾನಿಂಗ್ ಕಮಿಷನ್‌ಗೆ ನೇಮಕ ಮಾಡಿದಿರಿ. ಜಯರಾಮ್ ರಮೇಶ್‌ರವರು ಏತಕ್ಕಾಗಿ ರಾಜೀನಾಮೆ ಕೊಟ್ಟರು? ಈ ಪವರ್ ರಿಫಾರ್ಮ್‌ನಲ್ಲಿ ಬೇರೆ ಬೇರೆ ರಾಜ್ಯಗಳಿಗೆ, ಮಧ್ಯಪ್ರದೇಶ, ರಾಜಸ್ಥಾನ ಮತ್ತು ಕಾಂಗ್ರೆಸ್

ರೂಲಿಂಗ್ ಗವರ್ನಮೆಂಟ್ ಎಲ್ಲಿ ಇದೆ ಎಲ್ಲಾ ಕಡೆ ಪವರ್‌ಗೆ ಸಂಬಂಧಪಟ್ಟ ಅಡ್ವೈಸ್ ಇವತ್ತಿಗೂ ಕೂಡ ಮಾಡುತ್ತಿದ್ದಾರೆ. ರಾಜ್ಯದಲ್ಲಿ ಐಪಿಪಿಗಳ ಜೊತೆ ಮಾಡಿಕೊಂಡ ಅಗ್ರಿಮೆಂಟ್ ಏನಿದೆ ಇದಕ್ಕೆ ಪೂರಕವಾಗಿದೆ ಎನ್ನುವ ಅಂಶ ಏನಿದೆ ಇದಕ್ಕೆ ಸಂಬಂಧಪಟ್ಟ ಹಾಗೆ ಪೂರಕವಾಗಿ ಇಲ್ಲವೆಂದು ರಾಜೀನಾಮೆ ಕೊಟ್ಟಿದ್ದಾರೆ. ನಾನು ಅದಕ್ಕೆ ರಾಜಕಾರಣ ಬೆರೆಸುವುದಕ್ಕೆ ಹೋಗುವುದಿಲ್ಲ. ಅಂತಹ ಎಕ್ಸ್‌ಪರ್ಟ್ ಆದ ವ್ಯಕ್ತಿಗಳು ಒಂದು ಮಾತನ್ನು ಹೇಳಿದ್ದಾರೆ. ಈ ಪಿಪಿಎ ತಣ್ಣೀರು ಬಾವಿ ಮತ್ತು ಐಪಿಪಿಗಳ ಜೊತೆಯಲ್ಲಿ ಎಸ್ಕ್ರೋ ಕವರೇಜ್ ಈ ರಾಜ್ಯಕ್ಕೆ ಆಗಿರುವಂತಹ ಒಂದು ದೊಡ್ಡ ಮಾರಕ. What is escrow coverage? It is a tripartite agreement. ಟ್ರೈಪಾರ್ಟೆಟ್ ಅಗ್ರಿಮೆಂಟ್‌ಗೆ ಯಾರಾದರೂ ಸಹಿ ಮಾಡಿದ್ದಾರಾ? ಇಲ್ಲ ರಾಜ್ಯ ಸರ್ಕಾರ ಮತ್ತು ತಣ್ಣೀರು ಬಾವಿ ಮಾತ್ರ ಮಾಡಿರುವುದು. It is a ಬೈಲ್ಯಾಟರಲ್ ಅಗ್ರಿಮೆಂಟ್ ಇವತ್ತಿನವರೆಗೆ ಟ್ರೈಪಾರ್ಟೆಟ್ ಅಗ್ರಿಮೆಂಟ್ ಆಗಿಲ್ಲ. ಟ್ರೈಪಾರ್ಟೆಟ್ ಅಗ್ರಿಮೆಂಟ್ ಆಗದೇ ಹೋದರೂ ಕೂಡ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಇವರು 40 ಕೋಟಿ ರೂಪಾಯಿಗಳನ್ನು ನಿನ್ನೆ ರಿಲೀಸ್ ಮಾಡಿದ್ದಾರಲ್ಲಾ, ಇದಕ್ಕೆ ಯಾರು ಆರ್ಡರ್ ಮಾಡಿದರು? ನಾನು ಇವತ್ತು ನೋಡಿದೆ, ಕೆಇಆರ್‌ಸಿಯವರಿಗೆ ಕೆಪಿಟಿಸಿಎಲ್‌ನವರು ಒಂದು ಪತ್ರ ಬರೆದಿದ್ದಾರೆ. 40 ಕೋಟಿ ರೂಪಾಯಿಗಳನ್ನು ಡ್ರಾ ಮಾಡಿಕೊಟ್ಟಿದ್ದಾರೆ. ಉಳಿದ ಅವರಿಗೆ ಬರಬೇಕಾಗಿರುವ 140 ಕೋಟಿ ರೂಪಾಯಿಗಳನ್ನು ಮತ್ತೆ ಡ್ರಾ ಮಾಡಿಕೊಂಡು ಬಿಡುತ್ತಾರೆ ದಯವಿಟ್ಟು ಅದಕ್ಕೆ ತಡೆ ಆಜ್ಞೆ ಕೊಡಿ ಎಂದು ಕೆಇಆರ್‌ಸಿ ಮುಂದೆ ಕೆಪಿಟಿಸಿಎಲ್‌ನವರು ಹೋಗಿದ್ದಾರೆ. ಹಾಗಾದರೆ ಕೆಪಿಟಿಸಿಎಲ್‌ನವರು ಇವತ್ತು ಎಸ್ಕ್ರೋವನ್ನು ಇನ್‌ವೋಕ್ ಮಾಡಿಲ್ಲ. ಹಾಗಾದರೆ ಇದಕ್ಕೆ ಜವಾಬ್ದಾರರು ಯಾರು? ಸ್ಟೇಟ್ ಬ್ಯಾಂಕಿನಿಂದ 40 ಕೋಟಿ ರೂಪಾಯಿಗಳನ್ನು ಡ್ರಾ ಮಾಡುವುದಕ್ಕೆ ಪರ್ಮಿಷನ್ ಕೊಟ್ಟವರು ಯಾರು? ಕೆಪಿಟಿಸಿಎಲ್ ಅಲ್ಲ ಅಂದ ಮೇಲೆ ರಾಜ್ಯ ಸರ್ಕಾರದಲ್ಲಿರುವಂತಹ ಯಾರು ಇದಕ್ಕೆ ಅನುಮತಿ ಕೊಟ್ಟರು? ಈ ಪ್ರಶ್ನೆ ಇಡೀ ರಾಜ್ಯದಲ್ಲಿ ಇದೆ. ಈ ದೊಡ್ಡ ಸ್ಕ್ಯಾಮ್ ಕೇವಲ 60 ಕೋಟಿ ರೂಪಾಯಿಯ ಬೋಫೋರ್ಸ್ ಅಲ್ಲ, ಇದು 1040.80 ಕೋಟಿ ರೂಪಾಯಿಯ ಒಂದು ದೊಡ್ಡ ಸ್ಕ್ಯಾಮ್ ಏನಿದೆ ಇದನ್ನು ತಡೆಯುವ ಕೆಲಸವನ್ನು ಮಾನ್ಯ ಮುಖ್ಯ ಮಂತ್ರಿಗಳು ಮಾಡುತ್ತಾರೆಂದು ನನಗೆ ವಿಶ್ವಾಸ ಇದೆ. ಯಾರ್‍ಯಾರು ಇದರ ಹಿಂದೆ ಇದ್ದಾರೆ ದಯಮಾಡಿ ನಾನು ಯಾವುದೇ ಎನ್‌ಕ್ವೈರಿ ಕೇಳುವುದಿಲ್ಲ, ಸದನದ ಸಮಿತಿಗೆ ಕೊಡಿ ಇದರ ಹಿಂದೆ ಇರುವ ವಿಚಾರಗಳನ್ನು ಚರ್ಚೆ ಮಾಡುತ್ತೇವೆ. ನಾವು ಸರಿ ತಪ್ಪುಗಳನ್ನು ಹೇಳುತ್ತೇವೆ. ಇದಕ್ಕೆ ಸಂಬಂಧಪಟ್ಟ ಹಾಗೆ ಒಂದು ಸದನ ಸಮಿತಿಗೆ ಕೊಟ್ಟರೆ ಈ ಪವರ್ ಕ್ರೈಸಿಸ್‌ಗೆ ಸಂಬಂಧಪಟ್ಟ ಹಾಗೆ ಐಪಿಪಿಗಳ ಜೊತೆ ಆಗಿರುವಂತಹ ಅಗ್ರಿಮೆಂಟ್ ಏನಿದೆ ರಾಜ್ಯಕ್ಕೆ ಮಾರಕವಾದುದು ಇದರ ಬಗ್ಗೆ ನಮ್ಮದೇ ಆದ ವಿಚಾರಗಳನ್ನು ಕೊಡುವುದಕ್ಕೆ ಸಹಾಯವಾಗುತ್ತದೆ. ದಯಮಾಡಿ ಮುಖ್ಯ ಮಂತ್ರಿಗಳು ಒಪ್ಪುತ್ತಾರೆಂದು ಹೇಳುತ್ತಾ ತಾವು ಸಮಯವನ್ನು ಕೊಟ್ಟಿದ್ದಕ್ಕೆ ತಮಗೆ ವಂದನೆಗಳನ್ನು ಸಲ್ಲಿಸುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

11.40 ಪಿಎಂ

† ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, 2002-03ನೇ ಸಾಲಿನ ಆಯವ್ಯಯ ಬೇಡಿಕೆಗಳ ಮೇಲೆ ತಾವು ಚರ್ಚೆಗೆ ಅನುವು ಮಾಡಿಕೊಟ್ಟಿದ್ದೀರಿ. ಇದಕ್ಕಾಗಿ ತಮಗೆ ಧನ್ಯವಾದಗಳನ್ನು ಮೊದಲನೆ ಬಾರಿಗೆ ಅರ್ಪಿಸುತ್ತಾ ಕೆಲವು ಇಲಾಖೆಗಳ ಬಗ್ಗೆ ನಾನು ನನಗೆ

ತಿಳಿದ ಹಾಗೆ ಕೆಲವು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇವೊತ್ತು ಸುಮಾರು ಎಲ್ಲಾ ಇಲಾಖೆಗಳ ಮೇಲೆ ಬೇಡಿಕೆಗಳನ್ನು ಚರ್ಚೆಗೆ ಇಟ್ಟಿದ್ದೀರಿ. ಇದರಲ್ಲಿ ಮೊದಲನೆಯದಾಗಿ ನಾನು ವಸತಿ ಇಲಾಖೆ ಬಗ್ಗೆ ಮಾತನಾಡಬಯಸುತ್ತೇನೆ. ಈ ವಸತಿ ಇಲಾಖೆಗೆ ಸಂಬಂಧಿಸದಂತೆ ಮುಖ್ಯಮಂತ್ರಿಗಳು ಅಧಿಕಾರ ವಹಿಸಿಕೊಂಡ ಮೇಲೆ ಸ್ವಲ್ಪ ಮಟ್ಟಿಗೆ ಒತ್ತು ಕೊಟ್ಟಿದ್ದಾರೆಂದರೆ ತಪ್ಪಾಗುವುದಿಲ್ಲ. ಯಾವ ಯಾವ ಇಲಾಖೆಯಲ್ಲಿ ಯಾವ ಯಾವ ಆದ್ಯತೆ ಕೊಟ್ಟಿದ್ದಾರೆಂದು ನಾವು ನೋಡಿದಾಗ ವಸತಿ ಇಲಾಖೆಗೆ ಹೆಚ್ಚು ಆದ್ಯತೆಯನ್ನು ಕೊಟ್ಟಿದ್ದಾರೆ. ಬಹಳ ಸಂತೋಷ, ಮುಖ್ಯವಾಗಿ 11 ಲಕ್ಷ ಮನೆಗಳನ್ನು ಕಟ್ಟಿಸಬೇಕು ಎಂದು ಹೇಳಿ ಸ್ವಲ್ಪ ಚುರುಕಾಗಿ ಕೆಲಸ ಮಾಡಬೇಕೆಂದು ಸಹ ಸೂಚನೆ ಕೊಟ್ಟಿದ್ದಾರೆ. ರಾಜೀವ್‌ಗಾಂಧಿ ವಸತಿ ಯೋಜನೆ ಅಡಿಯಲ್ಲಿ ಕೆಲವು ಪಂಚಾಯತ್‌ಗಳನ್ನು ತೆಗೆದುಕೊಂಡು ಮನೆಗಳನ್ನು ಕಟ್ಟತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಅದರಲ್ಲಿ ನನ್ನ ತಾಲ್ಲೂಕು ಸೇರಿದಂತೆ ಸುಮಾರು 2000 ಮನೆಗಳನ್ನು ನಾವು ತೆಗೆದುಕೊಂಡಿದ್ದೇವೆ. ಅದಕ್ಕಾಗಿ ಮಾನ್ಯ ಮುಖ್ಯಮಂತ್ರಿಯವರನ್ನು ನಾನು ಅಭಿನಂದಿಸುತ್ತೇನೆ. ಆದರೆ ಆಶ್ರಯ ಸಮಿತಿಯವರು ಮತ್ತು ತಾಲ್ಲೂಕು ಪಂಚಾಯಿತಿ ಈ ಫಲಾನುಭವಿಗಳನ್ನು ಗ್ರಾಮಸಭೆಗಳ ಮುಖಾಂತರ ಆಯ್ಕೆ ಮಾಡತಕ್ಕಂಥದ್ದು ಮತ್ತು ಆ ಆಯ್ಕೆ ಮಾಡಿದಂಥವರಿಗೆ ಆಶ್ರಯ ಸಮಿತಿಯಲ್ಲಿ ಅನುಮೋದನೆ ಕೊಟ್ಟು ಅವರಿಗೆ ಹಣವನ್ನು ಬಿಡುಗಡೆ ಮಾಡತಕ್ಕಂಥ ಕಾರ್ಯಕ್ರಮ ಇರುತ್ತದೆ. ಈಗಾಗಲೇ ಆಶ್ರಯ ಸಮಿತಿಗಳನ್ನು ನಾವು ಏನು ನೋಡುತ್ತಿದ್ದೇವೆಂದರೆ ಗ್ರಾಮ ಸಭೆಗಳಲ್ಲಿ ಸರಿಯಾದಂಥ ಆಯ್ಕೆಯಾಗುತ್ತಿಲ್ಲ. ಅದರಲ್ಲಿ ಪಕ್ಷಪಾತ ಆಗುತ್ತಿದೆ. ನಿಜವಾದಂಥ ಫಲಾನುಭವಿಗಳನ್ನು ನೀವು ಗುರುತಿಸುವುದಕ್ಕೆ ಆಗುತ್ತಿಲ್ಲ. ನಮಗೆಲ್ಲಾ ಗೊತ್ತಿರುವ ಹಾಗೆ ಗ್ರಾಮ ಸಭೆಗಳು ಯಾವ ರೀತಿ ನಡೆಯುತ್ತಿವೆ ಎಂದರೆ ಯಾವುದೋ ಒಂದು ಮನೆಯಲ್ಲಿ ಕುಳಿತುಕೊಂಡು ಪಟ್ಟಿಬರೆದುಕೊಳ್ಳುತ್ತಾರೆ, ಅದರಲ್ಲಿ ಯಾರು ಅರ್ಹರೋ, ಅನರ್ಹರೋ ಎಂಬ ಬಗ್ಗೆ ಯಾರಿಗೂ ಗೊತ್ತಾಗುವುದಿಲ್ಲ. ಆ ಪಟ್ಟಿಯನ್ನು ತಯಾರು ಮಾಡಿ ಜಿಲ್ಲಾ ಪಂಚಾಯತಿಗೆ ಕಳುಹಿಸಿ ಅಪ್ರೂವಲ್ ಮಾಡಿಸಿ ಹಣ ಬಿಡುಗಡೆ ಮಾಡುತ್ತಾರೆ. ಇದನ್ನು ಸ್ವಲ್ಪ ನೋಡುವುದಾದರೆ ಸ್ವಲ್ಪ ಮಟ್ಟಿಗೆ ಒಂದು ವಿಧಾನವನ್ನು ಸ್ಟ್ರೀಮ್‌ಲೈನ್ ಮಾಡಬೇಕಾಗುತ್ತದೆ. ಅದನ್ನು ಸರ್ಕಾರ ಮಾಡಬೇಕಾಗಿತ್ತು, ಆದರೆ ಮಾಡಿಲ್ಲ ಎನ್ನುವುದು ನನ್ನ ಒಂದು ಅನಿಸಿಕೆ ಈಗಾಗಲೇ ಫಲಾನುಭವಿಗಳನ್ನು ರಾಜಕಾರಣಿಗಳಿಗೆ ಗುರುತಿಸತಕ್ಕಂಥದ್ದಕ್ಕೇ ಆಗಲಿ ಅವಕಾಶ ಕೊಡಬಾರದು, ಕಾರ್ಯಕರ್ತರಿಗೆ ಆಗಲಿ, ಯಾರಿಗೇ ಆಗಲಿ ಅವಕಾಶ ಕೊಡಬಾರದು. ಒಂದು ಸರ್ವೆ ಮಾಡಿಸಿ, ಯಾವ ಯಾವ ಗ್ರಾಮಗಳಲ್ಲಿ ಎಷ್ಟು ಗುಡಿಸಲುಗಳಿವೆ, ಯಾವ ಯಾವ ಗ್ರಾಮಗಳಲ್ಲಿ ನಿರ್ಗತಿಕರಿದ್ದಾರೆ ಎಂಬ ಬಗ್ಗೆ ಸರ್ವೆ ಮಾಡಿಸಿ ಯಾವ ರೀತಿಯಲ್ಲಿ ಹಸಿರು ಕಾರ್ಡ್‌ಗಳಲ್ಲಿ ಗುರುತಿಸಲಾಗುತ್ತದೋ ಅದೇ ರೀತಿಯಲ್ಲಿ ಇವರನ್ನು ಗುರುತಿಸತಕ್ಕಂಥದ್ದು ಆಗಬೇಕು. ಆ ಪಟ್ಟಿಯನ್ನು ಇಟ್ಟುಕೊಂಡು ಇಷ್ಟು ಜನ ನಿವೇಶನರಹಿತರು ಈ ಕ್ಷೇತ್ರದಲ್ಲಿದ್ದಾರೆ, ಅಷ್ಟು ಜನರ ಒಳಗಡೆಯೇ ಫಲಾನುಭವಿಗಳನ್ನು ಆಯ್ಕೆ ಮಾಡಬೇಕೆಂದು ಕೊಟ್ಟರೆ ಅದರ ಪ್ರಕಾರ ಈ ವರ್ಷ ಇಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಬೇಕು ಮತ್ತು ಮುಂದಿನ ವರ್ಷ ಇಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡಬೇಕು ಎಂದು ಈ ರೀತಿ ಮಾಡಿದಾಗ ಪ್ರತಿಯೊಬ್ಬ ಅರ್ಹ ಫಲಾನುಭವಿಗಳಿಗೆ ಸಿಗಲು ಸಾಧ್ಯವಾಗುತ್ತದೆ. ಆದರೆ ಇವೊತ್ತು ಎಲ್ಲಾ ಕಡೆಗಳಿಂದ ದೂರುಗಳು ಬರುತ್ತಿವೆ. ನಮ್ಮ ವಿರೋಧ ಪಕ್ಷದ ಶಾಸಕರುಗಳು ಇದ್ದ ಕಡೆ ಕಾಂಗ್ರೆಸ್‌ನ ಸದಸ್ಯರುಗಳ್ಯಾರಿದ್ದಾರೆ ಆಶ್ರಯ ಸಮಿತಿಯಲ್ಲಿ ಅವರು ಸಹಕಾರವನ್ನು

ಅವರಿಗೆ ಕೊಡುತ್ತಿಲ್ಲ. ಅವರದ್ದೇ ಒಂದು ಲಿಸ್ಟ್, ಶಾಸಕರದ್ದೇ ಒಂದು ಲಿಸ್ಟ್. ಒಂದೇ ಪಾರ್ಟಿ ಇದ್ದರೆ ಅವರು ಏನು ಹೇಳುತ್ತಾರೋ ಅದೇ, ಅದಕ್ಕೆ ಏನೂ ನೀತಿ ನಿಯಮ ಏನಿಲ್ಲ, ಅವರು ಏನು ಹೇಳುತ್ತಾರೋ ಅದೇ ಒಂದು ಪಟ್ಟಿ. ಈ ರೀತಿಯಾಗುತ್ತಿದೆ. ನಮ್ಮಲ್ಲಿ ಎಷ್ಟೋ ಕಡೆ ಸಭೆಗಳನ್ನು ಮಾಡುವುದಕ್ಕೆ ಬಿಟ್ಟುಕೊಡುತ್ತಿಲ್ಲ. ಏನಾದರೂ ಒಂದು ಆಯ್ಕೆ ವಿಧಾನವನ್ನು ಕಂಡುಹಿಡಿಯೋಣ, ಅರ್ಹ ಫಲಾನುಭವಿಗಳಿಗೆ ಕೊಡೋಣ ಅನ್ನತಕ್ಕಂಥದ್ದಕ್ಕೆ ಅವಕಾಶ ಸಿಗುತ್ತಿಲ್ಲ. ಅದನ್ನು ತಾವು ಗುರುತಿಸಬೇಕು. ಉದಾಹರಣೆಗೆ ನಾನು ನನ್ನ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದೊಳಗೆ ನಡೆದಿರುವ ಒಂದು ಪ್ರಕರಣವನ್ನು ಪತ್ರಿಕೆಯಲ್ಲಿ ಓದಿದೆ ಮತ್ತು ಅಲ್ಲಿ ಕೆಲವರು ಬಂಧು ದೂರನ್ನು ಸಹ ಕೊಟ್ಟರು. ಅಲ್ಲೇನಾಗಿದೆಯೆಂದರೆ ಗ್ರಾಮಸಭೆಯಲ್ಲಿ ಆಯ್ಕೆ ಮಾಡಿದಂಥ ಹೆಸರಿನ ಪಟ್ಟಿಗೆ ಸಾಮಾನ್ಯವಾಗಿ ಆಶ್ರಯ ಸಮಿತಿಯಲ್ಲಿ ಅನುಮೋದನೆ ಮಾಡಬೇಕು. ಅದನ್ನು ಬಿಟ್ಟು ಗ್ರಾಮಸಭೆಯಲ್ಲಿ ಆಯ್ಕೆಯಾಗಿರುವುದೇ ಬೇರೆ, ಆಶ್ರಯ ಸಮಿತಿಯಲ್ಲಿ ಆಯ್ಕೆ ಆಗಿರತಕ್ಕಂಥದ್ದೇ ಬೇರೆ. ಅದಲ್ಲದೆ ಸುಮಾರು ಒಂದೇ ಪಂಚಾಯತಿಯಲ್ಲಿ 28 ಜನ ಎಸ್‌ಸಿ / ಎಸ್‌ಟಿ ಅಲ್ಲದೇ ಇರುವ ಬೇರೆ ಜಾತಿಯವರನ್ನು ಪರಿಶಿಷ್ಟ ಜಾತಿಯವರು ಎಂದು ಹೇಳಿ ಸರ್ಟಿಫಿಕೇಟ್ ಕೊಟ್ಟು ಅವರನ್ನು ಆಯ್ಕೆ ಮಾಡಿರುವುದು ಗಮನಕ್ಕೆ ಬಂದಿದೆ. ಪತ್ರಿಕೆಗಳಲ್ಲೆಲ್ಲಾ ಬಂದಿದೆ. ಒಬ್ಬ ವಿಧಾನ ಪರಿಷತ್‌ನ ಸದಸ್ಯರು ಸಿ.ಇ.ಒ. ರವರಿಗೆ ಪತ್ರ ಬರೆದು ಮಾಹಿತಿ ಕೊಡಿ ಎಂದು ಕೇಳಿದರೆ ಸರಿಯಾಗಿ ಮಾಹಿತಿ ಕೊಡುತ್ತಿಲ್ಲ. ಪಟ್ಟಿಯನ್ನು ಬದಲಾವಣೆ ಮಾಡಿ ಎಂದರೆ ಆಗುತ್ತಿಲ್ಲ. ಪತ್ರಿಕೆಗಳಲ್ಲಿ ದೊಡ್ಡದಾಗಿ ಬಂದಿದೆ. ಇದು ಒಂದು ಉದಾಹರಣೆಯನ್ನು ನಾನು ನಿಮಗೆ ಕೊಡುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳೂ ಕೂಡ ಈಗ ಇಲ್ಲೇ ಇದ್ದಾರೆ, ವಸತಿ ಸಚಿವರು ಇದರ ಬಗ್ಗೆ ವಿಚಾರಣೆ ಮಾಡಬೇಕು. ಯಾರು ಅರ್ಹರಿದ್ದಾರೆ ಅವರಿಗೆ ಸಿಗಲಿ, ಯಾರಿಗೆ ಸಿಗಬೇಕೋ ಅವರಿಗೆ ಸಿಗದೇ ಯಾರಿಗೋ ಸಿಗುವುದು ಸರಿಯಲ್ಲ. ಯಾರು ಹಿಂದೆ ಗ್ರಾಂಟ್‌ನ್ನು ತೆಗೆದುಕೊಂಡಿದ್ದಾರೆ ಅವರಿಗೆ ಮತ್ತೆ ಜಾತಿಯನ್ನೇ ಬೇರೆ ಬದಲಾವಣೆ ಮಾಡಿ ಪರಿಶಿಷ್ಟ ಜಾತಿ ಅಲ್ಲದೇ ಇರತಕ್ಕಂಥವರಿಗೆ ಪರಿಶಿಷ್ಟ ಜಾತಿ ಎಂದು ಕೊಟ್ಟು ದುರುಪಯೋಗವಾದರೆ ಇದರಿಂದಾಗಿ ಯಾವ ಒಂದು ಸಾಮಾಜಿಕ ನ್ಯಾಯ ಬಡವರಿಗೆ ಸಿಕ್ಕಿದಂತಾಗುತ್ತದೆ ಎನ್ನತಕ್ಕಂಥದ್ದನ್ನು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಇನ್ನು ಈಗೇನು 20 ಸಾವಿರ ರೂಪಾಯಿಗಳನ್ನು ಕೊಡುತ್ತಿದ್ದೀರಿ ಆ ಇಪ್ಪತ್ತು ಸಾವಿರ ರೂಪಾಯಿ ಸಂಪೂರ್ಣವಾಗಿ ಫಲಾನುಭವಿಗಳಿಗೆ ಸಿಗುತ್ತಿಲ್ಲ. ಅದರಲ್ಲಿ ಹದಿನಾರು ಸಾವಿರವೋ ಹದಿನೇಳು ಸಾವಿರವೋ ಮಾತ್ರ ಸಿಗುತ್ತಾ ಇರಬಹುದು. ಇನ್ನುಳಿದ ಹಣ ಬೇರೆ ಬೇರೆ ಮಧ್ಯವರ್ತಿಗಳ ಪಾಲಾಗುತ್ತಿದೆ. ಆದುದರಿಂದ ನಾನು ಸಲಹೆ ಮಾಡುವುದೇನೆಂದರೆ ಇನ್ನು ಸುಮಾರು ಎರಡು-ಮೂರು ಸಾವಿರ ರೂಪಾಯಿಗಳನ್ನು ಹೆಚ್ಚು ಮಾಡಬೇಕು, ಸುಮಾರು 22,23 ಸಾವಿರ ರೂಪಾಯಿಗಳನ್ನು ಮಾಡಿದರೆ ಸ್ವಲ್ಪ ಮಟ್ಟಿಗೆ ಆರ್.ಸಿ.ಸಿ ರೂಫಿಂಗ್ ಹಾಕಿಸಬಹುದು. ಇದನ್ನು 25 ಸಾವಿರ ರೂಪಾಯಿಗಳನ್ನಾಗಿ ಮಾಡಿದರೆ ಬಹಳ ಸಂತೋಷ. ಅದಿಲ್ಲದಿದ್ದರೆ ಕಡೇ ಪಕ್ಷ 23 ಸಾವಿರ ರೂಪಾಯಿಗಳಾನ್ನಾದರೂ ಮಾಡಿದರೆ ಯಾವುದಾದರೂ ಲ್ಯಾಂಡ್ ಆರ್ಮಿ ಮುಖಾಂತರವೋ ಅಥವಾ ನಿರ್ಮಿತಿ ಕೇಂದ್ರದ ಮುಖಾಂತರವೋ ಸ್ವಲ್ಪ ಮಟ್ಟಿಗೆ ಭದ್ರವಾದಂಥ, ಸುಸಜ್ಜಿತವಾದಂಥ ಮನೆಗಳನ್ನು ಕಟ್ಟಿಸಿಕೊಳ್ಳಬಹುದು ಎಂದು ನನ್ನ ಅನಿಸಿಕೆ. ಏಕೆಂದರೆ 20 ಸಾವಿರ ಯಾವುದೋ ಹಿಂದಿನ ವರ್ಷಗಳಲ್ಲಿ ಆಗಿರುವಂಥದ್ದು. ಇವೊತ್ತು ಆ ಮೊತ್ತದಲ್ಲಿ ನಿಜವಾಗಿಯೂ ಮನೆಗಳನ್ನು

ಕಟ್ಟಿಸಿಕೊಳ್ಳುವುದಕ್ಕೆ ಆಗುತ್ತಿಲ್ಲ. ನಮ್ಮ ಕಾಲದಲ್ಲಿ 20 ಸಾವಿರ ಆಗಿರುವುದು, ಆದರೆ ಈಗಿನ ಒಂದು ಬಿಲ್ಲಿಗೆ ಆಗುತ್ತಿಲ್ಲ. ನಮ್ಮ ಕಾಲದಲ್ಲಿ 20 ಸಾವಿರ ಮಾಡಿರುವುದನ್ನು ಈಗ ಅದನ್ನು 25 ಸಾವಿರಕ್ಕೆ ಏರಿಸಬೇಕು ಎಂಬುದು ನನ್ನ ಒಂದು ಅನಿಸಿಕೆ. ಈಗಿನ ಮುಖ್ಯಮಂತ್ರಿಗಳು ಹೊಸ ಹೊಸ ಇನ್ನೊವೇಷನ್, ಇನೊವೇಟೀವ್ ಥಿಂಕಿಂಗ್ ಬಗ್ಗೆ ಬಹಳ ಯೋಚನೆ ಮಾಡುತ್ತಾರೆ. ಬಹಳ ಸಂತೋಷ. ಕೆಲವು ವಿಚಾರಗಳಿಗೆ ಹೊಸ ಸೂಚನೆಗಳು ಬಂದಾಗ, ಸಲಹೆಗಳು ಬಂದಾಗ ಬಹಳ ಸ್ವಾಗತ ಮಾಡುತ್ತಾರೆ. ಅದನ್ನು ನಾನು ಒಪ್ಪುತ್ತೇನೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಈ ವಸತಿ ಇಲಾಖೆ ಒಂದು ಹೊಸ ವಸತಿ ಯೋಜನೆಯನ್ನು ಪ್ರಾಯೋಗಿಕವಾಗಿ ಮಾಡಬಹುದು ಎಂದು ಸಲಹೆ ಕೊಡುತ್ತೇನೆ. ತಾವೂ ಕೂಡ ಈಗ ಇಲ್ಲಿ ಇದ್ದೀರಿ. ಏನಿವತ್ತು ನಿರ್ಗತಿಕರಿಗೆ ನಾವು ಇವೊತ್ತು 20 ಇಂಟು 30 ಅಡಿ ಕೊಡುತ್ತಿದ್ದೇವೆ, 30 : 40 ಅದರಲ್ಲೂ ಪಕ್ಕಪಕ್ಕದಲ್ಲಿ ಕೊಡುತ್ತಿದ್ದೇವೆ, ಅವರಿಗೆ ಬೇರೆ ಯಾವುದೇ ಜಮೀನು ಇರುವುದಿಲ್ಲ. ಅವರು ನಿರ್ಗತಿಕರಿದ್ದಾರೆ. ಅವರು ಕೇವಲ ಒತ್ತುಒತ್ತಿಗೆ ಮನೆ ಕಟ್ಟಿಸಿಕೊಂಡರೆ ಅವರು ಒಂದೆರಡು ದನಗಳನ್ನು ಕಟ್ಟಿಕೊಳ್ಳುವುದಕ್ಕೆ ಆಗುತ್ತಿಲ್ಲ, ಅಥವಾ ಇನ್ನೇನಾದರೂ ಒಂದು ಸಣ್ಣ ಕೈಗಾರಿಕೆ ಮಾಡಿಕೊಳ್ಳುವುದಕ್ಕೆ ಆಗುತ್ತಿಲ್ಲ ಅಥವಾ ಇನ್ನೇನಾದರೂ ಒಂದೆರಡು ಗಿಡಗಳನ್ನು ಹಾಕುವುದಕ್ಕೂ ಸಾಧ್ಯವಾಗುತ್ತಿಲ್ಲ. ಆದ್ದರಿಂದ ನಾನು ಹೇಳತಕ್ಕಂಥದ್ದು ಇಷ್ಟೆ, ನಾನು ಒಂದು ರಿಪೋರ್ಟ್‌ನ್ನೂ ಕೂಡ ಓದಿದೆ, ಅದರಲ್ಲಿ ಏನಿದೆ ಅಂದರೆ ಸುಮಾರು ನಮ್ಮ ರಾಜ್ಯದಲ್ಲಿ 46 ಲಕ್ಷ ಜಮೀನು ರಹಿತ ಜನರಿದ್ದಾರೆ, ಲ್ಯಾಂಡ್‌ಲಿಸ್ ಹೌಸ್ ಹೋಲ್ಡರ್ಸ್ 46 ಲಕ್ಷವಿದ್ದಾರೆ. ಇದರಲ್ಲಿ ಸುಮಾರು 2 ಕೋಟಿ 59 ಲಕ್ಷ ಎಕರೆ ಜಮೀನಿದೆ. ಅಂದರೆ ಉಳುಮೆ ಮಾಡದೇ ಇರತಕ್ಕಂಥ ಜಮೀನು ಅದಾಗಿದೆ. ಅಂಥ ಕಡೆ ಏನು 46 ಲಕ್ಷ ಕುಟುಂಬಗಳಿವೆ ಕಡೇ ಪಕ್ಷ ಒಂದು ಹತ್ತತ್ತು ಸೆಂಟ್ಸನ್ನು, ಹತ್ತು ಸೆಂಟ್ಸ್ ಎಂದರೆ ನಾಲ್ಕು ಗುಂಟೆಯ ಪ್ಲಾಟ್‌ನ್ನು ಕೊಟ್ಟರೆ. ಅವರಿಗೆ ನೀವು ಮನೆ ಕಟ್ಟಿಸಿಕೊಳ್ಳುವುದಕ್ಕೆ ದುಡ್ಡು ಕೊಡಬೇಕಾಗಿಲ್ಲ. ಈ ರೀತಿ ಕೇರಳದಲ್ಲಿ ಮತ್ತು ಪಶ್ಚಿಮಬಂಗಾಲದಲ್ಲಿ ಕೊಡುತ್ತಿದ್ದಾರೆ. ನಾನು ಪ್ರಾಯೋಗಿಕವಾಗಿ ಹೇಳುತ್ತಿದ್ದೇನೆ, ಒಂದು ಎಕರೆ ಡೆವಲಪ್ ಮಾಡುವುದಕ್ಕೆ ಮೂರೂವರೆ ಸಾವಿರ ರೂಪಾಯಿಗಳಾಗುತ್ತದೆ. ಡ್ರೈನೇಜ್ ಇರಬಹುದು, ರಸ್ತೆ ಇರಬಹುದು, ವಿದ್ಯುಚ್ಛಕ್ತಿ ಇರಬಹುದು ಅಥವಾ ಒಂದು ಬೋರ್‌ವೆಲ್ ಇರತಕ್ಕಂಥದ್ದು, ಇದನ್ನು ಮಾಡಿ ಒಂದುನೂರು ಮನೆಗೆ ಮೂರೂವರೆ ಸಾವಿರ ರೂಪಾಯಿಗಳಂತೆ ಮಾಡಿದರೆ ಅನುಕೂಲವಾಗುತ್ತದೆ. ಆ ಜಮೀನನ್ನು ಕೊಂಡುಕೊಳ್ಳತಕ್ಕಂಥದ್ದು ಸರ್ಕಾರಿ ಜಮೀನಿನಲ್ಲಿ ಮಾಡಿದರೆ ಸುಮಾರು ಒಬ್ಬ ಫಲಾನುಭವಿಗೆ ಏಳು ಸಾವಿರ ರೂಪಾಯಿಗಳಾಗುತ್ತದೆ. ಈ ಏಳು ಸಾವಿರ ರೂಪಾಯಿಯನ್ನು ಖರ್ಚು ಮಾಡಿ ಅವನಿಗೆ ಕೊಟ್ಟರೆ ಆ ನಾಲ್ಕು ಗುಂಟೆ ಜಮೀನಿನಲ್ಲಿ ಅವನು ತರಕಾರಿಯನ್ನು ಬೆಳೆಯಬಹುದು, ನಾಲ್ಕು ತೆಂಗಿನ ಸಸಿಯನ್ನು ಹಾಕಿಕೊಳ್ಳಬಹುದು, ಹಸುಗಳನ್ನು ಕಟ್ಟಿಕೊಳ್ಳಬಹುದು ಮತ್ತು ಸಣ್ಣ ಪುಟ್ಟ ಕೈಗಾರಿಕೆ ಮಾಡುತ್ತಾನೆ. ಅದರಲ್ಲಿ ಅವನೆ ಉತ್ಪತ್ತಿ ಮಾಡಿಕೊಂಡು ತಮ್ಮದೇ ಆದಂತಹ ಮನೆಯನ್ನು ಎರಡು ವರ್ಷದಲ್ಲಿ ಕಟ್ಟಿಸಿಕೊಳ್ಳುತ್ತಾನೆ. 20-25 ಸಾವಿರ ರೂಪಾಯಿ ಯೋಚನೆ ಮಾಡಬೇಕಾಗಿಲ್ಲ. ಫಲಾನುಭವಿಗಳಿಗೆ ಕೇವಲ ಏಳು ಸಾವಿರ ರೂಪಾಯಿಗಳನ್ನು ಕೊಟ್ಟು ನಾಲ್ಕು ಗುಂಟೆ ಜಮೀನನ್ನು ಕೊಟ್ಟರೆ ಅಂತಹ ಕಡೆ ಅವರು ಒಂದು ಫಾರಂ ಹೌಸ್ ತರಹ ಮಾಡಿಕೊಂಡು, ತೋಟಗಾರಿಕೆ ಮಾಡಿಕೊಂಡು, ತರಕಾರಿ, ಹೂವು ಬೆಳೆಯುವುದು ಅದರ ಜೊತೆಗೆ ಹಸುಗಳನ್ನು ಸಾಕತಕ್ಕಂಥಾದ್ದು ಹೀಗೆ ಗುಡಿ ಕೈಗಾರಿಕೆಗಳನ್ನು ಮಾಡಿ ತನ್ನ ಮನೆ

ಕಟ್ಟಿಸಿಕೊಳ್ಳುತ್ತಾನೆ. ಅದನ್ನು ಪ್ರಾಯೋಗಿಕವಾಗಿ ಮಾಡಬಹುದೆಂಬುದು ನನ್ನ ಸಲಹೆ. ಅದನ್ನು ತಾವು ಯೋಚನೆ ಮಾಡಬಹುದು. ಇದು ವಸತಿಗೆ ಸಂಬಂಧ ಪಟ್ಟಂತಹ ಒಂದು ವಿಚಾರ. ಮಾನ್ಯ ಚಂದ್ರೇಗೌಡರು ಇಲ್ಲಿ ಇಲ್ಲ. ಕೇಂದ್ರ ಸರ್ಕಾರ ಸಿಪಿಸಿ ಅಮೆಂಡ್‌ಮೆಂಟ್ ಮಾಡಿದೆ. ಇದು ಒಂದು ಐತಿಹಾಸಿಕವಾದಂತಹ ನಿರ್ಧಾರ ಎಂದು ನಾನಾದರೂ ಭಾವಿಸಿಕೊಳ್ಳುತ್ತೇನೆ. ಏಕೆಂದರೆ ಸುಮಾರು ನೂರಾರು ವರ್ಷಗಳಿಂದ ಒಂದು ಕೇಸ್ ಕೊಟ್ಟರೆ ಹತ್ತು, ಇಪ್ಪತ್ತು, ಇಪ್ಪತ್ತೈದು ವರ್ಷಗಳ ಕಾಲ ಲೆಟಿಗೇಷನ್ ನಡೆಯುತ್ತಿರುತ್ತದೆ ಅದರಲ್ಲಿ ಎವಿಡೆನ್ಸ್‌ಗೆ ವರ್ಷಾನುಗಟ್ಟಲೆ ತೆಗೆದುಕೊಳ್ಳುತ್ತದೆ. ಹೀಗಾಗಿ ಬಹಳ ವಿಳಂಬವಾಗುತ್ತಿದೆ. ನಮ್ಮ ಎನ್‌ಡಿಎ ಸರ್ಕಾರ ಪ್ರಥಮ ಬಾರಿಗೆ ಈ ರೀತಿ ಅಮೆಂಡ್‌ಮೆಂಟ್ ತಂದಿದೆ. ಈ ವಿಚಾರದಲ್ಲಿ ಮಾನ್ಯ ಜೇಠ್ಮಲಾನಿ ಅವರನ್ನು ಅಭಿನಂದಿಸಬೇಕು. ಮತ್ತೆ ಅದಕ್ಕೆ ಸ್ವಲ್ಪ ವಿರೋಧ ಬಂದಮೇಲೆ ಈಗಿನ ಜೇಠ್ಲಿ ಅವರೂ ಸಹ ಕೆಲವು ಬದಲಾವಣೆಯನ್ನು ಮಾಡಿ ಸಿಪಿಸಿ ಅಮೆಂಡ್‌ಮೆಂಟ್ ತಂದಿದ್ದಾರೆ. ಅದರಲ್ಲಿ ಕೆಲವು ಪ್ರಮುಖವಾದ ವಿಚಾರಗಳು ತಮಗೆ ಗೊತ್ತಿರುವ ಹಾಗೆ ದಾವೆ ಹಾಕಿದಂತಹ ಒಂದು ವರ್ಷದಲ್ಲಿ, ಎವಿಡೆನ್ಸ್ ಆಗಬೇಕು, ಸರ್ವೀಸ್ ಆಗಬೇಕು ಆರ್ಗ್ಯುಮೆಂಟ್ ಆಗಿ ತೀರ್ಮಾನ ಕೊಡಬೇಕೆನ್ನುವ ವಿಚಾರವನ್ನು ಮಾಡಿದ್ದಾರೆ. ಇದೊಂದು ಐತಿಹಾಸಿಕವಾದಂತಹ ಬದಲಾವಣೆ. ಅದನ್ನು ಸರ್ಕಾರ ಮತ್ತು ನಾವೆಲ್ಲರೂ ಸ್ವಾಗತ ಮಾಡಬೇಕಾಗುತ್ತದೆ. ಅದೇ ರೀತಿ ರಾಜ್ಯ ಸರ್ಕಾರದಲ್ಲಿ ಸಹ ಯಾವ್ಯಾವ ರೂಲ್ಸ್ ಒಳಗಡೆ ಎವಿಡೆನ್ಸ್ ಅನ್ನು ರೆಕಾರ್ಡ್ ಮಾಡತಕ್ಕಂಥ ಅವಕಾಶ ಇದೆ ಅದನ್ನು ತಿದ್ದುಪಡಿ ಮಾಡಬಹುದು. ಲ್ಯಾಂಡ್ ರೆವಿನ್ಯೂ ಆಕ್ಟ್ ಇರಬಹುದು, ಲ್ಯಾಂಡ್ ಫಾರಂ ಆಕ್ಟ್ ಇರಬಹುದು ಫಾರೆಸ್ಟ್ ಆಕ್ಟ್ ಇರಬಹುದು ಮತ್ತು ಇಡಬ್ಲ್ಯೂಡಿ ಎಸ್ ಅಂಡ್ ಎಸ್‌ಪಿ ಆಕ್ಟ್ ಇರಬಹುದು. ಎಲ್ಲಾ ಮುನ್ಸಿಪಾಲಿಟಿ ಆ್ಯಕ್ಟ್ ಇರಬಹುದು. ಎಲ್ಲೆಲ್ಲಿ ಎವಿಡೆನ್ಸ್‌ಗಳನ್ನು ರೆಕಾರ್ಡ್ ಮಾಡುವುದು ಇದೆ ಅವುಗಳಲ್ಲಿ ಕಮಿಷನ್ ಮಾಡಿ, Outside the Court ಅದನ್ನು ಪರಿಶೀಲನೆ ಮಾಡಿ ನಮ್ಮ ರಾಜ್ಯ ಸರ್ಕಾರದಲ್ಲೂ ಕೆಲವು ಕಾನೂನುಗಳನ್ನು ಎಲ್ಲೆಲ್ಲಿ ತಿದ್ದುಪಡಿ ಮಾಡುವುದಕ್ಕೆ ಅವಕಾಶ ಇದೆ ಅಲ್ಲಿ ತಿದ್ದುಪಡಿ ತಂದು ಅದನ್ನು ಸ್ವಾಗತ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತಿದ್ದೇನೆ.

ಇನ್ನು ಗೃಹ ಇಲಾಖೆ ಹಾಗೂ ಸಣ್ಣ ನೀರಾವರಿ, ಗೃಹಇಲಾಖೆ ಬಗ್ಗೆ ನಂತರ ನಾನು ಹೇಳುತ್ತೇನೆ. ಇನ್ನು ಸಣ್ಣ ನೀರಾವರಿ ವಿಚಾರ ತೆಗೆದುಕೊಂಡರೆ, ಇದು ನನ್ನ ಅನುಭವದಲ್ಲಿ ಈ ಇಲಾಖೆಯನ್ನು ಮುಚ್ಚಬೇಕು ಅನ್ನುವುದು ಸೂಕ್ತ. ಕಾರಣವೇನೆಂದರೆ ಈ ರಾಜ್ಯದಲ್ಲಿ ಎಷ್ಟು ಏತನೀರಾವರಿ ಯೋಜನೆಗಳು ಇದೆ. ಅದರ ಶೇಕಡ ಹತ್ತರಷ್ಟು ಸಹ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಹೊಸ ಏತನೀರಾವರಿ ಯೋಜನೆಗೆ ಒಂದು ರೂಪಾಯಿ ಹಣ ಬಿಡುಗಡೆ ಮಾಡಿಲ್ಲ. ಎರಡು ಜೋನ್‌ಗಳು ಇವೆ. ಒಂದು ಬೆಂಗಳೂರು ಜೋನ್ ಹಾಗೂ ಬಿಜಾಪುರದಲ್ಲಿ ಒಂದು ಜೋನ್ ಇದೆ. 644 ಕೋಟಿ ರೂಪಾಯಿ ಸ್ಪಿಲ್ ಓವರ್ ವರ್ಕ್ ಇದ್ದರೆ 110 ಕೋಟಿ ರೂಪಾಯಿಗಳನ್ನು ಹೊಸ ಕೆಲಸಕ್ಕೆ ಎಂದು ನಿಗದಿ ಮಾಡಿದ್ದಾರೆ. ಅಂದರೆ ಒಟ್ಟು 755 ಕೋಟಿ ರೂಪಾಯಿ ಇರತಕ್ಕಂಥ ಹಾಗೂ ಹೊಸದಾಗಿ ಸೇರಿಸಿರತಕ್ಕಂಥ ಕೆಲಸಕ್ಕೆ ಬೇಕಾಗುತ್ತದೆ. ಅದರಲ್ಲಿ 2002-03ನೇ ಸಾಲಿಗೆ ನಿಗದಿ ಮಾಡಿರುವುದು ಕೇವಲ 38 ಕೋಟಿ ರೂಪಾಯಿ ಮಾತ್ರ. ಈ 38 ಕೋಟಿ ರೂಪಾಯಿ ಕಳೆದರೆ ಇನ್ನು 717 ಕೋಟಿ ರೂಪಾಯಿ ಈ ಒಂದು ಇಲಾಖೆಗೆ ಬೇಕಾಗುತ್ತದೆ. ಈ 750 ಕೋಟಿ ರೂಪಾಯಿಗಳನ್ನು ಯಾವಾಗ ಬಿಡುಗಡೆ ಮಾಡುತ್ತೀರಿ? 1986-87ರಲ್ಲಿ

ಪ್ರಾರಂಭವಾದಂತಹ ಯೋಜನೆಗಳು ಇನ್ನೂ ಪೂರ್ಣವಾಗಿಲ್ಲ. ಆಗಿರತಕ್ಕಂಥ ಯೋಜನೆಗಳಿಗೆ ಸರಿಯಾಗಿ ಮೀಟರ್ ಹಾಕಿಲ್ಲ. ವಿದ್ಯುಚ್ಛಕ್ತಿ ಹಣ ಕೊಟ್ಟಿಲ್ಲ. ಹೀಗಾಗಿ ಆ ಯೋಜನೆಗಳು ಸ್ಥಗಿತವಾಗಿದೆ. ಎರಡು-ಮೂರು ವರ್ಷಗಳಿಂದ ಈ ಯೋಜನೆ ಪ್ರಾರಂಭ ಮಾಡಿದರೂ ಕೂಡ ನಾವು ಪೂರ್ಣಗೊಳಿಸಲು ಆಗಿಲ್ಲ. ಈಗ ಸಣ್ಣ ನೀರಾವರಿ, ನಮ್ಮ ಮಾನ್ಯ ಖರ್ಗೆಯವರಿಗೆ ಸಿಕ್ಕಿದೆ. ಅವರು ಏನು ಮಾಡುತ್ತಾರೋ ಗೊತ್ತಿಲ್ಲ. ರಾಜ್ಯ ಸರ್ಕಾರದ ವತಿಯಿಂದ ಈ ಹಣವನ್ನು ಒದಗಿಸುವುದಕ್ಕೆ ಆಗುವುದಿಲ್ಲ. ಕೇವಲ ಈ ವರ್ಷ 38 ಕೋಟಿ ರೂಪಾಯಿ ಒದಗಿಸಿದ್ದೀರಿ. ಇನ್ನು 717 ಕೋಟಿ ರೂಪಾಯಿ ಕೊಡಬೇಕಾದರೆ ಯಾವುದಾದರೂ ಒಂದು ರೂಪದಲ್ಲಿ ಹಣವನ್ನು ತೆಗೆದುಕೊಳ್ಳಬೇಕಾಗುತ್ತದೆ. ಅದನ್ನು ಪೂರ್ಣಮಾಡಿದರೆ ಮಾತ್ರ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಈ ಒಂದು ಇಲಾಖೆಯನ್ನು ಮುಚ್ಚುವುದು ಸೂಕ್ತ. ಏಕೆಂದರೆ ಮಾನ್ಯ ಮುಖ್ಯಮಂತ್ರಿಗಳ ಕ್ಷೇತ್ರದಲ್ಲಿ 2-3 ಯೋಜನೆಗಳು ಪೂರ್ಣವಾಗಿಲ್ಲ. ನಾವು ನಮ್ಮ ಜಿಲ್ಲೆ ಬಗ್ಗೆ ಕೇಳುತ್ತಿರುತ್ತೇವೆ, ಯಾವ ಜಿಲ್ಲೆಯಲ್ಲೂ ಕೂಡ ಆಗಿಲ್ಲ. ಅದನ್ನು ಸ್ವಲ್ಪ ತೀಕ್ಷಣವಾಗಿ ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಸೂಚಿಸುತ್ತಿದ್ದೇನೆ, ಮತ್ತು 11ನೇ ಹಣಕಾಸಿನ ಯೋಜನೆಯಡಿಯಲ್ಲಿ ಸುಮಾರು 55 ಕೋಟಿ ರೂಪಾಯಿಗಳು ಈಗಿರತಕ್ಕಂಥ ಇರಿಗೇಷನ್‌ಗೆ ರೀಜಿನಿವೇಷನ್ ಮಾಡುವಂಥಾದ್ದಕ್ಕೆ ಹಣ ಬಂದಿದೆ. ಎರಡು ಮೂರು ವರ್ಷಗಳಿಂದ ಹಣ ಬಂದಿದೆ, ಆದರೆ ಇದುವರೆಗೂ ಕೂಡ ಒಂದು ರೂಪಾಯಿ ಸಹ ಖರ್ಚು ಮಾಡಿಲ್ಲ. ತಾಂತ್ರಿಕ ತೊಂದರೆಗಳಿಂದ ಚೀಫ್ ಇಂಜಿನಿಯರ್ ಒಂದು ವರದಿ ಕಳುಹಿಸುತ್ತಾರೆ. ಸೆಕ್ರೆಟರಿಯವರು ಒಂದು ಕ್ಲಾರಿಫಿಕೇಷನ್ ಕೇಳುತ್ತಾರೆ. ಈ ರೀತಿ ಕರೆಸ್ಪಾಡೆನ್ಸ್‌ನಲ್ಲಿ ಎರಡು ಮೂರು ವರ್ಷ ನಡೆಯುತ್ತಿದೆ. ಆ 55 ಕೋಟಿ ರೂಪಾಯಿ ನೂರಕ್ಕೆ ನೂರು ಗ್ರಾಂಟ್ ಹಣ, ಅದನ್ನು ಇನ್ನೂ ಖರ್ಚು ಮಾಡಿಲ್ಲ. ಅದಕ್ಕೆ ಇಲಾಖಾ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಳ್ಳಬೇಕೆಂಬುದು ನನ್ನ ಒಂದು ಅನಿಸಿಕೆ. ಇನ್ನು ಹಣಕಾಸಿನ ಇಲಾಖೆ ನಮ್ಮ ಮಾನ್ಯ ಮುಖ್ಯಮಂತ್ರಿಗಳ ಕೈಯಲ್ಲಿ ಇದೆ. ನಾನು ಅಂದುಕೊಂಡಂತೆ ಮಾನ್ಯ ಮುಖ್ಯಮಂತ್ರಿಗಳು ಹಣಕಾಸಿನ ಒಂದು ಜವಾಬ್ದಾರಿಯನ್ನು ಹೊತ್ತುಕೊಂಡ ಮೇಲೆ ಹಣಕಾಸಿನ ಪರಿಸ್ಥಿತಿ ಬಹಳ ಉತ್ತಮವಾಗುತ್ತದೆ, ಆಡಳಿತದಲ್ಲಿ ಸ್ವಲ್ಪ ಬಿಗಿ ಬರುತ್ತದೆ. ಟ್ಯಾಕ್ಸ್ ಕಲೆಕ್ಷನ್ ಬಹಳ ಅಭಿವೃದ್ಧಿಯಾಗುತ್ತದೆ, ಅಭಿವೃದ್ಧಿ ಕೆಲಸಗಳು ಹೆಚ್ಚಾಗಬಹುದು ಎನ್ನುವ ಭರವಸೆ ನನಗೆ ಇತ್ತು. 1999ರಲ್ಲಿ ಅಕ್ಟೋಬರ್ ನವೆಂಬರ್‌ನಲ್ಲಿ ಇವರು ಅಧಿಕಾರ ವಹಿಸಿಕೊಂಡು ತಕ್ಷಣ ಆ ಒಂದು ಭರವಸೆ, ಆ ಒಂದು ನಂಬಿಕೆ ನನ್ನಲ್ಲಿ ಮೂಡಿತ್ತು. ಆಗ ನಾವು ಟೀಕೆ ಮಾಡುವುದಕ್ಕೆ ಹೋಗಲಿಲ್ಲ. ಎರಡು ವರ್ಷ ಮುಗಿದು ತಾವು ಮೂರನೇ ವರ್ಷದ ಬಜೆಟ್ ಮಂಡಿಸಿದ್ದೀರಿ. ಈ ಮೂರು ವರ್ಷದ ಬಜೆಟ್‌ನಲ್ಲಿ ಯಾವ್ಯಾವ ವರ್ಷ ಎಷ್ಟೆಷ್ಟು ಹಣ ಇಟ್ಟಿದ್ದೀರಿ? ಎಷ್ಟೆಷ್ಟು ಖರ್ಚಾಗಿದೆ? ಏನೇನು ಪ್ರಗತಿಯಾಗಿದೆ ಎನ್ನುವುದನ್ನು ನಾವು ನೋಡಿದಾಗ ನಿಜವಾಗಲೂ ಬಹಳ ನಿರಾಸೆಯಾಗುತ್ತದೆ. ನಾವು ಈ ಅಂಕಿಅಂಶಗಳನ್ನು ಕೊಟ್ಟಾಗ ಮಾನ್ಯ ಮುಖ್ಯಮಂತ್ರಿಗಳಿಗೆ ಬಹಳ ಬೇಸರವಾಗಬಹುದು. ಅದನ್ನು ತಾವು ಪರಿಶೀಲನೆ ಮಾಡಬೇಕು. ಎಲ್ಲಾ ಇಲಾಖೆಗಳನ್ನು ನಾನು ನೋಡುವುದಿಲ್ಲ. ಕೆಲವು ಇಲಾಖೆಗಳ ಬಗ್ಗೆ ಅಧ್ಯಯನ ಮಾಡಿ ಕೆಲವು ವಿಚಾರಗಳನ್ನು ಮಾತ್ರ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಉದಾಹರಣೆಗೆ ಸೋಷಿಯಲ್ ಸೆಕ್ಟರ್ ಎಂದರೆ ಶಿಕ್ಷಣ ಬರುತ್ತದೆ, ಆರೋಗ್ಯ ವಾಟರ್ ಸಪ್ಲೈ ಸ್ಯಾನಿಟೇಷನ್, ವಸತಿ, ವೆಲ್‌ಫೇರ್ ಆಫ್ ಎಸ್‌ಸಿ : ಎಸ್‌ಟಿ, ಸೋಷಿಯಲ್ ವೆಲ್‌ಫೇರ್ ನೂಟ್ರಿಷನ್, ಲೇಬರ್, ಎಂಪ್ಲಾಯ್‌ಮೆಂಟ್ ಈ

ಎಂಟು ವಿಭಾಗಗಳು ಬರುತ್ತವೆ. 1999-2000ನೇ ಸಾಲಿನಲ್ಲಿ ನಮ್ಮ ಸರ್ಕಾರದ ಬಜೆಟ್, ಅದಕ್ಕೆ ನಾನು ಹೋಗುವುದಿಲ್ಲ. 2000-01ನೇ ಸಾಲಿನನಲ್ಲಿ ಆರಂಭ ವರ್ಷ ಇರುವ ಅಧಿಕಾರಕ್ಕೆ ಬಂದಮೇಲೆ ಬಜೆಟ್ ಮಂಡನೆ ಮಾಡಿದ್ದು ಪ್ರಾರಂಭವಾಗುತ್ತದೆ. ಹಾಗೂ 2001-02 ಮತ್ತು 2002-03ನೇ ಸಾಲಿನದು ಸೇರಿ ಮೂರು ವರ್ಷ ನೀವು ಬಜೆಟ್ ಮಂಡನೆ ಮಾಡಿದ್ದೀರಿ ಮತ್ತು ರಿವೈಜ್ ಮಾಡಿದ್ದಾರೆ. ಅದರಲ್ಲಿ 2000-01ನೇ ಸಾಲಿನಲ್ಲಿ ಶಿಕ್ಷಣಕ್ಕೆ 424 ಕೋಟಿ ರೂಪಾಯಿ ಹಣವನ್ನು ಇಟ್ಟಿದ್ದಾರೆ. 2001-02ನೇ ಸಾಲಿನಲ್ಲಿ 544 ಕೋಟಿ ರೂಪಾಯಿಗಳನ್ನು ಹಾಗೂ 2002-03ನೇ ಸಾಲಿನಲ್ಲಿ 463.87 ಕೋಟಿ ರೂಪಾಯಿಗಳು.

ಅಧ್ಯಕ್ಷರು : ಸದಸ್ಯರು ಡಿಮ್ಯಾಂಡ್ ಮೇಲೆ ಮುಖ್ಯವಾದ ಇಷ್ಯೂಗಳನ್ನು ಮಾತನಾಡುತ್ತಿದ್ದಾರೆ ಕೇಳಿ.

ಶ್ರೀ ಬಿ. ಸೋಮಶೇಖರ್ : ಈ ಮೂರು ವರ್ಷಗಳಲ್ಲಿ ಸುಮಾರು 80 ಕೋಟಿ 88 ಲಕ್ಷ ರೂಪಾಯಿ ಹಣವನ್ನು ಶಿಕ್ಷಣದಲ್ಲಿ ಕಡಿತವನ್ನು ಮಾಡಿದ್ದಾರೆ. ಅಂದರೆ 15 ಪರ್ಸೆಂಟ್ ಶಿಕ್ಷಣದಲ್ಲಿ ಕಡಿತವಾಗಿದೆ. ಇನ್ನು ಆರೋಗ್ಯದ ವಿಚಾರದಲ್ಲಿ ಹೇಳುವುದಾದರೆ ಮಾನ್ಯ ಕಾಗೋಡು ತಿಮ್ಮಪ್ಪನವರು ಹೊಸದಾಗಿ ಬಂದಿದ್ದಾರೆ ಸೋಷಿಯಲ್ ವೆಲ್‌ಫೇರ್ ಇಲಾಖೆಯಲ್ಲಿ ಕೆಲವು ವಿಚಾರದಲ್ಲಿ ಆದಷ್ಟು ಮಟ್ಟಿಗೆ ಈ ಸರ್ಕಾರದವರು ಉತ್ತಮವಾದ ಕೆಲಸಗಳನ್ನು ಮಾಡಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ನಾವು ಈ ಇಲಾಖೆ ಬಗ್ಗೆ ನೋಡುವುದಾದರೆ ಇದು ಬಹಳ ಪ್ರಮುಖವಾದ ಇಲಾಖೆ. 2000-01ರಲ್ಲಿ ಪ್ರಥಮ ವರ್ಷದಲ್ಲಿ ನೀವು ಇದರಲ್ಲಿ ಇಟ್ಟಂತಹ ಹಣ 225 ಕೋಟಿ ರೂಪಾಯಿ. ಮುಂದಿನ ವರ್ಷ 268 ಕೋಟಿ ರೂಪಾಯಿ, ಈ ವರ್ಷ ಇಟ್ಟಿರುವುದು 192 ಕೋಟಿ ರೂಪಾಯಿಗೆ ಇಳಿದಿದೆ. ಅಂದರೆ ಆರೋಗ್ಯ ಇಲಾಖೆಯಲ್ಲಿ 76 ಕೋಟಿ ರೂಪಾಯಿ ಕಡಿತವಾಗಿದೆ. ಒಟ್ಟು 28 ಪರ್ಸೆಂಟ್ ಕಡಿತವಾಗಿದೆ. ಹಾಗೆ ವಾಟರ್ ಸಪ್ಲೈ ಹಾಗೂ ಸ್ಯಾನಿಟೇಷನ್ ತೆಗೆದುಕೊಂಡರೆ ನೀವು ಬಂದ ವರ್ಷ 568 ಕೋಟಿ ರೂಪಾಯಿ ಇಟ್ಟಿದ್ದರೆ, 2001-02ರಲ್ಲಿ 610 ರೂಪಾಯಿ ಇಟ್ಟಿದ್ದಿರಿ. ಈ ವರ್ಷ 529 ಕೋಟಿ ರೂಪಾಯಿ ಇಟ್ಟಿದ್ದೀರಿ. ಅಂದರೆ ಇದರಲ್ಲಿ 81 ಕೋಟಿ ರೂಪಾಯಿಗಳನ್ನು ಕಡಿತ ಮಾಡಿದ್ದೀರಿ, ಈ ವಾಟರ್ ಮತ್ತು ಸ್ಯಾನಿಟೇಷನ್ ಇದರಲ್ಲಿ ಶೇಕಡ 13ರಷ್ಟು ಕಡಿತವಾಗಿದೆ. ನಾನು ಪ್ರಮುಖವಾಗಿ ಮಾನ್ಯ ಮುಖ್ಯಮಂತ್ರಿಯವರನ್ನು ಅಭಿನಂದಿಸುತ್ತೇನೆ, ಏಕೆಂದರೆ ಹೌಸಿಂಗ್ ಮತ್ತು ಅರ್ಬನ್ ಡೆವಲಪ್‌ಮೆಂಟ್‌ಗೆ ಮಾತ್ರ 13 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಹಣ ಕೊಟ್ಟಿದ್ದೀರಿ. ಈ ಮೂರು ವರ್ಷಗಳಲ್ಲಿ ಹೋಲಿಕೆ ಮಾಡಿ ನೋಡಿದಾಗ 2000-01ರಲ್ಲಿ 477ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, 2001-2002ರಲ್ಲಿ 877 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಇಲ್ಲಿ ಜಾಸ್ತಿಯಾಗಿದೆ, ಮತ್ತೆ 2002-03ರಲ್ಲಿ 891 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಅಂದರೆ 13ಕೋಟಿ 42ಲಕ್ಷ ರೂಪಾಯಿಗಳನ್ನು ವಸತಿಗಾಗಿ ಬಿಡುಗಡೆ ಮಾಡಿದ್ದೀರಿ, ಅಂದರೆ ಈ ಒಂದು ಕ್ಷೇತ್ರದಲ್ಲಿ ಸ್ವಲ್ಪ ಪ್ರಗತಿಯನ್ನು ಸಾಧಿಸಿದ್ದೀರಿ, ಅಂದರೆ ಒಂದೂವರೆ ಪರ್ಸೆಂಟ್ ಜಾಸ್ತಿಯಾಗಿದೆ. ಇನ್ನು ಇನ್‌ಫರ್‌ಮೇಷನ್ ಮತ್ತು ಪಬ್ಲಿಸಿಟಿಯಲ್ಲಿ ಸಾಮಾನ್ಯವಾದ ರೀತಿಯಲ್ಲಿ ಬಂದಿದೆ, ಈ ವರ್ಷ ಆರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ, ಹಿಂದೆ ಒಂಭತ್ತು ಕೋಟಿ ರೂಪಾಯಿಗಳು ಇದ್ದದ್ದು, 6ಕೋಟಿ ರೂಪಾಯಿಗಳಿಗೆ ಇಳಿದಿದೆ, ಅಂದರೆ ಇಲ್ಲಿ ಶೇಕಡಾ 33ಪರ್ಸೆಂಟ್ ಕಡಿಮೆಯಾಗಿದೆ, ಮತ್ತೆ ವೆಲ್‌ಫೇರ್ ಆಫ್ ಎಸ್.ಸಿ, ಎಸ್.ಟಿ, ಇದರಲ್ಲಿ ಶೇಕಡಾ 28 ಪರ್ಸೆಂಟ್ ಜಾಸ್ತಿ ಮಾಡಿದ್ದೀರಿ. ಈ ಹಣವನ್ನು

ಮಾನ್ಯ ಕಾಗೋಡು ತಿಮ್ಮಪ್ಪನವರು ಹೋರಾಟ ಮಾಡಿ ತೆಗೆದುಕೊಂಡಿರಬೇಕೆಂದು ನಾನು ಅಂದುಕೊಂಡಿದ್ದೇನೆ. ಈ ಮೂರು ವರ್ಷಗಳಲ್ಲಿ 28ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಹಣವನ್ನು ಪಡೆದುಕೊಂಡಿದ್ದೀರಿ, ಅಂದರೆ ಹನ್ನೊಂದು ಮುಕ್ಕಾಲು ಪರ್ಸೆಂಟ್ ಜಾಸ್ತಿಯಾಗಿದೆ, ಸೋಷಿಯಲ್ ವೆಲ್‌ಫೇರ್ ಅಂಡ್ ನ್ಯೂಟ್ರಿಷನ್ ತೆಗೆದುಕೊಂಡು 2000-01ರಲ್ಲಿ ಇದರಲ್ಲಿ 106 ಕೋಟಿ ರೂಪಾಯಿಗಳು ಇತ್ತು, 2001-02ರಲ್ಲಿ 127ಕೋಟಿ ರೂಪಾಯಿಗಳು ಇತ್ತು, 2002-03ರಲ್ಲಿ 94ಕೋಟಿ ರೂಪಾಯಿಗಳಿಗೆ ಇಳಿದಿದೆ, ಅಂದರೆ ಮೈನಸ್ 33 ಕೋಟಿ ರೂಪಾಯಿಗಳು ಕಡಿಮೆಯಾಗಿದೆ. ಅಂದರೆ ಶೇಕಡಾ 26 ಪರ್ಸೆಂಟ್ ಕಡಿಮೆಯಾಗಿದೆ, ಲೇಬರ್ ಮತ್ತು ಎಂಪ್ಲಾಯ್‌ಮೆಂಟ್‌ನಲ್ಲಿ ತೆಗೆದುಕೊಂಡರೆ, 3 ಕೋಟಿ 50 ಲಕ್ಷ ರೂಪಾಯಿಗಳು ಕಡಿಮೆಯಾಗಿದೆ, ಅಂದರೆ ಶೇಕಡಾ 18ಪರ್ಸೆಂಟ್ ಕಡಿಮೆಯಾಗಿದೆ. ಇದರಲ್ಲಿ ಏಕೆ ಇಷ್ಟು ಕಡಿತವಾಯಿತೆಂದು ಈ ಸೋಷಿಯಲ್ ಸೆಕ್ಟಾರ್‌ನಲ್ಲಿ ಎಂದು ಹೇಳುವುದಾದರೆ 2000-01ರಲ್ಲಿ ಶೇಕಡಾ 37.39ಪರ್ಸೆಂಟ್‌ನಷ್ಟು ನಿಗದಿಯಾದಂತಹ ಹಣ ಇತ್ತು, 2001-02ರಲ್ಲಿ ಶೇಕಡಾ 34 ಪರ್ಸೆಂಟ್‌ಗೆ ಇಳಿಯಿತು, ಅಂದರೆ ಈ ವರ್ಷ ಬಜೆಟ್ ಎಸ್ಟಿಮೇಟ್ ಇನ್ನು ರಿವೈಸ್ ಆಗಿಲ್ಲ, 2002-03ರಲ್ಲಿ 31ಕೋಟಿ 89ಲಕ್ಷ ರೂಪಾಯಿಗಳಿಗೆ ಇಳಿದಿದೆ, ಅಂದರೆ ಈ ಮೂರು ವರ್ಷಗಳಲ್ಲಿ ಪ್ರತಿ ವರ್ಷ ಸೋಷಿಯಲ್ ಸೆಕ್ಟಾರ್‌ನಲ್ಲಿ ಶೇಕಡಾ 37ರಿಂದ ಶೇಕಡಾ 31ಕ್ಕೆ ಇಳಿದು ಸುಮಾರು ಐದೂವರೆ ಪರ್ಸೆಂಟ್ ಹಣವನ್ನು ಕಡಿಮೆ ಮಾಡಿದ್ದೀರಿ. ನಿಮಗೆ ಸೋಷಿಯಲ್ ಸೆಕ್ಟಾರ್ ಎಂದರೆ ಗೊತ್ತಿದೆ, ಅದು ಹೆಲ್ತ್, ಎಜುಕೇಷನ್, ಇದಕ್ಕೆ ಬೇರೆ ಯಾವುದೇ ಸಾಲವನ್ನು ಪಡೆದುಕೊಳ್ಳುವುದಕ್ಕಾಗುವುದಿಲ್ಲ. ಈ ಸೋಷಿಯಲ್ ಸೆಕ್ಟಾರ್‌ಗಳಿಗೆ ಹಾಕುವಂತಹ ಅಭಿವೃದ್ಧಿ ಹಣದಲ್ಲಿ ನೀವು ಏನು ಆದಾಯವನ್ನು ಪಡೆದುಕೊಳ್ಳುತ್ತೀರಿ, ರಾಜ್ಯ ಸರ್ಕಾರ ಆ ಆದಾಯ ಹಣದಿಂದ ರೆವಿನ್ಯೂವನ್ನು ಕಲೆಕ್ಷನ್‌ನಿಂದ ಮಾತ್ರ ನಿಗದಿ ಮಾಡಬೇಕೇ ಹೊರತು ಬೇರೆ ಬೇರೆ ರೀತಿಯಾಗಿ ಸಾಲವನ್ನು ಪಡೆದುಕೊಂಡು ಬಂದು ಇಂತಹ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಆದುದರಿಂದ ಈ ಮೂರು ವರ್ಷಗಳಲ್ಲಿ ಸೋಷಿಯಲ್ ಸೆಕ್ಟಾರ್‌ನಲ್ಲಿ ಹಣ ಕಡಿಮೆಯಾಗಿದೆ ಎಂಬುದು ನನ್ನ ಅನಿಸಿಕೆಯಾಗಿದೆ. ಇನ್ನು ಹೆಲ್ತ್ ಬಗ್ಗೆ ಹೇಳುವುದಾದರೆ ಶೇಕಡಾ 25ರಷ್ಟು ಕಡಿಮೆಯಾಗಿದೆ, ಮತ್ತೆ 1999-2000ದಲ್ಲಿ ರೆವಿನ್ಯೂ ಡೆಫಿಸಿಟ್ 2,325ಕೋಟಿ ರೂಪಾಯಿಗಳು ನಿಮ್ಮ ಸರ್ಕಾರ ಬಂದ ಪ್ರಥಮ ವರ್ಷದಲ್ಲಿ ಇತ್ತು, 2000-01ರಲ್ಲಿ ಸುಮಾರು 1,862ಕೋಟಿ ರೂಪಾಯಿಗಳಾಯಿತು, ಅಂದರೆ ನೀವು ಹೇಳಿಕೊಳ್ಳುವಂಥಾದ್ದೇನೆಂದರೆ ಶೇಕಡಾ 20ರಷ್ಟು ರೆವಿನ್ಯೂ ಡೆಫಿಸಿಟ್ ಅನ್ನು ಕಡಿಮೆ ಮಾಡಿದ್ದೀರೆಂದು ಮಾನ್ಯ ಮುಖ್ಯಮಂತ್ರಿಯವರು ಹೇಳಿಕೆಯನ್ನು ಕೊಟ್ಟಿದ್ದಾರೆ. ಆದರೆ ನಿಜವಾಗಿ ಹೇಳುವುದಾದರೆ ಶೇಕಡಾ 20ರಷ್ಟು ಡೆಫಿಸಿಟ್ ಕಡಿಮೆ ಮಾಡಿರುವಂಥಾದ್ದು ರೆವಿನ್ಯೂ ಕಲೆಕ್ಷನ್‌ನಿಂದ ಅಲ್ಲ, ಈ ರೆವಿನ್ಯೂ ಡೆಪಿಸಿಟ್ ಏಕೆ ಕಡಿಮೆಯಾಗಿದೆ ಎಂದರೆ ನೀವು ಓವರ್ ಎಸ್ಟಿಮೇಟ್ ಮಾಡಿಕೊಂಡಿದ್ದೀರಿ, ಮತ್ತೆ ಇರತಕ್ಕಂಥ ಹಣವನ್ನು ಇಲಾಖೆಯವರು ರಿ-ಅಪ್ರೋಪ್ರಿಯೇಷನ್ ಮಾಡಿಕೊಳ್ಳೋಣವೆಂದು, ಬೇರೆ ಬೇರೆ ಕೆಲಸಗಳಿಗೆ ರಿ-ಅಪ್ರೋಪ್ರಿಯೇಷನ್‌ಗೆ ಅವಕಾಶ ಕೊಡಿ ಎಂದು ಕೇಳಿದರೆ, ನೀವು ಯಾವುದೇ ಇಲಾಖೆಯವರಿಗೆ ಈ ಅವಕಾಶವನ್ನು ಮಾಡಿಕೊಟ್ಟಿಲ್ಲ. ಇದು ಹೆಲ್ತ್‌ಗೆ ಆಗಲಿ, ಸೋಷಿಯಲ್ ವೆಲ್‌ಫೇರ್‌ಗೆ ಆಗಲಿ, ಎಜ್ಯುಕೇಷನ್‌ಗೆ ಆಗಲಿ, ತಾವು ಅನುಮತಿಯನ್ನು ಕೊಟ್ಟಿಲ್ಲ. ಇದರ ಬಗ್ಗೆ ಏಕೆ ಡಿಫಿಸಿಟ್ ತೋರಿಸುತ್ತಿದ್ದೀರೆಂಬ ಬಗ್ಗೆ ಮುಂದೆ ಹೇಳುತ್ತೇನೆ. ಇದರಲ್ಲಿ ಫಿಸಿಕಲ್ ಡಿಫಿಸಿಟ್ ಕಡಿಮೆ ಮಾಡಬೇಕಾದರೆ ನೀವು ಶೇಕಡಾ 20ರಷ್ಟು

ಕಡಿಮೆ ಮಾಡಬೇಕಾದರೆ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಕಡಿತ ಮಾಡಿದ್ದೀರಿ, ಮತ್ತೆ ಸೋಷಿಯಲ್ ಸೆಕ್ಟಾರ್ ಕಾರ್ಯಕ್ರಮಗಳು ಏನಿವೆ, ಈ ಎಲ್ಲಾ ಕೆಲಸಗಳಿಗೆ ಹಣವನ್ನು ಕಡಿಮೆ ಮಾಡಿದ್ದೀರಿ, ಇದರ ಜೊತೆಗೆ ರಿ-ಅಪ್ರೋಪ್ರಿಯೇಷನ್‌ಗೆ ಎಂದು ಕಳುಹಿಸಿಕೊಟ್ಟರೆ ಹಣಕಾಸಿನ ಇಲಾಖೆಯವರು ಯಾವುದೇ ರಿ-ಅಪ್ರೋಪ್ರಿಯೇಷನ್‌ಗೆ ಅವಕಾಶ ಕೊಟ್ಟಿಲ್ಲ, ಬಹುಶಃ ಈ ಎಲ್ಲಾ ಹಣ ಖರ್ಚು ಆಗಿದಿದ್ದರೆ, ಹೋದ ವರ್ಷಕ್ಕಿಂತ ಈ ವರ್ಷ ರೆವಿನ್ಯೂ ಡಿಫಿಸಿಟ್ ಜಾಸ್ತಿಯಾಗುತ್ತಿತ್ತು. ಆದುದರಿಂದ ನೀವು ಏನು ಬೆನ್ನು ತಟ್ಟಿಕೊಳ್ಳುತ್ತಾ ಇದ್ದೀರಿ ಶೇಕಡಾ 20ರಷ್ಟು ಕಡಿಮೆ ಮಾಡಿದ್ದೀರಿ, ಎಂದು ನಿಜವಾದ ಕಡಿತವಲ್ಲ. ನಿಮ್ಮ ಅಭಿವೃದ್ಧಿ ಕೆಲಸಗಳು ಕಡಿಮೆಯಾಗಿದೆ, ಎಂದು ನನ್ನ ಅನಿಸಿಕೆಯಾಗಿದೆ. ಇನ್ನು ಇದರಲ್ಲಿ ಸಾಲ ಶೇಕಡಾ 87 ಪರ್ಸೆಂಟ್ ರೆವಿನ್ಯೂ ಎಕ್ಸ್‌ಪೆಂಡಿಚರ್‌ಗೆ ಹೋಗುತ್ತಿದೆ. ಇಲ್ಲಿ ಆದಾಯ ಏನು ಬರುತ್ತಿದೆ, ಅದರಲ್ಲಿ 87 ಪರ್ಸೆಂಟ್ ಖರ್ಚಾಗುತ್ತಿದೆ, ನೀವು ಸಾಲ ಏನು ತರುತ್ತಿದ್ದೀರಿ, ಆ ಸಾಲದಲ್ಲಿ ಶೇಕಡಾ 65ರಷ್ಟು ಹಣವನ್ನು ವಾಪಸ್ಸು ಸಾಲವನ್ನು ಮರುಪಾವತಿ ಮಾಡುವುದಕ್ಕೆ ಕಟ್ಟುತ್ತಿದ್ದೀರಿ, ಅಂದರೆ ನೀವು ನೂರು ರೂಪಾಯಿಗಳನ್ನು ಸಾಲ ತಂದರೆ 167 ರೂಪಾಯಿಗಳನ್ನು ಬಡ್ಡಿ ಸಮೇತವಾಗಿ ಹಣವನ್ನು ಕಟ್ಟುತ್ತಿದ್ದೀರಿ. ಅದರಲ್ಲಿ ಏನಾಗಿದೆ ಎಂದರೆ ಸಾಲವನ್ನು ತಂದು ಮತ್ತೆ ಕಟ್ಟುವಂತಹದ್ದು ಮಾಡುತ್ತಿರುವುದರಿಂದ ಯಾವುದೇ ಅಭಿವೃದ್ಧಿ ಕೆಲಸವನ್ನು ನೀವು ಮಾಡುವುದಕ್ಕೆ ಆಗುತ್ತಾ ಇಲ್ಲ. ನೀವು, ನಾವು ಎಷ್ಟು ಸಾಲವನ್ನು ತಂದಿದ್ದೇವೆ, ಮತ್ತೆ ಎಷ್ಟು ಜಾಸ್ತಿಯಾಗಿದೆ, ಎಂಬುದನ್ನು ಹೇಳುವುದಾದರೆ ನಾವು ಸರ್ಕಾರವನ್ನು ಬಿಟ್ಟು ಕೊಡುವಾಗ ಎಂದರೆ 1999-2000ದೊಳಗೆ ಯೋಜನೇತರ ಖರ್ಚಿಗೆ ಇದ್ದದ್ದು ಸುಮಾರು 12,239 ಕೋಟಿ ರೂಪಾಯಿಗಳು ಇದ್ದದ್ದು, ಮತ್ತೆ 2000-01ರಲ್ಲಿ 13,204 ಕೋಟಿ ರೂಪಾಯಿಗಳಾಯಿತು. ಅಂದರೆ ಈ ಮೂರು ವರ್ಷಗಳಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳು ಜಾಸ್ತಿಯಾಗಿದೆ. ಅಂದರೆ ಇದರಲ್ಲಿ ಪೆನ್‌ಷನ್ ಇರಬಹುದು, ಸ್ಯಾಲರಿ ಇರಬಹುದು, ಮತ್ತೆ ಮಂತ್ರಿಗಳ, ಮತ್ತೆ ಬೇರೆ ಬೇರೆ ಖರ್ಚುಗಳು ಇರಬಹುದು. ಈ ಎಲ್ಲವೂ ಸೇರಿ ಯೋಜನೇತರ ಖರ್ಚುಗಳು ಮೂರು ವರ್ಷಗಳಲ್ಲಿ ಯಾವುದೇ ರೀತಿಯಲ್ಲಿ ಕಡಿಮೆ ಮಾಡುವುದಕ್ಕೆ ಹೋಗಿಲ್ಲ. ಇದರ ಬಗ್ಗೆ ಆಡಳಿತ ಸುಧಾರಣೆಯ ವರದಿಯನ್ನು ತರಿಸಿಕೊಂಡಿದ್ದೀರಿ, ಮತ್ತೆ ವಿಷಯ ಸಮಿತಿಯವರೂ ಸಹ ಒಂದು ರೆಕ್‌ಮಂಡೇಷನ್ ಅನ್ನು ಕೊಟ್ಟಿದ್ದಾರೆ. ಈ ಪೆನ್‌ಷನ್ ಮತ್ತು ಸ್ಯಾಲರಿಗಳು ವರ್ಷ ವರ್ಷ ಹೆಚ್ಚಾಗುತ್ತಿದೆ, ಹೋದ ವರ್ಷ ಸಮಿತಿಯವರು ಏನು ಶಿಫಾರಸ್ಸು ಮಾಡಿದ್ದಾರೆಂದರೆ ಪೆನ್‌ಷನ್ ಅಮೌಂಟ್‌ಗೆ "ಪೆನ್‌ಷನ್ ಫಂಡ್" ಎಂದು ಮಾಡಬೇಕೆಂದು ಹೇಳಿದ್ದಾರೆ, ಅಂದರೆ ಅವರು ಸರ್ವಿಸ್‌ನಲ್ಲಿರುವಾಗಲೇ ಹಣವನ್ನು ಕಟ್ಟಿಕೊಂಡು ಹೋಗುತ್ತಾರೆ, ಅದು ರಿಟೈರ್ ಆದಮೇಲೆ ಅವರು ಏನು ಕಟ್ಟಿರುತ್ತಾರೆ, ಅದನ್ನು ಪೆನ್‌ಷನ್ ಫಂಡ್ ಎಂದು ಸೃಷ್ಟಿ ಮಾಡಬೇಕೆಂದು ವರದಿಯನ್ನು ಕೊಟ್ಟಿದ್ದಾರೆ. ಏಕೆಂದರೆ ನೀವು ಸ್ಯಾಲರಿಯನ್ನು ರೈಸ್ ಮಾಡಿದ ಹಾಗೆಲ್ಲಾ ಪೆನ್‌ಷನ್ ಹಣವೂ ಹೆಚ್ಚಾಗುತ್ತದೆ, ಇದರಿಂದ ಸಾವಿರಾರು ಕೋಟಿ ರೂಪಾಯಿಗಳು ಇದಕ್ಕೆ ಹೋಗುತ್ತಾ ಇದೆ. ಸರ್ಕಾರ ಇದರ ಬಗ್ಗೆ ಯಾವುದೇ ತೀರ್ಮಾನವನ್ನು ಮಾಡಿಲ್ಲ, ಮತ್ತೆ ಚಿಂತನೆಯನ್ನು ಮಾಡಿಲ್ಲ ಎಂಬುದು ನನ್ನ ಒಂದು ಅನಿಸಿಕೆ. ಮತ್ತೆ ಹಾರ್ನಳ್ಳಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಏನು ಒಂದು ಕಮಿಟಿಯನ್ನು ಮಾಡಿದ್ದೀರಿ, ಈ ಕಮಿಟಿಯವರು ಸಹ ಇದರ ಬಗ್ಗೆ ಚಿಂತನೆ ಮಾಡಿಲ್ಲವೆಂದು ನನ್ನ ಅನಿಸಿಕೆಯಾಗಿದೆ. ಇನ್ನು ಸಾಲ 1996-97ರಲ್ಲಿ ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಸುಮಾರು 9,180 ಕೋಟಿ ರೂಪಾಯಿಗಳು ಇತ್ತು, ನಾವು ಐದು

ವರ್ಷಗಳದ್ದು ಲೆಕ್ಕ ಹಾಕಿ ನೋಡಿದ್ದೇವೆ. ಇದು 2000-01ರಲ್ಲಿ 18,000 ಕೋಟಿ ರೂಪಾಯಿಗಳು ಇದೆ, ಅಂದರೆ ಶೇಕಡಾ 96 ಪರ್ಸೆಂಟ್ ಹೆಚ್ಚಿಗೆ ಆಗಿದೆ, ಅಂದರೆ ಐದು ವರ್ಷದಿಂದ ಈಚೆಗೆ ತೆಗೆದುಕೊಂಡರೆ ನಮ್ಮ ಸರ್ಕಾರದಲ್ಲಿ ಸುಮಾರು ಒಂಭತ್ತು ಸಾವಿರ ಕೋಟಿ ರೂಪಾಯಿಗಳ ಸಾಲವಿದೆ.

ಅಧ್ಯಕ್ಷರು : ಪಶ್ಚಿಮ ಬಂಗಾಲದಲ್ಲಿ 70,000 ಕೋಟಿ ರೂಪಾಯಿಗಳ ಸಾಲ ಆಗಿದೆಯಲ್ಲಾ,

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೇ, ಅದಕ್ಕೆ ನಾವು ಬೆನ್ನು ತಟ್ಟಿಕೊಳ್ಳುವುದಲ್ಲ, ನಾವು ನಮ್ಮ ಸರ್ಕಾರದ ಬಗ್ಗೆ ಯೋಚನೆ ಮಾಡೋಣ. ಈ ಐದು ವರ್ಷಗಳಲ್ಲಿ ನಾವು ಇಷ್ಟು ಸಾಲವನ್ನು ತಂದು ಇಲ್ಲಿ ಪಿ.ಡಬ್ಲ್ಯೂ.ಡಿ. ಮಿನಿಸ್ಟರ್‌ಗಳು ಸ್ಟೇಟ್‌ಮೆಂಟ್‌ಗಳನ್ನು ಕೊಡುತ್ತಿರುತ್ತಾರೆ, 2,000 ಕೋಟಿ ರೂಪಾಯಿಗಳ ಸಾಲವನ್ನು ತರುತ್ತಿದ್ದೇವೆಂದು ಹೇಳುತ್ತಿರುತ್ತಾರೆ. ಇಲ್ಲಿ ರಸ್ತೆಗಳ ಟೆಂಡರ್‌ಗಳನ್ನು ಕರೆದಿದ್ದೇವೆ, ಅಂದರೆ ಇಲ್ಲಿ ಆದಾಯ ತಂದು ಖರ್ಚು ಮಾಡುತ್ತಿದ್ದಿರೋ, ಸಾಲವನ್ನು ತಂದು ಮಾಡುತ್ತಿದ್ದಾರೋ?

ಅಧ್ಯಕ್ಷರು : ಆಂಧ್ರಪ್ರದೇಶದವರ ಸಾಲ 40,000 ಕೋಟಿ ರೂಪಾಯಿಗಳು ಇದೆ.

ಶ್ರೀ ಬಿ. ಸೋಮಶೇಖರ್ : ಇರಲಿ, ಅದಕ್ಕೆ ಈ 18 ಸಾವಿರ ಕೋಟಿ ರೂಪಾಯಿಗಳು.

ಅಧ್ಯಕ್ಷರು : ಇತರ ರಾಜ್ಯಗಳಿಗೆ ಹೋಲಿಸಿದರೆ ನಮ್ಮ ರಾಜ್ಯದ್ದು ಕಡಿಮೆ ಎಂದು ಹೇಳುತ್ತಿರುವಂಥಾದ್ದು.

12.10 ಪಿ.ಎಂ.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮಾನ್ಯ ಅಧ್ಯಕ್ಷರೇ, ತೆಲುಗಿನಲ್ಲಿ ಒಂದು ಗಾದೆ ಇದೆ, ಅಪ್ಪು ಚೇಸಿ ಪಂಪ್ಪುಕೂಡು ಎಂದು, ಅಂದರೆ ಸಾಲ ಮಾಡಿ ಪಪ್ಪು ಸಾರು ಅಡಿಗೆ ಊಟ ಮಾಡಿದಂತಾಗುತ್ತದೆ.

ಅಧ್ಯಕ್ಷರು : ಹಾಗಾದರೆ ಎಂಎಲ್‌ಎ ಫಂಡ್ ಅನ್ನು ನಿಲ್ಲಿಸಿಬಿಡೋಣವೇ?

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಒಳ್ಳೆಯ ಕೆಲಸ ಮಾಡಿದರೆ ಒಳ್ಳೆಯದೆಂದು ಹೇಳುತ್ತೇವೆ. ಮಾಡುವುದು ಬೇಡವೆಂದು ನಾವು ಹೇಳುವುದಿಲ್ಲ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಮುಖ್ಯಮಂತ್ರಿಗಳು ಈ ವರ್ಷದ ಆಯವ್ಯಯ ಪ್ರಸ್ತಾವನೆಯಲ್ಲಿ ಫಿಸಿಕಲ್ ಸಿಚ್ಯುಯೇಷನ್ ಅನ್ನುವುದರ ಬಗ್ಗೆ ಹೇಳಿದ್ದಾರೆ, ಅದರಲ್ಲಿ ಏನು ಹೇಳಿದ್ದಾರೆಂದರೆ, we have to cut unproductive expenditure so as to be able to provide enhanced allocations for social sectors like health, education and social justice, and infrastructure sectors including agriculture, irrigation and roads. ಅದರ ಬಗ್ಗೆ ಅನಲೈಸ್ ಮಾಡಿದೆ. ಸೋಷಿಯಲ್ ಸೆಕ್ಟಾರ್‌ನಲ್ಲಿ ಹೆಚ್ಚಿಗೆ ಮಾಡಬೇಕೆಂದು ಆಯವ್ಯಯ ಪ್ರಸ್ತಾವನೆಯಲ್ಲಿ ಹೇಳಿ ಈ ರೀತಿ ಐದುವರೆ ಪರ್ಸೆಂಟ್ ನೀವು ಕಡಿಮೆ ಮಾಡಿದ್ದೀರಿ, ತಾವು ಹೇಳಿರುವ ಹೇಳಿಕೆಗೂ ತಾವು ಒದಗಿಸಿರುವ ಹಣಕ್ಕೂ ಎಷ್ಟು ಅಜಗಜಾಂತರ ಅಂತರವಿದೆ ಎನ್ನುವುದನ್ನು ಮಾನ್ಯ ಅಧ್ಯಕ್ಷರೆ, ನಾನು ನಿಮ್ಮ ಗಮನಕ್ಕೆ ತಂದೆ. ಮತ್ತೊಂದು ವಿಷಯ. The fiscal situation of the State is not a cause for alarm, but it has to be managed with care. The Government has tabled a medium term fiscal plan 2000-01 to 2004-05 in the budget session last

year. It was a plan for fiscal stabilisation in the next four years. Then, the medium term fiscal plan 2002-03 to 2005-06 would be placed before the Legislature in the current budget session. ನಾವೇನು ಹೇಳಿದೆವು ಎಂದರೆ, ಫಿಸಿಕಲ್ ಮಿಡಿಯ ಎಂಟೀಎಫ್‌ಸಿ ಎನ್ನುವುದನ್ನು ಇಡಬಹುದೆಂದು ಹೇಳಿದರೆ, ಅದನ್ನು ಇದುವರೆಗೆ ಇಟ್ಟಿಲ್ಲ. ಯಾವುದೇ ಒಂದು ಪ್ಲಾನ್ ಅನ್ನು ಎಂಟೀಎಫ್‌ಸಿ ಮಾಡುತ್ತಾರೆ, ಮುಂದಿನ ಯೋಜನೆಗಳೇನು? ಆ ಸರ್ಕಾರದ್ದೇನು ಎನ್ನುವುದರ ಬಗ್ಗೆ ಏನೂ ಇಟ್ಟಿಲ್ಲ. ಇನ್ನೊಂದು ವಿಚಾರವೇನು ಹೇಳಿದ್ದಾರೆಂದರೆ, 'The fiscal responsibility bill will be introduced in the House soon' ಅದನ್ನೂ ಸಹ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ, ಫಿಸಿಕಲ್ ರೆಸ್ಪಾನ್ಸಿಬಿಲಿಟಿ ಬಿಲ್ ಅಬಿಲ್ ಎಲ್ಲಿದೆಯೊ ಸುಮಾರು ಎಷ್ಟೊಂದು ಬಿಲ್ ಇದೆಯಲ್ಲಾ ಅದರಲ್ಲಿ ಈ ಬಿಲ್ ಎಲ್ಲಿದೆ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಮತ್ತು ಡಿಸಿಪ್ಲಿನ್ ಅನ್ನು ತರುತ್ತೇವೆನ್ನುವುದನ್ನು ಹೇಳಿ, ಈ ರೀತಿ ನಾನ್ ಪ್ಲಾನ್ ಎಕ್ಸ್‌ಪೆಂಡಿಂಚರ್ ಸಾವಿರ ಕೋಟಿ ರೂಪಾಯಿ ಜಾಸ್ತಿಯಾಗಿ ಸೋಷಿಯಲ್ ಸೆಕ್ಟಾರ್‌ಗೆ ಬಜೆಟ್ ಅನ್ನು ನೀವು ಕಡಿಮೆ ಮಾಡಿ, ಇದರಲ್ಲಿ ಯಾವ ರೀತಿಯ ಫಿಸಿಕಲ್ ಡಿಸಿಪ್ಲಿನ್ ಬಂದಿದೆ ಎನ್ನುವುದನ್ನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಚ್ಛಿಪಡುತ್ತೇನೆ. 2001-02ರಲ್ಲಿ 18,000 ಕೋಟಿ ರೂಪಾಯಿ ಅದು ಈ ವರ್ಷಕ್ಕೆ 27,000 ಕೋಟಿ ರೂಪಾಯಿ ಆಗಿದೆ, 9,000 ಕೋಟಿ ರೂ ಎಲ್ಲಿ 27,000 ಕೋಟಿ ರೂ. ಎಲ್ಲಿ? ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ 1996-97ರಲ್ಲಿ 9,000 ಕೋಟಿ ರೂಪಾಯಿ ಸಾಲವಿತ್ತು ಮತ್ತೆ ನೀವು ಸೋಷಿಯಲ್ ಸೆಕ್ಟಾರ್ ಅನ್ನು ತೆಗೆದುಕೊಂಡರೆ ಇದಕ್ಕಿಂತ ಹೆಚ್ಚಿನ ಹಣವನ್ನು ನಾವು ಬಿಡುಗಡೆ ಮಾಡಿದ್ದೇವೆ. ನೀವು ಸೋಷಿಯಲ್ ಸೆಕ್ಟಾರ್ ಹಣವನ್ನು ಖರ್ಚು ಮಾಡಿಲ್ಲ, ಸಾಲ ತೆಗೆದುಕೊಂಡಿರುವುದು 27,000 ಕೋಟಿ ರೂಪಾಯಿ ಆಗಿದೆ. ಒಂದು ಆರ್ಟಿಕಲ್ ಬಂದಿದೆ.

STATE DEBT BURDEN ON THE RISE: The Karnataka State debt burden on the Union Government has steadly been increased with the three years statistical data made available to Deccan Herald indicating that the outstanding debt has gone up by nearly Rs. 1000 crores. The total debt burden which was Rs. 18,275 croes in 2000, rose to 22, 413 crores in 2001 and Rs. 27,000 crores in 2002'...

ಇದು ಈ ಸರ್ಕಾರದ ಸಾಧನೆ. ಮುಖ್ಯಮಂತ್ರಿಗಳು ವಿಶ್ವಬ್ಯಾಂಕ್ ಎಡಿಬಿ ಮತ್ತೆ ಬೇರೆ ಬೇರೆ ಬ್ಯಾಂಕ್‌ಗಳಿಂದ 27,000 ಕೋಟಿ ರೂಪಾಯಿ ತಂದು ಶೇಕಡ 65 ರಷ್ಟು ಹಣವನ್ನು ಬಡ್ಡಿ ಜೊತೆಗೆ ಸಾಲ ಕಟ್ಟಿ ರಾಜ್ಯವನ್ನು ಅಭಿವೃದ್ಧಿ ಮಾಡುತ್ತೇವೆನ್ನುವುದಾದರೆ, ಇನ್ನೆರಡು ವರ್ಷಗಳಲ್ಲಿ ಈ ಸರ್ಕಾರ ಹೋಗಿ ಇನ್ಯಾವುದೇ ಸರ್ಕಾರ ಬಂದರೂ ಅದಕ್ಕೆ ಹಣಕಟ್ಟುವವರು ಯಾರು? ಈ ಸರ್ಕಾರ ದಿವಾಳಿಯಾಗುತ್ತೆ, ನಾವೇ ಆಗಲಿ ಬೇರೆ ಇನ್ನೊಬ್ಬರೇ ಬರಲಿ ತುಂಬಾ ಕಷ್ಟವಾಗುತ್ತದೆ. ಇದನ್ನು ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ, ಮುಖ್ಯಮಂತ್ರಿಗಳು ಹಣಕಾಸಿನಲ್ಲಿ ಡಿಸಿಪ್ಲಿನ್ ತರುತ್ತೇನೆಂದು ಬರೀ ಸಾಲ ತಂದು ನಮ್ಮ ಮೇಲೆ ಹಾಕಿ ಒಬ್ಬೊಬ್ಬ ವ್ಯಕ್ತಿಗೆ ಎಷ್ಟು ಸಾಲದ ಹೊರೆಯಾಗುತ್ತಿದೆ, ಒಂದೊಂದು ಮಗುವಿಗೆ, ಒಂದೊಂದು ತಲೆಗೆ ತಗಲುವ ಸಾಲವನ್ನು ಯಾರು ಕಟ್ಟುತ್ತಾರೆ? ನೀವೇನೋ ಇನ್ನೆರಡು ವರ್ಷವಾದ ಮೇಲೆ ಹೊರಟು ಹೋಗುತ್ತೀರಿ,

ಆಮೇಲೆ ನಮ್ಮ ರಾಜ್ಯದ ಜನತೆ ಶಾಪವನ್ನು ಹಾಕುತ್ತಾರೆ, ಆ ಬಗ್ಗೆ ತುಂಬಾ ಗಂಭೀರವಾಗಿ ಯೋಚನೆ ಮಾಡಬೇಕಾಗಿದೆ. ಮತ್ತೆ ರಾಜ್ಯ ಸರ್ಕಾರ ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ಸ್‌ಗಳಿಗೆ ಗ್ಯಾರೆಂಟಿ ಕೊಟ್ಟಿದೆ ಸುಮಾರು 13,000 ಕೋಟಿ ರೂಪಾಯಿಗಳಿಗೆ ಗ್ಯಾರೆಂಟಿ ಕೊಟ್ಟಿದ್ದೀರಿ. ಅದು ಎನ್‌ಜಿಇಎಫ್‌ಎಲ್ ಇತ್ಯಾದಿ ಇರಬಹುದು, 13,000 ಕೋಟಿ ರೂಪಾಯಿಗಳಲ್ಲಿ ನಮಗೆ ಬರುವ ಹಣ ಕೇವಲ ಒಂಬತ್ತು ಕೋಟಿ ರೂಪಾಯಿ ಒಂದು ವೇಳೆ ಇವೆಲ್ಲಾ ಮುಚ್ಚಿದರೆ, ನಮ್ಮ ರಾಜ್ಯ ಸರ್ಕಾರ 13,000 ಕೋಟಿ ರೂಪಾಯಿ ಕಟ್ಟಬೇಕಾಗುತ್ತದೆ. ಅದಕ್ಕೆ ಏನಾದರೂ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಾ? ಪ್ರತಿ ವರ್ಷಕ್ಕೆ ಬರೀ 9 ಕೋಟಿ ರೂಪಾಯಿ ಬರುತ್ತಿದೆ, ಅಂದರೆ ಸುಮಾರು ಶೇಕಡ 0.21, 4,200 ಕೋಟಿ ರೂಪಾಯಿ ಆನ್ಯೂಯಲ್ ರಿಟರ್ನ್ ಬಂದರೆ 13,000 ಕೋಟಿ ರೂಪಾಯಿಗೆ ಇದರಲ್ಲಿ ಏನಾಗಿದೆ? ಟ್ಯಾಕ್ಸ್ ಕಲೆಕ್ಷನ್ ಮಾಡುತ್ತಿಲ್ಲ, ಮತ್ತೆ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಪುನಶ್ಚೇತನ ಮಾಡುತ್ತಿಲ್ಲ ಈ ದಿಕ್ಕಿನಲ್ಲಿ ರಾಜ್ಯ ಸರ್ಕಾರ ಹೋಗುತ್ತಾ ಇದೆ, ಈ ಬಗ್ಗೆ ತುಂಬಾ ಗಾಬರಿ ಕೂಡ ನಮಗೆಲ್ಲಾ ಆಗುತ್ತಿದೆ ಇದನ್ನು ರಾಜ್ಯ ಸರ್ಕಾರ ಯೋಚನೆ ಮಾಡಬೇಕು. ಈ ಡೆಫಿಸಿಟ್ ಆಗಬೇಕಾದರೆ ಎರಡು ಮೂರು ಕಾರಣಗಳಿವೆ, ಅದು ಯಾವುದು ಯಾದ್ಯಮ ಎಂದರೆ, ಬಜೆಟ್‌ನ ಓವರ್ ಎಸ್ಟಿಮೇಟ್ ಮಾಡುವುದು. ತಾವೆಲ್ಲಾ 1972 ರಲ್ಲಿ ಹಣಕಾಸಿನ ಮಂತ್ರಿಗಳಾಗಿದ್ದವರು ಉತ್ತಮವಾಗಿ ಕೆಲಸ ಮಾಡಿದ್ದೀರಿ, ತಾವು ಇದನ್ನು ಯೋಚನೆ ಮಾಡಬೇಕು. ರೆವಿನ್ಯೂ ಮೊಬಿಲೈಸೇಷನ್‌ನಲ್ಲಿ ಹೇಳುವುದಿಷ್ಟೆ. ರೆವಿನ್ಯೂ ಅಕೌಂಟ್‌ನಲ್ಲಿ ಹೇಳುವುದಿಷ್ಟೆ, ಸ್ಟೇಟ್ ಷೇರ್‌ನಲ್ಲಿ ಬಜೆಟ್ ಅಂದಾಜು 10851 ಕೋಟಿ ರೂಪಾಯಿ ಸ್ಟೇಟ್ ಟ್ಯಾಕ್ಸ್‌ನಿಂದ ಬರುತ್ತದೆಂದು ಎಸ್ಟಿಮೇಟ್ ಮಾಡಿದ್ದೀರಿ. ಅದನ್ನು ರಿವೈಸ್ ಎಸ್ಟಿಮೇಟ್ ಮಾಡಿದ್ದು 10115 ಕೋಟಿ ರೂಪಾಯಿಗಳಿಗೆ ಮಾಡಿದ್ದೀರಿ ಅಂದರೆ 736 ಕೋಟಿ ರೂಪಾಯಿ ನೀವು ರಾಂಗ್ ಎಸ್ಟಿಮೇಟ್ ಮಾಡಿದ್ದೀರಿ, ಅಂದರೆ ಶೇಕಡ ಏಳರಷ್ಟು ಓವರ್ ಎಸ್ಟಿಮೇಟ್ ಮಾಡಿದ್ದೀರಿ, ಸ್ಟೇಟ್ ಟ್ಯಾಕ್ಸ್‌ನಲ್ಲಿ ಮಾತ್ರ. ಸೆಂಟ್ರಲ್ ಟ್ಯಾಕ್ಸಸ್‌ನಲ್ಲಿ 3071 ಕೋಟಿ ರೂಪಾಯಿ ಬಜೆಟ್ ಅಂದಾಜು ಮಾಡಿದ್ದು ರಿವೈಸ್ ಮಾಡಿರುವುದು 2521 ಕೋಟಿ ರೂಪಾಯಿಗಳಿಗೆ ಅಂದರೆ 550 ಕೋಟಿ ರೂಪಾಯಿ ಒವರ್ ಎಸ್ಟಿಮೇಟ್ ಮಾಡಿದ್ದೀರಿ, ಅಂದರೆ ಶೇಕಡ 18 ರಷ್ಟು ಓವರ್ ಎಸ್ಟಿಮೇಟ್ ಮಾಡಿರುವುದು. ಸೆಂಟ್ರಲ್ ಗ್ರಾಂಟ್ಸ್ 2102 ಕೋಟಿ ರೂಪಾಯಿ ಎಸ್ಟಿಮೇಟ್ ಮಾಡಿರುವುದು, ರಿವೈಸ್ ಮಾಡಿರುವುದು 2074 ಕೋಟಿ ರೂಪಾಯಿಗಳಿಗೆ ಅಂದರೆ 75 ಕೋಟಿ ರೂಪಾಯಿ ಅಂದರೆ ಅದರಲ್ಲೂ 4 ಪರ್ಸೆಂಟ್ ರಿವೈಸ್ ಮಾಡಿದ್ದೀರಿ. ಮತ್ತೆ ನಾನ್ ಟ್ಯಾಕ್ಸ್ ರೆವಿನ್ಯೂನಲ್ಲಿ 1303 ಕೋಟಿ ರೂಪಾಯಿ ಬಜೆಟ್ ಎಸ್ಟಿಮೇಟ್ ಮಾಡಿ, ಅದನ್ನು 1212 ಕೋಟಿ ರೂ. ಗಳಿಗೆ ರಿವೈಸ್ ಮಾಡಿದ್ದೀರಿ, ಅಂದರೆ ಶೇಕಡ ಏಳರಷ್ಟಾಗುತ್ತದೆ. ಹೀಗೆ ರೆವಿನ್ಯೂ ಅಕೌಂಟ್‌ನಲ್ಲಿರುವ ನಾಲ್ಕು ಐದು ಭಾಗಗಳಲ್ಲಿ ನೀವು 1453 ಕೋಟಿ ರೂಪಾಯಿಗಳಷ್ಟು ಒವರ್ ಎಸ್ಟಿಮೇಟ್ ಮಾಡಿದ್ದೀರಿ. ಸೆಂಟ್ರಲ್‌ನಿಂದ ಬರುವ ಡೆವಲ್ಯೂಷನ್ ಏನಿದೆ ಅದನ್ನೂ ಕೂಡ ನೀವು ಒವರ್ ಎಸ್ಟಿಮೇಟ್ ಮಾಡಿದ್ದೀರಿ, ಕಲೆಕ್ಷನ್‌ನಲ್ಲಿ, ಸೆಂಟ್ರಲ್ ಗ್ರಾಂಟ್ಸ್, ನಾನ್‌ಟ್ಯಾಕ್ಸ್ ರೆವಿನ್ಯೂ ಎಲ್ಲಾ ಸೇರಿ ಸುಮಾರು 1453 ಕೋಟಿ ರೂಪಾಯಿಗಳಷ್ಟು ಓವರ್ ಎಸ್ಟಿಮೇಟ್ ನೀವು ಮಾಡಿದ್ದೀರಿ. ಕ್ಯಾಪಿಟಲ್ ಅಂಕೌಂಟ್ ತೆಗೆದುಕೊಂಡರೆ ಗೌರ್ನಮೆಂಟ್ ಆಫ್ ಇಂಡಿಯಾ ಲೋನ್‌ನಲ್ಲಿ ಅದರಲ್ಲಿ ನೀವು ಬಜೆಟ್ ಎಸ್ಟಿಮೇಟ್ ಮಾಡಿಕೊಂಡಿರುವುದು 2107 ಕೋಟಿ ರೂಪಾಯಿ ಅದನ್ನು ನೀವು 1966 ಕೋಟಿ

ರೂಪಾಯಿಗಳಿಗೆ ರಿವೈಸ್ ಮಾಡಿಕೊಂಡಿದ್ದೀರಿ, ಅದರಲ್ಲೂ 141 ಕೋಟಿ ರೂಪಾಯಿ ಕಡಿಮೆ ಮಾಡಿದ್ದೀರಿ, ಇದು ಸಾಫ್ಟ್ ಲೋನ್, ಫೋರ್ಪರ್ಡೆಯವರು ಹೇಳಬೇಕು, ಕೇಂದ್ರ ಸರ್ಕಾರದ ಸಾಫ್ಟ್ ಲೋನ್ ವಿತ್ ಲೆಸ್ ಇಂಟರೆಸ್ಟ್. ನಾವು ಹೆಚ್ಚಿಗೆ ಎಲ್ಲಿ ಮಾಡಬೇಕಾಗಿತ್ತು, we should have attempted to get more Central Government loans so that we can pay less interest. 141 ಕೋಟಿ ರೂಪಾಯಿ ನಾವು ಕಡಿಮೆ ಮಾಡಿ ಕಮರ್ಷಿಲ್ ಬ್ಯಾಂಕ್‌ಗಳಿಗೆ ಶೇಕಡ 16-17 ಬಡ್ಡಿ ಕಟ್ಟಿ ಸುಮಾರು 27,000 ಕೋಟಿ ರೂಪಾಯಿಗಳಷ್ಟು ಲೋನ್ ಅವರಿಂದ ತೆಗೆದುಕೊಂಡಿದ್ದೇವೆ. ಇನ್ನು ಓಪನ್ ಮಾರ್ಕೆಟ್ ಲೋನ್‌ಗೆ ಬಂದರೆ ಅದರಲ್ಲಿ 738 ಕೋಟಿ ರೂಪಾಯಿದದ್ದು ಬಜೆಟ್ ಎಸ್ಟಿಮೇಟ್ ಮಾಡಿರುವುದು, ಆದರೆ ಅದನ್ನು 1047 ಕೋಟಿ ರೂಪಾಯಿ ತೆಗೆದುಕೊಂಡಿರುವುದು 309 ಕೋಟಿ ರೂಪಾಯಿ ನಾವು ಹೆಚ್ಚಿಗೆ ಪಡೆದುಕೊಂಡಿದ್ದೇವೆ, ಕೇಂದ್ರ ಸರ್ಕಾರದ ಸಾಫ್ಟ್ ಲೋನ್‌ನಲ್ಲಿ 141 ಕೋಟಿ ರೂಪಾಯಿ ಕಡಿಮೆ ಮಾಡಿದ್ದೀರಿ, ನಮ್ಮ ರಾಜ್ಯದ ಆರ್ಥಿ ವ್ಯವಸ್ಥೆಯನ್ನು ಎಷ್ಟು ಜವಾಬ್ದಾರಿಯುತವಾಗಿ ನಿರ್ವಹಣೆ ಮಾಡಿದ್ದೀರೆಂಬುದನ್ನು ಇದು ತೋರಿಸುತ್ತದೆ. ಕ್ಯಾಪಿಟಲ್ ಅಕೌಂಟ್‌ನಲ್ಲಿ 1220 ಕೋಟಿ ರೂಪಾಯಿಗಳ ಎಸ್ಟಿಮೇಟ್ ಮಾಡಿ, ನಂತರ ಅದನ್ನು 990 ಕೋಟಿ ರೂಪಾಯಿಗಳಿಗೆ ರಿವೈಸ್ ಮಾಡಿದ್ದು, ಅದರಲ್ಲಿ 230 ಕೋಟಿ ಓವರ್ ಎಸ್ಟಿಮೇಟ್ ಮಾಡಲಾಗಿದೆ. ಇವುಗಳೆಲ್ಲವನ್ನೂ ನೋಡಿದಾಗ, ನಾನ್-ಪ್ಲಾನ್ ಎಕ್ಸ್‌ಪೆಂಡಿಚರ್ ಎಷ್ಟು ಹೋಗುತ್ತದೆ ಎನ್ನುವುದು ಇದರಿಂದ ಗೊತ್ತಾಗುತ್ತದೆ. ಇನ್ನು, ಕ್ಯಾಪಿಟಲ್ ಡಿಸ್ಬರ್ಸ್‌ಮೆಂಟ್ ಬಗ್ಗೆ ಹೇಳುವುದಾದರೆ, ಕ್ಯಾಪಿಟಲ್ ಡಿಸ್ಬರ್ಸ್‌ಮೆಂಟ್ ಎನ್ನುವುದು ಅಸೆಟ್ಸ್ ಕ್ರಿಯೇಟ್ ಮಾಡತಕ್ಕಂಥ ಒಂದು ಯೋಜನೆ. ಇದರಲ್ಲಿ 2,179 ಕೋಟಿ ರೂಪಾಯಿಗಳ ಬಜೆಟ್ ಎಸ್ಟಿಮೇಟ್ ಮಾಡಿರತಕ್ಕಂಥಾದ್ದನ್ನು 1,776 ಕೋಟಿ ರೂಪಾಯಿಗಳಿಗೆ ರಿವೈಸ್ ಮಾಡಿದ್ದು, 403 ಕೋಟಿ ರೂಪಾಯಿಗಳನ್ನು ಕಡಿಮೆ ತೋರಿಸಿದ್ದೀರಿ. 2,947 ಕೋಟಿ ರೂಪಾಯಿಗಳಲ್ಲಿ ಶೇಕಡ 21ರಷ್ಟು ಅಂದರೆ 617 ಕೋಟಿ ರೂಪಾಯಿಗಳನ್ನು ಬಾರೋಯಿಂಗ್ ಮಾಡಿದ್ದೀರಿ. ಇವೆರಡೂ ಸೇರಿದರೆ ಸುಮಾರು 300 ಕೋಟಿ ರೂಪಾಯಿಗಳನ್ನು ಕ್ಯಾಪಿಟಲ್ ಡಿಸ್ಬರ್ಸ್‌ಮೆಂಟ್‌ನಲ್ಲಿ ನೀವು ಮಾಡಿದ್ದೀರಿ. ಎ.ಜಿ. ರಿಪೋರ್ಟ್ ಪ್ರಕಾರ ಶೇಕಡ 10 ರಿಂದ 15 ರಷ್ಟು ಕಡಿಮೆ ಇರುತ್ತದೆ. ರೆವಿನ್ಯೂ ಅಕೌಂಟ್‌ನಲ್ಲಿ ಸ್ಟೇಟ್ ಟ್ಯಾಕ್ಸ್ ಅನ್ನು ಸುಮಾರು 736 ಕೋಟಿ ರೂಪಾಯಿಗಳಷ್ಟು ಓವರ್ ಎಸ್ಟಿಮೇಟ್ ಮಾಡಿದ್ದೀರಿ. ಸೆಂಟ್ರಲ್ ಟ್ಯಾಕ್ಸ್‌ನಲ್ಲೂ 556 ಕೋಟಿ ರೂಪಾಯಿಗಳನ್ನು ಓವರ್ ಎಸ್ಟಿಮೇಟ್ ಮಾಡಿದ್ದೀರಿ. ಇವೆರಡೂ ಸೇರಿದರೆ, ಸುಮಾರು 1,300 ಕೋಟಿ ರೂಪಾಯಿಗಳ ಓವರ್ ಎಸ್ಟಿಮೇಟ್ ಆಗಿದೆ. ಒಟ್ಟಾರೆ ಹೇಳುವುದಾದರೆ, ನೀವು 2,227 ಕೋಟಿ ರೂಪಾಯಿಗಳ ಡಿಫಿಸಿಟ್ ಅನ್ನು ತೋರಿಸಿ, ಹೆಚ್ಚು ರಿವೈಸ್ ಎಸ್ಟಿಮೇಟ್ ಮಾಡಿರತಕ್ಕಂಥದ್ದನ್ನು ನಾವು ನೋಡಬಹುದು. ರಾಜ್ಯ ಸರ್ಕಾರ ಎಷ್ಟರಮಟ್ಟಿಗೆ ಆರ್ಥಿಕ ಇಲಾಖೆಯನ್ನು ನಡೆಸಿಕೊಂಡು ಬಂದಿದೆ, ಇದು ನಮ್ಮ ಮೇಲೆ ಯಾವ ರೀತಿ ಪರಿಣಾಮ ಬೀರುತ್ತದೆ ಎನ್ನತಕ್ಕಂಥಾದ್ದನ್ನು ಇದರಿಂದ ನಾವು ಹೇಳಬಹುದು. ಇನ್ನೊಂದು ಮುಖ್ಯವಾದ ವಿಚಾರವೆಂದರೆ, ಆರ್ಥಿಕ ಇಲಾಖೆಯಲ್ಲಿ ಪಿ.ಡಿ. ಅಕೌಂಟ್ ಎಂದು ಇದೆ. ಈ ಅಕೌಂಟಿನಲ್ಲಿ ಪ್ರತಿವರ್ಷ 300 ಕೋಟಿ ರೂಪಾಯಿಗಳಿಗಿಂತ ಹೆಚ್ಚಿಗೆ ಹಣವನ್ನು ಇಟ್ಟುಕೊಂಡು ಬಂದಿದ್ದಾರೆ. ಸಾಲ ತಂದಂಥ ಹಣವನ್ನು ಖರ್ಚು ಮಾಡದೇ ಅಲ್ಲಿ ಇಟ್ಟು ಅದಕ್ಕೆ ಬಡ್ಡಿಯನ್ನು ಕಟ್ಟಲಾಗುತ್ತಿದೆ. ಈ ಬಗ್ಗೆ ಹೇಳಿದರೆ, ಪರ್ಸನಲ್ ಡಿಪಾಸಿಟ್ ಅಕೌಂಟಿನಲ್ಲಿ ಇಟ್ಟಂಥ ಹಣ ಲ್ಯಾಪ್ಸ್ ಆಗುವುದಿಲ್ಲ

ಎನ್ನುವ ಕಾರಣವನ್ನು ಹೇಳುತ್ತಾರೆ. ಸಾಲ ತಂದಂಥ ಹಣವನ್ನು ಪಿ.ಡಿ. ಅಕೌಂಟಿನಲ್ಲಿಟ್ಟು ಅದಕ್ಕೆ ಬಡ್ಡಿಯನ್ನು ಕಟ್ಟುತ್ತಿದ್ದರೂ, ಈ ಹಣವನ್ನು ಅಭಿವೃದ್ಧಿ ಕೆಲಸಗಳಿಗೆ ಬಿಡುಗಡೆ ಮಾಡುತ್ತಿಲ್ಲ. ಎ.ಜಿ. ರಿಪೋರ್ಟ್ ಪ್ರಕಾರ ಕಳೆದ ಎರಡು-ಮೂರು ವರ್ಷಗಳಿಂದಲೂ ಪ್ರತಿವರ್ಷವೂ ಸುಮಾರು 300 ಕೋಟಿ ರೂಪಾಯಿಗಳಿಗೂ ಹೆಚ್ಚು ಹಣವನ್ನು ಅಲ್ಲಿ ಬ್ಲಾಕ್ ಮಾಡಿರುತ್ತಾರೆ. ಅದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಮಾರ್ಕೆಟಿಂಗ್ ಫೆಡರೇಷನ್ನಿನ ಅಧ್ಯಕ್ಷರು ಗಮನಿಸಬೇಕು. 2000-01ರಲ್ಲಿ ಮಾರ್ಕೆಟಿಂಗ್ ಫೆಡರೇಷನ್ನಿಗೆ ಎನ್ ಸಿ ಡಿ ಸಿ ಯಿಂದ ಸುಮಾರು 18 ಕೋಟಿ ರೂಪಾಯಿ ಸಾಲ ಬಂದಿದೆ. ಈ ಹಣ ಇನ್ನೂ ಪಿ.ಡಿ. ಅಕೌಂಟಿನಲ್ಲೇ ಇದೆ. ಇನ್ನೂ ಮಾರ್ಕೆಟಿಂಗ್ ಫೆಡರೇಷನ್ನಿಗೆ ಕೊಟ್ಟಿಲ್ಲ. ಎ.ಜಿ. ರಿಪೋರ್ಟ್‌ನಲ್ಲಿ ಬರುತ್ತಿರುವ ಪ್ರಕಾರ, ಇದಕ್ಕೆ ಸುಮಾರು ಎರಡೂವರೆ ಕೋಟಿ ರೂಪಾಯಿಗಳಷ್ಟು ಬಡ್ಡಿಯನ್ನು ಸರ್ಕಾರ ಕೊಟ್ಟಿದೆ. ಎ.ಜಿ. ರಿಪೋರ್ಟ್ ಪ್ರಕಾರ ವಿವಿಧ ಇಲಾಖೆಗಳು ಹೊರಗಡೆಯಿಂದ ಸಾಲ ತರುತ್ತವೆ. ಅದಕ್ಕೆ ಆರ್ಥಿಕ ಇಲಾಖೆಯವರು ಗ್ಯಾರಂಟಿ ಕೊಡಬೇಕು. ಆದರೆ, ಇಲ್ಲಿ ಏನಾಗಿದೆ ಎಂದರೆ, ಯಾವ ಯಾವ ಇಲಾಖೆಯವರು ಎಲ್ಲೆಲ್ಲಿಂದ ಸಾಲ ತರುತ್ತಾರೆ, ಅದಕ್ಕೆ ಎಷ್ಟು ಬಡ್ಡಿ ಕೊಡಬೇಕು ಎನ್ನುವುದನ್ನು ಆರ್ಥಿಕ ಇಲಾಖೆಯ ಗಮನಕ್ಕೆ ತರುವುದೇ ಇಲ್ಲ. ಆರ್ಥಿಕ ಇಲಾಖೆಗೆ ಇದರ ಬಗ್ಗೆ ಯಾವುದೇ ಮಾಹಿತಿ ಇಲ್ಲ. ಇಲಾಖೆಗಳವರೇ ನೇರವಾಗಿ ಹೋಗಿ ಸಾಲ ತರುತ್ತಾರೆ. ಅದಕ್ಕೆ ಬಡ್ಡಿ ಮತ್ತು ಅದರ ಇನ್‌ಸ್ಟಾಲ್‌ಮೆಂಟ್‌ಗಳನ್ನು ಕಟ್ಟಬೇಕಾದ ಹೊರೆ ಆರ್ಥಿಕ ಇಲಾಖೆಗೆ ಬರುತ್ತದೆ. ಎಲ್ಲೆಲ್ಲಿಂದ ದುಡ್ಡು ತಂದಿದ್ದಾರೆ, ಎಷ್ಟೆಷ್ಟು ಗ್ಯಾರಂಟಿ ಕೊಟ್ಟಿದ್ದಾರೆ ಎನ್ನುವ ಬಗ್ಗೆ ಆರ್ಥಿಕ ಇಲಾಖೆಗೆ ಯಾವುದೇ ಮಾಹಿತಿಯಿಲ್ಲ. ಸಾಮಾನ್ಯವಾಗಿ, ಆರ್ಥಿಕ ಇಲಾಖೆಯವರ ಅನುಮತಿ ಪಡೆದು, ಅವರ ಕನ್‌ಕರೆನ್ಸ್ ತೆಗೆದುಕೊಂಡು ಸಾಲ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ಈಗ ಆ ವ್ಯವಸ್ಥೆ ಇಲ್ಲವೇ ಇಲ್ಲ. ಫ್ರೀ ಫಾರ್ ಆಲ್ ಎನ್ನುವಂತೆ ಆಗಿದೆ. ಯಾವ ಯಾವ ಇಲಾಖೆಯವರು ಯಾರ ಹತ್ತಿರವಾದರೂ ಮಾತನಾಡಿಕೊಂಡು ಬರಬಹುದು, ಎಷ್ಟು ಸಾಲ ಬೇಕಾದರೂ ತರಬಹುದು. ಅದರ ಹೊರೆ ಮಾತ್ರ ಆರ್ಥಿಕ ಇಲಾಖೆಗೆ ಬರುತ್ತಿದೆ. ಆ ರೀತಿಯಾಗಿ ಕೆಲಸ ನಡೆಯುತ್ತಿದೆ. ಬರತಕ್ಕಂಥ ಹಣದಲ್ಲಿ ಶೇಕಡ 65ರಷ್ಟನ್ನು ಇಂಥ ಸಾಲಗಳಿಗೆ ಬಡ್ಡಿ ಕಟ್ಟುತ್ತಿದ್ದರೆ, ಅಭಿವೃದ್ಧಿ ಕೆಲಸಗಳಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲು ಸಾಧ್ಯವಾಗುತ್ತದೆ? ಆದ್ದರಿಂದ ನನ್ನ ಅನಿಸಿಕೆಯಲ್ಲಿ ಸೆಂಟ್ರಲ್ ಸ್ಕೀಮ್ಸ್‌ಗಳು ಏನಿದ್ದಾರೆ ಅದು ಬೇಸಿಸ್ 50-50 ಇರಬಹುದು ಅಥವಾ 75-25ರಷ್ಟು ಇರಬಹುದು ನಮ್ಮ ಸರ್ಕಾರದ ಪಾಲಾದ ಶೇಕಡ 25ರಷ್ಟು ಹಣವನ್ನು ಕಟ್ಟಲು ಸಾಧ್ಯವಾಗದೇ, ಕೇಂದ್ರದ ಯೋಜನೆಗಳನ್ನು ನಾವು ಪಡೆದುಕೊಳ್ಳಲು ಆಗುತ್ತಿಲ್ಲ. ಇದಕ್ಕೆ ದೊಡ್ಡ ಕಾರಣವೆಂದರೆ, ಕೇವಲ ಶೇಕಡ 25ರಷ್ಟು ಮ್ಯಾಚಿಂಗ್ ಗ್ರಾ್ಯಂಟನ್ನು ನಾವು ಕಟ್ಟಲು ಆಗುತ್ತಿಲ್ಲ. ಹೀಗಾಗಿ, ಕೇಂದ್ರ ಸರ್ಕಾರದ ಯೋಜನೆಗಳನ್ನು ನಾವು ಜಾರಿಗೆ ತರಲು ಆಗುತ್ತಿಲ್ಲ. ಸುಮಾರು 1,300 ಕೋಟಿ ರೂಪಾಯಿಗಳಷ್ಟು ಪೆಂಡಿಂಗ್ ಬಿಲ್ಸ್ ಇದೆ ಎಂದು ಹೇಳುತ್ತಾರೆ. ಇದಕ್ಕೆ ಮುಖ್ಯ ಕಾರಣವೆಂದರೆ, ಮಂಜೂರು ಮಾಡಿಸಿಕೊಂಡ ಯೋಜನೆಗಳಿಗೆ ಕೇಂದ್ರದ ಪಾಲಿನ ಹಣವನ್ನು ಮಾತ್ರ ಬಿಡುಗಡೆ ಮಾಡಿ, ನಮ್ಮ ರಾಜ್ಯದ ಪಾಲಿನ ಹಣವನ್ನು ಬಿಡುಗಡೆ ಮಾಡದಿರುವುದರಿಂದ ಪೆಂಡಿಂಗ್ ಬಿಲ್ಸ್ ಹೆಚ್ಚುತ್ತಾ ಹೋಗುತ್ತಿದೆ. ಅವುಗಳನ್ನು ಯಾವ ರೀತಿ ಕ್ಲಿಯರ್ ಮಾಡುತ್ತೀರಿ ಎನ್ನುವುದು ನಮಗೆ ಅರ್ಥವಾಗುತ್ತಿಲ್ಲ. ಇದನ್ನು ತಾವು ಬಹಳ ಗಂಭೀರವಾಗಿ ಯೋಚನೆ ಮಾಡಬೇಕು ಎನ್ನುವುದು ನನ್ನ ಅನಿಸಿಕೆ.

ಅಧ್ಯಕ್ಷರು : ಸೋಮಶೇಖರ್‌ರವರೇ, ತಾವು ಮಾತನಾಡಲು ಪ್ರಾರಂಭಿಸಿ ಈಗಾಗಲೇ 40 ನಿಮಿಷವಾಯಿತು. ಯಾವಾಗ ಮುಗಿಸುತ್ತೀರಿ?

ಶ್ರೀ ಬಿ. ಸೋಮಶೇಖರ್ : 5-10 ನಿಮಿಷದಲ್ಲಿ ಮಾತನಾಡಿ ಮುಗಿಸುತ್ತೇನೆ. ಆರ್ಥಿಕ ಇಲಾಖೆಯ ಜವಾಬ್ದಾರಿಯನ್ನು ಹೊತ್ತಿರತಕ್ಕಂಥ ಮಾನ್ಯ ಮುಖ್ಯಮಂತ್ರಿಗಳು ಇದರ ಬಗ್ಗೆ ಹೆಚ್ಚು ಆಸಕ್ತಿಯನ್ನು ತೋರಿಸಿಲ್ಲ ಎನ್ನುವುದು ನನ್ನ ಅನಿಸಿಕೆ. ನಾನು ಖಂಡಿತವಾಗಿಯೂ ಹೇಳುತ್ತೇನೆ, ಮುಂದೆ ಬರತಕ್ಕಂಥ ಸರ್ಕಾರವನ್ನು ನೀವು ಸಾಲಗಾರರನ್ನಾಗಿ ಮಾಡಿ ಹೋಗುತ್ತೀರಿ. ಅದರ ನೈತಿಕ ಜವಾಬ್ದಾರಿಯನ್ನು ನೀವೇ ಹೊರಬೇಕಾಗುತ್ತದೆ. ಇನ್ನು ಬೇರೆ ಬೇರೆ ಇಲಾಖೆಗಳ ಬಗ್ಗೆ ಹೇಳುವುದಾದರೆ, ಸಮಾಜ ಕಲ್ಯಾಣ ಇಲಾಖೆಯಿಂದ ಗಂಗಾ ಕಲ್ಯಾಣ ಯೋಜನೆಯಲ್ಲಿ ಒಂದು ವರ್ಷಕ್ಕೆ ಐದು ಸಾವಿರ ಬೋರ್‌ವೇಲ್‌ಗಳನ್ನು ತೆಗೆಸುತ್ತೇವೆ ಎನ್ನುವ ಮಾತನ್ನು ಕಾಗೋಡು ತಿಮ್ಮಪ್ಪನವರು ಹೇಳಿದರು. ಅದಕ್ಕೆ ಕಳೆದ ವರ್ಷ 30 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಲ್ಲ. ಈ ವರ್ಷಕ್ಕೆ ಇನ್ನೂ 37 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿಲ್ಲ. ಮತ್ತು ಸ್ಪೆಷಲ್ ಕಾಂಪೊನೆಂಟ್ ಪ್ಲಾನನ್ನು ಕ್ರೋಢೀಕರಿಸಿ ಪೂಲ್ ಫಂಡ್ ಎಂದು ಮಾಡಿ ಇಟ್ಟುಕೊಂಡಿದ್ದೀರಿ. ಕೆಲವು ಇಲಾಖೆಗಳ ಕೆಲವು ಪ್ರಮುಖ ಯೋಜನೆಗಳಿಗೆ ಪೂಲ್ ಫಂಡನ್ನೂ ಸಹ ಕೊಡಲು ಆಗುತ್ತಿಲ್ಲ. ಎಜ್ಯುಕೇಷನ್, ಇರಿಗೇಷನ್ ಮತ್ತು ಹೌಸಿಂಗ್‌ನಂಥ ಪ್ರಮುಖವಾದ ಕಾರ್ಯಕ್ರಮಗಳಿಗೆ ಹೆಚ್ಚು ಹಣವನ್ನು ಒದಗಿಸಬೇಕು. ನಮ್ಮ ಸರ್ಕಾರ ಇದ್ದಾಗ ನಾವು ಅದನ್ನೇ ಮಾಡಿದ್ದೆವು. ಎಜ್ಯುಕೇಷನ್, ಇರಿಗೇಷನ್ ಮತ್ತು ಹೌಸಿಂಗ್ ಇವುಗಳು ಬಹಳ ಪ್ರಮುಖವಾದಂಥ ಕಾರ್ಯಕ್ರಮಗಳು. ಇವುಗಳಿಗೆ ಹೆಚ್ಚು ಒತ್ತು ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಜನರಲ್ ಆಡ್ಮಿನಿಸ್ಟ್ರೇಷನ್ ವಿಷಯ ಹೇಳುವುದಾದರೆ, ಅದಕ್ಕಾಗಿ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿದಿರಿ, ಆಡಳಿತ ಸುಧಾರಣೆ ಮಾಡುತ್ತೇವೆ ಎಂದು ಹೇಳಿದಿರಿ. ಅವರು ತಮ್ಮ ವರದಿಯನ್ನು ಕೊಟ್ಟರು. ಆ ವರದಿ ಏನಾಯಿತು ಎಂಬುದು ಗೊತ್ತಿಲ್ಲ. ಟ್ರಾನ್ಸ್‌ಫರ್ ಪಾಲಿಸಿ ತರುತ್ತೇವೆ, ಪಾರದರ್ಶಕ ಆಡಳಿತವನ್ನು ತರುತ್ತೇವೆ ಎಂದು ಶ್ರೀ ಖರ್ಗೆಯವರು ಹೇಳಿದರು. ಟ್ರಾನ್ಸ್‌ಫರ್ ಪಾಲಿಸಿ ತರುತ್ತೇವೆ, ಬಹಳ ಪಾರದರ್ಶಕವಾಗಿ ಸಾಮಾಜಿಕ ನ್ಯಾಯವನ್ನು ಕೊಡುತ್ತೇವೆ ಎಂದು ನಮ್ಮ ಸರ್ಕಾರವಿದ್ದಾಗ ನಾವು ಬೊಬ್ಬೆ ಹೊಡೆದುಕೊಂಡಿರಲಿಲ್ಲ. ನಾನು ಅಂದುಕೊಂಡಿದ್ದೆ, ಟ್ರಾನ್ಸ್‌ಫರ್ ಪಾಲಿಸಿ ಎಂದರೆ ನಾವು ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ, ವರ್ಗಾವರ್ಗಿಯಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ. ನಾವು ಇರುವುದು ಪಾಲಿಸಿ ಮಾಡುವುದಕ್ಕೆ, ಶಾಸಕರು, ಮಂತ್ರಿಗಳು ಯೋಜನೆಗಳನ್ನು ತಯಾರಿಸಿ, ಕಾರ್ಯಕ್ರಮಗಳನ್ನು ಹಾಕಿ ಕಾರ್ಯಾಂಗಕ್ಕೆ ಕೊಡುತ್ತೇವೆ, ಆ ಕಾರ್ಯಾಂಗವನ್ನು ಜವಾಬ್ದಾರರನ್ನಾಗಿ ಮಾಡುತ್ತೇವೆಂದು ನಾವು ತಿಳಿದುಕೊಂಡಿದ್ದರೆ, ಪ್ರತಿಯೊಂದಕ್ಕೂ ನೀವು ಇಂಟರ್‌ಫಿಯರೆನ್ಸ್ ಮಾಡುವುದಾಗಿದೆ. ವರ್ಗಾವರ್ಗಿಯಲ್ಲಿ ಇದು ದಂಧೆಯಾಗಿದೆ. ಟ್ರಾನ್ಸ್‌ಫರ್ ಪಾಲಿಸಿ ಮಾಡುತ್ತೇವೆಂದು ಹೇಳಿದ ಮೇಲೆ ಇಷ್ಟು ದಂಧೆಯಾಗಿದೆ. ವರ್ಗಾವರ್ಗಿಯಲ್ಲಿ ನೀವು ಒಂದನ್ನೂ ಅಧಿಕಾರಿಗಳಿಗೆ ಬಿಟ್ಟಿಲ್ಲ. ಅಧಿಕಾರಿಗಳು ಮಾಡುತ್ತಾರೆ, ಮಂತ್ರಿಗಳಿಂದ, ಮುಖ್ಯಮಂತ್ರಿಗಳಿಂದ ಮತ್ತೆ ಹಾಕುತ್ತಾರೆ. ಆದುದರಿಂದ, it is a farce. Transfer Policy announced by you is a farce. ಯಾರ್‍ಯಾರು ಒಂದು ಕಡೆ ಸಸ್ಪೆಂಡ್ ಆಗುತ್ತಾರೆ, ಅವರನ್ನು ತಂದು ಇಲ್ಲಿಗೆ ಹಾಕುವುದು ಮತ್ತೆ ಶಾಸಕರು ಯಾರಿದ್ದಾರೆ, ಅವರ ಜಾತಿಯವರನ್ನೂ ಇಲ್ಲಿಯೇ ಹಾಕುವುದು.

ನನ್ನ ಕ್ಷೇತ್ರದಲ್ಲಿ ಒಬ್ಬ ಪೇದೆಗೆ ಒಂದು ಸ್ಥಳದಲ್ಲಿದ್ದು 4-5 ವರ್ಷಗಳಾಗಿದೆ ಎಂದು ಹೇಳಿ ಎಸ್‌ಪಿಯವರು ಟ್ರಾನ್ಸ್‌ಫರ್ ಮಾಡಿದರೆ, 4-5 ದಿವಸಗಳಲ್ಲಿಯೇ ಆತನು ವಾಪಸ್ಸು ಹೋಗಿದ್ದಾನೆ. ಈ ಬಗ್ಗೆ ನಾನು ಹೋದ ಬಾರಿ ಹೇಳಿದ್ದೆ. ಕಾರಣ ಕೇಳಿದರೆ, ಮುಖ್ಯಮಂತ್ರಿಗಳ ಕಛೇರಿಯಿಂದ ಫೋನ್ ಬಂತೆಂದು ಎಸ್‌ಪಿಯವರು ಹೇಳುತ್ತಾರೆ. ಅವರಿಂದ ಹೋಗಿದೆ ಎಂದು ನಾನು ಹೇಳುವುದಿಲ್ಲ. ಎಷ್ಟರಮಟ್ಟಿಗೆ ಅಧಿಕಾರಿಗಳಿಗೆ ಭಯವಿದೆ ಎನ್ನುವುದನ್ನು ಇದು ತೋರಿಸುತ್ತದೆ. ಯಾವೊಬ್ಬ ಹೋಂಮಿನಿಸ್ಟರ್‌ಗೆ ಒಬ್ಬ ಎಸ್‌ಐ, ಒಬ್ಬ ಪಿಸಿಯನ್ನು ವರ್ಗ ಮಾಡುವುದಕ್ಕೆ ಅವರಿಗೆ ಅಧಿಕಾರವಿಲ್ಲವೆಂದರೆ, ಹೇಗೆ? ನೀವು ಎಲ್ಲಿ ಫೇಲ್ಯೂರ್ ಆಗಿದ್ದೀರಿ ಎಂಬುದನ್ನು ನಾನು ನೇರವಾಗಿ ಹೇಳುತ್ತೇನೆ, ನೀವು ಎಲ್ಲಾ ಶಾಸಕರನ್ನೂ ಪ್ಲೀಸ್ ಮಾಡುವುದಕ್ಕೆ ಹೊರಟಿದ್ದೀರಿ ಎಂದು ನಾನು ನೇರವಾಗಿ ಆಪಾದನೆ ಮಾಡುತ್ತೇನೆ. ನಿಮ್ಮ ಆಡಳಿತ ಬಿಗಿ ಇರಬೇಕಾದರೆ, you should have resisted the political pressure ನೀವು ಹೇಳಿದ್ದೀರಿ, ಬಹಳ ಸಂತೋಷ. ನಾನು 30 ವರ್ಷಗಳಿಂದ ಅಧಿಕಾರದಲ್ಲಿದ್ದೇನೆ, ನೀವೊಬ್ಬರೇ ಹೀರೋ ಅಲ್ಲವೆಂದು ಹೇಳಿದ್ದೀರಿ. ನೀವು ಹೀರೋ ಆಗಿ ಬಹಳ ಸಂತೋಷ. ಹೀರೋ ಆಗುವುದು ಕೇವಲ ಇಷ್ಟು ವರ್ಷಗಳಿಂದ ಇರುವುದರಿಂದಲ್ಲ. ಒಂದು ದಿವಸದಲ್ಲಿಯೇ ಹೀರೋ ಆಗುವ ಸಂದರ್ಭ ಬರುತ್ತದೆ. ಆ ಸಂದರ್ಭವನ್ನು ತೋರಿಸಬೇಕು. you have to show your mettle. you have to rise upto the occasion ಅದನ್ನು ಬಿಟ್ಟು ಎಸ್‌ಐ ಕರೆಪ್ಟ್ ಇದ್ದಾನೆ, ಅವನ ಮೇಲೆ ಆಪಾದನೆಗಳಿವೆ ಎಂದು ಸಸ್ಪೆಂಡ್ ಮಾಡಿಸಿದರೆ, ಶಾಸಕರು ಬರುತ್ತಾರೆ, ನೀವು ಆತನನ್ನು ರೀ-ಇನ್‌ಸ್ಟೇಟ್ ಮಾಡುತ್ತೀರಿ. ನೀವು ಮುಂದಿನ ಯೋಚನೆ ಇಟ್ಟು, ಶಾಸಕರು ಬೇಕಾಗುತ್ತಾರೆಂದು ಮಾಡಿ ಎಲ್ಲಾ ಭ್ರಷ್ಟ ಅಧಿಕಾರಿಗಳು, ಬೆಂಗಳೂರು ರೂರಲ್ ಡಿಸ್ಟ್ರಿಕ್ಟ್ ಇರಬಹುದು, ಎಲ್ಲಾ ಕಡೆ ಇರಬಹುದು, ಯಾರ್‍ಯಾರು ಎಲ್ಲೆಲ್ಲಿದ್ದಾರೆ, ಅವರನ್ನು ಅಲ್ಲಲ್ಲಿಯೇ ಹಾಕಿ, ಅವರನ್ನು ಪ್ಲೀಸ್ ಮಾಡುವುದಕ್ಕೆ ಹೋಗಿ ನಿಮ್ಮ ಹಿಡಿತವನ್ನು ಕಳೆದುಕೊಂಡಿದ್ದೀರಿ ಎಂಬುದು ನನ್ನ ಅನಿಸಿಕೆ. ಏತಕ್ಕಾಗಿ ನೀವು ಫೇಲ್ಯೂರ್ ಆಗಿದ್ದೀರೆಂದರೆ ಭ್ರಷ್ಟ ಅಧಿಕಾರಿಗಳನ್ನು ಹಾಕಿರುವುದರಿಂದ ಇದಕ್ಕೆ ನಾನು ಹೇಳುವುದು ತೆಗೆದುಕೊಳ್ಳಿ. ನೀವೀನಾದರೂ ಯಶಸ್ವಿಯಾಗ ಬೇಕಾದರೆ, ಅದನ್ನು ಮೊದಲು ಇಂಡಿಪೆಂಡೆಂಟ್ ಮಾಡಿ. ಪೊಲೀಸ್ ಇಲಾಖೆಯನ್ನು ಮೊದಲನೆಯದಾಗಿ ತಾವು ಸ್ವಲ್ಪ ಇನಿಷಿಯೇಷನ್ ನೀವು ಟ್ರಾನ್ಸ್‌ಫರ್ ಮಾಡುವುದಕ್ಕೋ ಅಥವಾ ಪಾಲಿಸಿ ಮಾಡುವುದಕ್ಕಾಗಿ ಇರುವುದೇ? we are here to make policies, not to make transfers. But unfortunately you have taken over the transfers and left the policies to the officers. ಆಫೀಸರ್‌ಗೆ ಪಾಲಿಸಿ ಮಾಡುವುದಕ್ಕೆ ಬರುವುದಿಲ್ಲ, ನಮಗೆ ಪೋಸ್ಟಿಂಗ್ಸ್ ಮಾಡುವುದಕ್ಕೆ ಬರುವುದಿಲ್ಲ. ಹೀಗಾಗಿ ಈ ಸರ್ಕಾರದಲ್ಲಿ ಆಡಳಿತ ಸಂಪೂರ್ಣವಾಗಿ ಹದಗೆಟ್ಟಿದೆ. ನಾನು ಪ್ರತಿಯೊಂದೂ ಹೇಳುತ್ತಿದ್ದೇನೆ. ಪೊಲೀಸ್ ಇಲಾಖೆಯನ್ನು ಇಂಡಿಪೆಂಡೆಂಟ್ ಮಾಡಿ, ಅದಕ್ಕೆನಾದರೂ ಪಾಲಿಸಿ ಮಾಡಿ. ಪಾಲಿಸಿ ಎಂದರೆ, ಯಾರ್‍ಯಾರು ಎಷ್ಟೆಷ್ಟು ವರ್ಷ ಎಗಿಕ್ಯುಟೀವ್ ಜಾಬ್‌ನಲ್ಲಿರುತ್ತಾರೆ, ನಾನ್-ಎಗ್ಸಿಕ್ಯುಟೀವ್‌ನಲ್ಲಿರುತ್ತಾರೆ, ಯಾವ್ಯಾವ ಜಾತಿಯವರನ್ನು ಎಲ್ಲೆಲ್ಲಿ ಹಾಕಬೇಕು, ಅದನ್ನೆಲ್ಲಾ ನೋಡಿ ನಾರ್ಮ್ಸ್ ಹಾಕಿಕೊಡುತ್ತಾರೆಂದರೆ, 25 ವರ್ಷ ಒಂದೇ ಜಿಲ್ಲೆಯಲ್ಲಿ ಇರುವುದು, ಅಲ್ಲಿಯೇ ಸಸ್ಪೆಂಡ್ ಆದವರನ್ನು ಇಲ್ಲಿ ಹಾಕಿಸಿಕೊಳ್ಳುವುದು, ಈ ತರಹವಾದರೆ ಎಲ್ಲಿ ಬಿಗಿ ಸಿಗುತ್ತದೆ? ಆಡಳಿತ ಸುಧಾರಣಾ ಆಯೋಗದ ವರದಿಯಲ್ಲಿ ಏನು

ಕೊಟ್ಟಿದ್ದಾರೆಂಬುದೂ ಗೊತ್ತಿಲ್ಲ. ಯಾವುದೇ ಇಲಾಖೆಯ ಆಡಳಿತದಲ್ಲಿ ರಾಜಕೀಯ ಹಸ್ತಕ್ಷೇಪ ಇರಬಾರದು. ಅದನ್ನು ತರುತ್ತೀರೆಂದು ನಾನಂದು ಕೊಂಡಿದ್ದೆ. ಅದನ್ನು ಜಾರಿಗೆ ತಂದಿಲ್ಲ. ಕೇವಲ ಇದು ಘೋಷಣೆಯಾಗಿದೆ. ಆದುದರಿಂದ, ನಿಮ್ಮ ಆಡಳಿತ ಬಿಗಿ ತಪ್ಪಿದೆ ಎಂಬುದು ನನ್ನ ಒಂದು ಅನಿಸಿಕೆ. ನಾನು ಕಳೆದ ಬಾರಿ ಕೈಗಾರಿಕೆ ಮತ್ತು ಕೆಎಸ್ಎಫ್‌ಸಿ ಬಗ್ಗೆ ಹೇಳಿದ್ದೆ. ಪರಿಶಿಷ್ಟ ಜಾತಿ : ವರ್ಗದವರಿಗೆ ಒಂದು ಕಡೆ ಮೀಸಲಾತಿ ಇದ್ದರೆ, ಇನ್ನೊಂದು ಕಡೆ ಅದನ್ನು ಕಿತ್ತುಕೊಳ್ಳುವ ಹುನ್ನಾರ ನಡೆಯುತ್ತಿದೆ. ಎಲ್ಲೆಲ್ಲಿ ರಿಸರ್ವೇಷನ್ ಇತ್ತು, ಆ ಪೋಸ್ಟ್‌ಗಳನ್ನು ಇವತ್ತು ಜನರಲ್ ಮಾಡುತ್ತಿದ್ದಾರೆ. ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್‌ಗಳನ್ನು ಮುಚ್ಚುತ್ತಿದ್ದಾರೆ. ಸರ್ಕಾರ ಕಾರ್ಯಕ್ರಮಗಳನ್ನು ಕಡಿಮೆ ಮಾಡಿ, ನೇಮಕಾತಿ ಮಾಡುತ್ತಿಲ್ಲ. ಪರಿಶಿಷ್ಟ ಜಾತಿಯವರಲ್ಲಿ ಉದ್ಯೋಗವನ್ನೇ ಪ್ರಮುಖವಾಗಿಟ್ಟು ಕೊಂಡಿರುವವರು, ವಿದ್ಯಾರ್ಥಿಗಳಿಗೆ ಉದ್ಯೋಗ ಸಿಗದೆ ಬಾಗಿಲು ಮುಚ್ಚಿದಾಗ ನಾವು ಬೇರೆ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ. ಅದರ ಬಗ್ಗೆ ಚಿಂತನೆ ಮಾಡಬೇಕೆಂದು ನಾನು ಕಳೆದ ಬಾರಿಯೇ ಹೇಳಿದ್ದೆ. ಅದರ ಬಗ್ಗೆ ಯಾವುದೇ ಚಿಂತನೆ ಮಾಡಲಿಲ್ಲವೆಂಬುದು ನನ್ನ ಅನಿಸಿಕೆ. ಕೆಎಸ್ಎಫ್‌ಸಿ ಲೋನ್‌ಗಳನ್ನು ಕೊಡುತ್ತದೆ, ಅದರಲ್ಲಿ 18 ಪರ್ಸೆಂಟ್ ಹಣವನ್ನು ನಮ್ಮ ನಿರುದ್ಯೋಗಿ ಯುವಕರಿಗೆ ಸ್ವಯಂ ಉದ್ಯೋಗವನ್ನು ಯಾರು ಪ್ರಾರಂಭಿಸುತ್ತಾರೆ, ಅವರಿಗೆ ಎಸ್‌ಎಸ್‌ಎಫ್‌ಸಿಯಲ್ಲಿರುವ ಹಾಗೆ ಕಡಿಮೆ ಬಡ್ಡಿದರದಲ್ಲಿ ಪರಿಶಿಷ್ಟ ಜಾತಿಯ ಯುವಕರಿಗೂ ಕೊಡಬೇಕೆಂಬುವ ಬಗ್ಗೆ ನಿಯಮಾವಳಿಗಳನ್ನು ಬದಲಾವಣೆ ಮಾಡಬೇಕು. ಅದರ ಬಗ್ಗೆ ಚಿಂತನೆ ಮಾಡಿ. ಉದ್ಯೋಗದಲ್ಲಿ ಪಬ್ಲಿಕ್ ಸೆಕ್ಟಾರ್‌ನಲ್ಲಿ ಏನು ಮೀಸಲಾತಿ ಇತ್ತು, ಅದನ್ನು ಪ್ರೈವೇಟ್ ಸೆಕ್ಟಾರ್‌ನಲ್ಲಿಯೂ ಕೊಡಬೇಕು ಎಂದು ನಾನು ಹೋದ ಸಾರಿ ಹೇಳಿದ್ದೆ. ಅದಕ್ಕೆ ಕಾಗೋಡು ತಿಮ್ಮಪ್ಪನವರೂ ಒಪ್ಪಿದ್ದರು. ನಮ್ಮ ರಾಜ್ಯ ಸರ್ಕಾರದಲ್ಲಿ ಅದನ್ನು ಪ್ರಾರಂಭಿಸಿದ್ದೆವು. ನಮ್ಮ ಸರ್ಕಾರದಿಂದ ಎಲ್ಲಾ ಸವಲತ್ತುಗಳನ್ನೂ ಅವರಿಗೆ ಕೊಡುತ್ತೇವೆ.

(ಶ್ರೀ ಎ.ಎಸ್. ಗುರುಸ್ವಾಮಿಯವರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು)

ನೀರು, ವಿದ್ಯುತ್, ಜಮೀನು, ಲೈಸೆನ್ಸ್‌ನ್ನೂ ಅವರಿಗೆ ಕೊಡುತ್ತೀರಿ. ಆದರೆ, ಉದ್ಯೋಗ ಕೊಡಬೇಕಾದರೆ ಅಲ್ಲಿ ಮಾತ್ರ ರಿಸರ್ವೇಷನ್ ಇಲ್ಲ. ನೈಪುಣ್ಯತೆ ಇರುವ ಕ್ಷೇತ್ರಗಳಲ್ಲಿ ಮೀಸಲಾತಿ ಇಲ್ಲದಿದ್ದರೆ, ಆ ಹುಡುಗರು ಎಲ್ಲಿ ಹೋಗುತ್ತಾರೆ? ಅಲ್ಲಿ ಮೀಸಲಾತಿ ಕೊಡಬೇಕು. ಇದನ್ನು ಪ್ರೊಗ್ರೆಸ್ಸೀವ್ ಆಗಿ ಚಿಂತನೆ ಮಾಡಬೇಕೆಂದು ನಾನು ಹೇಳಿದ್ದೆ, ಅದರ ಬಗ್ಗೆ ಯೋಚನೆ ಮಾಡಿಲ್ಲ. ಅನೇಕ ಕ್ಷೇತ್ರಗಳಲ್ಲಿ ಮೀಸಲಾತಿ ದೊರಕಿಸಿಕೊಡುತ್ತಿಲ್ಲ. ಲಿಕ್ಕರ್ ಶಾಪ್‌ಗೆ ಅನುಮತಿ ಕೊಡುತ್ತಿದ್ದೀರಿ, ಬುಕಿಂಗ್ ಸೆಂಟರ್‌ಗೆ ಅನುಮತಿ ಕೊಡುತ್ತೀರಿ, ಟೂರಿಸಂ, ಕೆಎಸ್‌ಆರ್‌ಟಿಸಿ ಇರಬಹುದು ಅದರಲ್ಲಿ ರಿಸರ್ವೇಷನ್ ಇಲ್ಲ. ಆ ಹುಡುಗರಿಗೇನಾದರೂ ಸ್ವಯಂ ಉದ್ಯೋಗ ಕಲ್ಪಿಸಿಕೊಡುವ ಕಾರ್ಯಕ್ರಮ ಏನಿದೆ, ಅದರಲ್ಲಿ ಇವರಿಗೆ ಆದ್ಯತೆಕೊಡುವ ಕೆಲಸವನ್ನು ಮಾಡಿಲ್ಲವೆಂಬುದು ನನ್ನ ಅನಿಸಿಕೆ. ಅದರ ಬಗ್ಗೆ ಈಗಲಾದರೂ ಇನ್ನೂ 2 ವರ್ಷ ಇದೆ. ಅದರ ಬಗ್ಗೆ ಚಿಂತಿಸುತ್ತೀರೆಂದು ಅಂದುಕೊಂಡಿದ್ದೇನೆ. ಕಂದಾಯ ಇಲಾಖೆಯ ಬಗ್ಗೆ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಅನೇಕ ಸಾರಿ ನಾನು ಆ ವಿಚಾರದ ಬಗ್ಗೆ ಮಾತನಾಡಿದ್ದೇನೆ. ಸರ್ಕಾರಿ ಜಮೀನುಗಳನ್ನು ಸರ್ವೆ ಮಾಡಿಸಿ, ಅದನ್ನು ಸರ್ಕಾರವೇ ವಹಿಸಿಕೊಳ್ಳುವ ಕೆಲಸವನ್ನು ನೀವು ಮಾಡಿಲ್ಲ. ಬೆಂಗಳೂರಿನ ಸುತ್ತಮುತ್ತ 2000 ಎಕರೆ ಸರ್ಕಾರ ಜಮೀನಿದ್ದು, ಸಾವಿರಾರು ಕೋಟಿ ರೂಪಾಯಿ ಬೆಲೆಬಾಳುವ ಜಮೀನಿದೆ ಎಂದು ನಾವು ಪ್ರಯತ್ನಿಸಿ ಒಂದು ಬುಕ್ ತಯಾರಿಸಿದ್ದೆವು. ಅದನ್ನು ಇವತ್ತು ಯಾರ್‍ಯಾರೋ

ಭೂಗಳ್ಳರು ಹೊಡೆದುಕೊಂಡು ಹೋಗುತ್ತಿದ್ದಾರೆ. ಮೊನ್ನೆ ಬಿಡದಿಯಲ್ಲಿ ಕೊಲೆಯಾಗಿದೆ. ಅದಕ್ಕೆ ಸರ್ಕಾರದ 39 ಎಕರೆ ಜಮೀನು ಏನಿದೆ, ಸುಮಾರು 10-15 ಕೋಟಿ ರೂಪಾಯಿ ಬೆಲೆ ಬಾಳುವ ಜಮೀನನ್ನು ಉಳಿಸುವುದಕ್ಕೆ ಹೋಗಿ ಅದರಿಂದಾಗಿಯೇ ಕೊಲೆಯಾಗಿರುವುದು. ನಾಳೆ ಅವಕಾಶ ಕೊಟ್ಟರೆ, ನಾನು ಅದರ ಬಗ್ಗೆ ಮಾತನಾಡುತ್ತೇನೆ. ಸರ್ಕಾರಿ ಜಮೀನು ಎಲ್ಲೆಲ್ಲಿದ ಎಂಬ ಬಗ್ಗೆ ತಾವು ಹೇಳಿಕೆ ಕೊಟ್ಟಿದ್ದೀರಿ. ನಮ್ಮ ಕಾಲದಲ್ಲಿ ಅದನ್ನು ಐಡೆಂಟಿಫೈ ಮಾಡಿ, ಒಂದು ಬುಕ್ ತಯಾರಿಸಿದ್ದೇವೆ. ಅದರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಮತ್ತೆ ಇನ್ನೊಂದು ಕಾರ್ಯಕ್ರಮವನ್ನು ಹಾಕಿ ಕೊಂಡಿದ್ದೆವು, ಆದರೆ ಬಹಳ ಮಂದಗತಿಯಲ್ಲಿ ಹೋಗುತ್ತಿದೆ. ಸರ್ಕಾರಿ ಜಮೀನುಗಳಲ್ಲಿ ಬಡವರೇನು ಮನೆಗಳನ್ನು ಕಟ್ಟಿದ್ದಾರೆ, ಅಲ್ಲಿ ತೊಂದರೆ ಇದೆ, ಅದಕ್ಕೆ ಪ್ರಥಮಬಾರಿಗೆ 20-25 ವರ್ಷಗಳಿಂದ ಹತ್ತಾರು ಲಕ್ಷ ಗುಡಿಸಲುಗಳನ್ನು ಕಟ್ಟಿದ್ದಾರೆ. ಅವರಿಗೆ ಅನ್ಯಕ್ರಾಂತ ಮಂಜೂರಿ ಮಾಡಿಸಿಕೊಳ್ಳುವುದು ಕಷ್ಟ. ಅವರಿಗೆ ಅದನ್ನು ಸಕ್ರಮ ಮಾಡಬೇಕೆನ್ನುವ ಕಾನೂನಿಗೆ 1999 ತಿದ್ದುಪಡಿ ತಂದು, ಲ್ಯಾಂಡ್ ರೆವಿನ್ಯೂ ಆಕ್ಟ್ ಸೆಕ್ಷನ್ 94(ಸಿ)ಯನ್ನು ಜಾರಿ ಮಾಡಿದ್ದೆವು. ಸೆಕ್ಷನ್ 94(ಬಿ) ಉಳುವವನಿಗೆ ಟೈಂ ಎಕ್ಸಟೆಂಡ್ ಮಾಡುವುದು, ಫಾರಂ ನಂ. 53 ಹಾಕುವುದಾಗಿದ್ದು, ಸೆಕ್ಷನ್ ಎಂದು ಒಂದು 94(ಸಿ), ಹೊಸ ಕಾನೂನಿಗೆ ತಿದ್ದುಪಡಿ ತಂದಿದ್ದೇವು ಮನೆಗಳಿಗೆ ಹಕ್ಕುಪತ್ರಗಳನ್ನು ಕೊಡಬೇಕೆಂದು ಮಾಡಿದ್ದೆವು. ಮಾಗಡಿ ಇರಬಹುದು, ಪ್ರತಿಯೊಂದು ತಾಲ್ಲೂಕಿನಲ್ಲಿಯೂ 4-5 ಸಾವಿರ ಇದೆ. ಇದನ್ನು ಸಮಾರೋಪಾದಿಯಲ್ಲಿ ಮಾಡಬೇಕು.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ತಾವು ತಂದ ಕಾನೂನಿನಲ್ಲಿ ವ್ಯತ್ಯಾಸ ಏನಿದೆ ಎಂಬುದನ್ನು ನೋಡಬೇಕು. ಉಳುವವನಿಗೆ ಎರಡೂವರೆ ಎಕರೆಗೆ 1,213 ರೂಪಾಯಿ ಬೀಳುತ್ತದೆ. ಆದರೆ, ಗುಡಿಸಲು ಕಟ್ಟಿರುವವರಿಗೆ ಅದನ್ನು ರೆಗ್ಯುಲರೈಜ್ ಮಾಡಿದ್ದಕ್ಕೆ 5 ಸೆಂಟ್ಸ್‌ಗೆ 14 ಸಾವಿರ ರೂಪಾಯಿ ಬೀಳುತ್ತದೆ. ಯಾರು ನಿವೇಶನ ರಹಿತ ಇದ್ದಾನೆ ಅವನು ಗುಡಿಸಲು ಕಟ್ಟಿಕೊಂಡಿದ್ದಾನೆ, ಅವನಿಗೆ 5 ಸೆಂಟ್ಸ್‌ಗೆ 16 ಸಾವಿರ ರೂಪಾಯಿ ಬೀಳುತ್ತದೆ, ಭೂಮಿಯನ್ನು ರೆಗ್ಯುಲರೈಜ್ ಮಾಡಿದ್ದಕ್ಕೆ ಎರಡೂವರೆ ಎಕರೆಗೆ 1,400 ರೂಪಾಯಿ ಬೀಳುತ್ತದೆ. ಆ ವ್ಯತ್ಯಾಸವೇನಿದೆ, ಅದನ್ನು ಸರಿಪಡಿಸಬೇಕು. ಅವನಿಗೆ ಮಾರುಕಟ್ಟೆ ರೇಟ್ ಬೀಳುತ್ತದೆ. ನಿವೇಶನ ರಹಿತರಿಗೆ ಫ್ರೀ ಕೊಡುತ್ತೇವೆ. ಅದೇ ರೀತಿಯಲ್ಲಿ ಕಡಿಮೆ ಮಾಡಲು ಸಾಧ್ಯವಾದರೆ ಮಾನ್ಯ ಕಂದಾಯ ಸಚಿವರು ಕಡಿಮೆ ಮಾಡಿಸಿಕೊಡಬೇಕು.

12.40 ಪಿಎಂ

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಇದು ಬಹಳ ಪ್ರಮುಖವಾದಂಥ ನಿರ್ಧಾರ ನಾವು ತೆಗೆದುಕೊಂಡಿದ್ದು. ಪ್ರತಿ ತಾಲ್ಲೂಕಿನಲ್ಲಿ ನಾವು ಹೋದಾಗೆಲ್ಲಾ 20-25 ವರ್ಷಗಳಿಂದ ಏನು ಮನೆಗಳನ್ನು ಕಟ್ಟಿಸಿಕೊಂಡಿದ್ದಾರೆ, ಅವರಿಗೆ ಕುಡಿಯುವ ನೀರು ಕೊಡುವುದಕ್ಕಾಗುತ್ತಿಲ್ಲ, ರಸ್ತೆ ಮಾಡುವುದಕ್ಕೆ ಆಗುತ್ತಿಲ್ಲ, ವಿದ್ಯುತ್ ಇಲ್ಲ ಎಂಬುದನ್ನು ಕಾಣುತ್ತೇವೆ. ಕಾರಣವೇನೆಂದರೆ, ಅನ್ಯಕ್ರಾಂತ ಆಗಿಲ್ಲ. ಅನಧಿಕೃತವಾಗಿ ಅವರು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅದರ ಬಗ್ಗೆ ಯಾರೂ ಚಿಂತನೆ ಮಾಡಿರಲಿಲ್ಲ. ಆಗ ನಾವು ಸೆಕ್ಷನ್ 94(ಸಿ)ಗೆ ತಿದ್ದುಪಡಿ ತಂದ ಮೇಲೆ ಉಳ್ಳಾಲದ ಮಂತ್ರಿಗಳಿದ್ದಾರೆ, ಅವರು, ತಮ್ಮ ಕ್ಷೇತ್ರದಲ್ಲಿ 8-10 ಸಾವಿರ ಮನೆಗಳನ್ನು ರೆಗ್ಯುಲರೈಜ್ ಮಾಡಿಸಿದ್ದೇವೆಂದು ಹೇಳುತ್ತಿದ್ದರು. ಯಾರ್‍ಯಾರು ಆಸಕ್ತಿ ವಹಿಸಿದ್ದಾರೆ, ಅವರು ಪ್ರತಿಯೊಂದು ತಾಲ್ಲೂಕಿನಲ್ಲೂ ಮನೆಗಳನ್ನು ರೆಗ್ಯುಲರೈಜ್ ಮಾಡುತ್ತಾರೆ. ನನ್ನ ದೃಷ್ಟಿಯಲ್ಲಿ ಹಣ ಕಟ್ಟುವಂತೆ

ಮಾಡಬಾರದು. ಅವರೆಲ್ಲಾ ಬಡವರೇ, ಜಮೀನುಗಳನ್ನು ಯಾರು ಸಾಗುವಳಿ ಮಾಡುತ್ತಿದ್ದಾರೆ ಆ ಬಡವರಿಂದ ಹಣ ಕಲೆಕ್ಟ್ ಮಾಡಬೇಡಿ, ಅರಿಯರ್ಸ್ ಆಫ್ ಲ್ಯಾಂಡ್ ರೆವಿನ್ಯೂ ಕಲೆಕ್ಟ್ ಮಾಡಿ ಎಂದು ಹೇಳಿದ್ದೆ. ಅವರಿಗೆ ಅಧಿಕೃತವಾಗಿ ಹಕ್ಕುಪತ್ರ ಕೊಟ್ಟರೆ, ಏರಿಯಾ ಡೆವಲಪ್‌ಮೆಂಟ್ ಆಗುತ್ತದೆ, ಅವರಿಗೆ ಎಲ್ಲಾ ಸವಲತ್ತುಗಳೂ ಸಿಗುತ್ತವೆ, ಆ ಮನೆಗೆ ನಾನೇ ಒಡೆಯ ಎಂಬ ಸಮಾದಾನ ಸಿಗುತ್ತದೆ. ನಾವು ಕಾನೂನಿಗೆ ತಿದ್ದುಪಡಿ ಮಾಡಿದ ಮೇಲೆ ಇದನ್ನು ನೀವು ಸಮರೋಪಾದಿಯಲ್ಲಿ ತೆಗೆದುಕೊಳ್ಳಬೇಕಾಗುತ್ತದೆ. ಮಾನ್ಯ ಜಯಪ್ರಕಾಶ್ ಹೆಗ್ಡೆಯವರು ವ್ಯತ್ಯಾಸವೇನಿದೆ ಈ ಜಮೀನಿಗೂ ಮತ್ತು ಮನೆ ಕಟ್ಟಿಕೊಂಡಿರುವುದಕ್ಕೂ ಎಂದು ಹೇಳಿದರು, ನನ್ನ ದೃಷ್ಟಿಯಲ್ಲಿ ನೀವು ಬಡವರಿಗೆ ಮುಫತ್ ಆಗಿ ಮಾಡಬೇಕು.

ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) : ರೆವಿನ್ಯೂ ಇಲಾಖೆಯಲ್ಲಿ, ರೆಗ್ಯುಲರೈಜ್ ಮಾಡಬೇಕಾದರೆ, ಸೆಕ್ಷನ್ 94(ಸಿ)ಯಲ್ಲಿ ಅರ್ಜಿ ಕೊಟ್ಟು ಅದಕ್ಕೆ ಹಣವನ್ನು ಕಟ್ಟಬೇಕು. ನಂತರ, ಗ್ರಾಮ ಪಂಚಾಯಿತಿಯವರು ಪುರಸಭೆಗೆ ಮತ್ತೆ ಅವರು ಡೆವಲಪ್‌ಮೆಂಟ್ ಚಾರ್ಜ್ ಕಟ್ಟಿ ಸೇರಿಕೊಳ್ಳಬೇಕಾಗುತ್ತದೆ. ಅಷ್ಟರಲ್ಲಿ ಮಾರ್ಕೆಟ್ ವಾಲ್ಯೂಗಿಂತ 2-3 ಪಟ್ಟು ಜಾಸ್ತಿಯಾಗುತ್ತದೆ. ಸರ್ಕಾರ ಹೊಸ ಆದೇಶ ಹೊರಡಿಸದಿದ್ದರೆ, ಇದು ಕಾರ್ಯರೂಪಕ್ಕೆ ಬರುವುದಿಲ್ಲವೆಂದು ನಾನು ಹೇಳುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನಮ್ಮಲ್ಲಿ ಹಣ ಕಟ್ಟದೆ ಜನರು ಇದಕ್ಕೋಸ್ಕರ ಕಾಯುತ್ತಿದ್ದಾರೆ.

ಶ್ರೀ ಬಿ. ಸೋಮಶೇಖರ್ : ನಾನು ನನ್ನ ತಾಲ್ಲೂಕಿನ ಬಗ್ಗೆ ರಿವ್ಯೂ ಮಾಡಿದೆ. ನಾನು ಮಂತ್ರಿಯಾಗುವುದಕ್ಕೆ ಮೊದಲೇ ನನಗೆ 4 ಸಾವಿರ ಪ್ರಕರಣಗಳು ಸಿಕ್ಕಿತ್ತು. ಅವುಗಳನ್ನು ಹೇಗೆ ಅನ್ಯಕ್ರಾಂತ ಮಾಡುವುದು? ಹೇಗೆ ಹಕ್ಕು ಪತ್ರ ಕೊಡುವುದು ಎಂಬ ಬಗ್ಗೆ ಚಿಂತನೆ ಆಗಿತ್ತು? ಅದೃಷ್ಟವಶಾತ್, ನನಗೆ ಅವಕಾಶ ಸಿಕ್ಕಿದಾಗ ನಾನು ಕಾನೂನಿಗೆ ತಿದ್ದುಪಡಿ ಮಾಡಿದೆ. ಈಗ ಹೋಗಿ ನೋಡಿದರೆ, 10 ಜನರಿಗೂ ಅನ್ಯಕ್ರಾಂತ ಕೊಟ್ಟಿಲ್ಲ. ಕಾರಣವೇನೆಂದರೆ, ಹಣ ಜಾಸ್ತಿ ಅದರಿಂದಾಗಿ ಯಾರೂ ಮುಂದೆ ಬರುತ್ತಿಲ್ಲ. ನೀವು ಕಲೆಕ್ಟ್ ಮಾಡುವುದು ಬೇರೆ, ಗ್ರಾಮ ಪಂಚಾಯಿತಿಯವರು ಕಲೆಕ್ಟ್ ಮಾಡುವುದು ಬೇರೆ. ನನ್ನ ದೃಷ್ಟಿಯಲ್ಲಿ ಎರಡನ್ನೂ ಕೋ-ಆರ್ಡಿನೇಟ್ ಮಾಡಿ ಅವರಿಗೆ ಫ್ರೀಯಾಗಿ ರೆಗ್ಯುಲರೈಜ್ ಮಾಡಬೇಕು. ಬೇಕಾದರೆ ನೀವು ಗ್ರಾಮ ಪಂಚಾಯಿತಿಯವರೆ ಮಿನಿಮಂ ಅಮೌಂಟ್ ಕಟ್ಟುವ ಹಾಗೆ ಮಾಡಬೇಕು. ಸಿಂಗಲ್ ವಿಂಡೋ ಏಜೆನ್ಸಿ ತರಹ ಮಾಡಿ, ಗ್ರಾಮ ಪಂಚಾಯತಿ ಸೆಕ್ರೆಟರಿ, ವಿಲೇಜ್ ಅಕೌಂಟೆಂಟ್ ಇವರಿಬ್ಬರೂ ಸೇರಿ ಮಾಡುವಂತೆ ಮಾಡಿ, ಇದನ್ನು ಸಮರೋಪಾದಿಯಲ್ಲಿ ತೆಗೆದುಕೊಳ್ಳಬೇಕು. ಇದಕ್ಕೆ ಟಾರ್ಗೆಟ್ ಫಿಕ್ಸ್ ಮಾಡಬೇಕು. ಛೇರ್ಮನ್‌ರೆ, ನಿಮ್ಮ ಇಲವಾಲ ಕಡೆ ಬೀದಿಗಳೇ ಬಂದಿವೆ, ಅನ್ಯಕ್ರಾಂತಿ ಆಗಿಲ್ಲ.

ಛೇರ್ಮನ್ : ಇದನ್ನು ನಾನು ಸರ್ಕಾರದ ಗಮನಕ್ಕೆ ತರುತ್ತೇನೆ.

ಶ್ರೀ ಬಿ. ಸೋಮಶೇಖರ್ : ಇದಕ್ಕೆ ಸಮರೋಪಾದಿಯಲ್ಲಿ ಕಾರ್ಯಕ್ರಮ ಹಾಕಿಕೊಳ್ಳಬೇಕು. ಆ ಮನೆಗಳಿಗೆ ಹಕ್ಕುಪತ್ರ ಕೊಡಬೇಕು. ಅದಕ್ಕೆ ಸರಳೀಕರಣ ಮಾಡಿ. ಬಡವರಿಗೆ ಸ್ಮಶಾನಕ್ಕೆ ಜಾಗವಿಲ್ಲ. ನಾವು ಡೇಟ್ ಫಿಕ್ಸ್ ಮಾಡಿ ಒದಗಿಸಿಕೊಡಬೇಕೆಂದು ಮಾಡಿದ್ದೆವು. ಇವತ್ತು ಎಲ್ಲಾ ಸ್ಮಶಾನಗಳನ್ನೂ ಒತ್ತುವರಿ ಮಾಡಿದ್ದಾರೆ. ಕೆಲವು ಬಡವರು, ಹಿಂದುಳಿದಿರುವವರಿಗೆ

ತಮ್ಮ ಹಣವನ್ನೂ ಹೂಳಲೂ ಜಾಗವಿಲ್ಲ. ಪ್ರಬಲವಾಗಿರುವವರು ತನ್ನಲ್ಲಿ 10 ಎಕರೆ ಜಮೀನಿದ್ದರೆ, ಅಲ್ಲಿ 2 ಎಕರೆ ಇದ್ದರೆ ಅದನ್ನೂ ಒತ್ತುವರಿ ಮಾಡಿಕೊಂಡು, ಒಂದು ಗುಂಟೆ ಜಮೀನನ್ನೂ ಸಹ ಬಿಟ್ಟಿಲ್ಲ. ಇದರ ಬಗ್ಗೆ ನಾವು ಕಟ್ಟುನಿಟ್ಟಿನ ಸೂಚನೆ ಕೊಟ್ಟಿದ್ದೆವು. ಏಕೋ, ಇವತ್ತು ಇದು ತಡವಾಗಿದೆ. ನೀವು ಕಟ್ಟುನಿಟ್ಟಾಗಿ ಹೇಳಿ, ಪ್ರತಿಯೊಬ್ಬ ಜಿಲ್ಲಾಧಿಕಾರಿಗಳನ್ನೂ ಜವಾಬ್ದಾರರನ್ನಾಗಿ ಮಾಡಿ, ಒಂದೂ ಸ್ಮಶಾನವಿಲ್ಲದ ಊರು ಇರದಂತೆ ಮಾಡಬೇಕು. ಇಲ್ಲವಾದ ಕಡೆ ಪರ್ಚೇಸ್ ಮಾಡಿಕೊಡಬೇಕು. ಸ್ಮಶಾನ ಜಾಗವನ್ನು ಯಾರು ಒತ್ತುವರಿ ಮಾಡಿದ್ದಾರೆ, ಅದನ್ನು ಸರ್ವೆ ಮಾಡಿಸಿ, ಬಿಡಿಸಬೇಕು. ಅದು ಇಷ್ಟು ದಿವಸಗಳಲ್ಲಿಯೇ ಆಗಬೇಕೆಂದು ಸೂಚಿಸಿ. ಅವೆಲ್ಲಾ ಬಡವರಿಗೆ ನೇರವಾಗಿ ತಲುಪುವ ಯೋಜನೆಗಳು. ಯಾರು ಪ್ರಬಲರಿದ್ದಾರೆ, ಅವರು ಸೆಲ್ಫಿಷ್ ಆಗಿದ್ದಾರೆ. ಜನರು ಹಾಳಾದರೂ ಚಿಂತೆಯಿಲ್ಲ, ರಸ್ತೆಗಳ ಮಧ್ಯೆಯೇ ಮನೆಗಳನ್ನು ಕಟ್ಟಿದ್ದಾರೆ. ರಸ್ತೆಗಳನ್ನು ಮುಳ್ಳುಬೇಲಿ ಹಾಕಿಕೊಂಡಿದ್ದಾರೆ. ಅವರ ಜಾಗಗಳಿಗೆ ಏಕೆಂದರೆ ಪ್ರತಿಯೊಂದು ಶಾಖೆಗೆ ಕಾರಣ ಕಂದಾಯ ಇಲಾಖೆಯಲ್ಲಿ ಯಾರೋ ಅವ್ಯವಹಾರವಾದಾಗ ಮಾತ್ರ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡಾಗ, ರಸ್ತೆಗಳನ್ನು ಒತ್ತುವರಿ ಮಾಡಿಕೊಂಡಾಗ, ಸ್ಮಶಾನಗಳನ್ನು ಒತ್ತುವರಿ ಮಾಡಿಕೊಂಡಾಗ, ಯಾರದೋ ಜಮೀನನ್ನು ಯಾರೋ ಒತ್ತುವರಿ ಮಾಡಿಕೊಂಡಾಗ, ಅವೆಲ್ಲಾ ಕಾರಣಗಳಿಂದ ಸಾಮಾಜಿಕವಾಗಿ ಅಶಾಂತಿ, ಗಲಾಟೆ, ಒಬ್ಬರ ಮೇಲೆ ಒಬ್ಬರ ಕೊಲೆಯಾಗುತ್ತದೆ. ಮೊದಲು ನೀವು ಜವಾಬ್ದಾರಿ ತೆಗೆದುಕೊಳ್ಳಬೇಕು. ಸರ್ವೆ ಕೆಲಸ 2 ವರ್ಷಗಳಿಂದ ಆಮೆ ಗತಿಯಿಂದ ಹೋಗುತ್ತಿದೆ. ಕಾನೂನು ತಿದ್ದುಪಡಿ ಮಾಡಿ, ಪ್ರೈವೇಟ್ ಸರ್ವೇಯರ್ಸ್‌ಗೆ ಲೈಸೆನ್ಸ್ ಕೊಡಬೇಕೆಂದು ಹೇಳಲಾಗಿತ್ತು. ನಾವು ಕಾನೂನಿಗೆ ತಿದ್ದುಪಡಿ ತಂದು 3 ವರ್ಷಗಳಾದುವು. ಇಡೀ ದೇಶದಲ್ಲಿಯೇ ನಮ್ಮ ಸರ್ಕಾರ ಮಾಡಿದ್ದು ಐತಿಹಾಸಿಕವಾಗಿದೆ. ಸತ್ಯಾಗ್ರಹ ಮಾಡಿದರೂ ಇನ್ನೂ ಲೈಸೆನ್ಸ್ ಕೊಟ್ಟಿಲ್ಲ. ಕೇಂದ್ರ ಸರ್ಕಾರಕ್ಕೆ ರೀ-ಸರ್ವೆ ಮಾಡುವ ಬಗ್ಗೆ ಒಂದು ಯೋಜನೆ ಕಳುಹಿಸಿದ್ದೆವು. ರಾಜ್ಯದಲ್ಲಿರುವ ಎಲ್ಲಾ ಜಮೀನುಗಳನ್ನು ರೀ-ಸರ್ವೆ ಮಾಡುವ ಕಾರ್ಯಕ್ರಮವನ್ನು ಸಮರೋಪಾದಿಯಲ್ಲಿ ಹಾಕಿಕೊಳ್ಳಬೇಕಾಗುತ್ತದೆ. ಅದಕ್ಕೆ ಎಂಟು ನೂರು ಕೋಟಿ ರೂಪಾಯಿಗಳಾಗಬಹುದು. ಚಿಂತೆ ಇಲ್ಲ.

ಶ್ರೀ ಹೆಚ್. ಪುಟ್ಟರಂಗನಾಥ್ : ವನ್ಸ್ ಇನ್ 30 ಇಯರ್ಸ್ ಮಾಡಬೇಕು. 40 ವರ್ಷಗಳಾದರೂ ಸರ್ವೆ ಆಗಿಲ್ಲ.

ಶ್ರೀ ಚಂದ್ರಕಾಂತ್ ಬೆಲ್ಲದ್ ಗುರಪ್ಪ : ಇವತ್ತಿನವರೆಗೂ ಇದು ಆಗಿಲ್ಲ. ಆದ್ದರಿಂದ ಇದು ಆಗಬೇಕಾದ ಅವಶ್ಯಕತೆ ಇದೆ.

ಶ್ರೀ ಬಿ. ಸೋಮಶೇಖರ್ : ಅದಕ್ಕೋಸ್ಕರವಾಗಿ ಎಂಟುನೂರು ಕೋಟಿ ರೂಪಾಯಿಗಳ ಯೋಜನೆ ಒಂದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೆವು. ಯೋಜನೆಗಳನ್ನು ತಯಾರಿಸಿ, ಪ್ರೈವೇಟ್ ಸರ್ವೆಯರ್‌ಗಳನ್ನು ನೇಮಿಸಬೇಕು ಪ್ರೈವೇಟ್ ಟ್ರಾನ್ಸಾಕ್ಷನ್ ಏನಿದೆ, ಅದನ್ನು ಅವರು ಸರ್ವೆ ಮಾಡಿಕೊಡುತ್ತಾರೆ. ಸರ್ವೆ ಮಾಡಿಕೊಟ್ಟವರಿಗೆ ರಿಜಿಸ್ಟ್ರೇಷನ್ ಆಗಬೇಕಾದರೆ ಸರ್ವೆ ಸ್ಕೆಚ್ ಕೊಡಬೇಕು. ಇಲ್ಲದಿದ್ದರೆ, ರಿಜಿಸ್ಟ್ರೇಷನ್ ಆಗಬಾರದು. ಒಂದು ಸಾರಿ ರಿಜಿಸ್ಟ್ರೇಷನ್ ಆದಮೇಲೆ, ಹದ್ದುಬಸ್ತು ಪ್ರಕರಣಗಳು ಬರುವುದಿಲ್ಲ. ಹತ್ತಾರುಲಕ್ಷ ಪೋಡಿ ಪ್ರಕರಣಗಳಿವೆ. ಮೊದಲೇ ಸರ್ವೆ ಮಾಡಿ ಸರ್ವೆ ಸ್ಕೆಚ್ ಅನ್ನು ನೀವು ಸಬ್-ರಿಜಿಸ್ಟ್ರಾರ್ ಆಫೀಸಿಗೆ ಕೊಡಬೇಕು. ರಿಜಿಸ್ಟ್ರೇಷನ್ ಮಾಡುವಾಗ ಕರಾರುವಾಕ್ಕಾಗಿ ಇಷ್ಟೇ ಹದ್ದುಬಸ್ತಿಗೆ ರಿಜಿಸ್ಟ್ರೇಷನ್ ಮಾಡಬೇಕೆಂದು

ಮಾಡಿದ್ದೆವು. ಅದರ ಬಗ್ಗೆ ನೀವು ಪ್ರಕಟಪಡಿಸಿಲ್ಲ. ಇದುವರೆಗೆ ನಿಧಾನವಾಗಿ ಹೋಗುತ್ತಿದ್ದಿರಿ. ಇನ್ನು ಮೇಲಾದರೂ ನೀವೇ ಇದ್ದೀರಿ.. ಸ್ವಲ್ಪ ಹಳಬರಾಗಿದ್ದೀರಿ. ಇಲಾಖೆಯ ಬಗ್ಗೆ ಎಲ್ಲಾ ಗೊತ್ತಾಗಿದೆ. ಸ್ವಲ್ಪ ಬೇಗ ಮಾಡಿ. ಇದರ ಬಗ್ಗೆ ನಾನು ಅನೇಕ ಸಂದರ್ಭಗಳಲ್ಲಿ ಹೇಳಿದ್ದೇನೆ. ಅಧಿಕಾರಿಗಳಿಗೆ ಸೂಚಿಸಿ, ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ. ನೀವು ಹೊಸದಾಗಿ ಏನೂ ಮಾಡಬೇಡಿ. ನೀವು ಒಂದನ್ನೂ ಹೊಸದಾಗಿ ಮಾಡುವುದಿಲ್ಲ. ನಾವು ಮಾಡಿರುವುದನ್ನು ಇಂಪ್ಲಿಮೆಂಟ್ ಮಾಡಿ, ನೀವೇ ಹೆಸರು ತೆಗೆದುಕೊಳ್ಳಿ. ಕಂಪ್ಯೂಟರೈಸ್ಡ್ ಮಾಡಿರುವುದು ನಮ್ಮ ಕಾಲದಲ್ಲಿಯೇ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಭೂಮಿ ಕಾರ್ಯಕ್ರಮ ಮುಗಿದಿಲ್ಲವೆ? ಸಬ್-ರಿಜಿಸ್ಟ್ರಾರ್ ಆಫೀಸ್‌ಗಳಲ್ಲಿ ಇನ್ನೂ 6 ತಿಂಗಳೊಳಗಾಗಿ ಗಣೀಕರಣ ಕಾರ್ಯವನ್ನು ಪೂರೈಸುತ್ತೇವೆ. ಕರ್ನಾಟಕ ರಾಜ್ಯದಲ್ಲಿರುವ ಎಲ್ಲಾ ಸಬ್-ರಿಜಿಸ್ಟ್ರಾರ್ ಆಫೀಸ್ ಅನ್ನು ಗಣಕೀಕರಣವನ್ನು ಮಾಡುತ್ತೇವೆ.

ಛೇರ್ಮನ್ : ನನಗೆ ಗೊತ್ತಿರುವ ಹಾಗೆ, ಹಳ್ಳಿಗಳಲ್ಲಿ ಗೌರ್ನಮೆಂಟ್ ಲ್ಯಾಂಡ್ ಎಲ್ಲೆಲ್ಲಿ ಸಿಗುತ್ತದೆ, ಅಲ್ಲಿ ಸರ್ವೆ ಮಾಡಿಸಿ, ಸ್ಮಶಾನಕ್ಕೆ ರಿಸರ್ವ್ ಮಾಡಬೇಕು ಎನ್ನತಕ್ಕದ್ದು ಇದೆ. ಸರ್ವೆ ಮಾಡುತ್ತಿದ್ದಾರೆ. It is going on.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ : ಈಗಾಗಲೇ ಬಗರ್‌ಹುಕುಂನಲ್ಲಿ ಫಾರಂ ನಂಬರ್‌ಗಳಾದ 53-54 ರಲ್ಲಿ ಅರ್ಜಿ ಹಾಕಿದ್ದಾರೆ. ಆ ಅರ್ಜಿಗಳ ಪ್ರಕಾರ ಸ್ಮಶಾನಕ್ಕೆ ರಿಸರ್ವ್ ಇಟ್ಟಿರುವುದನ್ನು ಬಗರ್‌ಹುಕುಂ ಮಾಡಿದರೆ, ನಾಳೆ ಯಾವ ಕಾರಣಕ್ಕೂ ಸ್ಮಶಾನಕ್ಕೆ ಜಾಗ ಉಳಿಯುವುದಿಲ್ಲ. ಸ್ಮಶಾನಕ್ಕೆ ಜಾಗ ರಿಸರ್ವ್ ಮಾಡಲು ಮಂತ್ರಿಗಳು ಜಿಲ್ಲಾಧಿಕಾರಿಗಳಿಗೆ ಆದೇಶ ಮಾಡಬೇಕು. ಇಲ್ಲವಾದರೆ, ಸ್ಮಶಾನಕ್ಕೆ ಹಳ್ಳಿಗಳಲ್ಲಿ ಜಾಗವಿರುವುದಿಲ್ಲ.

ಛೇರ್ಮನ್ : ಇದರ ಬಗ್ಗೆ ಸರ್ಕಾರ ಗಮನಹರಿಸಬೇಕು.

ಶ್ರೀ ಅರಗಜ್ಞಾನೇಂದ್ರ : ತಾವು ಆದೇಶ ಕೊಡಿ.

MR. CHAIRMAN : The Hon'ble Minister may take note of the problem, Sir.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : "ಭೂಮಿ" ಕಾರ್ಯಕ್ರಮದಲ್ಲಿ ನಮ್ಮ ರಾಜ್ಯಕ್ಕೆ ಇಂಟರ್‌ನ್ಯಾಷನಲ್ ಅವಾರ್ಡ್ ಬರುತ್ತಿದ್ದು, ಅದನ್ನು ರಿಸೀವ್ ಮಾಡುವುದಕ್ಕೆ ಸ್ಟಾಕ್‌ಹೋಂಗೆ ಹೋಗಬೇಕಾಗುತ್ತದೆ. ನೀವು ಪ್ರಾರಂಭಿಸಿದ್ದೀರಿ, ನಾವು ಅದನ್ನು ಯಶಸ್ವಿಯಾಗಿ ಪೂರೈಸಿದ್ದೇವೆ. we are getting an Internation Award.

ಶ್ರೀ ಬಿ. ಸೋಮಶೇಖರ್ : ಯಾರ ಕಾರ್ಯಕ್ರಮಕ್ಕೆ ಪ್ರಶಸ್ತಿ ಕೊಡುತ್ತಿದ್ದಾರೆ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ನೀವು ಪ್ರಾರಂಭಿಸಿದ್ದೀರಿ. ಅದು ನಿಧಾನವಾಗಿ ಹೋಗುತ್ತಿತ್ತು. ನಾವು 2 ವರ್ಷಗಳಲ್ಲಿ ಮುಗಿಸಿದ್ದೇವೆ. ಸಬ್‌ರಿಜಿಸ್ಟ್ರಾರ್ ಕಚೇರಿಗಳಲ್ಲಿ ಗಣಕೀಕರಣವನ್ನು 6 ತಿಂಗಳೊಳಗೆ ಮುಗಿಸುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ : ನಿಮ್ಮ ತಾಲ್ಲೂಕು ಆಫೀಸ್‌ನಲ್ಲಿ ನಿಲ್ಲುವ ಕ್ಯೂ ನೋಡಿದರೆ, ಕಂಪ್ಯೂಟರ್ಸ್ ಏನು ಮಾಡುತ್ತವೆಂಬುದನ್ನು ನೋಡಬೇಕಾಗುತ್ತದೆ. ಪಹಣಿದ್ದೂ ಕೂಡ ಏನೂ ಆಗಿಲ್ಲ ದಯಮಾಡಿ ತಾವು ಇದನ್ನು ನೋಡಿ, ಏನೆಂದರೆ, ಇದರಲ್ಲಿ ತುಂಬಾ

ಡಿಲೇಯಾಗುತ್ತಿದೆ, ದಾಖಲೆಗಳನ್ನು ಫೀಡ್ ಮಾಡುವುದು ಮತ್ತೊಂದು ಮಾಡುವುದು ಹೀಗಾಗಿ ಅಲ್ಲಿ ಏನಾಗಿದೆ ಎಂದರೆ, ಗ್ರಾಮೀಣಾ ಪ್ರದೇಶದಿಂದ ಬಂದು ಅಲ್ಲಿ ವಾರಗಟ್ಟಲೆ ಕಾಯುವ ಸ್ಥಿತಿ ಬಂದಿದೆ.

ಶ್ರೀ ಎನ್. ಯೋಗೀಶ್ ಬಟ್ : ಮಾನ್ಯ ಅಧ್ಯಕ್ಷರೇ, ಇಂಟರ್‌ನ್ಯಾಷನಲ್ ಅವಾರ್ಡ್ ಕೊಡುವ ಸಂದರ್ಭದಲ್ಲಿ ಆ ಟೀಂನವರನ್ನು ದಯಮಾಡಿ ಮಂಗಳೂರಿಗೆ ಕಳುಹಿಸಿಕೊಡಿ. ಯಾವ ರೀತಿ ಅಲ್ಲಿ ಕೆಲಸ ನಡೆಯುತ್ತಿದೆ ಎಂಬುದು ಗೊತ್ತಾಗುತ್ತದೆ. ಇದಕ್ಕೆ ಸಂಬಂಧಪಟ್ಟ ಹಾಗೆ ಸುಮಾರು ನಾಲ್ಕು ಸಾವಿರ ಅರ್ಜಿಗಳನ್ನು ತಿರಸ್ಕರಿಸಿದ್ದಾರೆ, ಮೂಲಗೇಣಿ ಪ್ರಾಪರ್ಟಿಗೆ ಸಂಬಂಧಪಟ್ಟ ಹಾಗೆ ವಿಸ್ತೀರ್ಣ ಹಾಕಲಿಕ್ಕೆ ಅದರಲ್ಲಿ ಜಾಗವೇ ಇಲ್ಲ, ಒಂದು ಎಕರೆಯಲ್ಲಿ 10 ಫ್ಲಾಟ್‌ಗಳು ಬಂದಲ್ಲಿ ಕೊನೆಯ ಫ್ಲಾಟ್ ಸೇರ್ಪಡೆಯಾಗುವ ತನಕ ನಿಮಗೆ ಅಲ್ಲಿ ಕಂಪ್ಯೂಟರ್‌ನಲ್ಲಿ ದಾಖಲಾತಿ ಸಿಗುತ್ತಿಲ್ಲ. ಇದರಲ್ಲಿ ಅನೇಕ ಲ್ಯಾಪ್ಸ್‌ಸ್ ಇದೆ, ಇದನ್ನು ಸರಿಪಡಿಸಲಿಕ್ಕೆ ತಾವು ಕೂಡಲೇ ಕ್ರಮ ಕೈಗೊಳ್ಳಬೇಕು. ಹೀಗಾಗಿ ಅಲ್ಲಿ ಸುಮಾರು 6-7 ತಿಂಗಳುಗಳಿಂದಲೂ ಅರ್ಜಿಗಳು ವಿತರಣೆಯಾಗಲಿಲ್ಲ. ಎಲ್ಲದಕ್ಕೂ ಆರ್‌ಟಿಸಿ ಬೇಕಾಗುತ್ತದೆ, ಕಂಪ್ಯೂಟರ್ ಕಾಪಿ ಕೊಡುವ ನಿಟ್ಟನಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆಂದು ಹೇಳುತ್ತೇನೆ. ನೀವು ದಯಮಾಡಿ ಆ ಸಾಫ್ಟ್‌ವೇರ್ ಅನ್ನು ಸರಿಪಡಿಸಿ ಇಲ್ಲದಿದ್ದರೆ ಸಾಕಷ್ಟು ಜನರು ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಈ ಬಗ್ಗೆ ನಾನು ಉತ್ತರ ಪಡೆಯಲು ಗಮನ ಸೆಳೆಯುವ ಸೂಚನೆಯ ಮೂಲಕವಾಗಲಿ ಅಥವಾ ಬೇರೆ ಯಾವುದಾದರೂ ಮೂಲಕ ಪ್ರಶ್ನೆ ಕೇಳಿದರೂ ಸಹ ಅದಕ್ಕೆ ಉತ್ತರ ಕೊಡುವ ಸ್ಥಿತಿಯಲ್ಲಿ ಸರ್ಕಾರ ಇಲ್ಲ.

ಶ್ರೀ ಎಸ್.ಹೆಚ್. ಪುಟ್ಟರಂಗನಾಥ್ : ಮಾನ್ಯ ಅಧ್ಯಕ್ಷರೇ, ನಮ್ಮಲ್ಲೂ ಕೂಡ ಬಹಳಷ್ಟು ತೊಂದರೆ ಇದೆ. ನಮ್ಮಲ್ಲಿ ಸಂಪೂರ್ಣವಾಗಿ ಆಲೂಗಡ್ಡೆ ಹಾಳಾಗಿ ಹೋಗಿದೆ. ಪಹಣಿ ತೆಗೆದುಕೊಳ್ಳಲಿಕ್ಕೆ ಹೋದಾಗ ಅವನು ತೋರಿಸಿರತಕ್ಕಂಥ ದಾಖಲೆಗಳೇ ಅದರಲ್ಲಿ ಇಲ್ಲ, ತಪ್ಪು ದಾಖಲೆಗಳನ್ನು ಮಾಡಿರುವುದರಿಂದ ಬಹಳಷ್ಟು ಜನರಿಗೆ ತೊಂದರೆಯಾಗಿದೆ, ಅವರಿಗೆ ಪಹಣಿ ಕೂಡ ಸಿಗುತ್ತಿಲ್ಲ. ಪಹಣಿ ಯಾರೋ ಹೆಸರಿಗೆ ಬೆರೆದಿದ್ದಾರೆ ಇವೆಲ್ಲಾ ಅನೇಕ ಅನ್ಯಾಯಗಳು ಆಗಿದೆ. ಇದನ್ನು ಸರಿಪಡಿಸದೇ ಹೋದರೆ ಈ ಗಣಕೀಕರಣದಿಂದ ಏನೂ ಉಪಯೋಗವಾಗುವುದಿಲ್ಲ.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಅಧ್ಯಕ್ಷರೇ, ಕಂದಾಯ ಇಲಾಖೆಯಿಂದ ಗಣಕೀಕರಣದ ಮೂಲಕ ಈಗ ಏನು ಪಹಣಿಗಳನ್ನು ಕೊಡುತ್ತಿದ್ದೀರಿ, ನಮ್ಮ ಭಾಗದಲ್ಲಿ ಪಹಣಿಗಳನ್ನು ಮಾಡಿದ್ದಾರೆ, ಯಾವ ರೀತಿ ಮಾಡಿದ್ದಾರೆಂದರೆ, ಪಟ್ಟದಾರನ ಕಾಲಂ ಅನ್ನೇ ಬಿಟ್ಟಿದ್ದಾರೆ, ಓರಿಜೀನಲ್ ಓನರ್ ಯಾರು ಎಂಬುದೇ ಅದರಲ್ಲಿ ಇಲ್ಲ. ಈ ರೀತಿ ಪಹಣಿಗಳನ್ನು ಕೊಟ್ಟರೆ ಹೇಗೆ? ಯಾರ ಆಸ್ತಿ ಯಾರಿಗೋ ಹೋಗುತ್ತದೆ, ಯಾರ ಸರ್ವೇ ನಂಬರ್ ಯಾರಿಗೋ ಹೋಗುತ್ತದೆ, ದಯಮಾಡಿ ಅವುಗಳನ್ನು ಸರಿಪಡಿಸಿ.

ಶ್ರೀ ಬಿ. ಸೋಮಶೇಖರ್ : ಬದಲಾವಣೆಗೆ ತಿದ್ದುಪಡಿ ಮಾಡಲು ಬಹಳ ಅವಕಾಶಗಳಿವೆ. ಎನ್‌ಐಸಿ ಯವರಿಗೆ ಹೇಳಿ ಎಲ್ಲೆಲ್ಲಿ ಯಾವ್ಯಾವ ಮಾಹಿತಿಗಳು ಬಿಟ್ಟು ಹೋಗಿವೆ ಅವನ್ನೆಲ್ಲಾ ಸರಿಪಡಿಸುವಂತೆ ತಾವು ಹೇಳಬೇಕಾಗುತ್ತದೆ. ಒಟ್ಟಿನಲ್ಲಿ ನೀವು ಕೊಡುವ ಪಹಣಿಯಲ್ಲಿ ಏನಾದರೂ

ಲೋಪದೋಷ ಇದ್ದರೆ ಅದನ್ನು ತಿದ್ದುಪಡಿ ಮಾಡಿ ಸರಿ ಮಾಡಿಕೊಡುವುದಕ್ಕೆ ಅವಕಾಶ ಇರಬೇಕು, ನಾನು ಮಂಗಳೂರಿಗೆ ಹೋಗಿದ್ದಾಗ ಬಹಳ ಜನ ಹೇಳಿದರು, ಮೊದಲು ರಿಜಿಸ್ಟ್ರೇಷನ್ ಆದ ನಂತರ ಖಾತೆ ಬದಲಾವಣೆ ಬಹಳ ಬೇಗ ಆಗುತ್ತಿತ್ತು, ಇವತ್ತು ಏನಾಗಿದೆ ಎಂದರೆ ಬಹಳ ವಿಳಂಬವಾಗುತ್ತಿದೆ ಎನ್ನುವ ಮಾತನ್ನು ಹೇಳಿದರು. ನಾನು ಆಗಲೇ ಜಿಲ್ಲಾಧಿಕಾರಿಗಳ ಜೊತೆಯಲ್ಲಿ ಮಾತನಾಡಿ ಏಕೆ ಈ ರೀತಿ ಆಗುತ್ತದೆ ಅದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳಿ, ಬೇರೆ ಜಿಲ್ಲೆಗಳಲ್ಲಿ ಆ ರೀತಿಯ ಸಮಸ್ಯೆ ಇಲ್ಲವೆಂದು ನಾನು ಹೇಳಿದೆ, ಮಂಗಳೂರಿನವರದ್ದು ಸ್ವಲ್ಪ ಪ್ರಾಬ್ಲಂ ಇದೆ ಅದನ್ನು ತಾವು ಸರಿ ಮಾಡಬೇಕಾಗುತ್ತದೆ.

ಶ್ರೀ ಎನ್ ಯೋಗೀಶ್ ಭಟ್ : ಮಾನ್ಯ ಅಧ್ಯಕ್ಷರೇ, ನಮ್ಮ ಭಾಗದಲ್ಲಿ ಒಬ್ಬ ಅರ್ಜಿ ಕೊಟ್ಟ ನಂತರ 19 ಸ್ಟೇಜ್‌ಗಳನ್ನು ಧಾಟಿಕೊಂಡು ನಂತರದಲ್ಲಿ ಕಂಪ್ಯೂಟರ್‌ನಲ್ಲಿ ಪಹಣಿ ಪತ್ರ ಸಿಗುತ್ತದೆ ಈ 19 ಸ್ಟೇಜ್‌ಗಳನ್ನು ಸಿಂಪ್ಲಿಫೈ ಮಾಡುವುದಕ್ಕೆ ಆಗುವುದಿಲ್ಲವೇ?

ಶ್ರೀ ಎಂ ಡಿ ಲಕ್ಷ್ಮೀನಾರಾಯಣ : ಮಾನ್ಯ ಮಂತ್ರಿಗಳು ತಾವು ಹೇಳಿದರಲ್ಲಾ ಎಲ್ಲೋ ಒಂದು - ಎರಡು ಈ ರೀತಿ ಆಗುತ್ತದೆ ಎಂದು ಒಂದೊಂದು ತಾಲ್ಲೂಕಿನಲ್ಲಿ ಸಾವಿರಾರು ತಪ್ಪುಗಳಾಗಿರುವ ನಿದರ್ಶನಗಳುಂಟು. ಇವತ್ತು ಖುಷ್ಕಿ ಇರುವ ಭೂಮಿಯನ್ನು ಬಾಗಾಯತ್ತು ಎಂದು ಪಹಣಿಯಲ್ಲಿ ಬರುತ್ತದೆ, ಇವತ್ತು ನಾನು ಯಾವುದೋ ಒಂದು ಸರ್ವೆ ನಂಬರಿನ ಪಹಣಿ ತೆಗೆದುಕೊಂಡರೆ ಅದರಲ್ಲಿ ಬಾಗಾಯತ್ತು ಎಂದು ಬರುತ್ತದೆ, ಅದನ್ನೆ ನಾಳೆ ಬೆಳಿಗ್ಗೆ ಅದೇ ನಂಬರಿಗೆ ಪಹಣಿ ತೆಗೆದುಕೊಂಡರೆ ಅದರಲ್ಲಿ ಖುಷ್ಕಿ ಎಂದು ಇರುತ್ತದೆ. ಇದು ಏಕೆ ಈ ರೀತಿಯಾಗುತ್ತದೆ? ಇದನ್ನು ಸರಿಪಡಿಸಬೇಕಾಗುತ್ತದೆ. ಗಣೀಕೀಕೃತ ಮಾಡುತ್ತೇವೆಂದು ತಾವು ಹೇಳುತ್ತೀರಿ ಬಹಳ ಸಂತೋಷ. ಆದರೆ ಸಾವಿರಾರು ಪಹಣಿಗಳು ತಪ್ಪಾಗತಕ್ಕಂಥದ್ದನ್ನು ತಾವು ಇದನ್ನು ತಪ್ಪಿಸಬೇಕಾಗುತ್ತದೆ.

ಶ್ರೀ ಕೆ. ಷಡಾಕ್ಷರಿ : ಫೀಡ್ ಮಾಡಿರುವ ಫಿಗರ್ ಬೆಳಿಗ್ಗೆ ಹೇಗೆ ಬದಲಾವಣೆ ಆಗುತ್ತದೆ?

ಶ್ರೀ ಎಂ ಡಿ ಲಕ್ಷ್ಮೀನಾರಾಯಣ : ಇದಕ್ಕೆ ಸಂಪೂರ್ಣವಾದ ನಿದರ್ಶನವನ್ನು ನಾನು ಕೊಡುತ್ತೇನೆ.

ಶ್ರೀ ಕೆ. ಷಡಾಕ್ಷರಿ : ಹೇಳಿ ಆದರೆ ಅದಕ್ಕೊಂದು ಅರ್ಥ ಇರಬೇಕು. ರಾತ್ರಿ ಇದ್ದದ್ದು ಬೆಳಿಗ್ಗೆ ಚೇಂಜ್ ಆಗುತ್ತದೆ ಎಂದರೆ ಹೇಗೆ?

ಶ್ರೀ ಎಂ ಡಿ ಲಕ್ಷ್ಮೀನಾರಾಯಣ : ಮಾನ್ಯ ಸದಸ್ಯರು ಹೇಳಿದ್ದಕ್ಕೆ ನಾನು ನಿದರ್ಶನ ಕೊಡುತ್ತೇನೆ.

ಛೇರ್ಮನ್ : ಮಾನ್ಯ ಮಂತ್ರಿಗಳು ರಿಪ್ಲೈ ಕೊಡುತ್ತಾರೆ ದಯಮಾಡಿ ತಾವು ಕುಳಿತುಕೊಳ್ಳಿ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) : ಯಾವ ನಿದರ್ಶನಗಳೂ ನನಗೆ ಬಂದಿಲ್ಲ, ಅದು ಯಾವುದು ಎಂಬುದನ್ನು ನನಗೆ ಕೊಡಿ ನಾನು ಸರಿಮಾಡಿಸಿಕೊಡುತ್ತೇನೆ.

ಶ್ರೀ ಎಂ ಡಿ ಲಕ್ಷ್ಮೀನಾರಾಯಣ : ನನ್ನ ಕ್ಷೇತ್ರದಲ್ಲಿ 30 ಎಕರೆ ಜಮೀನು ಬಾಗಾಯತ್ತು ಇರುವಂಥದ್ದು ಮೂರು ದಿವಸದಲ್ಲಿ ಖುಷ್ಕಿ ಎಂದಾಗಿದೆ ಅದನ್ನು ನಾನು ಕೊಡುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ತಾಲ್ಲೂಕು ಕೇಂದ್ರಗಳಲ್ಲಿ ಹೋಗಲು ತೊಂದರೆಯಾಗುತ್ತದೆ ಎಂದು ಹೋಬಳಿಗೆ ವಿಸ್ತರಿಸಲು ನಾವು ಪ್ರಯತ್ನಿಸುತ್ತಿದ್ದೇನೆ. ನೂರು ಹೋಬಳಿಗಳನ್ನು ಸೆಲ್‌ಕ್ಟ್ ಮಾಡುತ್ತಿದ್ದೇವೆ. ಅಲ್ಲಿಗೂ ಗಣಿಕೀಕರಣಗಳನ್ನು ಪೂರೈಸುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ : ಒಂದು ಪಹಣಿಗೆ 15 ರೂಪಾಯಿ ಅಂದರೆ ಜಾಸ್ತಿಯಾಗುತ್ತದೆ, ನನ್ನ ತಾಲ್ಲೂಕಿನಲ್ಲಿ ಈಗಾಗಲೇ ಒಂದು ವರ್ಷದಲ್ಲಿ ಸುಮಾರು ಎರಡು ಲಕ್ಷ ರೂಪಾಯಿ ಸೇವಿಂಗ್ಸ್ ಆಗಿದೆ. ಪಹಣಿ ಮಾರಾಟ ಮಾಡಿಬಂದಂಥ ಹಣವನ್ನು ಖಜಾನೆಗೆ ತುಂಬಿಕೊಳ್ಳುತ್ತಿದ್ದೀರಿ, ಇದು ಸರಿಯಾಗುವುದಿಲ್ಲ. ಪಹಣಿಯ ಮೇಲೆ ಬಂದಂಥ ಹಣವನ್ನು ಆಯಾಯಾ ಜಿಲ್ಲೆಗಳಿಗೆ ಕೊಡಿ, ಹೋಬಳಿಗಳಲ್ಲಿ ಅದೇ ದುಡ್ಡಿನಲ್ಲಿ ಕಂಪ್ಯೂಟರ್ ಹಾಕಬಹುದು. 15 ರೂಪಾಯಿ ಜಾಸ್ತಿಯಾಗುತ್ತದೆ ಬೇಕಾದರೆ ಐದು ರೂಪಾಯಿ ತೆಗೆದುಕೊಳ್ಳಬಹುದು.

ಶ್ರೀ ಹೆಚ್ ಸಿ ಶ್ರೀಕಂಠಯ್ಯ : ಅದೇ ದುಡ್ಡಿನಲ್ಲಿ ಹಾಕುತ್ತಿರುವುದು ಅದನ್ನು ತೆಗೆದುಕೊಂಡು ಹೋಗಿ ಖಜಾನೆಗೆ ಹಾಕುತ್ತಿಲ್ಲ.

ಶ್ರೀ ಎಂ ಡಿ ಲಕ್ಷ್ಮೀನಾರಾಯಣ : ಐದು ರೂಪಾಯಿ ಮಾಡಿದರೆ ಜನಗಳಿಗೆ ಅನುಕೂಲವಾಗುತ್ತದೆ.

ಶ್ರೀ ಪಿ ಜಿ ಆರ್ ಸಿಂಧ್ಯ : ಈ ಸರ್ಕಾರ "ಭೂಮಿ" ಕಾರ್ಯಕ್ರಮ ಮಾಡಿರುವುದನ್ನು ನಾವೆಲ್ಲಾ ಅನೇಕ ಸಂದರ್ಭಗಳಲ್ಲಿ ಸ್ವಾಗತಿಸಿದ್ದೇವೆ. ಇದೊಂದು ಒಳ್ಳೆಯ ಕಾರ್ಯಕ್ರಮವಾಗಿದ್ದು, ಇದರಲ್ಲಿ ಕೆಲವು ತಿದ್ದುಪಡಿಗಳನ್ನು ನಮ್ಮ ಕರಾವಳಿ ಜಿಲ್ಲೆಯವರು ಸಲಹೆ ಮಾಡಿದ್ದಾರೆ, ಈ ಕಡೆ ಜಿಲ್ಲೆಯವರು ಸಲಹೆ ಹೇಳಿದ್ದಾರೆ, ಅದನ್ನು ಕಾರ್ಯಗತ ಮಾಡುವುದಕ್ಕೆ ಮಾನ್ಯ ಕಂದಾಯ ಸಚಿವರು ಪ್ರಯತ್ನ ಮಾಡಬೇಕೆಂದು ನಮ್ಮ ಆಗ್ರಹ ಈ ಸಂದರ್ಭದಲ್ಲಿ ಮಾನ್ಯ ಕಂದಾಯ ಸಚಿವರು ಅಂತರರಾಷ್ಟ್ರೀಯ ಸಂಸ್ಥೆಯೊಂದು ರಾಜ್ಯ ಸರ್ಕಾರಕ್ಕೆ ಅವಾರ್ಡ್ ಕೊಡುತ್ತಿದೆ ಎನ್ನುವ ವಿಚಾರವನ್ನು ತಿಳಿಸಿದ್ದಾರೆ. ಆ ಅಂತರರಾಷ್ಟ್ರೀಯ ಸಂಸ್ಥೆ ಯಾವುದು ಎನ್ನುವುದು ರಾಜ್ಯದ ಜನತೆಗೆ ಗೊತ್ತಾಗಬೇಕು. ಏಕೆಂದರೆ, ತಾವು ಆಕಸ್ಮಿಕವಾಗಿ ಈ ಒಂದು ಸ್ಥಾನದಲ್ಲಿ ಕುಳಿತಿದ್ದೀರಿ, ತಮಗೊಂದು ವಿಚಾರವನ್ನು ಜ್ಞಾಪಿಸಲಿಕ್ಕೆ ಇಷ್ಟಪಡುತ್ತೇನೆ ಕಳೆದ ಒಂದು ವಾರ 15 ದಿವಸಗಳಿಂದ ಇಲ್ಲಿರತಕ್ಕಂಥ ಶಾಸಕರುಗಳಿಗೆ ಒಂದು ಪತ್ರ ದಿಲ್ಲಿಯಿಂದ ಬಂದಿದೆ, ಆ ಪತ್ರದ ಸಾರಾಂಶ ಏನೆಂದರೆ, you are selected as the best citizen of India. ಅದರಲ್ಲಿ ಸುಮಾರು ಏಳೆಂಟು ಹೆಸರುಗಳನ್ನು ಹೇಳಿದ್ದಾರೆ, ತೆಂಡೂಲ್ಕರ್‌ರವರಿಂದ ಹಿಡಿದು ಕುಲದೀಪ್ ಸಿಂಗ್‌ರವರಿಗೆ ಕೆಲವು ಹೆಸರುಗಳನ್ನು ಹೇಳಿ, You are all selected as the best citizens of India. ನಮಗೆ ತಕ್ಷಣ ಮೂರೂವರೆ ರೂಪಾಯಿಗಳನ್ನು ಕಳುಹಿಸಿಕೊಡಿ. ನಿಮ್ಮ ಅವಾರ್ಡ್ ಅನ್ನು ಸೀಲ್ಡ್ ಕವರ್‌ನಲ್ಲಿ ಕಳುಹಿಸುತ್ತೇವೆ, ಪಂಕ್ಷನ್ ಮಾಡುತ್ತೇವೆ ಬೇಕಾದರೆ ಬಂದು ತೆಗೆದುಕೊಂಡು ಹೋಗಿ ಎಂದು ನಮಗೆಲ್ಲಾ ಪತ್ರ ಬಂದಿದೆ. ಆದ್ದರಿಂದ, ಅದರ ಬಗ್ಗೆ ವಿಚಾರಣೆ ಆಗಬೇಕಾಗುತ್ತದೆ, ಏಕೆಂದರೆ, ನಮ್ಮ ವಿಧಾನ ಸಭೆಯ ಅಧ್ಯಕ್ಷರಾದ ಮಾನ್ಯ ಶ್ರೀಮಾನ್ ವೆಂಕಟಪ್ಪನವರಿಗೂ ಆ ಪತ್ರ ಬಂದಿದೆಯಂತೆ, ನನಗಂತೂ ಆ ರೀತಿಯ ಪತ್ರ ಬಂದಿದೆ.

ಛೇರ್ಮನ್ : ನನಗೂ ಬಂದಿದೆ. ಇಲ್ಲಿರುವ ಎಲ್ಲರಿಗೂ ಬಂದಿದೆ.

ಶ್ರೀ ಪಿ ಜಿ ಆರ್ ಸಿಂಧ್ಯ : ನಿಮಗೂ ಬಂದಿದೆಯೇ? ಹಾಗಾದರೆ ಸರಿ, ನಾನಂತೂ ಮಾನ್ಯ ಮುಖ್ಯಮಂತ್ರಿಗಳಿಗೆ ಈ ವಿಷಯ ತಿಳಿಸಿದ್ದೇನೆ.

ಶ್ರೀ ಸಿ ಎಂ ಲಿಂಗಪ್ಪ : ನನಗೆ ಬರಲಿಲ್ಲವಲ್ಲಾವೆಂದು ಹೇಳಿ ನಾನು ಬಹಳ ವ್ಯಥೆಪಡುತ್ತಿದ್ದೆ.

ಶ್ರೀ ಪಿ ಜಿ ಆರ್ ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಾನು ಈ ಸನ್ನಿವೇಶದಲ್ಲಿ ಈ ಸರ್ಕಾರದಲ್ಲಿ ಆಗ್ರಪಡಿಸುವುದೇನೆಂದರೆ, ದಯಮಾಡಿ ಕೇಂದ್ರ ಸರ್ಕಾರಕ್ಕೆ ಕೂಡಲೇ ಪತ್ರ ಬರೆದು,

ಇಂತಹ fake organisations ಇವೆ, ದುಡ್ಡು ಮಾಡಲಿಕ್ಕೆ ಈ ರೀತಿ ಮೋಸ ಮಾಡುತ್ತಾರೆ ಇದರ ಬಗ್ಗೆ ಒಂದು ವಿಚಾರಣೆ ಮಾಡಿ ಎಂದು ಮಾನ್ಯ ಮುಖ್ಯಮಂತ್ರಿಗಳಿಗೆ ನಾನು ವಿಜ್ಞಾಪನೆಯನ್ನು ಮಾಡಿಕೊಂಡಿದ್ದೇನೆ ದಯಮಾಡಿ ತಾವೂ ಕೂಡ ಸರ್ಕಾರಕ್ಕೆ ಆದೇಶ ಕೊಟ್ಟು ಮಾಡಿಸಿ. ಆ ರೀತಿ ಯಾವುದಾದರೂ ಸಂಸ್ಥೆ ಪತ್ರ ಬರೆದಿದೆಯೇ ಎಂಬುದು ನನಗೆ ಗೊತ್ತಿಲ್ಲ ದಯಮಾಡಿ ತಾವು ತಿಳಿಸಬೇಕು. ಅದು ಯಾವ ಇಂಟರ್‌ನ್ಯಾಷನಲ್ ಸಂಸ್ಥೆ ಎಂದು ತಿಳಿಸಿದರೆ ನಮಗೆ ಗೊತ್ತಾಗುತ್ತದೆ.

ಶ್ರೀ ಹೆಚ್.ಸಿ ಶ್ರೀಕಂಠಯ್ಯ : ಅದಕ್ಕೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ನಮಗೆ ಒಂದು ಪತ್ರ ಬಂದಿದೆ, ಬೆಸ್ಟ್ ಸಿಟಿಜನ್ ಎನ್ನುವುದು ಒಂದಾದರೆ ಮತ್ತೊಂದು ಇಂಡಸ್ಟ್ರೀಸ್‌ಗಳು, ನಿಮಗೆ ಇಂದಿರಾ ಪ್ರಿಯದರ್ಶಿನಿ ಅವಾರ್ಡ್ ಕೊಡುತ್ತೇವೆಂದು ಹೇಳಿ ಎರಡು ಸಾವಿರ ಕೊಡಿ ಎಂದು ಪತ್ರ ಬರೆದಿದ್ದಾರೆ, ಸಣ್ಣ ಸಣ್ಣ, ಇಂಡಸ್ಟ್ರೀಸ್‌ಗಳು, ಫೇಲಾದಂತಹ ಇಂಡಸ್ಟ್ರೀಗಳು ಹಳ್ಳಿಯಲ್ಲಿರುವ ವರ್ಕ್‌ಷಾಪ್‌ಗಳಿಗೂ ಒಂದೊಂದು ಪತ್ರ ಬರೆದಿದ್ದಾರೆ, ಡೆಲ್ಲಿಯಲ್ಲಿರುವ ಯಾವುದೋ ಒಂದು ಸಂಸ್ಥೆ ಕಳುಹಿಸುತ್ತದೆ, ದಯಮಾಡಿ ಇದರ ಬಗ್ಗೆ ತನಿಖೆ ಮಾಡಲು ನೀವು ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯದೇ ಹೋದರೆ ಬಹಳ ಕಷ್ಟವಾಗುತ್ತದೆ, ಡೆಲ್ಲಿಯಲ್ಲಿ ಇವರಿಗೆ ಅವಾರ್ಡ್ ಬಂದಿದೆ ಎಂದು ತಿಳಿದುಕೊಂಡು ಹಳ್ಳಿಗಳಲ್ಲಿ ಅವಾರ್ಡ್ ಪಡೆದಂಥವರಿಗೆ ಸನ್ಮಾನ ಮಾಡುತ್ತಿದ್ದಾರೆ, ಇಂಥ ಸಂಸ್ಥೆಗಳು ಹುಟ್ಟುಕೊಂಡಿವೆ, ಇದೊಂದು ಬಿಸಿನೆಸ್ ಅನ್ನಾಗಿ ಮಾಡಿಕೊಂಡಿವೆ, ಇದೊಂದು ಮೋಸದ ಜಾಲವಿದೆ.

ಶ್ರೀ ಡಿ ಕೆ ಶಿವಕುಮಾರ್ : ಮಾನ್ಯ ಜ್ಞಾನೇಂದ್ರರವರೇ, ಕೇಂದ್ರದಲ್ಲಿ ತಮ್ಮ ಸರ್ಕಾರವೇ ಇದೆ, ಅಲ್ಲಿನ ಗೃಹ ಸಚಿವರಿಗೆ ನೀವು ಹೇಳಿ ತನಿಖೆ ಮಾಡಿಸಬಹುದಲ್ಲವೆ? ಏಕೆಂದರೆ ಸೆಂಟರ್‌ನಲ್ಲಿರುವ ಮಿನಿಸ್ಟರ್‌ಗಳೇ ಅವಾರ್ಡ್‌ಗಳನ್ನು ಕೊಡುತ್ತಿರುವುದರಿಂದ ಅಲ್ಲಿಯೇ ಎನ್‌ಕ್ವಾಯರಿ ಕಂಡಕ್ಟ್ ಮಾಡಲಿಕ್ಕೆ ಹೇಳಬಹುದಲ್ಲವೆ?

ಶ್ರೀ ಬಿ ಎನ್ ಬಚ್ಚೇಗೌಡ : ಇಂಡಿಯಾ ಟುಡೇದಲ್ಲಿನ ಮಾರ್ಗ್‌ನಲ್ಲಿ ಕೂಡ ಇದೇ ರೀತಿ ಬರುತ್ತದೆ.

ಛೇರ್ಮನ್ : ನನ್ನ ಅಭಿಪ್ರಾಯ ಏನೆಂದರೆ, ಬೆಸ್ಟ್ ಸಿಟಿಜನ್ ಎಲ್ಲರೂ ಆಗೋಣ ಆದರೆ ಪ್ರಶಸ್ತಿ ಏನೂ ಬೇಕಾಗಿಲ್ಲ. ನಮ್ಮ ಕಾರ್ಯರೂಪದಲ್ಲಿ, ನಮ್ಮ ನಡೆನುಡಿಯಲ್ಲಿ ಬರಲಿ.

ಶ್ರೀ ಕೆ ಜಯಪ್ರಕಾಶ್ ಹೆಗಡೆ : ಜನಗಳು ಪ್ರಶಸ್ತಿ ಕೊಟ್ಟರೆ ಸಾಕು ಡೆಲ್ಲಿಯಿಂದ ಅವಾರ್ಡ್ ಬರುವುದು ಬೇಡ.

ಶ್ರೀ ವಿವೇಕಾನಂದ ವೈದ್ಯ : ನಮಗೆ ಒಂದು ಪತ್ರ ಬಂದಿದೆ ಅದರೆ ಅದರ ಒಕ್ಕಣೆ ನೋಡಿಕೊಂಡು ನಾವು ಮೋಸ ಹೋಗಲಿಲ್ಲ. ತಮ್ಮ ಅವಗಹನೆಗೆ ಇದನ್ನು ಕಳುಹಿಸಿಕೊಡುತ್ತೇನೆ.

ಛೇರ್ಮನ್ : ಎಲ್ಲಾ 224 ಜನ ಸದಸ್ಯರಿಗೂ ಬಂದಿದೆ. ಒಬ್ಬರಿಗೆ ಅಲ್ಲ ಎಲ್ಲರಿಗೂ ಬಂದಿದೆ. Mr Soma Shekar G I request you to conclude, Government is ready to reply at 3P.M.

ಶ್ರೀ ಕೆ. ಶ್ರೀನಿವಾಸಗೌಡ ಕುಡುವನಹಳ್ಳಿ : ಮಾನ್ಯ ಅಧ್ಯಕ್ಷರೇ, ಈಗ ಪಹಣಿ ಕೊಡುವುದಕ್ಕೆ 15 ರೂಪಾಯಿ ತೆಗೆದುಕೊಳ್ಳುತ್ತಿರುವುದು ಜಾಸ್ತಿ ಏಕೆಂದರೆ, ಮೊದಲು ವಿಲೇಜ್

ಅಕೌಂಟೆಂಟ್‌ಗೆ ಕೇವಲ 5 ರೂಪಾಯಿ ಕೊಟ್ಟರೆ ಪಹಣಿ ಕೊಡುತ್ತಿದ್ದ. ಆದ್ದರಿಂದ, ನೀವು ಈಗ ಕಂಪ್ಯೂಟರ್ ಇಂಡ್ರಡ್ಯೂಸ್ ಮಾಡಿ ಒಂದು ಪಹಣಿಗೆ 15 ರೂಪಾಯಿ ಕೊಡುವುದಕ್ಕಿಂತ ಮೊದಲು ವಿಲೇಜ್ ಅಕೌಂಟೆಂಟ್‌ನಿಂದ ಪಡೆದುಕೊಳ್ಳತಕ್ಕಂಥ ಪದ್ಧತಿಯೇ ಒಳ್ಳೆಯದೆಂದು ಕಾಣುತ್ತದೆ. ಆದ್ದರಿಂದ, ಈಗ ಪಡೆದುಕೊಳ್ಳುತ್ತಿರುವ ಹಣವನ್ನು ಸ್ವಲ್ಪ ಕಡಿಮೆ ಮಾಡಿ.

ಛೇರ್ಮನ್ : ಈಗ ಮಾನ್ಯ ಸದಸ್ಯರಾದ ಸೋಮಶೇಖರ್‌ರವರೇ ತಾವು ಮುಂದುವರಿಸಿ, Inter-talks allow ಮಾಡಿದರೆ ಇದು ಮುಗಿಯುವಂತಿಲ್ಲ.

ಶ್ರೀ ಎಸ್.ಎಸ್. ಪಾಟೀಲ್ : ಉತ್ತರ ಕರ್ನಾಟಕದಲ್ಲಿ ಹೋಬಳಿಗಳಿಲ್ಲ. ಈಗ ಒಂದೊಂದು ತಾಲ್ಲೂಕಿಗೆ ಒಂದೊಂದು ಹೋಬಳಿ ಇದೆ. ಆದ್ದರಿಂದ, ಹೋಬಳಿಗಳನ್ನು ಜಾಸ್ತಿ ಮಾಡಬೇಕು. ನಮ್ಮಲ್ಲಿ ಹೋಬಳಿಯನ್ನು ಜಾಸ್ತಿ ಮಾಡದಿದ್ದರೆ, ಈ ವಿಮೆಯಲ್ಲಿ ನಮಗೆ ಅನ್ಯಾಯವಾಗುತ್ತದೆ. ದಯವಿಟ್ಟು ಹೋಬಳಿಗಳನ್ನು ಹೆಚ್ಚು ಮಾಡಿಕೊಡಬೇಕು.

ಛೇರ್ಮನ್ : ಈಗಾಗಲೇ 100 ಹೋಬಳಿ ಮಾಡುವುದಕ್ಕೆ ಸರ್ಕಾರದ ಒಪ್ಪಿಗೆ ಇದೆ ಎಂದು ಈಗಾಗಲೇ ಸರ್ಕಾರದವರು ಹೇಳಿದ್ದಾರೆ. ಆದ್ದರಿಂದ, ಮಾಡುತ್ತಾರೆಂದು ಕಾಣುತ್ತದೆ.

ಶ್ರೀ ಬಿ ಸೋಮಶೇಖರ್ : 1998ರಲ್ಲಿ ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಸುಮಾರು 4 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿ ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿ ಗಣಕ ಯಂತ್ರಗಳನ್ನು ವ್ಯವಸ್ಥೆ ಮಾಡಿದ್ದೇವೆ. ಈ ಒಂದು ಇಲಾಖೆಗೆ ತಾವು ಮಂತ್ರಿಗಳಾಗಿ ಎರಡು ವರ್ಷವಾಗಿದೆ. ಆದರೆ, ಆ ಸಂದರ್ಭದಲ್ಲಿ ನಾನು ಕೇವಲ ಒಂದೂವರೆ ವರ್ಷ ಮಾತ್ರ ಈ ಒಂದು ಇಲಾಖೆಯ ಮಂತ್ರಿಯಾಗಿದ್ದೆ. ನಾನು ಆ ಒಂದು ಅವಧಿಯಲ್ಲಿಯೇ ಕಂಪ್ಯೂಟರ್‌ನ್ನು ಲಾಂಚ್ ಮಾಡಿ ಪ್ರತಿಯೊಂದು ತಾಲ್ಲೂಕು ಮಟ್ಟದಲ್ಲಿ ಕಂಪ್ಯೂಟರ್ ಕೊಡತಕ್ಕಂಥ ಕೆಲಸವನ್ನು ಮಾಡಿದ್ದೇವೆ. ಚಿತ್ರದುರ್ಗ ಮತ್ತು ಗುಲ್ಬರ್ಗದಲ್ಲಿಯೂ ಕೂಡ ಇದನ್ನು ಪ್ರಾರಂಭ ಮಾಡಿದ್ದೇವೆ. ನನ್ನ ಕ್ಷೇತ್ರದಲ್ಲಿಯೂ ಕೂಡ ಇದನ್ನು ಪ್ರಾರಂಭ ಮಾಡಬೇಕಾಗಿತ್ತು. ಆದರೆ ಅಷ್ಟು ಹೊತ್ತಿಗಾಗಲೇ ಚುನಾವಣೆ ಬಂದಿದ್ದರಿಂದ ಕಂಪ್ಯೂಟರ್ ವ್ಯವಸ್ಥೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ನೀವು ಈಗ ಮಾಡಿರತಕ್ಕಂಥದ್ದರ ಬಗ್ಗೆ ನಮಗೆಲ್ಲಾ ಸಂತೋಷವಾಗಿದೆ. ಆದರೆ, ಇದು ನಮ್ಮ ಸ್ಕೀಂ ಆಗಿರುವುದರಿಂದ, you cannot take the credit for that.
ಇದು ನಮ್ಮ ಸರ್ಕಾರ ಇದ್ದಾಗ ಪ್ರಾರಂಭವಾಗಿರುವುದರಿಂದ, ಈ ಕ್ರೆಡಿಟ್ ನಮ್ಮ ಸರ್ಕಾರಕ್ಕೆ ಕೊಡಲೇ ಬೇಕಾಗುತ್ತದೆ. ಇವತ್ತಿನ ದಿವಸ ಸನ್ಮಾನ್ಯ ಮುಖ್ಯಮಂತ್ರಿಯವರು ಕರ್ನಾಟಕ ರೈಲ್ವೆ ಡೆವಲಪ್‌ಮೆಂಟ್ ಕಾರ್ಪೋರೇಷನ್ ಎನ್ನತಕ್ಕಂಥ ಒಂದು ಹೊಸ ಸ್ಕೀಂ ಅನ್ನು ಪ್ರಾರಂಭ ಮಾಡಿದ್ದಾರೆ. it is his scheme we welcome it. ಈ ರೀತಿಯಾದ ಹೊಸ ಯೋಜನೆಗಳನ್ನು ತಾವೇನು ಮಾಡುತ್ತೀರಿ ಅದನ್ನು ನಾವು ಸ್ವಾಗತ ಮಾಡುತ್ತೇವೆ. ಹಾಗೆಯೇ ಅಜಲು ಪದ್ಧತಿಗೆ ಸಂಬಂಧಪಟ್ಟಂತೆ ಮಾನ್ಯ ಕಾಗೋಡುತಿಮ್ಮಪ್ಪನವರು ಒಂದು ಬಿಲ್‌ನ್ನು ತಂದರು. ಇದೂ ಸಹ ಒಂದು ಒಳ್ಳೆಯ ಕಾನೂನಾಗಿದೆ. ಇದನ್ನೂ ಸಹ ನಾವು ಸ್ವಾಗತ ಮಾಡುತ್ತೇವೆ.

ಶ್ರೀ ಡಿ ಆರ್ ಪಾಟೀಲ್ : ಯೋಜನೆಯನ್ನು ಪ್ರಾರಂಭ ಮಾಡಿದವರಿಗೆ ಕ್ರೆಡಿಟ್ ಸಿಗಬೇಕೋ ಅಥವಾ ಅದನ್ನು ಅನುಷ್ಠಾನಗೊಳಿಸಿ ಒಳ್ಳೆಯ ಪ್ರಗತಿಯನ್ನು ಮಾಡಿದವರಿಗೆ ಕ್ರೆಡಿಟ್ ಸಿಗಬೇಕೋ ಎನ್ನತಕ್ಕಂಥದ್ದನ್ನು ತಾವು ಸ್ಪಷ್ಟಪಡಿಸಬೇಕು.

ಶ್ರೀ ಬಿ ಸೋಮಶೇಖರ್ : ಕ್ರೆಡಿಟ್ ಇಬ್ಬರಿಗೂ ಸಹ ಸಿಗಬೇಕು. ಈಗ ಗಂಧದ ಮರಗಳನ್ನು ಖಾಸಗೀಕರಣ ಮಾಡತಕ್ಕಂಥ ಒಂದು ಕಾನೂನನ್ನು ಮಾಡಿದ್ದೀರಿ. ಇದನ್ನು ನಾವೂ ಕೂಡ ಸ್ವಾಗತ ಮಾಡುತ್ತೇವೆ. ಇದೆಲ್ಲಾ ನಿಮ್ಮ ಸ್ಕೀಂಗಳು, ನಾವು ಇಲ್ಲವೆಂದು ಹೇಳುವುದಿಲ್ಲ. ಆದರೆ, ಇದನ್ನು ಇಂಪ್ಲಿಮೆಂಟ್ ಮಾಡುವಾಗ you cannot take the credit for that. ಇದನ್ನು ಬೇಗ ಇಂಪ್ಲಿಮೆಂಟ್ ಮಾಡಿದರೆ ಬಹಳ ಸಂತೋಷವಾಗುತ್ತದೆ. ಈಗಾಗಲೇ ತಾಲ್ಲೂಕುಮಟ್ಟದಲ್ಲಿ ಏನೊಂದು ಕಂಪ್ಯೂಟರ್ ವ್ಯವಸ್ಥೆಯನ್ನು ಮಾಡಿದ್ದೀರಿ, ಅದನ್ನು ಹೋಬಳಿ ಮಟ್ಟದಲ್ಲಿಯೂ ಮಾಡುತ್ತೇವೆಂದು ಏನೊಂದು ಘೋಷಣೆ ಮಾಡಿದ್ದೀರಿ, ಅದನ್ನು ಆದಷ್ಟು ಬೇಗ ಮಾಡಿದರೆ ನಮಗೆ ಸಂತೋಷವಾಗುತ್ತದೆ. ಹೋಬಳಿ ಕಛೇರಿಗಳನ್ನು ಬಲಪಡಿಸುವುದಕ್ಕೋಸ್ಕರ ತಾಲ್ಲೂಕು ಮಟ್ಟದಲ್ಲಿರತಕ್ಕಂಥ ಕೆಲಸಗಳನ್ನು ವಿಕೇಂದ್ರೀಕರಣ ಮಾಡಿ ಹೋಬಳಿ ಮಟ್ಟಕ್ಕೆ ಟ್ರಾನ್ಸ್‌ಫರ್ ಮಾಡಿದರೆ ಒಳ್ಳೆಯದು. ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಹಾಕಿಕೊಂಡಿರತಕ್ಕಂಥ ಯೋಜನೆಗಳನ್ನು ತಾವು ಬಂದ ತಕ್ಷಣವೇ ಇಂಪ್ಲಿಮೆಂಟ್ ಮಾಡಿದ್ದರೆ, ಅದರ ಕ್ರೆಡಿಟ್ ನಿಮಗೆ ಸಿಗುತ್ತಿತ್ತು. ಸೋಮಶೇಖರ್ ಮಾಡಿರತಕ್ಕಂಥದ್ದನ್ನು ನಾವೇಕೆ ಮಾಡಬೇಕೆಂದು ತಾವು ತಿಳಿದುಕೊಂಡಿದ್ದರೇನೋ ನನಗೆ ಗೊತ್ತಿಲ್ಲ. ಪ್ರತಿಯೊಂದು ತಾಲ್ಲೂಕಿನಲ್ಲಿ ಸಬ್ ಡಿವಿಜನ್ ಮಾಡಿ, ಅಲ್ಲಿ ಅಸಿಸ್ಟೆಂಟ್ ಕಮಿಷನರ್ ಹಾಕಬೇಕೆಂದು ಮತ್ತು ಇಂಟರ್ ಮೀಡಿಯೆಟ್ ಕಛೇರಿಗಳನ್ನು ತೆಗೆಯಬೇಕೆಂದು ಹಾಗೂ ಇದನ್ನು ಜಿಲ್ಲಾ ಮತ್ತು ತಾಲ್ಲೂಕು ಹಾಗೂ ಹೋಬಳಿ ಮಟ್ಟದಲ್ಲಿ ಮಾಡಬೇಕೆಂದು ನಾವು ಇದ್ದಂಥ ಸಂದರ್ಭದಲ್ಲಿ ಮಾಡಿದ್ದೇವು. ಆದರೆ, ಇದು ಏಕೋ ನಿಂತು ಹೋಗಿದೆ. ಇದನ್ನು ಮಾಡುವುದಕ್ಕೆ ತಾವು ಯೋಚನೆ ಮಾಡಿ. ಇದರ ಬಗ್ಗೆ ಬೇಕಾದರೆ ಪ್ರತ್ಯೇಕವಾಗಿ ಚರ್ಚೆ ಮಾಡೋಣ. ಹೋಬಳಿ ಮಟ್ಟದಲ್ಲಿ ಗಣಕೀಕರಣವ್ಯವಸ್ಥೆಯನ್ನು ಮಾಡುತ್ತೇವೆಂದು ತಾವು ಹೇಳಿದ್ದೀರಿ. ಆದ್ದರಿಂದ, ಇದನ್ನು ಆದಷ್ಟು ಬೇಗ ಮಾಡಿ. 1964 ರಲ್ಲಿ ತೋಟಿ ಇನಾಂತಿ ಜಮೀನುಗಳಿಗೆ ಹಕ್ಕುಪತ್ರವನ್ನು ಇಷ್ಟು ದಿವಸಗಳಲ್ಲಿ ಕೊಡಬೇಕೆಂದು ಆದೇಶ ಮಾಡಿದ್ದೆವು. ಈಗಾಗಲೇ ಕೆಲವು ತಾಲ್ಲೂಕುಗಳಲ್ಲಿ ಇದನ್ನು ಸಂಪೂರ್ಣವಾಗಿ ಮಾಡಲಾಗಿದೆ. ಆದರೆ, ಬಳ್ಳಾರಿ ಜಿಲ್ಲೆ ಮತ್ತು ಬೇರೆ ಬೇರೆ ಜಿಲ್ಲೆಗಳಲ್ಲಿ ತೋಟಿ ಇನಾಂತಿ ಜಮೀನಿಗಳಿಗೆ ಸಂಬಂಧಪಟ್ಟಂಥ ಹಕ್ಕು ಪತ್ರವನ್ನು ಕೊಟ್ಟಿಲ್ಲ. ಹಾಗೆಯೇ ಅವರಿಗೆ ಖಾತೆ ಕೂಡ ಮಾಡಿಕೊಟ್ಟಿಲ್ಲ. ಆದ್ದರಿಂದ, ಇದಕ್ಕೆ ಸಂಬಂಧಪಟ್ಟಂತೆ ನಿಯಮಾವಳಿಗಳನ್ನು ಸಡಿಲ ಮಾಡುವುದಕ್ಕೆ ಅವಶ್ಯಕತೆ ಇದ್ದರೆ, ನಿಯಮಾವಳಿಗಳನ್ನು ಸಡಿಲಗೊಳಿಸಿ ಇಷ್ಟು ದಿವಸದೊಳಗೆ ಹಕ್ಕುಪತ್ರವನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಂದಾಯ ಇಲಾಖೆಗೆ ಸಂಬಂಧಪಟ್ಟಂತೆ ಇಷ್ಟು ವಿಷಯ ಹೇಳಿ ಈಗ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ಸಂಬಂಧಪಟ್ಟಂತೆ ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಇಲಾಖೆಯ ಸಚಿವರಾಗಿರತಕ್ಕಂಥ ಶ್ರೀ ಮುನಿಯಪ್ಪನವರಿಗೆ ಈ ವಿಷಯವನ್ನು ಅನೇಕ ಸಲ ಹೇಳಿದ್ದೇನೆ. ಆದರೂ ಸಹ ಇಲ್ಲಿಯೂ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಇವತ್ತಿನದಿವಸ ಮರುಳು ತೆಗೆದುಕೊಂಡು ಹೋಗುವವರದು ಒಂದು ದೊಡ್ಡ ದಂಧೆಯಾಗಿದೆ. ಇದರಿಂದ ರಸ್ತೆಗಳೆಲ್ಲವೂ ಕೂಡ ಹಾಳಾಗಿವೆ. ಕಾವೇರಿ ಮತ್ತು ಶಿಂಷಾಬೇಸಿನ್ ಪ್ರದೇಶದಲ್ಲಿ ಮರಳು ತೆಗೆದುಕೊಂಡು ಹೋಗುವುದಕ್ಕೆ ಹೈ ಕೋರ್ಟ್‌ನವರು ಸ್ಟೇ ಕೊಟ್ಟಿದ್ದಾರೆ. ಆದರೂ ಸಹ ಬೇರೆ ಬೇರೆ ರೀತಿಯಲ್ಲಿ ವಂಚನೆ ಮಾಡಿ ಮರಳನ್ನು ತುಂಬಿಕೊಂಡು ಹೋಗುತ್ತಿದ್ದಾರೆ. ಹಾಗೆಯೇ,

ಹೊಳೆಗಳಿಂದ ಮರಳನ್ನು ತಂದು ಒಂದು ಕಡೆ ಗುಡ್ಡೆ ಹಾಕಿ ಅಲ್ಲಿಂದ ಮರಳು ತೆಗೆದುಕೊಂಡು ಬರುತ್ತಿದ್ದಾರೆ. ಆದರೆ, ಹೊಳೆಯಿಂದ ಮರಳನ್ನು ತೆಗೆದುಕೊಂಡು ಬರುತ್ತಿಲ್ಲವೆಂದು ಹೇಳುತ್ತಾರೆ. ಇಲ್ಲಿ ಏನಾಗಿದೆ ಅಂದರೆ ಸೆಕ್ಟರ್ ಪೊಲೀಸ್‌ನವರು ಮತ್ತು ನಿಮ್ಮ ಇಲಾಖೆಯ ಅಧಿಕಾರಿಗಳು ದುಡ್ಡು ಪಡೆದುಕೊಂಡು ಈ ರೀತಿಯಾದ ಒಂದು ವ್ಯವಸ್ಥೆಯನ್ನು ನಿರ್ಮಾಣ ಮಾಡಿದ್ದಾರೆ. ಇದರಿಂದ ಸಾಕಷ್ಟು ಲೂಟಿ ಮಾಡುತ್ತಿದ್ದಾರೆ. ಆದ್ದರಿಂದ ತಕ್ಷಣವೇ ಹೊಳೆಗಳಿಂದ ಮರಳನ್ನು ತರತಕ್ಕಂಥದನ್ನು ನಿಲ್ಲಿಸಬೇಕು. ನಮ್ಮ ಸರ್ಕಾರದ ಇದ್ದಂಥ ಸಂದರ್ಭದಲ್ಲಿ ಈ ರೀತಿಯಾಗಿ ದಂಧೆ ಆಗುತ್ತಿರಲಿಲ್ಲ. ನಾನು 20 ವರ್ಷದಿಂದ ಆ ಒಂದು ಕ್ಷೇತ್ರದಲ್ಲಿ ಶಾಸಕನಾಗಿದ್ದೇನೆ. ಇಲ್ಲಿ ಒಂದು ಲಾರಿ ಕೂಡ ಹೋಗುತ್ತಿರಲಿಲ್ಲ. ಇವತ್ತಿನದಿವಸ ನಿಮ್ಮ ಕಾಂಗ್ರೆಸ್ ಕಾರ್ಯಕರ್ತರು ಪರ್ಮಿಟ್ ಪಡೆದುಕೊಂಡು ಈ ಕೆಲಸವನ್ನು ಮಾಡುತ್ತಿದ್ದಾರೆ. ಒಂದಿಬ್ಬರು ನಮ್ಮವರೂ ಕೂಡ ಈ ಉಪಯೋಗವನ್ನು ಪಡೆದುಕೊಳ್ಳಬಹುದು. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ, ನಿಮ್ಮವರು 99 ಪರ್ಸೆಂಟ್ ಇದ್ದರೆ ನಮ್ಮವರು ಕೇವಲ ಒಂದು ಪರ್ಸೆಂಟ್ ಇರಬಹುದು. ಆದ್ದರಿಂದ ಇದನ್ನು ಸಂಪೂರ್ಣವಾಗಿ ನಿಲ್ಲಿಸಬೇಕು. ಇಲ್ಲದಿದ್ದರೆ, 40-50 ಲಕ್ಷ ರೂಪಾಯಿಗಳಷ್ಟು ಖರ್ಚು ಮಾಡಿರುವ ರಸ್ತೆಗಳೆಲ್ಲವೂ ಕೂಡ ಹಾಳಾಗುತ್ತವೆ. ಮತ್ತೆ ರಸ್ತೆಗಳನ್ನು ಸರಿಪಡಿಸುವುದಕ್ಕೋಸ್ಕರ ಕೋಟ್ಯಾಂತರ ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಇದಕ್ಕೆ ಸಂಬಂಧಪಟ್ಟಂತೆ ನಿಮ್ಮ ಅಧಿಕಾರಿಗಳ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಚಿವರು) : ಮಾನ್ಯ ಛೇರ್ಮನ್‌ರವರೆ, ಕೊನೆಯಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಆದ್ದರಿಂದ, ಈಗಲೇ ಉತ್ತರ ಕೊಡುವುದಕ್ಕೆ ಬಯಸುತ್ತೇನೆ. ಈ ಒಂದು ದಂಧೆ ಬಹಳ ವರ್ಷಗಳಿಂದ ನಡೆದುಕೊಂಡು ಬರುತ್ತಿದೆ. ಇತ್ತೀಚೆಗೆ ಮಾತ್ರ ಮರಳು ಉಪಯೋಗ ಮಾಡತಕ್ಕಂಥವರು ಜಾಸ್ತಿಯಾಗಿದ್ದಾರೆ. ಇವತ್ತಿನದಿವಸ ಬಡವರೂ ಕೂಡ ಸಿಮೆಂಟ್ ಉಪಯೋಗ ಮಾಡಿ ಮನೆ ಕಟ್ಟಬೇಕೆಂಬ ಒತ್ತಾಯ ಕೂಡ ಇದೆ. ಗ್ರಾಮಪಂಚಾಯತಿಗೆ ಮರಳು ವಿತರಣೆ ಮಾಡತಕ್ಕಂಥ ಅಧಿಕಾರ ಕೊಡಲಾಗಿತ್ತು. ಆದರೆ, ಅವರ್‍ಯಾರು ಸರಿಯಾದ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ, ಹರಾಜು ಮುಖಾಂತರ ವಿತರಣೆ ಮಾಡಬೇಕೆಂದು ಒಂದು ಹೊಸ ಪಾಲಿಸಿಯನ್ನು ಮಾಡಿದ್ದೇವೆ. ಹರಾಜು ಮುಖಾಂತರ ಮಾಡುವುದಕ್ಕೋಸ್ಕರ ಅಸಿಸ್ಟೆಂಟ್ ಕಮೀಷನರ್ ಮತ್ತು ತಹಶೀಲ್ದಾರ್‌ರವರು ಹಾಗೂ ತಾಲ್ಲೂಕು ಪಂಚಾಯತಿಯ ಎಗ್ಸಿಕ್ಯೂಟಿವ್ ಆಫೀಸರ್ ಮತ್ತು ನಮ್ಮ ಜಿಯೋಲಾಜಿಸ್ಟ್‌ರನ್ನು ಕಾರ್ಯದರ್ಶಿಯರನ್ನಾಗಿ ಮಾಡಲಾಗಿದೆ. ಎಲ್ಲೆಲ್ಲಿ ಮರಳನ್ನು ವಿತರಣೆ ಮಾಡಬೇಕೆಂದು ಮತ್ತು ಎಲ್ಲೆಲ್ಲಿ ಬೇಡ ಎನ್ನತಕ್ಕಂಥ ಅಧಿಕಾರವನ್ನು ಅವರಿಗೆ ಕೊಟ್ಟಿದ್ದೇವೆ. ಇದಕ್ಕೆ ಸಂಬಂಧಪಟ್ಟಂತೆ ಇವರೇ ತೀರ್ಮಾನ ತೆಗೆದುಕೊಳ್ಳಬಹುದು. ತಾಲ್ಲೂಕು ಮಟ್ಟದಲ್ಲಿ ಇರತಕ್ಕಂಥ ಅಧಿಕಾರಿಗಳಿಗೆ ಈ ಒಂದು ಅಧಿಕಾರವನ್ನು ಕೊಡಲಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ ಜಿ ಆರ್ ಸಿಂಧ್ಯ (ಕನಕಪುರ) : ಮಾನ್ಯ ಛೇರ್ಮನ್‌ರವರೆ, ಮಾನ್ಯ ನಗರಾಭಿವೃದ್ಧಿ ಸಚಿವರು ಮತ್ತು ನಾನು ಕನಕಪುರ ತಾಲ್ಲೂಕಿನ ಶಾಸಕರಾಗಿದ್ದೇವೆ. ಈ ಒಂದು ಸಮಸ್ಯೆ ಬಗ್ಗೆ ನಾವೆಲ್ಲರೂ ಕೂಡ ಪಕ್ಷಾತೀತವಾಗಿ ನೋಡಬೇಕಾಗುತ್ತದೆ. ನಬಾರ್ಡ್ ಸಂಸ್ಥೆಯಿಂದ ಮತ್ತು ಬೇರೆ ಬೇರೆ ಸಂಸ್ಥೆಯಿಂದ ಸಾಲವನ್ನು ತೆಗೆದುಕೊಂಡು ಬಂದು ಸೇತುವೆಗಳನ್ನು ನಿರ್ಮಾಣ

ಮಾಡುತ್ತಿದ್ದೇವೆ. ಇದು ನಿಮ್ಮ ತಾಲ್ಲೂಕಿನಲ್ಲಿಯೂ ಕೂಡ ಇದೆ. ಇದು ತಮ್ಮ ಕಣ್ಣಿಗೂ ಬಹಳ ಸ್ಪಷ್ಟವಾಗಿ ಕಾಣುತ್ತದೆ. ರಾಮನಗರ ತಾಲ್ಲೂಕಿನಲ್ಲಿರುವ ಮಾನ್ಯ ಸಿ.ಎಂ. ಲಿಂಗಪ್ಪನವರಿಗೂ ಸಹ ಇದು ಗೊತ್ತಿದೆ. ಮಾಗಡಿ ತಾಲ್ಲೂಕಿನಿಂದ ಹಿಡಿದು ಮೇಕೆದಾಟ್ ಹತ್ತಿರುವ ಇರುವ ಸಂಗಮಕ್ಕೆ ಅರ್ಕಾವತಿ ಹೊಳೆ ಕಾವೇರಿ ನದಿಯನ್ನು ಸೇರುತ್ತದೆ. ಇವತ್ತಿನದಿವಸ ಎರಡು ಕಡೆಯೂ ಸಹಿತ ಸುಮಾರು ಅರ್ಧ ಫರ್ಲಾಂಗ್‌ನವರೆಗೂ ಇರತಕ್ಕಂಥ ತೆಂಗಿನ ತೋಟಕ್ಕೆ ನುಸಿ ರೋಗ ಬಂದಿರುವುದರಿಂದ ಈ ಪ್ರದೇಶದಲ್ಲಿರತಕ್ಕಂಥ ತೋಟಗಳನ್ನು ರೈತರು ಮಾರುತ್ತಿದ್ದಾರೆ. ಈ ತೋಟಗಳಲ್ಲಿ ಸ್ವಲ್ಪ ಮರಳು ತುಂಬಿಕೊಂಡಿರತಕ್ಕಂಥ ಜಾಗ ಇದೆ. ಇದು ಯಾವ ಮಟ್ಟಕ್ಕೆ ಬಂದಿದೆ ಅಂದರೆ, ರಾಮನಗರ ಮತ್ತು ಕನಕಪುರ ನಡುವೆ ಇರುವ ಸೇತುವೆ ರಸ್ತೆ ಇನ್ನೊಂದು ವರ್ಷದಲ್ಲಿ ಆ ರಸ್ತೆ ಎಲ್ಲಿದೆ ಎಂದು ನಾವು-ನೀವು ಹುಡುಕಬೇಕಾಗುತ್ತದೆ. ನಾನೇ 20 ವರ್ಷದ ಹಿಂದೆ ಶಾಸಕನಾಗಿ ಕಟ್ಟಿದಂತಹ ಸುಮಾರು 2 ರಿಂದ 3 ಕೋಟಿ ರೂಪಾಯಿಗಳನ್ನು ಒಂದೊಂದು ಸೇತುವೆಗೆ ಖರ್ಚು ಮಾಡಿ ಕಟ್ಟಲಾಗಿದೆ ಕರಳು ಕತ್ತರಿಸುತ್ತದೆ. ಸೇತುವೆಗಳಲ್ಲವೂ ಇನ್ನೇನು ಬಿದ್ದು ಹೋಗುವ ಸ್ಥಿತಿಗೆ ಬಂದಿದೆ. ಇದು ಪೊಲೀಸ್ ಮತ್ತು ಕಂದಾಯ ಇಲಾಖೆ ಹಾಗೂ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಕೋ-ಆರ್ಡಿನೇಶನ್ ಇದಕ್ಕೆ ಸಂಬಂಧಪಟ್ಟಂತೆ ಇರಬೇಕಾಗುತ್ತದೆ. ಇಲ್ಲಿ ನಿಮ್ಮ ವಿಫಲತೆ ಬಗ್ಗೆ ಮತ್ತು ನಮ್ಮ ಸಫಲತೆ ಎನ್ನತಕ್ಕಂಥದ್ದರ ಪ್ರಶ್ನೆ ಬೇಡ. ತಾವು ದಯವಿಟ್ಟು ಯಾವುದೇ ಪೂರ್ವಾಗ್ರಹ ಪೀಡಿತರಾಗದೆ ಮುಕ್ತವಾದ ಮನಸ್ಸಿನಿಂದ ಒಂದು ಸ್ಪಷ್ಟವಾದ ನೀತಿಯನ್ನು ದಯಮಾಡಿ ಮಾಡಬೇಕಾಗುತ್ತದೆ. ಎಂದು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ರಸ್ತೆಗಳು ಮತ್ತು ಸೇತುವೆಗಳು ಹಾಳಾಗುತ್ತಿವೆ ಎಂದು ಈ ಸಂದರ್ಭದಲ್ಲಿ ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಸುಮಾರು 200 300 ವರ್ಷಗಳ ಹಿಂದೆ ಪ್ರಾರಂಭವಾಗಿರತಕ್ಕಂಥ ದೇಗುಲ ಮಠ ಅರ್ಕಾವತಿ ಹೊಳೆಯ ಪಕ್ಕದಲ್ಲಿದೆ. ಈ ಮಠದಲ್ಲಿ ಸುಮಾರು ಎರಡು ಸಾವಿರ ಅನಾಥ ಮಕ್ಕಳಿಗೆ ಊಟ ಕೊಡುತ್ತಾರೆ. ಈ ವರ್ಷ ಏನಾದರೂ ಮಳೆಯಾದರೆ, ಹೊಳೆಯಲ್ಲಿ ಹೆಚ್ಚಾಗಿ ನೀರು ಹರಿದು ಬಂದು ಅಲ್ಲಿರತಕ್ಕಂಥ ಮಠ ಕೊಚ್ಚಿ ಹೋಗತಕ್ಕಂಥ ಸಂದರ್ಭ ಬರುತ್ತದೆ. ನಾನು ಕೇವಲ ಬೆಂಗಳೂರು ಗ್ರಾಮಾಂತರ ಪ್ರದೇಶಕ್ಕೆ ಸಂಬಂಧಪಟ್ಟಂತೆ ಪ್ರಸ್ತಾಪ ಮಾಡುತ್ತಿಲ್ಲ. ರಾಜ್ಯದ ಎಲ್ಲಾ ಕಡೆ ಈ ಒಂದು ಸಮಸ್ಯೆ ಇದೆ. ನಮ್ಮ ಕಡೆಯೂ ಕೂಡ ಈ ಒಂದು ಸಮಸ್ಯೆ ಇದೆ. ನಾನು ಡಿಮಾಂಡ್ ಮೇಲೆ ಮಾತನಾಡಬೇಕೆಂದು ಇದ್ದೆ. ಆದರೆ ಸಮಯದ ಅಭಾವದಿಂದ ನನಗೆ ಮಾತನಾಡುವುದಕ್ಕೆ ಆಗಲಿಲ್ಲ ಎಂದು ಮಾನ್ಯ ಪ್ರಕಾಶ್ ಹುಕ್ಕೇರಿಯವರು ಹೇಳಿದರು. ಈಗ ತಮಗೆ ಹೇಳಬೇಕೆಂದರೆ, ಮಹಾರಾಷ್ಟ್ರದಿಂದ ಬೋಟ್‌ಗಳನ್ನು ತೆಗೆದುಕೊಂಡು ಬಂದು ಮೆಷೀನ್ ಮೂಲಕ ಕೃಷ್ಣ ನದಿಯಲ್ಲಿರತಕ್ಕಂಥ ಮರಳನ್ನು ಸಕ್ ಮಾಡುತ್ತಿದ್ದಾರೆ. ಸಕ್ ಮಾಡುವುದರಿಂದ ಏನಾಗುತ್ತದೆ ಎಂದರೆ, ಆ ಹೊಳೆಗಳಲ್ಲಿ ನೀರನ್ನು ಶೇಖರಣೆ ಮಾಡತಕ್ಕಂಥ ಒಂದು ತಾಕತ್ ಹೊರಟು ಹೋಗುತ್ತದೆ. ಆನಂತರ, ಕೇವಲ ಕಲ್ಲು, ಬಂಡೆ, ಮಣ್ಣು ಉಳಿದುಕೊಂಡು ಹೊಳೆಯ ಪಕ್ಕದಲ್ಲಿರತಕ್ಕಂಥ ರೈತರು ಬಹಳ ಒಂದು ಅನಾಹುತ ಎದುರಿಸಬೇಕಾದ ಪರಿಸ್ಥಿತಿ ಉತ್ತರ ಕರ್ನಾಟಕದಲ್ಲಿ ನಿರ್ಮಾಣವಾಗುತ್ತದೆ. ಆದ್ದರಿಂದ, ಇದನ್ನು ದಯಮಾಡಿ ಅತ್ಯಂತ ಕಾಳಜಿಯಿಂದ ನಿಲ್ಲಿಸಬೇಕೆಂದು ಹೇಳುತ್ತಿದ್ದೇನೆ. ಇದೊಂದು ಕರ್ನಾಟಕ ರಾಜ್ಯದ ಆಸ್ತಿ ಎನ್ನತಕ್ಕಂಥ ದೃಷ್ಟಿಯಿಂದ ನಾವೆಲ್ಲರೂ ಸಹಕಾರ ಕೊಡುವುದಕ್ಕೆ ತಯಾರಿದ್ದೇವೆ. ಹಾಗೆಯೇ ಗ್ರಾಮ ಪಂಚಾಯತಿ ಮತ್ತು

ತಾಲ್ಲೂಕು ಪಂಚಾಯತಿ ಹಾಗೂ ಜಿಲ್ಲಾ ಪಂಚಾಯತಿ ಮತ್ತು ಪೊಲೀಸ್ ಇಲಾಖೆ ಹಾಗೂ ಶಾಸಕರೆಲ್ಲರೂ ಕೂಡ ನಿಮಗೆ ಸಹಕಾರ ಕೊಡುತ್ತೇವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮಂತ್ರಿಯವರು ಹೇಳಿಕೆಯನ್ನೂ ಸಹ ಕೊಟ್ಟಿದ್ದಾರೆ. ಇವತ್ತಿನದಿವಸ ಮರಳಿನ ಅವಶ್ಯಕತೆ ನಮಗೆ ಇದೆ. ಮರಳನ್ನು ಬೇರೆ ದೇಶಕ್ಕೆ ಕಳುಹಿಸುತ್ತಿದ್ದೀರಿ ಎಂದು ನಾನು ಹೇಳುತ್ತಿಲ್ಲ. ಹಾಗೆಯೇ ಮರಳನ್ನು ಬೇರೆ ದೇಶಕ್ಕೆ ರಫ್ತು ಮಾಡುವುದಕ್ಕೂ ಕೂಡ ಆಗುವುದಿಲ್ಲ. ಇದರ ಜೊತೆಗೆ ಬಿಲ್ಡಿಂಗ್ ಕಟ್ಟುವುದಕ್ಕೆ ಇದನ್ನು ಉಪಯೋಗ ಮಾಡಲೇ ಬೇಕಾಗುತ್ತದೆ. ಇದನ್ನು ಸಹಿತ ನಾನು ಒಪ್ಪಿಕೊಳ್ಳುತ್ತೇನೆ. ಮರಳನ್ನು ಸಾಗಿಸತಕ್ಕಂಥ ಲಾರಿ ಮಾಲೀಕರು ಮತ್ತು ಮರಳನ್ನು ಹೊರತಕ್ಕಂಥ ಕಾರ್ಮಿಕರ ಬಗ್ಗೆಯೂ ಕೂಡ ಚಿಂತನೆ ಮಾಡಬೇಕಾಗಿದೆ. ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಅಧಿಕಾರ ಕೊಟ್ಟಿದ್ದೇವೆಂದು ತಾವು ಹೇಳುತ್ತೀರಿ. ನಾವು, ಅಧಿಕಾರಿಗಳ ಜೊತೆ ಸಭೆಗಳನ್ನು ಮಾಡಿದ್ದೇವೆ. ನಾವು ಈ ಸ್ಥಾನದಲ್ಲಿ ಕುಳಿತುಕೊಂಡು ಈ ಒಂದು ಹಂತದಲ್ಲಿರತಕ್ಕಂಥ ಸಣ್ಣಪುಟ್ಟ ಅಧಿಕಾರಿಗಳ ಮೇಲೆ ಅಲಿಗೇಷನ್ ಮಾಡುವುದಕ್ಕೆ ಹೋಗಬಾರದು.

1.10 ಪಿಎಂ

They are helpless. ಒಬ್ಬ ಅಸಿಸ್ಟೆಂಟ್ ಡೈರೆಕ್ಟರ್ ಅಥವಾ ಡೆಪ್ಯೂಟಿ ಡೈರೆಕ್ಟರ್ ಇರುತ್ತಾರೆ ಅವರ ಕೈಕೆಳಗಡೆ ಮೆಷಿನರಿ ಏನು ಇರುತ್ತದೆ, ಒಂದು ಪೊಲೀಸ್ ಸ್ಟೇಶನ್‌ಗೆ 20-25 ಜನ ಪೊಲೀಸ್ ಕಾನ್‌ಸ್ಟೇಬಲ್‌ಗಳು ಇರುತ್ತಾರೆ. ದಯಮಾಡಿ ಒಂದು ನಿಮಿಷ ನಾನು ಹೇಳುವುದನ್ನು ಕೇಳಿ, ಅವರು ಎಷ್ಟು ಗಂಟೆ ತಡೆಯುವುದಕ್ಕಾಗುತ್ತದೆ, ಅವರು ಏನು ಮಾಡುತ್ತಾರೆಂದರೆ, ಗಾಡಿಗಳಲ್ಲಿ ಮರಳನ್ನು ಎತ್ತಿಹಾಕಿಕೊಂಡು ಬಂದು ಮೇನ್ ರೋಡಿಗೆ ತಂದು ಹಾಕುತ್ತಾರೆ. ಅಲ್ಲಿಂದ ಲಾರಿಗಳ ಮೂಲಕ ಸಾಗಿಸುತ್ತಾರೆ. This is happening and moreover we cannot plead our helplessness. ಆದ್ದರಿಂದ ದಯಮಾಡಿ ತಾವು ಇದನ್ನು ನಿಲ್ಲಿಸುವುದಕ್ಕೆ ಸರ್ಕಾರ ಸ್ಪಷ್ಟವಾದ, ದೃಢವಾದ ನಿಲುವನ್ನು ಸರ್ಕಾರ ತಾಳಬೇಕು, ಇದರ ಬಗ್ಗೆ ನಾವು ಪಕ್ಷಾತೀತವಾಗಿ ಝಣಇದನ್ನು ಯಾವ ರೀತಿಯಾಗಿ ನಿಲ್ಲಿಸಬೇಕು ಎನ್ನುವುದರ ಬಗ್ಗೆ ಸರ್ಕಾರ ತೆಗೆದುಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಹುಕ್ಕೇರಿ ಪ್ರಕಾಶ್ ಬಾಬಣ್ಣ : ಮಾನ್ಯ ಛೇರ್ಮನ್‌ರೆ, ಉಸುಕಿನ ಬಗ್ಗೆ ನಾನು ಒಂದು ನಿಮಿಷ ಹೇಳುತ್ತೇನೆ, ಮಾನ್ಯ ಸಚಿವರು ಹೊಸ ಕಾನೂನನ್ನು ಜಾರಿಯಲ್ಲಿ ತಂದಿದ್ದೇವೆಂದು ಹೇಳಿದರು. ಇದರಿಂದ ನಮ್ಮ ಸರ್ಕಾರಕ್ಕೆ ಏನೂ ಲಾಭವಾಗಿಲ್ಲ, ನನ್ನ ಕ್ಷೇತ್ರ ಕರ್ನಾಟಕ-ಮಹಾರಾಷ್ಟ್ರ ಬಾರ್ಡ್‌ರ್‌ನಲ್ಲಿ ಇರುವುದರಿಂದ ಕೃಷ್ಣಾನದಿಯಿಂದ ಟೆಂಡರ್ ಮೂಲಕ ಈಗಾಗಲೇ ಉಸುಕನ್ನು 2001-02ರಲ್ಲಿ ಹರಾಜು ಮಾಡಿದ್ದಾರೆ. ಅಥಣಿ ತಾಲ್ಲೂಕಿನಲ್ಲಿ 30 ಎಕರೆ ಜಮೀನಿನಲ್ಲಿ ಹರಾಜು ಮಾಡಿ 7 ಲಕ್ಷ ರೂಪಾಯಿಗಳು ಬಂದಿದೆ, ಚಿಕ್ಕೋಡಿ ತಾಲ್ಲೂಕಿನಲ್ಲಿ 60 ಎಕರೆ ಜಮೀನು ಹರಾಜು ಮಾಡಿ 12 ಲಕ್ಷ ರೂಪಾಯಿಗಳು ಮಾತ್ರ ನಮ್ಮ ಸರ್ಕಾರಕ್ಕೆ ಬಂದಿರುತ್ತದೆ. ಅದೆ ಮಹಾರಾಷ್ಟ್ರದಲ್ಲಿ 30 ಎಕರೆ ಜಮೀನು ಹರಾಜು ಮಾಡಿ 1 ಕೋಟಿ 17 ಲಕ್ಷ ರೂಪಾಯಿಗಳು ಸರ್ಕಾರಕ್ಕೆ ಆದಾಯ ಬರುವಂತೆ ಅವರು ಮಾಡಿದ್ದಾರೆ. ಇದರ ಬಗ್ಗೆ ನಾನು ಗಮನ ಸೆಳೆಯುವ

ಸೂಚನೆ ಮೂಲಕ ನೋಟೀಸ್ ಕೂಡ ಕೊಟ್ಟಿದ್ದೇನೆ. ಅದರ ಬಗ್ಗೆ ನಾನು ಸವಿಸ್ತಾರವಾದ ಮಾಹಿತಿಯನ್ನು ತಮಗೆ ಹೇಳುತ್ತೇನೆ. ಅದಕ್ಕಾಗಿ ದಯವಿಟ್ಟು ಟೆಂಡರ್ ಮುಖಾಂತರ ಉಸುಕನ್ನು ಏನು ಮಾರಾಟ ಮಾಡುತ್ತಾರೆ ಅದು ನಿಲ್ಲಬೇಕು. ನಮ್ಮ ಭಾಗದಲ್ಲಿ ನೀವು ಬಂದರೆ ನಾನು ತೋರಿಸುತ್ತೇನೆ, ದೊಡ್ಡ ದೊಡ್ಡ ಗೋಡೌನ್ ತರಹ ಉಸುಕನ್ನು ತಂದು ಮೇಲೆ ಇಟ್ಟಿದ್ದಾರೆ, ಈಗ ಅದನ್ನು ಮಾರಾಟ ಮಾಡುತ್ತಿದ್ದಾರೆ. ದಯವಿಟ್ಟು ನೀವು ಅದನ್ನು ತಕ್ಷಣ ನಿಲ್ಲಿಸಬೇಕು, ಉಸುಕನ್ನು ಹೊಳೆಯಿಂದ ನೀವು ತೆಗೆದರೆ, ಹೊಳೆಯಲ್ಲಿರುವ ಉಸುಕು ಹೋಗಿ ಬಿಡುತ್ತದೆ, ಮಾನ್ಯ ಮಂತ್ರಿಗಳು ಇದರ ಬಗ್ಗೆ ವಿಶೇಷವಾದ ಗಮನವನ್ನು ಹರಿಸಿ ತಕ್ಷಣ ಹರಾಜು ಮಾಡಿದ್ದಾರೆ, ಟೆಂಡರ್ ಮುಖಾಂತರ, ಅದನ್ನು ನಿಲ್ಲಿಸಿ ಹೊಸ ಯೋಜನೆಯನ್ನು ಜಾರಿಗೆ ತರಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳುತ್ತೇನೆ.

ಶ್ರೀ ಜಿ.ಎಸ್. ಗಡ್ಡದೇವರಮಠ (ಶಿರಹಟ್ಟಿ) : ಮಾನ್ಯ ಛೇರ್ಮನ್‌ರೆ, ನನ್ನ ಕ್ಷೇತ್ರದಲ್ಲಿ ಕೂಡ ಇಂತಹ ಒಂದು ಸಮಸ್ಯೆ ಇದೆ. ನಮ್ಮಲ್ಲಿ 3 ಎಕರೆ ಜಮೀನು ಲೀಸ್ ಮೇಲೆ ಹಿಡಿದರೆ 6 ರಿಂದ 8 ಎಕರೆಯೊಳಗೆ ಮರಳು ಎತ್ತುತ್ತಾರೆ. ಮರಳನ್ನು ಸುಮಾರಾಗಿ ಸ್ಟಾಕ್ ಮಾಡಿ ನಂತರ ಲಾರಿಗಳ ಮೂಲಕ ಸಾಗಿಸುವಂಥದ್ದು ನಡೆದಿದೆ. ಇದಕ್ಕಿಂತ ದೊಡ್ಡ ಅನಾಹುತ ಇನ್ನೊಂದು ಏನಾಗುತ್ತದೆಂದರೆ, ನಬಾರ್ಡ್‌ದಿಂದ ಇನ್ನೊಂದಿರಿಂದ ನಾವು ಬಹಳ ಪ್ರಯತ್ನವನ್ನು ಮಾಡಿ ರಸ್ತೆಗಳನ್ನು ಮಾಡಿಸುತ್ತಿದ್ದೇವೆ, ವಿಶೇಷವಾಗಿ ನಮ್ಮ ತಾಲ್ಲೂಕಿನಿಂದ ಪಕ್ಕದ ಹುಬ್ಬಳ್ಳಿ-ಗದಗ ಇಲ್ಲಿಗೆ ಮರಳು ಸಾಗಿಸುವುದು ನಡೆಯುತ್ತದೆ. ಮರಳು ಸಾಗಿಸುವಂಥ ಲಾರಿಗಳು ನಿರ್ದಿಷ್ಟವಾದ ಒಂದು ದಾರಿಯನ್ನು ಬಿಟ್ಟು ಎಲ್ಲೆಲ್ಲಿ ರಸ್ತೆಗಳನ್ನು ನಾವು ರಿಪೇರಿ ಮಾಡುತ್ತೇವೆ, ಆ ರಸ್ತೆಗಳ ಮುಖಾಂತರ ಲಾರಿಗಳನ್ನು ಓಡಾಡುವುದನ್ನು ನಾವು ನೋಡುತ್ತೇವೆ, ರಸ್ತೆಗಳು ಪೂರ್ತಿಯಾಗಿ ಹಾಳಾಗಿರುವ ಪ್ರಸಂಗ ಇದ್ದು, ರಸ್ತೆಗಳು ಈಗ ನಾವು ಒಂದು ರಸ್ತೆ ಮಾಡಿದರೆ, ಹಾಳಾದಂತಹ ರಸ್ತೆ ಬೀಡುತ್ತಾರೆ. ರಿಪೇರಿ ಮಾಡಿರುವ ರಸ್ತೆಗಳ ಮುಖಾಂತರ ಅವರು ಓಡಾಡುವುದರಿಂದ ನಮ್ಮ ರಸ್ತೆಗಳನ್ನು ಯಾವುದೋ ವರ್ಷದಲ್ಲಿ ಮಾಡಿಸಿದಂತೆ ಪ್ರಸಂಗವನ್ನು ನಾವು ಕಾಣುತ್ತಿದ್ದೇವೆ. ಒಟ್ಟಿನಲ್ಲಿ ನಾವು ಮರಳು ಇದರ ವಿಚಾರದಲ್ಲಿ ಹೇಳುವುದಾದರೆ ಸರ್ಕಾರದ ಹಗಲು ದರೋಡೆ ಅಲ್ಲಿ ನಡೆದಿದೆ ಎಂದರೆ ತಪ್ಪಾಗಲಿಕ್ಕಿಲ್ಲ. ಆ ದಿಸೆಯಲ್ಲಿ ನೀವು ಮರಳನ್ನು ಸುಮಾರು ಮೂರು ಎಕರೆ ಲೀಸ್ ಮಾಡಿ ಇಡುವುದು ಸುಮಾರು 6-7 ಎಕರೆ ಮರಳನ್ನು ಎತ್ತಿ ಸ್ಟಾಕ್ ಮಾಡಿ ಮಾರುವಂತಹ ವ್ಯವಸ್ಥೆಯನ್ನು ನೋಡಿದರೆ, ಈ ಬಗ್ಗೆ ಸರ್ಕಾರ ಹೆಚ್ಚಿನ ದೃಷ್ಟಿಯಲ್ಲಿ ಒಂದು ಮುತುವರ್ಜಿಯನ್ನು ವಹಿಸಿ ಕೆಲಸವನ್ನು ಮಾಡಬೇಕಾಗುತ್ತದೆಂದು ಹೇಳುತ್ತೇನೆ. ಅದರ ಜೊತೆಗೆ ಸರ್ಕಾರ ಮರಳು ಸಾಗಿಸುವವರಿಗೆ ನಿರ್ದಿಷ್ಟವಾದ ರಸ್ತೆಗಳಲ್ಲಿಯೇ ಸಾಗಿಸುವಂಥ ವ್ಯವಸ್ಥೆಯನ್ನು ಮಾಡಿದರೆ, ರಸ್ತೆಗಳನ್ನು ಮಾಡಿದ್ದಕ್ಕೂ ಪ್ರಯೋಜನ ಅಲ್ಲಿ ಆಗುತ್ತದೆಂದು ನಾನು ನನ್ನ ವಿಚಾರವನ್ನು ಹೇಳುತ್ತೇನೆ.

ಛೇರ್ಮನ್ : ತಾವು ಡಿಮ್ಯಾಂಡ್ ಮೇಲೆ ಮಾತನಾಡುತ್ತೇವೆಂದಿದ್ದರೆ ಅವಕಾಶವನ್ನು ನಾವು ಕೊಡುತ್ತಿದ್ದೆವು.

ಶ್ರೀ ಜಿ.ಎಸ್. ಗಡ್ಡದೇವರಮಠ : ಮಾನ್ಯ ಛೇರ್ಮನ್‌ರೆ, ಮರಳಿನ ವಿಚಾರದಲ್ಲಿ ಕಣ್ಣಿಂದ ನೋಡಿರುವ ಪರಿಸ್ಥಿತಿಯನ್ನು ಹೇಳುತ್ತಿದ್ದೇನೆ. ದಯವಿಟ್ಟು ಆ ವಿಚಾರದಲ್ಲಿ ಸರ್ಕಾರ ಮುತುವರ್ಜಿ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಛೇರ್ಮನ್ : ಶ್ರೀಮಾನ್ ಸಿಂಧ್ಯಾರವರು ಮಾತನಾಡುವ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದಾರೆ. ಇದು ಪಕ್ಷಾತೀತವಾಗಿ, ಇದು ಇಡೀ ರಾಜ್ಯದಲ್ಲಿ ಅವ್ಯಾಹತವಾಗಿ ನಡೆಯುತ್ತಿರುವುದರಿಂದ ಇದನ್ನು ನಿಲ್ಲಿಸಬೇಕೆಂದು ಅವರು ಎಲ್ಲರ ಪರವಾಗಿ ಒಂದು ವಿಚಾರವನ್ನು ಮಂಡನೆ ಮಾಡಿದ್ದಾರೆ, ನಿಮ್ಮದು therefore, the Hon'ble Minister will take note of the fit and they will reply, when the occasion comes. ಮಾನ್ಯ ಸೋಮಶೇಖರ್‌ವರು ಬೇಗ ಮುಗಿಸಿಕೊಡಬೇಕು, ಇನ್ನು 7-8 ಜನ ಸದಸ್ಯರು ಮಾತನಾಡುವವರಿದ್ದಾರೆ.

ಶ್ರೀ ಬಿ ಸೋಮಶೇಖರ್ : ಮಾನ್ಯ ಛೇರ್ಮನ್‌ರೆ, ಇದರಲ್ಲಿ ಮುಕ್ಕಾಲುಗಂಟೆ ಬೇರೆಯವರೆ ಮಾತನಾಡಿದ್ದಾರೆ. ನಾನು ಕಾಲುಗಂಟೆಯಲ್ಲಿ ಮುಗಿಸುತ್ತಾ ಇದ್ದೆ. ನನ್ನ ತಪ್ಪಲ್ಲಿ ಇನ್ನೊಂದು ಐದು-ಹತ್ತು ನಿಮಿಷಗಳಲ್ಲಿ ಮುಗಿಸುತ್ತೇನೆ.

ಶ್ರೀ ಕೆ ಎನ್ ಸುಬ್ಬಾರೆಡ್ಡಿ : ಛೇರ್ಮನ್‌ರೆ, ಮಾನ್ಯ ಸೋಮಶೇಖರ್‌ರವರು ಐದು ನಿಮಿಷ ಎಂದು ಹೇಳಿ ಆಗಲೇ ಅರ್ಧಗಂಟೆಯಾಯಿತು. ಬೇರೆಯವರಿಗೆ ಮಾತನಾಡಲು ಅವಕಾಶ ಮಾಡಿಕೊಡಬೇಕು.

ಶ್ರೀ ಬಿ. ಸೋಮಶೇಖರ್ : ಮಾನ್ಯ ಛೇರ್ಮನ್‌ರೆ, ಮರಳು ತೆಗೆದು ಸಾಗಿಸುವ ವಿಚಾರದಲ್ಲಿ ರಸ್ತೆಗಳು ಅಥವಾ ಸೇತುಗಳಾಗಲಿ ಹಾಳಾಗುತ್ತಿವೆ. ಒಂದು ಉದಾಹರಣೆ, ನಮ್ಮ ಕೊಳ್ಳೆಗಾಲ ತಾಲ್ಲೂಕಿನಲ್ಲಿ, ಒಂದು ಹಳ್ಳಿ, ನನ್ನ ಕ್ಷೇತ್ರಕ್ಕೂ ಹಾಗೂ ಕೊಳ್ಳೆಗಾಲಕ್ಕೂ ಅದು ಬಾರ್ಡರ್, ಅದು ಒಂದು ದ್ವೀಪವಾಗಿದೆ, ರಸ್ತೆ ಮತ್ತೆ ಬರೇ ಏನೂ ಇಲ್ಲ. ಅಲ್ಲಿರುವ ಜನ ಬೆಂಗಳೂರನ್ನೇ ನೋಡಿಲ್ಲ, ಏಕೆಂದರೆ ಅವರಿಗೆ ರಸ್ತೆಯ ಕಮ್ಯುನಿಕೇಶನ್ ಇಲ್ಲ. ಅವರು ನದಿ ಪಕ್ಕದಲ್ಲಿದ್ದಾರೆ. ಅಲ್ಲಿ ಎಷ್ಟು ದಂಧೆ ನಡೆಯುತ್ತಿದೆ ಎಂದರೆ, ಮರಳು ತೆಗೆದು ಊರು ಮುಳುಗಿ ಹೋಗುತ್ತದೆಂದು ಹೇಳಿದರೂ ಕೂಡ ಅದನ್ನು ತಡೆಗಟ್ಟಿಲ್ಲ. ನಾನು ಎಷ್ಟೇ ಸಲ ಫೋನ್ ಮಾಡಿದರೂ ಸಹ ಅವತ್ತು ನಿಲ್ಲಿಸಿ ಮರುದಿವಸ ಪರ್ಮಿಷನ್ ಕೊಡುತ್ತಾರೆ. ಇದರಿಂದ ಸಬ್ ಇನ್ಸ್‌ಪೆಕ್ಟರ್, ಕಂದಾಯ ಇಲಾಖೆ ಇರಬಹುದು ಅವರಿಗೆ ಹಣ ಸಿಗುತ್ತದೆ. ಇದೊಂದು ದಂಧೆ ಆಗಿರುವುದರಿಂದ ಇದಕ್ಕೊಂದು ಪಾಲಿಸಿ ಮಾಡಿ. ರಾಜ್ಯ ಸರ್ಕಾರಕ್ಕೆ ಬರತಕ್ಕಂಥ ಹಣ ಕೂಡ ಪೋಲಾಗುತ್ತದೆ, ಮರಳನ್ನು ಎಲ್ಲಿ ತೆಗೆಯಬೇಕು, ಯಾವ ಕಡೆಯಿಂದ ಟ್ರಾನ್ಸ್‌ಪೋರ್ಟ್ ಮಾಡಬೇಕು, ಎಲ್ಲಿ ಮರಳು ತೆಗೆಯಬಾರದು ಇದಕ್ಕೆ ಒಂದು ಕಟ್ಟನಿಟ್ಟಿನ ರೂಪುರೇಖೆಗಳನ್ನು ಒಂದು ನೀತಿಯನ್ನು ಮಾಡಬೇಕಾಗುತ್ತದೆ. ಅದನ್ನು ತಾವು ಮಾಡಿ ಅಲ್ಲಿಯವರೆಗೆ ನಾವು ಎಲ್ಲಿ ಬೇಡ ಎಂದು ಹೇಳುತ್ತೇವೆ, ಅಲ್ಲಿ ತಾವು ನಿಲ್ಲಿಸುವ ವ್ಯವಸ್ಥೆ ಮಾಡಬೇಕೆಂದು ನನ್ನ ಒಂದು ಆಗ್ರಹ.

ಶ್ರೀ ಎ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) : ಮಾನ್ಯ ಛೇರ್ಮನ್‌ರೆ, ಇದರ ಬಗ್ಗೆ ನಾನು ಒಂದೇ ನಿಮಿಷದಲ್ಲಿ ವಿವರಣೆಯನ್ನು ಕೊಟ್ಟು ಬಿಡುತ್ತೇನೆ. ಏಕೆಂದರೆ ಡಿಮಾಂಡ್ಸ್ ಮೇಲೆ ರಿಪ್ಲೈ ಕೊಡುವುದಕ್ಕೆ ಅವಕಾಶ ಇರುವುದಿಲ್ಲ. ಹಲವಾರು ನಿರ್ಬಂಧಗಳನ್ನು ತಾವು ಹೇಳಿದಂತೆ ಈಗಾಗಲೇ ನಾವು ಸರ್ಕಾರಿ ಆದೇಶದಲ್ಲಿ ವಿಧಿಸಿದ್ದೇವೆ. ಸಾರ್ವಜನಿಕರ ರಸ್ತೆಗಳಿಗೆ ಡ್ಯಾಮೇಜ್ ಆಗತಕ್ಕಂಥದ್ದು, ಬ್ರಿಡ್ಜ್ ಇರುವ ಕಡೆ, ಎಲ್ಲೆಲ್ಲಿ ಸಾರ್ವಜನಿಕವಾಗಿ ತೊಂದರೆಯಾಗುತ್ತದೆ ಅಂತಹ ಕಡೆ ಯಾವುದೇ ಕಾರಣಕ್ಕೂ ಹರಾಜು ಹಾಕಬಾರದೆಂದು ನಾವು

ಕಂಡಿಷನ್ ಹಾಕಿ ಕೊಟ್ಟಿರುತ್ತೇವೆ. ಜೊತೆಗೆ ಅಸಿಸ್ಟಂಟ್ ಕಮಿಷನ್‌ರ ಅಲ್ಲಿರುತ್ತಾರೆ, ಅವರು ಜವಾಬ್ದಾರಿಯುತ ಸಬ್‌ಡಿವಿಜನ್ ಮ್ಯಾಜಿಸ್ಟ್ರೇಟ್, ಅವರನ್ನು ಮರಳು ವಿತರಣಾ ಸಮಿತಿಯ ಅಧ್ಯಕ್ಷರನ್ನಾಗಿ ಮಾಡಿದ್ದೇವೆ. ತಹಸೀಲ್ದಾರ ಇದ್ದಾರೆ, ತಾಲ್ಲೂಕು ಪಂಚಾಯಿತಿ ಇರವರು ಇದ್ದಾರೆ, ಎಲ್ಲಿ ಅಂತರ್ಜಲಕ್ಕೆ ಧಕ್ಕೆ ಬರುತ್ತದೆ ಎನ್ನುವುದನ್ನು ನೋಡುವುದೆಕ್ಕೆ ನಮ್ಮ ಭೂವಿಜ್ಞಾನ ಇಲಾಖೆಯವರು ಸೆಕ್ರೆಟರಿಯಾಗಿದ್ದಾರೆ. ನಾವು ಈ ಎಲ್ಲಾ ಮುಂಜಾಗ್ರತೆಯನ್ನು ತೆಗೆದುಕೊಂಡು, ಫೈನಲ್ಲಾಗಿ ಅವರು ತೀರ್ಮಾನ ತೆಗೆದುಕೊಳ್ಳಬೇಕು. ಅವರು ಎಲ್ಲಿ ಹರಾಜು ಹಾಕಬೇಕು, ಯಾವುದನ್ನು ಹಾಕಬಾರದೆಂದು ಎಲ್ಲಾ ನಿರ್ಬಂಧಗಳನ್ನು ಹಾಕಿಯೇ ಹರಾಜು ಪಾಲಿಸಿಯನ್ನು ತಂದಿರುವಂಥದ್ದು ಇದೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಛೇರ್ಮನ್‌ರೆ, ಮಾನ್ಯ ಮಂತ್ರಿಗಳು ಹೇಳಿದ ಹಾಗೆ, ಗೌರಿಬಿದನೂರು ಹತ್ತಿರ ಬೇಕಾದಷ್ಟು ಗಲಾಟೆಯಾಗಿದೆ. ಆದರೂ ಕೂಡ ನೀವು ಲೈಸೆನ್ಸ್ ಕೊಟ್ಟು ಬಿಟ್ಟಿದ್ದೀರಿ. ಇದರ ಬಗ್ಗೆ ರೈತರೂ ಕೂಡ ವಿರೋಧ ಮಾಡಿದ್ದಾರೆ. ಆದರೂ ಕೂಡ ಗಣಿ ಮತ್ತು ಭೂವಿಜ್ಞಾನ ಇಲಾಖೆಯವರು ಮಾನ್ಯ ಸಚಿವರ ಕುಮ್ಮಕ್ಕಿನಿಂದ ಅಲ್ಲಿ ಬೇಕಾದಷ್ಟು ಮರಳು ಬರುತ್ತಿದೆ.

ಛೇರ್ಮನ್ : ಅವರು ಆಕ್ಷನ್ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ, ಬಿಡಿ.

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) : ಮಾನ್ಯ ಛೇರ್ಮನ್‌ರೆ, ಮಿನಿಸ್ಟರ್ ಕುಮ್ಮಕ್ಕಿನಿಂದ ಮರಳು ಬರುತ್ತಿದೆ ಎಂದು ಮಾನ್ಯ ಸದಸ್ಯರು ಹೇಳಿದ್ದು ಸತ್ಯಕ್ಕೆ ದೂರವಾದುದು, ಪಾಪ ಮಾನ್ಯ ಸದಸ್ಯರಿಗೆ ಗೊತ್ತಿಲ್ಲದೆ ಅವರು ಈ ರೀತಿ ಮಾತನಾಡುತ್ತಿದ್ದಾರೆ. ಸ್ಥಳೀಯ ಅಧಿಕಾರಿಗಳಿಗೆ ನಾವು ಅಧಿಕಾರವನ್ನು ಕೊಟ್ಟಿದ್ದೇವೆ, ನಾವು ಯಾವ ರೀತಿಯಾದ ಮಿನಿಸ್ಟರ್ ಕಛೇರಿಯಿಂದ ಯಾವ ಆಜ್ಞೆಯನ್ನೂ ಮಾಡತಕ್ಕಂಥ ವ್ಯವಸ್ಥೆಯನ್ನು ನಾವು ಇಟ್ಟುಕೊಂಡಿರುವುದಿಲ್ಲ. ತಾವು ಅದನ್ನು ಅರ್ಥಮಾಡಿಕೊಂಡು ದಯವಿಟ್ಟು ಮಾತನಾಡಬೇಕು.

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ : ಛೇರ್ಮನ್‌ರೆ, ಗೌರಿಬಿದನೂರಿನಲ್ಲಿ ಕೂಡ ಇದರ ಬಗ್ಗೆ ಅನೇಕ ಪ್ರತಿಭಟನೆಗಳು ನಡೆದಿವೆ, ಮಾನ್ಯ ಮಂತ್ರಿಗಳಿಗೆ ಇದರ ಬಗ್ಗೆ ಗಮನಕ್ಕೆ ತಂದರೂ ಕೂಡ ಯಾವುದೇ ಒಂದು ರೀತಿಯಾದ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಇದರಿಂದ ನಿಜವಾಗಲೂ ರೈತರಿಗೆ ತೊಂದರೆಯಾಗಿದೆ, ಮಾನ್ಯ ಮಂತ್ರಿಗಳು ಇದರಿಂದ ತೊಂದರೆಯಾಗುವುದಿಲ್ಲವೆಂದು ಹೇಳಬಹುದು, ಇದರಿಂದ ಬಹಳಷ್ಟು ಬ್ರಿಡ್ಜ್‌ಗಳು ಕೂಡ ನಷ್ಟವಾಗಿವೆ.

ಛೇರ್ಮನ್ : ಅವರು ಗಮನವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ.

ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ : ಛೇರ್ಮನ್‌ರೆ, ಇದರಿಂದ ರೈತರ ಬಾವಿಗಳು ಹಾಗೂ ಬೋರ್‌ವೆಲ್‌ಗಳು ಒಣಗಿ ಹೋಗುವ ಪರಿಸ್ಥಿತಿಯಾಗಿವೆ. ಇದರ ಬಗ್ಗೆ ನಾನು ಗಮನ ಸೆಳೆಯುವ ಸೂಚನೆಯಲ್ಲಿ ಪ್ರಸ್ತಾಪ ಮಾಡುವ ಸಲುವಾಗಿ ಕೊಟ್ಟಿದ್ದೇನೆ.

ಛೇರ್ಮನ್ : ಮಾನ್ಯ ರೆಡ್ಡಿಯವರೇ, ಮಾನ್ಯ ಸಚಿವರು ಗಮನಕ್ಕೆ ತೆಗೆದುಕೊಳ್ಳುತ್ತೇನೆಂದು ಹೇಳಿದ್ದಾರೆ.

ಶ್ರೀ ಎನ್. ಸಂಪಂಗಿ : ಛೇರ್ಮನ್‌ರೆ, ಈ ಭಾಗದಲ್ಲಿ ಹೆಚ್ಚಿಗೆ ಫ್ಲೋರೈಡ್ ಇರುವುದರಿಂದ ಅಂತರ್ಜಲ ಮಟ್ಟ ಕೆಳಗಡೆ ಹೋಗಿದೆ ಎನ್ನುವುದು ತಮಗೆ ಗೊತ್ತಿದೆ, ಅಂತರ್ಜಲ ಕೆಳಗಡೆ

ಹೋಗಿರುವುದಕ್ಕೆ ಮರಳು ಸಾಗಿಸುತ್ತಿರುವುದರಿಂದ, ಫ್ಲೋರೈಡ್‌ನಿಂದ ದಿನಾಲು ಜನ ಸಾಯುತ್ತಿರುವ ಜನರಿಗೆ ನಾವು ಯಾವುದೇ ರೀತಿಯಾಗಿ ಆರೋಗ್ಯ ದೃಷ್ಟಿಯಿಂದ ಸಹಾಯವನ್ನು ಮಾಡುತ್ತಿಲ್ಲ. ಈ ಅಂತರ್ಜಲ ದಿನೇ ದಿನೇ ಕಡಿಮೆಯಾಗುವುದಕ್ಕೆ ಮರಳು ಸಾಗುತ್ತಿರುವುದು ಒಂದೇ ಕಾರಣವೇನೆಂದು ಇವರಿಗೂ ಗೊತ್ತಿದೆ, ಆದರೆ ಆ ಒಂದು ಪ್ರದೇಶಗಳಿಗೆ ಬ್ಯಾನ್ ಮಾಡಿ, ಅಥವಾ ನಿಷೇದಾಜ್ಞೆ ತೆಗೆದುಕೊಂಡು ಬನ್ನಿ ಎಂದು ನಾವು ಬಹಳ ಸಲ ಕೇಳಿಕೊಂಡಿದ್ದೇವೆ, ಅದನ್ನು ಇದುವರೆಗೂ ಅವರು ಮಾಡುತ್ತಿಲ್ಲ, ಮರಳು ಸಾಗಿಸುವುದನ್ನು ಆ ಭಾಗದಲ್ಲಿ ನಿಲ್ಲಿಸಿದರೆ, ಆಗ ಸ್ವಲ್ಪ ಫ್ಲೋರೈಡ್ ಸಮಸ್ಯೆ ನಿವಾರಣೆಯಾಗುತ್ತದೆ.

CHAIRMAN : Let the Government take note of it.

ಶ್ರೀ ಸೋಮಶೇಖರ್‌ರವರೇ, ತಾವು ತಮ್ಮ ಭಾಷಣವನ್ನು ಮುಗಿಸಿ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಛೇರ್ಮನ್‌ರವರೆ, ನನ್ನ ಪ್ರಮುಖವಾದ ಒಂದು ಸಲಹ ಏನೆಂದರೆ, ನಮ್ಮ ಡಿಪಿಎಆರ್‌ನವರು ಸಿ.ಜಿ. ಗ್ರೌಂಡ್ಸ್ ಮೇಲೆ ನೇರ ನೇಮಕಾತಿಯನ್ನು ಮಾಡುತ್ತಿದ್ದಾರೆ. ಅನುಕಂಪದ ಆಧಾರದ ಮೇಲೆ ಎಂದರೆ ಬಹಳ ಮಾನವೀಯತೆಯ ದೃಷ್ಟಿಯಿಂದ ಯಾರ್‍ಯಾರು ಸರ್ವಿಸ್‌ನಲ್ಲಿದ್ದು ಮರಣಹೊಂದಿದರೆ ಅವರ ಹತ್ತಿರದ ಸಂಬಂಧಿಕರು, ಅವರ ಹೆಂಡತಿ ಇರಬಹುದು, ಅವರ ಮಕ್ಕಳು ಇರಬಹುದು ಅವರಿಗೆ ಉದ್ಯೋಗವನ್ನು ಕೊಡುತ್ತಿದ್ದರು. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಹಿಂದೆ ಏನಾಗಿತ್ತೆಂದರೆ, ಹುಡುಗ ಅಪ್ರಾಪ್ತವಯಸ್ಕನಾಗಿದ್ದರೆ ಅಂತಹ ಸಂದರ್ಭದಲ್ಲಿ ಸತ್ತುಹೋಗಿದ್ದರೆ ಅವನಿಗೆ 20 ವರ್ಷ ಆಗುವ ತನಕ ಅವನನ್ನು ನೇಮಕಾತಿ ಮಾಡತಕ್ಕಂತಹ ಅವಕಾಶ ಇತ್ತು. ಈಗ ಏನಾಗಿದೆ ಎಂದರೆ, ದಿನಾಂಕ 24.11.2000ದಲ್ಲಿ ಈ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ನೋಟಿಫಿಕೇಷನ್‌ನಲ್ಲಿ ರೂಲ್-5ಗೆ ಒಂದು ಅಮೆಂಡ್‌ಮೆಂಟ್‌ನ್ನು ತಂದಿದ್ದಾರೆ.

> "Provided that in the case of a minor, he must have attained the age of 18 years within one year from the date of the death of the government servant and he must make an application within one year thereafter."

ಇದಕ್ಕೆ ಅಮೆಂಡ್‌ಮೆಂಟ್. ಈಗ ಸತ್ತ ಒಂದು ವರ್ಷದೊಳಗಾಗಿ ಅವರು ಅರ್ಜಿ ಹಾಕಿಕೊಳ್ಳಬೇಕು, ಅವನು ಅರ್ಜಿ ಸಲ್ಲಿಸುವಾಗ ಅವನಿಗೆ 18 ವರ್ಷವಾಗಿರಬೇಕು, ಅವನಿಗೆ 18 ವರ್ಷವಾಗದೆ ಇದ್ದರೆ ಅವನಿಗೆ ಕೆಲಸ ಸಿಗುವುದಿಲ್ಲ. ಇದರ ಉದ್ದೇಶವೇನೆಂದರೆ ಯಾರ್‍ಯಾರು ಸರ್ವಿಸ್‌ನಲ್ಲಿ ಸತ್ತವರಿಗೆ ಅವರ ಕುಟುಂಬದವರಿಗೆ ಅಪಾಯಿಂಟ್‌ಮೆಂಟ್ ಕೊಡಬೇಕು ಎನ್ನುವುದು ಮೂಲ ಉದ್ದೇಶ. ಇದನ್ನು ತಪ್ಪಿಸತಕ್ಕಂತಹ ಮೂಲ ಉದ್ದೇಶ ಅಲ್ಲ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ 20 ವರ್ಷದ ತನಕ ಕಾಯುವುದಿಲ್ಲ, ಆ ಹುಡುಗನಿಗೆ 18 ವರ್ಷ ಆದ ತಕ್ಷಣ, ಅರ್ಜಿ ಹಾಕಿಕೊಂಡು ಅವನಿಗೆ ಅಪಾಯಿಂಟ್‌ಮೆಂಟ್ ಸಿಗುತ್ತಿತ್ತು. ಈಗ ಸತ್ತವರ ಕಡೆಯವರಿಗೆ 18 ವರ್ಷವಾಗದೇ ಇದ್ದರೆ, ಅವನು ಒಂದು ವರ್ಷದೊಳಗಡೆ ಅರ್ಜಿಯನ್ನು ಹಾಕಿಕೊಳ್ಳದೆ ಇದ್ದರೆ ಕುಟುಂಬಕ್ಕೆ ಉದ್ಯೋಗವೇ ಇಲ್ಲವೆಂದು ಮಾಡಿದ್ದೀರಿ. ಇದಕ್ಕೆ ಕಾರಣವೇನು ಹೇಳುತ್ತಾರೆಂದರೆ ಸುಪ್ರೀಂಕೋರ್ಟ್‌ನವರು ಆ ರೀತಿಯಾಗಿ ಹೇಳಿದ್ದಾರೆ, compassionate grounds, ಅಂದರೆ for ever it should not be continued. ಎಂದು ಹೇಳುತ್ತಿದ್ದಾರೆ. ಇದರ ಬಗ್ಗೆ ನಾನು ಏನು

ಹೇಳುತ್ತೇನೆಂದರೆ, ಈ ನಿಯಮಾವಳಿಗಳನ್ನು ನೀವು ರಚನೆ ಮಾಡಿಕೊಂಡು ಆ ನಿಯಮಾವಳಿಗಳನ್ನು ರೂಲ್ಸ್ ಪ್ರಕಾರ ಸುಪ್ರೀಂಕೋರ್ಟಿಗೆ ಕೊಶ್ಚನ್ ಮಾಡತಕ್ಕಂತಹ ಅಧಿಕಾರವಿಲ್ಲ. ಈ ನಿಯಮಾವಳಿಗಳ ಪ್ರಕಾರ, ಎಷ್ಟೋ ಪ್ರಕರಣಗಳಿವೆ ಬೇಕಾದರೆ ಡಿಪಿಎಆರ್‌ನವರನ್ನು ಕೇಳಬಹುದು. ಇದೊಂದು ಕಾರಣದಿಂದ ಇಂತಹ ಎಷ್ಟೋ ಪ್ರಕರಣಗಳು ಬಾಕಿ ಉಳಿದಿವೆ, ನಮ್ಮ ಸರ್ಕಾರವಿದ್ದಾಗ ಶ್ರೀ ಜೆ.ಹೆಚ್. ಪಟೇಲ್‌ರವರು ಅದಕ್ಕೆ ತಿದ್ದುಪಡಿಯನ್ನು ತಂದು 18 ವರ್ಷ ಆಗುವ ತನಕ ಆ ಕುಟುಂಬಕ್ಕೆ ಆ ಹುಡುಗನಿಗೆ ಅವಕಾಶ ಇರಬೇಕು. 18 ವರ್ಷ ಆದ ತಕ್ಷಣ ಆತನು ಅರ್ಜಿ ಹಾಕಿದರೆ ಕೆಲಸ ಕೊಡುವಂತಹ ಅವಕಾಶವಿತ್ತು. ದಯವಿಟ್ಟು ಅದನ್ನು ತೆಗೆದುಹಾಕಿ, ಈ ಬಗ್ಗೆ ತಿದ್ದುಪಡಿಯನ್ನು ಮಾಡಿ, 18 ವರ್ಷವಾಗುವ ತನಕ ಆ ಕುಟುಂಬಕ್ಕೆ ಅವಕಾಶವಿರಬೇಕು ಎನ್ನುವ ಬಗ್ಗೆ ತಿದ್ದುಪಡಿಯನ್ನು ಡಿಪಿಎಆರ್‌ನವರು ಮಾಡಬೇಕೆಂಬುದು ನನ್ನ ಒಂದು ಆಗ್ರಹ.

ಕೊನೆಯದಾಗಿ ಡಿಪಿಎಆರ್‌ನವರ ಬಗ್ಗೆ ಹೇಳುವುದಾದರೆ, ಡಿಪಿಎಆರ್‌ನವರು ಎಂದು ಹೇಳಿದರೆ ಎಲ್ಲಾ ಇಲಾಖೆಗಳಿಗಿಂತ ಆಕಾಶದಲ್ಲಿರತಕ್ಕಂತಹ ಇಲಾಖೆಯಾಗಿದೆ. ಇದರ ಬಗ್ಗೆ ನಿಮಗೆಲ್ಲಾ ಗೊತ್ತಿರುತ್ತದೆ, ಎಲ್ಲಾ ಮಂತ್ರಿಗಳಿಗೂ ಅವರ ಬಗ್ಗೆ ಅನುಭವವಾಗಿರಬಹುದು, ಮುಖ್ಯಮಂತ್ರಿಯವರು ಏನಾದರೂ ಹೇಳಿದರೆ ಮಾತ್ರ ಮಾಡುತ್ತಾರೆ ಬೇರೆ ಯಾರೇ ಹೇಳಿದರೂ ಅದಕ್ಕೆ ಏನೂ ಬೆಲೆ ಇಲ್ಲ. ಬೇರೆ ಏನೇ ಮಾಡಿದರೂ ಅದಕ್ಕೆ ಜವಾಬ್ದಾರರಲ್ಲಾ, ಎನ್ನುವಂತಹ ಭಾವನೆ ಬಂದಿರುತ್ತದೆ. ಫೈನಾನ್ಸ್ ಡಿಪಾರ್ಟ್‌ಮೆಂಟ್ ಮತ್ತು ಡಿಪಿಎಆರ್‌ನವರು ಸೇರಿ ಕೊಕ್ಕೆ ಹಾಕುವುದೊಂದೇ ಕೆಲಸ, ಡಿಪಿಎಆರ್‌ನವರು ಎಲ್ಲಾ ರೀತಿಯಲ್ಲಿ ಕರೆಕ್ಟ್ ಆಗಿದ್ದರೆ ಅದನ್ನು ನಾವು ಒಪ್ಪಿಕೊಳ್ಳೋಣ; ಚಿಂತೆಯಿಲ್ಲ. ಅವರ ಅಧೀನದಲ್ಲಿ ಬರತಕ್ಕಂತಹ ಎಷ್ಟೋ ಇಲಾಖೆಗಳಲ್ಲಿ ಅವ್ಯವಹಾರಗಳು ನಡೆಯುತ್ತವೆ, ಅದರ ಬಗ್ಗೆ ಯಾರೂ ಕ್ರಮ ತೆಗೆದುಕೊಳ್ಳುವವರು ಇಲ್ಲ. ಮಂತ್ರಿಗಳು ಹೇಳಿದರೆ ಇದು ಜಾಯಿಂಟ್ ಕ್ಯಾಬಿನೆಟ್ ಇದ್ದ ಹಾಗೆ, ಪ್ರತಿಯೊಬ್ಬ ಮಂತ್ರಿಗಳೂ ಸಹ ಗೌರ್ನಮೆಂಟ್ ಇದ್ದ ಹಾಗೆ, ಪ್ರತಿಯೊಬ್ಬ ಮಂತ್ರಿಗಳೂ ಅವರ ಇಲಾಖೆಗಳಿಗೆ ಸಂಬಂಧಪಟ್ಟಂತೆ ಡಿಪಿಎಆರ್‌ನವರನ್ನು ಕೇಳಬೇಕು, ಫೈನಾನ್ಸ್ ಡಿಪಾರ್ಟ್‌ಮೆಂಟ್‌ನ್ನೂ ಕೇಳಬೇಕಾಗುತ್ತದೆ. ಇವತ್ತು ಆ ರೀತಿ ಇಲ್ಲ, ಮುಖ್ಯಮಂತ್ರಿಗಳು ಅವರಿಗೆ ಬೇಕಾಗಿರುವುದನ್ನು ಹೇಳಿ ಮಾಡಿಸಿಬಿಡುತ್ತಾರೆ, ಇನ್ನು ಬೇರೆ ಮಂತ್ರಿಗಳಿಗೆ ಯಾವುದೂ ಇಲ್ಲ. ಅವರ ಇಲಾಖೆಯಲ್ಲಿ ಇಷ್ಟೊಂದು ಅವ್ಯವಹಾರಗಳು ನಡೆಯುತ್ತದೆಂದರೆ, ನಾನು ಒಂದು ಪ್ರಕರಣವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಮೊನ್ನೆ ದಿನ ಟೈಮ್ಸ್ ಆಫ್ ಇಂಡಿಯಾದಲ್ಲಿ ಒಂದು ಆರ್ಟಿಕಲ್ ಬಂದಿತ್ತು, ಅದೇನೆಂದರೆ, Mission Ooty lands CM's pilots in soup" ಅಂದರೆ ಮುಖ್ಯಮಂತ್ರಿಗಳ ಹೆಲಿಕಾಪ್ಟರ್‌ನ್ನು ಅವರ ಪೈಲೆಟ್‌ಗಳು ಜಾಲಿ ರೈಡ್‌ಗೆ ಊಟಿಗೆ ತೆಗೆದುಕೊಂಡು ಹೋಗಿರುವುದು, ಅವರ ಮಕ್ಕಳನ್ನು ಸ್ಕೂಲ್‌ನಲ್ಲಿ ನೋಡಿಕೊಂಡು ಬರುವುದಕ್ಕೆ ಹೋಗಿರುವುದನ್ನು ನಾನು ನೋಡಿದ್ದೇನೆ. ಸರ್ಕಾರಿ ವಾಹನಗಳನ್ನು ಮಕ್ಕಳನ್ನು ಸ್ಕೂಲ್‌ಗೆ ಕಳುಹಿಸುವುದನ್ನು ನೋಡಿದ್ದೇವೆ, ಮಂತ್ರಿಗಳು ಮತ್ತು ಅಧಿಕಾರಿಗಳೂ ಸಹ ಕಳುಹಿಸುತ್ತಾರೆ. ಕೆಲವು ಸಾರಿ ರಜೆಗಳಲ್ಲಿ ಥಿಯೇಟರ್‌ಗಳಿಗೂ ಸಹ ಕಳುಹಿಸಬಹುದು, ಬಾರ್‌ಗಳಿಗೂ ಕಳುಹಿಸುತ್ತಾರೆ, ಅದೆಲ್ಲವೂ ಹೋಗಿ ಇವತ್ತು ಹೆಲಿಕಾಪ್ಟರ್‌ನ್ನು ಪೈಲೆಟ್‌ಗಳು ಊಟಿಗೆ ಅವರ ಮಕ್ಕಳನ್ನು ನೋಡಿಕೊಂಡು, ಸುತ್ತಾಡಿಕೊಂಡು ಬರುವುದಕ್ಕೆ ಹೋಗುವುದು ಇದೆಯಲ್ಲಾ it is unheard of in the history of Karnataka. ಎಷ್ಟೊಂದು ಹಗುರವಾಗಿದೆ ಎನ್ನತಕ್ಕದ್ದು ಇದರ ಬಗ್ಗೆ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಉಪಯೋಗಿಸತಕ್ಕಂತಹ ಹೆಲಿಕಾಪ್ಟರ್ ಊಟಿಗೆ, ಹೋಗಿದೆ. ಅಲ್ಲಿ ಏನು ಹೇಳಿದ್ದಾರೆಂದರೆ,

" (Mis) using an official car to drop one's child to school is common. But the pilot and his colleagues happily took off for Ooty on June 13 in the official helicopter allegedly to show off their flying skills at the school in Lovedale where the pilot's child was studying."
ಆ ಪೈಲೆಟ್ಸ್‌ರವರು ಅವರ ಮಕ್ಕಳನ್ನು ಊಟಿಯಲ್ಲಿ ಓದುತ್ತಿರುವವರನ್ನು ನೋಡುವುದಕ್ಕೋಸ್ಕರ ನೀವು ಜಕ್ಕೂರು ಏರೋಡ್ರಂನಿಂದ 10-00 ಗಂಟೆಗೆ ಹೊರಟು ಸುತ್ತಾಡಿಕೊಂಡು ಬಂದಿದ್ದಾರೆ. ಅವರು ಹೋಗುವಾಗ ಏನು ಇದರಲ್ಲಿ The Pilot was...

ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ) : ಮಾನ್ಯ ಛೇರ್ಮನ್‌ರವರೆ, one more report. ಮತ್ತೊಂದು ಹೆಲಿಕಾಪ್ಟರ್ ರೆಕ್ಕೆಗಳೆಲ್ಲವೂ ಹೋಗಿ ಡ್ಯಾಮೇಜ್ ಆಗಿದೆ That is also there. One more has also happended - crores together repairs to that helicopter - Rs. 8 crores.

ಶ್ರೀ ಬಿ. ಸೋಮಶೇಖರ್ : ಇದರಲ್ಲಿ ಏನಾಗಿದೆ ಎಂದರೆ,

"The pilot was to fly 2000 ft. above the ground level ...2000 " it above ಹೋಗಬೇಕಾಗಿತ್ತು. It should not have entered the prohibited area. ಇಲ್ಲಿ ಏನಾಗಿದೆ ನಿಷೇಧಿಸಲ್ಪಟ್ಟ ಪ್ರದೇಶಗಳಲ್ಲಿ ಓಡಾಡಿರುವುದೊಂದು, 2000 ಫೀಟ್ ಕೆಳಗಡೆ ಹೋಗಿರುವುದೊಂದು ಇದು ನಮ್ಮ ಡಿಫೆನ್ಸ್ ನಾರ್ಮ್ಸ್ ಏನಿದೆಯಲ್ಲಾ ಅದಕ್ಕೆ ವಿರುದ್ಧವಾಗಿ ಇವರು ನಡೆದುಕೊಂಡಿದ್ದಾರೆ. ಅದಕ್ಕೋಸ್ಕರ ನಮ್ಮ ಹೆಚ್‌ಎಎಲ್ ಚೀಫ್ ಮ್ಯಾನೇಜರ್, ಏರೋಡ್ರಮ್‌ನವರು ಪ್ರಿನ್ಸಿಪಲ್ ಸೆಕ್ರೆಟರಿ ಡಿಪಿಎಆರ್‌ನವರಿಗೆ 15.6.2002ರಲ್ಲಿ ಪತ್ರವನ್ನು ಬರೆದಿದ್ದಾರೆ.

"Principal Secretary,
DPAR,
Govt. of Karnataka,
Bangalore.
Sir,

Sub: Violation of prohibited area

On 13th June, 2002 VTSOK filed a flight plan from Jakkur via Ooty at 2000 ft. above ground level, with ADC No. M 453 and the aircraft actually took off from Jakkur at 0429 UTC. There is an established prohibited area VOP 190 around Ooty, which the pilot should have mandatorily avoided. The pilot had opted for VFR flight rules which means the flight should have been operating in clear weather conditions at the altitude mentioned in the flight plan.

2. Enclosed please find a copy of the fax received from the General Manager, Cordite Factory, Aruvankadu, which is Self-explanatory.

3. The pilot was to fly 2000 ft. above ground level as per the flight plan and he should not have entered the prohibited area. It is not

understood how he was flying over the prohibited area and that too at very low level. May I request you to obtain an explanation from the pilot for us to report the matter to the concerned investigating authority.

ಛೇರ್ಮನ್ : ನಿಮ್ಮ ಹತ್ತಿರ ಆ ಲೆಟರ್ ಇದ್ದರೆ, ಕಾಪಿ ಕೊಡಿ.

ಶ್ರೀ ಬಿ. ಸೋಮಶೇಖರ್ : ಜನರಲ್ ಮ್ಯಾನೇಜರ್, ಕಾರ್ಡಿಯೇಟ್ ಫ್ಯಾಕ್ಟರಿ ಅರವನ ಕಾಡುರವರು...

CHIARMAN : Somashekar, instead of reading everything, you pass on the letter to me. We will send it to the Government.

ಶ್ರೀ ಬಿ. ಸೋಮಶೇಖರ್ : ಇಂತಹ ಒಂದು ವಯಾಲೇಷನ್, ಕರ್ನಾಟಕದ ಇತಿಹಾಸದಲ್ಲೂ ಆಗಿಲ್ಲ, ಬಹುಶಃ ಕೇಂದ್ರ ಸರ್ಕಾರದ ಅಧೀನದಲ್ಲೂ ಯಾರು ಈ ರೀತಿಯಾಗಿ ಮಾಡುವುದಕ್ಕೆ ಹೋಗಿಲ್ಲ. ಯಾರು ಪರ್ಮಿಷನ್‌ನ್ನು ಕೊಟ್ಟವರು, ಅವರು ಅಫಿಷಿಯಲ್ ಆಗಿ ಹೋಗಿದ್ದಾರಾ ? ಅದಕ್ಕೆ ನಾನು ಹೇಳತಕ್ಕಂಥದ್ದು ಇದರ ಬಗ್ಗೆ ವರದಿಯೇ ಅವರಿಗೆ ಹೋಗಿಲ್ಲ, First, I demand the pilots should be suspended immediately. They should be sent back to their original departmnet. Enquiry should be held. ಇಲ್ಲ ಅಂದರೆ ಏನಾಗಿದೆ ಇವತ್ತು free trance ಆಗಿಬಿಟ್ಟಿದೆ. ಮಾನ್ಯ ಛೇರ್ಮನ್‌ರವರೆ, ಅವರ ಧೈರ್ಯ ಎಷ್ಟಿರಬಹುದು, ಪ್ರೈವೇಟ್ ಕಾರನ್ನು ತೆಗೆದುಕೊಂಡಿದ್ದರೂ ಚಿಂತೆಯಿಲ್ಲ, ನಮ್ಮ ಸರ್ಕಾರವಿದ್ದಾಗ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲ್‌ರವರು 30 ಕೋಟಿ ರೂಪಾಯಿಗಳನ್ನು ಕೊಟ್ಟು ತೆಗೆದುಕೊಂಡ ಹೆಲಿಕಾಪ್ಟರ್‌ನ್ನು, ತನ್ನ ಮಕ್ಕಳನ್ನು ನೋಡುವುದಕ್ಕೆ ಟ್ರಾಫಿಕ್ ರೂಲ್ಸ್‌ನ್ನು ವಯಾಲೇಷನ್ ಮಾಡಿ ಸುತ್ತಾಡಿಕೊಂಡು ಜಾಲಿ ರೈಡ್ ಮಾಡಿಕೊಂಡು ವಾಪಸ್ ಬಂದರೆ ಅದರ ಬಗ್ಗೆ ಹೆಚ್‌ಎಎಲ್‌ನ ಚೀಫ್ ಜನರಲ್ ಮ್ಯಾನೇಜರ್‌ರವರು ಪತ್ರ ಬರೆದರೆ ಅದಕ್ಕೆ ಉತ್ತರವಿಲ್ಲ. ಇದು ಯಾವಾಗ ನಡೆದಿದೆ, ಈ ಸರ್ಕಾರ ಯಾವ ಮಟ್ಟದಲ್ಲಿ ಇದೆ. ಡಿಪಿಎಆರ್‌ನವರು ಏನು ಮಾಡುತ್ತಿದ್ದಾರೆ, ಪ್ರಿನ್ಸಿಪಲ್ ಸೆಕ್ರೆಟರಿಯವರು ಏನು ಮಾಡಿದ್ದಾರೆ, ಚೀಫ್ ಸೆಕ್ರೆಟರಿಯವರು ಏನು ಮಾಡಿದ್ದಾರೆ, ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಏನು ಕ್ರಮವನ್ನು ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ಸದನಕ್ಕೆ ತಿಳಿಸಬೇಕಾಗುತ್ತದೆ. ಇದರ ಬಗ್ಗೆ ನಾನು ಪ್ರೈವೇಟ್ ಆಗಿ ಹೇಳುತ್ತಿಲ್ಲ, ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯಲ್ಲಿ ಬಂದಿದೆ. ಇದಾದ ನಂತರ ಚೀಫ್ ಜನರಲ್ ಮ್ಯಾನೇಜರವರು ಚೀಫ್ ಸೆಕ್ರೆಟರಿಯವರಿಗೆ ಪತ್ರವನ್ನು ಬರೆದಿದ್ದಾರೆ. ಇದರ ಬಗ್ಗೆ ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಈ ರೀತಿಯಾಗಿ ಆಡಳಿತ ನಡೆಯುತ್ತಿದೆ, ಇದರ ಬಗ್ಗೆ ಎನ್‌ಕ್ವೊರಿಯನ್ನು ಕಂಡಕ್ಟ್ ಮಾಡಬೇಕೆಂದು ಹೇಳುತ್ತೇನೆ, ಮತ್ತು ಅವರನ್ನು ಇಮ್ಮೀಡಿಯೇಟಾಗಿ ಸಸ್ಪೆಂಡ್ ಮಾಡಬೇಕು, ಅವರನ್ನು ವಾಪಸ್ಸು ಕಳುಹಿಸಿಕೊಡಬೇಕು. ಇದರ ಬಗ್ಗೆ ಸರ್ಕಾರ ಉತ್ತರವನ್ನು ಹೇಳಬೇಕೆಂದು ಹೇಳಿ ಬಹಳ ತಡವಾದ್ದುದಕ್ಕೆ ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಛೇರ್ಮನ್‌ರವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ : ಮಾನ್ಯ ಗುಂಡಪ್ಪ ವಕೀಲ್‌ರವರು ಐದು ನಿಮಿಷಗಳಲ್ಲಿ ಮುಗಿಸಬೇಕು.

ಶ್ರೀ ಬಿ.ಹೆಚ್ ಬನ್ನಿಕೋಡ್ : ಮಾನ್ಯ ಛೇರ್ಮನ್‌ರವರೇ, ಐದೇ ನಿಮಿಷನಾ ? ತಾವೇ ಹೇಳಿದ್ದೀರಿ ಹೊಸಬರಿಗೆ ಅವಕಾಶ ಕೊಡುತ್ತಿಲ್ಲವೆಂದು. ನೀವು ಹೀಗೆ ಹೇಳಿದರೆ ಹೇಗೆ? ಹಳಬರಿಗೆ [illegible]ಲಿಕ್ಕೆ ಒಂದು ಗಂಟೆ ಸಮಯ ಕೊಡುತ್ತೀರಿ.

ಛೇರ್ಮನ್ : ಏನು ನಮ್ಮ ಬಾಣ ನಮಗೆ ತಿರುಗಿಸುತ್ತೀರಾ?

ಶ್ರೀ ರಾಜೇಂದ್ರ ವರ್ಮಾ : ಮಾನ್ಯ ಅಧ್ಯಕ್ಷರೆ, ನನ್ನದೊಂದು ವಿನಂತಿ ಇದೆ. ಹೊಸದಾಗಿ ಆಯ್ಕೆಯಾಗಿರತಕ್ಕ ಶಾಸಕರು ಕೇಳಿದ ಪ್ರಶ್ನೆಗಳಿಗೆ ಯಾವುದೇ ಉತ್ತರ ಬಂದಿಲ್ಲ. ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು 29ನೇ ತಾರೀಖು 30ನೇ ತಾರೀಖಿಗೆ ಒದಗಿಸಿ ಇಲ್ಲಿ ಹೇಳಿಸುತ್ತೇವೆಂದು ಹೇಳಿದ್ದೀರಿ. ಅದಕ್ಕೆ ಅವಕಾಶವೇ ಸಿಗಲಿಲ್ಲ. ಎರಡನೆಯದಾಗಿ ಗಮನ ಸೆಳೆಯುವ ಸೂಚನೆಗಳನ್ನೂ ಸಹ ಕಳುಹಿಸಿದ್ದೇವೆ. ಅವುಗಳಿಗೆ ಉತ್ತರ ಬರುತ್ತಿಲ್ಲ. ಈ ರೀತಿಯಾದರೆ ನಾವು ಸದನದಲ್ಲಿ ಏನು ಮಾಡಬೇಕೆಂದು ನಮಗೆ ಅರ್ಥವಾಗುತ್ತಿಲ್ಲ. ದಯವಿಟ್ಟು ಈ ಸದನ ಮುಗಿಯುವುದರೊಳಗೆ ಒದಗಿಸುವ ವ್ಯವಸ್ಥೆ ಮಾಡುತ್ತೀರಾ?

ಛೇರ್ಮನ್ : ಸದನದಲ್ಲಿ ಅವರು ಇವರು ಫಸ್ಟ್ ಟೈಮರ್, ಸೆಕೆಂಡ್ ಥರ್ಡ್ ಪ್ರಶ್ನೆ ಬರುವುದಿಲ್ಲ.

ಶ್ರೀ ರಾಜೇಂದ್ರ ವರ್ಮಾ : ಈ ಸದನ ನಡೆಯುವುದು ಆಗಸ್ಟ್ 8ನೇ ತಾರೀಖಿನವರೆಗೆ ಅದರಲ್ಲಿ ಎರಡು ದಿವಸ ಸೂಟಿ ಬರುತ್ತವೆ.

ಛೇರ್ಮನ್ : ಮಾನ್ಯ ಗುಂಡಪ್ಪ ವಕೀಲರೇ, ತಾವು ದಯವಿಟ್ಟು ಕುಳಿತುಕೊಳ್ಳಿ. ಈಗ ಒಂದು ವಿಚಾರ ತಮ್ಮ ಗಮನಕ್ಕೆ ತರುತ್ತೇನೆ. Those days where questions have bee postponed, they will be taken up, 8ನೇ ತಾರೀಖಿನವರೆಗೆ ತೆಗೆದುಕೊಳ್ಳಬಹುದು.

ಶ್ರೀ ಡಿ.ಜಿ. ಶಾಂತನಗೌಡ : ಮಾನ್ಯ ಅಧ್ಯಕ್ಷರೆ, ನೀವು ಇಲ್ಲಿ ಕುಳಿತಾಗ ನಮ್ಮ ಪರವಾಗಿ ಇದ್ದಿರಿ. ಅಲ್ಲಿ ಹೋಗಿ ಅಧ್ಯಕ್ಷಪೀಠದಲ್ಲಿ ಕುಳಿತಾಗ ಬದಲಾವಣೆಯಾಗಿದ್ದೀರಿ.

ಛೇರ್ಮನ್ : ನಾನೇನೂ ಬದಲಾವಣೆಯಾಗಿಲ್ಲ. ಇವತ್ತು ಮಾತ್ರ ಹಸಿರು ಕ್ಯಾಪ್ ಹಾಕಿಕೊಂಡಿದ್ದೇನೆ ಅಷ್ಟೆ. ನೀವು ಏಕೆ ದೊಡ್ಡ ಹೋಲಿಕೆ ಮಾಡುತ್ತೀರಿ? ನಾನು ರೈತರ ಪರವಾಗಿರಬೇಕೆಂದು ಅಷ್ಟೆ. ಮಾನ್ಯ ರಾಜೇಂದ್ರವರ್ಮಾರವರೇ, ತಮ್ಮ ಪ್ರಶ್ನೆಗಳು 8ನೇ ತಾರೀಖಿನೊಳಗೆ ಬರುತ್ತವೆ. ತಾವೇನೂ ಗಾಬರಿ ಪಡುವಂತಹ ವಿಚಾರವೇನು ಇಲ್ಲ. ಯಾವಾಗ ಬರುತ್ತದೆಂದು ತಮಗೆ ತಿಳಿಸುತ್ತೇವೆ. ನಿಮ್ಮ ಪ್ರಶ್ನೆಗಳನ್ನು ಲಾಪ್ಸ್ ಮಾಡುವುದಿಲ್ಲ. ಅದಕ್ಕೆ ಬೆಲೆ ಕೊಡುತ್ತೇವೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಪ್ರಪ್ರಥಮವಾಗಿ ಆಯ್ಕೆಯಾದ ಶಾಸಕರುಗಳಿಗೆ ಮಂತ್ರಿ ಮಾಡಬೇಕೆಂದು ಕೇಳಿದ್ದೀರಿ ನೀವು ಭಾಷಣ ಮಾಡುವುದಕ್ಕಾದರೂ ನಮಗೆ ಅವಕಾಶ ಮಾಡಿಕೊಡಿ.

ಛೇರ್ಮನ್ : ಇದಕ್ಕೂ ಮಂತ್ರಿಗೂ ಏನೂ ಸಂಬಂಧ ಇಲ್ಲ. ತಾವು ಬಜೆಟ್ ಮೇಲೆ ಭಾಷಣ ಮಾಡಿ. ನಾಳೆ, ಇಲ್ಲಿ ಅಪ್ರೂವಲ್ ಆಗಲಿಲ್ಲವೆಂದರೆ ಸಮಸ್ಯೆ ಏನೆಂಬುದು ನಿಮಗೆ ಗೊತ್ತು.

†ಶ್ರೀ ಗುಂಡಪ್ಪ ವಕೀಲ್ (ಔರಾದ್) : ಮಾನ್ಯ ಅಧ್ಯಕ್ಷರೆ, ನೆಲದ ಮರೆಯ ನಿಧಾನದಂತೆ ಫಲದ ಮರೆಯ ರುಚಿಯಂತೆ, ಮುಗಿಲ ಮರೆಯ ಮಿಂಚಿನಂತೆ, ಹಾವದ ಮರಿಯ ಬ್ರಹ್ಮನಂತೆ ಈ ಸದನದಲ್ಲಿ ಸಮಸ್ಯೆಗಳ ಮರೆಯಲ್ಲಿ ಸಮಾಧಾನಗಳಿದ್ದಾವೆ. ಆದ್ದರಿಂದ ಎಷ್ಟು ಚರ್ಚೆ ಈ ಸದನದಲ್ಲಿ ಆಗುತ್ತದೋ ಅಷ್ಟು ಈ ಸದನದಕ್ಕೆ ಈ ನಾಡಿಗೆ ಜನತೆಗೆ ಉಪಯೋಗವಾಗುತ್ತದೆ ಹೊರತಾಗಿ, ನಾವೆಲ್ಲಾ ಮೊದಲನೆಯ ಸಲ ಆರಿಸಿಬಂದವರು ಯಾರ್ಯಾರು ಏನು ಹೇಳುತ್ತೇವೆಯೋ ಎಂಥೆಂತಹ ಸಮಸ್ಯೆಗಳನ್ನು ನಿಮ್ಮ ಎದುರು ತೆಗೆದುಕೊಂಡು ಬರುತ್ತೇವೆಯೋ ಅದನ್ನು ಕೇಳಿದರೆ

ಮಾತ್ರ ಗೊತ್ತಾಗುತ್ತದೆ. ಜಿಲ್ಲಾ ಪಂಚಾಯಿತಿ ಆಕ್ಟ್ ಸರ್ಕಾರದ ಸದುದ್ದೇಶ ಜನರ ಕೈಯೊಳಗೆ ಅಧಿಕಾರವನ್ನು ಕೊಡಬೇಕು. ಜನಸಾಮಾನ್ಯರು ಅಧಿಕಾರದಲ್ಲಿ ಭಾಗಿಗಳಾಗಬೇಕು. ಪ್ರಜಾಪ್ರಭುತ್ವದ ಅರ್ಥ ಮುಟ್ಟುವಂತೆ ಆಗಬೇಕೆಂದು ಹೇಳಿ ಈ ಜಿಲ್ಲಾಪಂಚಾಯಿತಿ ಆಕ್ಟ್‌ನ್ನು ತರಲಾಗಿದೆ. ಜಿಲ್ಲಾಪಂಚಾಯಿತಿ ಆಕ್ಟ್ ಕಲಂ-3 ಸೆಕ್ಷನ್-3 ಅದರಲ್ಲಿ ಗ್ರಾಮಸಭೆಗಳ ಬಗ್ಗೆ ಉಲ್ಲೇಖವಿದೆ. ಗ್ರಾಮಸಭೆಗಳು ಅಂದರೇನು.....

ಛೇರ್ಮನ್ : ಮಾನ್ಯ ಗುಂಡಪ್ಪವಕೀಲರೇ, ಒಂದು ನಿಮಿಷ. May I draw your attention please. ಈಗಾಗಲೇ ಆರ್‌ಡಿಪಿಆರ್‌ಗೆ ಬಜೆಟ್ ಪ್ರಾವಿಜನ್ಸ್ ಬಗ್ಗೆ ಡಿಸ್‌ಕಷನ್ ಆಗಿ ಸಂಬಂಧಪಟ್ಟ ಮಂತ್ರಿಗಳು ಈಗಾಗಲೇ ಉತ್ತರ ಕೊಟ್ಟಾಯಿತು. And the demands also have been passed. Then why do you take up again the subject? you speak on some other subject other than that. ಬೇಕಾದಷ್ಟು ಡಿಮಾಂಡ್‌ಗಳಿವೆ ಅದರ ಬಗ್ಗೆ ಚರ್ಚೆ ಮಾಡಿ. It has been approved, That demand has been approved. The Hon'ble Minister has replied. It is okeyed why do you want to take up the issue?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು) : ಮಾನ್ಯ ಛೇರ್ಮನ್‌ರವರು ಕನ್ನಡದಲ್ಲಿ ಮಾತನಾಡಿ. ಈಗ ತಾವು ಏನೋ ಹೇಳಿದಿರಿ ಅದೇನೂ ಎಂಬುದು ನನಗೆ ಅರ್ಥವಾಗಲಿಲ್ಲ.

ಛೇರ್ಮನ್ : ನೀವೂ ಸಹ ಯೂನಿವರ್ಸಿಟಿ ಗ್ರ್ಯಾಜ್ಯುಯೇಟ್ ಆಗಿದ್ದೀರಿ ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ನಾನು ಯಾವ ಯೂನಿವರ್ಸಿಟಿ ಗ್ರ್ಯಾಜ್ಯುಯೇಟೂ ಅಲ್ಲ ನಾನು ಯಾವ ಕಾಲೇಜು ಗ್ರ್ಯಾಜ್ಯುಯೇಟ್ ಅಲ್ಲ.

ಛೇರ್ಮನ್ : ಇಲ್ಲ ಇಲ್ಲ, ನೋಡಿದ್ದೇನೆ ನೀವು ಗ್ರ್ಯಾಜ್ಯುಯೇಟ್ ಆಗಿರುವುದನ್ನು

ಶ್ರೀ ಸಿ.ಆರ್. ಸಗೀರ್ ಅಹ್ಮದ್ : ಈಗ ಸರಿ, ಈಗ ಹೇಳಿದ್ದಲ್ಲಾ ಗೊತ್ತಾಯಿತು, ಹಿಂದೆ ಹೇಳಿದ್ದು ಗೊತ್ತಾಗಲಿಲ್ಲ.

ಛೇರ್ಮನ್ : ಆಯಿತು, ಆ ಭಾಷೆ ಬೇಗ ಬಂದುಬಿಡುತ್ತದೆ. ಏನು ಮಾಡುವುದು? ಮತ್ತೆ ದುರುದ್ದೇಶದಿಂದ ಅಲ್ಲ.

ಶ್ರೀ ಗುಂಡಪ್ಪ ವಕೀಲ್ : ಮಾನ್ಯ ಅಧ್ಯಕ್ಷರೆ, ನಾನು ಏಕೆ ಹೇಳುತ್ತಿದ್ದೇನೆಂದರೆ, ಒಂದು ನಿಮಿಷ ತಾವು ಕೇಳಬೇಕು. ಗ್ರಾಮಸಭೆಗಳು ಜಿಲ್ಲಾಪಂಚಾಯಿತಿ ಒದಗಿಸತಕ್ಕ ಶೇಕಡ 95ರಷ್ಟು ಹಣ, ಗ್ರಾಮಸಭೆಗಳ ಮುಖಾಂತರ ಫಲಾನುಭವಿಗಳನ್ನು ಆಯ್ಕೆ ಮಾಡಿ ಬಡಬಗ್ಗರಿಗೆ ಅದನ್ನು ಮುಟ್ಟಿಸಬೇಕೆನ್ನುವ ಯೋಜನೆ ಈ ಆಕ್ಟ್‌ನಲ್ಲಿ ಬಂದಿದೆ. ಇವತ್ತು ನಾವು ಬಡವರಿಗೆ ಮನೆಗಳನ್ನು ಕೊಡುವುದಾಗಲೀ ಭಾಗ್ಯಜ್ಯೋತಿ ಕೊಡುವುದಾಗಲೀ ಎಸ್‌ಇಪಿ ಯೋಜನೆಗಳಲ್ಲಿ ನಾನಾ ರೀತಿಯ ಯೋಜನೆಗಳನ್ನು ಬಡವರಿಗೆ ಮುಟ್ಟಿಸುವುದಾಗಲೀ ಗ್ರಾಮಸಭೆಗಳ ಮುಖಾಂತರ ಯೋಗ್ಯ ವ್ಯಕ್ತಿಗಳನ್ನು ಗುರುತಿಸಿ ಅದರ ಮುಖಾಂತರ ಕೊಡಬೇಕಾಗುತ್ತದೆ. ಆದರೆ ಈಗ ಏನಾಗುತ್ತಿದೆ? ಗ್ರಾಮಸಭೆಗಳು ಈ ಆಕ್ಟ್‌ನಲ್ಲಿ ತೋರಿಸಿದಹಾಗೆ ನಡೆಯುತ್ತಿವೆಯೇ? ಮನೆಗಳಲ್ಲಿ ಕುಳಿತು ಕೊಂಡು ಈ ಫಲಾನುಭವಿಗಳ ಪಟ್ಟಿಗಳನ್ನು ತಯಾರು ಮಾಡುತ್ತಾರೆ.

MR. CHAIRMAN : May I request you to yield Your point cannot be answered at this stage. ಏಕೆಂದರೆ ಬಜೆಟ್ ಅಪ್ರೂವ್ ಆಗಿದೆ. ಅದು ಓಕೇ ಆಗಿದೆ. ಸಂಬಂಧಪಟ್ಟ ಮಂತ್ರಿಗಳೂ ಕೂಡ ಇಲ್ಲ ಇಲ್ಲಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಸದಸ್ಯರು ವಸತಿ ಬಗ್ಗೆ ಮಾತನಾಡುತ್ತಿದ್ದಾರೆ.

ಛೇರ್ಮನ್ : ವಸತಿ ಬಗ್ಗೆ ಮಾತನಾಡಿ ಒಂದು ಕೆಲಸ ಮಾಡಿ ನನ್ನ ದೃಷ್ಟಿ ತಮಗೆ ಹೇಳುತ್ತೇನೆ. ಸಣ್ಣ ನೀರಾವರಿ, ದೊಡ್ಡ ನೀರಾವರಿ, ಕೃಷಿ ಇಲಾಖೆಗಳ ಬಗ್ಗೆ ಬಹಳಷ್ಟು ವಿಚಾರ ಹೇಳಿದರೆ ಬೇರೆಯವರಿಗೆ ಅರ್ಥವಾಗುತ್ತದೆ. ಸಮಸ್ಯೆಗಳು ಬೇಕಾದಷ್ಟು ಇವೆ. That would be alright.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಗ್ರಾಮಸಭೆಗಳನ್ನು ರೆಫರ್ ಮಾಡುತ್ತಿರುವುದು ವಸತಿ ಇಲಾಖೆಯಲ್ಲಿ ಮನೆಗಳನ್ನು ಕೊಡಬೇಕಾದರೆ ಗ್ರಾಮಸಭೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡುತ್ತೇವೆ. ಗ್ರಾಮಸಭೆಗಳು ಸರಿಯಾಗಿ ನಡೆಯುತ್ತಾ ಇಲ್ಲ ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ವಸತಿ ಇಲಾಖೆಯ ಬಗ್ಗೆ ಮಾತನಾಡುತ್ತಿದ್ದಾರೆ.

ಛೇರ್ಮನ್ : ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಾದ ಮಾನ್ಯ ಘೋರ್ಪಡೆಯವರು ಉತ್ತರ ಕೊಡುವಾಗ ಬಹಳ ಸವಿಸ್ತಾರವಾಗಿ ಹೇಳಿದ್ದಾರೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ವಸತಿ ಇಲಾಖೆ ಬಗ್ಗೆ ಎಲ್ಲಿ ಉತ್ತರ ಕೊಟ್ಟಿದ್ದಾರೆ?

ಛೇರ್ಮನ್ : ಗೊತ್ತು, ನನಗೆ ಗೊತ್ತಿದೆ ತಾವು ಕೊಡಿ.

ಶ್ರೀ ಗುಂಡಪ್ಪ ವಕೀಲ್ : ಮಾನ್ಯ ಅಧ್ಯಕ್ಷರೆ, ಇನ್ನು ವಸತಿ ಇಲಾಖೆಯ ಬಗ್ಗೆ ಉತ್ತರ ಕೊಟ್ಟಿಲ್ಲ. ಒಂದೊಂದು ಕ್ಷೇತ್ರದಲ್ಲಿ ಒಂದು ಸಾವಿರ ಮನೆಗಳನ್ನು ಕೊಡಬೇಕಾಗಿದೆ.

ಶ್ರೀ ರಾಜೇಂದ್ರವರ್ಮಾ : ವಸತಿ ಬಗ್ಗೆ ಗ್ರಾಮೀಣಾಭಿವೃದ್ಧಿ ಸಚಿವರು ಉತ್ತರ ಕೊಟ್ಟಿಲ್ಲ.

ಛೇರ್ಮನ್ : ಕೊಟ್ಟಿದ್ದಾರೆ.

ಶ್ರೀ ರಾಜೇಂದ್ರವರ್ಮಾ : ನಾವೂ ಕೇಳಿದ ಪ್ರಶ್ನೆಗಳಿಗೆ ಅವರು ಉತ್ತರ ಕೊಟ್ಟಿಲ್ಲ.

ಛೇರ್ಮನ್ : ಕ್ಲಾರಿಫಿಕೇಷನ್ಸ್‌ಗೆ ಉತ್ತರ ಕೊಡುವಾಗ ಕೊಟ್ಟಿದ್ದಾರೆ. ಎರಡು ಮೂರು ಗಂಟೆಗಳ ಕಾಲ ಅವರು ಉತ್ತರ ಕೊಟ್ಟಿದ್ದಾರೆ.

ಶ್ರೀ ಗುಂಡಪ್ಪ ವಕೀಲ್ : ಮಾನ್ಯ ಅಧ್ಯಕ್ಷರೆ, ಇನ್ನು ವಸತಿ ಬಗ್ಗೆ ಉತ್ತರ ಬಂದಿಲ್ಲ. ಒಂದೊಂದು ಕ್ಷೇತ್ರದಲ್ಲಿ ಸಾವಿರ ಮನೆಗಳನ್ನು ಪ್ರತಿ ವರ್ಷ ನಾವು ಕಟ್ಟಿಸಿ ಕೊಡುತ್ತಿದ್ದೇವೆ. ಇದು ಬಡಬಗ್ಗರಿಗೆ ಮುಟ್ಟುತ್ತಿಲ್ಲ. ಇದು ವಸತಿ ಇಲಾಖೆಗೆ ಸಂಬಂಧಪಟ್ಟಿದ್ದು, ವಸತಿ ಸಚಿವರು ಉತ್ತರ ಕೊಡಬೇಕು. ಆಶ್ರಯ ಮನೆಗಳನ್ನು ಫಲಾನುಭವಿಗಳಿಗೆ ಕೊಡಬೇಕಾದರೆ, ಫಲಾನುಭವಿಗಳನ್ನು ಗ್ರಾಮಸಭೆಗಳಲ್ಲಿ ಗುರುತಿಸಬೇಕು. ಅದು ಬಡಬಗ್ಗರಿಗೆ ಮುಟ್ಟಲಿ ಎನ್ನತಕ್ಕ ಉದ್ದೇಶದಿಂದ ಅದನ್ನು ಮಾಡಿದ್ದಾರೆ. ಆದರೆ ಅದು ಎಲ್ಲಿ ಆಗುತ್ತಿದೆ? ಮನೆಯಲ್ಲಿ ಕುಳಿತುಕೊಂಡು ಪಟ್ಟಿಯನ್ನು ತಯಾರು ಮಾಡಿ ಜಿಲ್ಲಾ ಪಂಚಾಯಿತಿಗೆ ಕಳುಹಿಸಿಕೊಟ್ಟು ಅಲ್ಲಿಂದ ಅಪ್ರೂವಲ್ ತೆಗೆದುಕೊಂಡು ಮನೆಗಳನ್ನು ಕಟ್ಟಿಸಿಕೊಡುತ್ತಿದ್ದಾರೆ. ಆದರೆ ಈ ಮನೆಗಳು ಯಾರಿಗೆ ಸಿಗುತ್ತಿವೆ ಅಂದರೆ, ಯಾರಿಗೆ ಮೊದಲು ಮನೆಯುಂಟೋ ಅಂತಹವರಿಗೆ ಸಿಗುತ್ತಿವೆ. ಅವರು ಏನು ಮಾಡುತ್ತಿದ್ದಾರೆಂದರೆ, ಅವರು ಮನೆಗಳನ್ನು ಕಟ್ಟಿಸುತ್ತಿಲ್ಲ, ಅವರು ಮತ್ತು ಇಬ್ಬರು ಆಫೀಸರ್

ಕುಳಿತುಕೊಂಡು ಆಶ್ರಯ ಸಮಿತಿಗೆ ಬಂದಿರತಕ್ಕ ಹಣವನ್ನು ಅದು ಹಳೆಯ ಮನೆಯನ್ನು ತೋರಿಸಿ ರೆಕಾರ್ಡ್ ಬಿಲ್ಡಪ್ ಮಾಡಿ ಫೋಟೋಗಳನ್ನು ಹಚ್ಚಿ ಹಣವನ್ನು ಹಂಚಿಕೊಳ್ಳುತ್ತಿದ್ದಾರೆ. ಈ ವ್ಯವಸ್ಥೆ ನಡೆಯುತ್ತಿದೆ. ಯಾರಿಗೆ ಮನೆಯಿಲ್ಲ ಯಾರಿಗೆ ವಾಯ್ಸ್ ಇಲ್ಲ, ಯಾರಿಗೆ ಧೈರ್ಯವಿಲ್ಲ ಮನೆ ಪಡೆಯುವುದಕ್ಕೆ ಅಂತಹವರಿಗೆ ಮನೆಗಳು ಸಿಗುತ್ತಿಲ್ಲ. ಯಾರು ಹಣವನ್ನು ಕೊಟ್ಟು ಮನೆಗಳನ್ನು ಪರ್ಚೇಸ್ ಮಾಡುತ್ತಾರೆ, ಎರಡು ಸಾವಿರ ಮೂರು ಸಾವಿರ ಕೊಟ್ಟು ತಮ್ಮ ಹೆಸರನ್ನು ಪಟ್ಟಿಯಲ್ಲಿ ಸೇರಿಸಿಕೊಂಡು ಫಲಾನುಭವಿಗಳೆಂದು ಹೇಳಿಕೊಂಡು ಪದೇ ಪದೇ ಮುಂದೆ ಬರುತ್ತಿದ್ದಾರೆ, ಇಂತಹ ಒಂದು ಸಮಸ್ಯೆಗಳನ್ನು ಗುರುತಿಸಿ ಈ ಗ್ರಾಮಸಭೆಗಳನ್ನು ಎಫ್‌ಕ್ಟೀವ್‌ಯಾಗಿ ನಡೆಸಿ ಬಡಬಗ್ಗರಿಗೆ ಯಾರಿಗೆ ಮನೆಯಿಲ್ಲ ಅಂತಹವರಿಗೆ ಮನೆ ಸಿಗತಕ್ಕ ವ್ಯವಸ್ಥೆಯನ್ನು ಮಾನ್ಯ ವಸತಿ ಸಚಿವರು ಮಾಡಿಕೊಡಬೇಕೆನ್ನುವ ಮಾತನ್ನು ನಾನು ಇಲ್ಲಿ ಹೇಳಲಿಕ್ಕೆ ನಿಂತಿದ್ದೇನೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು) : ಮಾನ್ಯ ಛೇರ್ಮನ್‌ರವರೇ, ಸರ್ಕಾರದ ಆದೇಶದ ಪ್ರಕಾರ ಆ ಕ್ಷೇತ್ರದ ಶಾಸಕರೇ ಆ ಸಮಿತಿಯ ಅಧ್ಯಕ್ಷರಾಗಿದ್ದಾರೆ. ಯಾವ್ಯಾವ ಫಲಾನುಭವಿಗಳನ್ನು ಆಯ್ಕೆ ಮಾಡುವುದು ಸಮಿತಿಯ ವಿವೇಚನೆಗೆ ಬಿಟ್ಟ ವಿಚಾರ. ಜೊತೆಗೆ ಗ್ರಾಮಸಭೆಯಲ್ಲಿ ನಡೆದಿರುವಂತಹ ಸಭೆಯಲ್ಲಿ ಬಂದಿರುವಂತಹ ಅರ್ಜಿಗಳನ್ನು ಗ್ರಾಮ ಸಭೆಯಲ್ಲಿ ಇಡುವಂತಹದ್ದು ಅದಕ್ಕೆ ಮಾನ್ಯತೆ ಕೊಡುವಂತಹದ್ದು ಆ ಸಮಿತಿಗೆ ಬಿಟ್ಟು ವಿಚಾರ. ಕಳಪೆ ಕಾಮಗಾರಿಯಾಗಿದ್ದರೆ ಅಥವಾ ಕಳಪೆ ಕಾಮಗಾರಿಯಾಗಿದೆ ಎನ್ನುವುದು ತಮ್ಮ ಗಮನಕ್ಕೆ ಬಂದಾಗ, ಮನೆಯನ್ನು ತಾವೇನು ಅವರಿಗೆ ಕೊಟ್ಟಿದ್ದೀರಿ ಅದನ್ನು ರದ್ದುಗೊಳಿಸುವಂತಹ ಅಧಿಕಾರವನ್ನು ನಾವು ನಿಮಗೆ ಕೊಟ್ಟಿದ್ದೇವೆಲ್ಲಾ.

1.40 ಪಿಎಂ

ಅದನ್ನು ಆಶ್ರಯ ಸಮಿತಿ ಅಧ್ಯಕ್ಷರಿಗೇ ಕೊಟ್ಟಿದ್ದೇವೆ. ಉದಾಹರಣೆಗೆ ಒಬ್ಬರ ಹೆಸರಿಗೆ ಎರಡು ಮನೆಗಳನ್ನು ಕೊಡುವಂಥ ಅವಕಾಶಗಳು ಬಂದಿರುವಂಥ ಸಂದರ್ಭದಲ್ಲಿ, ತಪ್ಪು ಮಾಹಿತಿ ನೀಡಿ ಮನೆಯನ್ನು ಪಡೆದಿರುವಂಥ ಸಂದರ್ಭದಲ್ಲಿ ಆ ಮನೆಗಳನ್ನು ರದ್ದುಗೊಳಿಸುವಂಥ ಅವಕಾಶ ಆ ಸಮಿತಿಯ ಅಧ್ಯಕ್ಷರೇ ಹೊಂದಿರುವಂಥ ಸಂದರ್ಭದಲ್ಲಿ ಇದು ತಾವೇ ತೀರ್ಮಾನ ತೆಗೆದುಕೊಳ್ಳಬೇಕಾದಂಥ ವಿಚಾರ. ಆದ್ದರಿಂದ ಇಂತಹ ವಿಚಾರಗಳ ಬಗ್ಗೆ ಅವರು ಮನೆಯಲ್ಲಿ ಬರೆದುಕೊಡುತ್ತಿದ್ದಾರೆ ಎಂದು ಹೇಳಿದರು. ಯಾರು ಸ್ವಾಮಿ ಕೊನೆಯದಾಗಿ ದಸಕತ್ತು ಹಾಕಬೇಕು? ಆ ಕ್ಷೇತ್ರದ ಶಾಸಕರು ಆ ನಿರ್ಣಯಗಳಿಗೆ ದಸಕತ್ತು ಹಾಕಬೇಕು. ಮನೆಯಲ್ಲಿ ಬರೆದುಕೊಂಡು ಬಂದಿರುವ ನಿರ್ಣಯಗಳಿಗೆ ಶಾಸಕರು ಹೇಗೆ ತಾನೆ ದಸಕತ್ತು ಹಾಕುತ್ತಾರೆ? ಇದು ಒಂದು. ಎರಡನೇಯದು, ಈ ವಿಚಾರದ ಬಗ್ಗೆ ಇಲ್ಲಿಯವರೆಗೂ ನನ್ನ ಇಲಾಖೆಗೆ ದೂರು ಸಲ್ಲಿಸುವುದರ ಮುಖಾಂತರ ಯಾವುದೇ ಶಾಸಕರು ಬರವಣಿಗೆಯಲ್ಲಿ ಕೊಟ್ಟಿಲ್ಲ. ದಯವಿಟ್ಟು ಇಂತಹ ವಿಚಾರಗಳಲ್ಲಿ, ಮನೆಗಳನ್ನು ಬೇರೆಯವರಿಗೆ ಕೊಟ್ಟಿರುವಂಥಾದ್ದು, ಮನೆಯನ್ನು ಇದ್ದಂಥವರಿಗೇ ಕೊಟ್ಟಿರುವಂಥಾದ್ದು ಅಥವಾ ಮನೆ ಇದ್ದು ಇನ್ನೂ ಉತ್ತಮವಾದ ರೀತಿಯಲ್ಲಿ ಹಣ ಖರ್ಚುಮಾಡಿ ಆಶ್ರಯ ಮನೆಯನ್ನು ಕಟ್ಟಿಕೊಳ್ಳುವಂಥಾದ್ದರ ಬಗ್ಗೆ ಒಂದು ದೂರೂ ಸಹ ನಮ್ಮ ಇಲಾಖೆಗೆ ಬಂದಿರುವುದಿಲ್ಲ. ಆದ್ದರಿಂದ ಮಾನ್ಯ ಶಾಸಕರು ಏನು ಹೇಳುತ್ತಿದ್ದಾರೆ ಅದು ಅವರ ವ್ಯಾಪ್ತಿಯಲ್ಲಿ ಬರುವಂಥ ವಿಚಾರ ಇರುವುದರಿಂದ, ಅಂತಹ ದೂರುಗಳು ಏನಾದರೂ ತಮಗೆ ಬಂದಿದ್ದಲ್ಲಿ ಅದನ್ನು ಆಶ್ರಯ ಸಮಿತಿ ಸಭೆಯಲ್ಲಿ ಇಡುವುದರ ಮೂಲಕ, ಅಂತಹ ಫಲಾನುಭವಿಗಳ ಹೆಸರನ್ನು ರದ್ದು ಗೊಳಿಸುವಂಥ

ಅವಕಾಶ ಸಮಿತಿಗೆ ನೀಡಿರುವುದರಿಂದ ಅವರೇ ಇದನ್ನು ಇತ್ಯರ್ಥ ಮಾಡುವುದಕ್ಕೆ ಅವಕಾಶ ಇದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಸಭಾಧ್ಯಕ್ಷರೇ, ಚಿಕ್ಕಮಗಳೂರು ಕ್ಷೇತ್ರದಲ್ಲಿ ಎಷ್ಟು ಮನೆಗಳನ್ನು ಆ ಆಶ್ರಯ ಸಮಿತಿಯ ಕ್ಲರ್ಕ್ ಕೊಟ್ಟಿದ್ದಾರೆ, ಏನೇನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎಂದು ಪ್ರತಿಯೊಂದು ಅವರಿಗೆ ಗೊತ್ತಿದೆ. ಅದನ್ನು ಸಭೆಯ ಮುಂದಿಟ್ಟರೆ ಸಾಕು, ನಮಗೆಲ್ಲರಿಗೂ ಅವರೊಬ್ಬರೇ ಹೇಳಿದ ಹಾಗೆ ಆಗುತ್ತದೆ. ಚಿಕ್ಕಮಗಳೂರಿನ ಅವರ ಕ್ಷೇತ್ರದಲ್ಲೇ ಇವೆಲ್ಲಾ ನಡೆದಿರುವುದು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಸಭಾಧ್ಯಕ್ಷರೇ, ಇವರು ಪ್ರತ್ಯೇಕವಾಗಿ ನನ್ನದೇ ಆದಂಥ ಆಶ್ರಯ ಸಮಿತಿ ಬೇಕೆಂದು ಹೇಳಿ ಅವರ ಒಂದು ಹೋಬಳಿ ನನಗೆ ಬರುವುದರ ಬಗ್ಗೆ ಅವರೇ ಒಂದು ಸಮಿತಿ ರಚನೆಮಾಡಿಕೊಂಡರು. ನನ್ನ ಕಾರ್ಯಕರ್ತರಲ್ಲಿ ಒಬ್ಬರನ್ನು ಅಧ್ಯಕ್ಷನಾಗಿ ಮಾಡುವುದರ ಜೊತೆಗೆ ನಾನೇ ಕೆಲವು ಸಭೆಗಳಲ್ಲಿ ಈ ನಿರ್ಣಯಗಳನ್ನು ನೋಡುತ್ತಿದ್ದೇನೆ. ಇಂತಹ ದೂರುಗಳು ಇಲ್ಲಿಯವರೆಗೂ ನನಗೆ ಬರಲಿಲ್ಲ. ಆದ್ದರಿಂದ ನನ್ನ ಮಿತ್ರರಾದಂಥ ಮಾನ್ಯ ಕೆ.ಬಿ. ಮಲ್ಲಿಕಾರ್ಜುನ್ ಅವರು ಸದನದಲ್ಲಿ ಏನೋ ಒಂದು ಹೇಳಬೇಕು ಎಂದು ಹೇಳುತ್ತಿದ್ದಾರೆ. ಏಕೆಂದರೆ....

ಶ್ರೀ ಕೆ.ಬಿ. ಮಲ್ಲಿಕಾರ್ಜುನ್ : ಆ ರೀತಿ ಅಲ್ಲ. ಈಗ ಅವರೇ ನೇಮಕಮಾಡಿರುವಂಥ ಅಧ್ಯಕ್ಷರು ಏನು ಮಾಡಿದ್ದಾರೆ, ಅದರ ಬಗ್ಗೆ ಮಾನ್ಯ ಸಗೀರ್ ಅಹಮದ್ ಅವರು ಏನು ತೀರ್ಮಾನ ತೆಗೆದುಕೊಂಡಿದ್ದಾರೆ? ಯಾವ ಕ್ಲರ್ಕ್‌ನ್ನು ಸಸ್ಪೆಂಡ್ ಮಾಡಿದ್ದಾರೆ, ಯಾರನ್ನು ಟ್ರಾನ್ಸಫರ್ ಮಾಡಿದ್ದಾರೆ ಎಂಬುದರ ಬಗ್ಗೆ ಇವೆಲ್ಲವನ್ನೂ ಸಹಿತ ದಾಖಲೆ ಸಮೇತ ನಾನು ಇಡುತ್ತೇನೆ.

Mr. Chairman : He is quite open.
ಏನಾದರೂ ಇದ್ದರೆ ನನಗೆ ಹೇಳಲಿ ಅಥವಾ ಬರೆದುಕೊಡಲಿ. ನಾನು ಎಕ್ಸಾಮಿನ್ ಮಾಡಿಸುತ್ತೇನೆ ಎಂದು ಹೇಳಿದ್ದಾರೆ.

Sri C.R. Sagir Ahmed : Quite open ಅಂದರೆ ನನಗೆ ಅರ್ಥವಾಗುವುದಿಲ್ಲ. ಬಿಚ್ಚುಮನಸ್ಸಿನಿಂದ ಮಾತನಾಡುತ್ತಿದ್ದೇನೆ ಎಂದು ಹೇಳಬೇಕು. ಆದ್ದರಿಂದ ಮಾನ್ಯ ಶಾಸಕರು ನನ್ನ ಮೇಲೆ ಏನು ಹೇಳುತ್ತಿದ್ದಾರೆ, ಅಂತಹ ದೂರುಗಳು ಇಲ್ಲಿಯವರೆಗೂ ಬಂದಿಲ್ಲ. ಅಂಥಾದ್ದು ಏನಾದರೂ ಇದ್ದರೆ, ಅದನ್ನು ಅವರು ನನ್ನ ಗಮನಕ್ಕೆ ತಂದರೆ ನಾನು ಅದನ್ನು ಸರಿಪಡಿಸುತ್ತೇನೆ.

ಶ್ರೀ ಗುಂಡಪ್ಪ ವಕೀಲ್ : ಸನ್ಮಾನ್ಯ ಅಧ್ಯಕ್ಷರೇ, ಬೀದರ್, ರಾಯಚೂರು, ಕೊಪ್ಪಳ - ಈ ಹೈದರಾಬಾದ್ ಕರ್ನಾಟಕ ಏರಿಯಾದರಲ್ಲಿ ಮಾಸ್ ಆಗಿ ಮನೆಗಳನ್ನು ಕಟ್ಟುವುದರಲ್ಲಿ ಅವ್ಯವಹಾರವಾಗಿದ್ದು ಇದು ಸುಮಾರು ಎಂಟು-ಹತ್ತು ವರ್ಷಗಳಿಂದ ನಡೆದಿದೆ. ಸರ್ಕಾರದವರು ಕಾನೂನು ಮಾಡಿದ್ದಾರೆ. ಮಾನ್ಯ ವಸತಿ ಸಚಿವರು ದಯವಿಟ್ಟು ನೋಡಿಕೊಳ್ಳಬಹುದು. ಒಂದು ಸರ್ಕ್ಯುಲರ್‌ನ್ನು ತಾವು ತಂದಿದ್ದೀರಿ. ಅದು ಏನೆಂದರೆ ಮನೆಗಳನ್ನು ಫಲಾನುಭವಿಗಳೇ ಕಟ್ಟಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು, ಫಲಾನುಭವಿಗಳೇ ಮನೆ ಕಟ್ಟಿಕೊಳ್ಳಬೇಕು ಎಂದಿದೆ. ಇವತ್ತು ರಿಪೋರ್ಟ್ ತರಿಸಿಕೊಂಡು ತಾವು ನನಗೆ ಉತ್ತರ ಕೊಡಿ. ತಾವು ಈ ಸುತ್ತೋಲೆಯನ್ನು ತೆಗೆದು ಇವತ್ತಿಗೆ ಸುಮಾರು ಆರು ವರ್ಷವಾಯಿತು. ಈ ಆರು ವರ್ಷದಲ್ಲಿ ಈ ಎಲ್ಲಾ ಜಿಲ್ಲೆಗಳಲ್ಲೂ ಯಾವುದಾದರೂ ಫಲಾನುಭವಿಗಳಿಗೆ ಮನೆಯನ್ನು ಕಟ್ಟಿಸಿಕೊಳ್ಳುವುದಕ್ಕೆ

ಒಂದಕ್ಕಾದರೂ ಸರ್ಕಾರದ ವತಿಯಿಂದ ಅವಕಾಶ ಕಲ್ಪಿಸಿದ್ದೀರಾ? ಇವತ್ತಿನವರೆಗೂ ತಾಲ್ಲೂಕು ಪಂಚಾಯತಿ ಜೆ.ಇ. ಗಳೇ ಮನೆಗಳನ್ನು ಕಟ್ಟುತ್ತಾರೆ, ಎಷ್ಟೋ ಮನೆಗಳನ್ನು ಕಟ್ಟುವುದಿಲ್ಲ. ಸುಳ್ಳು ದಾಖಲೆಗಳನ್ನು ಸೃಷ್ಟಿಮಾಡಿ ಇವತ್ತು ಹಣ ಲೂಟಿ ಮಾಡುತ್ತಿದ್ದಾರೆ. ಇಂಥಾದ್ದೆಲ್ಲವನ್ನೂ ತಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಆದರ ಸಲುವಾಗಿ ನಾನಾ ಸಮಸ್ಯೆಗಳನ್ನು ತಮ್ಮ ಗಮನಕ್ಕೆ ತರಲಿಕ್ಕೆ ಎದ್ದು ನಿಂತಿದ್ದೇನೆ. ಸರ್ಕಾರ ಎಂದರೆ ಆಳುವ ಪಕ್ಷ ಒಂದೇ ಅಲ್ಲ. ಸರ್ಕಾರ ಎಂದರೆ ಆಳುವ ಪಕ್ಷ, ವಿರೋಧಪಕ್ಷದ ಹಾಗೂ ಆಡಳಿತ ವರ್ಗದವರು ಇವರು ಮೂವರೂ ಸೇರಿ ಸರ್ಕಾರವಾಗುತ್ತದೆ. ಇಲ್ಲಿ ತಮ್ಮನ್ನು ಟೀಕೆ ಮಾಡುವುದಕ್ಕೆ ನಾನು ಎದ್ದುನಿಂತಿಲ್ಲ. ಇರುವಂಥ ಸಮಸ್ಯೆಗಳನ್ನು ತಮಗೆ ಹೇಳುವುದಕ್ಕೆ ಎದ್ದುನಿಂತಿದ್ದೇನೆ. ಇವತ್ತು ನನ್ನ ಕ್ಷೇತ್ರದಲ್ಲಿ ನಾನು ಆಶ್ರಯ ಕಮಿಟಿಯಿಂದ ಪತ್ರವನ್ನು ಜಿಲ್ಲಾಪಂಚಾಯತ್‌ಗೆ ಬರೆದುಕೊಟ್ಟಿದ್ದೇನೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಮತ್ತು ಟಿ.ಪಿ.ಎಸ್. ನ ಮುಖ್ಯ ಅಧಿಕಾರಿಗಳಿಗೆ ಪತ್ರ ಕೊಟ್ಟಿದ್ದೇನೆ. ಈ ಮನೆಗಳನ್ನು ತಾವು ಕಟ್ಟಬಾರದು, ಫಲಾನುಭವಿಗಳಿಗೆ ಕಟ್ಟಿಕೊಳ್ಳುವುದಕ್ಕೆ ಅವಕಾಶ ಕೊಡಿ ಎಂದು ಹೇಳಿದ್ದೇನೆ. ಎಷ್ಟೋ ಜನರು ತಾವು ಕಟ್ಟಿಕೊಳ್ಳುತ್ತೇವೆ ಎಂದು ಮುಂದೆ ಬಂದಿದ್ದಾರೆ.

ಚೇರ್ಮನ್ : ಏನು ನಿಮ್ಮ ಕ್ಷೇತ್ರದ ವಸತಿಬಗ್ಗೆ ಸಮಸ್ಯೆ ಇದೆ ಅದನ್ನು ಅವರ ಹತ್ತಿರ ಕಾನ್ಫಿಡೆನ್ಷಿಯಲ್ ಆಗಿ ಹೇಳಿ. ಅಥವಾ ರೈಟಿಂಗ್‌ನಲ್ಲಿ ಕೊಟ್ಟುಬಿಡಿ. He is quite open. ಸಚಿವರು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಹೇಳಿದ್ದಾರೆ.

ಶ್ರೀ ಗುಂಡಪ್ಪ ವಕೀಲ್ : ಇದು ಕಾನ್‌ಫಿಡೆನ್ಸ್ ಪ್ರಶ್ನೆ ಅಲ್ಲ. ನಮ್ಮಲ್ಲಿ ಎಂಟು ಜಿಲ್ಲೆಗಳು ಬರುತ್ತವೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಇದು ಗುಪ್ತವಾಗಿ ಮಾತನಾಡುವಂಥ ವಿಚಾರ ಅಲ್ಲ. ರಾಜ್ಯದಲ್ಲಿ ಒಂದು ಸರ್ಕಾರವಿದೆ. ಆ ಸರ್ಕಾರದ ವತಿಯಿಂದ ಸೂರು ಇಲ್ಲದ ಜನಕ್ಕೆ ಸೂರು ಕೊಡುವ ಕಾರ್ಯಕ್ರಮವನ್ನು ನಾವು ಘೋಷಣೆ ಮಾಡಿದ್ದೇವೆ. ಈ ಅಧಿಕಾರ ಚಲಾಯಿಸುವ ಹಕ್ಕನ್ನು ನಾವು ಶಾಸಕರಿಗೆ ಕೊಟ್ಟಿದ್ದೇವೆ ಎಂದು ನಾನು ಪದೇಪದೇ ಹೇಳುತ್ತಿದ್ದೇನೆ. ಇವರು ಹೇಳಿದ ಹಾಗೆ ದುರುಪಯೋಗ ಆಗಿದೆ, ತಾಲ್ಲೂಕು ಪಂಚಾಯತಿಯವರು ಜವಾಬ್ದಾರಿ ತೆಗೆದುಕೊಂಡು ಮನೆಗಳನ್ನು ನಿರ್ಮಾಣ ಮಾಡುತ್ತಿದ್ದಾರೆ ಅಥವಾ ಜಿಲ್ಲಾಪಂಚಾಯತ್‌ನವರು ಸ್ವತಃ ಜವಾಬ್ದಾರಿ ತೆಗೆದುಕೊಂಡು ಮನೆಗಳನ್ನು ನಿರ್ಮಾಣ ಮಾಡುತ್ತಿದ್ದಾರೆ ಎಂದರೆ ನಾವು ನಮ್ಮ ಇಲಾಖೆಯ ಸುತ್ತೋಲೆ ಮುಖಾಂತರ ಶಾಸಕರ ಗಮನಕ್ಕೆ, ಅಧಿಕಾರಿಗಳ ಗಮನಕ್ಕೆ ತಂದಿರುವ ವಿಚಾರ ಏನೆಂದರೆ ಮನೆಗಳನ್ನು ಫಲಾನುಭವಿಗಳೇ ನೇರವಾಗಿ ಕಟ್ಟಿಕೊಳ್ಳುವುದಕ್ಕೆ ಅವಕಾಶ ಕೊಟ್ಟಿರುವಂಥ ಸಂದರ್ಭದಲ್ಲಿ ಇಂತಹ ನ್ಯೂನತೆಗಳು ಇರುವ ಜಿಲ್ಲೆಗಳ ಬಗ್ಗೆ ಅಥವಾ ಇಂತಹ ದೂರುಗಳು ಇರುವ ಕ್ಷೇತ್ರಗಳ ಬಗ್ಗೆ ತಾವು ನಿರ್ದಿಷ್ಟವಾದಂಥ ಮಾಹಿತಿಯನ್ನು ನನಗೆ ಕೊಟ್ಟಾಗ ನೇರವಾಗಿ ನಾನು ಅಧಿಕಾರಿಗಳಿಗೆ ಸೂಚನೆ ಕೊಡುವುದರ ಮುಖಾಂತರ, ಸರ್ಕಾರ ಹೊರಡಿಸಿರುವಂಥ ಸುತ್ತೋಲೆ ಮುಖಾಂತರವಾಗಿ ಮನೆಗಳನ್ನು ನಿರ್ಮಿಸುವಂಥ ಕಾರ್ಯಕ್ಕೆ ಒಳಗಾಗುತ್ತೇನೆ. ತಮ್ಮ ಮೂಲಕ ಮಾನ್ಯ ಶಾಸಕರಿಗೆ ಹೇಳುತ್ತೇನೆ.

ಚೇರ್ಮನ್ : ಆಶ್ವಾಸನೆ ಕೊಟ್ಟಿದ್ದಾರೆ ಬಿಡಿ.

ಶ್ರೀ ಗುಂಡಪ್ಪ ವಕೀಲ : ಸರ್ಕಾರದ ಸುತ್ತೋಲೆ ಇದೆ. ಅಂತಹ ಸುತ್ತೋಲೆಗಳನ್ನು ನೀವು ಪರಿಣಾಮಕಾರಿಯಾಗಿ ಜಾರಿಗೆ ತನ್ನಿ ಎಂದು ಹೇಳಿದ್ದೇವೆ. ನಾವು ಲಿಖಿತಮೂಲಕವಾಗಿ

ಈ ಬಗ್ಗೆ ಕೊಟ್ಟಿದ್ದೇವೆ. ಕೊಟ್ಟಿದ್ದರೂ ಕೂಡ ಇಲಾಖೆಯಿಂದ ಏಕೆ ಕಟ್ಟಿಸುತ್ತಾರೆ? ಫಲಾನುಭವಿಗಳಿಗೆ ಏಕೆ ಕೊಡಬಾರದು? ಸರ್ಕಾರ ಫಲಾನುಭವಿಗಳಿಗೆ 20 ಸಾವಿರ ರೂಪಾಯಿ ಕೊಡುತ್ತದೆ. ಅವರು ಇಪ್ಪತ್ತು ಸಾವಿರ ರೂಪಾಯಿ ಹಾಕಿಕೊಳ್ಳುತ್ತಾರೆ. ನಲ್ವತ್ತು ಸಾವಿರ ರೂಪಾಯಿಯಲ್ಲಿ ಚೆನ್ನಾಗಿ ಮನೆಯನ್ನು ಕಟ್ಟಿಕೊಳ್ಳುತ್ತಾರೆ. ಏಕೆ ಕೊಡಬಾರದು?

ಚೇರ್ಮನ್ : ಯಾರಿಗೂ ಇಲ್ಲದಿರುವ ಸಮಸ್ಯೆ ನಿಮಗೊಬ್ಬರಿಗೆ ಮಾತ್ರ ಬಂದಿದೆ.

ಶ್ರೀ ಗುಂಡಪ್ಪ ವಕೀಲ : ನನಗೊಬ್ಬನಿಗೆ ಅಲ್ಲ ಸ್ವಾಮಿ, ನೀವು ನಮ್ಮ ಕಡೆಗೆ ಬನ್ನಿ. ಎಲ್ಲರಿಗೂ ಈ ಸಮಸ್ಯೆ ಇದೆ.

ಚೇರ್ಮನ್ : ಇದು ಏನೋ ಸ್ವಲ್ಪ ತಪ್ಪಾಗಿದೆ.

ಶ್ರೀ ವೆಂಕಟರಮಣಪ್ಪ : ಮಾನ್ಯ ಸದಸ್ಯರಾದ ಶ್ರೀ ಗುಂಡಪ್ಪ ವಕೀಲರು ಅಧಿಕಾರಿಗಳು ಬಹಳ ಅವ್ಯವಹಾರ ಮಾಡುತ್ತಾರೆ ಎಂದು ಹೇಳಿದ್ದಾರೆ. ಪ್ರತಿಯೊಂದು ಆಶ್ರಯ ಸಮಿತಿಗೆ ಆ ತಾಲ್ಲೂಕಿನ ಶಾಸಕರು ಅಧ್ಯಕ್ಷರು. ಇದು ಫಲಾನುಭವಿಗಳಿಗೆ ಮನೆಯನ್ನು ಕಟ್ಟಿಕೊಳ್ಳುವಂಥ ಕಾರ್ಯಕ್ರಮ ಇದೆ. ಇದರಲ್ಲಿ ಕೂಡ ಫಲಾನುಭವಿಗಳಿಗೆ ನೇರವಾಗಿ ಚೆಕ್ಕನ್ನು ಕೊಡುತ್ತಾರೆ. ಅವರ ಅಕೌಂಟಿಗೆ ಚೆಕ್‌ನ್ನು ಹಾಕಿ ಹಣವನ್ನು ಡ್ರಾ ಮಾಡುವಾಗ ಅಧಿಕಾರಿಗಳು ಲೂಟಿ ಹೊಡೆಯುವ ಪ್ರಶ್ನೆ ಎಲ್ಲಿ ಬಂತು? ಅವರು ಶಾಸಕರಾಗಿ ಈ ಮಾತನ್ನು ಹೇಳತಕ್ಕದ್ದು ಸರಿಯಲ್ಲ. ಆದರೆ ಅವರೇ ಅಧ್ಯಕ್ಷರಾಗಿ ಇದನ್ನು ನೋಡುತ್ತಿಲ್ಲ ಎಂಬ ಅನುಮಾನ ನನಗೆ ಬರುತ್ತದೆ. ಏಕೆಂದರೆ ಫಲಾನುಭವಿಗಳಿಗೆ ನೇರವಾಗಿ ಚೆಕ್ಕನ್ನು ಕೊಟ್ಟಿರುವಾಗ ಅಧಿಕಾರಿಗಳು ಹೇಗೆ ಲೂಟಿ ಹೊಡೆಯುತ್ತಾರೆ? ಬಿಲ್ ಬರೆಯಬೇಕಲ್ಲಾ, ಅದಕ್ಕೆ ಮಾತ್ರ ಇಂಜಿನಿಯರ್ ಹೋಗತಕ್ಕಂಥಾದ್ದು. ಇಷ್ಟು ಕೆಲಸ ಆಗಿದೆ ಎಂದು ಅದಕ್ಕೆ ಅವರು ಬಿಲ್ ಕೊಡುತ್ತಾರೆ.

ಶ್ರೀ ಅಮರಗೌಡ ಪಾಟೀಲ್ ಬಯ್ಯಾಪುರ : ಮಾನ್ಯ ಅಧ್ಯಕ್ಷರೇ, ಅವರು ಶಾಸಕರ ಬಗ್ಗೆ ಮಾತನಾಡುತ್ತಿದ್ದಾರೆ. ಮಾನ್ಯ ಗುಂಡಪ್ಪ ವಕೀಲರು ಈಗಾಗಲೇ ತಿಳಿಸಿರುವಂತೆ ಯಾವ ತಾಲ್ಲೂಕಿನಲ್ಲಿ ನೇರವಾಗಿ ಎಷ್ಟು ಜನರಿಗೆ ಕೊಟ್ಟಿದ್ದಾರೆ? ಯಾವುದಾದರೂ ಹತ್ತು ತಾಲ್ಲೂಕುಗಳಿಂದ ಹತ್ತು ಫಲಾನುಭವಿಗಳ ಹೆಸರುಗಳನ್ನು ಸನ್ಮಾನ್ಯ ಮಂತ್ರಿಗಳು ತರಿಸಿಕೊಟ್ಟರೆ ನಾವು ಕ್ಷಮಾಪಣೆ ಕೇಳುತ್ತೇವೆ.

ಶ್ರೀ ವೆಂಕಟರಮಣಪ್ಪ : ಎಲ್ಲಾ ಚೆಕ್ಕುಗಳನ್ನು ಫಲಾನುಭವಿಗಳಿಗೇ ಕೊಡುವುದು.

ಚೇರ್ಮನ್ : ವೆಂಕಟರಮಣಪ್ಪನವರೇ ಸಾಕು....

ಗೊಂದಲ

ಶ್ರೀ ಹೆಚ್.ಎಸ್. ಧೋತಿಹಾಳ್ : ಸಂಬಂಧಪಟ್ಟ ಶಾಸಕರು ಆಶ್ರಯ ಸಮಿತಿ ಅಧ್ಯಕ್ಷರರಾಗಿದ್ದು, ಫಲಾನುಭವಿಗಳ ಏನು ಆಯ್ಕೆಯಾಗುತ್ತದೆ ಅವರೇ ಮನೆ ಕಟ್ಟಿಕೊಳ್ಳುತ್ತಾರೆ ಚೆಕ್‌ನ್ನು ಕೂಡ ಅವರಿಗೇ ಕೊಡಲಾಗುತ್ತದೆ.

ಚೇರ್ಮನ್ : ಇದು ಏನಾಗಿದೆ ಎಂದರೆ ತಾವು ಶಾಸಕರಾಗಿ ತಮಗೆ ಅಧಿಕಾರ ಇದೆಯಲ್ಲಾ, ಸ್ವಲ್ಪ ಸರಿಮಾಡಿಕೊಳ್ಳಿ. ನಾವೆಲ್ಲರೂ ಅದನ್ನು ಮಾಡುತ್ತಿದ್ದೇವೆ, ನಮಗೆಲ್ಲಾ ಏನೂ ಸಮಸ್ಯೆ ಬಂದಿಲ್ಲ. ನಿಮಗೆ ಏನಾದರೂ ಸಮಸ್ಯೆ ಆಗಿದ್ದ ಪಕ್ಷದಲ್ಲಿ I think we can rectify it.

ಶ್ರೀ ಹಾಲಾಡಿ ಶ್ರೀನಿವಾಸಶೆಟ್ಟಿ : ಆಶ್ರಯ ಸಮಿತಿಗೆ ಆ ಕ್ಷೇತ್ರದ ಶಾಸಕರು

ಅಧ್ಯಕ್ಷರು : ಆ ಸಮಿತಿಯ ಸಹಸದಸ್ಯರು ಒಂದು ಪಕ್ಷದ ನೆಲೆಯಿಂದ ಬಂದವರು. ಅವರು ನಮಗೆ ಸಹಕಾರ ಕೊಡುತ್ತಿಲ್ಲ; ಅಸಹಕಾರ ಕೊಡುತ್ತಾರೆ. ಫಲಾನುಭವಿಗಳನ್ನು ಅರ್ಹತೆ ಆಧಾರದಮೇಲೆ ಆಯ್ಕೆಮಾಡುವುದಕ್ಕೆ ಆಗುವುದಿಲ್ಲ. ರಾಜಕೀಯ ಪಕ್ಷದ ನೆಲೆಯಲ್ಲಿ ಸಹಸದಸ್ಯರು ಆಯ್ಕೆಮಾಡುತ್ತಾರೆ. ಅವರ ಬಹುಮತವಿರುವಾಗ ನಾಲ್ಕು ಜನರನ್ನು ಹೇಗೆ ಆಯ್ಕೆ ಮಾಡುತ್ತಾರೆ? ನಾವು ಅದಕ್ಕೆ ಬರೇ ಅಧ್ಯಕ್ಷರಾಗಿರುವುದು ಮಾತ್ರ ಆದರೆ ಅಲ್ಲಿ ಏನೂ ಮಾಡುವುದಕ್ಕೆ ಆಗುವುದಿಲ್ಲ. ಈಗ ತಾನೇ, ಸಚಿವರು ಹೇಳಿದರು ಸಹ ಮತ ಬರದಿದ್ದಾಗ ಲಾಟರಿ ಎತ್ತುವ ಮೂಲಕ ಆಯ್ಕೆ ಮಾಡಿ ಎಂದು ಹಾಗಿದ್ದ ಮೇಲೆ, ಗ್ರಾಮಸಭೆಯಲ್ಲಿ ಫಲಾನುಭವಿಗಳನ್ನು ಆಯ್ಕೆ ಆಗಬೇಕು. ಸಂವಿಧಾನದಲ್ಲಿ ಏನು ಹೇಳುತ್ತದೆ? ಗ್ರಾಮಸಭೆ ಅಂದರೆ ಏನೂ? ಯಾವುದೇ ಸವಲತ್ತುಗಳನ್ನು ಕೊಡುವಾಗ ಎಲ್ಲವನ್ನೂ ಪರಿಶೀಲಿಸಿ ಫಲಾನುಭವಿಗಳನ್ನು ಆಯ್ಕೆ ಮಾಡಬೇಕು ಎಂದು ಗ್ರಾಮಸಭೆಗಳಲ್ಲಿ ಎಲ್ಲಿ ಆಯ್ಕೆ ಮಾಡುತ್ತಾರೆ? ಗ್ರಾಮಸಭೆಗಳಿಗೆ ಅಧಿಕಾರಿಗಳು ಬರುತ್ತಾರೆ.

ಛೇರ್ಮನ್ : ಮಧ್ಯೆ ಮಧ್ಯೆ ಕ್ರಾಸ್ ಟಾಕ್ಸ್ ಬೇಡ.

ಶ್ರೀ ಗುಂಡಪ್ಪ ವಕೀಲ್ : ಮಾನ್ಯ ಅಧ್ಯಕ್ಷರೇ, ಇದು ಬಹಳ ಮುಖ್ಯವಾದ ಪ್ರಶ್ನೆ ಇದೆ. ನಾವು ಛೇರ್ಮನ್‌ರಾಗಿ ಆಶ್ರಯ ಕಮಿಟಿ ಮೆಂಬರ್ಸ್ ಕಡೆಯಿಂದ ಫಲಾನುಭವಿಗಳನ್ನು ಆಯ್ಕೆ ಮಾಡಿ ಕೊಡುತ್ತೇವೆ. ಆಯ್ಕೆ ಮಾಡಿ ಕೊಟ್ಟ ಮೇಲೆ ಅದನ್ನು ಅನುಷ್ಠಾನ ಗೊಳಿಸುವುದು, ಮನೆ ಕಟ್ಟಿಸಿಕೊಡುವುದು ಸರ್ಕಾರದ ಕೆಲಸ. ಸರ್ಕಾರದವರು ಸುತ್ತೋಲೆ ಮಾಡುತ್ತಾರೆ. ಫಲಾನುಭವಿಗಳಿಗೆ ಕೊಡಿ ಅವರು ಬೇಡ ಅಂದರೆ ಅವರ ಹತ್ತಿರ ದುಡ್ಡು ಇಲ್ಲ ಅಂದರೆ ನೀವು ನಿರ್ಮಿತ ಕೇಂದ್ರಕ್ಕೆ ಆಗಲಿ ಅಥವಾ ಲ್ಯಾಂಡ್ ಆರ್ಮಿಗೆ ಕೊಟ್ಟು ಕಟ್ಟಿಸಿ ಎಂದು ಹೇಳುತ್ತಾರೆ. ಇಲ್ಲಿ ಸುತ್ತೋಲೆ ಒಂದು ಹೇಳುತ್ತಾರೆ. ಮತ್ತೊಂದು ಕಡೆ ಡಿಪಾರ್ಟ್‌ಮೆಂಟ್ ವತಿಯಿಂದ ಕಟ್ಟಿಸಿಕೊಡುತ್ತೇವೆಂದು ಹೇಳುತ್ತಾರೆ. ಇದು ಬೇಡ ಎಂದು ನಾನು ಹೇಳುವುದು. ತಾವು ಸುತೋಲೆ ಪ್ರಕಾರ ನೀವು ಮಾಡಿಸಿ ಎಲ್ಲಾ ಚೆನ್ನಾಗಿ ಆಗುತ್ತದೆಂದು ನಾನು ಹೇಳುವುದು.

ಛೇರ್ಮನ್ : Any how the Government will sort out the problem. Hon'ble Minister, he is seized of the matter.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ನಾನು ಏನು ಹೇಳುತ್ತಿದ್ದೇನೆಂದರೆ ಆಶ್ರಯ ಯೋಜನೆಯ ಬಗ್ಗೆ ದೀರ್ಘವಾಗಿ ಚರ್ಚೆ ನಡೆಸುವುದರ ಬಗ್ಗೆ ಅರ್ಧಗಂಟೆಗಳ ಕಾಲ ಚರ್ಚೆ ನಡೆಸಲು ಅಧ್ಯಕ್ಷರು ವಿಷಯವನ್ನು ಅಜೆಂಡಾದಲ್ಲಿಟ್ಟಿದ್ದಾರೆ. ಆದ್ದರಿಂದ ಆಯುವ್ಯಯದ ಮೇಲೆ ಮಾತನಾಡುತ್ತಿರುವಂಥ ಈ ಸಂದರ್ಭದಲ್ಲಿ ಈ ವಿಚಾರಕ್ಕೆ ಇನ್ನೂ ಸಮಯ ಇದೆ. ಸರ್ಕಾರ 8ನೇ ತಾರೀಖಿನವರೆಗೂ ಸದನವನ್ನು ಮುಂದುವರಿಸಿದೆ. ಅರ್ಧಗಂಟೆಯ ಕಾಲ ಚರ್ಚೆ ಮಾಡುವ ಅವಕಾಶ ಏನು ಇದೆ ಆಗ ಈ ವಿಚಾರವನ್ನು ಹೇಳಬಹುದು. ಆಗ ಮಾನ್ಯ ಸದಸ್ಯರುಗಳು ಏನು ಸಲಹೆ ಕೊಡುತ್ತಾರೋ ಆ ಪ್ರಕಾರ ಸರ್ಕಾರ ನಿರ್ಣಯ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದರೆ ಅವರು ಬಜೆಟ್ ಮೇಲೆ ಮಾತನಾಡುವ ಸಮಯದಲ್ಲಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಮುಂದೆ ಚರ್ಚೆ ಆಗುವಂತಹ ಸಂದರ್ಭದಲ್ಲಿ ಅವರು ಕೊಡುವ ಸಲಹೆಗಳಿಗೆ ಮಾನ್ಯತೆ ಕೊಡುವುದು ನನ್ನ ಜವಾಬ್ದಾರಿ ನಾನು ಕೊಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಲು ಇಚ್ಛಿಸುತ್ತೇನೆ.

Chairman : Hon'ble Member Sri Gundappa, I think you can agree with this.
ಅವರು ಏನು ವಿಚಾರ ಹೇಳಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು 8ನೇ ತಾರೀಖಿನವರೆಗೂ ಸದನ ಏನು ಮುಂದಕ್ಕೆ ಹೋಗಿದೆ ಆ ಮಧ್ಯೆದಲ್ಲಿ ವಿಶೇಷವಾಗಿ ಚರ್ಚೆ ಮಾಡಲು ಅವಕಾಶವನ್ನು ಕಲ್ಪಿಸೋಣ. ಆದ್ದರಿಂದ ಈಗ ತಾವು ಬಜೆಟ್ ಮೇಲಿನ ಚರ್ಚೆ ಮುಗಿಸಿ.

ಶ್ರೀ ಗುಂಡಪ್ಪ ವಕೀಲ್ : ಮಾನ್ಯ ಅಧ್ಯಕ್ಷರೇ, ಈ ಬಜೆಟ್ ಮೇಲೆ ಮಾತನಾಡತಕ್ಕಂಥ ಸಂದರ್ಭದಲ್ಲಿ ನಾವು ಇವನ್ನೆಲ್ಲಾ ಹೇಳಬೇಕಾಗುತ್ತದೆ. ಅಲ್ಲಿನ ನ್ಯೂನ್ಯತೆಗಳು ಅಲ್ಲಿನ ತೊಂದರೆಗಳನ್ನು ಸರ್ಕಾರದ ಗಮನಕ್ಕೆ ತರಬೇಕಾಗುತ್ತದೆ. ಮತ್ತೊಂದು ಪ್ರಶ್ನೆ ಮಾನ್ಯ ಗುಂಡಪ್ಪ ವಕೀಲ್‌ರು ಬೇರೆ ಹೇಳುತ್ತಾರೆ ಎಂದು ಅಂತ ಅದಕ್ಕೆ ನಾನು ಮಾನ್ಯ ಸಗೀರ್ ಅಹಮದ್‌ರವರಿಗೆ ನಾನು ಒಂದು ಊರ್ದು ಕವಿತೆಯನ್ನು ಹೇಳುತ್ತೇನೆ. ದುನಿಯಾ ಮೇ ದುಖಿ ದುಃಖ್ ಹೈ ...... ನಾನು ಅದನ್ನು ಟ್ರಾನ್ಸ್‌ಲೇಷನ್ ಮಾಡಿ ಹೇಳುತ್ತೇನೆ.

ಛೇರ್ಮನ್ : ಮಾನ್ಯ ಗುಂಡಪ್ಪನವರೇ ಈಗ ನಾನು ಇಂಗ್ಲೀಷ್‌ನಲ್ಲಿ ಮಾತನಾಡಿದರೆ ಅರ್ಥವಾಗುವುದಿಲ್ಲ ಎಂದು ಹೇಳುತ್ತಾರೆ. ಇನ್ನು ತಾವು ಊರ್ದುನಲ್ಲಿ ಮಾತನಾಡಿದರೆ ನನ್ನ ಗತಿ ಏನು? ಊರ್ದು, ತಮಿಳು, ತೆಲುಗು ತರಬೇಡಿ ಇಲ್ಲಿ. ಗುಂಡಪ್ಪನವರೇ, ಕಲ್ಪನೆಗಳು ಶುರುವಾದವು ಇನ್ನೂ 5-6 ಜನ ಮಾತನಾಡುವವರಿದ್ದಾರೆ. ತಾವು ಬೇಗ ಮುಗಿಸಿ, ಊಟಕ್ಕೆ ಹೋಗೋಣ.

ಶ್ರೀ ಗುಂಡಪ್ಪ ವಕೀಲ್ : ಮಾನ್ಯ ಅಧ್ಯಕ್ಷರೇ, ನಾನು ಮತ್ತೊಂದು ವಿಷಯ ಹೇಳುತ್ತೇನೆ. ನನ್ನ ಕ್ಷೇತ್ರದಲ್ಲಿ 1992ನೇ ಇಸವಿಯಲ್ಲಿ ಒಂದು ಬಿ.ಸಿ.ಎಂ ಹಾಸ್ಟಲ್ ಕಟ್ಟಿದ್ದಾರೆ. ಇಲ್ಲಿ ಮಾನ್ಯ ಸಮಾಜ ಕಲ್ಯಾಣ ಸಚಿವರು ಇದ್ದಾರೆ. ಆ ಹಾಸ್ಟಲ್‌ಗೆ 1992ನೇ ಇಸವಿಯಲ್ಲಿ ಕಾಂಪೌಂಡ್ ಸಹ ಕಟ್ಟಿದ್ದಾರೆ. ಹಣ ಪಾವತಿ ಮಾಡಿದ್ದಾರೆ. ಬಿಲ್ ಕೊಟ್ಟಿದ್ದಾರೆ. ಹಾಸ್ಟಲ್ ಇದೆ, ಕಾಂಪೌಂಡ್ ಇದೆ ಎಲ್ಲಾ ಇದೆ. ಆದರೆ 2002-2003ರಲ್ಲಿ ಬಿ.ಸಿ.ಎಂ ಹಾಸ್ಟಲ್‌ಗೆ ಹೊಸದಾಗಿ ಕಾಂಪೌಂಡ್ ಕಟ್ಟಡ ಕಟ್ಟಬೇಕೆಂದು ಹೇಳಿ ಹೊಸದಾಗಿ ಆಕ್ಷನ್ ಪ್ಲಾನ್ ಮಾಡಿದ್ದಾರೆ ಇರತಕ್ಕಂಥ ಹಾಸ್ಟಲ್ ಮೇಲೆ ಪುನಃ ಬಡ್ಜೆಟ್, ಕಟ್ಟಿರತಕ್ಕಂಥ ಕಾಂಪೌಂಡ್ ಮೇಲೆ ಪುನಃ ಆಕ್ಷನ್ ಪ್ಲಾನ್. ಆರು ಲಕ್ಷ ರೂಪಾಯಿ ಅನುದಾನ ಬೇಕು ಎಂದು ಆಕ್ಷನ್ ಪ್ಲಾನ್ ಮಾಡಿದ್ದಾರೆ ಬಿಸಿಎಂ ಆಫೀಸರ್, ಅದನ್ನು ಜಿಲ್ಲಾ ಪಂಚಾಯತಿಯ ಸಾಮಾನ್ಯ ಸಭೆಯಲ್ಲಿಟ್ಟುಕೊಂಡು ಆರು ಲಕ್ಷ ರೂಪಾಯಿಗಳಿಗೆ ಮಂಜೂರಾತಿ ಕೊಟ್ಟಿದ್ದಾರೆ. ಜಿಲ್ಲಾ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಯಾರೋ ತಕರಾರು ಮಾಡಿದ್ದಾರೆ. ಈಗ ಹಾಲಿ ಕಾಂಪೌಂಡ್ ವಾಲ್ ಇದೆ ಎಂದು ಅಬ್ಜೆಕ್ಷನ್ ಎತ್ತಿದ್ದಾರೆ. ಅದೂ ಕೂಡ ನಡವಳಿಕೆಯಲ್ಲಿ ಬಂದಿದೆ. ಆದರೂ ಸಹ ಅದನ್ನು ಓವರ್‌ಲುಕ್ ಮಾಡಿ ಮಂಜೂರಾತಿ ಕೊಟ್ಟಿದ್ದಾರೆ. ಅದರ ದಾಖಲೆ ಸಮೇತ ನಾನು ಸಮಾಜ ಕಲ್ಯಾಣ ಮಂತ್ರಿಗಳಿಗೆ ಕೊಟ್ಟಿದ್ದೇನೆ. ಇವತ್ತು ಇಷ್ಟೊಂದು ಓಪನ್ ಆಗಿ ಇರತಕ್ಕಂಥ ಬಿಲ್ಡಿಂಗ್ ಮೇಲೆ ಬಡ್ಜೆಟ್ ಮಾಡುವುದು, ಕಾಂಪೌಂಡ್ ವಾಲ್‌ಗಳ ಮೇಲೆ ಆಕ್ಷನ್ ಪ್ಲಾನ್ ಮಾಡುವುದು, ಓಪನ್ ಆಗಿ ಭ್ರಷ್ಟಾಚಾರ, ದರೋಡೆ, ಅನ್ಯಾಯ ನಡೆಯುತ್ತಿರುವಾಗ ನಾವು ಹೇಗೆ ಸುಮ್ಮನೆ ಕೂರುವುದಕ್ಕೆ ಆಗುತ್ತದೆ.

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಇಲಾಖಾ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದ್ಯಸರು ಮಾತನಾಡಬೇಕಾಗಿರುವುದು ಬಡ್ಜೆಟ್ ಮೇಲೆ. ಅವರು ಈ ವಿಷಯವನ್ನು

ಈಗಾಗಲೇ ಪ್ರಶ್ನೆರೂಪದಲ್ಲಿ ಇಲಾಖೆಗೆ ಕಳುಹಿಸಿ ಕೊಟ್ಟಿದ್ದಾರೆ. ಅದಕ್ಕೆ ಉತ್ತರ ಕೊಡಬೇಕಾದ ಜವಾಬ್ದಾರಿ ನಮ್ಮದು ಇದೆ. ಅವರು ಈಗ ಈ ಸದನದ ಸಮಯವನ್ನು ದುರುಪಯೋಗಪಡಿಸಿಕೊಂಡು ದಿಕ್ಕು ತಪ್ಪಿಮಾಡನಾಡುತ್ತಿದ್ದಾರೆ, ದಯಮಾಡಿ ಅದು ಆಗಬಾರದು. ಹಾಸ್ಟೆಲ್ ಕಾಂಪೌಂಡ್ ಕಟ್ಟುವುದಕ್ಕೆ ಎರಡನೇ ಸಲ ಪ್ರಸ್ತಾವನೆ ಕೊಟ್ಟಿದ್ದಾರೆಂದು ಹೇಳಿದ್ದಾರೆ. ಇದಕ್ಕಾಗಿ ಆಕ್ಷನ್ ಪ್ಲಾನ್ ಮಾಡಿದ್ದಾರೆಂದು ಹೇಳಿದ್ದರೆ. ಅವರು ಅಲ್ಲಿ ಯಾವ ಕಾರಣಕ್ಕಾಗಿ ಮಾಡಿದ್ದಾರೆಂದು ಗೊತ್ತಿಲ್ಲ. ಈ ವಿಚಾರದಲ್ಲಿ ತಪ್ಪು ಮಾಹಿತಿಯನ್ನು ಕೊಟ್ಟು ದುಡ್ಡು ದುರುಪಯೋಗ ಮಾಡಿಕೊಳ್ಳುವುದಕ್ಕೆ ಏನು ಪ್ರಯತ್ನ ನಡೆದಿದೆ ಅದರ ಮೇಲೆ ನಾವು ಆಕ್ಷನ್ ತೆಗೆದುಕೊಳ್ಳುತ್ತೇವೆ ಎಂದು ನಾನು ಈಗಾಗಲೇ ಮಾನ್ಯ ಸದಸ್ಯರಿಗೆ ಹೇಳಿದ್ದೇನೆ. ಆಕ್ಷನ್ ಪ್ಲಾನ್ ಮಾಡಿದವರಿಗೆ ನಾವು ಆಕ್ಷನ್ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ. ಆದ್ದರಿಂದ ತಾವು ಬಜೆಟ್ ಮೇಲೆ ಮಾತನಾಡಿ. ಹೇಗೋ ಮಾಡಿ ಆ ವಿಚಾರವನ್ನು ಸದನದಲ್ಲಿ ಪ್ರಸ್ತಾಪ ಮಾಡಬೇಕೆಂದು ಒಂದು ವಾರದಲ್ಲಿ ಕಾಯುತ್ತಿದ್ದರು, ಅದನ್ನು ಇವತ್ತು ತಾವು ಉಪಯೋಗ ಮಾಡಿ ಕೊಳ್ಳುತ್ತಿದ್ದೀರಿ.

ಶ್ರೀ **ಗುಂಡಪ್ಪ ವಕೀಲ್** : ಮಾನ್ಯ ಅಧ್ಯಕ್ಷರೇ, ಈಗ ನನ್ನ ಕ್ಷೇತ್ರದಲ್ಲಿ ಈ ರೀತಿ ಆಗಿರುವಾಗ ರಾಜ್ಯದಲ್ಲಿ ಇನ್ನೆಷ್ಟು ಆಗಿರಬಹುದು ಎಂದು ಹೇಳಿ ನಾನು ವಿಷಯವನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತಿದ್ದೇನೆ. ನಾನು ತಮ್ಮನ್ನು ಟೀಕೆ ಮಾಡುತ್ತಿಲ್ಲ.

ಶ್ರೀ ಎ ಕೃಷ್ಣಪ್ಪ : ನೀವು ನನ್ನ ಗಮನಕ್ಕೆ ತಂದಿದ್ದೀರಿ. ಈಗ ಇಲ್ಲಿ ಹೇಳುವಂತಹ ಪ್ರತಿಷ್ಠೆ ಏನು ಬಂತು? ನಾನು ನಿಮಗೆ ಭರವಸೆ ಕೊಟ್ಟಿದ್ದೇನೆ. ಅದರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಸುಳ್ಳು ಆಕ್ಷನ್ ಪ್ಲಾನ್ ಮೇಲೆ ನಾವು ಆಕ್ಷನ್ ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಸದ್ಯಸರಿಗೆ ಭರವಸೆ ಕೊಟ್ಟಿದ್ದೇನೆ. ಅದನ್ನು ಮತ್ತೆ ಏಕೆ ಪ್ರಸ್ತಾಪ ಮಾಡುತ್ತೀರಿ. ಪ್ರಚಾರಕ್ಕಾಗಿಯೇ, ಈ ವಿಚಾರ.

ಶ್ರೀ **ಗುಂಡಪ್ಪ ವಕೀಲ್** : ಮಾನ್ಯ ಸಚಿವರೇ, ನಮ್ಮ ಇಡೀ ಜಿಲ್ಲೆ ಭ್ರಷ್ಟಾಚಾರದಿಂದ ನರಳುತ್ತಿದೆ. ಮಾನ್ಯ ಆರೋಗ್ಯ ಸಚಿವರು ಮೊನ್ನೆತಾನೆ ಮೂರು ಜನರನ್ನು ಸಸ್ಪೆಂಡ್ ಮಾಡಿದ್ದಾರೆ, ಈ ರೀತಿ ಸರ್ಕಾರ ಕ್ರಮ ತೆಗದುಕೊಳ್ಳಲಿಲ್ಲವೆಂದರೆ ನಾವು ಎಲ್ಲಿಗೆ ಹೋಗಬೇಕು ಹೇಳಿ?

ಛೇರ್ಮನ್ : ಕ್ರಮ ತೆಗೆದುಕೊಳ್ಳುತ್ತೇವೆಂದು ಅವರು ಭರವಸೆ ಕೊಟ್ಟಿದ್ದಾರೆ. ಕ್ರಮ ತೆಗೆದುಕೊಳ್ಳಲಿಲ್ಲವೆಂದರೆ ಆಮೇಲೆ ನೋಡೋಣ.

ಶ್ರೀ **ಗುಂಡಪ್ಪ ವಕೀಲ್** : ಮಾನ್ಯ ಅಧ್ಯಕ್ಷರೇ, ಅದೇ ರೀತಿ ಈ ಬರಗಾಲ ಹೋದ ವರ್ಷ ಈ ರಾಜ್ಯದಲ್ಲಿ ನೂರಾರು ಟನ್ ಆಹಾರಧಾನ್ಯಗಳು ಪ್ರತಿ ಕ್ಷೇತ್ರಕ್ಕೂ ಬಿಡುಗಡೆ ಆಯಿತು. ಕೂಲಿಗಾಗಿ ಕಾಳು ಎಂದು ಯೋಜನೆ ತಂದರು. ಈ ಕೂಲಿಗಾಗಿ ಕಾಳು ಯೋಜನೆಯಲ್ಲಿ ಕಾಮಗಾರಿಗಳನ್ನು ಕೈಗೊಂಡಿದ್ದಾರೆ. ಎಲ್ಲಿ ಕಾಮಗಾರಿ ನಡೆದಿದೆ? ನನ್ನ ಕ್ಷೇತ್ರದಲ್ಲಿ ಅಂತೂ ಎಲ್ಲಿಯೂ ಕಾಮಗಾರಿ ಆಗಿಲ್ಲ. ಆಮೇಲೆ ಕೂಲಿಗಾಗಿ ಕಾಳು ಯೋಜನೆಯಲ್ಲಿ ಯಾವ ಪ್ರಕಾರ ವ್ಯಾಪಕವಾಗಿ ದುರುಪಯೋಗವಾಗಿದೆ ಎನ್ನುವ ಬಗ್ಗೆ ಸರ್ಕಾರ ಗಮನಹರಿಸಬೇಕಾಗುತ್ತದೆ. ಈಗ ಮುಂದೆ ಬರತಕ್ಕಂಥ ಬರಗಾಲದಲ್ಲಿ ಕೂಡ ಲಕ್ಷಾಂತರ ಟನ್ ಆಹಾರಧಾನ್ಯಗಳು ಕೇಂದ್ರ ಸರ್ಕಾರದಿಂದ ಬರುತ್ತಿವೆ. ಅದನ್ನು ಸರ್ಕಾರ ಪ್ರತಿ ಕ್ಷೇತ್ರಕ್ಕೂ ರಿಲೀಜ್ ಮಾಡುತ್ತಾರೆ. ಆ ಕ್ಷೇತ್ರದಲ್ಲಿ ಕೂಲಿಗಾಗಿ ಕಾಳು ಯೋಜನೆ ಎಂದು ಒಂದು ಹೆಸರಿಟ್ಟು ಯಾವ ಕಾಮಗಾರಿಗಳನ್ನು ಮಾಡಲಾರದೆ ಅದು ಎಲ್ಲಿ ಹೋಯಿತು. ಕೂಲಿಗಾಗಿ ಕಾಳು ಯೋಜನೆ ಸ್ಪೆಸಿಫಿಕ್ ಆಗಿ

ಆಗಿರುವಂತಹ ಕಾಮಗಾರಿಗಳ ಪಟ್ಟಿಗಳನ್ನು ಪರಿಶೀಲನೆ ಮಾಡಬೇಕಾಗುತ್ತದೆ. ಅದರಲ್ಲಿ ಶಾಸಕರನ್ನು ಇನ್‌ವಾಲ್ವ್‌ಮೆಂಟ್ ಮಾಡಿ. ಆ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿದೆ. ಹೋದ ವರ್ಷ ಈ ಯೋಜನೆಯಲ್ಲಿ ಕೆಲಸ ಚೆನ್ನಾಗಿ ಆಗಿಲ್ಲ. ಅದರ ಬಗ್ಗೆ ಪಟ್ಟಿ ತರಿಸಿಕೊಂಡು ಸರ್ಕಾರ ಅದರ ಬಗ್ಗೆ ಪರಿಶೀಲನೆ ಮಾಡಬೇಕೆಂದು ನಾನು ಹೇಳುತ್ತಿದ್ದೇನೆ. ಅದೇ ರೀತಿ ಈ ವರ್ಷ ಕೂಡ ಬರಗಾಲ ಪರಿಸ್ಥಿತಿ ಬಹಳ ಭೀಕರವಾಗಿದೆ. ನಮ್ಮ ಕಡೆ ಜನ ವಲಸೆ ಹೋಗುತ್ತಿದ್ದಾರೆ. ಜನ ಎಲ್ಲಿಗಾದರೂ ಹೋಗಲಿ. ಏನಾದರೂ ಮಾಡಿ ದುಡಿದು ತಿನ್ನುತ್ತಾರೆ. ಬದುಕುತ್ತಾರೆ. ಆದರೆ ಜಾನುವಾರುಗಳು ಎಲ್ಲಿ ಹೋಗಬೇಕು. ಇವತ್ತು ಮಳೆ ಇಲ್ಲ. ಕುಡಿಯುವುದಕ್ಕೆ ನೀರು ಇಲ್ಲ. ಜಾನುವಾರುಗಳಿಗೆ ಮೇವು ಇಲ್ಲ. ಜಾನುವಾರುಗಳು ವಲಸೆ ಹೋಗುವುದಕ್ಕೆ ಆಗುವುದಿಲ್ಲ. ಕುಡಿಯುವುದಕ್ಕೆ ನೀರು ಇಲ್ಲ. ಜಾನುವಾರುಗಳಿಗೆ ಮೇವು ಇಲ್ಲ. ಇದು ಬರಗಾಲದ ಬಗ್ಗೆ.

ಛೇರ್ಮನ್ : ಶ್ರೀ ಗುಂಡಪ್ಪನವರೇ ತಾವು ಅಸೆಂಬ್ಲಿ ಪ್ರೊಸಿಡಿಂಗ್ಸ್ ನೋಡಿ. ಬರಗಾಲದ ಬಗ್ಗೆ ಈಗಾಗಲೇ ಚರ್ಚೆ ಆಗಿದೆ. ಬಹಳಷ್ಟು ಸದಸ್ಯರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ. ಸರ್ಕಾರದವರು ಈಗಾಗಲೇ ಉತ್ತರ ನೀಡಿದ್ದಾರೆ. ಈಗ ನೀವು ಪುನಃ ಪ್ರಸ್ತಾಪವಾದ ವಿಚಾರವನ್ನು ಎತ್ತ ಬೇಡಿ. ಬಜೆಟ್ ಚರ್ಚೆಯು ಹೀಗಾದರೆ ಮುಗಿಯುವುದು ಹೇಗೆ? ಈ ಕುರಿತು ಈಗಾಗಲೇ ನಿಲುವಳಿ ಸೂಚನೆ ಬಂದು ಚರ್ಚೆಗೆ ಉತ್ತರವನ್ನು ಕೂಡ ಕೊಟ್ಟಿದ್ದಾರೆ. ಪುನಃ ಅದನ್ನು ರಿಪೀಟ್ ಮಾಡುವುದು ಒಳ್ಳೆಯದಲ್ಲ...

ಶ್ರೀ ಗುಂಡಪ್ಪ ವಕೀಲ : ಮಾನ್ಯ ಅಧ್ಯಕ್ಷರೇ, ಚರ್ಚೆಯಾಗಿದೆ ನಿಜ. ಆದರೆ ಸಮಸ್ಯೆಗೆ ಸಮಾಧಾನ ಬಂದಿಲ್ಲ. ಜನರೆಲ್ಲ ಹೋಗುತ್ತಾ ಇದ್ದಾರೆ, ಜಾನುವಾರುಗಳು ಸಾಯುತ್ತಾ ಇದ್ದಾವೆ. ಜಾನುವಾರುಗಳಿಗೆ ಮೇವು ಇಲ್ಲ, ಜನರಿಗೆ ಆಹಾರವಿಲ್ಲ, ಕೈಗೆ ಕೆಲಸವಿಲ್ಲ, ಇಂಥ ಪರಿಸ್ಥಿತಿಯನ್ನು ನಾವು ಸರಕಾರದ ಗಮನಕ್ಕೆ ತರುವುದು ಬೇಡವೆ?

ಛೇರ್ಮನ್ : ಈಗಾಗಲೇ ಗ್ರಾಂಟ್ಸ್ ರಿಲೀಸ್ ಮಾಡಿದ್ದಾರೆ, ತಮಗೆ ಅದು ಗೊತ್ತಿದೆ. ಸರಕಾರದವರು ತೆಗೆದುಕೊಂಡ ಕ್ರಮಗಳ ಬಗ್ಗೆ ತಾವುಗಳು ಪತ್ರಿಕೆಗಳಲ್ಲಿ ಓದಿದ್ದೀರಿ. ಡಿಮ್ಯಾಂಡ್ ಮೇಲಿನ ವಿಚಾರಗಳಿದ್ದರೆ ಪ್ರಸ್ತಾಪಿಸಿರಿ. ಎರಡು ಗಂಟೆ ಆಗುತ್ತಾ ಇದೆ. ಶುಗರ್ ಇರುವವರು ಸರಿಯಾದ ಸಮಯದಲ್ಲಿ ಊಟ ಮಾಡಬೇಕು. We should not punish their kindly conclude your speech within five minutes.

ಶ್ರೀ ಗುಂಡಪ್ಪ ವಕೀಲ್ : ಮಾನ್ಯ ಅಧ್ಯಕ್ಷರೇ, ಇಂಥ ವಿಚಾರಗಳನ್ನು ನಾವು ಸದನದ ಗಮನಕ್ಕೆ ತರಬೇಕಾಗುತ್ತದೆ. ನಾನಾ ರೀತಿಯಾದ ಸಮಸ್ಯೆಗಳಿದ್ದಾವೆ. ಈ ರೀತಿಯ ಸಮಸ್ಯೆಗಳನ್ನು ನಾವು ಸದನದ ಗಮನಕ್ಕೆ ತರಲಿಲ್ಲ ಅಂದರೆ, ಸದನಕ್ಕೆ ಗೊತ್ತಾಗುವುದಾದರೂ ಹೇಗೆ? ಭಯಂಕರವಾದ ಇಂಥ ಪರಿಸ್ಥಿತಿಯಲ್ಲಿ ನಾವುಗಳು ಕ್ಷೇತ್ರಕ್ಕೆ ಹೋದಾಗ ಜನರು ನಮ್ಮನ್ನು ಹಿಡಿದುಕೊಂಡು ಬಿಡುತ್ತಾರೆ. ಅವರಿಗೆ ನಾವೇನು ಹೇಳುವುದು? ಒಂದು ತಿಂಗಳ ಕಾಲ ಸದನದಲ್ಲಿ ನೀವು ಏನು ಮಾಡಿದ್ದೀರಿ ಎಂದು ಕೇಳಿದರೆ ಅವರಿಗೆ ನಾವೇನು ಹೇಳುವುದು? ನಾವು ಟಿ.ಎ.ಡಿ.ಎ ತೆಗೆದುಕೊಂಡು ಬಂದಿದ್ದೇವೆ ಎಂದು ಹೇಳೋಣವೆ? ತಾವೇ ಹೇಳಿ.... ನಮ್ಮಲ್ಲಿ ಭಯಂಕರವಾದ ಪರಿಸ್ಥಿತಿ ಇದೆ ಅದರ ಸಲುವಾಗಿ ಒಂದೇ ಒಂದು ಮಾತನ್ನು ಹೇಳ ಬಯಸುತ್ತೇನೆ. ಅಗರ್ ತೂಫಾನ್ ಆತಾ ಹೈ...

ಛೇರ್ಮನ್ : ದಯವಿಟ್ಟು ತಾವುಗಳು ಬೇರೆ ಭಾಷೆಯಲ್ಲಿ ಏನೋ ಹೇಳಲು ಹೊರಟಿದ್ದೀರಿ. ನಮಗೆ ಉರ್ದು ಅರ್ಥವಾಗುವುದಿಲ್ಲ. ನೀವು ಕನ್ನಡದಲ್ಲಿಯೇ ಮಾತನಾಡಿ. ನೀವು ಬೇರೊಂದು ಸಮಸ್ಯೆಯನ್ನು ಹುಟ್ಟು ಹಾಕಿ ಸಮಸ್ಯೆ ಮಾಡಬೇಡಿ.... ನಿಮ್ಮ ಉರ್ದು ನನಗೆ ಅರ್ಥವಾಗ ಬೇಕಲ್ಲವೇ? ಇತರರಿಗೆ ಹೇಗೆ ಅರ್ಥವಾಗುತ್ತದೆ? ಒಬ್ಬೊಬ್ಬರು ಒಂದೊಂದು ಭಾಷೆಯಲ್ಲಿ ಹೇಳಿದರೆ ನಮಗೆ ಅರ್ಥವಾಗ ಬೇಕಲ್ಲವೇ?

ಶ್ರೀ ಗುಂಡಪ್ಪ ವಕೀಲ : ಮುಂದೆ ಬರತಕ್ಕಂಥ ದಿನಗಳ ಬಗ್ಗೆ ಒಂದು ಉರ್ದು ಕವಿತೆ ಇದೆ. ಅಗರ್ ತೂಫಾನ್ ಆತಾ ಹೈ ತೋ ಬೋಲ್‌ಕರ್ ನಹೀಂ ಆತಾ... ಅಂದರೆ ಯಾವುದೇ ವಿಪತ್ತು ಬರುತ್ತದೆ ಅಂದರೆ ಹೇಳಿ ಕೇಳಿ ಬರುವುದಿಲ್ಲ. ಆನೇ ಕೇ ಬಾದ್ ಸಬ್‌ಕುಚ್ ಬರ್‌ಬಾದ್ ಕರ್ ದೇತಾ ....

ಛೇರ್ಮನ್ : ಏ ಕ್ಯಾ ಪರಿಸ್ಥಿತಿ ಹೋಗಯಾ ಬಾ್ಯ? ಸಮಯ 2-00 ಗಂಟೆ ಆಯಿತು... ದಯವಿಟ್ಟು ಭಾಷಣವನ್ನು ಮುಗಿಸಿ.

ಶ್ರೀ ಗುಂಡಪ್ಪ ವಕೀಲ್ : ಮುಂದೆ ಬರತಕ್ಕಂಥ ಭಯಂಕರ ದಿನಗಳ ಬಗ್ಗೆ ನಾವು ಸಮರ್ಪಕವಾಗಿ ಸದನದ ಗಮನಕ್ಕೆ ತರಬೇಕಾಗುತ್ತದೆ. ಇಂಥ ವಿಷಯಗಳನ್ನು ನಾವು ಬಹಳ ಲೈಟ್ ಆಗಿ ತೆಗೆದುಕೊಳ್ಳುವುದು ಅಲ್ಲ... ಭೀಕರ ಬರಗಾಲ ಬರುತ್ತಾ ಇದೆ ಎಂದು ಜನರು ಹೆದರಿದ್ದಾರೆ. ಅದರ ಬಗ್ಗೆ ಸರಕಾರದವರು ಎಚ್ಚರ ವಹಿಸಬೇಕಾಗುತ್ತದೆ. ಬರಗಾಲದ ಬಗ್ಗೆ ಎಷ್ಟು ಚಿಂತನೆ ಮಾಡಿದರೂ ಕೂಡ ಅದು ಕಡಿಮೆಯಾಗುತ್ತದೆ. ಆದ್ದರಿಂದ ಈ ಕುರಿತು ಸರಕಾರ ವಿಚಾರ ಮಾಡಬೇಕೆಂದು ಹೇಳುತ್ತಾ ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ : ಸನ್ಮಾನ್ಯ ಸದಸ್ಯರಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಬಿಎಸಿ ಯಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಬೆಳಿಗ್ಗೆ 10 ಗಂಟೆ ಯಿಂದ ಸಾಯಂಕಾಲ 7-00 ಗಂಟೆಯವರೆವಿಗೂ ಭೋಜನ ವಿರಾಮ ನೀಡದೆ ಬಜೆಟ್ ಚರ್ಚೆಯನ್ನು ಮಾಡಿ ಮುಗಿಸಿ ಇವೊತ್ತೋ ಅದನ್ನು ಇಲ್ಲಿ ಮಂಡಿಸಿ ಅಪ್ಪರ್‌ಹೌಸ್‌ಗೆ ಕಳುಹಿಸುವ ವಿಚಾರವಿದೆ. ತಾವುಗಳೆಲ್ಲಾ ಇಚ್ಛಿಪಟ್ಟರೆ ಸಭೆಯನ್ನು ಮುಂದುವರಿಸುವುದಕ್ಕೆ ನನ್ನ ಅಬ್‌ಜಕ್ಷನ್ ಇಲ್ಲ. ನಾವು ಕಲಾಪಗಳನ್ನು ಮುಂದುವರಿಸುತ್ತಿರಬಹುದು ಈಗಾಗಲೇ ಮಾನ್ಯ ಗುಂಡಪ್ಪರವರು ಐದು ನಿಮಿಷಗಳ ಕಾಲ ಹೆಚ್ಚು ತೆಗೆದುಕೊಂಡು ಮುಗಿಸಿದ್ದಾರೆ. ಭೋಜನ ವಿರಾಮ ಇಲ್ಲದೆ ಕಲಾಪಗಳನ್ನು ಮುಂದುವರಿಸಬೇಕೆಂದು ಒಂದು ಬಿಎಸಿ ಕಮಿಟಿಯವರು ತೀರ್ಮಾನ ತೆಗೆದುಕೊಂಡಾಗ ಅದನ್ನು ವಯಲೇಟ್ ಮಾಡುವುದು ಸರಿಯಲ್ಲ. Now, I reqiest Mr. Shekar, ಮಾನ್ಯ ಅಪ್ಪಚ್ಚುರಂಜನ್‌ರವರು ತಮ್ಮ ಮಾತುಗಳನ್ನು ಐದು ನಿಮಿಷಗಳಲ್ಲಿ ಮುಗಿಸಿರಿ.

ಹೆಚ್.ಸಿ. ಶ್ರೀಕಂಠಯ್ಯ : ಒಂದು ಘಂಟೆಗಳ ಕಾಲ ಭೋಜನ ವಿರಾಮ ನೀಡಿ, ತದನಂತರ ಸಭೆ ಸೇರೋಣ.

ಛೇರ್ಮನ್ : ಇಲ್ಲಿದೆ. ಬಜೆಟ್‌ನ್ನು ಚರ್ಚೆ ಇಲ್ಲದೆ ಅಪ್ರೂವಲ್ ಮಾಡುವುದು ಸರಿಯಿಲ್ಲವೆಂದು ತಾವೆಲ್ಲರೂ ಅರಿತುಕೊಂಡು ತೀರ್ಮಾನಕ್ಕೆ ಬಂದಿದ್ದೀರಿ. I do respect your decision.

ಶ್ರೀ ಕೆ. ಜಯಪ್ರಕಾಶ ಹೆಗ್ಡೆ : ಮಾನ್ಯ ಅಧ್ಯಕ್ಷರೇ, ತಾವುಗಳು ಒಬ್ಬೊಬ್ಬರಿಗೆ ಒಂದು ಗಂಟೆ, ಕೆಲವರಿಗೆ ಐದು ನಿಮಿಷ ಹೀಗೆಲ್ಲಾ ಅವಕಾಶವನ್ನು ಕೊಡುತ್ತೀರಿ. ಇಲ್ಲಿ ಪ್ರಸ್ತಾಪಿಸಿದ ವಿಷಯಗಳನ್ನು ಕೇಳುವವರೂ ಯಾರೂ ಇಲ್ಲ, ಅದಕ್ಕೆ ಉತ್ತರವೂ ಬರುವುದಿಲ್ಲ. ನಾವು ಮಾತನಾಡಿದ್ದಕ್ಕೆ ಉತ್ತರವೇನಾದರೂ ಬರುವುದಿದ್ದರೆ ಸರಿ ಹೋಗುತ್ತದೆ. ತಾವುಗಳು ನಮಗೆ ಅವಕಾಶವನ್ನು ಕೊಟ್ಟಿದ್ದೀರೆಂದು ಮಾತನಾಡುವುದನ್ನು ಬಿಟ್ಟರೆ ಬೇರೇನೂ ಇಲ್ಲಿ ನಡೆಯುವುದಿಲ್ಲ. ಸಮಯ ಕಳೆಯಲು ಚರ್ಚೆಗೆ ಐದೈದು ನಿಮಿಷ ಅವಕಾಶ ಕೊಟ್ಟರೆ ಅದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಛೇರ್ಮನ್ : ಹಿರಿಯ ಮಾನ್ಯ ಸಚಿವರುಗಳವರೆಲ್ಲರೂ ಸದನದಲ್ಲಿ ಉಪಸ್ಥಿತರಿದ್ದಾರೆ. ಅವರುಗಳು ತಮ್ಮೆಲ್ಲರ ಪ್ರಸ್ತಾವನೆಯನ್ನು ನೋಟ್ ಮಾಡಿಕೊಳ್ಳುತ್ತಿದ್ದಾರೆ. ಉತ್ತರ ಕೊಡಲು ಮಾನ್ಯ ಮುಖ್ಯಮಂತ್ರಿಯವರು ತಯಾರಾಗಿದ್ದಾರೆ. ಕಾರ್ಯಕಲಾಪಗಳನ್ನು ಅವರು ಎಲ್ಲಿದ್ದರೂ ಅಬ್‌ಸರ್ವ್ ಮಾಡುತ್ತಾ ಇದ್ದಾರೆ. ನಿಮಗೆ ರಿಪ್ಲೈ ಮೂಲಕ ಸಮಾಧಾನವಾಗದಿದ್ದಲ್ಲಿ ಕ್ಲಾರಿಫಿಕೇಷನ್ ಮೂಲಕ ಹೆಚ್ಚು ವಿವರಗಳನ್ನು ಪಡೆದುಕೊಳ್ಳಬಹುದು. ಆದ್ದರಿಂದ ಚರ್ಚೆ ಮುಂದುವರಿಸಲು ದಯಮಾಡಿ ಸಹಕಾರ ನೀಡಿ. ನಾನು ಬಿಎಸಿ ಯವರ ನಿರ್ಣಯವನು ಗೌರವಿಸುತ್ತೇನೆ. ಬಹುಶಃ ತಾವೆಲ್ಲರೂ ಸ್ವಲ್ಪ ಸಮಯ ಅಡ್‌ಜರ್ನ್ ಮಾಡಿ ಅಂದರೆ ನನ್ನ ಅಭ್ಯಂತರವಿಲ್ಲ. ಬಿಎಸಿ ತೀರ್ಮಾನ ಹಾಗೆ ಇರುವುದರಿಂದ ಸಮಸ್ಯೆಯಾಗುತ್ತದೆ. ಕಲಾಪಗಳನ್ನು ಮುಂದುವರಿಸೋಣ...

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೇ, ಈಗ ಅವಕಾಶವು ನಮ್ಮ ಪಾರ್ಟಿಗೆ ಕೊಡಬೇಕು. ಅವರು ಐದು ಜನರು ಮಾತನಾಡಿದ್ದರಿಂದ ನಮ್ಮ ಪಕ್ಷಕ್ಕೆ ಅವಕಾಶ ಮಾಡಿಕೊಡಬೇಕು. ಅವರು ಆ ಮೇಲೆ ಮಾತನಾಡಲಿ.

ಛೇರ್ಮನ್ : ತಮಗೂ ಅವಕಾಶ ಮಾಡಿಕೊಡುತ್ತೇನೆ.

† ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಅಧ್ಯಕ್ಷರೇ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳನ್ನು ಅರ್ಪಿಸುತ್ತಾ ಅರಣ್ಯ ಇಲಾಖೆಯ ಮೇಲೆ ಮಾತನಾಡಲು ಬಯಸುತ್ತೇನೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಸುಮಾರು ಒಂದು ಕೋಟಿ, ತೊಂಭತ್ತೊಂದು ಲಕ್ಷದ, ಎಪ್ಪತ್ತೊಂಬತ್ತು ಸಾವಿರದ ನೂರು ಎಕರೆ ಪ್ರದೇಶದ ಭೂಮಿ ಪ್ರದೇಶದಲ್ಲಿ ಅರಣ್ಯಗಳು ಇವೆ. ಅದರಲ್ಲಿ ಸುಮಾರು ಮೂವತ್ತೆಂಟು ಲಕ್ಷ ಇಪ್ಪತ್ತೆಂಟು ಸಾವಿರದ ನಾನ್ನೂರ ಮೂವತ್ತು ಹೆಕ್ಟೇರ್ ಅರಣ್ಯಭೂಮಿ ಪ್ರದೇಶವಿದೆ. ಈ ಅರಣ್ಯಭೂಮಿ ಪ್ರದೇಶದಲ್ಲಿ ಕಳೆದ ಹಲವಾರು ವರ್ಷಗಳಿಂದ ಹಲವು ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡು ಬಂದಿದ್ದಾರೆ.

(ಶ್ರೀ ಚಂದ್ರಕಾಂತ ಬೆಲ್ಲದ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅದರಲ್ಲಿ ಸಾಮಾಜಿಕ ಅರಣ್ಯ ವಿಭಾಗದಲ್ಲಿ ಅಧಿಕಾರಿಗಳಿಗೆ ಹೆಚ್ಚು ಸಂಬಳವನ್ನು ಕೊಡುತ್ತಾರೆಯೇ ಹೊರತು ಸಾಮಾಜಿಕ ಅರಣ್ಯ ಬೆಳೆಸಲು ಹೆಚ್ಚು ಹಣಕಾಸಿನ ವ್ಯವಸ್ಥೆ ಇಲ್ಲ. ಆದರ ಜೊತೆಗೆ ಇಲಾಖೆಗಳು ಆಡಳಿತವನ್ನು ನಡೆಸುವುದಕ್ಕೋಸ್ಕರವಾಗಿ

2.10 ಪಿಎಂ

ಸುಮಾರು 8 ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿಗಳನ್ನು ಇಟ್ಟುಕೊಂಡಿದ್ದಾರೆ. ಸಿಬ್ಬಂದಿ ಪ್ಯಾಟರ್ನ್ ಹೇಳಬೇಕಾದರೆ ಪ್ರಧಾನ ಮುಖ್ಯ ಸಂರಕ್ಷಣಾಧಿಕಾರಿಗಳು 3, ಅಪರ ಪ್ರಧಾನ ಮುಖ್ಯ

ಸಂರಕ್ಷಣಾಧಿಕಾರಿ 1, ಮುಖ್ಯ ಸಂರಕ್ಷಣಾಧಿಕಾರಿಗಳು 7, ಅರಣ್ಯ ಸಂರಕ್ಷಣಾಧಿಕಾರಿಗಳು 24, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು 104, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ 209 ಹೀಗೆ ಹೆಚ್ಚು ಹುದ್ದೆಗಳನ್ನು ಸೃಷ್ಟಿ ಮಾಡುತ್ತಿದ್ದಾರೆಯೇ ಹೊರತು ಕೆಳಹಂತದಲ್ಲಿ ಫಾರೆಸ್ಟರ್, ಗಾರ್ಡ್ಸ್‌ಗಳನ್ನು ನೇಮಿಸುವ ಕೆಲಸ ಸರ್ಕಾರ ಮಾಡಲಿಲ್ಲ. ಒಬ್ಬ ಮುಖ್ಯ ಸಂರಕ್ಷಣಾಧಿಕಾರಿಯನ್ನು ಮೇಂಟೆನ್ ಮಾಡುವಾಗ ಅವರ ಸಂಬಳ, ಸಾರಿಗೆ, ಅವರಿಗೆ ಪಿಎ, ಕಾರು, ಡ್ರೈವರ್ - ಇವುಗಳಿಂದ ಒಂದು ತಿಂಗಳಿಗೆ ಸುಮಾರು ಒಂದೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ. ಈ ಒಬ್ಬರ ಬದಲು ಸುಮಾರು ವಾಚರ್‌ಗಳನ್ನು ಗಾರ್ಡ್‌ಗಳನ್ನು ನೇಮಕ ಮಾಡಿದರೆ ಅರಣ್ಯ ಉಳಿದುಕೊಳ್ಳುವ ಕೆಲಸ ಕೂಡ ಆಗುತ್ತದೆ. ಆ ನಿಟ್ಟಿನಲ್ಲಿ ತಾವು ಯಾರು ಡಿಎಫ್‌ಓಗಳಿರಬಹುದು, ಕನ್‌ಸರ್ವೇಟರ್‌ಗಳಿರಬಹುದು, ಪ್ರಧಾನ ಕನ್‌ಸರ್ವೇಟರ್‌ಗಳಿರಬಹುದು ಇವರ ಹುದ್ದೆ ಕಡಿಮೆ ಮಾಡುವ ಬಗ್ಗೆ ಚಿಂತನೆ ಮಾಡಬೇಕೆಂದು ಹೇಳುತ್ತಾ ನಮ್ಮ ವಿಷಯ ಸಮಿತಿ ಹಲವಾರು ವರ್ಷಗಳಿಂದ ವರದಿ ಕೊಡುತ್ತಾ ಬಂದಿದ್ದಾರೆ. ಆ ವರದಿ ಪ್ರಕಾರ ಯಾವ್ಯಾವ ಜಿಲ್ಲೆಯಲ್ಲಿ ಎಷ್ಟು ಅರಣ್ಯವಿದೆಯೆಂದು ಕೊಡಲಾಗಿದೆ. ಬೆಂಗಳೂರು ನಗರ 7,364 ಹೆಕ್ಟೇರ್, ಬೆಂಗಳೂರು ಗ್ರಾಮಾಂತರ 1,09,838 ಹೆಕ್ಟೇರ್, ಬೆಳಗಾವಿ 24,557 ಹೆಕ್ಟೇರ್, ಬಳ್ಳಾರಿ 1,74,353 ಹೆಕ್ಟೇರ್ ಬಿದರ್ 48,231 ಹೆಕ್ಟೇರ್, ಬಿಜಾಪುರ 82,758 ಹೆಕ್ಟೇರಿದೆ. ಅದೇ ರೀತಿ ಚಿಕ್ಕಮಗಳೂರಿನಲ್ಲಿ 2,17,908 ಹೆಕ್ಟೇರಿದೆ.

ಶ್ರೀ ಕೆ.ಹೆಚ್. ರಂಗನಾಥ್ : ಮಾನ್ಯ ಅಧ್ಯಕ್ಷರೇ, ಸದಸ್ಯರ ಸಂಖ್ಯೆ ಕಡಿಮೆಯಾಗುತ್ತಾ ಆಗುತ್ತಾ ಕೋರಂಗೂ ತೊಂದರೆಯಾಗಬಹುದೇನೋ. ಸದನವನ್ನು ಒಂದು ಗಂಟೆ ಮುಂದೂಡಿ ಊಟಮಾಡಿ ಬಂದರೆ ಆ ತೊಂದರೆಯನ್ನೂ ನಿವಾರಿಸಿದಂತಾಗುತ್ತದೆ. ಸದನದ ಅಪೇಕ್ಷೆ ಪ್ರಕಾರ ಬೇಕಾದರೆ ಒಂದು ಗಂಟೆ ನಾವು ಜಾಸ್ತಿ ಕೂರಬಹುದು. ನಿನ್ನೆಯ ದಿವಸ ಬಿಎಸಿಯಲ್ಲಿ ತೀರ್ಮಾನ ತೆಗೆದುಕೊಂಡಿದ್ದೀವಿ. ಆದರೂ ಕೂಡ ಬಿಎಸಿ ತೀರ್ಮಾನವನ್ನು ಬದಲಾಯಿಸಲು ಸದನಕ್ಕೆ ಹಕ್ಕಿದೆ.

ಚೇರ್ಮನ್ : ತಮ್ಮ ಅಭಿಪ್ರಾಯವನ್ನು ಸದನ ಒಪ್ಪಿದೆ. ಈಗ ಮಾನ್ಯ ಸದಸ್ಯರು ಸ್ವಲ್ಪ ಸಮಯ ಮಾತನಾಡಲಿ.

ಶ್ರೀ ಕೆ.ಹೆಚ್. ರಂಗನಾಥ್ : ಸದಸ್ಯರು ಮಾತನಾಡಲಿ, ಆದರೆ ಕೋರಂ ಕಡಿಮೆಯಾದರೆ ಒಳ್ಳೆಯದಲ್ಲ ಎಂದು ಅನ್ನಿಸುತ್ತದೆ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಮಾನ್ಯ ಅಧ್ಯಕ್ಷರೇ ಊಟದ ಸಮಯದ ನಂತರ ನನ್ನ ಭಾಷಣವನ್ನು ಮುಂದುವರಿಸುತ್ತೇನೆ.

ಚೇರ್ಮನ್ : ಎಲ್ಲಾ ಮಾನ್ಯ ಸದಸ್ಯರ ಅಭಿಪ್ರಾಯದ ಪ್ರಕಾರ ಈಗ ಸದನವನ್ನು ಒಂದು ಗಂಟೆ ಮುಂದೂಡುತ್ತಿದ್ದೇವೆ ಮತ್ತೆ ಮೂರು ಗಂಟೆ ಹದಿನೈದು ನಿಮಿಷಗಳಿಗೆ ಸದನ ಪ್ರಾರಂಭವಾಗುವುದು.

(ಸದನವು ಎರಡು ಗಂಟೆ ಹದಿನೈದು ನಿಮಿಷಕ್ಕೆ ಮುಂದೂಡಲ್ಪಟ್ಟಿತು)

(ಸಭೆಯು 3-2 ಗಂಟೆಗೆ ಪ್ರಾರಂಭಗೊಂಡಿತು) (ಉಪಾಧ್ಯಕ್ಷರು ಶ್ರೀ ಮನೋಹರ ಹೆಚ್. ತಹಸೀಲ್ದಾರ್‌ರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ವಿತ್ತೀಯ ಕಾರ್ಯಕಲಾಪಗಳು

2002-03ನೇ ಸಾಲಿನ ಆಯವ್ಯಯ ಬೇಡಿಕೆಗಳ ಮೇಲೆ ಚರ್ಚೆ

†ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಉಪಾಧ್ಯಕ್ಷರೇ, ನಮ್ಮ ಅರಣ್ಯ ಮಂತ್ರಿಗಳು ಯಾರೂ ಕಾಣುತ್ತಿಲ್ಲ. ನಾನು ಏನಾದರೂ ಮಾತನಾಡಿದರೆ ಅದಕ್ಕೆ ಸರಿಯಾದ ರಿಪ್ಲೈ ಬರುತ್ತದೋ ಇಲ್ಲವೋ ನನ್ನ ಮಾತಿನ ಚಲಪವನ್ನು ಮುಗಿಸಿಕೊಳ್ಳಬೇಕೋ ಎನ್ನತಕ್ಕ ಚಿಂತನೆ. ನಾನು ಅರಣ್ಯ ವಿಚಾರವಾಗಿ ಹೇಳುವುದಾದರೆ ನಮ್ಮ ರಾಜ್ಯದಲ್ಲಿ 20 ಪರ್‌ಸೆಂಟ್ ಅರಣ್ಯ ಭೂಪ್ರದೇಶದಲ್ಲಿ ಇದೆ. ಇದರ ಜೊತೆಗೆ ಜಿಲ್ಲಾವಾರು ಅರಣ್ಯಗಳು ಎಷ್ಟು ಪರ್‌ಸೆಂಟೇಜ್ ಇದೆ, ಎಷ್ಟು ಹೆಕ್ಟೇರ್ ಇದೆ ಎಂದು ನಾನು ಹೇಳುತ್ತಿದ್ದೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಸುಮಾರು 2,17,908 ಹೆಕ್ಟೇರ್ ಅರಣ್ಯ ಇದೆ. ಸುಮಾರು ಆ ಜಿಲ್ಲೆಯ ಭೂಪ್ರದೇಶ 30.26 ಪರ್‌ಸೆಂಟ್ ಇದ್ದರೆ ಅದೇ ರೀತಿ ಚಿತ್ರದುರ್ಗ ಮತ್ತು ದಾವಣಗೆರೆಯಲ್ಲಿ ಎರಡೂ ಸೇರಿ 1,56,229 ಹೆಕ್ಟೇರ್ ಫಾರೆಸ್ಟ್ ಇದೆ. ಸುಮಾರು 61.39 ಪರ್‌ಸೆಂಟ್. ಅದೇ ರೀತಿ ಧಾರವಾಡ, ಗದಗ್, ಹಾವೇರಿ ಮೂರು ಜಿಲ್ಲೆಗಳೂ ಸೇರಿ ಸುಮಾರು 1,43,673 ಹೆಕ್ಟೇರ್ ಫಾರೆಸ್ಟ್ ಇದೆ. ಸುಮಾರು 10.46 ಪರ್‌ಸೆಂಟ್, ಅದೇ ರೀತಿ ಗುಲ್ಬರ್ಗ ಸುಮಾರು 16,22,400 ಹೆಕ್ಟೇರ್ ಭೂಪ್ರದೇಶದಲ್ಲಿ ಸುಮಾರು 1,13,785 ಹೆಕ್ಟೇರ್ ಫಾರೆಸ್ಟ್ ಇದೆ. ಸುಮಾರು 7.01 ಪರ್‌ಸೆಂಟ್. ಅದೇ ರೀತಿ ಹಾಸನದಲ್ಲಿ ಸುಮಾರು 54,107 ಹೆಕ್ಟೇರ್ ಇದೆ. ಸರಾಸರಿ ಪರ್‌ಸೆಂಟೇಜ್ ತೆಗೆದುಕೊಂಡಾಗ 7.49 ಪರ್‌ಸೆಂಟ್. ಅದೇ ರೀತಿ ಕೊಡಗು ಜಿಲ್ಲೆ 1,25,952 ಹೆಕ್ಟೇರ್ ಇದೆ. ಸುಮಾರು 1,03,941 ಹೆಕ್ಟೇರ್ ಫಾರೆಸ್ಟ್ ಇದೆ. ಇಲ್ಲಿ 12.64 ಪರ್‌ಸೆಂಟ್ ಇದೆ. ಅದೇ ರೀತಿ ಮಂಡ್ಯದಲ್ಲೂ ಸುಮಾರು 27,181 ಹೆಕ್ಟೇರ್ ಇದೆ. ಪರ್‌ಸೆಂಟೇಜ್ ತೆಗೆದುಕೊಂಡಾಗ 5.48 ಪರ್‌ಸೆಂಟ್ ಆಗುತ್ತದೆ. ಅದೇ ರೀತಿ ಮೈಸೂರು, ಚಾಮರಾಜನಗರ ಜಿಲ್ಲೆಗಳೆರಡನ್ನೂ ಸೇರಿಸಿದರೆ ಸುಮಾರು 4 ಲಕ್ಷ 12 ಸಾವಿರ 962 ಹೆಕ್ಟೇರ್ಸ್ ಇದೆ, ಪರ್ಸಂಟೇಜ್ 34.55, ರಾಯಚೂರಿನಲ್ಲಿ ಸುಮಾರು 65,077 ಹೆಕ್ಟೇರ್ಸ್, ಪರ್ಸಂಟೇಜ್ 11.71 ಅದೇ ರೀತಿ ಕೊಪ್ಪಳ ಹಾಗೂ ಶಿವಮೊಗ್ಗದಲ್ಲೂ ಇದೆ. ನಮ್ಮ ರಾಜ್ಯದಲ್ಲಿ ಶೇಕಡ 20ರಷ್ಟು ಮಾತ್ರ ಕಾಡು ಇದೆ. 1975-76ರಿಂದ ಕಾಡಿನಿಂದ ಎಷ್ಟು ಆದಾಯ ಬರುತ್ತಿದೆ ಹಾಗೂ ಎಷ್ಟು ವೆಚ್ಚವಾಗುತ್ತಿದೆಯೆಂಬ ಮಾಹಿತಿಯನ್ನು ತೋರಿಸಿದ್ದಾರೆ. 1983-84ರಲ್ಲಿ ಆದಾಯ 53.39 ಕೋಟಿ ರೂಪಾಯಿಗಳಿಷ್ಟಿದ್ದರೆ ವೆಚ್ಚ ಕೇವಲ 34.36 ಕೋಟಿ 1984-85 ರಲ್ಲಿ ಆದಾಯ 55.74 ಕೋಟಿ, ಖರ್ಚು 43.22 ಕೋಟಿ. ಇನ್ನು 1991-92ನೇ ಸಾಲಿಗೆ ಬಂದರೆ ಆದಾಯ 61.50 ಕೋಟಿ ಇದ್ದರೆ ಖರ್ಚು 94,82 ಕೋಟಿ 92-93ರಲ್ಲಿ ಆದಾಯ 68.35 ಕೋಟಿ ಖರ್ಚು 111.90 ಕೋಟಿ ಇದೆ. ಈ ರೀತಿ ಆದಾಯಕ್ಕಿಂತಲೂ ಖರ್ಚು ಹೆಚ್ಚಾಗುತ್ತಾ ಬಂದಿದೆ. ಆದರೆ, ಕಾಡಿನ ಪ್ರದೇಶ ಮಾತ್ರ ಹೆಚ್ಚಾಗಲಿಲ್ಲ. ಫಾರೆಸ್ಟ್‌ನಲ್ಲಿರುವ ಅಧಿಕಾರಿಗಳ ಸಂಖ್ಯೆ ಹೆಚ್ಚಾಯಿತು. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಅಲ್ಲಿ ನಮಗೆ ಬೇಕಾಗಿರುವುದು ಹೆಚ್ಚಿನ ಸಂಖ್ಯೆಯಲ್ಲಿ ಫಾರೆಸ್ಟ್ ಗಾರ್ಡ್ಸ್, ಇದರ ಜೊತೆಗೆ ಫಾರೆಸ್ಟ್ ವಾಚರ್ಸ್. ಇವರನ್ನು ನೇಮಿಸಿದಾಗ ಮಾತ್ರ ನಮ್ಮ ಕಾಡು ಉಳಿದುಕೊಳ್ಳುತ್ತದೆ. ಇನ್ನು ಕಾಡಾನೆ ಹಾಗೂ ಸಾಕಿರುವ ಊರಿನ ಆನೆಗಳ ಹಾವಳಿಯಿಂದಾಗಿರುವ ನಷ್ಟ ಹಾಗೂ ಜನರ ಹತ್ಯೆ ಕುರಿತು ತಮ್ಮ ಗಮನಕ್ಕೆ ತರುವುದಾದರೆ 2001-02ರಲ್ಲಿ ಬೆಳೆ ನಷ್ಟ ಪ್ರಕರಣಗಳು 1971 ಆಗಿದ್ದು, ಇದರ ಮೊತ್ತ 22 ಲಕ್ಷ 61 ಸಾವಿರ 205 ಆಗಿದೆ. ಕಾಡಾನೆ ಹಾಗೂ ಊರಾನೆ ಹಾವಳಿ

ಹೊರತು ಪಡಿಸಿ ಇತರ ಪ್ರಾಣಿಗಳಿಂದ ಆಗಿರುವ ನಷ್ಟದ ಪ್ರಕರಣಗಳು 200. ಇದಕ್ಕಾಗಿ 1 ಲಕ್ಷ 94 ಸಾವಿರ 325 ರೂಪಾಯಿಗಳಷ್ಟು ನಷ್ಟವಾಗಿದೆ, ಸುಮಾರು 13 ಜನರು ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಇದಕ್ಕಾಗಿ 11 ಲಕ್ಷ 28 ಸಾವಿರ 900 ರೂಪಾಯಿಗಳು ಖರ್ಚಾಗಿದೆ. ಶಾಶ್ವತ ಅಂಗವಿಕಲರು 69 ಜನ, ಖರ್ಚು 3 ಲಕ್ಷ 34 ಸಾವಿರ 999 ರೂಪಾಯಿ. ಇಷ್ಟೊಂದು ಹಣವನ್ನು ಖರ್ಚು ಮಾಡುವುದಕ್ಕಿಂತ ಮೊದಲೇ ಕಾಡಾನೆಗಳ ಹಾವಳಿ ತಡೆಗಟ್ಟಿದ್ದರೆ ಇಷ್ಟೊಂದು ಖರ್ಚು ಬರುತ್ತಿತ್ತೇ? ಈ ಕುರಿತು ಸಮಗ್ರವಾಗಿ ಚಿಂತಿಸಬೇಕಾಗಿದೆ. ಕಾಡಾನೆ ಹಾವಳಿ ತಡೆಗಟ್ಟುವ ಸಲುವಾಗಿ ವಿದ್ಯುತ್ ತಂತಿಯನ್ನು ಅಳವಡಿಸಲಾಗುವುದು, "ಇದಕ್ಕಾಗಿ ಸುಮಾರು ಇಪ್ಪತ್ತು ಕೋಟಿ ರೂಪಾಯಿಗಳಷ್ಟು ಹಣ ವೆಚ್ಚವಾಗುತ್ತದೆ" ಎನ್ನುವ ಮಾತನ್ನು ವಿಧಾನಸಭೆಯಲ್ಲಿ ಸನ್ಮಾನ್ಯ ಅರಣ್ಯ ಮಂತ್ರಿಗಳು ಹೇಳಿದ್ದರು. ಆದರೆ, ಈಗ ನಮ್ಮ ಕೊಡಗಿನಲ್ಲಿ ಒಂದು ಕೋಟಿ ರೂಪಾಯಿಗಿಂತಲೂ ಹೆಚ್ಚು ಕೆಲಸ ಮಾಡಿದ್ದು, ಇದೂ ಕೂಡ ಪೂರ್ತಿ ಕಳಪೆ ಕೆಲಸವಾಗಿದೆ. ಸೌರಶಕ್ತಿ ಬೇಲಿಯನ್ನು ಅಳವಡಿಸುವ ಕಾರ್ಯವನ್ನು ಖಾಸಗಿ ಕಂಪನಿಯವರಿಗೆ ವಹಿಸಿಕೊಟ್ಟು ಅದರ ನಿರ್ವಹಣೆಯನ್ನು ಇಂತಿಷ್ಟು ಅವಧಿಗಳವರೆಗೆ ತಾವೇ ಮಾಡಬೇಕು, ಮತ್ತು ಆ ಮೂಲಕ ಕಾಡಾನೆ ಹಾವಳಿಯನ್ನು ತಡೆಗಟ್ಟಬೇಕು, ಆನೆ ಹಾವಳಿಯಿಂದ ನಷ್ಟವಾದರೆ ಅದನ್ನು ಕಂಪನಿಯವರೇ ಭರಿಸಿಕೊಡಬೇಕೆಂಬ ಸ್ಕೀಮನ್ನು ತಂದರೆ ಬಹಳ ಅತ್ಯುತ್ತಮವಾಗಿ ನಡೆಯಬಹುದು. ಇದರ ಬಗ್ಗೆ ತಾವು ಕ್ರಮ ಕೈಗೊಳ್ಳಬೇಕಾಗುತ್ತದೆ. ಇದರ ಜೊತೆಗೆ ನಮ್ಮ ಕೊಡಗು ಜಿಲ್ಲೆಯಲ್ಲಿ ಕಾಡಾನೆ ಹಾವಳಿ ಎಂದರೆ ನಾವು ನಿದ್ರೆ ಮಾಡುವಂಥ ಪರಿಸ್ಥಿತಿಯಲ್ಲಿಲ್ಲ. ಏತಕ್ಕೆಂದರೆ ಬೆಳಿಗ್ಗೆ ಎದ್ದ ತಕ್ಷಣ ಫೋನ್ ಕಾಡಾನೆ ಹಾವಳಿಯಿಂದ ಜನರು ಸತ್ತಿದ್ದಾರೆ, ಆಸ್ತಿ ನಷ್ಟವಾಗಿದೆ ಎಂದು ನಮ್ಮ ಕೊಡಗಿನ ಕಾಡಾನೆ ಹಾವಳಿ ತಡೆಗಟ್ಟುವ ಯಾವುದೇ ಕ್ರಮದಲ್ಲೂ ಸಫಲವಾಗಿಲ್ಲವೆಂದರೆ ತಪ್ಪಾಗಲಾರದು. ನಿಮಗೆ ಕೆಲವೊಂದು ಮಾಹಿತಿ ಹೇಳಲಿಚ್ಛಿಸುತ್ತೇನೆ. 'ಕಾಡಾನೆ ಹಾವಳಿ ತಡೆಗಟ್ಟಲು ಆಗ್ರಹ' ಹಿಡಕಲ್ ಗ್ರಾಮ ಪಂಚಾಯಿತಿ ಸುತ್ತಮುತ್ತ ಗ್ರಾಮಗಳಲ್ಲಿ ಕಾಡಾನೆಗಳ ಹಿಂಡು ಬಂದು ಸುಮಾರು ಇನ್ನೂರಕ್ಕೂ ಹೆಚ್ಚು ತೆಂಗಿನ ಮರವನ್ನು ನಾಶ ಮಾಡಿದೆ. ಕೇವಲ ಒಂದು ತಿಂಗಳಿನಲ್ಲಿ ನಡೆದಿರುವ ಕಾಡಾನೆ ಹಾವಳಿ ಪ್ರಕರಣಗಳನ್ನು ಹೇಳುವುದಾದರೆ, ದಿನಾಂಕ 2.6.2000ರಂದು ಕಾಡಾನೆ ಹಾವಳಿಗೆ ಸಿಲುಕಿ ಜೀಪಿನ ಚಾಲಕ ಸಾವು. ಗೋಣಿಕೊಪ್ಪ ಸಮೀಪ ದೇವರಪುರ ತೋಟದಲ್ಲಿ ಜೀಪಿನ ಚಾಲಕನಾಗಿದ್ದ ವ್ಯಕ್ತಿ ನಿನ್ನೆ ರಾತ್ರಿ ಕಾಡಾನೆ ಹಠಾತ್ ಧಾಳಿಗೆ ಸಿಲುಕಿ ಗಂಭೀರವಾದ ಸ್ವರೂಪಗಳಿಂದ ಗಾಯಗೊಂಡು ಆಸ್ಪತ್ರೆಗೆ ಸಾಗಿಸುವ ವೇಳೆಯಲ್ಲಿ ದುರ್ಮರಣವನ್ನಪ್ಪಿದ್ದಾನೆ. 3.6.2000ರಂದು ಕಾಡಾನೆ ಹಾವಳಿಗೆ ವಿಪರೀತ ಫಸಲು ನಷ್ಟ. ತೊರೆನೂರು ಗ್ರಾಮ ಪಂಚಾಯಿತಿಯಲ್ಲಿ ಸುಮಾರು 6 ಲಕ್ಷ ರೂಪಾಯಿ ವೆಚ್ಚದಲ್ಲಿ ಸೌರಶಕ್ತಿ ತಂತಿ ಬೇಲಿ ನಿರ್ಮಾಣ ಮಾಡಿದ್ದರೂ ಕಳಪೆ ಕಾಮಗಾರಿಯಾಗಿದೆ. 11.6.2000ರಂದು ಕಾಡಾನೆ ಧಾಳಿಯಿಂದ 36 ಮಂದಿ ಕಳೆದ ವರ್ಷ ಬಲಿಯಾಗಿದ್ದು, ಸುಮಾರು ಒಂದು ಸಾವಿರಕ್ಕೂ ಹೆಚ್ಚು ತೆಂಗಿನ ಮರಗಳು ನಾಶವಾಗಿದೆ. ಅದೇ ರೀತಿ 7ನೇ ಜುಲೈ 2000 ರಂದು ಕಾಡಾನೆ ದಾಳಿಯಿಂದ ನಷ್ಟ ಶ್ರೀಮಂಗಲ ಸಮೀಪ ಕುರ್ಚಿ ಗ್ರಾಮದಲ್ಲಿ ಕಾಡಾನೆ ಹಾವಳಿಯಿಂದ ಕಾಫಿ ಮತ್ತು ಅಡಿಕೆ ತೋಟ ಒಳಗೊಂಡಂತೆ ರೈತರ ಕೃಷಿ ಫಸಲು ಅಪಾರವಾಗಿ ನಷ್ಟವಾಗಿದೆ. 8.6.2000ರಂದು ಕಾಡಾನೆ ತುಳಿತಕ್ಕೆ ಸಿಲುಕಿ ಅರಣ್ಯ ವೀಕ್ಷಕನೊಬ್ಬನ ದುರ್ಮರಣ. ಜುಲೈ 15 2000ರಂದು ಕಾಡಾನೆ ಮನೆಯೊಂದರ ಮೇಲೆ ಧಾಳಿ ಮಾಡಿದ ಪರಿಣಾಮ ಮನೆ ಧ್ವಂಸಗೊಂಡು ಮನೆಯೊಳಗಿದ್ದ ಕುಟುಂಬದ ಜನರಿಗೆ

ತೊಂದರೆಯುಂಟಾಗಿದೆ. ತೊರೆನೂರು ಗ್ರಾಮದ ಕಣಿವೆಯಲ್ಲಿ ಕಾಡಾನೆ ಧಾಳಿಯಿಂದ ಮನೆ ಕೂಡ ಕಳೆದುಕೊಂಡಿದ್ದಾರೆ. 18.6.2000ರಂದು ಗಜರಾಜನ ಹಾವಳಿಯಿಂದ ಬೀದಿಪಾಲಾದ ಗಣಪತಿಯ ಕುಟುಂಬ. ಆನೆ ಸುಮಾರು ಮನೆಗಳನ್ನು ನಾಶಗೊಳಿಸಿದೆ. ಅದೇ ರೀತಿ ಜುಲೈ 21ರಲ್ಲಿ ಕಾಡಾನೆ ಹಾವಳಿಯಿಂದ ಪಂಚಾಯ್ತಿ ಅಧ್ಯಕ್ಷ ಪಿ. ರಾಮುರವರ ಮನೆ ಧ್ವಂಸವಾಗಿದೆ. ಅದೇ ರೀತಿ ನಿಸರ್ಗ ಧಾಮದ ಅಭಿವೃದ್ಧಿಗೆ ಒತ್ತುಕೊಟ್ಟಿರುವ ಅರಣ್ಯ ಮುಖ್ಯ ಕಾರ್ಯದರ್ಶಿಯವರಾದ ಶ್ರೀ ಗೋಕುಲರಾಂ ಅವರ ಭರವಸೆಃ ಕಾಡಾನೆ ಹಾವಳಿ ತಡೆಗಟ್ಟಲು ಸಮಗ್ರ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು ಎಂದಿದ್ದಾರೆ. ಅದರ ಜೊತೆಗೆ ಅವೊತ್ತೇ ಅಲ್ಲಿನ ಸ್ಥಳೀಯ ಫಾರೆಸ್ಟ್ ಡಿಪಾರ್ಟ್‌ಮೆಂಟಿಗೆ ಸಂಬಂಧಪಟ್ಟಂಥ ಆನೆಯನ್ನು ಸರಿಯಾಗಿ ಕಟ್ಟಿಹಾಕದೇ ಇದ್ದುದ್ದರಿಂದ ಅವು ಊರಿಗೆ ಬಂದು 100ಕ್ಕೂ ಹೆಚ್ಚು ಅಡಿಕೆ ಮರಗಳನ್ನು ನಾಶ ಮಾಡಿವೆ. ಈ ರೀತಿ ಹಲವಾರು ಪ್ರಕರಣಗಳು ನಮ್ಮ ಜಿಲ್ಲೆಯಲ್ಲಿ ನಡೆದಿದೆ. ಇನ್ನು ಕಾಡು ಬಿಟ್ಟು ನಾಡಿಗೆ ನುಗ್ಗಿದ ಆನೆಗಳ ಕುರಿತು ತಮ್ಮ ಗಮನಕ್ಕೆ ತರುವುದಾದರೆ, 'ಬೆಂಗಳೂರಿಗೆ ಬಂದ ಕಾಡಾನೆ ದಂಡು' ಬನ್ನೇರುಘಟ್ಟ ಆನೆಯ ರಂಪ, ರೈತರ ಕಂಗಾಲು, ಅಪಾರ ನಷ್ಟ, ಈ ರೀತಿ ಹಲವಾರು ಪ್ರಕರಣಗಳು ನಮ್ಮ ಕೊಡಗು ಜಿಲ್ಲೆಯಲ್ಲಿ ಕಾಣುತ್ತಿದ್ದೇವೆ. ಇದರಿಂದ ಏನಾಗಿದೆಯೆಂದರೆ, ನಮ್ಮ ಕೊಡಗಿನ ಜನತೆಗೆ ರಾತ್ರಿ ವೇಳೆಯಲ್ಲಿ ಎಲ್ಲಿಗಾದರೂ ಹೋಗಬೇಕೆಂದರೆ ಸಾಧ್ಯವಾಗುವುದಿಲ್ಲ. ಆನೆಯಿಂದ ಭಯಭೀತರಾಗಿದ್ದಾರೆ. ಈ ಕಾಡಾನೆ ಹಾವಳಿಯನ್ನು ತಾವು ಸರ್ಕಾರದ ವತಿಯಿಂದ ತಡೆಗಟ್ಟುವುದಕ್ಕೆ ಸರಿಯಾದ ಕಾರ್ಯಕ್ರಮ ಹಮಿಕೊಳ್ಳದಿದ್ದರೆ ತೊಂದರೆಯಾಗುತ್ತದೆ. ಆ ನಿಟ್ಟಿನಲ್ಲಿ ಮುಂದಿನ ದಿನಗಳಲ್ಲಿ ಸೌರ ಶಕ್ತಿಯ ಬೇಲಿಯನ್ನು ಹಾಕುವಂತಹ ಕೆಲಸವನ್ನು ಅರಣ್ಯ ಇಲಾಖೆಯಿಂದ ಮಾಡದೇ ಸರ್ಕಾರ ಅದನ್ನು ಕಾಂಟ್ರಾಕ್ಟ್ ಆಧಾರದ ಮೇಲೆ ಪ್ರೈವೇಟ್‌ನವರಿಗೆ ಕೊಟ್ಟರೆ ಬಹಳ ಒಳ್ಳೆಯದಾಗುತ್ತದೆ. ಏನಾದರೂ ನಷ್ಟ ಸಂಭವಿಸಿದರೆ, ಆ ಪ್ರೈವೇಟ್‌ನವರೇ ಅದನ್ನು ಭರಿಸುವಂತಹ ಸ್ಥಿತಿಯನ್ನೂ ಕೂಡ ತಾವು ಕ್ರಿಯೇಟ್ ಮಾಡಬೇಕಾಗುತ್ತದೆ. ನಮ್ಮ ಕೊಡಗಿನಲ್ಲಿ ಮರಗಳ ಲೂಟಿಯಾಗಿದೆ. ಸರ್ಕಾರಿ ಲೆಕ್ಕದಲ್ಲಿ ಸುಮಾರು 33 ಲಕ್ಷ ರೂಪಾಯಿಗಳಷ್ಟು ಮೌಲ್ಯದ ಮರಗಳ ಲೂಟಿಯಾಗಿದೆ ಎಂದು ನನಗೆ ರೈಟಿಂಗ್‌ನಲ್ಲಿ ಮಾಹಿತಿ ಬಂದಿದೆ. ಮಡಿಕೇರಿಯ ಕೋಪಟಿ, ಮಣ್ಣಂಗೇರಿ ಮುಂತಾದ ಕಡೆಗಳಲ್ಲಿ ಹಲವಾರು ಮರಗಳನ್ನು ಲೂಟಿ ಮಾಡಿದಂತಹ ಸಂದರ್ಭದಲ್ಲಿ ಸರ್ಕಾರದ ಬೊಕ್ಕಸಕ್ಕೆ ಅಪಾರ ನಷ್ಟವಾಗಿದೆ. ಈ ನಷ್ಟವನ್ನು ಭರಿಸುವಂತಹ ಕೆಲಸ ಮಾಡಲಾಗಿದೆಯೇ? ಸರ್ಕಾರ ಈ ರೀತಿ ಲೂಟಿಯಾಗಲು ಏಕೆ ಬಿಟ್ಟಿದೆ ಎಂಬ ಬಗ್ಗೆ ಕೂಡ ಚಿಂತನೆಯನ್ನು ಮಾಡಬೇಕಾಗುತ್ತದೆ. ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ವರದಿಯಲ್ಲಿ ಯಾವ ರೀತಿಯಾಗಿ ಅರಣ್ಯ ಲೂಟಿಯಾಗಿದೆ? ಆಕ್ಷನ್ ಮಾಡಿದಂತಹ ಮರದ ಹಣವನ್ನು ಯಾವ ರೀತಿಯಾಗಿ ದುರುಪಯೋಗ ಮಾಡಿಕೊಂಡಿದ್ದಾರೆ ಎನ್ನುವ ಬಗ್ಗೆ ಅವರು ಹಲವಾರು ಫೈಂಡಿಂಗ್ಸ್ ಅನ್ನು ಕೊಟ್ಟಿದ್ದಾರೆ. ಇದರ ಬಗೆಗಿನ ವರದಿಯನ್ನು ನಾನು ಹೆಚ್ಚು ಓದಲಿಕ್ಕೆ ಹೋಗದೇ, ಕೆಲವೊಂದು ಅಂಶಗಳನ್ನು ಮಾತ್ರ ಇಲ್ಲಿ ಓದಲಿಕ್ಕೆ ಇಚ್ಛೆ ಪಡುತ್ತೇನೆ.

"ಕೆನರಾ, ಮೈಸೂರು ಮತ್ತು ಕೊಡಗು ವೃತ್ತದಲ್ಲಿ ಐದು ವಿಭಾಗಗಳಲ್ಲಿ ಎಂಟು ಡಿಪೋಗಳು 1997ರ ಏಪ್ರಿಲ್ ಹಾಗೂ 1997ರ ಡಿಸೆಂಬರ್ ತಿಂಗಳ ನಡುವೆ ಹರಾಜಾದ ಮಾರಾಟದ ಬಾಬ್ತಿನಲ್ಲಿ 4: 97ರಿಂದ 12:97 ಮಧ್ಯಂತರದಲ್ಲಿ ಸ್ವೀಕೃತವಾದ ಸುಮಾರು 923.93 ಲಕ್ಷ ರೂಪಾಯಿಗಳು ಸರ್ಕಾರಿ ಖಾತೆಗೆ 5 : 87 ರಿಂದ 1 : 93 ಮಧ್ಯಂತರ ಬೇರೆ ಬೇರೆ

ದಿನಗಳಲ್ಲಿ ಜಮಾ ಮಾಡಲಾಯಿತು. ವಿಳಂಬ ಸುಮಾರು 25 ರಿಂದ 1139 ದಿನಗಳಾಗಿವೆ" ಎಂದು ಆಡಿಟ್ ವರದಿಯಲ್ಲಿ ಉಲ್ಲೇಖ ಮಾಡಿದ್ದಾರೆ. ಅದರಲ್ಲಿ ಕೂಡ ಡಿಪೋದಲ್ಲಿ ಇದ್ದಂತಹ ಬುಕ್ ಏನಿದೆ, ಅದಕ್ಕೂ ಮತ್ತು ಜಮಾ ಮಾಡಿದ ಹಣಕ್ಕೂ ಹೋಲಿಕೆಗಳಿಲ್ಲ. ಸುಮಾರು 54 ಲಕ್ಷದ 65 ಸಾವಿರ ರೂಪಾಯಿಗಳ ಡಿಪೋ ಸಂಬಂಧವಾಗಿ ಸರಿಯಾಗಿ ಹಣವನ್ನು ಪೇಮೆಂಟ್ ಮಾಡಿರುವುದಿಲ್ಲ ಎಂದು ಕೂಡ ಹೇಳಿದ್ದಾರೆ. ಅದರ ಜೊತೆಗೆ ಈ ಫಾರೆಸ್ಟ್‌ಗೆ ಸಂಬಂಧಪಟ್ಟ ಹಾಗೆ, ಅಂತರ್ಜಲ, ಕುಡಿಯುವ ನೀರಿನ ವ್ಯವಸ್ಥೆ, ಮಳೆ ಇದೆಲ್ಲಾ ತೊಂದರೆಯಾಗುವಂತಹ ಸ್ಥಿತಿಯಲ್ಲಿವೆ ಎಂಬುದು ನಮಗೆಲ್ಲರಿಗೂ ಗೊತ್ತಿದೆ. ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಉನ್ನತಾಧಿಕಾರದ ಸಮಿತಿಯ ವರದಿಯಲ್ಲಿ ಕೂಡ ಯಾವ್ಯಾವ ಜಿಲ್ಲೆಗೆ ಯಾವ್ಯಾವ ರೀತಿಯಲ್ಲಿ ಕೆಲಸವನ್ನು ಮಾಡಬೇಕೆಂಬುದರ ಬಗ್ಗೆ ರಿಪೋರ್ಟ್ ಅನ್ನು ಕೊಟ್ಟಿದ್ದಾರೆ. ಇದೇ ರೀತಿಯಾಗಿ ಆಡಳಿತ ಸುಧಾರಣೆ ಬಗ್ಗೆ ಕೂಡ ಮಾನ್ಯ ರಾಮಸ್ವಾಮಿಯವರ ರಿಪೋರ್ಟ್‌ನಲ್ಲಿ ಸಲಹೆಗಳನ್ನು ಕೊಟ್ಟಿದ್ದಾರೆ. ಇದೆಲ್ಲಾ ರಿಪೋರ್ಟುಗಳು, ಇದರ ಜೊತೆಗೆ ವಿಷಯ ಸಮಿತಿಯ ವರದಿಗಳು, ಧೂಳು ಹಿಡಿಯುತ್ತಿವೆಯೋ? ಇದರ ಬಗ್ಗೆ ಚಿಂತನೆಯಾಗಿದೆಯೋ ಎಂಬ ಬಗ್ಗೆ ಯೋಚನೆ ಮಾಡಬೇಕಾಗಿದೆ. ಇದೇ ರೀತಿ ಸಿ.ಎ.ಜಿ. ರಿಪೋರ್ಟ್‌ನಲ್ಲಿ ಕೂಡ ಕಳೆದ ಸಾರಿ ಕೆಲವು ನಿಗಮದ ಅಧ್ಯಕ್ಷರುಗಳು, ಮ್ಯಾನೇಜಿಂಗ್ ಡೈರೆಕ್ಟರ್‌ಗಳು ವಿದೇಶ ಪ್ರವಾಸವನ್ನು ಹೋಗಿರುವ ಬಗ್ಗೆ ಹೇಳಿದ್ದಾರೆ. ಆ ರೀತಿ ವಿದೇಶ ಪ್ರವಾಸಕ್ಕೆ ಹೋದಾಗ ಅವರಿಗೆ ಸಿಗಬೇಕಾದಂತಹ ಹಣಕ್ಕಿಂತ ಹೆಚ್ಚು ಹಣವನ್ನು ಅವರು ಬಳಸಿದ್ದಾರೆ ಎಂದೂ ಕೂಡ ಸಿ.ಎ.ಜಿ. ರಿಪೋರ್ಟ್‌ನಲ್ಲಿ ಕೊಟ್ಟಿದ್ದಾರೆ. ಈ ಹಣವನ್ನು ಅವರಿಂದ ವಸೂಲಾತಿ ಮಾಡಲಿಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ಈ ಸಿ.ಎ.ಜಿ. ರಿಪೋರ್ಟ್ ಅನ್ನು ತಾವು ಓದಿದ್ದೀರಾ? ಇದರ ಬಗ್ಗೆ ಚಿಂತನೆ ಆಗಬೇಕಾಗುತ್ತದೆ. ನಾನು ಅಧಿಕಾರಿಗಳ ಹೆಸರನ್ನು ಹೇಳುವುದಿಲ್ಲ. ಕರ್ನಾಟಕ ರಾಜ್ಯ ಕೃಷಿ ಉನ್ನತ ಸಂರಕ್ಷಣಾ ಮತ್ತು ರಫ್ತು ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ವಿದೇಶ ಪ್ರವಾಸ ಹೋಗಿದ್ದರು. ಅವರಿಗೆ ನಮ್ಮ ಸರ್ಕಾರದ ವತಿಯಿಂದ ದಿನನಿತ್ಯದ ಭತ್ಯೆ ಸುಮಾರು 1300 ಯು.ಎಸ್. ಡಾಲರ್‌ಗಳು ಎಂದು ಇತ್ತು. ಆದರೆ ಅವರು 7000 ಡಾಲರ್‌ಗಳನ್ನು ತೆಗೆದುಕೊಂಡರು. 5,700 ಡಾಲರ್‌ಗಳನ್ನು ಅವರು ಹೆಚ್ಚಿಗೆ ಪಡೆದುಕೊಂಡಿದ್ದಾರೆ. ನಮ್ಮ ಇಂಡಿಯನ್ ಕರೆನ್ಸಿ ಪ್ರಕಾರ ಅವರು ಸುಮಾರು 2 ಲಕ್ಷ 46 ಸಾವಿರದ 525 ರೂಪಾಯಿಗಳನ್ನು ಹೆಚ್ಚಿಗೆ ಪಡೆದುಕೊಂಡಿದ್ದಾರೆ. ಅದೇ ರೀತಿಯಾಗಿ ಮೈಸೂರು ಪೇಪರ್ ಮಿಲ್ಸ್‌ನ ವ್ಯವಸ್ಥಾಪಕ ನಿರ್ದೇಶಕರು ದಿನಾಂಕ 23.11.97ರಲ್ಲಿ ಫಾರಿನ್ ಟೂರ್‌ಗೆ ಹೋದರು. ಈ ವಿದೇಶ ಪ್ರಯಾಣ ನಮಗೆ ನೆಸಸಿಟಿ ಇತ್ತೇ? ಇಟಲಿ, ಕೆನಡಾ, ಬ್ಯಾಂಕಾಕ್, ಜಪಾನ್ ಇವುಗಳಿಗೆಲ್ಲಾ ಅವರು ಹೋಗಿದ್ದಾರೆ. ಅವರೂ ಕೂಡ ಸರ್ಕಾರದ ವತಿಯಿಂದ ಸುಮಾರು 3,750 ಡಾಲರ್‌ಗಳನ್ನು ಅವರು ಪಡೆದುಕೊಳ್ಳಬೇಕಾಗಿತ್ತು. ಆದರೆ ಅವರು ಹೆಚ್ಚಿಗೆಯಾಗಿ ಸುಮಾರು 2,750 ಡಾಲರ್‌ಗಳನ್ನು ಪಡೆದುಕೊಂಡಿದ್ದಾರೆ. ಇದು ಇಂಡಿಯನ್ ಕರೆನ್ಸಿಯಲ್ಲಿ 1 ಲಕ್ಷ 5 ಸಾವಿರದ 77 ರೂಪಾಯಿ 50 ಪೈಸೆಯಾಗುತ್ತದೆ. ಇಷ್ಟು ಹಣವನ್ನು ಅವರು ಹೆಚ್ಚಿಗೆ ಪಡೆದುಕೊಂಡಿದ್ದಾರೆ. ಇದೇ ರೀತಿಯಾಗಿ....

ಉಪಾಧ್ಯಕ್ಷರು : ದಯವಿಟ್ಟು ಬೇಗ ಮುಗಿಸಬೇಕು. ಇವತ್ತು ಮ್ಯಾಕ್ಸಿಮಮ್ 4.30 ಗಂಟೆಗೆ ಉತ್ತರ ಕೊಡಬೇಕಾಗುತ್ತದೆ. ಇನ್ನೂ ಬಹಳ ಜನ ಮಾತನಾಡುವವರು ಇದ್ದಾರೆ, ಆದ್ದರಿಂದ ಬೇಗ ಮುಗಿಸಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಸುಮಾರು 32 ಲಕ್ಷ ರೂಪಾಯಿಗಳಿಗಿಂತ ಹೆಚ್ಚಿಗೆ ಹಣವನ್ನು ಅವರ ಮಿತಿಗಿಂತ ಹೆಚ್ಚಿಗೆ ಪಡೆದುಕೊಂಡಿದ್ದಾರೆ. ಇಲ್ಲಿ ಹಣದ ದುರುಪಯೋಗವಾಗಿದೆ. ಇದನ್ನು ರಿಕವರಿ ಮಾಡುವಂತಹ ಕೆಲಸ ಕೂಡ ಆಗಬೇಕಾಗಿದೆ. ಇದೇ ರೀತಿ ಇನ್ನೂ ಸುಮಾರು ಪ್ರಕರಣಗಳು ಇವೆ. ಇದೇ ರೀತಿ.........

ಉಪಾಧ್ಯಕ್ಷರು : ಬಿ.ಎ.ಸಿ.ನಲ್ಲಿ ನಾವು ತೀರ್ಮಾನ ಮಾಡಿದ ಪ್ರಕಾರ ಇವತ್ತು 4.30 ಗಂಟೆಗೆ ಉತ್ತರ ಕೊಡಲಿಕ್ಕೆ ಪ್ರಾರಂಭವಾಗಬೇಕು. 4 ಗಂಟೆಗೆ ಉತ್ತರ ಕೊಡಬೇಕೆಂದು ನಿಗದಿಯಾಗಿದೆ. ಆದರೂ ಒಂದರ್ಧ ಗಂಟೆ ಬಿಟ್ಟು 4.30 ಗಂಟೆಗಾದರೂ ಉತ್ತರ ಕೊಡುವುದು ಪ್ರಾರಂಭವಾಗಬೇಕು. ತಾವು ಬಹುಶಃ ಡೀಟೈಲ್ಲಾಗಿ ಮಾತನಾಡುತ್ತಾ ಹೋದರೆ ಸಮಯ ಸಾಕಾಗುವುದಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಉಪಾಧ್ಯಕ್ಷರೇ, ಸುಮಾರು ಒಂದೂವರೆ ವರ್ಷದಲ್ಲಿ ಪ್ರಥಮ ಬಾರಿಗೆ ನಾನು ಮಾತನಾಡಲು ನಿಂತಿರುವಾಗ ತಾವು ಈ ರೀತಿ ಹೇಳಿದರೆ ಹೇಗೆ?

ಉಪಾಧ್ಯಕ್ಷರು : ಬಿ.ಎ.ಸಿ ಯಲ್ಲಿ ಆದ ತೀರ್ಮಾನದ ಪ್ರಕಾರ ನಾವು ನಡೆದು ಕೊಳ್ಳಬೇಕಾಗುತ್ತದೆ. ಅದಕ್ಕೋಸ್ಕರ ದಯವಿಟ್ಟು ತಾವು ಈಗ ಬೇಗ ಮುಗಿಸಿಬಿಡಿ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಉಪಾಧ್ಯಕ್ಷರೇ, ಸಾರ್ವಜನಿಕ ಉದ್ಯಮಗಳು ಮುಚ್ಚಲಿಕ್ಕೆ ಕಾರಣವೇನು ಎಂಬುದನ್ನು ಹೇಳುವ ಉದ್ದೇಶದಿಂದ ನಾನು ಈ ವಿಚಾರವನ್ನು ಇಲ್ಲಿ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ. ಕರ್ನಾಟಕ ರಾಜ್ಯ ಕೈಗಾರಿಕಾ ಬಂಡವಾಳ ಅಭಿವೃದ್ಧಿ ನಿಗಮದಿಂದ ಕೂಡ ಸುಮಾರು ಏಳೆಂಟು ಜನ ಪ್ರವಾಸ ಹೋಗಿದ್ದಾರೆ. ಅದರಲ್ಲೂ ಕೂಡ ಸುಮಾರು 4 ಲಕ್ಷದ 37 ಸಾವಿರದ 747 ರೂಪಾಯಿ 50 ಪೈಸೆಯನ್ನು ಹೆಚ್ಚಿಗೆ ಡ್ರಾ ಮಾಡಿದ್ದಾರೆ. ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯಿಂದ ಪ್ರವಾಸ ಹೋದವರೂ ಕೂಡ ಅವರ ಮಿತಿಗಿಂತ ಹೆಚ್ಚಾಗಿ ಸುಮಾರು 42 ಸಾವಿರದ 900 ರೂಪಾಯಿಗಳನ್ನು ಡ್ರಾ ಮಾಡಿದ್ದಾರೆ. ಮೈಸೂರು ಮಿನರಲ್ಸ್ ಲಿಮಿಟೆಡ್, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ, ಕರ್ನಾಟಕ ವಿದ್ಯುತ್ ಅಭಿವೃದ್ಧಿ ನಿಗಮ ನಿಯಮಿತ, ಹೀಗೆ ಹಲವಾರು ನಿಗಮಗಳ ವ್ಯವಸ್ಥಾಪಕರು ಸುಮಾರು 1 ಕೋಟಿ ರೂಪಾಯಿಗಳಿಗಿಂತಲೂ ಅವರ ಮಿತಿಗಿಂತ ಹೆಚ್ಚಿನ ಹಣವನ್ನು ಡ್ರಾ ಮಾಡಿದ್ದಾರೆ. ಈ ಹೆಚ್ಚುವರಿ ಹಣವನ್ನು ಸಂಬಂಧಪಟ್ಟವರಿಂದ ವಸೂಲು ಮಾಡಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ಬಹಳ ಎಫೆಕ್ಟೀವ್ ಆಗಿ ಕೆಲಸ ಮಾಡಬೇಕೆಂಬ ಉದ್ದೇಶದಿಂದ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ, ತೆರಿಗೆ ಸುಧಾರಣಾ ಆಯೋಗ, ಆಡಳಿತ ಸುಧಾರಣೆ ಆಯೋಗ ಮುಂತಾದ ಹಲವಾರು ಆಯೋಗಗಳನ್ನು ನೇಮಕ ಮಾಡಿದ್ದಾರೆ. ಇದಕ್ಕೆ ಸುಮಾರು ಸರ್ಕಾರದ ಹಣ ಕೂಡ ವೆಚ್ಚವಾಗಿದೆ. ಈ ಆಯೋಗಗಳೂ ಕೂಡ ಬಹಳ ಉತ್ತಮವಾದ ವರದಿಗಳನ್ನು ಕೊಟ್ಟಿವೆ. ಈ ರಿಪೋರ್ಟ್‌ಗಳನ್ನು ಅನುಷ್ಠಾನಕ್ಕೆ ತರಲಿಕ್ಕೆ ಸರ್ಕಾರದ ವತಿಯಿಂದ ಏನು ಕ್ರಮಗಳನ್ನು ಕೈಗೊಂಡಿದ್ದೀರಿ? ಆಯೋಗಗಳ ಸಲಹೆಗಳನ್ನು ಜಾರಿಗೆ ತರುತ್ತೀರಾ? ಕೇವಲ ಹಣವನ್ನು ಖರ್ಚು ಮಾಡಿ ರಿಪೋರ್ಟ್‌ಗಳ ಬುಕ್ ಮಾಡಿ, ಧೂಳು ಹಿಡಿಸುವಂತಹ ಕೆಲಸಗಳು ಆಗಬಾರದು. ಈ ಸರ್ಕಾರ ಹೆಚ್ಚು ಎಫೆಕ್ಟೀವ್ ಆಗಿ ಕೆಲಸ ಮಾಡಲಿಕ್ಕೆ ಇದರಿಂದ ಸಾಧ್ಯವಾಗುತ್ತದೆ. ನಮ್ಮ ಕೊಡಗಿನಲ್ಲಿಯ ಕಾಡಾನೆಗಳ ಕಾಟವನ್ನೂ ಸಧ್ಯದಲ್ಲೇ ತಡೆಯುವಂತಹ ಕೆಲಸವನ್ನು ಮಾನ್ಯ ಮಂತ್ರಿಗಳು ಮಾಡಬೇಕು.

ಕೊಡಗಿನಲ್ಲಿರುವ ಮೂವರು ಮಂತ್ರಿಗಳು ಮತ್ತು ಅವರ ಜೊತೆಯಲ್ಲಿ ಅಲ್ಲಿಯ ಎಂ.ಎಲ್.ಎ.ಗಳು ಈಗ ಸರಿಯಾಗಿ ನಿದ್ರೆ ಮಾಡುವಂತಹ ಪರಿಸ್ಥಿತಿಯಲ್ಲಿ ಇಲ್ಲ. ಇದರ ಬಗ್ಗೆ ಆದಷ್ಟು ಬೇಗನೆ ಪ್ರೈಯಾರಿಟಿ ಬೇಸಿಸ್ ಮೇಲೆ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತಾ ನನಗೆ ಮಾತನಾಡಲು ಸಮಯ ಕೊಟ್ಟಿದ್ದಕ್ಕಾಗಿ ತಮ್ಮನ್ನು ವಂದಿಸಿ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

3.50 ಪಿಎಂ

ಶ್ರೀಮತಿ ಮೋಟಮ್ಮ : ಕಾಫಿ ತೋಟದ ಬಗ್ಗೆ ಹೇಳಲಿಲ್ಲ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ನಾನು ಮಾತನಾಡುವ ಸಮಯದಲ್ಲಿ ತಾವು ಇರಲಿಲ್ಲವೆಂದು ಕಾಣುತ್ತದೆ. ಕಳೆದ 1994ರಿಂದ ನಾನು ವಿಧಾನ ಸಭೆಯಲ್ಲಿದ್ದೇನೆ. ಫಾರೆಸ್ಟ್‌ನಲ್ಲಿ ಹೆಚ್ಚುವರಿ ಏನೂ ಮಾಡಿಲ್ಲ. ಕೇವಲ 20 ಪರ್ಸೆಂಟ್ ಮಾತ್ರ ಆಗಿದೆ. ಸ್ಟ್ಯಾಟಿಸ್ಟಿಕ್ಸ್ ಕೂಡ ಕೊಟ್ಟೆ. ತಾವು ಇರಲಿಲ್ಲ.

†ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ) : ಮಾನ್ಯ ಉಪಾಧ್ಯಕ್ಷರೆ, ಆಯವ್ಯಯದ ಬೇಡಿಕೆ ಮೇಲೆ ಚರ್ಚೆಗೆ ಅವಕಾಶ ಕೊಟ್ಟ ತಮಗೆ ವಂದಿಸುತ್ತಾ, ನಾನು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಬಗ್ಗೆ ಕೆಲವು ವಿಷಯಗಳನ್ನು ಸರ್ಕಾರದ ಮುಂದೆ ಇಡುವುದಕ್ಕೆ ಇಚ್ಛೆ ಪಡುತ್ತೇನೆ. ಸನ್ಮಾನ್ಯ ಉಪಾಧ್ಯಕ್ಷರೆ, ಮನುಷ್ಯನಿಗೆ ಜೀವನದಲ್ಲಿ ಯಾವ ರೀತಿ ಇರಬೇಕೆಂದು ಶಿಕ್ಷಣ ಕಲಿಸುತ್ತದೆ ಎಂದು ನಾವೆಲ್ಲರೂ ಕಂಡಿದ್ದೇವೆ. ಆದರೆ ಎಲ್ಲ ಆಧುನಿಕ ಸರ್ಕಾರಗಳು ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟು ಶಿಕ್ಷಣದಿಂದ ಮಾನವನ ಎಲ್ಲಾ ಜೀವನಕ್ಕೆ ರಾಜಕೀಯವಾಗಿ ಆಗಬಹುದು, ಸಾಮಾಜಿಕವಾಗಿ ಆಗಬಹುದು, ಆರ್ಥಿಕವಾಗಿ ಆಗಬಹುದು, ನೈತಿಕವಾಗಿ ಇರಬಹುದು ಮನುಷ್ಯ ಉತ್ತಮ ಜೀವನ ಮಾಡಬೇಕೆಂದರೆ ಶಿಕ್ಷಣ ಮಾರ್ಗದಿಂದ ಪ್ರತಿಯೊಬ್ಬರಿಗೂ ಗೊತ್ತಿರುವ ವಿಚಾರ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮಾನ್ಯ ಮುಖ್ಯ ಮಂತ್ರಿಗಳು ಮೊಟ್ಟ ಮೊದಲ ವರ್ಷದ ಬಜೆಟ್‌ನಲ್ಲಿ ಹೆಚ್ಚಿನ ಹಣವನ್ನು ಈ ಇಲಾಖೆಗೆ ಇಟ್ಟು, ಆಧುನಿಕ ಶಿಕ್ಷಣಕ್ಕೆ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟು ಶಿಕ್ಷಕರಿಗೆ ಅಪಾಯಿಂಟ್‌ಮೆಂಟ್ ಆಗಬಹುದು, ಶಿಕ್ಷಕರಿಗೆ ಟ್ರೈನಿಂಗ್ ಆಗಬಹುದು ಮತ್ತಿತರ ಸೌಲಭ್ಯಗಳು ಅವರಿಗೆ ಕೊಡತಕ್ಕಂಥ ಸಂಬಳ ಆಗಬಹುದು, ಎಲ್ಲವನ್ನೂ ಅತ್ಯುತ್ತಮವಾಗಿ ಸರ್ಕಾರ ಕೊಟ್ಟುಕೊಂಡು ಬಂದಿತ್ತು. ಈ ವರ್ಷದ ಬಜೆಟ್‌ನಲ್ಲಿ ಕಳೆದ ವರ್ಷಕ್ಕಿಂತ 15 ಪರ್ಸೆಂಟ್‌ರಷ್ಟು ಅಮೌಂಟ್ ಕಡಿಮೆ ಮಾಡಲಾಗಿದೆ. ಪ್ರಾಥಮಿಕ ಶಾಲೆಗಳ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಾಗ ನಾವೆಲ್ಲಾ ಹಳ್ಳಿಯಲ್ಲಿ ಕೆಲಸ ಮಾಡಬೇಕಾದರೆ ಗೊತ್ತಾಗುತ್ತದೆ. ಹಳ್ಳಿಯಲ್ಲಿ ಪ್ರತಿಯೊಂದು ಊರಿಗೆ ಒಂದು ಶಾಲೆಬೇಕು. 10 ಮಕ್ಕಳಿದ್ದರೆ ಒಂದು ಶಾಲೆ ಪ್ರಾರಂಭ ಮಾಡಬೇಕೆಂದು ಹೇಳಿ ಸರ್ಕಾರ ಆದೇಶ ಮಾಡಿದೆ. ದುರಾದೃಷ್ಟವಶಾತ್ ಈ ವರ್ಷದಲ್ಲಿ 10 ಜನ 20 ಜನ ಮಕ್ಕಳಿದ್ದರೆ ಅಂಥ ಮಾಧ್ಯಮಿಕ ಶಾಲೆಗಳನ್ನು ಮರ್ಜ್ ಮಾಡಿ ಬೇರೆ ಶಾಲೆಗಳಿಗೆ ಸೇರಿಸಬೇಕೆಂದು ಒಂದು ಮಧ್ಯಂತರ ಆದೇಶ ಹೊರಡಿಸಿದ್ದಾರೆ. ನಾವು ಎಷ್ಟರ ಮಟ್ಟಿಗೆ ಸಾರ್ವಜನಿಕ ಶಿಕ್ಷಣಕ್ಕೆ ಒತ್ತು ಕೊಡುತ್ತೇವೆಂದು ಅರ್ಥ ಮಾಡಿಕೊಂಡಾಗ ಈ ಸರ್ಕಾರ ನಿಜವಾಗಿ ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ಬದಿಗೊತ್ತಿ ಅದನ್ನು ಕೊನೆಯ ಮಟ್ಟಕ್ಕೆ ತರುವ ಮಟ್ಟದಲ್ಲಿ ಸರ್ಕಾರ ಇದೆ. ದಯಮಾಡಿ ನಾನು ಒಂದು ಮಾತು ಹೇಳುತ್ತಿದ್ದೇನೆ ಇವೊತ್ತು ಹಳ್ಳಿಗಾಡಿನಲ್ಲಿ 8 ರಿಂದ 10 ಕಿ.ಮೀ ದೂರದಲ್ಲಿ ಮಿಡ್ಲ್ ಸ್ಕೂಲ್ ಸಿಗುವ ವ್ಯವಸ್ಥೆ ಇದೆ. 10 ರಿಂದ 20 ಜನ ಇದ್ದರೆ ಅಲ್ಲಿ ಮಿಡ್ಲ್ ಸ್ಕೂಲ್ ಅನ್ನು ಅಟ್ಯಾಚ್ ಮಾಡುತ್ತೇವೆಂದು ಹೇಳಿ

ಮೂರು ವರ್ಷಗಳ ಹಿಂದೆ, ಸನ್ಮಾನ್ಯ ಶ್ರೀ ಗೋವಿಂದೇಗೌಡರು ಮಂತ್ರಿಯಾಗಿದ್ದಾಗ ಎಲ್ಲಾ ಕಡೆ ಮಿಡ್ಲ್ ಸ್ಕೂಲ್ ಪ್ರಾರಂಭ ಮಾಡಿದರು. ತದನಂತರ ಎರಡು ವರ್ಷ ಸತತವಾಗಿ ನಡೆದವು. ಈ ವರ್ಷದಲ್ಲಿ ಮಾರ್ಚ್ ಮತ್ತು ಏಪ್ರಿಲ್ ತಿಂಗಳಲ್ಲಿ ಆದೇಶ ಹೊರಡಿಸಿದ್ದಾರೆ ಹಳ್ಳಿಗಾಡಿನ ಜನರು ಶಾಸಕರ ಮನೆಗೆ ಬರುತ್ತಾರೆ. ನಮ್ಮ ಊರಿನ ಶಾಲೆಗೆ 30 ವರ್ಷವಾಗಿದೆ, 40 ವರ್ಷವಾಗಿದೆ ನಮ್ಮ ಮಿಡ್ಲ್ ಸ್ಕೂಲ್ ಛೇಂಜ್ ಮಾಡಿ ಬೇರೆ ಕಡೆ ಹಾಕಬೇಕು ಅಥವಾ ಹಾಕಕೂಡದು ಎಂದು ನಮ್ಮ ಬಳಿ ದೂರು ತೆಗೆದುಕೊಂಡು ಬರುತ್ತಾರೆ. ಮಾನ್ಯ ಶಿಕ್ಷಣ ಸಚಿವರು ಇದರ ಬಗ್ಗೆ ಚಿಂತನೆ ಮಾಡಿದ್ದಾರೋ, ಇಲ್ಲವೋ ನನಗೆ ಗೊತ್ತಿಲ್ಲ. ಈ ಸರ್ಕಾರ ಕೂಡಲೇ ಮುಂದೆ ಬಂದು ಅಂತಹ ಮರ್ಜ್ ಮಾಡುವಂಥ ಮಿಡ್ಲ್ ಸ್ಕೂಲನ್ನು ತತ್‌ಕ್ಷಣ ನಿಲ್ಲಿಸಬೇಕಾಗುತ್ತದೆ. ವಿದ್ಯಾಭ್ಯಾಸಕ್ಕೆ ಒತ್ತು ಕೊಡುವ ಕಾರಣ ಹಳ್ಳಿಗಾಡಿನಲ್ಲಿ ಅನೇಕ ಎಸ್‌ಸಿ-ಎಸ್‌ಟಿ ಜನಾಂಗ ಇರುವ ಕಡೆ ಮಿಡ್ಲ್ ಸ್ಕೂಲ್ ಮಾಡಿದ್ದರು. ಆ ಮಿಡ್ಲ್ ಸ್ಕೂಲ್ ಇವತ್ತು ಬೇರೆ ಕಡೆ ಮರ್ಜ್ ಆಗಿ ಬಡ ಮಕ್ಕಳು ಶಾಲೆಗಳಿಗೆ ಹೋಗುವುದಕ್ಕೆ ಸಾಧ್ಯವಾಗುವುದಿಲ್ಲ. ಬಸ್ ಇರುವುದಿಲ್ಲ, ಬೇರೆ ಸಾರಿಗೆ ವ್ಯವಸ್ಥೆ ಇಲ್ಲದೇ ಇರುವುದರಿಂದ ಹಳ್ಳಿಗಾಡಿನಲ್ಲಿ ಈ ಪರಿಸ್ಥಿತಿ ಉದ್ಭವವಾಗಿದೆ. ದಯಮಾಡಿ ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಿ ಕೂಡಲೇ ಆ್ಯಕ್ಷನ್ ತೆಗೆದುಕೊಳ್ಳಬೇಕೆಂದು ಸರ್ಕಾರಕ್ಕೆ ತಿಳಿಸುತ್ತಾ, ಟಿಸಿಹೆಚ್ ಮಾಡಿದಂತಹ ಶಿಕ್ಷಕರಿಗೆ ಮಿಡ್ಲ್ ಮತ್ತು ಪ್ರೈಮರಿ ಸ್ಕೂಲ್‌ಗೆ ಅಪಾಯಿಂಟ್‌ಮೆಂಟ್ ಮಾಡಿದ್ದಾರೆ. ಐದನೇ ತರಗತಿಯನ್ನು ಮಿಡ್ಲ್ ಸ್ಕೂಲ್‌ಗೆ ಮಾರ್ಜ್ ಮಾಡಿ 8ನೇ ತರಗತಿಯನ್ನು ಮಿಡ್ಲ್ ಸ್ಕೂಲ್‌ಗೆ ಮರ್ಜ್ ಮಾಡಿ ಅಲ್ಲಿ ಇಲ್ಲಿ ಪಾಠ ಮಾಡುವಂಥ ವ್ಯವಸ್ಥೆಯನ್ನು ಇವೊತ್ತು ಸರ್ಕಾರ ಸುತ್ತೋಲೆಯನ್ನು ಹೊರಡಿಸಿದೆ. ಟಿಸಿಹೆಚ್ ಮಾಡಿದ ಶಿಕ್ಷಕರು ಹೈಸ್ಕೂಲಿನ ವಿದ್ಯಾರ್ಥಿಗಳಿಗೆ ಮ್ಯಾಥಮೆಟಿಕ್ಸ್ ಮತ್ತು ಇಂಗ್ಲೀಷ್ ಪಾಠ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ದಯಮಾಡಿ ಸರ್ಕಾರ ಆ ದಿಕ್ಕಿನಲ್ಲಿ ಯೋಚನೆ ಮಾಡಬೇಕಾಗುತ್ತದೆ. ಆಧುನಿಕ ವೈಜ್ಞಾನಿಕತೆಯನ್ನು ಕಲಿಕೆಯಲ್ಲಿ ಮಾಡಬೇಕೆಂದು ಸರ್ಕಾರ ಹೊರಟಿದೆ. ಅಲ್ಲಿ ವಿಫಲವಾಗಿದೆ. ಆದ್ದರಿಂದ ತಮ್ಮ ಮುಖಾಂತರ ಮಾನ್ಯ ಶಿಕ್ಷಣ ಸಚಿವರಿಗೆ ವಿನಂತಿ ಮಾಡುತ್ತೇನೆ, ಆಗಿರುವಂತಹ ಅದಲು ಬದಲು ಆ ವ್ಯವಸ್ಥೆ ಏನಿದೆ ಅದನ್ನು ಕೂಡಲೇ ಸರಿಪಡಿಸಬೇಕು. ಈ ರಾಜ್ಯ ಸಾರ್ವಜನಿಕ ಶಿಕ್ಷಣ ಇಲಾಖೆಯನ್ನು ನಿಜವಾಗಿ ತೂಕದ ಆಧಾರದ ಮೇಲೆ ಪ್ರತಿಯೊಬ್ಬರಿಗೂ ಸರಳವಾಗಿ ಸಿಗುವ ರೂಪದಲ್ಲಿ ಮಾರ್ಪಾಡು ಮಾಡಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಂಡು, ಶಿಕ್ಷಕರ ಅಪಾಯಿಂಟ್‌ಮೆಂಟ್ 30 ಜನ, 50 ಜನ ವಿದ್ಯಾರ್ಥಿಗಳು, 60 ಜನ ವಿದ್ಯಾರ್ಥಿಗಳು ಒಂದು ಸೆಕ್ಷನ್‌ಗೆ ಇರಬೇಕೆಂದು ವ್ಯವಸ್ಥೆ ಮಾಡಿದ್ದರು. 30 ಜನ ಮಕ್ಕಳು ಇದ್ದ ಶಾಲೆಯನ್ನು ಬೇರ್ಪಡಿಸಿ, ಆ ಕ್ಲಾಸನ್ನು ಬೇರ್ಪಡಿಸಿ ಇಬ್ಬರು ಉಪಾಧ್ಯಾಯರು ಇದ್ದ ಕಡೆ ಒಬ್ಬರೇ ಉಪಾಧ್ಯಾಯರನ್ನು ಹಾಕುವ ವ್ಯವಸ್ಥೆ ಮಾಡಿದ್ದಾರೆ. ಅದೇ ರೀತಿ ಶಿಕ್ಷಕರ ವರ್ಗಾವಣೆ ನಾವೆಲ್ಲರೂ ಸೀಟಿ ಮಾಡುತ್ತೇವೆ, ನೀವು ಅದರಲ್ಲಿ ಯಾವ ಊರಿಗೆ ಬೇಕು ಬರೆದು ಕೊಡಿ, ಎಂದು ಹೇಳಿ ಡಿಡಿಪಿಟಿ ಆಗಬಹುದು, ಎಡಿಪಿಡಿ ಆಗಬಹುದು, ಡಿಪಿಐಗಳು ಆಗಬಹುದು, ಸರ್ಕಾರದ ಸುತ್ತೋಲೆ ಪ್ರಕಾರ ಯಾವುದು ಮಾಡದೆ ಎಲ್ಲಿ ಬೇಕಾದರೂ ಮನಬಂದಂತೆ ಟ್ರಾನ್ಸ್‌ಫರ್ ಮಾಡುವ ವಿಚಾರದಲ್ಲಿ ಇವತ್ತು ಅನೇಕ ಹೆಣ್ಣು ಮಕ್ಕಳು ಲೇಡಿ ಟೀಚರ್ಸ್ ಒಂದು ಊರಿನಿಂದ ಇನ್ನೊಂದು ಊರಿಗೆ ಹೋಗಿ ಬರುವುದಕ್ಕೆ ಆಗದೆ ಇವತ್ತು ಅನೇಕ ಜನ ಮನೆಯಲ್ಲಿ ಇರುವ ಪರಿಸ್ಥಿತಿ ಇದೆ. ಆರೇಳು ಕಿ.ಮಿ ನಡೆದುಕೊಂಡು ಹೋದಾಗ ಮನಸ್ಸಿನಲ್ಲಿ [illegible] ಕುಂದಿ ಅವರು ಯಾವುದೇ ಪಾಠ ಮಾಡುವುದಕ್ಕೆ

ಹೋಗುವುದಿಲ್ಲ. ಇಂತಹ ಪರಿಸ್ಥಿತಿ ಈ ಟ್ರಾನ್ಸ್‌ಫರ್ ಪಾಲಿಸಿಯಿಂದ ಶಿಕ್ಷಣ ಇಲಾಖೆಗೆ ಮಾಡಿದಂಥ ಅನ್ಯಾಯವಾಗಿದೆ. ಶಿಕ್ಷಣ ಸಚಿವರಿಗೆ ವಿನಂತಿ ಮಾಡುತ್ತೇನೆ, ಇವೊತ್ತು ಏನು ಲೇಡಿ ಟೀಚರ್ಸ್ ಅನ್ನು ಅಪಾಯಿಂಟ್ ಮಾಡಿದ್ದಾರೆ. ಅವರಿಗೆ ಬಸ್ ಸೌಕರ್ಯ ಇರಬೇಕು. ಇಲ್ಲದಿದ್ದರೆ ಅವರು ಕೇಳಿದ ಜಾಗಕ್ಕೆ ಕೊಟ್ಟು ಅವರ ಬೋಧನಾ ಚಮತ್ಕಾರವನ್ನು ಉಳಿಸಬೇಕಾಗಿ ವಿನಂತಿ ಮಾಡುತ್ತೇನೆ. ಇಲ್ಲದಿದ್ದರೆ ಅವರು ಪಾಠ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಹಳ್ಳಿ ಕಡೆ ಪ್ರತಿಯೊಂದು ವಿಚಾರದಲ್ಲಿ ಒಂದು ವಾರಕ್ಕೆ ಒಂದು ದಿನ ಮೀಟಿಂಗ್ ಹೋದಾಗ ಈ ವಿಚಾರವನ್ನು ಹಳ್ಳಿಗಳಲ್ಲಿಯ ಎಲ್ಲಾ ಶಿಕ್ಷಕರು ಹೇಳುತ್ತಾರೆ. ಆದ್ದರಿಂದ ಆಧುನಿಕ ಶಿಕ್ಷಣಕ್ಕೆ ಒತ್ತು ಕೊಡುವ ವಿಚಾರದಲ್ಲಿ

ಪ್ರೊ : ಬಿ.ಕೆ. ಚಂದ್ರಶೇಖರ್ : ಸನ್ಮಾನ್ಯ ಉಪಾಧ್ಯಕ್ಷರೆ, ಶಿಕ್ಷಕರ ವರ್ಗಾವಣೆ ಆಗುತ್ತಿರುವ ಬಗ್ಗೆ ಮಾನ್ಯ ಸದಸ್ಯರು ಮಾತನಾಡುತ್ತಿದ್ದರು, ಮಾತಿನ ಭರದಲ್ಲಿ ಕೆಲವು ಡಿಡಿಪಿಐಗಳು ಎಲ್ಲಿ ಬೇಕು ಅಲ್ಲಿ ಇಷ್ಟವಾದ ಹಾಗೆ ಮಾಡುತ್ತಾರೆಂದು ಹೇಳಿದರು. ಅದು ಹಾಗಾಗಿಲ್ಲ. ನಾನು ಸ್ವಲ್ಪ ಪರಿಶೀಲನೆ ಮಾಡಿದ್ದೇನೆ. ಮೊನ್ನೆ ಕೂಡ ನಾನು ಈ ಸದನದಲ್ಲಿ ಹೇಳಿದ್ದೇನೆ. ಸಾಮಾನ್ಯವಾಗಿ ಪ್ರಾಧಿಕಾರದಿಂದ ಪಿಡಿಸಿ, ಡಿಡಿಪಿ ಮತ್ತೆ ಬೇರೆ ಇಬ್ಬರು ಇದ್ದರು. ಪ್ರಾಧಿಕಾರದಿಂದ 50 ರಿಂದ 60 ವರ್ಗಾವಣೆ ಆಗಿತ್ತು. ಆದಾದ ನಂತರ ಆಗಿರುವ ವರ್ಗಾವಣೆಗೆ ನಾವೆಲ್ಲರೂ ಸೇರಿ ನನ್ನನ್ನೂ ಸೇರಿ ನಾವು ಶಿಫಾರಸ್ಸು ಕೊಟ್ಟಿದ್ದೇವಎ. ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದಾ ಬಹುತೇಕ ಶಿಕ್ಷಕರು ನಗರಗಳಿಗೆ, ಪಟ್ಟಣಗಳಿಗೆ ವರ್ಗಾವಣೆ ಆಗುವ ಶಿಫಾರಸ್ಸನ್ನು ನಾವೇ ಕೊಟ್ಟಿದ್ದೇವೆ. ಅದನ್ನು ಡಿಡಿಪಿಐ ಮಾಡುವುದಕ್ಕೆ ಬರುವುದಿಲ್ಲ. ಅದನ್ನು ನಾವೇ ಮಾಡಬೇಕು. ಸ್ವಲ್ಪ ಮಟ್ಟಿಗೆ ಅನಿವಾರ್ಯತೆದಿಂದ ಕೂಡಿದ ದಂದ್ವ ಇದೆ. ಇದನ್ನು ಶಾಸಕರೂ ಮಾಡುತ್ತಾರೆಂದು ಹೇಳಲಿಲ್ಲ, ಶಾಸಕರು ಜನ ಪ್ರತಿನಿಧಿಗಳು, ಅವರಿಗೆ ನೂರಾರು ಜನ ಬಂದು ಒತ್ತಡ ಹಾಕುತ್ತಾರೆ. ಹೇಗಾದರೂ ನಾವು ಗ್ರಾಮೀಣ ಪ್ರದೇಶಗಳಲ್ಲಿ ಇರುವವರಿಗೆ ಬದಲಾವಣೆ ಮಾಡುವುದಕ್ಕೆ ಶಿಫಾರಸ್ಸು ಮಾಡಬಾರದು. ಇದನ್ನು ಅವಾಯ್ಡ್ ಮಾಡಬೇಕು. ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್‌ನಲ್ಲಿ 15,500 ಶಿಕ್ಷಕರು ಇದ್ದದ್ದು. ಆದರಲ್ಲಿ ಏನು ಮಾಡಿದ್ದೇವೆಂದರೆ ಬ್ಲಾಕ್‌ವೈಸ್ ರಿಕ್ರೂಟ್‌ಮೆಂಟ್ ಒಂದೊಂದು ಬ್ಲಾಕ್‌ಗೆ ಸೇರಿದ ಹಾಗೆ ಜನ ನೇಮಕ ಮಾಡಿಕೊಂಡು ಅದೇ ಬ್ಲಾಕ್‌ನಲ್ಲಿ ಅವರು ಕನಿಷ್ಠ ಪಕ್ಷ 3 ರಿಂದ 4 ವರ್ಷ ಇರಬೇಕು. ಯಾರೇ ಶಿಫಾರಸ್ಸು ಮಾಡಿದರೂ ಅವರಿಗೆ ವರ್ಗ ಆಗುವ ಛಾನ್ಸ್ ಇಲ್ಲ. ಇದು ಬಹಳ ಉತ್ತಮವಾದ ಕೆಲಸವಾಗಿದೆ. ಅದನ್ನು ಗಮನದಲ್ಲಿಟ್ಟುಕೊಂಡು ಮಾನ್ಯ ಸದಸ್ಯರು ಹೇಳಿರುವ ಬೇರೆ ವಿಚಾರಗಳನ್ನು ಮನಸ್ಸಿನಲ್ಲಿಟ್ಟುಕೊಂಡು ನಾವು ಕೆಲಸ ಮಾಡುವುದಕ್ಕೆ ತಯಾರಿದ್ದೇವೆ ಎಂಬ ಭರವಸೆ ಕೊಡುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಸನ್ಮಾನ್ಯ ಉಪಾಧ್ಯಕ್ಷರೆ, ಈ ಬಾರಿ ನಮ್ಮ ತಾಲ್ಲೂಕಿನಲ್ಲಿ ನಮಗೆ ಗೊತ್ತಿಲ್ಲದೆ ನಮ್ಮ ಜಿಲ್ಲೆಯಲ್ಲಿ 100 ರಿಂದ 150 ಜನ ಉಪಾಧ್ಯಾಯರು ಬೇರೆ ಕಡೆ ವರ್ಗಾವಣೆ ಮಾಡಿಸಿಕೊಂಡು ಹೋಗಿದ್ದಾರೆ. ಅದೇ ಪರಿಸ್ಥಿತಿ ಪ್ರೌಢ ಶಾಲೆಗಳಲ್ಲಿ ಕೂಡ ಆಗಿದೆ. 10 ರಿಂದ 15 ಜನ ಇರತಕ್ಕಂಥ ಪ್ರೌಢ ಶಾಲಾ ಶಿಕ್ಷಕರು 10 ಜನ ಉಪಾಧ್ಯಾಯರು ಆಚೆ ಹೋಗಿದ್ದಾರೆ. ಹಿಂದೆ ಆ ಪರಿಸ್ಥಿತಿ ಇರಲಿಲ್ಲ. ಸಾಕಷ್ಟು ಉಪಾಧ್ಯಾಯರುಗಳು ಎಲ್ಲಿ ಹೇಗೆ ಮ್ಯಾನೇಜ್ ಮಾಡಿಕೊಂಡಿದ್ದಾರೆ ನಮಗೆ ಗೊತ್ತಿಲ್ಲ. ಅವರಂತೂ ನಮ್ಮ ತಾಲ್ಲೂಕುಗಳಿಂದ

ಹೊರಗೆ ಹೋಗಿದ್ದಾರೆ. ಉಪಾಧ್ಯಾಯರುಗಳು ಇಲ್ಲದೆ ಇರತಕ್ಕಂತಹ ಪರಿಸ್ಥಿತಿಯಲ್ಲಿ ಅನೇಕ ಶಾಲೆಗಳಲ್ಲಿ ಇದೆ. ಇದನ್ನು ಯಾರಿಗೆ ಕೇಳಬೇಕು, ಯಾರು ಉಪಾಧ್ಯಾಯರುಗಳನ್ನು ತುಂಬುತ್ತಾರೆ, ಎಷ್ಟೆಷ್ಟು ಉಪಾಧ್ಯಾಯರು ನಮ್ಮಲ್ಲಿರಬೇಕೆಂದು ಇತ್ತು, ಇವತ್ತು ಅಷ್ಟು ಜನ ಇಲ್ಲದೆ ಹಾಗೆ ಇರುವ ಪರಿಸ್ಥಿತಿ ಆಗಿದೆ.

ಪ್ರೊ : ಬಿ ಕೆ ಚಂದ್ರಶೇಖರ್ : ಸ್ವಲ್ಪ ಸಮಾಧಾನ ತರುವ ಸಂಗತಿ ಸುಮಾರು ಮೂರು ವರ್ಷಗಳಿಂದ 550 ಹುದ್ದೆಗಳು ಏನು ಖಾಲಿ ಇತ್ತು, ಈ ಪ್ರೌಢಶಾಲಾ ಶಿಕ್ಷಣದ್ದು ಸುಮಾರು 2,000 ಇತ್ತು, ತಕ್ಷಣ ಮಾಡಬೇಕಾಗಿತ್ತು, ಅದು ಹಾಗೆಯೇ ಖಾಲಿ ಇತ್ತು, ಈಗ ಆ ಪ್ರಕ್ರಿಯೆ ಪ್ರಾರಂಭ ಮಾಡಿದ್ದೇವೆ. ಅವರನ್ನು ಬಹುಶಃ ಒಂದು ತಿಂಗಳು, ಎರಡು ತಿಂಗಳು, ಮೂರು ತಿಂಗಳು ಒಳಗಡೆ ಪರ್ಮನೆಂಟಾಗಿ ಅವರು ಶಿಫ್ಟ್ ಆಗಬಾರದು. ಆ ತರಹ ಕೆಲಸ ಮಾಡುವುಕ್ಕೆ ನಾನಂತೂ ಪ್ರಾರಂಭ ಮಾಡಿಸಿದ್ದೇನೆ. ಅದೇ ರೀತಿ ಪಿಯುಸಿ ಕೂಡ 550 ಹುದ್ದೆ ಖಾಲಿ ಇದ್ದು ಮೂರು ವರ್ಷಗಳಿಂದ ತುಂಬಿರಲಿಲ್ಲ. ಈಗ ಪ್ರಕ್ರಿಯೆ ಪ್ರಾರಂಭ ಮಾಡಿದ್ದೇವೆ. ಸ್ಪೆಷಲ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡಿ ಈಗ ಕ್ಯಾಬಿನೆಟ್ ಮುಂದೆ ತೆಗೆದುಕೊಂಡು ಹೋಗಿ ಕ್ಲಿಯರ್ ಮಾಡಿಸಿ ಮೂರು-ಮೂರುವರೆ ತಿಂಗಳು ಬೇಕಾಗುತ್ತದೆ. ನವೆಂಬರ್ ಅಥವಾ ಡಿಸೆಂಬರ್‌ನಲ್ಲಿ 550 ಹುದ್ದೆಗಳಿಗೆ ಕಾಲೇಜ್ ಟೀಚರ್ಸ್ ಅನ್ನು ನೇಮಕ ಮಾಡುವ ಭರವಸೆಯನ್ನು ಇವತ್ತು ಮೇಲ್ಮನೆಯಲ್ಲಿ ಕೊಟ್ಟಿದ್ದೇನೆ. ಅದಕ್ಕೆ ಬದ್ಧರಾಗಿರುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಈಗಾಗಲೇ ಮಾನ್ಯ ಪ್ರಾಥಮಿಕ ಶಿಕ್ಷಣ ಇಲಾಖೆಯ ಮಂತ್ರಿಗಳ ಗಮನಕ್ಕೆ ಈ ವಿಚಾರ ತಂದಿದ್ದೇನೆ. ಅವರು ಹೇಳುತ್ತಿರುವ ವೇಕೆನ್ಸಿ ಏನೆಂದರೆ, ಸ್ಯಾಂಕ್ಷನ್ ಆಗಿರತಕ್ಕಂತಹ ವೇಕೆನ್ಸಿಗಳು. ನಾನು ಹೇಳುತ್ತಾ ಇರತಕ್ಕಂಥ ವಿಷಯವೇನೆಂದರೆ ನಮ್ಮ ಜಿಲ್ಲಾ ಮಂತ್ರಿಗಳು ಮತ್ತು ನನ್ನ ಕ್ಷೇತ್ರದಲ್ಲಿ ಒಟ್ಟು 425 ಶಾಲೆಗಳಿವೆ. ಪ್ರಾಥಮಿಕ ಶಾಲೆಗಳಲ್ಲಿ 395 ವೇಕೆನ್ಸಿಗಳಿವೆ. ಈಗ ಡಿಡಿಪಿಐನವರು ಮಾಡಿದರು ಎಂದು ಮಾನ್ಯ ಚೆನ್ನಿಗಪ್ಪನವರು ಹೇಳಿದರು. ಡಿಡಿಪಿಐ ನವರು ಕೆಲವು ಕಡೆಗಳಲ್ಲಿ ಮಾಡಿದ್ದಾರೆ. ತಾಲ್ಲೂಕು ಪಂಚಾಯತ್‌ನವರು ರೆಸಲ್ಯೂಷನ್ ಮಾಡಿ ಇವರನ್ನು ರಿಲೀವ್ ಮಾಡಬೇಡಿ ಎಂದಿದ್ದಾರೆ. ಡಿಡಿಪಿಐನವರು ಹೇಳಿದ್ದಾರೆ ಇದನ್ನು ರಿಲೀವ್ ಮಾಡುವುದಕ್ಕೆ ಆಗುವುದಿಲ್ಲವೆಂದು. ಬಿ.ಇ.ಓ.ರವರನ್ನು ಕೇಳಿದರೆ ಅವರು ಹೇಳಿದ್ದಾರೆ ರಿಲೀವ್ ಮಾಡುವುದಕ್ಕಾಗುವುದಿಲ್ಲವೆಂದು. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರನ್ನು ಕೇಳಿದರೆ ನಾನು ವರ್ಗಾವಣೆಯನ್ನು ಮಾಡಿಲ್ಲವೆಂದು ಹೇಳುತ್ತಾರೆ. ಹಾಗಾದರೆ ಒಂದೇ ತಾಲ್ಲೂಕಿನಲ್ಲಿ 380 ಟ್ರಾನ್ಸ್‌ಫರ್‌ಗಳನ್ನು ಒಂದು ಅಕಾಡೆಮಿಕ್ ಇಯರ್‌ನಲ್ಲಿ ಹೇಗೆ ಮಾಡಿದರು? ಇದು ನಮ್ಮ ಜಿಲ್ಲೆಯಲ್ಲಿ ಸುಮಾರು ಒಂದೂವರೆಯಿಂದ ಎರಡು ಸಾವಿರ ವೇಕೆನ್ಸಿಗಳು ಕ್ರಿಯೇಟ್ ಆಗುತ್ತಿವೆ. ಇದನ್ನು ನೀವು ಯಾವಾಗ ಭರ್ತಿ ಮಾಡುತ್ತೀರಿ? ಈಗ ಕೆ.ಎ.ಟಿ.ನಲ್ಲಿ ಕೇಸ್ ಇತ್ಯರ್ಥವಾಗಿ ಹದಿನೈದು ಸಾವಿರ ಶಿಕ್ಷಕರನ್ನು ಇವರು ಏನು ಭರ್ತಿ ಮಾಡುತ್ತಿದ್ದಾರೆ ಈ ಹುದ್ದೆಗಳೆಲ್ಲವೂ ಹಿಂದೆ ವೇಕೆನ್ಸಿ ಇದ್ದವುಗಳ ಬಗ್ಗೆ ಪ್ರಕಟಣೆ ಮಾಡಿದ್ದು. ಈಗ ನೀವು ವರ್ಗಾವಣೆ ಮಾಡಿದ್ದೀರಲ್ಲಾ, ಈಗಾಗಲೇ ಎಂಡ್ ಆಫ್ ಜುಲೈನಲ್ಲಿದ್ದೇವೆ. ಜೂನ್-ಜುಲೈ ತಿಂಗಳು ಕಳೆಯುತ್ತಿದ್ದರೂ ಪುಸ್ತಕಗಳೂ ಇಲ್ಲ, ಮೇಸ್ಟ್ರುಗಳೂ ಇಲ್ಲ, ಮತ್ತೆ ಅವರು ಯಾವಾಗ ಬರುವುದು, ಪಾಠ ಮಾಡುವುದು ಯಾವಾಗ? ಈ ಅಕಾಡೆಮಿಕ್ ಇಯರ್‌ನಲ್ಲಿ ಇವುಗಳನ್ನು ಯಾವಾಗ ಮಾಡುತ್ತಾರೆ ಎಂಬುದನ್ನು ತಿಳಿಸಬೇಕು. ವಿಶೇಷವಾಗಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ

2000 ವೇಕೆನ್ಸಿಗಳಿವೆ. ಯಾವ ಪುರುಷಾರ್ಥಕ್ಕಾಗಿ ಈ ಶಾಲೆಗಳನ್ನು ನಡೆಸಬೇಕು, ಅಥವಾ ಇಲ್ಲ ಎಂದರೆ ಅವರು ಬೇರೆ ಕಡೆ ಎಲ್ಲಾದರೂ ಕಳುಹಿಸಿಕೊಳ್ಳುತ್ತಾರೆ. ಇಷ್ಟೊಂದು ಕನ್‌ಫ್ಯೂಶನ್ ಆಗಿದೆ. ನಮ್ಮ ಹೈಸ್ಕೂಲ್‌ನಲ್ಲಿ ಪೂಜ್ಯ ಕರಿಯಪ್ಪನವರು ನಮ್ಮ ತಾಲ್ಲೂಕಿನಲ್ಲಿ ಶಿಕ್ಷಣ ಕ್ರಾಂತಿಯನ್ನು ಮಾಡಿದಂಥ ಪುಣ್ಯ ಪುರುಷರಾಗಿದ್ದು, ಅವರ ದಯೆಯಿಂದ ನಾವೆಲ್ಲಾ ಇಲ್ಲಿ ಇರತಕ್ಕಂಥದ್ದು. ಈಗ ನಮ್ಮ ತಾಲ್ಲೂಕಿನಲ್ಲಿ ಈ ವರ್ಷ ಹದಿನಾರು ಪರ್ಸೆಂಟ್, ಹದಿನೇಳು ಪರ್ಸೆಂಟ್ ರಿಸಲ್ಟ್ ಬಂದಿದೆ. ಮಾನ್ಯ ಚಂದ್ರಶೇಖರ್‌ರವರು ಕಳೆದ ಸಾರಿ ಪ್ರಾಥಮಿಕ ಶಿಕ್ಷಣ ಇಲಾಖಾ ಮಂತ್ರಿಗಳಾಗಿರಲಿಲ್ಲ. ಆಗ ನಾನು ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಚಾರವನ್ನು ಬೇಡಿಕೆ ಮೇಲೆ ಮಾತನಾಡಿದಾಗ ಹೇಳಿದ್ದೆ. ಅವರು ಆಗ ದಯಮಾಡಿ ಇನ್ನು ಮುಂದೆ ವರ್ಗಾವಣೆಗಳನ್ನು ಮಾಡುವುದಿಲ್ಲವೆಂದರು. ಹೋದ ವರ್ಷ ಬ್ಯಾನ್ ಮಾಡಿದರೂ ಕೂಡ 400 ವೇಕೆನ್ಸಿಗಳಾದವು. ಅದರ ಹಿಂದಿನ ವರ್ಷ ಕೂಡ ವರ್ಗಾವಣೆ ಬ್ಯಾನ್ ಮಾಡಿದರು, ಆಗಲೂ 400 ವೇಕೆನ್ಸಿಗಳಾದವು. ಹೀಗಾದರೆ ನಮ್ಮ ಮಕ್ಕಳು ಹೇಗೆ ರಿಸಲ್ಟ್ ತೆಗೆದುಕೊಂಡು ಬರುವುದು? ತಾವು ದಯವಿಟ್ಟು ಇದಕ್ಕೆ ಏನಾದರೂ ಒಂದು ವಿಶೇಷವಾಗಿ ಈ ಮೂರ್‍ನಾಲ್ಕು ಜಿಲ್ಲೆಗಳಲ್ಲಿ ಈ ರೀತಿಯಾಗುವುದಕ್ಕೆ ಕಾರಣವೇನು ಎಂದು ತಿಳಿದುಕೊಂಡು ಇದಕ್ಕೆ ಏನಾದರೂ ಒಂದು ಪರಿಹಾರವನ್ನು ಕಂಡುಹಿಡಿಯದೇ ಹೋದರೆ ಮಕ್ಕಳ ವಿದ್ಯಾಭ್ಯಾಸಕ್ಕೆ ಬಹಳ ತೊಂದರೆಯಾಗುತ್ತದೆಯಾದ ಕಾರಣ ಮಾನ್ಯ ಮಂತ್ರಿಗಳು ಇದರ ಕಡೆ ಗಮನ ಕೊಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಪ್ರೊ ಬಿ.ಕೆ. ಚಂದ್ರಶೇಖರ್ : ಮಾನ್ಯ ಉಪಾಧ್ಯಕ್ಷರೆ, ಕಡೆಯದಾಗಿ ನನ್ನ ಮಾತನ್ನು ಹೇಳುತ್ತೇನೆ. ಖಂಡಿತವಾಗಿ ಅವರು ಹೇಳಿದ ಮಾತುಗಳನ್ನು ಅಕ್ಷರಶಃ ನಾನು ಒಪ್ಪಿ ಕೊಳ್ಳುತ್ತೇನೆ. ಈಗ ನಿನ್ನೆ ತಾವು ಸ್ಟೇ ಆರ್ಡರ್ ತೆರವು ಆಗಿರುವುದರಿಂದ 400 ಶಿಕ್ಷಕರ ವರ್ಗಾವಣೆ ಏನು ಆಗಿತ್ತು ಅದನ್ನು ಆದಷ್ಟು ಬೇಗ ತುಂಬಿಸುವುದಕ್ಕೆ ಕೆಲಸ ಮಾಡುತ್ತೇನೆ. ತಮ್ಮ ತಾಲ್ಲೂಕಿಗೆ ಇದು ಒಂದು. ಇನ್ನು ಎರಡನೆಯದಾಗಿ ಹೇಗೆ ವರ್ಗಾವಣೆಯಾಯಿತು ಎಂಬುದಕ್ಕೆ ಕಾರಣ ಕೇಳಿದ್ದೀರಿ. ಅದರ ಬಗ್ಗೆ ವಿಚಾರವನ್ನು ನಾನು ಮಾಡಿ ಒಂದು ರಿಪೋರ್ಟ್ ಕೊಡುತ್ತೇನೆ. ಯಾರ ಶಿಫಾರಸ್ಸಿನಿಂದ ಆಯಿತು, ಯಾವ ಪ್ರಾಧಿಕಾರದಲ್ಲಿ ಮಾಡಿದರು ಯಾರು ಮಾಡಿದರು ಎಂಬ ವರದಿ ಕೊಡಲು ನನಗೇನೂ ತೊಂದರೆಯಿಲ್ಲ. ಆದರೆ ವೇಕೆನ್ಸಿ ಫಿಲಪ್ ಮಾಡಿಸುತ್ತೇನೆ. ತಕ್ಷಣ ಮಾಡಿಸುತ್ತೇನೆ, ನಿನ್ನೆ ತೆರವು ಆಗಿದೆ. ಇನ್ನು ಮೂರನೆಯದಾಗಿ ಎಲ್ಲಾ ಗೌರವಾನ್ವಿತ ಸದಸ್ಯರುಗಳು ಮನಸ್ಸು ಮಾಡಿ ಒಂದು ನಿರ್ಣಯವನ್ನು ಮಾಡಿ ಮುಂದಿನ ವರ್ಷ ಶಾಲಾ ಶಿಕ್ಷಕರ ವರ್ಗಾವಣೆ ಮಾಡುವುದು ಬೇಡವೆಂದು ನಿರ್ಣಯವನ್ನು ಮಾಡಿ ತಾವೇ ಆ ನಿರ್ಣಯವನ್ನು ಮೂವ್ ಮಾಡಿಬಿಟ್ಟರೆ ತಮಗೆ ಬಹಳ ನಾನು ಅಭಾರಿಯಾಗಿರುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ರೆಸಲ್ಯೂಶನ್ ಈ ದಿನ ಸಾಯಂಕಾಲವೇ ಮಂಡಿಸುತ್ತೇನೆ, ಅದರ ಜೊತೆಗೆ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರ ಜೊತೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲೂ ವೈದ್ಯರುಗಳನ್ನು ವರ್ಗಾವಣೆ ಮಾಡಬಾರದು ಎಂದು ಹೇಳುವುದರಲ್ಲಿ ವಿರೋಧ ಪಕ್ಷದ ನಾವೆಲ್ಲರೂ ಕೂಡ ಒಪ್ಪಿ ರೆಡಿಯಾಗಿದ್ದೇವೆ. ತಾವು ನಿರ್ಣಯವನ್ನು ಮಂಡಿಸಿ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ನಾವು ರೆಡಿ ಇದ್ದೇವೆ. ನಾವು ನಿರ್ಣಯವನ್ನು ಮೂವ್ ಮಾಡುವುದಕ್ಕೆ ತಯಾರಿದ್ದೇವೆ. ಬರೇ ಶಿಕ್ಷಕರದ್ದು ಅಷ್ಟೇ ಅಲ್ಲ, ಎಲ್ಲಾ ಇಲಾಖೆಗಳಲ್ಲೂ ಇದು ಆಗಲಿ. ಕನಿಷ್ಟ ಮೂರರಿಂದ ನಾಲ್ಕು ವರ್ಷಗಳವರೆಗೆ ಒಂದೇ

ಕಡೆ ಕೆಲಸ ಮಾಡುವುದಕ್ಕೆ ಬಿಡಿ. ಅದನ್ನು ಬಿಟ್ಟು ಆರು ತಿಂಗಳು, ಒಂದು ವರ್ಷಕ್ಕೆಲ್ಲಾ ಟ್ರಾನ್ಸ್‌ಫರ್ ಮಾಡಿದರೆ ಯಾರು ಸರಿಯಾಗಿ ನೌಕರಿ ಮಾಡುತ್ತಾರೆ? ಆದುದರಿಂದ ಬದಲಾವಣೆಯ ವ್ಯವಸ್ಥೆಯನ್ನು ನೀವು ತೆಗೆದುಕೊಂಡು ಬನ್ನಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ನಮ್ಮ ಉತ್ತರ ಕರ್ನಾಟಕದಲ್ಲಿ ಸಂಪೂರ್ಣವಾಗಿ ಖಾಸಗಿ ಸಂಸ್ಥೆಗಳೇ ಇರುವುದು. ಅಲ್ಲಿಲ್ಲಾ ಖಾಲಿಯಾದ ಹುದ್ದೆಗಳನ್ನು ಇವೊತ್ತಿಗೂ ತುಂಬಿಲ್ಲ. ಅದೆಲ್ಲಾ ಎಸ್‌ಸಿ : ಎಸ್‌ಟಿಗೆ ರಿಸರ್ವೇಶನ್ ಇರುವುದು. ಆ ಬ್ಯಾಕ್‌ಲಾಗ್ ತುಂಬುತ್ತೀರಾ ಎಂದು ಎಸ್‌ಸಿ : ಎಸ್‌ಟಿ ಕಮಿಟಿಯವರು ಕೇಳಿದರೆ ನಿಮ್ಮವರು ಕಡೇ ಗಳಿಗೆಯಲ್ಲೂ ಲಿಸ್ಟ್ ಕೊಡಲಿಲ್ಲ. ಎಲ್ಲಾ ಎಸ್‌ಸಿ : ಎಸ್‌ಟಿ ಹುದ್ದೆಗಳಾಗಿವೆ ಆ ರೀತಿ ಸುಮಾರು ಸಾವಿರಾರು ಹುದ್ದೆಗಳು ಖಾಲಿ ಇವೆ. ಹೀಗಿರುವಾಗ ಆ ಪ್ರೈವೇಟ್ ಇನ್ಸಿಟ್ಯೂಷನ್‌ಗಳಲ್ಲಿ ಹುದ್ದೆಗಳನ್ನು ತುಂಬದಿದ್ದರೆ ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ತಮಗೂ ಕೂಡ ಗೊತ್ತಿದೆ. ಆದಕಾರಣ ದಯವಿಟ್ಟು ಅವರನ್ನು ತಾವು ತೀವ್ರದಲ್ಲಿ ತಾವು ತುಂಬಬೇಕು.

ಶ್ರೀ ಸಿ ಚೆನ್ನಿಗಪ್ಪ : ಸನ್ಮಾನ್ಯ ಅಧ್ಯಕ್ಷರೆ, ಈಗ ನಮ್ಮ ನಾಯಕರು ಅನೇಕ ವಿಚಾರಗಳನ್ನು ತಮ್ಮ ಮುಂದೆ ಇಟ್ಟಿದ್ದಾರೆ. ಮಾನ್ಯ ಶಿಕ್ಷಣ ಸಚಿವರು 11ನೇ ತಾರೀಖು ಹೊಸದಾಗಿ ಸಚಿವರಾಗಿ ಬಂದ ತಕ್ಷಣ ವರ್ಗಾವಣೆಯನ್ನು ಮಾಡುವುದಿಲ್ಲವೆನ್ನುವ ಒಂದು ಆದೇಶವನ್ನು ಅವರು ಹೊರಡಿಸಿದರು. ನಾನು ಅದನ್ನು ಸ್ವಾಗತ ಮಾಡುತ್ತೇನೆ. ತುಮಕೂರು ಜಿಲ್ಲಾ ಸಚಿವರು ಇವೊತ್ತು ಇಲ್ಲಿಯೇ ಕುಳಿತಿದ್ದಾರೆ. ಮೊನ್ನೆ ಕೆ.ಡಿ.ಪಿ. ಮೀಟಿಂಗ್‌ನಲ್ಲಿ ಅನೇಕ ಶಿಕ್ಷಕರು ಬಂದು ವರ್ಗಾವಣೆ ವಿಚಾರದಲ್ಲಿ ಹದಿನೈದರಿಂದ ಇಪ್ಪತ್ತು ಸಾವಿರ ರೂಪಾಯಿಗಳನ್ನು ಕೇಳುತ್ತಾರಲ್ಲದೆ ವರ್ಗಾವಣೆಯಾದರೂ ರಿಲೀವ್ ಮಾಡುವುದಕ್ಕೆ ಹತ್ತು ಸಾವಿರ ರೂಪಾಯಿಗಳನ್ನು ಕೇಳುತ್ತಾರೆ ಎನ್ನುವಂಥ ಮಾತುಗಳನ್ನು ಕೆ.ಡಿ.ಪಿ. ಮೀಟಿಂಗ್‌ನಲ್ಲಿ, ಓಪನ್ ಹಾಲ್‌ನಲ್ಲಿ, ಜಿಲ್ಲಾ ಪಂಚಾಯತ್ ಮೀಟಿಂಗ್‌ನಲ್ಲಿ ನಮ್ಮನ್ನು ಕೇಳಿದರು. ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ, ಏಕೆಂದರೆ ಅದನ್ನು ಮಾನ್ಯ ಸಚಿವರು ಕಂಟ್ರೋಲ್ ಮಾಡುತ್ತಾರೆ ಎನ್ನುವ ನಂಬಿಕೆ ನನಗಂತೂ ಇದೆ. ಶಿಕ್ಷಣ ಇಲಾಖೆ ಈ ಮಟ್ಟಕ್ಕೆ ಹೋಗಿ ಸುಮಾರು ಹದಿನೈದರಿಂದ ಇಪ್ಪತ್ತು ಸಾವಿರ ರೂಪಾಯಿಗಳನ್ನು ಪಡೆದು ಶಿಕ್ಷಕರ ವರ್ಗಾವಣೆ ಮಾಡುವಂಥ ಪರಿಸ್ಥಿತಿಗೆ ಸರ್ಕಾರ ರೂಢಿ ಮಾಡಿಕೊಟ್ಟರೆ ಎಷ್ಟರ ಮಟ್ಟಿಗೆ ಮಾನ್ಯ ಶಿಕ್ಷಕರು ನಿಜವಾದ ಬೋಧನೆಯನ್ನು ಮಾಡುತ್ತಾರೆ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬಹುದು. ಈ ವಿಚಾರದ ಬಗ್ಗೆ ನಾವೆಲ್ಲರೂ, ವಿಚಾರವಂತರು, ಬುದ್ಧಿಜೀವಿಗಳು ನಾಗರಿಕರು, ವಿದ್ಯಾವಂತರು, ಹಾಗೂ ಸಮಾಜದ ಗಣ್ಯರೆಲ್ಲರೂ ಕೂಡ ಯೋಚನೆ ಮಾಡಬೇಕಾದ ಅಗತ್ಯವಿದೆ. ಆ ವಿಚಾರ ಅಂದ ಬಹಿರಂಗವಾಗಿ ಚರ್ಚೆಯಾದಾಗ ತುಮಕೂರು ಜಿಲ್ಲಾಧಿಕಾರಿಯವರೂ ಕೂಡ ಹೌದು ನನ್ನ ಗಮನಕ್ಕೂ ಬಂದಿದೆ ಎನ್ನುವ ಮಾತನ್ನು ಅವರು ಓಪನ್ ಸಭೆಯಲ್ಲಿ ಮಾನ್ಯ ಸಚಿವರ ಮುಂದೆ ಹೇಳಿದರು. ಈಗ ಸಚಿವರಾಗಿರುವವರು ಈ ರಾಜ್ಯದಲ್ಲಿ ಪ್ರಾಮಾಣಿಕ ಸಚಿವರಾಗಿದ್ದಾರೆ ಎನ್ನುವುದರಲ್ಲಿ ಎರಡು ಮಾತಿಲ್ಲ. ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ನಮ್ಮ ಜಿಲ್ಲಾ ಮಂತ್ರಿಗಳಾಗಿರುವ ಸನ್ಮಾನ್ಯ ಡಾ॥ ಪರಮೇಶ್ವರ್ ಅವರು ಯಾವುದೇ ಕರಪ್ಶನ್ ಇರುವ ವ್ಯಕ್ತಿಯಲ್ಲ, ಯಾವುದೇ ಕೆಟ್ಟ ಕೆಲಸಕ್ಕೂ ಕೈ ಹಾಕಿದವರಲ್ಲ, ಅವರು ಉತ್ತಮವಾಗಿ ಕೆಲಸ ಮಾಡುವ ಸಚಿವರಾಗಿದ್ದರೆ. ಕೆ.ಡಿ.ಪಿ. ಮೀಟಿಂಗ್ ನಡೆಯುವಾಗ ಆ ಸಚಿವರ ಮುಂದೆಯೇ ಈ ವಿಚಾರ ಪ್ರಸ್ತಾಪವಾಯಿತು. ಆಗ ಸಚಿವರು ಮಾತನಾಡಿ

ಕೂಡಲೇ ಆ್ಯಕ್ಷನ್ ತೆಗೆದುಕೊಳ್ಳುತ್ತೇನೆ, ಇಬ್ಬರು ಡಿಡಿಪಿಐ ಗಳನ್ನು ಸಸ್ಪೆಂಡ್ ಮಾಡಿಸುತ್ತೇನೆ ಮತ್ತು ಸಂಬಂಧಪಟ್ಟ ಕೇಸ್ ವರ್ಕ್‌ರ್‌ನ್ನು ಸಸ್ಪೆಂಡ್ ಮಾಡುತ್ತೇನೆಂದು ಹೇಳಿದರು. ಈಗಾಗಲೇ ಎಂಟತ್ತು ದಿವಸಗಳಾದರೂ ಇವೊತ್ತಿನವರೆಗೂ ಮಾನ್ಯ ಸಚಿವರು ಅದನ್ನು ಮಾಡಿಲ್ಲ.

ಡಾ|| ಜಿ. ಪರಮೇಶ್ವರ್ : ಈಗಾಗಲೇ ಇಬ್ಬರು ಅಧಿಕಾರಿಗಳನ್ನು ಅಲ್ಲಿ ಸಸ್ಪೆಂಡ್ ಮಾಡಿದ್ದಾರೆ. ತಮ್ಮ ಗಮನಕ್ಕೆ ಆ ವಿಚಾರ ಬಂತೋ ಇಲ್ಲವೊ ಗೊತ್ತಾಗಲಿಲ್ಲ.

ಶ್ರೀ ಸಿ ಚೆನ್ನಿಗಪ್ಪ : ಸಸ್ಪೆಂಡ್ ಮಾಡಿರುವುದು ಯಾರನ್ನು ಎಂದರೆ ಬಿ.ಇ.ಓ ಆಫೀಸ್‌ನ ಕೇಸ್ ವರ್ಕ್‌ರ್ಸ್‌ಗಳನ್ನು ಡಿಡಿಪಿಐ ಆಫೀಸ್‌ನವರಲ್ಲ ಅವರು. ಅದರಲ್ಲೂ ಕೂಡ ಕಣ್ಣು ಒರೆಸುವಂಥ ಕೆಲಸವನ್ನು ಮಾಡಿದ್ದಾರೆ. ಯಾರು ನಿಜವಾದ ಅಪರಾಧಿ ಇದ್ದಾರೆ ಅಂಥವರನ್ನು ಸಸ್ಪೆಂಡ್ ಮಾಡಬೇಕು, ಅದನ್ನು ಬಿಟ್ಟು ಉತ್ತಮವಾದ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲು ನಾವು ಕೈ ಹಾಕಬಾರದು. ಅನೇಕ ಉತ್ತಮವಾದ ಅಧಿಕಾರಿಗಳ ಬಗ್ಗೆ ಕ್ರಮ ತೆಗೆದುಕೊಂಡರೆ ದೇವರು ನಮಗೆ ಒಳ್ಳೆಯದನ್ನು ಮಾಡುವುದಿಲ್ಲ. ಆದುದರಿಂದ ಮಾನ್ಯ ಸಚಿವರಲ್ಲಿ ಮತ್ತೊಮ್ಮೆ ವಿನಂತಿ ಮಾಡಿಕೊಳ್ಳುತ್ತಿದ್ದೇನೆ, ಇದರ ಬಗ್ಗೆ ಎನ್‌ಕ್ವೈರಿ ಮಾಡಿಸಿ ಯಾರು ಇದಕ್ಕೆ ಸಂಬಂಧಪಟ್ಟಂತೆ ಅಪವಾದಕ್ಕೆ ಒಳಗಾಗಿದ್ದಾರೆ ಅಂಥವರನ್ನು ಸಸ್ಪೆಂಡ್ ಮಾಡುವ ಕೆಲಸವನ್ನು ಮಾನ್ಯ ಸಚಿವರು ಮಾಡಬೇಕೆಂದು ತಮ್ಮ ಮೂಲಕ ಅವರನ್ನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ವೆಕೆನ್ಸಿಗಳ ಬಗ್ಗೆ ಹೇಳುವುದಾದರೆ ತ್ಯಾಮಗೊಂಡ್ಲು ಹೈಸ್ಕೂಲ್‌ನಲ್ಲಿ ಸುಮಾರು 19 ಜನ ಸ್ಟಾಫ್ ಇದ್ದಾರೆ.

ಶ್ರೀ ಸಿ. ಗುರುಸ್ವಾಮಿ : ಮಾನ್ಯ ಉಪಾಧ್ಯಕ್ಷರೆ, ಈಗೇನು 15 ಸಾವಿರ ಶಿಕ್ಷಕರನ್ನು ಭರ್ತಿ ಮಾಡಲು ಇದ್ದ ಸ್ಟೇ ಆರ್ಡರ್ ಕೋರ್ಟ್‌ನಿಂದ ತೆರವುಗೊಂಡಿದೆ. ತಕ್ಷಣ ಈಗ ಕೌನ್ಸ್‌ಲಿಂಗ್ ಮಾಡಲು ಕ್ರಮ ತೆಗೆದುಕೊಂಡಿರುವುದು ಸರಿಯಷ್ಟೆ. ಇಲ್ಲೂ ಕೂಡ ಕೌನ್ಸಲಿಂಗ್‌ನಲ್ಲಿ ಕರಪ್‌ಶನ್ ನಡೆಯುತ್ತಿದೆ. ಇದನ್ನೂ ಕೂಡ ಅರ್ಥ ಮಾಡಿಕೊಳ್ಳಬೇಕಾಗಿದೆ. ಅದಕ್ಕೋಸ್ಕರ ನಾನು ಈ ವಿಚಾರವನ್ನು ಹೇಳುತ್ತಿರುವುದು. ಅಷ್ಟರಮಟ್ಟಿಗೆ ಕರಪ್‌ಶನ್ ಎನ್ನುವುದು ವಿದ್ಯಾ ಇಲಾಖೆಯಲ್ಲಿ ಬಂದುಬಿಟ್ಟಿದೆ. ಹೊಸ ಪೋಸ್ಟಿಂಗ್ಸ್ ಕೊಡಬೇಕಲ್ಲಾ ಕೌನ್ಸ್‌ಲಿಂಗ್ ಮುಖಾಂತರ ಅದಕ್ಕೋಸ್ಕರ ರಜಾ ಹಾಕಿದ್ದವರೆಲ್ಲಾ ಪುನಃ ವಾಪಸ್ಸು ಡ್ಯೂಟಿಗೆ ಬಂದುಬಿಟ್ಟಿದ್ದಾರೆ.

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಉಪಾಧ್ಯಕ್ಷರೆ, ನಾನು ಹೇಳಿದ್ದು ವರ್ಗಾವಣೆಯಲ್ಲಾದಂಥ ಭ್ರಷ್ಟಾಚಾರ. ಇನ್ನು ಪೋಸ್ಟಿಂಗ್ಸ್ ಕೊಡುವಂಥ ವಿಚಾರದ ಬಗ್ಗೆ ಹೇಳಬೇಕೆಂದರೆ ಹೈಸ್ಕೂಲ್‌ಗೆ ಇಂಗ್ಲೀಷ್ ಟೀಚರ್ಸ್, ಸೈನ್ಸ್ ಮತ್ತು ಮಾಥ್‌ಮಾಟಿಕ್ಸ್ ಟೀಚರ್ಸ್ ಬೇಕು. ಆದರೆ ಈಗಾಗಲೇ ಶಾಲೆಗಳು ಪ್ರಾರಂಭವಾಗಿ ಒಂದು ತಿಂಗಳು, 20 ದಿವಸಗಳಾಗಿದ್ದರೂ ಕೂಡ ಇವೊತ್ತು ಅನೇಕ ಶಾಲೆಗಳಲ್ಲಿ ಇಂಗ್ಲೀಷ್ ಟೀಚರ್ಸ್ ಇಲ್ಲ, ಸೈನ್ಸ್ ಟೀಚರ್ಸ್ ಇಲ್ಲ. ಮಾಥ್‌ಮಾಟಿಕ್ಸ್ ಟೀಚರ್ಸ್ ಇಲ್ಲ. ಯಾವುದೇ ಒಂದು ಸಬ್ಜೆಕ್ಟ್ ಕೂಡ ಪಾಠ ಮಾಡದೇ ಇದ್ದರೂ ಕೂಡ ನಮಗೆ ರಿಸಲ್ಟ್ ಬರುತ್ತದೆಯೇ? ರಿಸಲ್ಟ್ ಪಡೆಯಲು ಸಾಧ್ಯವೇ ಎನ್ನುವ ಬಗ್ಗೆ ಕೂಡ ತಾವು ಯೋಚನೆ ಮಾಡಬೇಕಾಗಿದೆ. ದಯಮಾಡಿ ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ವಿನಂತಿ ಮಾಡುತ್ತೇನೆ ಅವರು ಯಾವುದೇ ಹೈಸ್ಕೂಲ್ ಆಗಬಹುದು ಅಥವಾ ಪ್ರಿಯುನಿವರ್ಸಿಟಿ ಕಾಲೇಜ್ ಆಗಬಹುದು ಅಲ್ಲೆಲ್ಲಾ ಪ್ರತಿಯೊಂದು ಸಬ್ಜೆಕ್ಟಗೂ ಶಾಲೆಗಳು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಶಿಕ್ಷಕರನ್ನು ಅವರು ನಿಯೋಜನೆ ಮಾಡದೇ ಹೋದರೆ ನಮ್ಮ ಶಿಕ್ಷಣ ಸಾರ್ಥಕತೆಯನ್ನು ಪಡೆಯುವುದಿಲ್ಲ. ಅದು ಅವರ ಗುರಿಯನ್ನು ಮುಟ್ಟುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಮತ್ತೊಮ್ಮೆ

ತಮ್ಮ ಮುಖಾಂತರ ವಿನಂತಿ ಮಾಡುತ್ತೇನೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಮತ್ತು ಉನ್ನತ ಶಿಕ್ಷಣ ಸಚಿವರು ಇಬ್ಬರೂ ಕೂಡ ಬಹಳ ಮೇಧಾವಿಗಳಾಗಿದ್ದಾರೆ. ಅವರಿಬ್ಬರೂ ಕುಳಿತು ಇದರ ಬಗ್ಗೆ ಯೋಚನೆ ಮಾಡಿ ಒಂದು ತಜ್ಞರ ಸಮಿತಿಯನ್ನು ಮಾಡಿ ಆ ತಜ್ಞರ ಸಮಿತಿ ಕೊಡುವ ವರದಿಗಳನ್ನಾಧರಿಸಿ ಅವರುಗಳು ಕೊಟ್ಟಂಥ ವಿಚಾರಧಾರೆಗಳೇನಿರುತ್ತವೆ. ಆ ಪ್ರಕಾರವೇನಾದರೂ ಮುಂದುವರೆದರೆ ಈ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟಂತಾಗುತ್ತದೆ. ಅದನ್ನು ಬಿಟ್ಟು ಸುಮ್ಮನೆ ಕುಳಿತುಕೊಂಡು ಒಂದು ಸರ್ಕಾರ ಆದೇಶ ಮಾಡಿ ಸುಮಾರು 463 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದರಲ್ಲಿ ಅರ್ಥವಿರುವುದಿಲ್ಲ. ಸಾರ್ವಜನಿಕ ಶಿಕ್ಷಣಕ್ಕೋಸ್ಕರ ಇಷ್ಟು ಕೋಟಿ ರೂಪಾಯಿಗಳನ್ನು ಕೊಟ್ಟು ಈ ಸರ್ಕಾರ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟಿರುವಾಗ ಈ ರೀತಿ ನಾವು ಆಡಳಿತದಲ್ಲಿ ಹೆಚ್ಚು ಕಡಿಮೆ ಮಾಡಿದಾಗ ಇದು ಸಾರ್ಥಕವಾಗುವುದಿಲ್ಲ. ಮಾನ್ಯ ಅಧ್ಯಕ್ಷರೆ, ತಮ್ಮಲ್ಲಿ ಮತ್ತೊಂದು ವಿನಂತಿ ಏನೆಂದರೆ, ಈಗಾಗಲೇ ಅನೇಕರು ಅನುದಾನ ರಹಿತ ಮತ್ತು ಅನುದಾನ ಶಾಲೆಗಳನ್ನು ಪ್ರಾರಂಭ ಮಾಡಿದ್ದಾರೆ ಮತ್ತು ಈಗಾಗಲೇ ಅವರು ಸುಮಾರು 20 ವರ್ಷಗಳಿಂದ ಶಾಲೆಗಳನ್ನು ನಡೆಸುತ್ತಾ ಬಂದಿದ್ದಾರೆ. ಇವೊತ್ತು ಎಸ್.ಸಿ : ಎಸ್.ಟಿ ಮ್ಯಾನೇಜ್‌ಮೆಂಟ್ ಶಾಲೆಗಳು ಬಹಳ ಉತ್ತಮವಾಗಿ ನಡೆಯುತ್ತಿವೆ. ಅದು ಕನ್ನಡ ಮೀಡಿಯಂ ಇದೆ ಮತ್ತು ಇಂಗ್ಲೀಷ್ ಮೀಡಿಯಂ ಕೂಡ ಇದೆ. ಅಂಥ ಶಾಲೆಗಳಿಗೆ ಇವೊತ್ತು ಸರ್ಕಾರ ಅನುದಾನವನ್ನು ಕೊಟ್ಟಿಲ್ಲ. ಸರ್ಕಾರ ಯಾವಾಗ ಅನುದಾನವನ್ನು ಕೊಡುವುದಿಲ್ಲವೋ ಅದೇ ಕಾರಣಕ್ಕಾಗಿ ಅವರು ಫೀಸ್ ಜಾಸ್ತಿ ಮಾಡುತ್ತಾರೆ. ಈ ರೀತಿ ಫೀಸ್ ಜಾಸ್ತಿ ಮಾಡಿದಾಗ ಸಾರ್ವಜನಿಕರಿಗೆ ಹಾಗೂ ಬಡ ಮಕ್ಕಳಿಗೆ ತೊಂದರೆಯಾಗುತ್ತದೆ. ಆದುದರಿಂದ ಸರ್ಕಾರ ಇಂಥ ಎಸ್.ಸಿ:ಎಸ್.ಟಿ ಮ್ಯಾನೇಜ್‌ಮೆಂಟ್ ಶಾಲೆಗಳೇನಿವೆ ಇವುಗಳಿಗೆ ಅನುದಾನವನ್ನು ಕೊಡಲು ಪರಿಶೀಲನೆಯಲ್ಲಿ ಏನು ಇದೆ ಅದರ ಬಗ್ಗೆ ಬೇಗ ಕ್ರಮ ತೆಗೆದುಕೊಂಡು ಬೇಗನೆ ಅನುದಾನವನ್ನು ಕೊಟ್ಟರೆ ಸರ್ಕಾರ ಶಿಕ್ಷಣಕ್ಕೆ ಹೆಚ್ಚು ಒತ್ತು ಕೊಟ್ಟಂತಾಗುತ್ತದೆ ಮತ್ತು ಎಸ್.ಸಿ : ಎಸ್.ಟಿ ಬಂಧುಗಳ ಮಕ್ಕಳಿಗೆ ಈ ಸರ್ಕಾರ ನೇರವಾಗಿ ಅನುಕೂಲ ಮಾಡಿಕೊಟ್ಟಂತಾಗುತ್ತದೆ ಯಾದ ಕಾರಣ ದಯಮಾಡಿ ಮಾನ್ಯ ಸಚಿವರು ಈ ಬಗ್ಗೆ ಚಿಂತನೆ ಮಾಡಿ ಈ ಕೆಲಸವನ್ನು ಮಾಡಬೇಕೆಂದು ತಮ್ಮ ಮೂಲಕ ಅವರಿಗೆ ವಿನಂತಿ ಮಾಡುತ್ತೇನೆ. ಇನ್ನು ಟಿ.ಸಿ.ಹೆಚ್ ಕಾಲೇಜುಗಳನ್ನು ರಾಜ್ಯದ ಎಲ್ಲಾ ಕಡೆ, ಗ್ರಾಮಾಂತರ ಪ್ರದೇಶಗಳಲ್ಲಿ ಕೊಡುತ್ತೇವೆ ಎಂದು ಹೇಳಿದ್ದರು. 50 ಸಾವಿರ ರೂಪಾಯಿಗಳ ಡಿಡಿ ಯನ್ನು ತೆಗೆದುಕೊಂಡರು. ಈಗಾಗಲೇ ಎರಡು ವರ್ಷಗಳಾಯಿತು. ಎರಡೂ ವರ್ಷಗಳಾಗಿದ್ದರೂ ಅದರ ಬಗ್ಗೆ ಇನ್ನೂ ಚಕಾರವಿಲ್ಲ. ಮತ್ತು ಆ್ಯಕ್ಷನ್ ತೆಗೆದುಕೊಂಡಿಲ್ಲ. ದಯಮಾಡಿ ಟಿ.ಸಿ.ಹೆಚ್ ಶಾಲೆಗಳನ್ನು ಕೊಟ್ಟರೆ ಬಹಳ ಒಳ್ಳೆಯದು. ಕಾರಣ ಇವತ್ತು ಎಪ್ಪತ್ತು ಸಾವಿರದಿಂದ ಒಂದು ಲಕ್ಷ ರೂಪಾಯಿಯವರೆಗೆ ಟಿಸಿಹೆಚ್ ಕಾಲೇಜಿಗೆ ಡೊನೇಷನ್ ಕೊಡಬೇಕಾಗಿದೆ. ಹಳ್ಳಿಯಲ್ಲಿ ಮಕ್ಕಳು 70 ರಿಂದ 80 ಪರ್ಸೆಂಟ್‌ನವರೆಗೂ ಮಾರ್ಕ್ಸ್ ತೆಗೆದುಕೊಂಡರೆ ಸರ್ಕಾರದ ಸೀಟು ನಮಗೆ ಸಿಗುವುದಿಲ್ಲ. ಇಂತಹ ಪರಿಸ್ಥಿತಿ ಇದ್ದಾಗ ನಮ್ಮ ಹಳ್ಳಿಗಾಡಿನ ಮಕ್ಕಳಿಗೆ ಆಗಿರುವ ಅನಾನುಕೂಲಗಳನ್ನು ತಾವು ಕೂಡ ಚಿಂತನೆ ಮಾಡಬೇಕಾಗುತ್ತದೆ. ಟಿಸಿಹೆಚ್‌ಗೆ ಏನು ಪ್ರವೇಶವಕಾಶ ಮಾಡಿದ್ದಾರೆ ಸರ್ಕಾರ ಮುಕ್ತವಾಗಿ ಎಲ್ಲಾ ಟಿಸಿಪೆಚ್ ಸೀಟುಗಳನ್ನು ಫ್ರೀ ಆಗಿ ಕೊಡುವಂತಹ ವ್ಯವಸ್ಥೆಯಾದರೆ ಶಿಕ್ಷಣಕ್ಕೆ ಸರ್ಕಾರದವರು ಹೆಚ್ಚಿನ ಒತ್ತು ಕೊಟ್ಟ ಹಾಗೆ ಆಗುತ್ತದೆ ಮತ್ತು ಬಡ ವಿದ್ಯಾರ್ಥಿಗಳಿಗೆ ಇವೊತ್ತು ಶಿಕ್ಷಣ ಇಲಾಖೆಯಿಂದ ಸಿಗತಕ್ಕಂಥ ಸವಲತ್ತು ಎಲ್ಲಾ

ಸಿಗುತ್ತದೆನ್ನುವ ವಿಚಾರವನ್ನು ಗಮನಕ್ಕೆ ತರುತ್ತಾ, ಇವತ್ತು ಶಾಲಾ ಸಲಹಾ ಸಮಿತಿ ಎಂದು ಮಾಡಿದ್ದಾರೆ. ಇದು ಒಳ್ಳೆಯ ಡಿಸಿಷನ್. ಶಾಲಾ ಸಲಹಾ ಸಮಿತಿ ಕೆಲಸ ಮಾಡುತ್ತವೆ. ಹಾಗೂ ಅವುಗಳು ಸಭೆ ಸೇರಿ ತೀರ್ಮಾನ ಮಾಡುತ್ತಾರೆ. ಆ ಸಮಿತಿಗಳು ಇಂಗ್ಲೀಷ್, ಮಾಥಮ್ಯಾಟಿಕ್ಸ್ ಹಾಗೂ ಸೈನ್ಸ್ ಟೀಚರ್ ಇಲ್ಲವೆಂದು ಒಂದು ಲೆಟರ್ ಮಾಡಿ ಅದನ್ನು ಶಿಕ್ಷಣ ಸಚಿವರಿಗೆ, ಮಾನ್ಯ ಮುಖ್ಯಮಂತ್ರಿಗಳಿಗೆ ಹಾಗೂ ಡಿಡಿಪಿಐಗೂ ಸಹ ಕೊಡುತ್ತಾರೆ. ಅವರು ಏನು ಸಲಹೆ ಕೊಟ್ಟಿರುತ್ತಾರೆ, ಅದರ ಬಗ್ಗೆ ಯಾರೂ ಇವತ್ತಿನವರೆಗೂ ಉತ್ತರವನ್ನು ಕೇಳಿಲ್ಲ ಮತ್ತು ಅಲ್ಲಿ ಶಿಕ್ಷಕರನ್ನು ಪೋಸ್ಟ್ ಮಾಡಿಲ್ಲ. ಇವತ್ತು ನೂರಕ್ಕೆ ನೂರು ಆ ಸಲಹಾ ಸಮಿತಿಗಳು ಎಂದು ಮಾಡಿ ಸುಮ್ಮನೆ ಬುಕ್‌ನಲ್ಲಿ ಇಟ್ಟುಕೊಳ್ಳುವುದನ್ನು ಬಿಟ್ಟರೆ ಅವುಗಳ ಕೊಟ್ಟ ಸಲಹೆ ಪ್ರಕಾರ ಫುಲ್‌ಫಿಲ್ ಮಾಡುವಂತಹ ಕೆಲಸಕ್ಕೆ ಈ ಒಂದು ಇಲಾಖೆ ಹೋಗಿಲ್ಲ. ಅದನ್ನು ಸಹ ನಾನು ವಿನಂತಿ ಮಾಡುತ್ತೇನೆ. ಆ ಸಲಹಾ ಸಮಿತಿ ಏನು ಮಾಡಿದ್ದಾರೆ ಅವು ಏನು ಶಿಫಾರಸ್ಸು ಮಾಡುತ್ತೇನೆ. ಆ ಸಲಹಾ ಸಮಿತಿ ಏನು ಮಾಡಿದ್ದಾರೆ ಅವು ಏನು ಶಿಫಾರಸ್ಸು ಮಾಡುತ್ತದೆ? ಹಾಗೂ ಆ ಸಮಿತಿ ಮಾಡಿರುವುದು ಒಳ್ಳೆಯ ವಿಚಾರ. ಯಾರ ಮಕ್ಕಳು ಆ ಶಾಲೆಗೆ ಹೋಗುತ್ತಾರೆ, ಅವರ ತಂದೆತಾಯಿಗಳನ್ನು ಮೆಂಬರ್ಸ್ ಮಾಡಿ ಅಲ್ಲಿ ಒಬ್ಬರು ಅಧ್ಯಕ್ಷರನ್ನು ಮಾಡಿ ಮೀಟಿಂಗ್ ಕರೆದು, ಆ ಶಾಲೆ ಬಗ್ಗೆ ಹೆಚ್ಚಿನ ಕಾಳಜಿ ಬರುವ ರೀತಿಯಲ್ಲಿ ಮಾಡಿದ್ದಾರೆ. ಅದು ಸ್ವಾಗತ ಮಾಡುವಂತಹ ವಿಚಾರ. ಆದರೆ ಅವರು ಕೊಟ್ಟಂತಹ ಶಿಫಾರಸ್ಸುಗಳನ್ನು ಅವರು ಕೊಟ್ಟಂತಹ ಸಲಹೆಗಳನ್ನು ಸ್ವೀಕಾರ ಮಾಡದೆ ಅವುಗಳನ್ನು ಸುಮ್ಮನೆ ಪುಸ್ತಕದಲ್ಲಿ ಇಟ್ಟುಕೊಳ್ಳುವ ಸಾರ್ಥಕವಲ್ಲದ ವಿಚಾರಕ್ಕೆ ದಯಮಾಡಿ ಮಾನ್ಯ ಸಚಿವರು ಗಮನಿಸಬೇಕು. ಇನ್ನು ಇವತ್ತು ಎಲ್ಲಾ ಇಲಾಖೆಗಳಲ್ಲಿ ಕ್ವಾರ್ಟರ್ಸ್ ಇದೆ. ಅದು ಪಿಡಬ್ಲ್ಯೂಡಿ ಆಗಿರಬಹುದು, ಇಂಜಿನಿಯರಿಂಗ್ ಇಲಾಖೆ ಆಗಿರಬಹುದು, ಎಲ್ಲಾ ಇಲಾಖೆಗಳಲ್ಲಿ ತಾಲ್ಲೂಕು ಹೆಡ್ ಕ್ವಾರ್ಟರ್ಸ್‌ಗಳಲ್ಲಿ ಪಂಚಾಯತ್ ಹೆಡ್‌ಕ್ವಾರ್ಟರ್ಸ್‌ಗಳಲ್ಲಿ ಕ್ವಾರ್ಟರ್ಸ್‌ಗಳು ಇದೆ. ಸೆಕ್ರೆಟರಿಗಳಿಗೂ ಕೂಡ ಇದೆ. ಆದರೆ ಇವತ್ತು ಆಧುನಿಕವಾಗಿ ಶಿಕ್ಷಣವನ್ನು ಕೊಡುವಂತಹ ಕಾಲದಲ್ಲಿ, ಕೋಟ್ಯಾಂತರ ರೂಪಾಯಿ ಖರ್ಚು ಮಾಡುವಂತಹ ಕಾಲದಲ್ಲಿ ಸಮಯವನ್ನು ಕಾಪಾಡಿಕೊಳ್ಳುವಂತಹ ದೃಷ್ಟಿಯಿಂದ, ಯಾವುದೇ ಸರ್ಕಾರ ಇರಬಹುದು, ಆ ಶಿಕ್ಷಕರಿಗೆ ವಾಸದ ಗೃಹಗಳನ್ನು ಅಥವಾ ಕ್ವಾರ್ಟರ್ಸ್‌ಗಳನ್ನು ಕಟ್ಟಿಸಿಕೊಡುವ ಮುಖಾಂತರ ಅನುಕೂಲ ಮಾಡಿಕೊಡಬೇಕು. ಏಕೆಂದರೆ ಶಿಕ್ಷಕರು ಹತ್ತದಿನೈದು ಕಿಲೋಮೀಟರ್ ಬಸ್‌ನಲ್ಲಿ ಹೋಗಿಬರುವುದರಿಂದ ಅವರ ಮಾನಸಿಕಸ್ಥೈರ್ಯಕ್ಕೆ ಕುಂದು ಬರಬಾರದು. ಆದುದರಿಂದ ಶಿಕ್ಷಣದ ವಿಚಾರವಾಗಿ ಪ್ರತಿಯೊಂದು ಹಳ್ಳಿಯಲ್ಲಿ ಕೂಡ ಶಿಕ್ಷಕರಿಗೆ ಕ್ವಾರ್ಟರ್ಸ್ ಕಟ್ಟಿಸಿಕೊಟ್ಟರೆ ಶಿಕ್ಷಣ ಇನ್ನೂ ಯಶಸ್ವಿಯಾಗುತ್ತದೆ. ಅದನ್ನು ಕೂಡ ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ಶ್ರೀ ಹೆಚ್.ಎಸ್. ಮಹದೇವಪ್ರಸಾದ್ : ಮಾನ್ಯ ಉಪಾಧ್ಯಕ್ಷರೆ, ಅದರಲ್ಲೂ ಶೇಕಡ 50 ರಷ್ಟು ಮಹಿಳಾ ಶಿಕ್ಷಕರನ್ನು ನೇಮಕ ಮಾಡಿಕೊಂಡಿರುವುದರಿಂದ ಅವರುಗಳಿಗೆ ಹಳ್ಳಿಗೆ ಬಂದು ಹೋಗಬೇಕಾಗದರೆ ಬಹಳ ಸಮಸ್ಯೆಗಳು ಇದೆ. ಅದರ ಬಗ್ಗೆ ಒತ್ತು ಕೊಟ್ಟು ಗಮನ ಕೊಡಬೇಕು.

ಶ್ರೀ ಸಿ. ಚೆನ್ನಿಗಪ್ಪ : ಅದರ ಬಗ್ಗೆ ವಿಧಾನ ಮಂಡಲದ ವಿಷಯ ಸಮಿತಿಯವರೂ ಕೂಡ ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅವರೂ ಸಹ ಕ್ವಾರ್ಟರ್ಸ್ ಕೊಡಬೇಕೆಂದು ಪ್ರಸ್ತಾವನೆ ಮಾಡಿದ್ದಾರೆ. ಅದೇ ರೀತಿ ಮಹಿಳಾ ಶಿಕ್ಷಕರ ವರ್ಗಾವಣೆ ವಿಚಾರದಲ್ಲಿ ಹೇಳುವುದಾದರೆ

ಮೊನ್ನೆ ಬಿಇಎಲ್ ಫ್ಯಾಕ್ಟರಿ ಹತ್ತಿರ ನಾಗಶೆಟ್ಟಿಹಳ್ಳಿ ಎಂಬಲ್ಲಿ ಮಹಿಳಾ ಶಿಕ್ಷಕರು ಪರಸ್ಪರ ವರ್ಗಾವಣೆಗೆ ಅರ್ಜಿ ಕೊಟ್ಟರೆ ಅಲ್ಲಿ ಯಾರೋ ಹೆಡ್‌ಮಾಸ್ಟರ್ ಕಿತಾಪತಿ ಮಾಡಿದರು ಎಂದು ಹೇಳಿ ಅವರನ್ನು ಹೋಗಿ ಸಸ್ಪೆಂಡ್ ಮಾಡಿದ್ದಾರೆ. ನಾಗಶೆಟ್ಟಿಹಳ್ಳಿಯಲ್ಲಿ ಹೋದ ತಿಂಗಳಲ್ಲಿ ನಮಗೆ ಪರಸ್ಪರ ವರ್ಗಾವಣೆ ಮಾಡಿಕೊಡಿ ಎಂದು ಅರ್ಜಿ ಕೊಟ್ಟರೆ ಹೆಡ್‌ಮಾಸ್ಟರ್ ಕಿತಾಪತಿ ಮಾಡಿ ರಾಜಕೀಯ ಮಾಡಿ ಮಹಿಳಾ ಶಿಕ್ಷಕರ ಮೇಲೆ ಒತ್ತಡ ತಂದು ಬೇರೆ ರೀತಿ ರಾಜಕೀಯ ಬೆರಿಸಿ ಅವರನ್ನು ಸಸ್ಪೆಂಡ್ ಮಾಡಿ ಇವತ್ತು ಆರ್ಡರ್ ಕೊಟ್ಟಿದ್ದಾರೆ. ಯಾವುದೇ ತಪ್ಪು ಮಾಡದೆ ಇದ್ದರೂ ಕೂಡ ಇಂತಹ ಅನೇಕ ಘಟನೆಗಳು ಆಗಿರುವ ಕಾರಣ ಮಾನ್ಯ ಸಚಿವರು ಈ ಚಿಂತನೆಯಲ್ಲಿ ಬಾರಿ ಬುದ್ಧಿವಂತರು. ನಾನಂತೂ ನನ್ನ ಪರವಾಗಿ ಅವರನ್ನು ವಿನಂತಿ ಮಾಡುತ್ತೇನೆ, ನಮ್ಮ ಶಿಕ್ಷಣ ಇಲಾಖೆ ಅವರಿಂದ ಕಾಯಕಲ್ಪ ಕಾಣುತ್ತದೆ ಎಂದು ನಂಬಿಕೆ ಇದೆ. ದಯಮಾಡಿ ಅವರು ಅದನ್ನು ಮಾಡಬೇಕೆಂದು ಹೇಳುತ್ತಾ, ಈಗ ಉದಾಹರಣೆಗೆ ಇವತ್ತು ಹೈಸ್ಕೂಲ್ ಟೀಚರ್ ಅಪಾಯಿಂಟ್‌ಮೆಂಟ್ ಎಂದು ಮಾಡಿದ್ದಾರೆ. ಕ್ರಾಫ್ಟ್ ಟೀಚರ್ಸ್ ಹಿಂದಿ ಟೀಚರ್ಸ್ ಎಂದು ಹಿಂದಿ ಸಬ್ಜೆಕ್ಟ್ ಅನ್ನು ಏನು ಓದಿರುತ್ತಾರೆ, ವಿದ್ಯಾರ್ಥಿಗಳು ಆ ಭಾಷೆಯನ್ನು ಕಲಿಯಲೆಬೇಕು. ಆದರೆ ಎಲ್ಲೂ ಹಿಂದಿ ಟೀಚರ್ಸ್ ಇಲ್ಲ. ನೂರು ಶಾಲೆ ನೋಡಿದರೆ ಇವತ್ತು 20 ಶಾಲೆಯಲ್ಲಿ ಹಿಂದಿ ಟೀಚರ್‌ಗಳು ಇಲ್ಲ. ಎಷ್ಟರಮಟ್ಟಿಗೆ ಮಕ್ಕಳು ಪರೀಕ್ಷೆಯನ್ನು ಫೇಸ್ ಮಾಡುತ್ತಾರೆ? ಅವರಿಗೆ ಪರ್ಸೆಂಟೇಜ್ ಬರಬೇಕಾದರೆ ಇದರ ಮಾರ್ಕ್ಸ್ ಕೂಡ ಕೌಂಟ್ ಆಗುತ್ತದೆ. ಇಂತಹ ಒಂದು ಉತ್ತಮವಾದಂತಹ ರಾಷ್ಟ್ರೀಯ ಭಾಷೆಯನ್ನು ಇಂಟ್ರಡ್ಯೂಸ್ ಮಾಡಿ ಆ ಒಂದು ಸಬ್ಜೆಕ್ಟ್‌ಗೆ ಶಿಕ್ಷಕರು ಇಲ್ಲದೆ ಇದ್ದಾಗ ಮಕ್ಕಳಿಗೆ ಎಷ್ಟರಮಟ್ಟಿಗೆ ಕಲಿಕೆಗೆ ಅನುಕೂಲವಾಗುತ್ತದೆ ಎಂಬುದನ್ನು ಯೋಚನೆ ಮಾಡಬೇಕು ಆದುದರಿಂದ ಮಾನ್ಯ ಮಂತ್ರಿಗಳು ಎಲ್ಲಾ ಶಾಲೆಗಳಲ್ಲಿ ಹಿಂದಿ ಶಿಕ್ಷಕರನ್ನು ನೇಮಕ ಮಾಡಬೇಕೆಂದು, ಸಮಗ್ರ ಶಿಕ್ಷಣಕ್ಕೆ ನಾಂದಿ ಹಾಡಬೇಕೆಂದು ಹೇಳುತ್ತೇನೆ. ಇನ್ನು ಪಿ.ಟಿ ಶಿಕ್ಷಕರ ವಿಚಾರ ಸರ್ಕಾರಕ್ಕೆ ಬಿಟ್ಟಿದ್ದು, ಆ ಶಿಕ್ಷಕರನ್ನು ಎಲ್ಲಾ ಶಾಲೆಗಳಿಗೂ ಕೊಡಿ ಎಂದು ಹೇಳುವುದಕ್ಕಾಗುವುದಿಲ್ಲ. ಅದು ಸರ್ಕಾರದ ಆರ್ಥಿಕ ಪರಿಸ್ಥಿತಿ ಮೇಲೆ ಡಿಪೆಂಡ್ ಆಗುತ್ತದೆ. ಆದರೆ ಹಿಂದಿ ಶಿಕ್ಷಕರನ್ನು ಕಂಪಲ್ಸರಿಯಾಗಿ ಕೊಡಬೇಕು. ಇನ್ನು ಉರ್ದು ಶಾಲೆಗಳಿಗೆ ಅನೇಕ ಅರ್ಜಿಗಳು ಬಂದಿವೆ. ಮುಸ್ಲಿಂ ಬಾಂಧವರು ಉರ್ದು ಕಲೆಯಬೇಕಾದರೆ ಅವರು ಇರುವ ಕಡೆ ಉರ್ದು ಶಾಲೆಗಳಿಲ್ಲ. ಅನೇಕ ಅರ್ಜಿಗಳನ್ನು ಕೊಟ್ಟರೂ ಕೂಡ ಇವತ್ತು ಆ ಶಾಲೆಗಳನ್ನು ಪ್ರಾರಂಭ ಮಾಡಿಲ್ಲ. ಕೇಳಿದರೆ ಡಿಡಿಪಿಐ ರವರು, ಸರ್ಕಾರಕ್ಕೆ ಬರೆದಿದ್ದೇವೆ, ಪ್ರಸ್ತಾವನೆ ಬರಲಿ ಎಂದು ಹೇಳುತ್ತಾರೆ. ಆದರ ಬಗ್ಗೆ ಕೂಡ ನಾನು ಒತ್ತಾಯಿಸುತ್ತೇನೆ. ಎಲ್ಲೆಲ್ಲಿ ಮುಸ್ಲಿಂ ಬಾಂಧವರು ಇದ್ದಾರೆ, ಅಂತಹ ಕಡೆಗಳಲ್ಲಿ ಈ ಉರ್ದು ಶಾಲೆಗಳನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ಒತ್ತು ಕೊಡಬೇಕು ಮತ್ತು ಎಲ್ಲಿ ಕೆಲವು ಉರ್ದು ಶಾಲೆಗಳನ್ನು ಮಾಡಿದ್ದಾರೆ ಅಲ್ಲಿ ಉರ್ದು ಶಾಲಾ ಶಿಕ್ಷಕರನ್ನು ಅಪಾಯಿಂಟ್ ಮಾಡಿಲ್ಲ. ಆದರ ಬಗ್ಗೆ ಕೂಡ ಸರ್ಕಾರ ಪರಿಶೀಲನೆ ಮಾಡಬೇಕೆಂದು ಹೇಳುತ್ತಾ, ಟಿಸಿಹೆಚ್ ವಿಚಾರದಲ್ಲಿ ಟಿಸಿಹೆಚ್ ಕಾಲೇಜು ಓಪನ್ ಮಾಡುವುದಕ್ಕೆ ಸರ್ಕಾರ ಏನು ಹಣವನ್ನು ಕಟ್ಟಿಸಿಕೊಂಡಿದೆ, ಆದಕ್ಕೆ ಸರ್ಕಾರ ಅವಕಾಶ ಮಾಡಿಕೊಟ್ಟರೆ ಸ್ವಾಗತ ಮಾಡಬಹುದು. ಏನು ಇದರ ವಿಚಾರದಲ್ಲಿ 50 ಸಾವಿರ ರೂಪಾಯಿ ಡಿಡಿ ಕಟ್ಟಿಸಿಕೊಂಡಿದ್ದಾರೆ ಅದು ಮೂರ್‍ನಾಲ್ಕು ಕೋಟಿ ರೂಪಾಯಿ ಸರ್ಕಾರದಲ್ಲಿ ಇದೆ, ಎಂದು ಮಾನ್ಯ ಶಿಕ್ಷಣ ಸಚಿವರಲ್ಲಿ ಮನವಿ ಮಾಡುತ್ತಾ, ಇದೆ, ಅದನ್ನು ವಾಪಸ್ಸು ಕೊಡಬೇಕು. ಈ ಶಿಕ್ಷಣ ಇಲಾಖೆ ಬಹಳ

ದೊಡ್ಡದು, ಇದರ ಬಗ್ಗೆ ಮಾತನಾಡುವುದು ಬಹಳ ಇದೆ. ಇದು ಮೂಲಭೂತವಾದಂತಹ ವಿಚಾರ. ಈ ಟೀಚರ್‌ಗಳಿಗೆ ಪ್ರೊಮೋಷನ್ ಕೊಡುವಂತಹ ವಿಚಾರದಲ್ಲಿ ಸಿಇಟಿ ಟೈಪ್ ಎಗ್ಸಾಮ್ ಮಾಡಿ ಪ್ರಮೋಷನ್ ಕೊಡಬೇಕಾದರೆ ಹತ್ತು ಸಾವಿರ ರೂಪಾಯಿ ಕೊಡಿ ಪೋಸ್ಟಿಂಗ್ ಪ್ರಮೋಷನ್ ಕೊಡುತ್ತೇನೆ ಮತ್ತು ನೀವು ಕೇಳಿದ ಶಾಲೆಗೆ ಕೊಡುತ್ತೇನೆಂದು ಹೇಳಿದ್ದಾರೆ. ಇದನ್ನು ಮಾನ್ಯ ಸಚಿವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಲಂಚ ಎಂದು ಪ್ರಮೋಷನಲ್ಲಿ ಟ್ರಾನ್ಸ್‌ಫರ್‌ನಲ್ಲಿ ಹಾಗೂ ಡೆಪ್ಯೂಟೇಷನ್ ವಿಚಾರದಲ್ಲಿ ಮಾಡುತ್ತಿದ್ದಾರೆ ಅದು ನೂರಕ್ಕೆ ನೂರು ಸತ್ಯದ ವಿಚಾರ. ದಯಮಾಡಿ ಅಂತಹ ಡಿಡಿಪಿಐ ಅವರು ಆಗಬಹುದು ಸಂಬಂಧಪಟ್ಟ ಅಧಿಕಾರಿಗಳ ಬಗ್ಗೆ ಶಿಸ್ತಿನ ಕ್ರಮ ತೆಗೆದುಕೊಳ್ಳದೆ ಹೋದರೆ ಸರ್ಕಾರ ನಿಜವಾಗಲೂ ಲಂಚಕೋರತನಕ್ಕೆ ಶಾಮೀಲಾಗಿದೆ ಎಂದು ಹೇಳಬೇಕಾಗುತ್ತದೆ. ಮಾನ್ಯ ಸಚಿವರೆ, ಶಿಕ್ಷಕರಿಗೆ ಲಂಚ ಇಲ್ಲ ಎನ್ನುವುದು ಗೊತ್ತಾದರೆ ಮಾತ್ರ ಏನು ಪ್ರಜೆಗಳನ್ನು ತಯಾರು ಮಾಡುತ್ತಾರೆ ಅಂತಹವರು ಲಂಚ ಬೇಡ ಎನ್ನುವುದು ಮನಸ್ಸಿಗೆ ಬರುತ್ತದೆ. ಶಿಕ್ಷಣಕ್ಕೆ ಲಂಚ ಕೊಟ್ಟು ಈ ಮೇಷ್ಟ್ರಗಳು ಪಾಠ ಮಾಡಿದ್ದಾಗ ಲಂಚಕ್ಕೆ ನ್ಯಾಯ ದೊರಕಿಸಿ ಕೊಟ್ಟ ಹಾಗೆ ಆಗುತ್ತದೆ. ನಾನೂ ಒಬ್ಬ ಶಾಸಕನಾಗಿದ್ದೇನೆ, ನಾವು ಆ ಮಟ್ಟದಲ್ಲಿ ನಮ್ಮ ತಾಲ್ಲೂಕುಗಳಲ್ಲಿ ನಡೆದುಕೊಂಡಿಲ್ಲ. ಎಲ್ಲಾ ಇಲಾಖೆ ಅಧಿಕಾರಿಗಳು ಇದ್ದಾರೆ. ಬೇಕಾದರೆ ನಮ್ಮನ್ನು ಪರಿಶೀಲನೆ ಮಾಡಬಹುದು. ಆದರೆ ಇವತ್ತು ಮಧುಗಿರಿ ತಾಲ್ಲೂಕು ಇರಬಹುದು, ತುಮಕೂರು ಡಿಡಿಪಿಐ ಇರಬಹುದು ಆ ಕಚೇರಿಗಳಲ್ಲಿ ಇವತ್ತು ಬಹಳ ವ್ಯಾಪಕವಾಗಿ ಮಾನ್ಯ ಲಕ್ಷ್ಮೀನಾರಾಯಣ, ಶಾಸಕರು ಇದ್ದರು, ಅವರ ಮುಂದೆಯೇ ಇದರ ಬಗ್ಗೆ ಪ್ರಸ್ತಾಪವಾಯಿತು. ಅದರ ಬಗ್ಗೆ ಪರಿಶೀಲನೆಯಾಗಬೇಕು. ಇನ್ನು ಮುಂದೆ ಇಂತಹ ಒಂದು ಸಿಇಟಿ ಎಗ್ಸಾಮ್‌ಗಳನ್ನು ಮಾಡುವಂತಹ ವಿಚಾರದಲ್ಲಿ, ಟ್ರಾನ್ಸ್‌ಫರ್, ಡೆಪ್ಯೂಟೇಷನ್ ವಿಚಾರದಲ್ಲಿ ಲಂಚ ಎನ್ನುವುದು ಬರಬಾರದು. ಅದನ್ನು ನಿಲ್ಲಿಸದೆ ಹೋದರೆ ಈ ಸರ್ಕಾರ ನಿಜವಾಗಲೂ ಈ ಇಲಾಖೆಯನ್ನು ನಡೆಸಿದರೂ ಸಾರ್ಥಕವಿಲ್ಲ. ಇದು ಜನ ವಿರೋಧಿ ಸರ್ಕಾರವಾಗುತ್ತದೆ, ಜನಪರ ಸರ್ಕಾರವಾಗುವುದಿಲ್ಲವೆಂದು ತಿಳಿಸುತ್ತಾ ಇನ್ನು ಮುಂದೆ ಕೃಷಿ ಇಲಾಖೆ ಬಗ್ಗೆ ಹೇಳುವುದಾದರೆ, ಇವತ್ತು ನುಸಿ ರೋಗದ ವಿಚಾರ ಎಲ್ಲರಿಗೂ ಗೊತ್ತಿರುವ ವಿಷಯ. ಇವತ್ತು ಬೆಳಿಗ್ಗೆ ಎದ್ದು ತೋಟಕ್ಕೆ ಹೋಗಿ ಕೆಲಸ ಮಾಡಿ ಬರುವಂತಹ ಶಾಸಕರು 90 ಪರ್ಸೆಂಟ್ ಇದ್ದೇವೆ. ಸರ್ಕಾರ 48 ಕೋಟಿ ರೂಪಾಯಿ ಇವತ್ತು ಈ ನುಸಿ ರೋಗಕ್ಕೆ ಖರ್ಚು ಮಾಡಿತು. ಅದು ಯಾವ ಪ್ರಯೋಜನಕ್ಕೂ ಬರಲಿಲ್ಲ. ಔಷಧವನ್ನು ನಮ್ಮ ತೋಟದ ಮರಗಳಿಗೆ ಯೂಸ್ ಮಾಡಿ ಇವತ್ತು ಆ ಮರಗಳು ಸಾಯುತ್ತಿವೆ ಹಾಗೂ ಗರಿಗಳು ಕೆಂಪು ಬಣ್ಣಕ್ಕೆ ತಿರುಗಿ ಉದುರುತ್ತಿವೆ. ಇವತ್ತು ನಮಗೆ ಆಗಿರುವಂತಹ ಅನ್ಯಾಯಕ್ಕೆ ಸರ್ಕಾರ ಮಧ್ಯಪ್ರವೇಶ ಮಾಡಿ ರೈತರಿಗೆ ಕಾಂಪೆನ್ಸೇಷನ್ ಕೊಡುವುದಕ್ಕೆ ಮುಂದಾಗಬೇಕು. ಇಲ್ಲದೆ ಇದ್ದರೆ ಈಗ ರೈತರೇನು 300 ಜನ ನೇಣು ಹಾಕಿಕೊಂಡಿದ್ದಾರೆ ಇನ್ನು 30,000 ಜನ ಸಾಯುವಂತಹ ಮಟ್ಟಕ್ಕೆ ಬರುತ್ತದೆ. ದಯಮಾಡಿ ಕೃಷಿ ಇಲಾಖೆಯಲ್ಲಿ ಏನು ಸರ್ಕಾರ ಆಧುನೀಕರಣಕ್ಕೆ ಹಣ ಖರ್ಚು ಮಾಡುತ್ತದೆ, ರೈತರ ಕ್ಷೇಮಾಭಿವೃದ್ಧಿ ನೋಡುತ್ತೇವೆ ಎಂದು ಹೇಳುತ್ತಿದೆ, ಆ ಪ್ರಕಾರ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಹೆಚ್ಚಿನ ಒತ್ತು ಕೊಟ್ಟು ತೆಂಗಿನ ಮರಕ್ಕೆ ಬಂದಿರುವಂತಹ ನುಸಿರೋಗದ ಬಗ್ಗೆಯಾಗಲಿ ಅಥವಾ ಅಡಿಕೆ ಮರಕ್ಕೆ ಆಗಲಿ, ಮತ್ತು ಕೃಷಿಯೇತರ ಚಟುವಟಿಕೆಗಳಿಗಾಗಲಿ ಆಗಿರುವಂತಹ ಅನ್ಯಾಯವನ್ನು ಸರಿಪಡಿಸಬೇಕಾಗಿದೆ. ಈ ಸರ್ಕಾರ ಅದಕ್ಕೆ ಹೆಚ್ಚಿಗೆ ಒತ್ತು ಕೊಡುತ್ತಿಲ್ಲ. ಮಾನ್ಯ ಶಾಸಕರು ಇಷ್ಟೆಲ್ಲಾ ವಿನಂತಿ ಮಾಡಿದರೂ

ಕೂಡ ಇದರ ಬಗ್ಗೆ ವ್ಯಾಪಕ ಚರ್ಚೆ ಆದರೂ ಕೂಡ ಇದರ ಬಗ್ಗೆ ಯಾವುದೇ ಕಾರ್ಯಕ್ರಮವನ್ನು ಹಮ್ಮಿಕೊಂಡಿಲ್ಲ. ಅದನ್ನು ಸರ್ಕಾರ ಮಾಡಬೇಕು. ಇನ್ನು ಇವತ್ತು ರೇಷ್ಮೆ ಇಲಾಖೆ ವಿಚಾರದಲ್ಲಿ ಮೊನ್ನೆ ಕೂಡ ಮಾನ್ಯ ಮುಖ್ಯಮಂತ್ರಿಗಳು ದೆಹಲಿಗೆ ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿ ಮಾನ್ಯ ಪ್ರಧಾನಮಂತ್ರಿಗಳನ್ನು ಭೇಟಿ ಮಾಡಿದಾಗ ಅವರೂ ಕೂಡ ಹೇಳಿದರು.

4.20 ಪಿಎಂ

ಅವರೂ ಕೂಡ ಹೇಳಿದರು 60 ರೂಪಾಯಿಗಳು ಕೆ.ಜಿ.ಗೆ ಖರ್ಚಾಗುತ್ತದೆ, ಗೂಡು ಬೆಳೆಯುವುದಕ್ಕೆ ನಾವು ಬೆಳೆಯುವವರಿಗೆ ಶೇಕಡಾ 50ರಷ್ಟು ಹಣವನ್ನು ಕೊಡುತ್ತೇವೆ, ಒಂದು ಕೆ.ಜಿ.ಗೆ 120 ರೂಪಾಯಿಗಳನ್ನು ಮಾಡುತ್ತೇವೆಂದು ಸರ್ಕಾರ ಹೇಳಿದರೂ ಕೂಡ ಈ ಸರ್ಕಾರ ಇದುವರೆಗೂ ಇದರ ಬಗ್ಗೆ ಉತ್ತರವನ್ನು ಕೊಟ್ಟಿಲ್ಲ ಸರ್ಕಾರದವರು ನಾವು ಉತ್ತರ ಕೊಡುತ್ತೇವೆಂದು ಹೇಳಿಲ್ಲ. ದಯಮಾಡಿ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ಈ ರೈತರು ಬೆಳೆಯುವಂತಹ ಕಾಫಿ ಬೆಳೆ ಆಗಬಹುದು, ಅಡಿಕೆ ಆಗಬಹುದು, ತೆಂಗು ಆಗಬಹುದು, ಅಥವಾ ಯಾವುದೇ ರೈತರು ಬೆಳೆಯುವಂತಹ ಬೆಳೆಯಾಗಬಹುದು, ಅದಕ್ಕೆ ಸರ್ಕಾರ ಬೆಂಬಲ ಬೆಲೆಯನ್ನು ಕೊಟ್ಟು ರೈತರಿಗೆ ಸರ್ಕಾರ ಸಹಕಾರ ಮಾಡಬೇಕೆಂದು ಹೇಳಿ, ಇನ್ನು ಬಜೆಟ್‌ನಲ್ಲಿ ಹೆಚ್ಚಿಗೆ ಹಣವನ್ನು ಇಡಬೇಕೆಂದು ಸರ್ಕಾರಕ್ಕೆ ತಮ್ಮ ಮೂಲಕ ಒತ್ತಾಯ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಚನ್ನಿಗಪ್ಪನವರು ಒಂದು ಸೆಂಚುರಿಯನ್ನು ಬಾರಿಸಿದರು, ಇದನ್ನು ತಾವು ಗಮನ ಹರಿಸಿದರೋ, ಇಲ್ಲವೋ, ಗೊತ್ತಿಲ್ಲ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಚನ್ನಿಗಪ್ಪನವರು ನಿಮ್ಮ ಸಹಸ್ರನಾಮ ಮಾಡಿದ್ದಾರೆ. ಮಾನ್ಯ ಉಪಾಧ್ಯಕ್ಷರೇ, ಎಂದು ಹೇಳಿದರು, ನಾವು ಅದನ್ನು ನೂರ ಹನ್ನೆರಡು ಸಲ ಲೆಕ್ಕ ಹಾಕುತ್ತಿದ್ದೆವು, ನಿಮ್ಮ ಬಗ್ಗೆ ಅವರಿಗೆ ಅಷ್ಟು ಗೌರವವಿದೆ.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಉಪಾಧ್ಯಕ್ಷರೇ, ಗೌರವ ಕೊಡುವಂಥಾದ್ದು ನಮ್ಮ ಸಂಪ್ರದಾಯ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ (ಬೀರೂರು) : ಮಾನ್ಯ ಉಪಾಧ್ಯಕ್ಷರೇ, ಈ ಇಲಾಖೆಗಳಿಗೆ ಸಂಬಂಧಪಟ್ಟ ಹಾಗೆ ಆಯವ್ಯಯದಲ್ಲಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ಎರಡು ವಿಷಯಗಳನ್ನು ಮಾತ್ರ ಚರ್ಚೆ ಮಾಡಲಿಚ್ಛಿಸುತ್ತೇನೆ. ಈ ಸರ್ಕಾರದ ಹೆಮ್ಮೆಯ ಯೋಜನೆ ಎಂದರೆ ವಸತಿ ಯೋಜನೆಯಾಗಿದೆ, ಇದು ಪರಿಪೂರ್ಣಮಟ್ಟದಲ್ಲಿ ಇವತ್ತಿನ ದಿನಸ ಈ ವಸತಿ ಇಲಾಖೆಯ ಯೋಜನೆ ಪೂರ್ಣ ಮಟ್ಟದಲ್ಲಿ ಫಲಕಾರಿಯಾಗಿಲ್ಲ, ಫೆಲ್ಯೂರ್ ಆಗಿದೆ, ಎನ್ನುವಂತಹ ಮಾತನ್ನು ಹೇಳುತ್ತೇನೆ. ಇದಕ್ಕೆ ಕಾರಣವನ್ನು ಹೊಸದಾಗಿ ಸಚಿವರು ಆಗಿರುವವರು ಹುಡುಕಬೇಕಾಗುತ್ತದೆ, ಹಿಂದೆ ಆಗಿರುವಂಥಾದ್ದನ್ನು ಇಲ್ಲಿ ಅವರು ಹೇಳಬೇಕಾಗುತ್ತದೆ. ಈ ಆಯವ್ಯಯದಲ್ಲಿ ಒಂದು ರಿಪೋರ್ಟ್ ಅನ್ನು ವಸತಿ ಇಲಾಖೆಯಿಂದ ಕೊಟ್ಟಿದ್ದಾರೆ, ನಾನು ಒಂದೇ ಒಂದು ಉದಾಹರಣೆಯನ್ನು ಹೇಳುವುದಾದರೆ 2001-02ನೇ ಸಾಲಿನಲ್ಲಿ ಆಶ್ರಯ ಮನೆಯದು ಗುರಿ ಇದ್ದಂಥಾದ್ದು 1,14,928 ಮನೆಗಳನ್ನು ಕಟ್ಟಬೇಕಾಗಿತ್ತು, ಆದರೆ 12,292 ಮನೆಗಳನ್ನು

ಮಾತ್ರ ಪೂರ್ಣ ಮಾಡಿದ್ದಾರೆ, ವಿವಿಧ ಹಂತದಲ್ಲಿರುವಂಥಾದ್ದು 49,953 ಮನೆಗಳು, ಅಂದರೆ ಮೂರನೆ ಎರಡು ಭಾಗದಷ್ಟು ಕಡಿಮೆಯಾಗಿ 52,701 ಮನೆಗಳನ್ನು ಇನ್ನು ಪ್ರಾರಂಭವೇ ಮಾಡಿಲ್ಲ. ಇದಕ್ಕೆ ಕಾರಣವೇನು ಎಂಬುದನ್ನು ನಾವು ಈ ಯೋಜನೆಯಲ್ಲಿ ಹುಡುಕುವಂತಹ ಅಗತ್ಯತೆ ಇದೆ. ಇದಕ್ಕೆ ಕಾರಣ "ಸೆಲೆಕ್ಷನ್ ಕಮಿಟಿ" ಎಂದು ಮಾಡಿರುವಂಥಾದ್ದು ಒಂದು ಮೂಲಭೂತ ಕಾರಣವಾಗಿದೆ, ಇಲ್ಲಿ ಅಧ್ಯಕ್ಷರು ಒಂದು ಕಡೆಯವರು ಆಶ್ರಯ ಕಮಿಟಿಯ ಸದಸ್ಯರು ಒಂದು ಕಡೆಯವರು, ಇಲ್ಲಿ ಒಬ್ಬರಿಗೊಬ್ಬರಿಗೆ ಸಹಿತ ತಾಳಮೇಳವಿಲ್ಲದಂಥಾದ್ದು, ಪರಿಸ್ಥಿತಿ ಇದೆ, ಇದು ಮೊದಲನೆಯ ಕಾರಣವಾದರೆ, ಇನ್ನೊಂದು ಕಾರಣವೆನೆಂದರೆ ವಸತಿ ಸಚಿವರು ನಮ್ಮ ಜಿಲ್ಲೆಯವರೇ, ಆಗಿದ್ದಾರೆ. ಇಲ್ಲಿ ಕೆ.ಡಿ.ಪಿ ಮೀಟಿಂಗ್‌ನಲ್ಲೂ ವಿಷಯ ಪ್ರಸ್ತಾಪ ಮಾಡಿದ್ದಾರೆ, ಇದಕ್ಕೆ ಫಲಾನುಭವಿಗಳನ್ನು ಆಯ್ಕೆ ಮಾಡಬೇಕಾದರೆ ಗ್ರಾಮಸಭೆಯಿಂದ ಆಯ್ಕೆಯಾಗಿ ಬಂದಿರಬೇಕೆಂದು ಇದೆ. ಈ ರೀತಿ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಇವತ್ತಿನವರೆಗೂ ಚಿಕ್ಕಮಗಳೂರು ಜಿಲ್ಲೆಯಲ್ಲಿ ಯಾವುದೇ ಕ್ಷೇತ್ರದಲ್ಲೂ ಕೊಟ್ಟಿಲ್ಲವೆಂಬುದನ್ನು ಮಾನ್ಯ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ, ಆ ರೀತಿ ಏನಾದರೂ ಕೊಟ್ಟಿದ್ದರೂ ಸಹಿತ ನಾಲ್ಕೈದು ವರ್ಷಗಳ ಹಿಂದಿನ ಪಟ್ಟಿಯನ್ನೇ ಕೊಟ್ಟಿದ್ದಾರೆಯೇ, ಹೊರತು ಈಗ ಇರುವಂತಹ ಅರ್ಹ ಫಲಾನುಭವಿಗಳ ಪಟ್ಟಿಯನ್ನು ಇವತ್ತಿನವರೆಗೂ ಕೊಟ್ಟಿಲ್ಲ, ಸೆಲೆಕ್ಷನ್ ಅನ್ನು ಯಾವ ರೀತಿಯಾಗಿ ಮಾಡಬೇಕೆಂಬುದರ ಬಗ್ಗೆ ಚಿಂತನೆಯನ್ನು ಮಾಡಬೇಕಾಗುತ್ತದೆ. ಈ ಪಟ್ಟಿ ಇಲ್ಲದೇ ನಾವು ಏನಾದರೂ ಆಯ್ಕೆ ಮಾಡಿ ಕೊಟ್ಟರೆ, ಪುನಃ ನಾವು ಅದನ್ನು ಗ್ರಾಮ ಪಂಚಾಯತ್‌ಗೆ ಕಳುಹಿಸಬೇಕಾಗುತ್ತದೆ, ಇಲ್ಲಿ ಸೆಲೆಕ್ಷನ್ ಅನ್ನು ಆಶ್ರಯ ಕಮಿಟಿಯವರು ಮಾಡಿದ್ದಾರೆ, ನಾವು ಅದಕ್ಕೆ ಲೈಸನ್ಸ್ ಕೊಡುವುದಿಲ್ಲವೆಂದು ಇವತ್ತಿನ ದಿವಸ ಲೈಸನ್ಸ್ ಕೊಡದೇ ಎಂಡಾರ್ಸ್‌ಮೆಂಟ್ ಕೊಡುತ್ತಿದ್ದಾರೆ. ಅವರ ತಾಲ್ಲೂಕಿನ ಕಳಾಸಪುರ ಉದಾಹರಣೆ ಇದೆ, ನಾವು ಇಪ್ಪತ್ತು ಮನೆಗಳನ್ನು ಮಂಜೂರು ಮಾಡಿಕೊಟ್ಟರೆ, ಇವತ್ತಿನ ದಿವಸ ಅವರು 19 ಮನೆಗಳಿಗೆ ಎಂಡಾರ್ಸ್‌ಮೆಂಟ್ ಕೊಡುತ್ತಾರೆ, ಇದಕ್ಕೆ ನಾವು ಲೈಸನ್ಸ್ ಕೊಡುವುದಕ್ಕಾಗುವುದಿಲ್ಲ, ಏಕೆಂದರೆ ಇದು ಗ್ರಾಮ ಪಂಚಾಯತ್‌ನಲ್ಲಿ ಮಾಡಿರುವಂತಹ ರೆಸಲ್ಯೂಷನ್ ಅನ್ನೇ ನೀವು ಒಪ್ಪಬೇಕೆನ್ನುವಂತಹ ಮಟ್ಟಕ್ಕೆ ಬಂದಿರುವಂಥಾದ್ದು, ಇದರಿಂದ ಇದು ಕುಂಠಿತ ಆಗುತ್ತಿರುವಂತಹ ವಿಷಯವನ್ನು ಮಾನ್ಯ ಮಂತ್ರಿಯವರ ಗಮನಕ್ಕೆ ತರುತ್ತೇನೆ, ಮತ್ತೊಂದು ವಿಚಾರವೆನೆಂದರೆ ಈ ಆಶ್ರಯ ಮನೆಗಳಿಗೆ ಫಲಾನುಭವಿಗಳು ಹಣವನ್ನು ತೆಗೆದುಕೊಳ್ಳುವಂಥಾದ್ದರಲ್ಲಿ ಒಂದು ದೊಡ್ಡ ಸಮಸ್ಯೆಯಾಗಿದೆ. ಇವರು ಬಹಳಷ್ಟು ಧೈರ್ಯವಾಗಿ ಹೇಳಿದರು, ನಾವು ಚೆಕ್ಕನ್ನು ಕೊಡುತ್ತೇವೆ, ಚೆಕ್ ವಿತರಣೆ ಮಾಡುತ್ತೇವೆಂದು ಹೇಳಿದ್ದಾರೆ. ಇವರು 10 ಸಾವಿರ ರೂಪಾಯಿಗಳ ಚೆಕ್ಕನ್ನು ಕೊಡುವ ಮೊದಲು ಒಂದು ಸಾವಿರ ರೂಪಾಯಿಗಳನ್ನು ಕೊಟ್ಟರೆ, ಅಲ್ಲಿ 10 ಸಾವಿರ ರೂಪಾಯಿಗಳ ಚೆಕ್ಕನ್ನು ಕೊಡುವುದು, ಇಲ್ಲದಿದ್ದರೆ ಯಾರೂ ಸಹಿತ 10 ಸಾವಿರ ರೂಪಾಯಿಗಳ ಚೆಕ್ಕನ್ನು ಕೊಡುವುದಿಲ್ಲ, ನಾವು ಒಂದು ಸಾವಿರ ರೂಪಾಯಿಗಳನ್ನು ಕೊಟ್ಟಮೇಲೆ 10 ಸಾವಿರ ರೂಪಾಯಿಗಳ ಚೆಕ್ಕನ್ನು ಇಷ್ಯೂ ಮಾಡುತ್ತಾನೆ, ಇಲ್ಲದಿದ್ದರೆ ಚೆಕ್ ಸಮೇತ ಬ್ಯಾಂಕಿಗೆ ಹೋಗಿ ಫಲಾನುಭವಿಗಳು ಒಂದು ಸಾವಿರ ರೂಪಾಯಿಗಳನ್ನು ವಾಪಸ್ಸು ತೆಗೆದುಕೊಂಡು ಬರುತ್ತಿರುವಂಥಾದ್ದು ಎಲ್ಲಾ ಕಡೆಗಳಲ್ಲೂ ನಡೆಯುತ್ತಿರುವಂಥಾದ್ದು, ಇದನ್ನೂ ಸಹ ಸರ್ಕಾರದ ಗಮನಕ್ಕೆ ತರುತ್ತೇನೆ.

ಶ್ರೀ ಕರಿಯಣ್ಣ : ತಾವು ಎಲ್ಲಾ ಕಡೆಗಳಲ್ಲಿ ಎಂದು ಹೇಳಬೇಡಿ, ನಮ್ಮ ಕಡೆ ಚೆನ್ನಾಗಿ ನಡೆಯುತ್ತಿದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಇದು ಏನಾಗಿ ನೆ ಎಂದರೆ ನಿಮ್ಮ ಬೆನ್ನು ನಿಮಗೆ ಕಾಣುತ್ತಾ ಇಲ್ಲ. ಬೇರೆ ಯಾರಾದರೂ ತೋರಿಸಬೇಕು. ಇದು ಇ.ಇ.ಒ. ಆಫೀಸ್‌ಗಳಲ್ಲೂ ನಡೆಯುತ್ತಿದೆ.

ಶ್ರೀ ಕರಿಯಣ್ಣ : ತಾವು ಎಲ್ಲಾ ಎಂದು ಏಕೆ ಹೇಳುತ್ತಿದ್ದೀರಿ, ನಾವು ಚೆಕ್ ಕೊಟ್ಟು ಬ್ಯಾಂಕ್‌ಗೆ ಕಳುಹಿಸುತ್ತಿದ್ದೇವೆ, ಇದು ಸುಳ್ಳು, ನಿಮ್ಮ ಕಡೆ ಎಲ್ಲಾದರೂ ಇದ್ದರೆ ಹೇಳಿಕೊಳ್ಳಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಉಪಾಧ್ಯಕ್ಷರೇ, ಆಯಿತು, ಬಿಡಿ, ಇದರ ಬಗ್ಗೆ ನಾನು ತಲೆ ಕೆಡಿಸಿಕೊಳ್ಳುವುದಿಲ್ಲ, ಮತ್ತೆ ಇದಕ್ಕೆ ಬಿಲ್ ಬರೆಯುವಂಥ ವಿಚಾರಕ್ಕೆ ತಾಲ್ಲೂಕು ಪಂಚಾಯತ್‌ನ ಇಂಜಿನಿಯರ್ ಹೋಗಬೇಕು, ಜೊತೆಯಲ್ಲಿ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿ ಈ ಇಬ್ಬರೂ ಸೇರಿಕೊಂಡು ಕೆಲಸವನ್ನು ಮಾಡಬೇಕು. ನಾವು ಈ ವಿಚಾರವಾಗಿ ಆಪಾದನೆಗಳನ್ನು ಮಾಡಿದ್ದೇವೆ, ಈ ತಾಲ್ಲೂಕು ಪಂಚಾಯತ್‌ನ ಇಂಜಿನಿಯರ್ ಯಾರಿದ್ದಾರೆ, ಅವರು ಆಶ್ರಯ ಮನೆಯ ಬಗ್ಗೆ ಬಿಲ್ ಮಾಡಲು ಹೋಗಬೇಕಾದರೆ ಅವರನ್ನು ಕಾರು ಮಾಡಿಕೊಂಡು ಕರೆದುಕೊಂಡು ಹೋಗಬೇಕು. ಇದು ಏಕೆ ಕುಂಠಿತವಾಗುತ್ತಿದೆ ಎನ್ನುವುದಕ್ಕೆ ಹೇಳುವಂಥಾದ್ದು, ಇಲ್ಲಿ ಆಪಾದನೆ ಎನ್ನುವ ಮಾತುಗಳು ಬೇಕಾಗಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ಇಲ್ಲಿ ಮಾನ್ಯ ಸದಸ್ಯರು ಮಾತನಾಡುತ್ತಿದ್ದಾರೆ, ಅವರು ಕೆಲವು ವಿಚಾರಗಳನ್ನು ಆಪಾದನೆ ಮಾಡುವಂಥಾದ್ದು ಗುರುತರವಾದಂತಹ ಆಪಾದನೆಯನ್ನು ಮಾಡಲಿ, ಅದಕ್ಕೆ ಸರ್ಕಾರ ಇದೆ, ಅದು ತನಿಖೆ ನಡೆಸುವಂತಹ ಹಂತವಿರಬಹುದು, ಅಥವಾ ಅಧಿಕಾರಿಗಳ ಮೇಲೆ ಕಾನೂನಿನ ಕ್ರಮ ಜರುಗಿಸುವಂಥಾದ್ದು ಇರಬಹುದು. ತಾವು ಸಭೆಯಲ್ಲಿ ಕುಳಿತು ನಿರ್ಣಯ ಮಾಡಿದ ನಂತರ ಮನೆಗಳ ಪ್ರಗತಿ ಬಗ್ಗೆ ಗ್ರಾಮ ಪಂಚಾಯತ್‌ನ ಕಾರ್ಯದರ್ಶಿಯ ವರದಿಯ ಆಧಾರದ ಮೇಲೆ ಚೆಕ್ ವಿತರಣೆ ಮಾಡುವಂಥಾದ್ದು, ಇದನ್ನು ಮೂರು ಹಂತದಲ್ಲಿ ಕೊಡುವಂತಹ ವ್ಯವಸ್ಥೆ ಇದೆ. ಈ ಒಂದು ವ್ಯವಸ್ಥೆಯಲ್ಲಿ ಇಂತಹ ಯಾವುದಾದರೂ ಕಾರಣ ಇದ್ದಾವೆಂದು ನಿರ್ದಿಷ್ಟವಾಗಿ ಹೇಳಿದರೆ, ಸರ್ಕಾರವೂ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ, ಮತ್ತೆ ಇದರ ಬಗ್ಗೆ ಕ್ರಮ ಜರುಗಿಸುವಂಥಾದ್ದರ ಬಗ್ಗೆಯೂ ಸಹ ನಮಗೆ ಸಾಧ್ಯವಾಗುತ್ತದೆಂಬ ವಿಚಾರವನ್ನು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸಬಯುಸುತ್ತೇನೆ.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಉಪಾಧ್ಯಕ್ಷರೇ, ನನ್ನ ತಾಲ್ಲೂಕಿನಲ್ಲಿ ಆಶ್ರಯ ಮನೆ ಕೊಟ್ಟಿದ್ದರು, ಅಂಗನವಾಡಿಯ ಕಟ್ಟಡವನ್ನು ಕಾರ್ಯದರ್ಶಿಯವರು ಇದನ್ನು ಮೊಲ್ಡಿಂಗ್ ಲೆವಲ್‌ಗೆ ಬಂದಿದೆ ಎಂದು ಬರೆದುಕೊಂಡು ಬಿಲ್ ಹಣವನ್ನು ತೆಗೆದುಕೊಂಡರು, ಇದು ಸಾಬೀತು ಆಯಿತು, ಕೊನೆಗೆ ಅವರು ಬಂದು ಅಪಾಲಜಿಯನ್ನು ಕೇಳಿದ ಮೇಲೆ, ಇನ್ನು ಮುಂದೆ ಈ ರೀತಿಯಾಗಿ ಮಾಡಬೇಡಿ ಎಂದು ಹೇಳಿದೆವು, ನಾನು ಇದನ್ನು ಮಾನ್ಯ ಸಚಿವರ ಗಮನಕ್ಕೆ ತರುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ : ನಾನು ಮೊನ್ನೆ ಮಾತನಾಡುವಂತಹ ಸಂದರ್ಭದಲ್ಲಿ ಇದನ್ನು ಯಾವುದಾದರೂ ಏಜೆನ್ಸಿಯ ಮೂಲಕ ಕಟ್ಟಿ ಎಂದು ಹೇಳಿದೆ, ನಾನು ನನ್ನ ತಾಲ್ಲೂಕಿನ

ವಿಚಾರವನ್ನು ಹೇಳುತ್ತೇನೆ. ಒಬ್ಬ ಪದವೀಧರನಾಗಿರುವವನು, ಅವನ ನಡುವೆ ಯಾರೋ ಕಟ್ಟಿರುತ್ತಾರೆ. ಅವನ ಹೆಬ್ಬೆಟ್ಟು ಒತ್ತಿ ಚೆಕ್ ತೆಗೆದುಕೊಂಡಿದ್ದರು ಇಂತಹ ವಿಷಯಗಳು ರಾಜ್ಯದ ತುಂಬಾ ಹುಡುಕಿದರೆ ಸಿಗುತ್ತವೆ. ಅವನು ಬಂದು ನನಗೆ ಹೇಳಿದ ಈ ರೀತಿ ಎಲ್ಲಾ ಕಡೆ ನಡೆಯುತ್ತಿರುತ್ತದೆ, ನಿಮಗೆ ಗೊತ್ತಾಗುವುದಿಲ್ಲ, ಇದು ಎಲ್ಲಾ ಕಡೆಗಳಲ್ಲೂ ನಡೆಯುತ್ತದೆ.

ಶ್ರೀ ಕರಿಯಣ್ಣ : ಇಂಥಾದ್ದು ಒಂದೋ, ಎರಡೋ, ನಡೆಯುತ್ತದೆ, ನೀವು ಸಾರಸಗಟಾಗಿ ಎಲ್ಲಾ ಕಡೆಗಳಲ್ಲೂ ಎಂದು ಹೇಳಿಬಿಟ್ಟರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್ : ನಾನು ಬೇಕಾದರೆ ನಮ್ಮ ಕ್ಷೇತ್ರದಲ್ಲಿ ಹಿಡಿದುಕೊಡುತ್ತೇನೆ, ಇದು ನಡೆಯತಕ್ಕಂಥಾದ್ದು, ಅದಕ್ಕೆ ನಾನು ಹೇಳುವಂಥಾದ್ದು ಏನೆಂದರೆ ಇದನ್ನು ಸರ್ಕಾರವೇ ಕಟ್ಟಿಕೊಡಬೇಕು. ಇದಕ್ಕೆ ಎಜೆಂಟರನ್ನು ಮಾಡುವುದು ಸರಿ, ಇಲ್ಲಿ ಅವರು ಮನೆ ಕಟ್ಟಿಕೊಳ್ಳುವುದಕ್ಕೆ ಆಗುವುದಿಲ್ಲ.

ಶ್ರೀ ಕಾಗೋಡು ತಿಮ್ಮ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಈ ರೀತಿ ಆಗಿರುವಂಥಾದ್ದು ನಿಮ್ಮ ಗಮನಕ್ಕೆ ಬಂದಿದ್ದರೆ, ಅದನ್ನು ನೇರವಾಗಿ ಪೊಲೀಸ್‌ನವರಿಗೆ ಹಿಡಿದುಕೊಡಬೇಕಾಗಿತ್ತು, ಇದು ಚೀಟಿಂಗ್ ಕೇಸ್, ಪ್ರಾಡ್ ಕೇಸ್ ಅದು, ನಿಮ್ಮ ಎದುರಿಗೆ ನಡೆದಂತಹ ಕೇಸ್ ಅನ್ನು ನೀವು ಪೊಲೀಸ್‌ನವರಿಗೆ ತಿಳಿಸದೇ ಹೋದರೆ ತಪ್ಪು ನಿಮ್ಮದಾಗುತ್ತದೆ.

ಶ್ರೀ ಎಸ್.ಎಸ್. ಪಾಟೀಲ್ : ಕೇಸ್ ನಡೆಯುವಂಥಾದ್ದು ಬೇರೆ, ಯಾವ ಗುರುತುಗಳೂ ಸಿಗದ ಹಾಗೆ ಮಾಡುತ್ತಾರೆ, ಈ ರೀತಿಯಾಗಿ ಹಲವಾರು ಕೇಸ್‌ಗಳು ಆಗಿವೆ.

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು) : ಒಳ್ಳೆಯ ಕಾರ್ಯಕ್ರಮ ನಡೆಯುವಾಗ, 10 ಮನೆಗಳನ್ನು ಕೊಡುವಾಗ ನೀವು ಒಂದು ಮನೆಯ ವಿಚಾರವನ್ನು ಹೇಳುತ್ತಿರಲ್ಲಾ.. ಇನ್ನು 599 ಮನೆಗಳಿಗೆ ಒಳ್ಳೆಯದಾಗಿಲ್ಲವೇ? ಮಾನ್ಯ ಚನ್ನಿಗಪ್ಪನವರು ಯಾವುದೋ ಒಂದು ಮನೆಯ ಬಗ್ಗೆ ಹೇಳುತ್ತಾರೆ, ನಾವು ಕೊಡುತ್ತಿರುವ ಹನ್ನೆರಡೂವರೆ ಲಕ್ಷ ಮನೆಗಳನ್ನು ಕೊಡುವಂತಹ ಕಾರ್ಯಕ್ರಮವಾಗಿದೆ.

ಶ್ರೀ ಎಸ್.ಎಸ್. ಪಾಟೀಲ್ : ಫಲಾನುಭವಿ ಒಬ್ಬನೇ ಮನೆಯನ್ನು ಕಟ್ಟಿಕೊಳ್ಳುವುದಕ್ಕೆ ಹೋದರೆ ಆ ಇಪ್ಪತ್ತು ಸಾವಿರ ರೂಪಾಯಿಗಳಿಗೆ ಮನೆಯಾಗುವುದಿಲ್ಲ. ಅದಕ್ಕೆ ಏನು ಮಾಡುತ್ತಾರೆಂದರೆ 10-12 ಮಂದಿ ಕೂಡ ಎಜೆಂಟರಿಗೆ ಕೊಡುತ್ತಾರೆ.

ಶ್ರೀ ಸಿ. ಚನ್ನಿಗಪ್ಪ : ಮಾನ್ಯ ಉಪಾಧ್ಯಕ್ಷರೇ, ಅನೇಕ ಬಾರಿ ಮುಲಾಜಿನ ಮೇಲೆ ಶಾಸಕರು ಸುಮ್ಮನೆ ಇರಬೇಕಾಗುತ್ತದೆ, ಆದುದರಿಂದ ದಯಮಾಡಿ ಶಾಸಕರನ್ನು ಅಧ್ಯಕ್ಷರನ್ನಾಗಿ ಮಾಡಬಾರದು, ಇಲ್ಲಿ ಅಧ್ಯಕ್ಷರನ್ನಾಗಿ ಮಾಡದೆ, ಅಧಿಕಾರಿಗಳನ್ನು ಇಟ್ಟು ಗ್ರಾಮ ಪಂಚಾಯತ್‌ಗೆ ಅಧಿಕಾರವನ್ನು ಕೊಟ್ಟರೆ ಇಂತಹ ಮೋಸವಾಗುವುದಕ್ಕೆ ಸಾಧ್ಯವಿರುವುದಿಲ್ಲ.

ಶ್ರೀ ಬಿ.ಹೆಚ್. ಬನ್ನಿಕೋಡ್ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಎಸ್.ಎಸ್. ಪಾಟೀಲ್‌ರವರು ಹೇಳಿದರು ಫಲಾನುಭವಿಗಳಿಗೆ ಮನೆಗಳನ್ನು ಕಟ್ಟಿಕೊಳ್ಳುವಂಥಾದ್ದಕ್ಕೆ ಸರ್ಕಾರ ಏನು ಅನುಕೂಲವನ್ನು ಮಾಡಿಕೊಟ್ಟಿದೆ, ಇದನ್ನು ತಪ್ಪಿಸಿ ಅಧಿಕಾರಿಗಳು ಕಟ್ಟಿಕೊಡಬೇಕೆಂಬ ಸಲಹೆ ಈಗಾಗಲೇ ಹಿಂದಿನ ಅನುಭವದಿಂದ ಕಳಪೆ ಗುಣಮಟ್ಟದ ಕೆಲಸವಾಗಿ ಅಧಿಕಾರಿಗಳು ಈ ಕೆಲಸವನ್ನು ಮಾಡಬಾರದು, ಇಲ್ಲಿ ಫಲಾನುಭವಿಗಳು ಇನ್ನಷ್ಟು ದುಡ್ಡನ್ನು ಹಾಕಿ ಇನ್ನು

ಉತ್ತಮ ಗುಣಮಟ್ಟದ ಮನೆಗಳನ್ನು ಕಟ್ಟಿಕೊಳ್ಳಬೇಕೆಂದು ಸರ್ಕಾರ ಆದೇಶವನ್ನು ಹೊರಡಿಸಿರುವಂಥಾದ್ದು ಬಹಳ ಸೂಕ್ತವಾಗಿದೆ. ಇದನ್ನು ಬಹಳ ಜನರು ಸದುಪಯೋಗ ಮಾಡಿಕೊಂಡಿದ್ದಾರೆ; ಮಾನ್ಯ ಪಾಟೀಲ್‌ರವರು ಹೇಳಿದಂತೆ ಒಂದೆರಡು ಪ್ರಕರಣಗಳು ಇದ್ದರೆ, ಇದಕ್ಕೆ ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿದಂತೆ ಕಾನೂನು ಕ್ರಮವನ್ನು ಜರುಗಿಸಲಿ, ಈಗ ಇರುವಂತಹ ಕಾರ್ಯಕ್ರಮ ಚೆನ್ನಾಗಿದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಉಪಾಧ್ಯಕ್ಷರೇ, ನಾನು ಯಾವುದೇ ರೀತಿಯಲ್ಲಿ ಆಪಾದನೆಯನ್ನು ಮಾಡುತ್ತಾ ಇರಲಿಲ್ಲ, ಇಲ್ಲಿ ಏನಾಗಿದೆ ಎಂದರೆ ನಾನು ಆಪಾದನೆಯನ್ನು ಮಾಡಿದೆನೆಂದು ತಿಳಿದುಕೊಂಡು ಬಿಟ್ಟರು, ನಾನು ಇರುವ ವಸ್ತು ಸ್ಥಿತಿಯನ್ನು ಹೇಳುತ್ತಿದೆ, ಒಬ್ಬ ಇಂಜಿನಿಯರ್ ಹೋಗಬೇಕಾದರೆ ಕಾರು ತೆಗೆದುಕೊಂಡು ಬಾ ಎಂದು ಹೇಳುತ್ತಾರೆ, ಬಿಲ್ ಮಾಡಬೇಕಾದರೆ ಎರಡೆರಡು ಸಾರಿ ಹೇಳುತ್ತಾರೆ. ಗ್ರಾಮ ಪಂಚಾಯತ್‌ನವರಿಗೆ ಇಷ್ಟವಿಲ್ಲದಂಥವರನ್ನು ಸೆಲೆಕ್ಷನ್ ಮಾಡಿದರೆ ಲೈಸನ್ಸ್ ಕೊಡುವುದಿಲ್ಲ.

(ಗೊಂದಲ)

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೇ, ನಾನು ಈ ವಿಚಾರವಾಗಿ ಪ್ರಾರಂಭದಲ್ಲೆ ಹೇಳಿದೆ, ಈ ಸದನದಲ್ಲಿ ಆಯವ್ಯಯವನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಶಾಸಕರು ನಮ್ಮ ಗಮನಕ್ಕೆ ತಂದಿದ್ದಾರೆ. ಈ ಹಿನ್ನೆಲೆಯಲ್ಲಿ ನಡೆಯುವಂಥ ಗ್ರಾಮ ಸಭೆಗಳಿರಬಹುದು, ತಾಲ್ಲೂಕ್ ಪಂಚಾಯತಿ ಸಭೆಗಳಿರಬಹುದು, ಜಿಲ್ಲಾ ಪಂಚಾಯತಿ ಸಭೆಗಳಿರಬಹುದು, ತ್ರೈಮಾಸಿಕ ಜಿಲ್ಲಾ ಮಟ್ಟದ ಸಭೆಗಳಿರಬಹುದು ಇಲ್ಲಂತೂ ಸದಸ್ಯರಿಗೆ ಮಾತನಾಡುವುದಕ್ಕೆ ಹಕ್ಕು ಹಾಗೂ ಅವಕಾಶವುಂಟು, ಎಷ್ಟೋ ಸಂದರ್ಭಗಳಲ್ಲಿ ಆ ರೀತಿ ಧ್ವನಿ ಎತ್ತುವುದರ ಮುಖಾಂತರ ಈ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿದ್ದಾರೆ ಎನ್ನುವ ವಿಚಾರ ಗೊತ್ತಾಗಬೇಕಲ್ಲಾ, ತಮಗೂ ಗೊತ್ತಿದ ಹಾಗೆ ಈ ಸದನದ ಎಲ್ಲಾ ಸದಸ್ಯರ ಗಮನಕ್ಕೆ ಬಂದಿರುವಂತೆ ಯಾವ ಕಾರ್ಯದರ್ಶಿ ಒಂದು ಇಪ್ಪತ್ತು ಸಾವಿರ ರೂಪಾಯಿಗಳ ಮನೆ ಬಿಲ್ ಮಾಡುವುದಕ್ಕೆ ಕಾರು ತೆಗೆದುಕೊಂಡು ಹೋಗುತ್ತಾನೆ ಎನ್ನುವ ಒಂದು ಉದಾಹರಣೆಯನ್ನು ತಾವು ಹೇಳುವುದಾದರೆ ನಾನು ಒಪ್ಪುವುದಕ್ಕೆ ಸಿದ್ದನಿದ್ದೇನೆ. ಕಾರಣವೇನೆಂದರೆ, ಇವತ್ತು ಒಂದು ತಾಲ್ಲೂಕು ಪಂಚಾಯತಿ ವ್ಯಾಪ್ತಿಯ ಮುರ್ನಾಲ್ಕು ಜನ ಇಂಜಿನಿಯರ್‌ಗಳಿದ್ದು ಗ್ರಾಮಪಂಚಾಯತಿ ಸದಸ್ಯ ಎಲ್ಲಿಯವರೆಗೆ ಅವನು ಅಧಿಕೃತವಾಗಿ ಮನೆ ಕೆಲಸ ಇಷ್ಟು ಆಗಿದೆ ಎಂದು ಮಾಹಿತಿಯನ್ನು ನೀಡುವುದಿಲ್ಲವೋ ಅಲ್ಲಿಯವರೆಗೆ ಇಂಜಿನಿಯರ್ ಗ್ರಾಮಪಂಚಾಯತಿಗೆ ಹೋಗುವುದಕ್ಕೆ ಅವಕಾಶವೇ ಇಲ್ಲ. ಆದುದರಿಂದ ಕಾರ್ಯದರ್ಶಿಯಾಗಿ ಯಾರು ಕೆಲಸ ಮಾಡುತ್ತಿರುತ್ತಾರೆ ಅವರಿಗೆ ಸಂಪೂರ್ಣವಾದ ಜವಾಬ್ದಾರಿ ಇದೆ. ಪ್ರಾರಂಭದಲ್ಲಿ ಮಾನ್ಯ ಸದಸ್ಯರು ಹೇಳಿದರು. ನೀವು ನೇರವಾಗಿ ನೋಡುತ್ತಿದ್ದೀರಿ. ನಿಮ್ಮ ಬೆನ್ನು ನಿಮಗೆ ಕಾಣುವುದಿಲ್ಲವೆಂದು ಹೇಳಿದರು, ಅವರ ಬೆನ್ನು ಅವರಿಗೆ ಯಾವಾಗ ಕಂಡಿದೆ ಎನ್ನುವ ಒಂದು ವಿಚಾರವನ್ನು ನಾನು ಕೇಳಬೇಕಾಗುತ್ತದೆ ಅಲ್ಲವೇ? ನಿಮ್ಮ ಬೆನ್ನು ನಿಮಗೆ ಯಾವಾಗ ಕಾಣುತ್ತದೆ ಹೇಳಿ ಸ್ವಾಮಿ ಸ್ವಲ್ಪ ನಾವು ಹಾಗೆಯೆ ನೋಡಿಕೊಳ್ಳುತ್ತೇವೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೆ, ನನ್ನ ಬೆನ್ನನ್ನು ತೋರಿಸಿದವರು ಅವರೇ, ಮಾನ್ಯ ಸಗೀರ್ ಅಹಮದ್‌ರವರೇ, ನನ್ನ ಬೆನ್ನನ್ನು ತೋರಿಸಿದವರು. ನನ್ನ ಕ್ಷೇತ್ರದ ಲಕ್ಯಾದಲ್ಲಿ ನಾಲ್ಕು ಮನೆಗೆ ಮೂರು ಮೂರು ಸಾರಿ ಬಿಲ್ ಮಾಡಿದ್ದಾರೆ, ಇಂಜಿನಿಯರ್

ಅಧೀನದಲ್ಲಿರುವವರನ್ನು ಸಸ್ಪೆಂಡ್ ಮಾಡಿದವರೂ ಕೂಡ ಅವರೇ, ಅವರಿಗೇ ಲೆಟರ್ ಕೊಟ್ಟು ಅಲ್ಲಿರತಕ್ಕಂಥ ಒಬ್ಬ ಕ್ಲಾರ್ಕ್ ಅನ್ನು ಸಸ್ಪೆಂಡ್ ಮಾಡಿಸಿದ್ದೇನೆ. ಹಾಗಾಗಿ ನನ್ನ ಬೆನ್ನು ತೋರಿಸಿದವರು ಅವರೇ ಇದೆಲ್ಲಾ ನಿಮಗೆ ಗೊತ್ತು. ಆದರೆ ಈ ಬಗ್ಗೆ ಒಂದು ಪಾಲಿಸಿಯಾಗಬೇಕೆನ್ನುವ ದೃಷ್ಟಿಯಿಂದ ನಾನು ಇಲ್ಲಿ ಚರ್ಚೆ ಮಾಡುತ್ತಿರುವುದು. 11,800 ರೂಪಾಯಿಗಳ ಆದಾಯ ಪ್ರಮಾಣಪತ್ರ ಕೊಡಬೇಕೆಂದರೆ ಇದೊಂದು ಬೋಗಸ್ ಅಲ್ಲವೆ ಅದಕ್ಕೆ ನಾನು ಕೊಡುವ ಸಲಹೆ ಏನೆಂದರೆ, 25,000 ರೂಪಾಯಿಗಳ ಆದಾಯವಿರುವವರಿಗೂ ಆಶ್ರಯ ಮನೆ ಕೊಡುವಂತೆ ಮಾಡಬೇಕು. ಇವತ್ತು ನಮ್ಮ ಕಾಫಿ ತೋಟದಲ್ಲಿ ಕೂಲಿಕಾರ್ಮಿಕರ ದಿನಗೂಲಿ 46 ರೂಪಾಯಿ ಆಗುತ್ತದೆ, ಒಂದು ವರ್ಷಕ್ಕೆ ಎಷ್ಟಾಗುತ್ತದೆಂಬುದು ಲೆಕ್ಕಾ ಹಾಕಿದರೆ ತಮಗೆ ಗೊತ್ತಾಗುತ್ತದೆ. ಸುಮ್ಮನೆ 11,800 ರೂಪಾಯಿ ಆದಾಯಮಿತಿ ಇಟ್ಟಿರುವುದು ಬೋಗಸ್, ಆದುದರಿಂದ ಇದನ್ನು 25,000 ರೂಪಾಯಿ ಹೆಚ್ಚಿಸಬೇಕು ಎನ್ನುವುದು ಒಂದು ಒತ್ತಾಯ. ಈ ಆಶ್ರಯ ಮನೆಗಳನ್ನು ಒಂದು ಸಾರಿ ಕ್ರಮಬದ್ಧವಾಗಿ ಆಯ್ಕೆ ಮಾಡಿದ ಮೇಲೆ ಗ್ರಾಮಪಂಚಾಯತಿಯ ಕಾರ್ಯದರ್ಶಿ ಕಟ್ಟಿಸತಕ್ಕಂಥ ಜವಾಬ್ದಾರಿಯನ್ನು ತೆಗೆದುಕೊಂಡು ಬಿಲ್ ಕೊಡಿಸುವುದೂ ಕೂಡ ಕಾಲಮಿತಿ ಕಾರ್ಯಕ್ರಮವಾಗಿ ಅದನ್ನು ಟೈಂಪೌಂಡ್ ಮಾಡುವುದಕ್ಕೆ ಒಂದು ಆದೇಶವನ್ನು ಕೊಡಬೇಕೆಂದು ನಾನು ಒತ್ತಾಯಿಸುತ್ತೇನೆ. ಇನ್ನೊಂದು ವಿಷಯ. ಇತರೇ ಇವರಿಗೆಲ್ಲಾ ಈ ಮಾರ್ಟ್‌ಗೇಜ್ ಮಾಡಿಕೊಡುವುದು ಸೂಕ್ತವಿದೆ, ಆದರೆ ಅಂಬೇಡ್ಕರ್ ಮನೆಗಳನ್ನೂ ಕೂಡ ಏತಕ್ಕೆ ಮಾರ್ಟ್‌ಗೇಜ್ ಮಾಡಿಕೊಡಬೇಕು? ನಿಮ್ಮ ವಸತಿ ಇಲಾಖೆಯ ವರದಿಯಲ್ಲೇ ಅದನ್ನು ಕೈಬಿಡಬೇಕೆಂದಿದೆ, ಅದನ್ನು ಕೈಬಿಡಬೇಕೆನ್ನುವ ಒಂದು ಒತ್ತಾಯವನ್ನೂ ಕೂಡ ನಾನು ಮಾಡುತ್ತಿದ್ದೇನೆ. ಇದರ ಜೊತೆಗೆ 20,000 ದಿಂದ 25,000 ರೂಪಾಯಿಗಳಿಗೆ ಗ್ರಾಮೀಣ ಪ್ರದೇಶದಲ್ಲಿರುವ ಆಶ್ರಯ ಮನೆಯ ಹಣವನ್ನು ಹೆಚ್ಚಿಸಬೇಕು, 25,000 ರೂ. ಇರುವುದನ್ನು 30,000 ರೂಪಾಯಿಗಳಿಗೆ ಹೆಚ್ಚಿಸಬೇಕೆನ್ನುವ ಒತ್ತಾಯವನ್ನೂ ಕೂಡ ನಾನು ಮಾಡುತ್ತೇನೆ.

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು) : ಮಲ್ಲಿಕಾರ್ಜುನ್‌ರವರೆ, ಆ ಅಂಬೇಡ್ಕರ್ ಮನೆಗಳಿಗೆ ಸಂಬಂಧಿಸಿದ್ದನ್ನು ಮತ್ತೊಂದು ಸಾರಿ ಹೇಳಿ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಅಂಬೇಡ್ಕರ್ ಮನೆಗಳನ್ನೂ ಸಹಿತ ಸರ್ಕಾರಕ್ಕೆ ಮಾರ್ಟ್‌ಗೇಜ್ ಮಾಡಿ ಕೊಡಬೇಕೆನ್ನುವುದಿದೆ, ಆದರೆ ಅಂಬೇಡ್ಕರ್ ಮನೆಗೆ ಯಾವುದೇ ರೀತಿಯ ಹಣವನ್ನು ವಾಪಸ್ ಕಟ್ಟಬೇಕಾಗಿಲ್ಲ, ಹಾಗಿದ್ದಾಗ ಮತ್ತೆ ಏತಕ್ಕೆ ಫಲಾನುಭವಿಗಳು ಮನೆಗಳನ್ನು ಮಾರ್ಟ್‌ಗೇಜ್ ಮಾಡಿಕೊಡಬೇಕೆಂದು ಇನ್‌ಸಿಸ್ಟ್ ಮಾಡುತ್ತೀರಿ? ಅಂಬೇಡ್ಕರ್ ಯೋಜನೆಯಲ್ಲಿ ಲೋನ್ ಪೋರ್ಷನ್ ಇರುವುದಿಲ್ಲ, ಹಾಗಾಗಿ ಮಾರ್ಟ್‌ಗೇಜ್ ಮಾಡುವುದು ಸ್ವಲ್ಪ ಹೊರೆಯಾಗುತ್ತದೆ. ಅದನ್ನು ನೀವು ನಿಲ್ಲಿಸಬೇಕೆನ್ನುವ ಒಂದು ಸಲಹೆಯನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ : ಮಾನ್ಯ ಅಧ್ಯಕ್ಷರೆ, ಇವತ್ತು ಮಾರ್ಟ್‌ಗೇಜ್ ಮಾಡುವ ಸಂದರ್ಭದಲ್ಲಿ ನಾಲ್ಕು ಜನರ ಫೋಟೋಗಳನ್ನು ಇವತ್ತು ಫಲಾನುಭವಿ ಕೊಡಬೇಕು, ಇಬ ಮತ್ತೆ ಇಬ್ಬರು ಸಾಕ್ಷಿಗಳು ಮತ್ತು ಆತನದು ಇದರಿಂದ ಎಷ್ಟ ಕಷ್ಟವಾಗುತ್ತಿದೆ ಎಂದರೆ...

ಶ್ರೀ ಸಿ.ಆರ್. ಸಗೀರ್ ಅಹಮದ್ : ಈ ಭಾವಚಿತ್ರಗಳನ್ನು ಒದಗಿಸಿ ಕೊಡುವುದರ ಬಗ್ಗೆ ಸಾಕ್ಷಿಗಳದ್ದು ಮತ್ತು ಫಲಾನುಭವಿಗಳದ್ದು ಅವಕಾಶವಿತ್ತು, ಸರ್ಕಾರ ಈ ಆದೇಶವನ್ನು

ಹಿಂದಕ್ಕೆಪಡೆದಿದೆ, ಕೇವಲ ಫಲಾನುಭವಿಗಳ ಭಾವಚಿತ್ರವನ್ನು ಪಡೆಯುವುದರ ಬಗ್ಗೆ ಈಗಾಗಲೇ ಆದೇಶವನ್ನು ಹೊರಡಿಸಲಾಗಿದೆ.

ಶ್ರೀ ಎಂ.ಡಿ. ನಾರಾಯಣ : ಆ ಆದೇಶವನ್ನು ವಾಪಸ್ ಪಡೆದಿದ್ದರೆ ಇಡೀ ಕರ್ನಾಟಕ ರಾಜ್ಯದ ಫಲಾನುಭವಿಗಳೇ ಸಂತೋಷ ಪಡುತ್ತಾರೆ. ಅದಕ್ಕೆ ಮುಂಚೆ ಈ ಶಾಸಕರ ಅಧ್ಯಕ್ಷತೆಯಲ್ಲಿ ಆ ಫಲಾನುಭವಿಗೆ ಹಕ್ಕು ಪತ್ರ ಕೊಡುವ ಸಂದರ್ಭದಲ್ಲಿ, ಫೋಟೋ ತೆಗೆಯುವ ಕಾರ್ಯಕ್ರಮದಲ್ಲಿ ಅವನು ಮೂರು ಹಂತವಲ್ಲಿ ಫೋಟೋ ಕೊಡಬೇಕಾಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ನಾನು ಆಗಲೇ ಹೇಳಿದೆ. ಸುಧೀರ್ಘವಾಗಿ ಈ ವಿಚಾರವಾಗಿ ಚರ್ಚೆ ನಡೆಸುವುದರ ಮುಖಾಂತರ ಈ ಆದೇಶವನ್ನು ವಾಪಸ್ ಪಡೆದಿದ್ದೇವೆ ಎಂದು ಹೇಳಿದ್ದೇನೆ.

ಶ್ರೀ ಎಂ.ಡಿ. ಲಕ್ಷ್ಮೀನಾರಾಯಣ : ಇದಕ್ಕೆ ಪೂರಕವಾಗಿ ಇನ್ನೊಂದು ಪ್ರಮುಖವಾದ ವಿಷಯ, ಫಲಾನುಭವಿಗೆ ನೋವಾಗುವಂತಹದ್ದು ಏನೆಂದರೆ, ಸಾಧಾರಣವಾಗಿ ಒಂದು ಕ್ಷೇತ್ರದಲ್ಲಿ 50-60 ಕಿ.ಮೀ. ದೂರದಿಂದ ಅವನು ಬಂದು ಒಬ್ಬ ಫೋಟೋ ಗ್ರಾಫರ್ ಕರೆದುಕೊಂಡು ಫೋಟೋ ತೆಗೆಸುವುದಕ್ಕೆ ಕಷ್ಟವಾಗುತ್ತದೆ. ಸರ್ಕಾರ ಬಹಳ ಆಲೋಚನೆ ಮಾಡಬೇಕಾಗಿದೆ ಮಾರ್ಟ್‌ಗೇಜ್ ಬೇರೆ ಫೋಟೊ ಬೇರೆ ಎರಡು ಹಂತಗಳಿವೆ, ಈ ಎರಡು ವಿಷಯಗಳನ್ನು ಕೈಬಿಟ್ಟರೆ ಫಲಾನುಭವಿಗೆ ಸುಮಾರು 1000-1500 ರೂಪಾಯಿಗಳ ಉಳಿತಾಯವಾಗುತ್ತದೆ. ಆ ದೃಷ್ಟಿಯಿಂದ ಆ ಫೋಟೋ ತೆಗೆಯುವ ಏನೊಂದು ವ್ಯವಸ್ಥೆ ಇದೆ, ಅವನು ಸುಮಾರು 50-60 ಕಿ.ಮಿ ದೂರದಿಂದ ತಾಲ್ಲೂಕು ಹೆಡ್‌ಕ್ವಾರ್ಟರ್‌ಗೆ ಫೋಟೊ ಗ್ರಾಫರ್‌ನಿಂದ ಫೋಟೊ ತೆಗೆಸುವುದಕ್ಕೆ ನೂರಾರು ರೂಪಾಯಿಗಳ ವೆಚ್ಚವಾಗುತ್ತದೆ, ಇದನ್ನು ಬಿಟ್ಟು ಪ್ರತಿಯೊಂದು ಗ್ರಾಮಪಂಚಾಯತಿಯ ಹೆಡ್‌ಕ್ವಾರ್ಟ್‌ಸ್‌ನಲ್ಲಿ ಗ್ರಾಮಪಂಚಾಯತಿ ಕಾರ್ಯದರ್ಶಿಗೆ ಒಂದು ಕ್ಯಾಮರ ಕೊಡಿಸಿದರೆ, ಆತ ಫೋಟೊ ತೆಗೆದು ಸರಿಯಾದ ವ್ಯವಸ್ಥೆಯಲ್ಲಿ ಆತ ರೆಕಾರ್ಡ್ ಮಾಡಿಕೊಟ್ಟರೆ ಬಿಲ್ ಮಾಡಿಕೊಡುವ ವ್ಯವಸ್ಥೆಯಾಗಬೇಕು. ದಯಮಾಡಿ ಮಂತ್ರಿಗಳು ಈ ಬಗ್ಗೆ ಆಲೋಚನೆ ಮಾಡಬೇಕಾದ ವಿಷಯ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : 2002-2003ನೇ ಸಾಲಿನಲ್ಲಿ ನಮ್ಮ ಆಯವ್ಯಯದಲ್ಲಿ 2.5 ಲಕ್ಷ ಮನೆಗಳನ್ನು ಈ ವರ್ಷ ಕಟ್ಟಬೇಕೆಂದಿದೆ, ಅಂದರೆ ಒಂದು ಕ್ಷೇತ್ರಕ್ಕೆ ಒಂದು ಸಾವಿರ ಮನೆಗಳನ್ನು ಮಂಜೂರು ಮಾಡುತ್ತೇವೆನ್ನುವ ವಿಷಯವನ್ನು ಹೇಳಿದರು, ಆದರೆ ಇವರು ಮಂಜೂರು ಮಾಡಿರುವ ಪಟ್ಟಿಯನ್ನು ಕಳುಹಿಸಿದ್ದಾರೆ, ಚಿಕ್ಕಮಗಳೂರು ಜಿಲ್ಲೆಯ ಒಂದೇ ಒಂದು ಉದಾಹರಣೆ ಹೇಳುತ್ತೇನೆ, ಮೂಡಿಗೆರೆ ಕ್ಷೇತ್ರಕ್ಕೆ 585 ಮನೆ, ಚಿಕ್ಕಮಗಳೂರು ಕ್ಷೇತ್ರಕ್ಕೆ 695 ಮನೆ, ಶೃಂಗೇರಿ ಕ್ಷೇತ್ರಕ್ಕೆ 975 ಮನೆ, ಕಡೂರು ಕ್ಷೇತ್ರಕ್ಕೆ 585 ಮನೆ, ತರೀಕೆರೆ ಕ್ಷೇತ್ರಕ್ಕೆ 760 ಮನೆ ಬೀರೂರು ಕ್ಷೇತ್ರಕ್ಕೆ 520 ಮನೆ, ಬೀರೂರು ಕ್ಷೇತ್ರ ಇವರಿಗೆ ಏನು ಮಾಡಿತ್ತು?

ಶ್ರೀ ಎಸ್.ಎಸ್. ಪಾಟೀಲ್ : ನಮಗೆ ಬರೀ 360 ಮನೆಗಳು; ಹಿಂದುಳಿದ ಕ್ಷೇತ್ರಕ್ಕೆ ಹೀಗೇಕೆ ಅನ್ಯಾಯ ಮಾಡುತ್ತಿದ್ದೀರಿ? ಇದಕ್ಕೆ ಏನಾದರೂ ಒಂದು ನಾರ್ಮ್ಸ್ ಇಟ್ಟುಕೊಳ್ಳಿ.

ಶ್ರೀ ಪಿ. ಚೆನ್ನಿಗಪ್ಪ : ಮಾನ್ಯ ಉಪಾಧ್ಯಕ್ಷರೆ, ನೆಲಮಂಗಲ ತಾಲ್ಲೂಕು ಅಂಜನ ಮೂರ್ತಿಯವರಿಗೆ 420 ಹೆಚ್ಚಿಗೆ ಮನೆಗಳನ್ನು ಕೊಡಲಾಗಿದೆ ಇದ್ಯಾವ ಕಾನೂನು ಉಪಾಧ್ಯಕ್ಷರೇ? ಇದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಕಠಿಯಣ್ಣ : ಅವರ್‌ಗೆ ಜಾಸ್ತಿ ಕೊಟ್ಟಿಲ್ಲವೇ?

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಈ ರೀತಿಯಾದ ತಾರತಮ್ಯವನ್ನು ಏತಕ್ಕೆ ಮಾಡುತ್ತಿದ್ದೀರಿ? ನಮ್ಮ ಕ್ಷೇತ್ರಕ್ಕೆ ಕೊಟ್ಟಿರುವ 520 ಮನೆಗಳಲ್ಲಿ, 170 ಮನೆ ನಗರಪ್ರದೇಶಕ್ಕೆ 240 ಮನೆ ಗುಂಪಿಗೆ, 110 ಮನೆ ನಾವು ಎಲ್ಲಾ 37 ಗ್ರಾಮಪಂಚಾಯತಿಗೆ ಹಂಚಬೇಕು, ಒಂದು ಗ್ರಾಮಪಂಚಾಯತಿಗೆ 3 ಮನೆ ಬರುವುದಿಲ್ಲ, ಎಸ್‌ಸಿಗೆ ಶೇಕಡ 50 ಬೇರೆಯವರಿಗೆ ಶೇಕಡ 50 ಎಂದರೆ, ಒಂದು ಗ್ರಾಮಪಂಚಾಯತಿಯಲ್ಲಿ ಒಬ್ಬರು ಅಥವಾ ಇಬ್ಬರಿಗೆ ಮಾತ್ರ ಮನೆ ಕೊಡಬಹುದು, ನಾವು ಯಾವ ರೀತಿಯಾಗಿ ಮನೆ ಹಂಚಬೇಕಾಗುತ್ತದೆ ಇವರು ಎಲ್ಲಿ ಸಾಧನೆ ಮಾಡುತ್ತಿದ್ದಾರೆ. ಇವರು ಹೇಳಿದಂತೆ ನಮಗೆ ಸಾವಿರ ಮನೆಗಳನ್ನು ಕೊಡಲಿ, ಹಂಚಿತ್ಕ ಕೆಲಸ ಮಾಡುತ್ತೇವೆ, ಅದನ್ನು ಬಿಟ್ಟು ಈ ರೀತಿಯಾದ ತಾರತಮ್ಯ ಕೆಲಸವನ್ನು ಸರ್ಕಾರ ಮಾಡಬಾರದೆಂದು ಪ್ರತಿಸಾರಿಯೂ ನಾವು ಹೇಳುತ್ತಿದ್ದೇವೆ, ಪ್ರತಿ ಸಾರಿಯೂ ತಪ್ಪಾಗುತ್ತಿದೆ. ಕಳೆದ ಸಾರಿಯು ಪ್ರಸ್ತಾಪ ಮಾಡಿದ್ದೇವೆ ಮತ್ತೆ ಈ ಸಾರಿಯೂ ಪ್ರಸ್ತಾಪ ಮಾಡುತ್ತಿದ್ದೇವೆ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರಥಮ ಸ್ಥಾನದಲ್ಲಿ ಬೀರೂರು ಕ್ಷೇತ್ರವಿದೆ, ನನಗೆ ಕೊಟ್ಟಿರೂ ಎಲ್ಲಾ ಮನೆಯನ್ನು ಹಂಚಿದ್ದೇನೆ, ಶೇಕಡ 75 ರಷ್ಟು ಮನೆಗಳನ್ನು ಕಟ್ಟಿಸಿದ್ದೇವೆ, ಬೇಕಾದರೆ ದಾಖಲೆ ತರಿಸಲಿ ಚರ್ಚೆಗೆ ಬೇಕಾದರೆ ನಾನು ಅವರ ಕಛೇರಿಗೆ ಹೋಗುತ್ತೇನೆ. ಇಷ್ಟೆಲ್ಲಾ ಸಾಧನೆ ಮಾಡಿದ್ದರೂ ಕೂಡ ನಮ್ಮ ಕ್ಷೇತ್ರಕ್ಕೆ ಅನ್ಯಾಯ ಏತಕ್ಕೆ ಮಾಡಲಾಗಿದೆ ಎಂದು ಕೇಳಬೇಕಾಗುತ್ತದೆ. 2001-02ನೇ ಸಾಲಿನಲ್ಲಿ ಇನ್ನು ನಿವೇಶನ ಬಗ್ಗೆ ಇವನ ಗುರಿ ಏನಿತ್ತೆಂದರೆ, ಗ್ರಾಮೀಣ ಪ್ರದೇಶದಲ್ಲಿ 50,000 ನಿವೇಶನಗಳನ್ನು ಹಂಚಬೇಕಾಗಿತ್ತು, ಅದರ ಪೈಕಿ 19,784 ಮನೆಗಳನ್ನು ಹಂಚಿದ್ದಾರೆ, ನಗರಪ್ರದೇಶದಲ್ಲಿ 20,000 ನಿವೇಶನ ಹಂಚಬೇಕಾಗಿತ್ತು, 8520 ಮನೆಗಳನ್ನು ಹಂಚಲಾಗಿದೆ, ವಸತಿ ಹಂಚಿಕೆಯಲ್ಲಿ ಇಂಡಿಯಾ ದೇಶದಲ್ಲೇ ಕರ್ನಾಟಕ ಪ್ರಥಮ ಸ್ಥಾನದಲ್ಲಿದೆ ಎಂದು ಇವರು ಪತ್ರಿಕೆಯಲ್ಲಿ ಹೇಳುತ್ತಾದ್ದಾರೆ, ಇದು ಅವರ ಸಾಧನೆಯಾಗಿದೆ. ನಿವೇಶನಕ್ಕೆ ಇವರು 80 ಸಾವಿರ, 1 ಲಕ್ಷದ 20 ಸಾವಿರ ರೂಪಾಯಿಗಳನ್ನು ಕೊಡಬೇಕು ಎಂದು ಹೇಳುತ್ತಾರೆ. ಒಂದು ಎಕರೆಗೆ ಇಷ್ಟು ಹಣವನ್ನು ತೆಗೆದುಕೊಂಡು ನಿವೇಶನಕ್ಕೆ ಎಂಥ ಜಾಗವನ್ನು ಕೊಡುತ್ತಾರೆ ಎಂದರೆ ಯಾವುದೇ ಒಂದು ಜೌಗು ಪ್ರದೇಶವನ್ನು ಕೊಡುತ್ತಾರೆ. ಅಲ್ಲಿ ಒಂದು ನಿವೇಶನವನ್ನು ಮಾಡಲು 400 ರೂಪಾಯಿಗಳನ್ನು ಕೊಡುತ್ತಾರೆ. 400 ರೂಪಾಯಿಗಳಲ್ಲಿ ಆಗುವುದಿಲ್ಲ. ಅಲ್ಲಿ ಲೈಟು, ಚರಂಡಿ, ನೀರು ರೋಡು ಇವುಗಳ ವ್ಯವಸ್ಥೆ ಇರುವುದಿಲ್ಲ. ಇಂಥ ಜಾಗಕ್ಕೆ ಹೋಗಿ ಯಾರು ಮನೆಯನ್ನು ಕಟ್ಟುತ್ತಾರೆ? ಆದ್ದರಿಂದ ನಿವೇಶನಗಳನ್ನು ಮಾಡತಕ್ಕಂಥ ಸಂದರ್ಭದಲ್ಲಿ ಲೇಔಟ್‌ನ್ನು ಮಾಡಲು ಸರ್ಕಾರ ಆಯವ್ಯಯದಲ್ಲಿ ಹಣವನ್ನು ಒದಗಿಸಬೇಕು ಎನ್ನುವುದು ನನ್ನ ಒತ್ತಾಯ. 80 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ನಿವೇಶನವನ್ನು ಮಾಡಲು ಜಾಗವನ್ನು ಕೊಟ್ಟಿರುವ ರೈತನು, ಅದನ್ನು ಸರ್ಕಾರಕ್ಕೆ ರಿಜಿಸ್ಟರ್ ಮಾಡಿಕೊಡಲು ಸ್ಟ್ಯಾಂಪ್ ಡ್ಯೂಟಿಯನ್ನು ಕಟ್ಟಬೇಕಾಗುತ್ತದೆ. ಅದನ್ನು ಮನ್ನಾ ಮಾಡಬೇಕು ಎನ್ನುವ ಬಗ್ಗೆ ನಮ್ಮ ಒತ್ತಾಯವಿದೆ. ತಾವು ಅದನ್ನು ಮಾಡಬೇಕಾಗುತ್ತದೆ. ನಿವೇಶನ ಹಂಚತಕ್ಕಂಥ ಸಂದರ್ಭದಲ್ಲಿ ಅರ್ಹ ಪಲಾನುಭವಿಗಳನ್ನು ಆಯ್ಕೆ ಮಾಡತಕ್ಕಂಥಾದ್ದು, ಆಶ್ರಯ ಮನೆಗಳ ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕಂಥಾದ್ದಕ್ಕೆ ನೀವು ಕೊಟ್ಟಿರುವ ನಿರ್ದೇಶನವನ್ನು ಇನ್ನೂ ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಆಶ್ರಯ ಕಮಿಟಿಗೆ ಎಷ್ಟು ಬರಬೇಕು, ಆಶ್ರಯ ಕಮಿಟಿಯವರು ಮಾಡಿದಂಥ ತೀರ್ಮಾನ ಅಂತಿಮ ತೀರ್ಮಾನವೇ, ಎಷ್ಟು ದಿವಸದಲ್ಲಿ ಆ ಮನೆಯನ್ನು ಮುಗಿಸಬೇಕು ಎನ್ನತಕ್ಕಂಥಾದ್ದರ ಬಗ್ಗೆ ಸ್ಪಷ್ಟ ನಿರ್ದೇಶನವನ್ನು ಕೊಡಬೇಕು. ಈಗ ಅದನ್ನು ಹೇಳುತ್ತಾ ಹೋದರೆ ಬಹಳ ಹೊತ್ತು ಆಗುತ್ತದೆ.

ಏಕೆಂದರೆ, 1997-98ನೇ ಸಾಲಿನಿಂದಲೂ ಮನೆಗಳು ಬಾಕಿ ಉಳಿದುಕೊಂಡು ಬಂದಿವೆ. ಇದಕ್ಕೆ ಯಾರು ಜವಾಬ್ದಾರರು? ಇದಕ್ಕೆ ಒಂದು ಅಂತಿಮ ಫುಲ್ ಸ್ಟಾಪ್ ಹಾಕಲು ನೀವು ಇದಕ್ಕೆ ಏನಾದರೊಂದು ಟೈಂ ಬೌಂಡ್ ಪ್ರೋಗ್ರಾಂ ಅನ್ನು ಮಾಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು ನೆರಳು ಭಾಗ್ಯ ಯೋಜನೆ. ಈ ಯೋಜನೆಯಲ್ಲಿ ಗುರಿ ಇರತಕ್ಕಂಥಾದ್ದು 4,200 ಸಾಧನೆಯಾಗಿರುವುದು 212. ಇಡೀ ರಾಜ್ಯದಲ್ಲಿ 4,200 ಮನೆಗಳ ಗುರಿಯನ್ನು ಇಟ್ಟುಕೊಂಡಿದ್ದರೂ ಸಹ 212 ಮನೆಗೆ ಮಾತ್ರ ಇವತ್ತು ನೆರಳು ಭಾಗವನ್ನು ಕೊಟ್ಟಿದ್ದಾರೆ. ಹಾಗಾದರೆ, ಕರ್ನಾಟಕ ರಾಜ್ಯದಲ್ಲಿ ಹುಲ್ಲಿನಲ್ಲಿ ಮಾಡಿಕೊಂಡಿರತಕ್ಕಂಥ ಮನೆಗಳೇ ಇಲ್ಲವೇ? ಏಕೆ ಸಾಧನೆ ಮಾಡಲಿಲ್ಲ? ಅದಕ್ಕಾಗಿ ತಾವು ಇದರ ಬಗ್ಗೆ ಬೇರೆ ರೀತಿಯಲ್ಲಿ ಯೋಚನೆ ಮಾಡಿ, ಇದಕ್ಕೆ ಒಂದು ಅಂತಿಮ ರೂಪವನ್ನು ಕೊಡಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಮಾನ್ಯ ಸಚಿವರು ಗಮನ ಹರಿಸಬೇಕು. ಸಣ್ಣ ನೀರಾವರಿ ಇಲಾಖೆಯ ಬಗ್ಗೆ ಒಂದೆರಡು ವಿಷಯಗಳನ್ನು ಮಾತ್ರ ಹೇಳುತ್ತೇನೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಮಾನ್ಯ ಅಧ್ಯಕ್ಷರೇ, ರಾಜೀವ ಗಾಂಧಿ ಹೌಸಿಂಗ್ ಯೋಜನೆ ಯಡಿಯಲ್ಲಿ ಕೊಟ್ಟಂಥ ಅರ್ಬನ್ ಆಶ್ರಯ ಮನೆಗಳಿಗೆ ಸಬ್ಸಿಡಿಯನ್ನು ತೆಗೆದಿದ್ದಾರೆ. ಹೀಗಾಗಿರುವುದರಿಂದ ಕಡುಬಡವರಿಗೆ ತ್ರಾಸವಾಗುತ್ತಿದೆ. ಆದ್ದರಿಂದ, ಅದನ್ನು ಮರುಚಿಂತನೆ ಮಾಡಬೇಕೆಂದು ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು) : ನಗರಾಭಿವೃದ್ಧಿ ಇಲಾಖೆಯ ವಿಷಯ ಸಮಿತಿಯಲ್ಲಿ ಈ ವಿಷಯ ಪ್ರಸ್ತಾಪವಾಗಿದೆ. ಇದರ ಬಗ್ಗೆ ನಾನು ಈ ಹಿಂದೆಯೂ ಹೇಳಿದ್ದೇನೆ. ಈ ವಿಷಯ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಇದು ಸರ್ಕಾರದ ಪರಿಶೀಲನೆಯಲ್ಲಿದೆ. ವಿಷಯ ಸಮಿತಿಯ ಶಿಫಾರಸ್ಸುಗಳನ್ನು ಸರ್ಕಾರ ಗಮನದಲ್ಲಿಟ್ಟುಕೊಂಡು ಚಿಂತನೆ ನಡೆಸುತ್ತಿದೆ ಎಂದು ಹಿಂದೆಯೂ ಹೇಳಿದ್ದೇನೆ, ಈಗಲೂ ಹೇಳುತ್ತಿದ್ದೇನೆ, ಮುಂದೆ ಬರುವ ಚರ್ಚೆಯ ಕಾಲದಲ್ಲೂ ನನ್ನ ಉತ್ತರ ಇದೇ ಆಗುತ್ತದೆ.

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಸಣ್ಣ ನೀರಾವರಿ ಇಲಾಖೆಗೆ ಈ ವರ್ಷದ ಆಯವ್ಯಯದಲ್ಲಿ ಇಟ್ಟಿರತಕ್ಕಂಥ ಹಣ 120.80 ಕೋಟಿ ರೂಪಾಯಿಗಳು. ಇದರಲ್ಲಿ ನಬಾರ್ಡ್‌ದು 300 ಲಕ್ಷ, ಜಲ ಸಂವರ್ಧನೆಗೆ 4,124 ಲಕ್ಷ, ವಿಶೇಷ ಘಟಕ ಯೋಜನೆಗೆ 2,329 ಲಕ್ಷ, ಗಿರಿಜನ ಕಲ್ಯಾಣ ಯೋಜನೆಗೆ 506 ಲಕ್ಷ, ಬಳ್ಳಾರಿ ಸರ್ವಾಂಗೀಣ ಅಭಿವೃದ್ಧಿಗೆ 500 ಲಕ್ಷ, ಸಿಬ್ಬಂದಿ ವೆಚ್ಚಕ್ಕೆ 1,177 ಲಕ್ಷ ಎಂದು ಇಟ್ಟಿದ್ದು, ಇವುಗಳನ್ನು ಕಳೆದು 170 ಲಕ್ಷ ರೂಪಾಯಿಗಳು ಉಳಿಯುತ್ತದೆ. ಈ 170 ಲಕ್ಷ ರೂಪಾಯಿಗಳಲ್ಲಿ ಈ ವರ್ಷ ಸಣ್ಣ ನೀರಾವರಿ ಇಲಾಖೆ, 6,007 ಕಾಮಗಾರಿಗಳನ್ನು ತೆಗೆದುಕೊಳ್ಳಬೇಕಾಗಿದೆ. ಈ ಹಣದಲ್ಲಿ ಇದು ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಬೇಕು. ಅದಕ್ಕೋಸ್ಕರವಾಗಿ ಇದಕ್ಕೆ ಹೆಚ್ಚು ಹಣವನ್ನು ಒದಗಿಸಲು ಪ್ರಯತ್ನ ಮಾಡದೇ ಹೋದರೆ, ಸಣ್ಣ ನೀರಾವರಿ ಇಲಾಖೆಯನ್ನು ಮುಚ್ಚತಕ್ಕಂಥಾದ್ದು ಸೂಕ್ತ ಎನ್ನುವುದು ನನ್ನ ಅಭಿಪ್ರಾಯ. ಇದರ ಜೊತೆಗೆ, ಸಣ್ಣ ನೀರಾವರಿ ಇಲಾಖೆಯಲ್ಲಿ ಈಗಾಗಲೇ ನಡೆಯುತ್ತಿರುವ ಕೆಲಸಗಳಿಗೆ ಅಂದರೆ ಆನ್-ಗೋಯಿಂಗ್ ವರ್ಕ್ಸ್‌ಗೆ ಬೇಕಾಗಿರತಕ್ಕಂಥಾದ್ದು 283 ಕೋಟಿ ರೂಪಾಯಿಗಳು. ಈ ಹಣವನ್ನು ಹೇಗೆ ಒದಗಿಸಬೇಕು ಎನ್ನುವುದರ ಬಗ್ಗೆಯೂ ಸಹ ಸರ್ಕಾರ ಚಿಂತನೆಯನ್ನು ಮಾಡಬೇಕು.

(ಈ ಹಂತದಲ್ಲಿ ಸನ್ಮಾನ್ಯ (ಶ್ರೀ ಎಂ.ವಿ. ವೆಂಕಟಪ್ಪನವರು) ಅಧ್ಯಕ್ಷರು ಪೀಠವನ್ನಲಂಕರಿಸಿದರು)

6007 ಕಾಮಗಾರಿಗಳಲ್ಲಿ ಕೆಲವು ಕಾಮಗಾರಿಗಳು ಶೇಕಡ 90ರಷ್ಟು ಮುಗಿದಿವೆ. ಇನ್ನೂ ಸ್ವಲ್ಪ ದುಡ್ಡನ್ನು ಕೊಟ್ಟರೆ ಆ ಕಾಮಗಾರಿಗಳು ಪರಿಪೂರ್ಣವಾಗುತ್ತವೆ. ಈ ವರ್ಷ ಅದಕ್ಕೆ ಹಣ ಕೊಡದೇ ಹೋದರೆ, ಈಗಾಗಲೇ ಮಾಡಿರತಕ್ಕ ಕಾಮಗಾರಿಗಳೂ ಸಹ ಹಾಳಾಗಿ ಹೋಗುತ್ತವೆ. ಶೇಕಡ 90ರಷ್ಟು ಕಾಮಗಾರಿ ಮುಗಿದಿದ್ದು, ಉಳಿದಿರುವ ಕೇವಲ ಸಣ್ಣಪುಟ್ಟ ಕೆಲಸಗಳು ಮುಗಿದು ಅವು ಪರಿಪೂರ್ಣವಾಗಿ ಸಾರ್ವಜನಿಕರಿಗೆ ಉಪಯೋಗವಾಗುವ ಮಟ್ಟಕ್ಕೆ ಬರಬೇಕು ಎಂದರೂ ಕನಿಷ್ಠ 51 ಕೋಟಿ ರೂಪಾಯಿಗಳು ಬೇಕಾಗುತ್ತದೆ ಎಂದು ಆರ್ಥಿಕ ಇಲಾಖೆಗೆ ರೆಫರ್ ಮಾಡಲಾಗಿದೆ. ಈ 51 ಕೋಟಿ ರೂಪಾಯಿಗಳನ್ನಾದರೂ ಕೊಡದೇ ಹೋದರೆ ಇದುವರೆಗೆ ಮಾಡಿರತಕ್ಕಂಥ ಎಲ್ಲಾ ಕೆಲಸಗಳು ಹಾಳಾಗುತ್ತವೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ.

ಅಧ್ಯಕ್ಷರು : ಎರಡು ಗಂಟೆಯೊಳಗೆ ಚರ್ಚೆಯನ್ನು ಮುಕ್ತಾಯ ಮಾಡಿ, ನಾಲ್ಕು ಗಂಟೆಯೊಳಗೆ ಉತ್ತರವನ್ನು ಮುಗಿಸಬೇಕು ಎಂದು ಬಿಸಿನೆಸ್ ಅಡ್ವೈಸರಿ ಕಮಿಟಿಯಲ್ಲಿ ತೀರ್ಮಾನವಾಗಿತ್ತು. ಆದರೆ, ಇಂದು ಬೆಳಿಗ್ಗೆ ಬೈರೇಗೌಡರು ಮತ್ತಿತರ ಸದಸ್ಯರು ಕೇಳಿಕೊಂಡಂತೆ, ನಾಲ್ಕು ಗಂಟೆಗೆ ಚರ್ಚೆಯನ್ನು ಮುಗಿಸಿ ಆಮೇಲೆ ಉತ್ತರ ಎಂದು ಆಗಿತ್ತು. ಅದರ ಜೊತೆಗೆ without lunch break ಎಂದು ಇತ್ತು. ಲಂಚ್ ಅವರ್ ಕೊಟ್ಟಿದ್ದರಿಂದ ನಾವು ಐದು ಗಂಟೆಯವರೆಗೆ ಚರ್ಚೆಯನ್ನು ಮಾಡಬಹುದಾಗಿದೆ. ಮಲ್ಲಿಕಾರ್ಜುನ್‌ರವರ ನಂತರ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು ಮಾತನಾಡಬೇಕು ಎಂದು ಹೇಳಿದ್ದಾರೆ. ಸುಬ್ಬಾರೆಡ್ಡಿಯವರೇ, ನೀವು ಅಡ್ವೊಕೇಟ್ಸ್ ಬಿಲ್ ಬಂದಾಗ ಮುಕ್ಕಾಲು ಗಂಟೆ ಮಾತನಾಡಿ. ಈಗ ಬೇಡ.

ಶ್ರೀ ಕೆ.ಎಸ್. ಸುಬ್ಬಾರೆಡ್ಡಿ : ನಾನು ಒಂದು ನಿಮಿಷದಲ್ಲಿ ಮುಗಿಸುತ್ತೇನೆ.

ಅಧ್ಯಕ್ಷರು : ನಿಮ್ಮ ಲೀಡರ್ ಮಾತನಾಡುತ್ತಾರೆ ಎಂದು ಹೇಳಿದರೂ ನೀವು ಹೀಗೆ ಮಾತನಾಡುವುದೇ? ನೀವು ಒಂದು ನಿಮಿಷದಲ್ಲಿ ಮುಗಿಸುತ್ತೇನೆ ಎಂದರೆ ಇಲ್ಲಿರುವವರು ಯಾರೂ ಅದನ್ನು ನಂಬುವುದಿಲ್ಲ. ನೀವು ಈಗ ಮಾತನಾಡುವುದು ಬೇಡ. ಮುಖ್ಯಮಂತ್ರಿಗಳು ಕನಿಷ್ಠ ಒಂದರಿಂದ ಒಂದೂವರೆ ಗಂಟೆಯವರೆಗೆ ಉತ್ತರ ಕೊಡುತ್ತಾರೆ. ಆಮೇಲೆ ಕ್ಲಾರಿಫಿಕೇಷನ್ ಆಗುತ್ತದೆ. ಪರಿಸ್ಥಿತಿ ಈಗಿರುವಂತೆ, ಸಭೆ 8 ಗಂಟೆಯವರೆಗೂ ಹೋಗಬಹುದು. ಮುಖ್ಯಮಂತ್ರಿಗಳು ಎಷ್ಟು ಹೊತ್ತು ಉತ್ತರ ಕೊಡುತ್ತಾರೆ ಎನ್ನುವುದರ ಮೇಲೆ ಅದು ಅವಲಂಬಿಸುತ್ತದೆ. ನೀವು ಕೇಳಿದ ಪ್ರತಿಯೊಂದಕ್ಕೂ ಅವರು ಉತ್ತರ ಕೊಡಬೇಕಲ್ಲವೇ? ಆದ್ದರಿಂದ, ಮಲ್ಲಿಕಾರ್ಜುನ್‌ರವರೇ ನೀವು ಬೇಗ ಮುಗಿಸಿ. ನನಗೆ ನೀವು ಮೊದಲು ಏನು ಹೇಳಿದಿರಿ, ಈಗ ಚರ್ಚೆಯಲ್ಲಿ ನಾನು ಮಾತನಾಡುವುದಿಲ್ಲ, 4-5 ಬಿಲ್‌ಗಳ ಮೇಲೆ ಮಾತನಾಡಲು ಪ್ರಿಪೇರ್ ಆಗಿದ್ದೇನೆ ಎಂದು ಹೇಳಿದ್ದಿರಿ. ಎಲ್ಲಾ ಬಿಲ್‌ಗಳ ಮೇಲೂ ಮಾತನಾಡಿ ನಾನು ಹೇಳಿಯೂ ಇದ್ದೆ. ಆದ್ದರಿಂದ ದಯವಿಟ್ಟು 5 ನಿಮಿಷದಲ್ಲಿ ಮುಗಿಸಿ. ಈಗ ಕನ್‌ಕ್ಲೂಡ್ ಮಾಡಿ.

4.50 ಪಿಎಂ

ಶ್ರೀ ಕೆ.ಬಿ. ಮಲ್ಲಿಕಾರ್ಜುನ : ಮಾನ್ಯ ಅಧ್ಯಕ್ಷರೇ, ನಾನು ಬೇಗ ಮುಗಿಸಿ ಬಿಡುತ್ತೇನೆ. ಈಗಾಗಲೇ ಶೇಕಡ 90ರಷ್ಟು ಕೆಲಸಗಳಾಗಿರುವ ಕಾಮಗಾರಿಗಳನ್ನು ಮುಗಿಸಲು ಇನ್ನೂ 51 ಕೋಟಿ ರೂಪಾಯಿಗಳು ಬೇಕು. ದಯಮಾಡಿ ಅದನ್ನು ತಾವು ಆಯವ್ಯಯದಲ್ಲಿ ಒದಗಿಸಬೇಕು. ಇಲ್ಲದಿದ್ದರೆ, ಈಗಾಗಲೇ ಶೇಕಡ 90ರಷ್ಟು ಆಗಿರುವ ಕೆಲಸಗಳೆಲ್ಲವೂ ಹಾಳಾಗಿ ಹೋಗುತ್ತವೆ

ಎನ್ನುವ ಮಾತನ್ನು ಹೇಳುತ್ತೇನೆ. ರೈತ ಕಾಯಕ ಕೆರೆಗಳ ಬಗ್ಗೆ ಮತ್ತೆ ಯಾವಾಗಲಾದರೂ ಪ್ರಸ್ತಾಪ ಮಾಡುತ್ತೇನೆ. ಏಕೆಂದರೆ, 194 ಕೆರೆಗಳು ಏನಾಗಿವೆ ಎನ್ನುವ ಬಗ್ಗೆ ಮಾತನಾಡಲು ಈಗ ತಾವು ಟೈಂ ಕೊಡುವುದಿಲ್ಲ. ಇನ್ನೊಂದು ಮುಖ್ಯವಾದ ವಿಚಾರವೆಂದರೆ ಗೋಕಟ್ಟೆಗಳು. ಗೋಕಟ್ಟೆಗಳು ಎಲ್ಲಿವೆ ಎನ್ನುವುದೇ ನಮಗೆ ಸಮಸ್ಯೆಯಾಗಿದೆ. ಅವು ಸಣ್ಣ ನೀರಾವರಿ ಇಲಾಖೆಯಲ್ಲಿದೆಯೇ ಅಥವಾ ಜಿಲ್ಲಾ ಪರಿಷತ್ತಿನ ಇಂಜಿನಿಯರಿಂಗ್ ವಿಭಾಗದಲ್ಲಿದೆಯೇ ಅಥವಾ ಕಂದಾಯ ಇಲಾಖೆಯಲ್ಲಿದೆಯೇ ಅಥವಾ ಜಲ ಸಂವರ್ಧನೆ ಇಲಾಖೆಯಲ್ಲಿದೆಯೇ? ಏಕೆಂದರೆ, ಇವು ನಮಗೆ ಎಲ್ಲೂ ಸಿಗುತ್ತಿಲ್ಲ. ಈ ಎಲ್ಲಾ ಕೆರೆಗಳನ್ನು ಅಳತೆ ಮಾಡಿ, ಬೌಂಡರಿ ಫಿಕ್ಸ್ ಮಾಡಿ, ಒತ್ತುವರಿಯನ್ನು ಹೊರಗೆ ಹಾಕಲು ನೀವು ಬಜೆಟ್‌ನಲ್ಲಿ ಕನಿಷ್ಟ ಒಂದು ಕೋಟಿ ರೂಪಾಯಿಗಳನ್ನಾದರೂ ಒದಗಿಸದೇ ಹೋದರೆ ಈ ಕಾರ್ಯಕ್ರಮವಾಗುವುದಿಲ್ಲ. ರೈತ ಕಾಯಕ ಕೆರೆ ಹಾಳಾಗಿ ಹೋಗುತ್ತವೆ, ಅದು ಫಲಪ್ರದವಾಗುವುದಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ಇನ್ನು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಬಗ್ಗೆ ಒಂದೇ ಒಂದು ಮಾತನ್ನು ಹೇಳುತ್ತೇನೆ. ಮಾನ್ಯ ಸಚಿವರು ಗಮನ ಹರಿಸಬೇಕು. ಈ ಇಲಾಖೆಗೆ ಸಂಬಂಧಿಸಿದಂತೆ ನನಗೆ ಮೂರು ಸಮಸ್ಯೆಗಳಿಗೆ ಉತ್ತರ ಬೇಕು. ಮೊದಲನೆಯದು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಕೆಮ್ಮಣ್ಣುಗುಂಡಿಯಲ್ಲಿ ಮತ್ತು ಕುದುರೆಮುಖದಲ್ಲಿ ಎಷ್ಟು ಎಕರೆ ಪ್ರದೇಶವನ್ನು ಅದಿರು ತೆಗೆಯಲು ಕೊಟ್ಟಿದ್ದಾರೆ? ಅದನ್ನು ಅಳತೆ ಮಾಡಿಸಿ, ಕೊಟ್ಟಿರುವುದಕ್ಕಿಂತ ಮೀರಿ ಹೋಗದ ರೀತಿ ಕ್ರಮ ತೆಗೆದುಕೊಳ್ಳಬೇಕು. ಲಿಂಗದಹಳ್ಳಿ ಎನ್ನುವ ಗ್ರಾಮದಲ್ಲಿ ಕ್ವಾರಿಯಿಂಗ್ ಮಾಡಲು ಆರು ಎಕರೆ ಪ್ರದೇಶವನ್ನು ಲೀಸ್‌ಗೆ ಕೊಟ್ಟಿದ್ದೀರಿ. ಆದರೆ ಅವರು ಸುಮಾರು 20 ಎಕರೆಗೂ ಹೆಚ್ಚು ಪ್ರದೇಶದಲ್ಲಿ ಕ್ವಾರಿಯಿಂಗ್‌ಮಾಡುತ್ತಿದ್ದಾರೆ. ಅದನ್ನು ನಿಲ್ಲಿಸಲು ಕ್ರಮ ತೆಗೆದುಕೊಳ್ಳಬೇಕು ಎನ್ನುವ ಮಾತನ್ನು ಹೇಳುತ್ತೇನೆ. ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟ ತಮಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಸುಬ್ಬಾರೆಡ್ಡಿಯವರೇ, ನೀವು ಐದು ನಿಮಿಷಗಳಲ್ಲಿ ಮುಗಿಸಿ.

(ಈ ಹಂತದಲ್ಲಿ ಸದಸ್ಯರಾದ ಕರಡಿ ಸಂಗಣ್ಣ ಅಮರಪ್ಪನವರು ಎದ್ದುನಿಂತು ಮಾತನಾಡಲು ಅವಕಾಶ ಕೊಡಬೇಕೆಂದು ಕೇಳಿದರು)

ಅಧ್ಯಕ್ಷರು : ಸಂಗಣ್ಣ ಅವರೇ, ದಯವಿಟ್ಟು ಬೇಡ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ : ದಯವಿಟ್ಟು ಹೊಸಬರಿಗೆ ಅವಕಾಶಕೊಡಿ. ಐದು ನಿಮಿಷ ಅವಕಾಶ ಕೊಡಿ. ಅವರು ಮಾತನಾಡಲಿ.

ಅಧ್ಯಕ್ಷರು : ಸಮಯದ ಅಭಾವವಿದೆ. ಆಯಿತು, ಅವರದ್ದು ಆದನಂತರ ಐದು ನಿಮಿಷ ಕೊಡುತ್ತೇನೆ ಮಾತನಾಡಲಿ. ಏಕೆಂದರೆ, ನಂತರ ವಿರೋಧ ಪಕ್ಷದ ನಾಯಕರು ಮಾತನಾಡುವುದಾಗಿ ತಿಳಿಸಿದ್ದಾರೆ. ಅವರು ಮಾತನಾಡುತ್ತೇನೆ ಎಂದರೆ ನಾನು ಬೇಡ ಎಂದು ಹೇಳುವ ಹಾಗಿಲ್ಲ. ಸುಬ್ಬಾರೆಡ್ಡಿಯವರೇ, ನೀವು ಐದು ನಿಮಿಷದಲ್ಲಿ ಮುಗಿಸಿ. ನಾನು ಟೈಂ ನೋಡುತ್ತಿರುತ್ತೇನೆ.

†ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) : ಮಾನ್ಯ ಅಧ್ಯಕ್ಷರೇ, ನ್ಯಾಯಾಂಗ ಇಲಾಖೆಗೆ ಸಂಬಂಧಿಸಿದ ಬಹಳ ಮುಖ್ಯವಾದ ಸಮಸ್ಯೆಗಳನ್ನು ಮಾತ್ರ ತಿಳಿಸಲು ನಾನು ಇಚ್ಛಿಪಡುತ್ತೇನೆ. ಸಂಸ್ಥಾನದಲ್ಲಿರುವ ಎಲ್ಲಾ ಕೋರ್ಟುಗಳಿಗೆ, ಹೊಸ ಕೋರ್ಟುಗಳ ಕನ್‌ಸ್ಟ್ರಕ್ಷನ್‌ಗೆ

ಶೇಕಡ 50 ರಷ್ಟು ಹಣವನ್ನು ಕೇಂದ್ರ ಸರ್ಕಾರದವರು ಕೊಡುತ್ತಾರೆ, ಶೇಕಡ 50ರಷ್ಟು ರಾಜ್ಯ ಸರ್ಕಾರದ ಪಾಲು ಆಗಿದೆ. ಆದರೆ ಅಲ್ಲಿ ಲೈಬ್ರರಿಗೆ ಜಾಗ ಇಲ್ಲ, ಒಂದು ಕ್ಯಾಂಟೀನೂ ಇಲ್ಲ, ಕ್ಲೈಂಟ್ಸ್ ಕುಳಿತುಕೊಳ್ಳಲು ಜಾಗ ಇಲ್ಲ, ಇವುಗಳಿಗೆ ಪ್ರಾಮಿಷನ್ ಮಾಡಿಲ್ಲ ವಕೀಲರು ಕುಳಿತುಕೊಳ್ಳಲು ಜಾಗ ಇಲ್ಲ. ರಾಜ್ಯ ಸರ್ಕಾರದವರು ಗ್ರಾಂಟ್ಸ್ ಕೊಡುತ್ತಿಲ್ಲ. ಕೇಂದ್ರ ಸರ್ಕಾರದವರು they are giving, But, provision should be made for that purpose also. 1998-99ರಲ್ಲಿ ಐದು ಕೋರ್ಟುಗಳಿಗೆ ಸ್ಯಾಂಕ್ಷನ್ ಆಯಿತು. ಹಿಂದಿನ ಕಾನೂನು ಸಚಿವರಾಗಿದ್ದಂಥ ಶ್ರೀಮಾನ್ ನಾಣಯ್ಯನವರು, ನಾಳೆಯೇ ಫೌಂಡೇಷನ್ ಹಾಕುತ್ತೇವೆ ಎಂದು ಹೇಳಿದರು. ಐದು ಕೋರ್ಟ್‌ಗಳು ಸ್ಯಾಂಕ್ಷನ್ ಆಯಿತು. ಆದರೆ ಇದುವರೆಗೂ ಆ ಕಾರ್ಯಕ್ರಮವನ್ನು ಜರುಗಿಸಿಲ್ಲ. ಏಕೆ ಎಷ್ಟು ತಡವಾಯಿತು? ಮೊನ್ನೆಯ ದಿವಸ ಮುಖ್ಯನ್ಯಾಯಾಧೀಶರು ಮತ್ತು ಲೋಕೋಪಯೋಗಿ ಸಚಿವರಾದ ಧರ್ಮಸಿಂಗ್‌ರವರು ಅದನ್ನು ನೋಡಿದರು. ಆಗ ಲೋಕೋಪಯೋಗಿ ಸಚಿವರು, ನಾನು ಮತ್ತು ಕಾನೂನು ಸಚಿವರು ಕುಳಿತು ಇದರ ಬಗ್ಗೆ ಯೋಚನೆ ಮಾಡುತ್ತೇವೆ ಎಂದು ಹೇಳಿದರು. ಐದು ಕೋರ್ಟುಗಳು ಮಂಜೂರಾಗಿ ಸುಮಾರು 3-4 ವರ್ಷಗಳಾದವು. ಇನ್ನೂ ಆ ಕೋರ್ಟುಗಳು ಸ್ಥಾಪನೆಯಾಗಿಲ್ಲ. ವಿವಿಧ ಕ್ರಿಮಿಕಲ್ ಕೋರ್ಟುಗಳಲ್ಲಿ ಸುಮಾರು ಒಂದು ಲಕ್ಷದ 20 ಸಾವಿರ ಮೊಕದ್ದಮೆಗಳು ಬಾಕಿ ಇವೆ. ಆದರೆ ಕೋರ್ಟುಗಳನ್ನು ಮಾಡುವುದಕ್ಕೆ ಜಾಗ ಇಲ್ಲ. ನ್ಯಾಯಾಧೀಶರು ರೆಡಿಯಾಗಿದ್ದಾರೆ. ಆದ್ದರಿಂದ, ಆದಷ್ಟು ಬೇಗ ಇವುಗಳನ್ನು ಮಾಡಬೇಕು ಎಂದು ನಾನು ಮಾನ್ಯ ಸಚಿವರಿಗೆ ಹೇಳುತ್ತಿದ್ದೇನೆ. ಇನ್ನೊಂದು ಬಹಳ ಮುಖ್ಯವಾದ ವಿಚಾರವೆಂದರೆ, ಡಿವಿಷನಲ್ ಕಮೀಷನರುಗಳು 30-6-2000ರಿಂದ ಯಾವುದೇ ಕೇಸುಗಳನ್ನು ಒಪ್ಪಿಕೊಳ್ಳುತ್ತಿಲ್ಲ. ಮಾನ್ಯ ಕಂದಾಯ ಸಚಿವರು ಗಮನಿಸಬೇಕು. They are not accepting any case. No case is presented before the Divisional Commissioner. He is not accepting. Notification has not been issued extending his services. ಅವರ ಮುಂದೆ ಇರುವಂಥ ಕೇಸುಗಳನ್ನು ಡಿವಿಷನಲ್ ಕಮೀಷನರುಗಳು ತೆಗೆದುಕೊಳ್ಳುತ್ತಿಲ್ಲ. ಏಕೆಂದರೆ, My powers are not extended there is no notification by the State Government. ಎಂದು ಹೇಳುತ್ತಾರೆ. ಡಿವಿಷನಲ್ ಕಮೀಷನರುಗಳು ಡೆಪ್ಯೂಟಿ ಕಮೀಷನರುಗಳು ಮತ್ತು ಅಸಿಸ್ಟೆಂಟ್ ಕಮೀಷನರುಗಳಿಗೆ ಯಾವುದೇ ಕೇಸುಗಳು ಬಂದರೂ ಕೂಡ ಅವರು ಇಲ್ಲ, ಅವರು ವಿಧಾನಸೌಧಕ್ಕೆ ಹೋಗಿದ್ದಾರೆ ಅಥವಾ ಕಮೀಷನರ್ ಹತ್ತಿರ ಹೋಗಿದ್ದಾರೆ ಅಥವಾ ರೆವಿನ್ಯೂ ಮಿನಿಸ್ಟರ್ ಹತ್ತಿರ ಹೋಗಿದ್ದಾರೆ ಎಂದು ಹೇಳುತ್ತಾರೆ. ಹೀಗಾಗಿ ಕೇಸುಗಳು ಹಿಯರಿಂಗ್‌ಗೆ ಬರುತ್ತಿಲ್ಲ. ಹಿಂದೆ ಒಬ್ಬ ಡೆಪ್ಯುಟಿ ಕಮೀಷನರ್ ಇದ್ದರು. ಕನ್‌ವರ್ಷನ್ ಡಿ.ಸಿ ಎಂದು ಅವರು ಹೆಸರಾಗಿ ಬಿಟ್ಟಿದ್ದರು. ಯಾರಾದರೂ ಕನ್‌ವರ್ಷನ್‌ಗೆ ಬಂದರೆ ಏನು ಬೇಕು ಹೇಳು ಎಂದು ಕೇಳುತ್ತಿದ್ದರು ಮತ್ತು ಕೆಲಸವನ್ನು ಬೇಗನೆ ಮಾಡಿಕೊಡುತ್ತಿದ್ದರು. ಮಾಮೂಲಿ ಏನಿತ್ತೋ ಅದನ್ನು ತೆಗೆದುಕೊಳ್ಳುತ್ತಿದ್ದರು. ಹಿಂದೆ ಮುಂದೆ ನೋಡುತ್ತಿರಲಿಲ್ಲ. ನಾನು ಬಹಳ ಮುಖ್ಯವಾದ ವಿಚಾರವನ್ನು ಹೇಳುತ್ತಿದ್ದರೆ ರೆವಿನ್ಯೂ ಮಿನಿಸ್ಟರ್ ಏನನ್ನೋ ನೋಡುತ್ತಿದ್ದಾರೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ನಾನು ಯಾವಾಗಲೂ ಸುಬ್ಬಾರೆಡ್ಡಿಯವರ ಕಡೆಗೇ ನೋಡಲು ಆಗುತ್ತದೆಯೇ? ಒಬ್ಬ ಎಂ ಎಲ್ ಎ ಬಂದು ಒಂದು ಕಾಗದವನ್ನು ಕೊಟ್ಟರು. ಅದನ್ನು ನೋಡುತ್ತಿದ್ದೆ. ಯಾವ ಕಡೆಗೋ ನೋಡುತ್ತಿದ್ದಾರೆ ಎಂದರೆ ಹೇಗೆ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಇವತ್ತಿನ ದಿವಸ ರಿಸರ್ವ್ ಆಗಿರುವ ಸುಮಾರು ನೂರು ಮೊಕದ್ದಮೆಗಳು ಬೆಂಗಳೂರು, ಸ್ಪೆಷಲ್ ಡಿ.ಸಿ ಮುಂದೆ ಇವೆ. He is not delivering the judgement. ಏತಕ್ಕಾಗಿ ಅವರು ತಡಮಾಡುತ್ತಿದ್ದಾರೆ. ಏನು ಕಾರಣ?

ಶ್ರೀ ಹೆಚ್.ಸಿ. ಶ್ರೀಕಂಠಯ್ಯ : ಅವರು ಹೇಳುತ್ತಿರುವುದು ನನ್ನ ಗಮನಕ್ಕೆ ಬಂದಿದೆ. ಅದರ ಬಗ್ಗೆ ಸರ್ಕಾರ ಏನು ತೀರ್ಮಾನ ತೆಗೆದುಕೊಳ್ಳಬೇಕೋ ಅದನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಶ್ರೀಮಾನ್ ಶ್ರೀಕಂಠಯ್ಯನವರು ನಮ್ಮ ವಕೀಲರ ಸಂಘಕ್ಕೆ ಬಂದಿದ್ದರು. ಅಲ್ಲಿ ನಾವು ಅವರಿಗೆ ಒಂದು ಮನವಿಯನ್ನು ಕೊಟ್ಟೆವು. ಅದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದಾರೆ? All over the State, Deputy Commissioners, Assistant Commissioner, Divisional Commissioners the are all guided by the Government. ಇವರು ಏನು ಹೇಳಿದರೆ ಅದು ಆಗುತ್ತದೆ. ಆದ್ದರಿಂದ, ರೆವಿನ್ಯೂ ಅಡ್ಮಿನಿಸ್ಟ್ರೇಷನ್ನೇ ಬೇರೆ, ಮತ್ತು ಕೋರ್ಟುಗಳಿಗೆ ಸಂಬಂಧಿಸಿದಂತೆ ಸ್ಪೆಷಲ್ ಡಿ.ಸಿಗಳೇ ಬೇರೆ ಎಂದು ಮಾಡಿದರೆ ಬಹಳ ಒಳ್ಳೆಯದು. ಇದು ಬಹಳ ಮುಖ್ಯವಾದುದು. ಇನ್ನೊಂದು ಪ್ರಮುಖವಾದ ವಿಚಾರವೆಂದರೆ, ಬೆಂಗಳೂರಿನಲ್ಲಿರುವ ಲೇಬರ್ ಕೋರ್ಟುಗಳು, ಇಂಡಸ್ಟ್ರಿಯಲ್ ಟ್ರಿಬ್ಯುನಲ್ ಮತ್ತು ಕೆಎಟಿ ಇವುಗಳೆಲ್ಲವೂ ಬೇರೆ ಬೇರೆ ಖಾಸಗಿ ಕಟ್ಟಡಗಳಲ್ಲಿದ್ದು, ಲಕ್ಷಾಂತರ ರೂಪಾಯಿಗಳ ಬಾಡಿಗೆಯನ್ನು ಕೊಡುತ್ತಿದ್ದೇವೆ. Why not we have it in a proper place? PWD Minister, Mr. Dharam Singh is ready. We will sit together. See that Courts are located at a Central place. That was the aim of Hanumathaiah. ಬೆಂಗಳೂರಿಗೆ ಯಾರೇ ಕಕ್ಷಿದಾರರು ಬಂದರೂ ಅವರಿಗೆ ಸೆಂಟ್ರಲ್ ಪ್ಲೇಸ್‌ನಲ್ಲಿ ಒಂದೇ ಕಡೆ ಕೋರ್ಟುಗಳಿರಬೇಕು ಎಂದು ಹನುಮಂತಯ್ಯನವರು ಹೇಳುತ್ತಿದ್ದರು. ಅದು ಅವರ ಉದ್ದೇಶವಾಗಿತ್ತು. ಇದನ್ನು ಮಾಡಬೇಕು ಎಂದು ಚಂದ್ರೇಗೌಡರಿಗೆ ಬಹಳ ಆಸೆ ಇದೆ. ಆದರೆ ಏನೂ ಆಗುತ್ತಿಲ್ಲ. ಶಿಡ್ಲಘಟ್ಟದಲ್ಲಿ ಒಂದು ತಿಂಗಳು ಸ್ಟ್ರೈಕ್ ನಡೆಯಿತು. ಅಲ್ಲಿ ಇರುವುದು 120 ವರ್ಷಗಳ ಹಳೆಯ ಕಟ್ಟಡ. ಅದು ಬಿದ್ದು ಹೋಗುವ ಪರಿಸ್ಥಿತಿಯಲ್ಲಿದೆ. ನಾನು ಚಿಕ್ಕಮಗಳೂರಿಗೆ ಹೋಗಿ ಚಂದ್ರೇಗೌಡರನ್ನು ಕರೆದುಕೊಂಡು ಬಂದೆ. ವಕೀಲರು ಗಲಾಟೆ ಮಾಡುತ್ತಿದ್ದಾರೆ ಬನ್ನಿ ಎಂದು ಕರೆದುಕೊಂಡು ಬಂದೆ. When Rome was burning, Nero was fiddling. ಎನ್ನುವ ಪರಿಸ್ಥಿತಿ ಇದೆ. ತುಮಕೂರಿನಲ್ಲಿರುವುದೂ 120 ವರ್ಷಗಳಷ್ಟು ಹಳೆಯದಾದ ಕಟ್ಟಡ. ಬೆಂಗಳೂರಿನಲ್ಲಿ ಈ ಪರಿಸ್ಥಿತಿ ಇದೆ. ಹೊಸಕೋಟೆಯಲ್ಲಿ ಕೋರ್ಟ್ ಇಲ್ಲ, ಶಿಡ್ಲಘಟ್ಟದಲ್ಲಿ ಕೋರ್ಟ್ ಇಲ್ಲ. ಕೋರ್ಟುಗಳು ಯಾವುದೋ ಒಂದು ರೆಂಟೆಡ್ ಬಿಲ್ಡಿಂಗ್‌ನಲ್ಲಿವೆ. ಡಿಸ್ಟ್ರಿಕ್ಟ್ ಮಿನಿಸ್ಟರ್‌ಗಳು ಏನು ಮಾಡುತ್ತಿದ್ದಾರೆ.

ಶ್ರೀ ಬಿ.ಎನ್. ಬಚ್ಚೇಗೌಡ : ಹೊಸಕೋಟೆಯಲ್ಲಿ ಕೋರ್ಟ್ ಇಲ್ಲ ಎಂದು ಹೇಳಿದಿರಿ. ಹೊಸಕೋಟೆಯಲ್ಲಿ ಕೋರ್ಟ್ ಇದೆ, ಅದು ನಡೆಯುತ್ತಿದೆ. ಆದರೆ ಹೊಸ ಕಟ್ಟಡ ಇಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಹೊಸ ಕಟ್ಟಡಗಳಿಲ್ಲ ಎನ್ನುವುದನ್ನೇ ನಾನು ಹೇಳುತ್ತಿರುವುದು. ಕೋರ್ಟುಗಳಿಗೆ ಕಟ್ಟಡಗಳು ಆಗಬೇಕಾದ ಅವಶ್ಯಕತೆ ಇದೆ. ಈಗ ಕೋರ್ಟುಗಳು ರೆಂಟೆಡ್ ಹೌಸ್‌ಗಳಲ್ಲಿವೆ. ಅವುಗಳಿಗೆ ಆದಷ್ಟು ಬೇಗ ಹೊಸ ಕಟ್ಟಡಗಳನ್ನು ಮಾಡಬೇಕು. ಇನ್ನೊಂದು

ಮುಖ್ಯವಾದ ವಿಚಾರವೆಂದರೆ, ಬೆಂಗಳೂರಿನಲ್ಲಿ ಕ್ರೈಮ್ ರೇಟ್ ಹೆಚ್ಚುತ್ತಿದೆ. ಮಾನ್ಯ ಖರ್ಗೆಯವರು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಹೊಸ ಮೆಥೆಡ್‌ಗಳು ಬರುತ್ತಿವೆ. ಎಲ್ಲಿ ನೋಡಿದರೂ ಮರ್ಡರ್‌ಗಳು ನಡೆಯುತ್ತಿವೆ. ಗನ್ ಹಿಡಿದುಕೊಂಡು ಬಂದು You Shelve down the money. Shelve down the money. ಎಂದು ಹೆದರಿಸುತ್ತಾರೆ. ಇದು ಅಮೇರಿಕನ್ ಸಿಸ್ಟಂ. ಒಂದೇ ಒಂದು ನಿಮಿಷದಲ್ಲಿ ಎಲ್ಲವೂ ಮುಗಿದು ಹೋಗುತ್ತದೆ. ಇಲಾಖೆಯವರು ಏನು ಮಾಡುತ್ತಿದ್ದಾರೆ. ಯಾರು ಜಾಸ್ತಿ ಕರಪ್ಟ್ ಆಗಿದ್ದಾರೋ ಅಂಥವರಿಗೆ ಪ್ರಶಸ್ತಿಗಳನ್ನು ಕೊಡಲಾಗುತ್ತದೆ. ಆನೆಸ್ಟ್ ಪೊಲೀಸ್ ಆಫೀಸರ್‌ಗಳಿದ್ದಾರೆ. ಅವರನ್ನು ಇಲ್ಲಿಗೆ ಕರೆಸಿ ಬೇರೆ ಯಾವ ಕನ್ಸಿಡರೇಷನ್ ಮೇಲೂ ನೀವು ಹೋಗಬಾರದು. ಶಿಡ್ಲಘಟ್ಟದಲ್ಲಿ ಒಬ್ಬ ಇನ್ಸ್‌ಪೆಕ್ಟರ್ ಇದ್ದರು. ಅವರು ಬದಲಾಯಿಸಿ ಎಂದು ನಾವು ನೂರು ಜನ ಲಾಯರ್‌ಗಳು ಖರ್ಗೆಯವರ ಹತ್ತಿರ ಹೋದಾಗ, ಅವರನ್ನು ಬದಲಾವಣೆ ಮಾಡುತ್ತೇವೆ ಎಂದು ಅವರು ಹೇಳಿದರು. ಮಾಮೂಲಿ ಏನು ಇತ್ತೋ ಅದು ನಡೆಯುತ್ತಿತ್ತು. ಜನಗಳು ಬಹಳ ಹೇಳುತ್ತಿದ್ದರು. ನಾನೇ ಸ್ವತಃ ಹೋಗಿ ನೋಡಿದೆ. ಅಲ್ಲಿ Sub-Inspector is Inspector; Inspector is Sub-Inspector. ಪೋಲಿಸ್ ಇಲಾಖೆಯವರು ಏನು ಮಾಡುತ್ತಿದ್ದಾರೆ? ಒಂದು ಆ್ಯಕ್ಸಿಡೆಂಟ್ ಆಯಿತು ಎಂದರೆ ಪೋಲಿಸಿನವರು ಮಹಜರು ಮಾಡುತ್ತಾರೆ, ಲಾಯರ್‌ಗಳನ್ನೂ ಇಟ್ಟುಕೊಳ್ಳುತ್ತಾರೆ. ಶ್ಯೂರಿಟಿಯನ್ನೂ ಕೊಡಿಸಿಕೊಡುತ್ತಾರೆ. ಪೊಲೀಸ್ ಇಲಾಖೆಯಲ್ಲಿರುವ ಇಂಥ ಒಂದು ದುಸ್ಥಿತಿಯನ್ನು ಯಾವ ರೀತಿ ಕಂಟ್ರೋಲ್ ಮಾಡುತ್ತೀರಿ? You must set an example to others. ತಾವು ಸರಿಯಾಗಿದ್ದರೆ, ಯಥಾ ರಾಜಾ, ತಥಾ ಪ್ರಜಾ ರಾಜರು ಸರಿಯಾಗಿದ್ದರೆ, ಎಲ್ಲರೂ ಮಾಡಬಹುದು. ರಾಜರೇ ಇಲ್ಲದಿದ್ದರೆ, ಏನು ಮಾಡುತ್ತೀರಿ? ಇಂಥ ಒಂದು ಪರಿಸ್ಥಿತಿಯಲ್ಲಿ....

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) : ಅವರು ಶಿಡ್ಲಘಟ್ಟದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಅದಕ್ಕೆ ಕ್ಲಾರಿಫಿಕೇಷನ್ ಹೇಳದಿದ್ದರೆ ತಪ್ಪಾಗುತ್ತದೆ. ವಕೀಲರ ಸಂಘದ ಒಬ್ಬ ಲಾಯರ್‌ಗೆ ಮೋಟಾರ್ ಸೈಕಲ್‌ನಲ್ಲಿ ಹೋಗುತ್ತಿದ್ದಾಗ, ಆಕ್ಸಿಡೆಂಟ್ ಆಯಿತು. ಆಗ ತಕ್ಷಣ ಪೊಲೀಸ್ ಸ್ಟೇಷನ್‌ಗೆ ರಿಪೋರ್ಟ್ ಬಂತು, ಅವರನ್ನು ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಅವರ ತಮ್ಮ ಅವರ ಜೊತೆಯಲ್ಲಿ ಹೋದಾಗ, ರಾಜಾಜಿನಗರ ಪೋಲಿಸ್ ಸ್ಟೇಷನ್‌ನಲ್ಲಿ ಆಕ್ಸಿಡೆಂಟ್ ಆಗಿದೆ ಎಂದು ಎಫ್‌ಐಆರ್ ಹಾಕಿ ಅವರು ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ. ಆದಾದನಂತರ 3-4 ದಿವಸದ ನಂತರ ಅವರು ಚೇತರಿಸಿಕೊಂಡ ನಂತರ, ಮತ್ತೆ ಹೋಗಿ 50-7 ಹಾಕಬೇಕೆಂದು ಹೇಳಿ, ಇನ್ನೊಂದು ಕಂಪ್ಲೇಂಟ್ ಅನ್ನು ಇವರು ಫ್ಯಾಬ್ರಿಕೇಟ್ ಮಾಡಿಕೊಟ್ಟು ಅದನ್ನು ರಿಜಿಸ್ಟರ್ ಮಾಡಬೇಕೆಂದು ಇವರು ಖುದ್ದಾಗಿ ಹೋಗಿ, ಇವರು ಒಬ್ಬರು ಲೀಗಲ್ ಅಡ್ವೈಸರ್ ಆಗಿ, ಇವರೇ ಸ್ಟೇಷನ್‌ಗೆ ಹೋಗಿ ಅವರ ಮೇಲೆ ಎಫ್‌ಐಆರ್ ಒತ್ತಾಯ ತಂದಿದ್ದಾರೆ. ಆಗ ಅವರು ನಾನು ಹೇಗೆ ಮಾಡುವುದಕ್ಕೆ ಆಗುತ್ತದೆ, ಇದು ವಾಸ್ತವಾಂಶವಿದೆ, ಇವರೇ ಕಂಪ್ಲೇಂಟ್ ಕೊಟ್ಟು, ಅವರ ತಮ್ಮನೇ ಹೋಗಿ ರಾಜಾಜಿನಗರ ಪೋಲಿಸ್ ಸ್ಟೇಷನ್‌ನಲ್ಲಿ ಎಫ್‌ಐಆರ್ ಮಾಡಿಸಿ, ಆಕ್ಸಿಡೆಂಟ್ ಎಂದು ರಿಜಿಸ್ಟರ್ ಮಾಡಿಸಿದ್ದಾರೆ, ನಾನು ಆಕ್ಸಿಡೆಂಟ್ ಎಂದು ಕೇಸ್ ತೆಗೆದುಕೊಂಡು ರಿಜಿಸ್ಟರ್ ಮಾಡಿಕೊಂಡಿದ್ದೇನೆ, ನೀವು ಇದನ್ನು 507ಗೆ ಕನ್‌ವರ್ಟ್ ಮಾಡಿ ಎಂದರೆ ಹೇಗೆ ಎಂದು ಕೇಳಿದರೆ, ಅದರ ಮೇಲೆ ಇವರು ಇಲ್ಲೀಗಲ್ ಆಗಿ, ನಾನೊಬ್ಬ ಅಡ್ವೋಕೇಟ್, ನಾನು ಎಂಎಲ್‌ಎ, ನಾನು ಹೇಳಿದ ಹಾಗೆ ಮಾಡಬೇಕೆಂದು ಒತ್ತಾಯ ತಂದರೆ,

ಯಾರು ಕಾನೂನಿನ ವಿರುದ್ಧವಾಗಿ ಮಾಡಲಿಕ್ಕೆ ಸಾಧ್ಯ? ಇವರ ಮಾತು ಕೇಳಲಿಲ್ಲವೆಂದು ಅವರ ಮೇಲೆ ಆರೋಪ, ಮುಷ್ಕರ ಮಾಡುವಂಥ ಕೆಲಸ...

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ದಯವಿಟ್ಟು ಇಲ್ಲದ್ದನ್ನು ಆಪಾದನೆ ಮಾಡುವುದು ಬೇಡ. ಕಾನೂನು ಹೇಗಿದೆ ಎಂಬುದು ನನಗೆ ಗೊತ್ತು. ಮಾನ್ಯ ಮುನಿಯಪ್ಪನವರ ಮೇಲೆ, ನಾನು ಏನು ಬೇಕಾದರೂ ಆಪಾದನೆ ಮಾಡಬಹುದು, ಆದರೆ ಹಾಗೆ ಮಾಡುವುದಕ್ಕೆ ನನಗೆ ಇಂಟರೆಸ್ಟ್ ಇಲ್ಲ.

ಅಧ್ಯಕ್ಷರು : ಆ ವಿಷಯದ ಪ್ರಸ್ತಾಪ ಆನ್ ದಿ ಫ್ಲೋರ್ ಆಫ್ ದಿ ಹೌಸ್ ಬೇಡ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ನಮಗೆ ಬೇಕಾಗಿರುವುದು, ಬನ್ನೇರುಘಟ್ಟ ರೋಡ್‌ನಲ್ಲಿ ಕ್ವಾರಿ ಆಗಿದೆ. ಮೈನ್ಸ್ ಅಂಡ್ ಜಿಯಾಲಜಿಯವರು ಅಲ್ಲಿ ಬ್ಲಾಸ್ಟ್ ಮಾಡುತ್ತಿದ್ದಾರೆ. ಡೈಲಿ ಬ್ಲಾಸ್ಟ್ ಆಗುತ್ತಿದೆ. ಇವರು ಏನು ಮಾಡಿದ್ದಾರೆ?

ಅಧ್ಯಕ್ಷರು : ನೀವು ಎಲ್ಲಿಂದ ಎಲ್ಲಿಗೋ ಹೋಗುತ್ತಿದ್ದೀರಿ? ಕೋರ್ಟುಗಳಿಂದ ಆಗಲೇ ಜಿಯಾಲಜಿ ವಿಷಯಕ್ಕೆ ಪ್ರಸ್ತಾಪಿಸಲು ಹೊರಟಿದ್ದೀರಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಗೌರಿ ಬಿದನೂರಿನಿಂದ ಪ್ರತಿದಿನ ಲಾರಿಗಳ ಮೂಲಕ ಮರಳು ಬರುತ್ತಿದೆ. ಅದಕ್ಕೆ ಲೈಸೆನ್ಸ್ ಕೊಡುತ್ತಿದ್ದಾರೆ.

ಶ್ರೀ ಎನ್. ಸಂಪಂಗಿ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ನಾಳೆ ನಿಮಗೆ ಅವಕಾಶ ಕೊಡುತ್ತೇನೆ.

ಶ್ರೀ ಎನ್. ಸಂಪಂಗಿ : ಸದನ ಪ್ರಾರಂಭವಾದಾಗಿನಿಂದ ಇದೇ ಮಾತು ಹೇಳಿ ಕೊಡು ಬರುತ್ತಿದ್ದೀರಿ.

ಅಧ್ಯಕ್ಷರು : 4 ಗಂಟೆ ಎಂದು ಹೇಳಿ ಈಗ 5 ಗಂಟೆಯಾದಾರೂ ನಿಲ್ಲಿಸದಿದ್ದರೆ ಏನು ಮಾಡುವುದು ಹೇಳಿ?

ಶ್ರೀ ಎನ್. ಸಂಪಂಗಿ : ನಾನು ಮಾತನಾಡುವುದು ಬೇಡವೆಂದರೆ, ಸದನದಿಂದ ಆಚೆ ಹೋಗುತ್ತೇನೆ. ತಾವೇ ಹೇಳಿದ್ದೀರಿ, ಕಾಲಿಂಗ್ ಅಟೆನ್ಷನ್ ಕೊಟ್ಟಾಗ, ಬೇಡಿಕೆಗಳ ಮೇಲೆ ಚರ್ಚೆ ಆಗುವಾಗ ಮಾತನಾಡಿ ಎಂದಿರಿ.

ಅಧ್ಯಕ್ಷರು : ನೀವೇನು ಮಾತನಾಡಬೇಕೆಂದಿದ್ದೀರಿ, ಅದನ್ನು ಇನ್ನೂ ನಾವು 8 ದಿವಸ ಕೂರುತ್ತೇವೆ. ಆಗ ಮಾತನಾಡಬಹುದು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಆದ್ದರಿಂದ, Bangalore has become a crime city. ದಯವಿಟ್ಟು ಮಾನ್ಯ ಗೃಹ ಮಂತ್ರಿಗಳು ಇದನ್ನು ಸೀರಿಯಸ್ ಆಗಿ ತೆಗೆದುಕೊಳ್ಳಬೇಕು. Today crime rate is increasing. There are honest and sincere police officers. You post them to Bangalore City. ತಾವು ಯಾವುದನ್ನೂ ಕನ್‌ಸಿಡರೇಷನ್ ಮೇಲೆ ಮಾಡಬಾರದು. ಇಲ್ಲಿಗೆ ಒಳ್ಳೆಯ ಆಫೀಸರ್ಸ್ ಅನ್ನು ಹಾಕಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) : ಸುಬ್ಬಾರೆಡ್ಡಿಯವರೆ, ಯಾವ ಕನ್‌ಫಿಡರೇಷನ್ ಮೇಲೆ ಮಾಡಿದ್ದಾರೆಂಬುದನ್ನು ತಾವು ಹೇಳಿದರೆ ಗೊತ್ತಾಗುತ್ತದೆ. ಲಂಚ ತೆಗೆದುಕೊಂಡಿದ್ದಾರೆಯೇ?

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಬೇಕಾದಷ್ಟಿದೆ. ಕೊಡಿ ಎಂದರೆ,

ಶ್ರೀ ಮಲ್ಲಿಕಾರ್ಜುನ ಖರ್ಗೆ : ಕನ್‌ಸಿಡರೇಷನ್ ಎಂದರೆ ಏನು?

Sri K.N. Subba Reddy : I am ready to prove it.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಬಸವನಗುಡಿಗೆ ಇವರನ್ನು, ಅವರನ್ನು ಹಾಕಿ ಎಂದು ಬರಲಿಲ್ಲವೆ? ಸುಮ್ಮನೆ ನನ್ನನ್ನು ಕೆಣಕಬೇಡಿ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ನನ್ನ ಕಾನ್‌ಸ್ಟಿಟ್ಯೂಯೆನ್ಸಿಯಲ್ಲಿ, ಏನು ಮಾಡಿದ್ದಾರೆಂದರೆ, ನಾನು ಕೊಟ್ಟಿರುವ ಲೆಟರ್‌ಗೆ ಸಂಬಂಧಿಸಿದ್ದನ್ನು ಒಂದೂ ಮಾಡಿಲ್ಲ.

(ಗೊಂದಲ)

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ನಾನು ಆಗಲೇ ಫಾರೆಸ್ಟ್ ಮಿನಿಸ್ಟರ್ ಗಮನಕ್ಕೆ ತಂದಿದ್ದೆ. ಬನ್ನೇರುಘಟ್ಟದ ಹತ್ತಿರ ಸಕಲವಾರ ಎಂಬ ಹಳ್ಳಿ ಇದೆ. ಅಲ್ಲಿಗೆ ಆನೆಗಳು ಬಂದು ತೆಂಗಿನ ಕಾಯಿ ಗಿಡಗಳನ್ನೆಲ್ಲಾ ತಿಂದು ಹಾಕಿವೆ. ಆ ನಂತರ, ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನವರು ಬಂದು ಏನೇನಿದೆ ಅದಕ್ಕೆಲ್ಲಾ ಕಾಂಪನ್‌ಸೇಷನ್ ಕೊಡುತ್ತೇವೆಂದು ಹೇಳಿ ಹೋದರು. ಆನೆಗಳು ಬಂದು ತೆಂಗಿನ ಕಾಯಿ ಹಾಳು ಮಾಡಿ ಹೋದುವು, ಫಾರೆಸ್ಟ್‌ನವರು ಬಂದು ದುಡ್ಡು ತೆಗೆದುಕೊಂಡು ಹೋದರು. ಇಷ್ಟೇ ಆಗದ್ದು. ಇದನ್ನು ನಾನು ಮಾನ್ಯ ಅರಣ್ಯ ಸಚಿವರ ಗಮನಕ್ಕೆ ತಂದಿದ್ದೇನೆ. ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಸನ್ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯ ಕೃಷಿ ಉತ್ಪನ್ನ ಹಾಗೂ ರಫ್ತು ನಿಗಮ, ಮಾರುಕಟ್ಟೆ ವಿಷಯದ ಮೇಲೆ ನಾನು ಮಾತನಾಡಲು ಇಚ್ಛಿಸಿದ್ದೇನೆ. ಇವತ್ತು ಜಾಗತೀಕರಣ ಮತ್ತು ತಂತ್ರಜ್ಞಾನ ಎರಡೂ ಶಕ್ತಿಗಳನ್ನು ಗಮನಿಸಿದ್ದೇವೆಂದು ನಾನು ಭಾವಿಸುತ್ತೇನೆ. ಅದು ಅತ್ಯಂತ ಅದ್ಭುತವಾದ ಶಕ್ತಿ. ಕೇಂದ್ರ, ರಾಜ್ಯ ಸರ್ಕಾರಗಳಿರಬಹುದು, ಎಲ್ಲಾ ಪಕ್ಷದ ಮುಖಂಡರೂ ರಫ್ತು ಅಭಿವೃದ್ಧಿ ನಿಗಮ ಮತ್ತು ಸಂಸ್ಕರಣ ಕೇಂದ್ರಗಳನ್ನು ಸ್ಥಾಪಿಸಬೇಕೆಂಬ ಬಗ್ಗೆ ಬಹಳಷ್ಟು ಮಾತನಾಡುತ್ತಾರೆ. ಆದರೆ, ರಫ್ತು ವಲಯದ ಬಗ್ಗೆ ಹೇಳುವುದಾದರೆ, ಕಸಕ್ ಎಂಬ ಕಂಪನಿ ಕೇಂದ್ರ ಸರ್ಕಾರದ ಏಜೆನ್ಸಿ ರಾಜ್ಯ ಸರ್ಕಾರದ ಒಂದು ಸಂಸ್ಥೆಯಾಗಿದ್ದು, ಅದಕ್ಕೆ ಅಧಿಕೃತ ಷೇರು ಬಂಡವಾಳ 5 ಕೋಟಿ ರೂಪಾಯಿಗಳಿದೆ. ಸರ್ಕಾರದ ಅಧಿಕೃತ ಷೇರು 50 ಲಕ್ಷ ರೂಪಾಯಿಗಳು. ನೆರವು 25 ಲಕ್ಷ ರೂಪಾಯಿಗಳು. ಇವತ್ತು ಮಾತನಾಡುವುದರಲ್ಲಿಯೇ ನಾವು ಕಾಲ ಕಳೆಯುವುದಾದರೆ, ಇವತ್ತು ಬರವನ್ನು ನಾವು ನೋಡುತ್ತಿದ್ದೇವೆ. ರಾಜ್ಯದಲ್ಲಿ 2 ವರ್ಷಗಳಿಂದಲೂ ನಾವು ಸಂಪೂರ್ಣವಾದ ಬರವನ್ನು ಕಾಣುತ್ತಿದ್ದೇವೆ. ಒಂದೆಡೆ, ಅಲ್ಪ ಮಳೆಯಿಂದ ಅರೆ ಖುಷ್ಕಿ ಜಮೀನಿನಿಂದ ರೈತನನ್ನು ಬದುಕಿಸಿಬೇಕಾದರೆ, ಜಾಗತಿಕ ಮಟ್ಟದ ಒಪ್ಪಂದದ ಹಿನ್ನೆಲೆಯನ್ನು ಅವಲೋಕಿಸಿದಾಗ, ಇದಕ್ಕೆ ನಾವು ಒತ್ತು ಕೊಡುವುದು ಬಹಳ ಮುಖ್ಯವೆಂದು ಸರ್ಕಾರ ಆಲೋಚಿಸಬೇಕೆಂಬ ಒತ್ತಾಯವನ್ನು ನಾನು ಮಾಡುತ್ತೇನೆ. ಮೆಣಸಿನಕಾಯಿ, ಕೊತ್ತಂಬರಿ, ಬೇಳೆಕಾಳುಗಳು, ತೊಗರಿಗೆ 10 ಕೋಟಿ ರೂ. ಆದಾಯವನ್ನು ನಾವು ರಫ್ತು ವಲಯದಿಂದ ನೋಡಿದ್ದೇವೆ. ಹೂವಿನ ಬೆಳೆಯಿಂದ 10 ಕೋಟಿ ರೂಪಾಯಿ ಆದಾಯ ಪಡೆದಿದ್ದೇವೆ. ಅದನ್ನು ಬಿಟ್ಟರೆ, ಇದಕ್ಕೆ ಹೆಚ್ಚು ಒತ್ತು ಕೊಡುವ ಕೆಲಸವನ್ನು ಸರ್ಕಾರ ಮಾಡಿಲ್ಲ. ಅಂತರರಾಷ್ಟ್ರೀಯ ಸಮುದಾಯದ ಗುಣ ಮಟ್ಟವನ್ನು ಇವತ್ತು ನಾವು ನೋಡಬೇಕಾಗುತ್ತದೆ. ಭಾರತೀಯ ಕೃಷಿ ಪದ್ಧತಿ ನೋಡಿದಾಗ ಔಷಧಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸುವುದರಿಂದ ಅಲ್ಲಿ ನಮ್ಮ ಮಾಲು ರಿಜೆಕ್ಟ್ ಆಗುತ್ತದೆ. ಎಕ್ಸ್‌ಪೋರ್ಟ್

ಮಾಡುವ ಸಂದರ್ಭದಲ್ಲಿ ನಮ್ಮ ಮಾಲನ್ನು ರೆಫ್ಯೂಸ್ ಮಾಡುವಂಥಾದ್ದು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಕೆಲಸ ನಡೆಯುತ್ತಿದೆ. ಆದರೆ, ತಾವೊಂದು ಕಡೆ, ಕೀಟನಾಶಕಗಳನ್ನು ಬಳಸುವ ಕಾಳಿನಲ್ಲಿ ಆ ವಿಷದ ಪ್ರಮಾಣವನ್ನು ಕಡಿಮೆ ಮಾಡುವ ದಿಸೆಯಲ್ಲಿ ಮೂರು ಪ್ರಯೋಗಾಲಯಗಳನ್ನು ಪ್ರಾರಂಭಿಸುತ್ತೇವೆಂದು ಹೇಳಿದ್ದಿರಿ. ಅದರ ಬಗ್ಗೆ ತಾವೇನು ಕಾರ್ಯಕ್ರಮ ಹಾಕಿಕೊಂಡಿದ್ದೀರೆಂಬ ಬಗ್ಗೆ ಹೇಳಬೇಕಾಗುತ್ತದೆ. ನೀರಾವರಿ ಬಗ್ಗೆ ನಾವು ಕಾರ್ಯಕ್ರಮ ಹಾಕಿಕೊಂಡಿದ್ದೀರೆಂಬ ಬಗ್ಗೆ ಹೇಳಬೇಕಾಗುತ್ತದೆ. ನೀರಾವರಿ ಬಗ್ಗೆ ನಾವು ಮಾತನಾಡುತ್ತೇವೆ. ಹೆಚ್.ಕೆ. ಪಾಟೀಲರ ಉತ್ತಮ ಆಡಳಿತ ದಕ್ಷತೆಯನ್ನು ಹಾಗೂ ಅವರು ರೈತರ ಪರವಾಗಿರುವವರು ಎನ್ನುವುದನ್ನು ನಾವು ಮೆಚ್ಚುತ್ತೇವೆ. ಆದರೆ, ನಮ್ಮ ರಾಜ್ಯದ ಪಾಲನ್ನು ನಾವು ಬಳಸಿಕೊಳ್ಳಬೇಕಾಗಿದೆ. 734 ಟಿಎಂಸಿ ನೀರನ್ನು (ಎ) ಸ್ಕೀಂನಲ್ಲಿ ಅಲಾಟ್ ಆದದ್ದನ್ನು, ಬಳಸಿಕೊಳ್ಳಬೇಕಾಗಿದೆ. ಅದಕ್ಕೆ ಹಣಕಾಸಿನ ನೆರವು ಬಹಳ ಮುಖ್ಯವಾಗಿದೆ. ಇವತ್ತು ತಾಂತ್ರಿಕತೆಯ ದೋಷವೂ ಕೂಡ ಇದೆ. ಉದಾ: ಹೇಳುವುದಾದರೆ, ಸಿಂಗಟಾಲೂರಿನ ಬಗ್ಗೆ ತಮಗೆ ಗೊತ್ತಿದೆ. ನಾವಿಲ್ಲಿ ಕಾಂಟ್ರೋವರ್ಷಿ ಮಾಡುತ್ತಿದ್ದೇವೆ. ಯಾವುದೇ ಕ್ಷೇತ್ರದ ಶಾಸಕರು ಆ ನೀರನ್ನು ಬಳಸಿಕೊಳ್ಳುವ ಭಾವನೆಯನ್ನು ರೂಢಿಸಿಕೊಳ್ಳಬೇಕಾಗಿದೆ. ಸುಮಾರು 50-60 ಟಿಎಂಸಿ ನೀರು ನದಿ ಮೂಲಕ ಆಂಧ್ರಕ್ಕೆ ಹೋಗುತ್ತಿದೆ. ಕೆಳಗಿನವರಿಗೆ 14 ಟಿಎಂಸಿ ನೀರನ್ನು ಕೊಡುವ ಕಾರ್ಯಕ್ರಮವನ್ನು ಸರ್ಕಾರ ಹಾಕಿಕೊಂಡಿದೆ. ಸಿಂಗಟಾಲೂರು ಯೋಜನೆ ಮತ್ತು ಬ್ಯಾಲೆನ್ಸಿಂಗ್ ರಿಸರ್ವಾಯರ್ ಅನ್ನು ಸರ್ಕಾರ ಕೈಗೆತ್ತಿಕೊಂಡಾಗ ಮಾತ್ರ ಆ ಯೋಜನೆಯಲ್ಲಿ ಸಫಲತೆಯನ್ನು ಕಾಣಲಿಕ್ಕೆ ಸಾಧ್ಯವಿದೆ. ಸುಮಾರು ಒಂದು ಲಕ್ಷದ ಆರವತ್ತೇಳು ಸಾವಿರ ಎಕರೆ ಪ್ರದೇಶ ಈ ಯೋಜನೆಯಿಂದ ನಾವು ಲಾಭವನ್ನು ಪಡೆದುಕೊಳ್ಳುತ್ತೇವೆ. ಅದಕ್ಕಾಗಿ ನಾನು ಮಾನ್ಯ ಹೆಚ್ ಕೆ ಪಾಟೀಲ್‌ರವರನ್ನು ಅರಿಕೆ ಮಾಡಿಕೊಳ್ಳುತ್ತೇನೆ, ಜೊತೆ ಜೊತೆಯಲ್ಲಿ ಬ್ಯಾಲೆನ್ಸಿಂಗ್ ರಿಜರ್ವಾಯರ್ ಮತ್ತು ಸಿಂಗಟಾಲೂರು ಯೋಜನೆಯನ್ನು ತಾವು ಪ್ರಾರಂಭಿಸುವುದಕ್ಕೆ ಚಿಂತನೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯ ಹಾಗೂ ಮನವಿಯನ್ನು ಮಾಡುತ್ತೇನೆ. ಒಟ್ಟಿನಲ್ಲಿ ರಾಜ್ಯದಲ್ಲಿ 107 ಲಕ್ಷ ಹೆಕ್ಟೇರ್‌ನಲ್ಲಿ ನೀರಿನಲಭ್ಯತೆಯನ್ನು ಮಾಡಿಕೊಳ್ಳುವ ಸಾಧ್ಯತೆಯಿದ್ದು, ತಾವು ಒಂದು ಅನಾಲಿಸಸ್ ಮಾಡಿದ್ದೀರಿ 35 ಲಕ್ಷ ಹೆಕ್ಟೇರ್‌ನಲ್ಲಿ ಭಾರಿ ಮತ್ತು ಮಧ್ಯಮ ನೀರಾವರಿಯಿಂದ ನೀರು ಕೊಡಲಿಕ್ಕೆ ಸಾಧ್ಯವಿದೆ. 10 ಲಕ್ಷ ಹೆಕ್ಟೇರ್‌ನಲ್ಲಿ ಕೆರೆ ಮತ್ತು ಇನ್ನಿತರ ಮೂಲಗಳಿಂದ ನೀರನ್ನು ಕೊಡಲಿಕ್ಕೆ ಸಾಧ್ಯವಿದೆ. 10 ಲಕ್ಷ ಹೆಕ್ಟೇರ್‌ನಲ್ಲಿ ಬೋರ್‌ವೆಲ್ ಸಪ್ಲೆಸ್ ವಾಟರ್‌ನಿಂದ ಕೂಡಲಿಕ್ಕೆ ಸಾಧ್ಯವಿದೆ ಎಂದು ತಾವು ಗುರುತಿಸಿದ್ದೀರಿ. ಈ ಎಲ್ಲಾ ನೀರನ್ನು ನಾವು ಬಳಕೆ ಮಾಡಬೇಕಾದುದು ಬಹಳ ಮುಖ್ಯವಾಗಿರುವುದರಿಂದ ಈ ಒಂದು ಅವಕಾಶವನ್ನು ನಾವು ಉಪಯೋಗಿಸಿಕೊಳ್ಳಬೇಕಾಗಿದೆ. ತಾವು ಹೇಳಿದ ಹಾಗೆ 2005 ನೇ ಇಸವಿಯೊಳಗೆ ರಾಜ್ಯದ ಎಲ್ಲಾ 41 ಯೋಜನೆಗಳನ್ನು ಪೂರ್ಣ ಗೊಳಿಸುತ್ತೇವೆಂದು ಹೇಳಿದಿರಿ, ಇದಕ್ಕೆ ಬೇಕಾದ ಹಣಕಾಸಿನ ವ್ಯವಸ್ಥೆಯನ್ನು ಯಾವ ರೀತಿ ಮಾಡಿಕೊಂಡಿದ್ದೀರಿ ಎಂಬುದನ್ನು ತಾವು ಹೇಳಬೇಕಾಗುತ್ತದೆ. ತಾಂತ್ರಿಕತೆಂದು ದೋಷದಿಂದಾಗಿ ಕೆಲಸಗಳು ವಿಳಂಭವಾಗುತ್ತಿವೆ. ಇದರ ಜೊತೆಗೆ ದೊಡ್ಡ ಬ್ಯಾರೇಜ್ ಕಟ್ಟಿ 1,2,6 ಲಕ್ಷ ಹೆಕ್ಟೇರ್‌ಗೆ ನೀರು ಕೊಡುತ್ತೇವೆ ಎನ್ನುವುದಕ್ಕಿಂತ ಮುಖ್ಯವಾಗಿ ಈ ಸಣ್ಣ ನೀರಾವರಿಯ ಬಗ್ಗೆ ಹೇಳುವುದಾದರೆ ಮಾನ್ಯ ಕೆ ಬಿ ಮಲ್ಲಿಕಾರ್ಜುನ್‌ರವರು ಮಾತನಾಡುತ್ತಾ ಇದನ್ನು ಮುಚ್ಚುವುದು ಬಹಳ ಒಳ್ಳೆಯದೆಂದು ಹೇಳಿದರು. ನಾವು ಈ ಸಾರಿ ಗೆದ್ದ ಮೇಲೆ ಮೂರು ವರ್ಷಗಳಿಂದ ನೋಡುತ್ತಿದ್ದೇವೆ, ಈ ಸಣ್ಣ

ನೀರಾವರಿ ಇಲಾಖೆಯ ಕೆಲಸ ಒಂದು ಸ್ಟೆಪ್ ಕೂಡ ಇಡಲಿಕ್ಕೆ ಆಗಿಲ್ಲ, ಸುಮಾರು 50,60 ಕೋಟಿ ರೂಪಾಯಿ ಬಾಕಿ ಪಾವತಿ ಮಾಡುವ ಹಣ ಉಳಿದಿದೆ. ಮೂರು ವರ್ಷದಿಂದ ಆನ್ ಗೋಯಿಂಗ್ ವರ್ಕ್ ಯಾವುದೂ ಕೆಲಸ ಮಾಡುತ್ತಿಲ್ಲ, ಕೆಲವು ಗುತ್ತಿಗೆದಾರರಂತೂ ನೇಣು ಹಾಕಿಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ಇವತ್ತು ಈ ಇಲಾಖೆಗೆ ಏಕೆ ಮಹತ್ವ ಕೊಡಬೇಕೆಂದರೆ, ದೊಡ್ಡ ಯೋಜನೆಗಳನ್ನು ತೆಗೆದುಕೊಂಡು ಅವುಗಳು ಮುಗಿಯುವ ಹೊತ್ತಿಗೆ ಸಾವಿರಾರು ಕೋಟಿ ರೂಪಾಯಿಗಳಾಗಿ ಅದರ ಫಲ ಕೂಡ ನಿರೀಕ್ಷಿತ ಮಟ್ಟದಲ್ಲಿ ಕಾಣಲಿಕ್ಕೆ ಸಾಧ್ಯವಿಲ್ಲ. ಆದರೆ ಅದೇ ಸಣ್ಣ ನೀರಾವರಿ ಇಲಾಖೆಯನ್ನು ನಾವು ತೆಗೆದುಕೊಂಡರೆ ಅದು ಸ್ವಲ್ಪ ಸಮಯದಲ್ಲಿಯೇ ಕೆಲಸವನ್ನು ಮಾಡಿ ಮುಗಿಸುವುದಕ್ಕೆ ಸಾಧ್ಯವಿದೆ. ಆ ಮೂಲಕ ಜಮೀನಿಗೆ ನೀರು ಕೊಡುವುದಕ್ಕೆ ಸಾಧ್ಯವಿದೆ. ಹೀಗಾಗಿ ಆರ್ಥಿಕ ಅಭಿವೃದ್ಧಿಯನ್ನು ಮೇಲತ್ತಲಿಕ್ಕೆ ಸಾಧ್ಯವಿದೆ. ಮತ್ತು ಅಂತರಜಲದ ಮಟ್ಟವನ್ನೂ ಕೂಡ ಮೇಲೆತ್ತಬಹುದಾಗಿದೆ. ಅದಕ್ಕಾಗಿ ಮಾನ್ಯ ಖರ್ಗೆಯಂಥ ಈ ರಾಜ್ಯದ ದೊಡ್ಡ ಮಂತ್ರಿಗಳು ಆ ಖಾತೆಯನ್ನು ತೆಗೆದುಕೊಂಡಿದ್ದಾರೆ, ಮಾನ್ಯ ಕುಮಾರ್ ಬಂಗಾರಪ್ಪನವರು ಬಹಳ ಪ್ರಯತ್ನಿಸಿದರು ಆದರೆ ಏನೂ ಕೆಲಸವಾಗಲಿಲ್ಲ ಆದರೆ ಅವರ ಕಳಕಳಿಯನ್ನು ನಾವು ಮೆಚ್ಚುತ್ತೇವೆ ಆದರೆ ಒಂದು ಸ್ಟೆಪ್ ಅಲ್ಲಿ ಮುಂದಿಡಲಿಕ್ಕೆ ಆಗಲಿಲ್ಲ, ಆ ಇಲಾಖೆಗೆ ಒಂದು ಎಲ್‌ಒಸಿ ಬಿಡುಗಡೆ ಆಗುತ್ತಿಲ್ಲ ತಾವು ಬೇಕಾದರೆ ಆ ಇಲಾಖೆಯ ವರದಿಯನ್ನು ತರಿಸಿ ನೋಡಿ, ಮೂರು ವರ್ಷದಿಂದ ಯಾವ ಏತ ನೀರಾವರಿ ಯೋಜನೆಗಳೂ ಪ್ರಾರಂಭವಾಗಿಲ್ಲ, ಯಾವ ಟ್ಯಾಂಕ್ ಕೆಲಸ ಕೂಡ ಆಗಿಲ್ಲ, ಇದಲ್ಲದೆ ಬೇರೆ ಯಾವ ಯೋಜನೆಗಳನ್ನು ನಾವು ಅಲ್ಲಿ ಕಾಣಲಿಕ್ಕೆ ಸಾಧ್ಯವಾಗಿಲ್ಲ. ಅದಕೋಸ್ಕರ ಸರ್ಕಾರ, ನಾವು ಬಹಳ ಅಭಿವೃದ್ಧಿ ಮಾಡುತ್ತೇವೆ, ರೈತರನ್ನು ಮೇಲೆಕ್ಕೆತ್ತುತ್ತೇವೆ, ರೈತರಿಗೆ ನಾವು ನೆರವಿಗೆ ಬಂದು ಅವರ ಬೆಂಬಲಕ್ಕೆ ನಿಲ್ಲುತ್ತೇವೆ ಎಂದು ಕೇವಲ ಮಾತಿನಲ್ಲಿ ಘೋಷಣೆ ಮಾಡಿದರೆ ರೈತರು ಉದ್ಧಾರವಾಗುವುದಕ್ಕೆ ಸಾಧ್ಯವಿಲ್ಲ. ಇವತ್ತು ಕೆರೆಗಳ ಜಲಸಂವರ್ಧನಾ ಯೋಜನೆಯ ಬಗ್ಗೆ ಹೇಳುವುದಾದರೆ, ರಾಜ್ಯದಲ್ಲಿ 36 ಸಾವಿರ ಕೆರೆಗಳಿವೆ. ಅದರಲ್ಲಿ 2000 ಕೆರೆಗಳೆಂದು ಮಾನ್ಯ ಮಂತ್ರಿಗಳು ಘೋಷಣೆ ಮಾಡಿದರು, ಮಾನ್ಯ ಹೆಚ್.ಕೆ. ಪಾಟೀಲ್‌ರವರು ನಮ್ಮ ಹಿರೇಹಳ್ಳ ಯೋಜನೆಯನ್ನು ಉದ್ಘಾಟನೆಗೆ ಬಂದಾಗ, 20 ಸಾವಿರ ಎಕರೆ ನಮ್ಮ ಕ್ಷೇತ್ರಕ್ಕೆ ನೀರಾವರಿ ಲಭ್ಯತೆಯನ್ನು ಮಾಡಿಕೊಟ್ಟಿದ್ದಾರೆ. ಇದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಆದರೆ ಜಲಸಂವರ್ಧನ ಯೋಜನೆಯಲ್ಲಿ ಏನೂ ಕೆಲಸವಾಗುತ್ತಿಲ್ಲ. ಒಂದು ಕಡೆ ಇವರು ಹೋಬಳಿಗೊಂದು ಕೆರೆಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದರು, ಎಷ್ಟು ಕೆರೆಯಲ್ಲಿ ನೀವು ಹುಳು ಎತ್ತಿದ್ದೀರಿ? ನಾವು ಆ ದಿವಸ ವಿಡಿಯೋದವರನ್ನು, ಮಾಧ್ಯಮ ದರವನ್ನು ಅಲ್ಲಿಗೆ ಕರೆದುಕೊಂಡು ಹೋಗಿ ಊಟ ಹಾಕಿಸಿ, ರೈತರಿಗೆ ನಿಮ್ಮ ಕೆರೆಯನ್ನು ಹೂಳು ಎತ್ತಿಸಿ, ತೂಬು ನಿರ್ಮಾಣ ಮಾಡುತ್ತೇವೆ, ಬಂಡ್ ಸ್ಟೆಗ್ರನ್ ಮಾಡಿಸಿ, ಕ್ಯಾಚ್‌ಮೆಂಟ್ ಏರಿಯಾ ಕ್ಲಿಯರ್ ಮಾಡುತ್ತೇವೆ, ಅಲ್ಲಿ ಸಸಿಗಳನ್ನು ನಡೆಸುತ್ತೇವೆಂದು ಹೇಳಿದ್ದೇವು. 15 ದಿವಸಗಳಾದ ಮೇಲೆ ನಮಗೆ ಅವರು ಕೇಳಿದರು, ಏನ್ರೀ ಶಾಸಕರೇ, ನೀವೇನು ಗ್ರಾಮಕ್ಕೆ ಪೋಸ್ ಕೊಡಲಿಕ್ಕೆ ಬಂದಿದ್ದೀರಾ ಎಂದು ಕೇಳಿದರು. ಇದಕ್ಕೆ ಸರ್ಕಾರ ಉತ್ತರ ಹೇಳಬೇಕಾಗುತ್ತದೆ. ನಾವು ಕೇವಲ ಘೋಷಣೆಗಳನ್ನು ಮಾಡುವುದರಿಂದ ಏನೂ ಆಗುವುದಿಲ್ಲ ಆದರೆ ಅದನ್ನು ಕಾರ್ಯ ರೂಪಕ್ಕೆ ಬಂದಾಗ ಸರ್ಕಾರ ಒಳ್ಳೆಯ ಕೆಲಸ ಮಾಡುತ್ತಿದೆ, ಗ್ರಾಮೀಣ ಜನತೆಯ ಚಿಂತನೆಯನ್ನು ಮಾಡುತ್ತಿದೆ ಎಂದು ಗ್ರಾಮೀಣ ಭಾಗದಲ್ಲಿರುವ ಜನರು ನಿಮ್ಮನ್ನು ನೆನಸುತ್ತಾರೆ ಆದರೆ ಜನರು ನಿಮಗೆ ಐದು

ವರ್ಷ ಅಧಿಕಾರ ನಡೆಸಲು ಆಶೀರ್ವಾದ ಕೊಟ್ಟಿದ್ದಾರೆ, ಈಗಾಲಾದರೂ ತಾವು ತಿದ್ದಿಕೊಂಡು ಉಳಿದ ಎರಡೂವರೆ ವರ್ಷದ ಅವಧಿಯಲ್ಲಿ ತಾವು ಏನು ಘೋಷಣೆ ಮಾಡಿದ್ದೀರಿ, 2000 ಕೆರೆಗಳ ಹೂಳು ಎತ್ತುವುದಾಗಲಿ, ನೀರಾವರಿ ಮಂತ್ರಿಗಳು ಏನು ಘೋಷಣೆ ಮಾಡಿದರು, ಇವೆಲ್ಲವೂ ಕಾರ್ಯಗತವಾಗಬೇಕಾಗುತ್ತದೆ. ರಫ್ತು ವಲಯದ ಬಗ್ಗೆ ಮಾರ್ಕೆಟ್ ಮಂತ್ರಿಗಳು ಹಾಗೂ ಫುಡ್ ಮಿನಿಸ್ಟರ್ಸ್ ತಾವು ಎಲ್ಲರೂ ಇಲ್ಲಿ ಇದ್ದೀರಿ. ಇವತ್ತು ನಾವು ಸಂಸ್ಕರಣ ಕೇಂದ್ರಗಳನ್ನು ಮಾಡಬೇಕಾಗುತ್ತದೆ, ಅದಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟರೆ ಬೇಸಿಕ್ ಆಗಿ ರೈತರಿಗೆ ಆ ಒಂದು ಶಕ್ತಿಯನ್ನು ಕೊಟ್ಟ ಹಾಗೆ ಆಗುತ್ತದೆ. ಕೃಷಿ ವಿಶ್ವ ವಿದ್ಯಾನಿಲಯಗಳಲ್ಲಿ ಏನಾಗುತ್ತಿದೆ ಎಂದರೆ, ಈ ದಿನ ನಾವು ಯಾವುದೇ ತಳಿಗಳನ್ನು (ರೀಸರ್ಚ್) ಕಾಣುವುದಕ್ಕೆ ಸಾಧ್ಯವಾಗ ಇಲ್ಲ. ಅಂತರಾಷ್ಟ್ರೀಯ ಮಟ್ಟದಲ್ಲಿ ಹೇಳುವುದಾದರೆ, ಚೈನಾ ದೇಶದಲ್ಲಿ ಸುಮಾರು 230 ತಳಿಗಳನ್ನು ಹೊರಗೆ ತಂದಿದ್ದಾರೆ. ಇವತ್ತು ಇವರು ಏಕೆ ಅದಕ್ಕೆ ಒತ್ತನ್ನು ಕೊಡುತ್ತಿಲ್ಲ? ರೀಸರ್ಚ್ ಸೆಂಟರ್‌ಗಳಲ್ಲಿರುವ ವಿಜ್ಞಾನಿಗಳನ್ನು ಕರೆದು ಅವರ ಬೆನ್ನು ಚಪ್ಪರಿಸುವಂಥ ಕೆಲಸ ಸರ್ಕಾರ ಮಾಡುತ್ತಿಲ್ಲ? ನಮಗೆ ಯಾವುದೂ ಹೊಸ ತಳಿ ಇಲ್ಲ, ಅದೇ ಬಿ ಟಿ ಹತ್ತಿ ಬಿಟ್ಟರೆ ನಮಗೆ ಬೇರೆ ಏನೂ ಇಲ್ಲ. ಚೈನಾದಲ್ಲಿ ಸುಮಾರು 12 ಲಕ್ಷ ಹೆಕ್ಟೇರ್ ಬೆಳೆಯತಕ್ಕಂಥ ವಾತಾವರಣ ನಿರ್ಮಾಣವಾಗಿದೆ. ಇಲ್ಲಿಯೂ ಅದೇ ವಾತಾವರಣವಿದ್ದು, ಪರಿಸರ ಹಾನಿಯಾಗುತ್ತದೆನ್ನುವ ವರದಿ ಇದ್ದು, ನಿಖರವಾದ ವರದಿಯೊಂದನ್ನು ತಯಾರಿಸಬೇಕಾಗುತ್ತದೆ. ತೆಂಗಿನ ಬೆಳೆಯ ಬಗ್ಗೆ ಹೇಳುವುದಾದರೆ ನಮ್ಮ ಮಕ್ಕಳಿಗೆ ಏನಾದರೂ ರೋಗ ಬಂದರೆ ನಮಗೆ ಎಷ್ಟು ನೋವು ಆಗುತ್ತದೆ ಅಷ್ಟೇ ನೋವು ಈ ತೆಂಗಿನ ಮರಗಳನ್ನು ನೋಡಿದರೆ ಆಗುತ್ತದೆ. ಇವತ್ತು ನುಸಿರೋಗವನ್ನು ನಿಯಂತ್ರಿಸಲು ನಲವತ್ತು ಕೋಟಿ ರೂಪಾಯಿ ಉಪಯೋಗಿಸಿದಿರಿ, ಏನು ತಾವು ಆ ರೋಗವನ್ನು ನಿಯಂತ್ರಣ ಮಾಡಿದಿರಾ? ಇದ್ದ ಬೆಳೆಯನ್ನು ಹಾಳು ಮಾಡಿದ್ದೀರಿ.

ಅಧ್ಯಕ್ಷರು : ನೋಡಿ ಹದಿಮೂರು ನಿಮಿಷವಾಯಿತು, ನೀವು ಕೇಳಿದ್ದು ಐದು ನಿಮಿಷ. ರಿಪ್ಲೈ ಆದನಂತರ ಪ್ರಶ್ನೋತ್ತರ ಇದೆ. ಸುಮಾರು 9 ಗಂಟೆ ಆಗುತ್ತದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ನಾವೇನೂ ಭ್ರಷ್ಟಚಾರದ ಬಗ್ಗೆ ಮಾತನಾಡುತ್ತಿಲ್ಲ ದಯಮಾಡಿ ನನಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಯೂನಿವರ್ಸಿಟಿ ಬಿಲ್ ಇಂಥವೆಲ್ಲಾ ಬಂದಾಗ ಇನ್ನೊಂದು ಸಲ ಮಾತನಾಡಿ ಯಾರು ಬೇಡ ಎನ್ನುತ್ತಾರೆ? ನೀವು ನಮ್ಮ ಕಷ್ಟವನ್ನು ಸ್ವಲ್ಪ ಅರ್ಥ ಮಾಡಿಕೊಳ್ಳಬೇಕು.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ತೆಂಗಿನ ಗಿಡವನ್ನು ಕಾಮಧೇನು ಕಲ್ಪವೃಕ್ಷವೆಂದು ಹೇಳುತ್ತಾರೆ, ಇವರು ಇದಕ್ಕೇನು ಮಾಡಿದರು? ಇದರಲ್ಲಿ ಇವರು ಏಕೆ ಫೇಲ್ ಆಗಿದ್ದಾರೆ? ತೆಂಗಿನ ಗಿಡ ಬೆಳೆದ ರೈತ ಇವತ್ತು ನೇಣು ಹಾಕಿಕೊಳ್ಳುವ ಪ್ರಸಂಗ ಬಂದಿದೆ.

ಅಧ್ಯಕ್ಷರು : ತೆಂಗಿನ ಗಿಡದ ಬಗ್ಗೆ ಎಷ್ಟು ಸಲ ಹೇಳಿದ್ದೀರಿ? ಮೊನ್ನೆ ಹೆಚ್.ಕೆ ಪಾಟೀಲ್ ರವರ ಹತ್ತಿರ ಪ್ರಶ್ನೆ ಕೇಳಿದಾಗ ಏನು ಹೇಳಿದ್ದೀರಿ ಅದನ್ನೇ ರಿಪೀಟ್ ಮಾಡುತ್ತಿದ್ದೀರಿ,

ಶ್ರೀ ಕರಡಿ ಸಂಗಣ್ಣ ಅಮರಪ್ಪ : ಬೇಡಿಕೆಗಳ ಮೇಲಷ್ಟೇ ನಾನು ಮಾತನಾಡುತ್ತಿರುವುದು, ಬೇರೆ ಏನೂ ಮಾತನಾಡುತ್ತಿಲ್ಲ.

ಅಧ್ಯಕ್ಷರು : ನನಗೆ ಗೊತ್ತಿದೆ, ಡಿಮ್ಯಾಂಡ್ ಮೇಲೆ ಅಲ್ಲದೆ ಬೇರೆ ಮಾತನಾಡಲಿಕ್ಕೆ

ಆಗುತ್ತದೆಯೇ? ನೀವು ಕೇಳಿದ್ದು 5 ನಿಮಿಷ ಆದರೆ 13 ನಿಮಿಷ ಆಗಿದೆ ಹೀಗಾದರೆ ಹೇಗೆ ನೀವೇ ಹೇಳಿ. ಬೇಗ ಮುಗಿಸಿ.

ಶ್ರೀ ಕರಡಿ ಸಂಗಣ್ಣ ಅಮರಪ್ಪ : ತೋಟಗಾರಿಕೆ ಕ್ಷೇತ್ರದಲ್ಲಿ ವಿಚಾರದಲ್ಲೂ ಕೂಡ ಉತ್ತಮವಾದ ಕೆಲಸವನ್ನು ರೈತರಿಗಾಗಿ ಸರ್ಕಾರ ಮಾಡಬೇಕಾಗುತ್ತದೆ. ಸ್ಪಿಂಕ್ಲರ್ ಇರಬಹುದು, ಜೈವಿಕ ತಂತ್ರಜ್ಞಾನ ಇರಬಹುದು, ಇವೆರಡಕ್ಕೆ ಹೆಚ್ಚು ಒತ್ತನ್ನು ಕೊಡಬೇಕಾಗಿದೆ. ಅಧ್ಯಕ್ಷರೆ ಮಾತೇ ಅರ್ಧ ಇದರಲ್ಲಿ ಹೋಗಿಬಿಡುತ್ತದೆ, ನೀವು ಸ್ವಲ್ಪ ಮಾತನಾಡಿ, ಎರಡು ನಿಮಿಷ ಮಾತನಾಡಿ, ಐದು ನಿಮಿಷ ಮಾತನಾಡಿ, ಎಂದು ಹೇಳುತ್ತಾರೆ, ಅದಕ್ಕೆ ಮಾನ್ಯ ಅಧ್ಯಕ್ಷರು ಸಹಕಾರ ಕೊಡಬೇಕಾಗುತ್ತದೆ. ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಸ್ವಾಮಿ, ಬಿಎಸಿಯಲ್ಲಿ ಏನು ತೀರ್ಮಾನವಾಗಿದೆ ಅದನ್ನು ಇಲ್ಲಿ ನಡೆಸುವುದು ನನ್ನ ಭಾರ. ಮಾನ್ಯ ಶೆಟ್ಟರ್‌ರವರೇ, ತಾವು ಮಾತನಾಡಿ.

†ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಈ ಒಂದು ಬೇಡಿಕೆಗಳ ಮೇಲೆ ಚರ್ಚೆ ಮಾಡುವ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ತಕ್ಷಣ ಇಲ್ಲಿ ಬರಬೇಕಾಗಿತ್ತು. ನಾವು ಈ ದಿವಸ ಪ್ರಾರಂಭಿಸುತ್ತೇವೆಂದು ತಮಗೆ ಗೊತ್ತಿದೆ.

ಅಧ್ಯಕ್ಷರು : ಅವರು ಬ್ರೀಫಿಂಗ್ ತೆಗೆದುಕೊಂಡು ರಿಪ್ಲೈ ಕೊಡುವುದಕ್ಕೆ ರೆಡಿಯಾಗುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ನಾವು ಹೇಳಿದ ವಿಷಯವೇ ಅವರಿಗೆ ಗೊತ್ತಿಲ್ಲದಿದ್ದರೆ ಅವರು ಹೇಗೆ ಬ್ರೀಫಿಂಗ್ಸ್ ಮಾಡುತ್ತಾರೆನ್ನುವುದು ನನಗೆ ಗೊತ್ತಾಗಲಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ತಾವು ದಯಮಾಡಿ ಅವರನ್ನು ಕರೆಸಬೇಕು.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಗೃಹ ಮಂತ್ರಿಗಳೂ ಇರಬೇಕಾಗುತ್ತದೆ ಏಕೆಂದರೆ, ಗೃಹ ಇಲಾಖೆಯ ಮೇಲೆ ಜಾಸ್ತಿ ಮಾತನಾಡುವಂಥ ಅಂಶಗಳಿವೆ. ಮಾನ್ಯ ಖರ್ಗೆಯವರನ್ನು ಕರೆಸಬೇಕಾಗುತ್ತದೆ. ನಾನು ಇವತ್ತು 3-4 ಇಲಾಖೆಯ ಮೇಲೆ ಮಾತನಾಡಬೇಕೆಂದು ಕೊಂಡಿದ್ದೆ. ಆದರೆ ವೇಳೆಯ ಅಭಾವವಿರುದರಿಂದ ಅನಿವಾರ್ಯವಾಗಿ ಕೆಲವೊಂದು ವಿಷಯಗಳಿಗೆ ಮಾತ್ರ ನಾನು ಸೀಮಿತವಾಗಿ ಮಾತನಾಡುತ್ತೇನೆ. ಕೆಲವೊಂದು ವಿಷಯಗಳನ್ನು ಮಾತನಾಡಲಿಕ್ಕೆ ಆಗಲೇ ಇಲ್ಲ, ಇತರೆ ನನ್ನ ಶಾಸಕ ಮಿತ್ರರಿಗೆ ಹೆಚ್ಚು ಮಾತನಾಡುವ ಅವಕಾಶ ಸಿಗಲಿ ಎನ್ನುವ ದೃಷ್ಟಿಯಿಂದ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ, ಒಂದೆರಡು ವಿಷಯಗಳ ಬಗ್ಗೆ ನಾನು ಪ್ರಸ್ತಾಪ ಮಾಡಬಯಸುತ್ತೇನೆ.

5.20 ಪಿಎಂ

ಮಾನ್ಯ ಅಧ್ಯಕ್ಷರೆ, ಒಂದು ಪ್ರಮುಖವಾದ ಅಂಶವನ್ನು ಈ ಸಂದರ್ಭದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ನಾನು ಮತ್ತು ಸನ್ಮಾನ್ಯ ಸಿಂಧ್ಯಾರವರು ರಾಜ್ಯದ ಆರ್ಥಿಕ ಪರಿಸ್ಥಿತಿ ಬಗ್ಗೆ ಶೂನ್ಯವೇಳೆಯಲ್ಲಿ ಪ್ರಸ್ತಾಪ ಮಾಡಿದ್ದೆವು. ಹಾಗೆಯೇ ರಾಜ್ಯದ ಆರ್ಥಿಕ ಪರಿಸ್ಥಿತಿ ಸರಿಯಾಗಿಲ್ಲ ಮತ್ತು ಇವತ್ತಿನ ದಿವಸ ಗುತ್ತಿಗೆದಾರರಿಗೆ ಸುಮಾರು 1200 ಕೋಟಿ ರೂಪಾಯಿಗಳ ಬಿಲ್ ಬಾಕಿ ಇದೆ ಎನ್ನತಕ್ಕಂಥ ವಿಷಯವನ್ನು ನಾವು ಆ ದಿವಸ ಪ್ರಸ್ತಾಪ ಮಾಡಿದ್ದೆವು. ಬಾಕಿ ಕೊಡಬೇಕಾಗಿರತಕ್ಕಂಥ ಹಣಕ್ಕೆ ಸಂಬಂಧಪಟ್ಟಂತೆ ಕೆಲವೊಂದು ಚೆಕ್‌ಗಳನ್ನು ಸದನ ಮುಂದೆ ಇಟ್ಟಿದೆ. ಒಂದೂವರೆ ತಿಂಗಳಾಗಿದ್ದರೂ ಆ ಚೆಕ್ ಕ್ಲಿಯರ್ ಆಗಿರಲಿಲ್ಲ. ಇದಕ್ಕೆ ಸಂಬಂಧಪಟ್ಟಂತೆ ಸೋಮವಾರ, ಮಂಗಳವಾರ ಉತ್ತರ ಕೊಡುತ್ತೇನೆ ಎಂದು ಸನ್ಮಾನ್ಯ ಮುಖ್ಯಮಂತ್ರಿಯವರು

ಹೇಳಿದ್ದರು. ಆದರೆ ಇದುವರೆಗೂ ಇದಕ್ಕೆ ಸಂಬಂಧಪಟ್ಟಂತೆ ಅವರಿಂದ ಉತ್ತರ ಭಂದಿಲ್ಲ. ಉತ್ತರ ಏಕೆ ಕೊಡಲಿಲ್ಲ ಎನ್ನತಕ್ಕಂಥದ್ದು ನನಗೆ ಗೊತ್ತಾಗಲಿಲ್ಲ. ಹಾಗೆಯೇ ರಾಜ್ಯ ಸರ್ಕಾರದ ಆರ್ಥಿಕ ಪರಿಸ್ಥಿತಿಯ ಸ್ಥಿತಿಗತಿ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸಿಬೇಕೆಂಬ ಬೇಡಿಕೆಯನ್ನು ಇಟ್ಟಿದ್ದೆವು. ಆದರೆ ಇದಕ್ಕೆ ಸಂಬಂಧಪಟ್ಟಂತೆ ಸನ್ಮಾನ್ಯ ಮುಖ್ಯಮಂತ್ರಿಯವರಿಂದ ಯಾವುದೇ ರೀತಿಯ ಸ್ಪಷ್ಟೀಕರಣ ಬರಲಿಲ್ಲ. ಹಾಗೆಯೇ ನಾನು ಈಗಾಗಲೇ ಹೇಳಿದಂಥ ಚೆಕ್ ಬಗ್ಗೆ ಕೂಡ ಅವರು ಸ್ಪಷ್ಟಿಕರಣ ನೀಡಿಲ್ಲ. ನಾನು ಈ ವಿಷಯವನ್ನು ಹೇಳಿ ಸುಮಾರು 8 ರಿಂದ 10 ದಿವಸ ಆಯಿತು. ಇಷ್ಟು ಹೊತ್ತಿಗೆ ಆ ಚೆಕ್‌ಗಳು ಕ್ಲಿಯರೆನ್ಸ್ ಆಗಿರಬಹುದೆಂದು ನಾನು ವಿಶ್ವಾಸ ಇಟ್ಟುಕೊಳ್ಳುತ್ತೇನೆ. ಇದಕ್ಕೆ ಸಂಬಂಧಪಟ್ಟಂತೆ ಮಾನ್ಯ ಮುಖ್ಯಮಂತ್ರಿಯವರು ಇಲ್ಲಿ ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಈಗಾಗಲೇ ಸನ್ಮಾನ್ಯ ಮುಖ್ಯಮಂತ್ರಿಯವರು ಮತ್ತು ಎಲ್ಲಾ ಪಕ್ಷದ ನಾಯಕರುಗಳು ದೆಹಲಿಗೆ ಹೋಗಿ ಸನ್ಮಾನ್ಯ ಪ್ರಧಾನ ಮಂತ್ರಿಯವರನ್ನು ಭೇಟಿ ಮಾಡಿಕೊಂಡು ಬಂದಿದ್ದೇವೆ. ಹಾಗೆಯೇ ಆ ಸಂದರ್ಭದಲ್ಲಿ ಇಬ್ಬರು ಪ್ರಮುಖ ಸಚಿವರಾಗಿರತಕ್ಕಂಥ ಮಾನ್ಯ ಜಸ್ವಂತ್‌ಸಿಂಗ್‌ರವರನ್ನು ಹಾಗೂ ಮಾನ್ಯ ಕಾನ್ಸಿ ರಾಮ್ ಠಾಣೆರವರನ್ನು ನಾವು ಭೇಟಿ ಮಾಡಿ ಬಂದಿದ್ದೇವೆ. ಅಲ್ಲಿ ರೇಷ್ಮೆ ಬೇಳೆಗಾರರ ಸಮಸ್ಯೆ ಬಗ್ಗೆ ಮತ್ತು ಕಾಫಿ ಬೆಳೆಗಾರರ ಸಮಸ್ಯೆ ಹಾಗೂ ತಂಬಾಕು ಬೆಳೆಗಾರರ ಸಮಸ್ಯೆ ಮತ್ತು ಅಡಿಕೆ ಬೆಳೆಗಾರರ ಸಮಸ್ಯೆ ಬಗ್ಗೆ ಅಲ್ಲಿ ಕೂಲಂಕಷವಾಗಿ ಚರ್ಚೆ ಮಾಡಿದ್ದೇವೆ. ನಾವು ಸನ್ಮಾನ್ಯ ಮುಖ್ಯಮಂತ್ರಿಯವರ ನೇತೃತ್ವದಲ್ಲಿ ದೆಹಲಿಗೆ ಹೋದಾಗ ಸನ್ಮಾನ್ಯ ಪ್ರಧಾನ ಮಂತ್ರಿಯಾಗಿರತಕ್ಕಂಥ ಶ್ರೀ ಅಟಲ್ ಬಿಹಾರಿವಾಜಪೇಯಿರವರು ನಮ್ಮ ಜೊತೆ ಸುಮಾರು 1 ಗಂಟೆ ಕಾಲ ಚರ್ಚೆ ಮಾಡಿದರು. ನಾನು ಈಗಾಗಲೇ ಹೇಳಿರತಕ್ಕಂಥ ಎಲ್ಲಾ ವಿಷಯಗಳ ಬಗ್ಗೆ ಕೇಂದ್ರ ಸರ್ಕಾರಕ್ಕೆ ಮನವರಿಕೆಯಾಗಿದೆ ಎನ್ನತಕ್ಕಂಥ ವಿಶ್ವಾಸ ನನಗೆ ಇದೆ. ರೇಷ್ಮೆಗೂಡಿಗೆ ಬೆಂಬಲ ಕೊಡತಕ್ಕಂಥದರ ಬಗ್ಗೆ ನಾವು ದೆಹಲಿಯಲ್ಲಿ ಕೇಂದ್ರ ಸರ್ಕಾರದ ಜೊತೆ ಏನು ಮಾತನಾಡಿದ್ದೇವೆ ಎನ್ನತಕ್ಕಂಥ ವಿಷಯ ಈಗಾಗಲೇ ಪತ್ರಿಕೆಗಳ ಮುಖಾಂತರ ವಿಷಯ ಹೊರ ಬಂದಿದೆ. ಇದಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ ಒಂದು ನಿಶ್ಚಿತವಾದ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕಾಗುತ್ತದೆ. ರೇಷ್ಮೆ ಗೂಡಿಗೆ ಬೆಂಬಲ ಬೆಲೆಯನ್ನು ಘೋಷಣೆ ಮಾಡಿದರೆ, ಮಾರುಕಟ್ಟೆಯಲ್ಲಿರತಕ್ಕಂಥ ಬೆಲೆ ಮತ್ತು 120 ಅಥವಾ 130 ರೇಟ್‌ಗೆ ಏನೊಂದು ಡಿಫರೆನ್ಸ್ ಇದೆ, ಅದರ ಅರ್ಧದಷ್ಟು ಹಣವನ್ನು ನಾವು ಕೊಡುವುದಕ್ಕೆ ತಯಾರಿದ್ದೇವೆಂದು ಸನ್ಮಾನ್ಯ ಕಾನ್ಸಿ ರಾಮ್ ಠಾಣೆಯವರು ಈಗಾಗಲೇ ಹೇಳಿದ್ದಾರೆ. ಆದ್ದರಿಂದ, ಇದಕ್ಕೆ ಸಂಬಂಧಪಟ್ಟಂತೆ ರಾಜ್ಯ ಸರ್ಕಾರ ತನ್ನ ಜವಾಬ್ದಾರಿಯನ್ನು ನಿಭಾಯಿಸತಕ್ಕಂಥ ಕರ್ತವ್ಯ ಇದೆ. ಇದರ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಒಂದು ಸ್ಟೇಟ್‌ಮೆಂಟ್‌ನ್ನು ಮಾಡಬೇಕಾಗುತ್ತದೆ. ಹಾಗೆಯೇ ಇದರ ಬಗ್ಗೆ ಒಂದು ಯೋಜನೆಯನ್ನು ಘೋಷಣೆ ಮಾಡಬೇಕಾಗುತ್ತದೆ ಎನ್ನತಕ್ಕಂಥದ್ದನ್ನು ಈ ಸಂದರ್ಭದಲ್ಲಿ ಅವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಪ್ರಮುಖವಾದ ಅಂಶ ಇಲ್ಲಿ ಪ್ರಸ್ತಾಪ ಮಾಡುವುದೇನೆಂದರೆ, ಒಂದು ವಾರದಲ್ಲಿ ಮಳೆ ಬರಬೇಕಾಗಿತ್ತು. ಆದರೆ ಮಳೆ ಬಂದಿಲ್ಲ. ನಾವು ಭೀಕರವಾದಂಥ ಬರಗಾಲವನ್ನು ಎದುರಿಸುತ್ತಿದ್ದೇವೆ. ಹಿಂದಿನ ವರ್ಷ ಬೆಳೆ ವಿಮೆಗೆ ಸಂಬಂಧಪಟ್ಟಂತೆ ಹಣವನ್ನು ರೈತರು ಈಗಾಗಲೇ ತುಂಬಿದ್ದಾರೆ. ಆದರೆ ಈ ವಿಮೆ ಹಣ ಇನ್ನೂ ರೈತರಿಗೆ ಸಂದಾಯವಾಗಿಲ್ಲ. ಈಗಾಗಲೇ ಇದಕ್ಕೆ ಸಂಬಂಧಪಟ್ಟಂತೆ ನಾವೆಲ್ಲರೂ ಪ್ರಸ್ತಾಪ ಮಾಡಿದ್ದೇವೆ. ಜುಲೈ 15ನೇ ತಾರೀಖಿನೊಳಗೆ 55 ಕೋಟಿ ರೂಪಾಯಿ ಸಂದಾಯ ಮಾಡುತ್ತೇವೆಂದು

ಮಾನ್ಯ ಕೃಷಿ ಸಚಿವರು ಹೇಳಿದರು. ಆದರೆ ಇದುವರೆಗೂ ಈ ಸಂದಾಯವಾಗಿಲ್ಲ. ಇದು ಏನಾಗಿದೆ ಎನ್ನತಕ್ಕಂಥದರ ಬಗ್ಗೆ ರಾಜ್ಯ ಸರ್ಕಾರದಿಂದ ಇನ್ನೂ ಸ್ಪಷ್ಟನೆ ಬಂದಿಲ್ಲ. ಆದ್ದರಿಂದ, ಇದರ ಬಗ್ಗೆಯೂ ಕೂಡ ರಾಜ್ಯ ಸರ್ಕಾರ ಸ್ಪಷ್ಟನೆ ಮಾಡಬೇಕಾಗುತ್ತದೆ. ಹಾಗೆಯೇ ಈ ಹಣವನ್ನು ಸಂದಾಯ ಮಾಡಬೇಕಾಗುತ್ತದೆ. ಜುಲೈ 15ನೇ ತಾರೀಖು ವಿಮೆ ಹಣವನ್ನು ಬಿಡುಗಡೆ ಮಾಡಿ ಈ ತಿಂಗಳ ಅಂತ್ಯದೊಳಗೆ ಇದಕ್ಕೆ ಸಂಬಂಧಪಟ್ಟಂಥ ಚೆಕ್ ರೈತರ ಕೈ ಮುಟ್ಟುತ್ತದೆ ಎಂದು ಹೇಳಿದರು. ನಾನು ಬೇರೆ ಬೇರೆ ಭಾಗಗಳಿಂದ ವರದಿ ತರಿಸಿಕೊಂಡಿರುವ ಪ್ರಕಾರ ಎಲ್ಲಿಯೂ ಕೂಡ ಹಣ ಇನ್ನು ರೈತರಿಗೆ ಮುಟ್ಟಿಲ್ಲ. ಆದ್ದರಿಂದ ಇದರ ಬಗ್ಗೆ ರಾಜ್ಯ ಸರ್ಕಾರ ಸ್ಪಷ್ಟನೆ ಮಾಡಬೇಕಾಗುತ್ತದೆ. ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ವೆಂಕಟರಮಣಪ್ಪ (ಪಾವಗಡ) : ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರ ಗಮನಕ್ಕೆ ತರುವುದೇನೆಂದರೆ, ನಮ್ಮ ತಾಲ್ಲೂಕಿನಲ್ಲಿ ಇದಕ್ಕೆ ಸಂಬಂಧಪಟ್ಟಂತೆ ಸುಮಾರು 6 ಕೋಟಿ ರೂಪಾಯಿಗಳನ್ನು ವಿತರಣೆ ಮಾಡಿದ್ದೇವೆ. ಆದರೆ ಎಲ್ಲಿಯೂ ಕೂಡ ಮಾಡಿಲ್ಲವೆಂದು ಅವರು ಹೇಳುತ್ತಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ : ನಿಮ್ಮ ಜಿಲ್ಲೆಯಲ್ಲಿ ಸಂದಾಯವಾಗಿದ್ದರೆ ಸಂತೋಷ. ಆದರೆ ಕೆಲವೊಂದು ಜಿಲ್ಲೆಯಲ್ಲಿ ಇನ್ನು ಸಂದಾಯವಾಗಿಲ್ಲ. ಇದಕ್ಕೆ ಸಂಬಂಧಪಟ್ಟಂಥ ರಿಪೋರ್ಟ್ ನನ್ನ ಹತ್ತಿರ ಇದೆ. ಇದಕ್ಕೆ ತಾವು ಉತ್ತರ ಕೊಡುವುದು ಬೇಡ. ಇದಕ್ಕೆ ಸರ್ಕಾರ ಉತ್ತರ ಕೊಡಬೇಕಾಗುತ್ತದೆ. ಒಂದು ವೇಳೆ ಕೊಟ್ಟಿದ್ದೇವೆಂದು ಹೇಳಿದರೆ ನಾನು ಸಂತೋಷದಿಂದ ಸ್ವಾಗತ ಮಾಡುತ್ತೇನೆ. ಕಾನೂನು ಸುವ್ಯವಸ್ಥೆ ಬಗ್ಗೆ ಈಗಾಗಲೇ ಇಲ್ಲಿ ಸಾಕಷ್ಟು ಚರ್ಚೆಯಾಗಿದೆ. ಈಗಾಗಲೇ ಝುಳಕಿ ಮತ್ತು ಹಿರಿಯೂರು ಘಟನೆ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಇವತ್ತಿನ ದಿವಸ ರಾಜ್ಯದಲ್ಲಿ ನಡೆಯುತ್ತಿದೆ ಎನ್ನತಕ್ಕಂಥದನ್ನು ಸನ್ಮಾನ್ಯ ಗೃಹ ಮಂತ್ರಿಯವರ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಅನಧಿಕೃತವಾದ ಚಟುವಟಿಕೆಗಳು ನಡೆಯುತ್ತಿವೆ. ಹಾಗೆಯೇ ಇವತ್ತಿನ ದಿವಸ ಸಿಂಗಲ್ ನಂಬರ್ ಲಾಟರಿ ಮತ್ತು ಮಟ್ಕಾ ಇವತ್ತಿನ ದಿವಸದವರೆಗೂ ನಡೆಯುತ್ತಿದೆ. ಇದನ್ನು ಮೆಟ್ಟಿ ಹಾಕುವುದಕ್ಕೆ ಯಾವುದೇ ರಾಜ್ಯ ಸರ್ಕಾರಕ್ಕೆ ಆಗಲಿಲ್ಲ. ಇವತ್ತಿನ ದಿವಸ ಪ್ರತಿಯೊಂದು ಪೊಲೀಸ್ ಸ್ಟೇಷನ್‌ನಲ್ಲಿ ಭ್ರಷ್ಟಾಚಾರ ಇಲ್ಲದೆ ಯಾವುದೇ ಒಂದು ಕೆಲಸ ಆಗುತ್ತಿಲ್ಲ. ಈ ರೀತಿಯಲ್ಲಿ ಪೊಲೀಸ್ ವ್ಯವಸ್ಥೆ ಹದಗೆಟ್ಟಿರುವುದರಿಂದ ಈ ಒಂದು ಇಲಾಖೆಯ ಮೇಲೆ ಜನರ ನಂಬಿಕೆ ಹೋಗುತ್ತಿದೆ. ಸಾರ್ವಜನಿಕ ಕೆಲಸವನ್ನು ಬಹಳ ಪ್ರಾಮಾಣಿಕವಾಗಿ ಮಾಡಬೇಕು ಎನ್ನತಕ್ಕಂಥ ಒಂದು ವಾತಾವರಣ ಇವತ್ತಿನದಿವಸ ಪೊಲೀಸ್ ಅಧಿಕಾರಿಗಳಲ್ಲಿ ಹೊರಟುಹೋಗಿದೆ ಎನ್ನತಕ್ಕಂಥ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ದರೋಡೆ ಮತ್ತು ಕಳ್ಳತನ ಮಾಡತಕ್ಕಂಥದು ಕಾಮನ್ ಆಗಿದೆ. ಆದ್ದರಿಂದ ಇದರ ಬಗ್ಗೆ ಏನು ಹೇಳಬೇಕಾಗಿಲ್ಲ. ಒಂದು ವೇಳೆ ಇದರ ಬಗ್ಗೆ ಏನಾದರೂ ಹೇಳುವುದಕ್ಕೆ ಹೋದರೆ, ಹಿಂದಿನ 5 ವರ್ಷದಲ್ಲಿ ಯಾವ ರೀತಿಯಾದ ಕ್ರೈಂ ರೇಟ್ಸ್ ಇತ್ತು, ಈಗ ಯಾವ ರೀತಿ ಇದೆ ಎನ್ನತಕ್ಕಂಥದನ್ನು ಸನ್ಮಾನ್ಯ ಗೃಹ ಮಂತ್ರಿಯವರು ಹೇಳುವುದಕ್ಕೆ ಪ್ರಾರಂಭ ಮಾಡುತ್ತಾರೆ. ಹಾಗೆಯೇ ಹಿಂದಿನ ವರ್ಷ ಇಷ್ಟು ಇತ್ತು, ಈಗ ಬಹಳ ಕಡಿಮೆಯಾಗಿದೆ ಎನ್ನತಕ್ಕಂಥದ್ದನ್ನೂ ಸಹ ಅವರು ಹೇಳಬಹುದು. ಇವತ್ತು ಪೊಲೀಸ್ ಇಲಾಖೆ ಯಾವ ರೀತಿಯಾಗಿ ತನ್ನ ವಿಶ್ವಾಸವನ್ನು ಕಳೆದುಕೊಳ್ಳುತ್ತಿದೆ

ಎನ್ನತಕ್ಕಂಥದಕ್ಕೆ ಮತ್ತು ಪೊಲೀಸ್ ಅಧಿಕಾರಿಗಳು ಯಾವ ರೀತಿಯಾಗಿ ಸಾರ್ವಜನಿಕರ ಜೊತೆ ನಡೆದುಕೊಳ್ಳುತ್ತಾರೆ ಎನ್ನತಕ್ಕಂಥದರ ಬಗ್ಗೆ ಸ್ವಲ್ಪ ವಿಷಯವನ್ನು ಇಲ್ಲಿ ನಾನು ಪ್ರಸ್ತಾಪ ಮಾಡುತ್ತೇನೆ. ಈಗಾಗಲೇ ಅವರ ಮೇಲೆ ಇರತಕ್ಕಂಥ ಗೌರವದ ಬಗ್ಗೆ ಮತ್ತು ಅವರ ನಡವಳಿಕೆಯ ಬಗ್ಗೆ ಸಾರ್ವಜನಿಕರಲ್ಲಿದ್ದಂಥ ಒಂದು ವಿಶ್ವಾಸ ಹೋಗಿದೆ. ಈಗಾಗಲೇ ಪತ್ರಿಕೆಯಲ್ಲಿ ಬಂದಿರತಕ್ಕಂಥ ಈ ವರದಿಯನ್ನು ತಮಗೆ ಕಳುಹಿಸಿಕೊಡುತ್ತೇನೆ. ಈ ವಿಷಯ ಏನೆಂದರೆ, ಇಬ್ಬರು ಪೊಲೀಸ್ ಅಧಿಕಾರಿಗಳು ಮಟಮಟ ಮಧ್ಯಾಹ್ನ ಒಂದು ಬಾರ್‌ನಲ್ಲಿ ಕುಳಿತುಕೊಂಡು ಮದ್ಯಪಾನ ಮಾಡತಕ್ಕಂಥದ್ದನ್ನು ಪತ್ರಿಕೆಯಲ್ಲಿ ಫೋಟೋ ಸಮೇತ ಬಹಿರಂಗವಾಗಿ ಬಂದಿದೆ. ಅಂದರೆ, ಇವರು ಡ್ಯೂಟಿ ಸಮಯದಲ್ಲಿಯೇ ಡ್ರೆಸ್ ಹಾಕಿಕೊಂಡೇ ಮದ್ಯಪಾನ ಮಾಡುತ್ತಿದ್ದಾರೆ. ಆದರೆ, ಅವರು ರಜಾ ಇದ್ದಂಥ ಸಂದರ್ಭದಲ್ಲಿ ಅಥವಾ ಮನೆಯಲ್ಲಿ ಕುಳಿತುಕೊಂಡು ಕುಡಿದರೆ ಪರವಾಗಿಲ್ಲ. ಆದರೆ, ಇವರು ಬಾರ್‌ನಲ್ಲಿ ಕುಳಿತುಕೊಂಡು ಮದ್ಯಪಾನ ಮಾಡತಕ್ಕಂಥದನ್ನು ಸಾರ್ವಜನಿಕರು ಫೋಟೋ ಹೊಡೆದುಕೊಂಡಿದ್ದರೂ ಅವರು ಯಾವುದೇ ರೀತಿಯ ಚಿಂತನೆ ಮಾಡಿಲ್ಲ. ಈ ಫೋಟೋ ಪತ್ರಿಕೆಯಲ್ಲಿ ಬಂದಿದೆ. ಇದನ್ನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ಇದನ್ನು ನೋಡಿದರೆ ಈ ಒಂದು ಪೊಲೀಸ್ ವ್ಯವಸ್ಥೆಯ ಬಗ್ಗೆ ಜನರಲ್ಲಿ ಏನೊಂದು ಕಲ್ಪನೆ ಆಗಬಹುದು ಎಂಬುದರ ಬಗ್ಗೆ ವಿಚಾರ ಮಾಡಬೇಕಾಗಿದೆ. ಈ ರೀತಿಯಾದ ಒಂದು ವ್ಯವಸ್ಥೆಯಿಂದ ಪೊಲೀಸ್‌ರ ಮೇಲೆ ಇವತಕ್ಕಂಥ ಒಂದು ವಿಶ್ವಾಸ ಜನರಲ್ಲಿ ಹೋಗುತ್ತಿದೆ. ಹಾಗೆಯೇ ಪೊಲೀಸ್‌ನವರ ಬಗ್ಗೆ ಒಂದು ದೊಡ್ಡ ರೀತಿಯ ಭಯ ಜನರಲ್ಲಿ ಹುಟ್ಟಿದೆ. ಇವತ್ತಿನದಿವಸ ಸಾಮಾನ್ಯ ಜನರಿಗೆ ಏನಾದರೊಂದು ಅನ್ಯಾಯವಾದಂಥ ಸಂದರ್ಭದಲ್ಲಿ ಪೊಲೀಸ್ ಸ್ಟೇಷನ್‌ಗೆ ಹೋಗಿ ದೂರು ಕೊಡತಕ್ಕಂಥ ಧೈರ್ಯ ಕೂಡ ಇಲ್ಲ. ಇವತ್ತಿನ ದಿವಸ ದೂರು ಕೊಡಬೇಕಾಗದರೆ ಯಾರೊಬ್ಬ ಮೀಡಿಯೇಟರ್‌ನ್ನು ಕರೆದುಕೊಂಡು ಹೋಗಿ ಈತನಿಗೆ ಮತ್ತು ಅವರಿಗೆ ವಸೂಲಿ ಕೊಟ್ಟು ದೂರು ಕೊಡತಕ್ಕಂಥ ಪರಿಸ್ಥಿತಿ ಬಂದಿದೆ. ಈ ಒಂದು ವ್ಯವಸ್ಥೆ ಇವತ್ತಿನ ದಿವಸ ನಿರ್ಮಾಣವಾಗಿದೆ. ಈ ಒಂದು ವ್ಯವಸ್ಥೆಯನ್ನು ಹೋಗಲಾಡಿಸುವುದಕ್ಕಾಗಿ ಮಾನ್ಯ ಗೃಹಮಂತ್ರಿಯವರು ಏನು ಮಾಡಿದ್ದಾರೆ ಎನ್ನತಕ್ಕಂಥದನ್ನು ಇಲ್ಲಿ ಸಷ್ಟಪಡಿಸಬೇಕು. ಹಾಗೆಯೇ ಮಾನ್ಯ ಮುಖ್ಯಮಂತ್ರಿಯವರನ್ನು ಇದನ್ನು ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಇವತ್ತಿನ ದಿವಸ ಸರ್ಕಾರ ಎಂದರೆ, ಕೇವಲ ಮುಖ್ಯಮಂತ್ರಿ ಅಥವಾ ಮಂತ್ರಿಗಳು ಸರ್ಕಾರ ಅಲ್ಲ. ತಾಲ್ಲೂಕು ಕಛೇರಿಯಲ್ಲಿರತಕ್ಕಂಥ ತಹಶೀಲ್ದಾರ್ ಮತ್ತು ಇನ್‌ಸ್ಪೆಕ್ಟರ್ ಹಾಗೂ ವಿಲೇಜ್ ಅಕೌಂಟೆಂಟ್ ಮತ್ತು ಅಲ್ಲಿರತಕ್ಕಂಥ ಬಿ.ಇ.ಓ. ಇವರೆಲ್ಲರೂ ಸಹ ಸರ್ಕಾರ ಆಗಿದ್ದಾರೆ. ಈ ಸರ್ಕಾರದ ಪ್ರತಿನಿಧಿಗಳು ಸಾರ್ವಜನಿಕರ ಹತ್ತಿರ ಪ್ರಾಮಾಣಿಕವಾಗಿ ನಡೆದುಕೊಂಡರೆ ಸರ್ಕಾರಕ್ಕೆ ಕೂಡ ಒಳ್ಳೆಯ ಹೆಸರು ಬರುತ್ತದೆ. ಅವರೇ ಈ ರೀತಿ ಮಾಡಿದರೆ ಕೆಳಗಿನಿಂದ ಮೇಲಿನ ವರೆಗೂ ಇದೇ ರೀತಿಯಾದ ಒಂದು ವ್ಯವಸ್ಥೆ ಇದೆ ಎನ್ನತಕ್ಕಂಥ ನಂಬಿಕೆ ಜನರಲ್ಲಿ ಬರುವುದಕ್ಕೆ ಸಾಧ್ಯವಿದೆ. ಆದ್ದರಿಂದ ಈ ಒಂದು ವ್ಯವಸ್ಥೆಯನ್ನು ಬದಲಾವಣೆ ಮಾಡುವುದರ ಬಗ್ಗೆ ಸರ್ಕಾರ ವಿಚಾರ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನೊಂದು ಹೈಟೆಕ್ ದರೋಡೆ ಯಾವ ರೀತಿ ನಡೆಯುತ್ತಿದೆಯೆಂಬುದನ್ನು ಹೇಳುತ್ತೇನೆ. ಮಹಾರಾಷ್ಟ್ರ ಅಪೆಕ್ಸ್ ಬಂದ್ ಆಯಿತು. ಈ ಒಂದು ಸಂಸ್ಥೆಯಲ್ಲಿ ಠೇವಣಿ ಹೂಡಿದವರು ಇವೊತ್ತು ಬೀದಿಗೆ ಬಿದ್ದಿದ್ದಾರೆ. ಈ ಕುರಿತು ತಮಗೆ ಪ್ರತ್ಯೇಕ ನೋಟೀಸ್ ಕೊಟ್ಟು ಮಾತನಾಡುತ್ತೇನೆ. ಅದೇ ರೀತಿ ಶ್ರೀರಾಮ್ ಚಿಟ್ಸ್ ಕೂಡ ಜನರಿಂದ

ಠೇವಣಿ ಹಣ ಕಟ್ಟಿಸಿಕೊಂಡು ಮೋಸ ಮಾಡುತ್ತಿದೆ. ಈ ಎರಡೂ ವಿಷಯಗಳ ಕುರಿತು ಸುಮಾರು 2-3 ಗಂಟೆಗಳ ಕಾಲವಾದರೂ ಮಾತನಾಡಬೇಕಾಗಿದೆ. ಈ ಸಂಸ್ಥೆಗಳು ಸಾರ್ವಜನಿಕರನ್ನು ನಿಜವಾಗಿಯೂ ಮೋಸಗೊಳಿಸುತ್ತಿವೆ. ಹೀಗಾಗಿ ಇದನ್ನೆಲ್ಲವನ್ನೂ ನಾವು ನೋಡುತ್ತಿದ್ದೇವೆ. ನಮ್ಮ ಕಣ್ಮುಂದೆಯೇ ಇವು ನಡೆಯುತ್ತಿವೆ. ಇಂತಹುದ್ದನ್ನು ಕಂಟ್ರೋಲ್ ಮಾಡುವುದಕ್ಕೆ ಇವೊತ್ತು ಸರ್ಕಾರದಿಂದ ಆಗುತ್ತಿಲ್ಲ. ಮಧ್ಯಮ ವರ್ಗದವರು ಯಾರು ತಮ್ಮ ಹಣವನ್ನು ಇಂತಹ ಸಂಸ್ಥೆಗಳಲ್ಲಿ ಡಿಪಾಸಿಟ್ ಇಟ್ಟಿದ್ದಾರೆ, ಇವರುಗಳಿಗೆ ಪರಿಹಾರ ಕೊಡುವ ಕೆಲಸ ಆಗುತ್ತಿಲ್ಲ. ಕೇಂದ್ರ ಸರ್ಕಾರ ಪೋಟೋ ಕಾನೂನನ್ನು ಜಾರಿಗೊಳಿಸಿತು. ಪೋಟೋ ಕಾನೂನು ಜಾರಿಯಾಗುವ ಮುನ್ನವೇ ನಮ್ಮ ರಾಜ್ಯದಲ್ಲಿ 'ಕೋಕಾ' ಎನ್ನುವ ಕಾನೂನು ಜಾರಿಗೆ ಬಂತು. 'ಕೋಕಾ' ಎಂದರೆ ಕರ್ನಾಟಕ ಕಂಟ್ರೋಲ್ ಆಫ್ ಆರ್ಗನೈಸ್ಡ್ ಕ್ರೈಮ್ಸ್. ಕೋಕಾ ಮತ್ತು ಪೋಟೋ ಈ ಕಾನೂನುಗಳ ಪ್ರಾವಿಜನ್ಸ್ ನೋಡಿದಾಗ ಬಹಳಷ್ಟು ಸಾಮ್ಯಗಳಿವೆ. ಆರ್ಗನೈಸ್ಡ್ ಕ್ರೆಮ್ಸ್ ಅನ್ನು ಕಂಟ್ರೋಲ್ ಮಾಡುವ ದೃಷ್ಟಿಯಿಂದ, ಅದರ ಮೇಲೆ ಒಂದು ಕಡಿವಾಣ ಹಾಕುವ ದೃಷ್ಟಿಯಿಂದ ರಾಜ್ಯ ಸರ್ಕಾರ ಈ ಕೋಕಾ ಕಾನೂನನ್ನು ಜಾರಿಗೆ ತಂದಿತು. ಈ ಕೋಕಾ ಕಾನೂನನ್ನು ಜಾರಿಗೆ ತಂದಾಗ ಇದನ್ನು ಪ್ರತಿಪಕ್ಷದಲ್ಲಿದ್ದ ನಾವು ಆರ್ಗನೈಸ್ಡ್ ಕ್ರೈಮ್ಸ್ ಹೋಗಬೇಕು, ಅದರ ಮೇಲೊಂದು ನಿಗಾ ಇಡಬೇಕು, ಇವೊತ್ತು ಭೂಗತ ಜಗತ್ತಿನಲ್ಲಿ ಏನೇನು ಚಟುವಟಿಕೆಗಳು ನಡೆಯುತ್ತಿದೆ, ಇದರ ಮೇಲೆ ಕಂಟ್ರೋಲ್ ಇರಬೇಕೆನ್ನುವ ದೃಷ್ಟಿಯಿಂದ ನಾವೂ ಸಹಕಾರ ಕೊಟ್ಟೆವು. ಕಾನೂನನ್ನು ಜಾರಿಗೆ ತರುವಾಗ ಕೆಲರವೊಂದು ತಿದ್ದುಪಡಿ ಮಾಡಿ ತರಬೇಕೆಂದು ಹೇಳಿದೆವು. ಆದರೆ, ಈ ಕೋಕಾ ಕಾನೂನು ಜಾರಿಗೆ ತಂದು ಯಾವುದನ್ನು ನೀವು ಹತೋಟಿಗೆ ತಂದಿದ್ದೀರಿ? ಇದರಿಂದ ಇವೊತ್ತು ಕ್ರೈಮ್ಸ್ ಕಡಿಮೆಯಾಗುತ್ತಿದೆಯೇ? ಹೈಟೆಕ್ ನಗರವಾಗಿರುವ ಬೆಂಗಳೂರಿನಲ್ಲಿ ಈ ಕ್ರೈಮ್ಸ್ ಕಡಿಮೆಯಾಗಿದೆಯೇ? ಹೇಗೆ? ಇದರ ಬಗ್ಗೆ ಚಿಂತನೆ ಮಾಡಬೇಕಾಗಿದೆ. ಹಾಗೂ ರಾಜ್ಯ ಸರ್ಕಾರ ಈ ಕೋಕಾ ಕಾನೂನನ್ನು ಯಾವ ರೀತಿ ಉಪಯೋಗಿಸಿಕೊಂಡಿದೆ ಎಂಬುದನ್ನೂ ಸಹ ಯೋಚಿಸಬೇಕಾಗಿದೆ. ತಮಿಳುನಾಡಿನಲ್ಲಿ ಇವೊತ್ತು ಪೋಟೋ ಕಾನೂನು ಉಪಯೋಗವಾಗಿದೆ, ಅದನ್ನು ಯಾವುದಕ್ಕೆ ಉಪಯೋಗಿಸಿದ್ದಾರೆಂಬುದು ಜಗತ್ತಿಗೆ ಗೊತ್ತಿದೆ. ಯಾರ ಮೇಲೆ ಅದನ್ನು ಉಪಯೋಗಿಸಿದರು? ಯಾವ ಉದ್ದೇಶವಿಟ್ಟುಕೊಂಡು ಮಾಡಿದರು? ಆ ಕುರಿತಂತೆ ನಾನು ಹೆಚ್ಚು ಚರ್ಚೆಗೆ ಹೋಗುವುದಿಲ್ಲ. ಆದರೆ, ಈ ರಾಜ್ಯದಲ್ಲಿ ಕೋಕಾ ಕಾನೂನನ್ನು ಜಾರಿಗೊಳಿಸಿದ ನಂತರ, ಇವೊತ್ತು ಯಾರು ಇಲ್ಲಿ ಬಂಧಿತರಾಗಿದ್ದಾರೆ, ಇಂತಹ ಕೆಲವೊಂದು ಅಪರಾಧಗಳನ್ನೆಸಗುವ ವ್ಯಕ್ತಿಗಳೇನಿದ್ದಾರೆ, ಅವರ ಮೇಲೆ ಕೋಕಾ ಕಾನೂನನ್ನು ಜಾರಿಗೊಳಿಸಬಹುದಾಗಿತ್ತು, ಸದರಿ ಕಾನೂನಿನನ್ವಯ ಅಂತಹವರನ್ನು ಬಂಧಿಸಬಹುದಿತ್ತು, ಆದರೆ, ಆ ಕೆಲಸವನ್ನು ಇದುವರೆವಿಗೂ ಮಾಡಿಲ್ಲ. ಈ ಕುರಿತು ನಾನು ಒಂದನ್ನು ಉದಾಹರಿಸುವುದಾದರೆ, ಇತ್ತೀಚಿಗೆ ರಾಜ್ಯದಲ್ಲಿ ನಕಲಿ ಸ್ಟಾಂಪ್ ಪೇಪರ್ ಹಗರಣ ನಡೆಯಿತು. ಹಗರಣದ ಮುಖ್ಯ ಆರೋಪಿಯಾದ ಕರೀಂಲಾಲಾ ಇವೊತ್ತು ಬಂಧನದಲ್ಲಿದ್ದಾನೆ. ಆತನಿಗೆ ಯಾವಾಗ ಜಾಮೀನು ಸಿಗುತ್ತದೆಂದು ಹೇಳಲು ಸಾಧ್ಯವಿಲ್ಲ. ಮತ್ತು ಪ್ರಕರಣ ಎಲ್ಲಿಗೆ ಬಂತೆಂಬುದೂ ಸಹ ಗೊತ್ತಿಲ್ಲ. ಮತ್ತೊಬ್ಬ ಭೂಗತ ಜಗತ್ತಿನ ಅಪರಾಧಿಯಾಗಿರುವ ಮುತ್ತಪ್ಪ ರೈ ಎಂಬ ವ್ಯಕ್ತಿಯ ಮೇಲೆ ಆಪಾದನೆಯಿದ್ದರೂ ಈತನನ್ನು ಕೋಕಾ ಕಾನೂನಿನಡಿ ಬಂಧಿಸಿರುವುದಿಲ್ಲ. ಈತ ಎಸಗಿರುವುದು ಆರ್ಗನೈಸ್ಡ್ ಕ್ರೈಮ್ಸ್. ಹಾಗಿದ್ದಾಗ್ಯೂ ಆತನನ್ನು ಬೇರೆ ಕಾನೂನಿನಡಿ ಬಂಧಿಸಿದ್ದೀರಿ. ಪರಿಸ್ಥಿತಿ ಹೀಗಿರುವುದರಿಂದ ಆತ ಇಂದಲ್ಲ ನಾಳೆ

ಜಾಮೀನಿನ ಮೇಲೆ ಹೊರಗೆ ಬರಬಹುದು. ಏಕೆ ಅವರನ್ನು ಈ ಕಾನೂನಿನಡಿ ಬಂಧಿಸಿಲ್ಲ? ಆತನ ಮೇಲೆ ಏಕೆ ನಿಗಾ ಇಲ್ಲ? ಆದರೂ ರಾಜ್ಯದಲ್ಲಿ ಕೋಕಾ ಕಾನೂನನ್ನು ಏಕೆ ಜಾರಿಗೆ ತಂದಿರಿ ಎಂಬುದು ನನಗರ್ಥವಾಗುತ್ತಿಲ್ಲ. ಇವರು ಎಸಗಿರುವುದು ಆರ್ಗನೈಸ್ಡ್ ಕ್ರೈಮ್ಸ್ ಅಲ್ಲವೇ? ಇವರ ಸುತ್ತಮುತ್ತ ಜರುಗಿರುವ ಘಟನೆಗಳು ಆರ್ಗನೈಸ್ಡ್ ಕ್ರೈಮ್ಸ್ ಅಲ್ಲವೇ? ರಾಜ್ಯದಲ್ಲಿ ಕೋಕಾ ಕಾನೂನು ಜಾರಿಯಲ್ಲಿರಬೇಕಾದರೆ ಇದನ್ನು ಉಪಯೋಗಿಸಿಕೊಂಡು ಆರ್ಗನೈಸ್ಡ್ ಕ್ರೈಮ್ಸ್ ಎಸಗುವವರನ್ನು ಬಗ್ಗಿಸುವ ಕೆಲಸ ಮಾಡಬೇಕು. ಇದರಿಂದ ಇತರ ಅಪರಾಧಿಗಳಿಗೆ ಬುದ್ಧಿ ಬರುತ್ತದಲ್ಲದೆ ಎಚ್ಚರಿಕೆ ಕೊಟ್ಟಂತಾಗುತ್ತದೆ. ಆದರೆ, ಇವೊತ್ತಿನವರೆವಿಗೂ ಅದನ್ನು ಮಾಡಿಲ್ಲ. ನಕಲಿ ಛಾಪಾ ಕಾಗದದ ಹಗರಣದಲ್ಲಿ ಕರೀಂಲಾಲನನ್ನು ಅರೆಸ್ಟ್ ಮಾಡಿ ಬಂಧನದಲ್ಲಿರಿಸಲಾಗಿದೆ. ಈ ಹಗರಣದ ತನಿಖೆ ಎಲ್ಲಿವರೆಗೆ ಬಂತು? ತನಿಖೆಯಲ್ಲಿ ಏನೇನು ಪ್ರಗತಿಯುಂಟಾಗಿದೆ? ಇದ್ಯಾವುದೂ ತಿಳಿಯುತ್ತಿಲ್ಲ. ಕರೀಂಲಾಲ ರಾಜ್ಯದ ಪೊಲೀಸ್ ಕಸ್ಟಡಿಯಲ್ಲಿದ್ದರೂ, ಪಕ್ಕದ ರಾಜ್ಯವಾದ ಮಹಾರಾಷ್ಟ್ರದಲ್ಲಿ ಸಾಕಷ್ಟು ಡೆವಲಪ್‌ಮೆಂಟ್ಸ್ ಆಗುತ್ತಿದೆ. ಇವೊತ್ತು ಮಹಾರಾಷ್ಟ್ರದ ಪುಣೆಯ ಭೀವಂಡಿಯಲ್ಲಿ ಸುಮಾರು 1,500 ಕೋಟಿ ರೂಪಾಯಿಗಳಷ್ಟು ಮೊತ್ತದ ನಕಲಿ ಸ್ಟಾಂಪ್ ಪೇಪರ್ ಅನ್ನು ಮಹಾರಾಷ್ಟ್ರ ಪೊಲೀಸರು ಸೀಜ್ ಮಾಡಿದ್ದಾರೆ. ಮುಂದೆ ಮುಂಬಯಿಯ ಕೊಲಾಬಾದಲ್ಲಿ ಕರೀಂಲಾಲನಿಗೆ ಸಂಬಂಧಪಟ್ಟ ಅತ್ಯಂತ ಆಧುನಿಕವಾದ ಮುದ್ರಣ ಯಂತ್ರಗಳನ್ನು ಸೀಜ್ ಮಾಡಿದ್ದಾರೆ. ಅಲ್ಲದೆ, ಇದರ ಜೊತೆಗೆ 350 ಕೋಟಿ ರೂಪಾಯಿಗಳಷ್ಟು ನಕಲಿ ಸ್ಟಾಂಪ್ ಪೇಪರ್ ಅನ್ನು ಸೀಜ್ ಮಾಡಲಾಗಿದೆ. ಆ ರಾಜ್ಯದ ಗೃಹಮಂತ್ರಿ ಮತ್ತು ಉಪಮುಖ್ಯಮಂತ್ರಿಯಾಗಿರುವ ಚಗನ್ ಭುಜಬಲ್‌ರವರೇ ಹೇಳಿಕೆ ಕೊಟ್ಟಿರುವಂತೆ, ಒಟ್ಟಾರೆ ಸುಮಾರು 2,100 ಕೋಟಿ ರೂಪಾಯಿಗಳಷ್ಟು ನಕಲಿ ಸ್ಟಾಂಪ್ ಪೇಪರ್ ಸೀಜ್ ಆಗಿದೆಯೆಂದಿದ್ದಾರೆ. ಈ ವಿಷಯ ನಿನ್ನೆ 'ಸಂಯುಕ್ತ ಕರ್ನಾಟಕ' ದಿನಪತ್ರಿಕೆಯಲ್ಲಿ ಮೈಸೂರಿನಲ್ಲಿ ನಕಲಿ ಛಾಪಾ ಕಾಗದದ ಹಾವಳಿ ಕುರಿತು ವರದಿಯಾಗಿದೆ. ಕೆ.ಆರ್. ನಗರದಲ್ಲಿರುವ ಕಲ್ಯಾಣ ಮಂಟಪದ ಮೇಲೆ ಪೊಲೀಸರು ಧಾಳಿ ಮಾಡಿ ಸುಮಾರು ಒಂದು ಲಕ್ಷ ರೂಪಾಯಿ ಮೊತ್ತದ ನಕಲಿ ಸ್ಟಾಂಪ್ ಪೇಪರ್ ಅನ್ನು ಸೀಜ್ ಮಾಡಿದ್ದಾರೆ. ಆ ವ್ಯಕ್ತಿ ಯಾರು? ನಕಲಿ ಸ್ಟಾಂಪ್ ಯಾರ ಕಡೆಗಿತ್ತು? ಆತನನ್ನು ಇದುವರೆವಿಗೂ ಅರೆಸ್ಟ್ ಮಾಡಿಲ್ಲ. ಮೈಸೂರಿನಲ್ಲಿ ಯಾರ ವಶದಲ್ಲಿ ಆ ವಸ್ತು ಇದೆಯೋ ಅದನ್ನು ಇವೊತ್ತಿನವರೆವಿಗೂ ನೀವು ಸೀಜ್ ಮಾಡಿಲ್ಲ. ಇವೊತ್ತು ಕರೀಂಲಾಲ ನಿಮ್ಮ ಕಸ್ಟಡಿಯಲ್ಲಿದ್ದು ಶ್ರೀಕುಮಾರ್ ಎನ್ನುವ ಹಿರಿಯ ಪ್ರಾಮಾಣಿಕ ಅಧಿಕಾರಿ ನೇತೃತ್ವದಲ್ಲಿ ತಂಡ ರಚಿಸಿದ್ದರೂ, ಆ ತಂಡಕ್ಕೆ ನೀವು ಮೋಸ ಮಾಡುವ ಮೂಲಕ ಕೊಲ್ಕತ್ತಾದಲ್ಲಿ ಪ್ರಿಂಟಿಂಗ್ ಪ್ರೆಸ್ ಅನ್ನು ನೀವು ಸೀಜ್ ಮಾಡುವುದಕ್ಕಾಗಲಿಲ್ಲ. ಈ ಕಾರ್ಯವನ್ನು ಮಹಾರಾಷ್ಟ್ರ ಪೊಲೀಸರು ಮಾಡಿದರು. ನಿಮ್ಮಿಂದ ಇದನ್ನು ಏಕೆ ಮಾಡುವುದಕ್ಕಾಗಲಿಲ್ಲ? ಮುಂಬಯಿಯಲ್ಲಿದ್ದುದನ್ನು ಸೀಜ್ ಮಾಡುವುದಕ್ಕಾಗಲಿಲ್ಲ. ಏಕೆಂದರೆ, ಮಹಾರಾಷ್ಟ್ರ ಪೊಲೀಸರಿಂದ ನೀವು ಆ ಕುರಿತು ಮಾಹಿತಿಯನ್ನು ಪಡೆದುಕೊಳ್ಳಲು ಸಾಧ್ಯವಾಗಲಿಲ್ಲವೋ ಏನೋ ಎಂಬುದು ನಮಗರ್ಥವಾಗುತ್ತಿಲ್ಲ. ಆದಕ್ಕೋಸ್ಕರ ಮೊದಲಿನಿಂದಲೂ ನಮಗೆ ಬಂದಿರುವ ಸಂಶಯವೇನೆಂದರೆ, ರಾಜ್ಯದಲ್ಲಿ ಈ ಕುರಿತು ಏನೂ ತನಿಖೆಯಾಗುವುದಿಲ್ಲ. ಅದಕ್ಕೋಸ್ಕರ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆಂಬ ಒತ್ತಾಯ ಮಾಡುತ್ತಿದ್ದೇವೆ. ಆದರೂ ನೀವು ಇದನ್ನು ಪರಿಗಣಿಸಲಿಲ್ಲ. ಆದರೆ, ಇನ್ನೂ ಅಪರಾಧ ಪ್ರಕರಣಗಳು ಜರುಗುತ್ತಿದೆ. ಈ ಹಗರಣ ಬೆಳಕಿಗೆ ಬಂದು 7-8 ತಿಂಗಳುಗಳಾಗಿದ್ದು ಕಳೆದ

ಹಾಗೂ ಅದಕ್ಕೂ ಹಿಂದಿನ ಅಧಿವೇಶನಗಳಲ್ಲಿ ಈ ಕುರಿತಂತೆ ಚರ್ಚೆ ಮಾಡಿದ್ದೇವೆ. ಆದರೆ, ಪ್ರಕರಣ ಕುರಿತಂತೆ ತನಿಖೆ ಏನಾಯಿತು? ಈ ಬಗ್ಗೆ ಹೆಚ್ಚುವರಿ ಮಾಹಿತಿಗಳೇನಾದರೂ ಸಿಕ್ಕಿದೆಯೇ ಎಂದರೆ ಇವೊತ್ತಿನವರೆವಿಗೂ ಏನೂ ಇಲ್ಲ. ಹೀಗಾಗಿ ನಾನು ಇಲ್ಲಿ ಹೇಳುವಂತಾದ್ದು ಏನೆಂದರೆ, ಆರ್ಗನೈಸ್ಡ್ ಕ್ರೈಮ್ಸ್ ಎಸಗುವ ವ್ಯಕ್ತಿಗಳನ್ನು ತಾವು ಕೋಕಾ ಕಾಯಿದೆಯಡಿ ಕೇಸ್ ದಾಖಲಿಸಬಹುದೆಂಬುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದಕ್ಕೋಸ್ಕರ ತಾವು ಇದರ ಬಗ್ಗೆ ಒಂದು ಚಿಂತನೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತೊಂದು ಪ್ರಮುಖ ವಿಷಯವೇನೆಂದರೆ, ಇವೊತ್ತು ಯಾರೋ ಚಿಕ್ಕಪುಟ್ಟ ಕೇಸ್‌ಗಳನ್ನು ಐಪಿಸಿ ಸೆಕ್ಷನ್‌ನಲ್ಲಿ ಹಾಕಿರುತ್ತಾರೆ, ಇದಕ್ಕೆ ಒಬ್ಬ ವಿದ್ಯಾರ್ಥಿಯ ಉದಾಹರಣೆ ಕೊಡುತ್ತೇನೆ. ಅವರೇನಾದರೂ ಸಣ್ಣ ಪುಟ್ಟ ಅಪರಾಧವೆಸಗಿದ್ದರೆ ಅವರ ಕೈಗೆ ಕೋಳ ತೊಡಿಸಿ ರಸ್ತೆಯಲ್ಲಿ ಮೆರವಣಿಗೆ ಮಾಡಿಸುತ್ತಾರೆ. ಆದರೆ, ಇವೊತ್ತು ಕರೀಂಲಾಲ ಎಂಬ ವ್ಯಕ್ತಿ ಸುಮಾರು ಹತ್ತು ಸಾವಿರ ಕೋಟಿ ರೂಪಾಯಿಗಳಷ್ಟು ನಕಲಿ ಸ್ಟಾಂಪ್ ಪೇಪರ್ ನಡೆಸುವ ವ್ಯಕ್ತಿ ಜೈಲಿನಿಂದ ಕೋರ್ಟಿಗೆ ಹೋಗುವಾಗ ಇಲ್ಲವೇ ಹೊರಗಡೆ ಕರೆದುಕೊಂಡು ಹೋಗಬೇಕಾದರೆ ಆತನ ಕೈಗೆ ಕೋಳ ತೊಡಿಸುವುದಿಲ್ಲ. ರಕ್ಷಣೆ ದೃಷ್ಟಿಯಿಂದ ಆತನ ಕೈಗೆ ಕೋಳ ತೊಡಿಸಿ ಕೋರ್ಟಿಗೆ ಕರೆದುಕೊಂಡು ಹೋಗಲು ನೀವೇಕೆ ಕೋರ್ಟಿಗೆ ಒಂದು ಅಪ್ಲಿಕೇಶನ್ ಕೊಡುವುದಕ್ಕಾಗಿಲ್ಲ? ಇದರ ಹಿನ್ನಲೆಯಾದರೂ ಏನು? ಅವರು ಜೈಲಿನಲ್ಲಿರುವಾಗ ಅವರಿಗೆ ಮೊಬೈಲ್ ಸೇವೆ ಒಳಗೊಂಡಂತೆ ಎಲ್ಲಾ ರೀತಿಯ ರಾಜೋಪಚಾರಗಳು ಸಿಗುತ್ತವೆ. ಆದರೆ, ಆತನ ಕೈಗೆ ಕೋಳ ನಿಮ್ಮಿಂದ ತೊಡಿಸುವುದಕ್ಕಾಗುವುದಿಲ್ಲವೇ? ಅಂದರೆ, ಆತ ಸಣ್ಣಪುಟ್ಟ ಅಪರಾಧಿಗಳಿಗಿಂಥ ಅತಿ ಸಣ್ಣ ಅಪರಾಧಿಯೇ? ಹೇಗೆ? ನನಗರ್ಥವಾಗುತ್ತಿಲ್ಲ. ಬಹುಶಃ ಆತ ಅಪರಾಧಿಗಳಲ್ಲಿ ವಿಐಪಿ ಇಲ್ಲವೇ ಹೈಟೆಕ್ ಅಪರಾಧಿ ಇರಬಹುದು! ನನಗೆ ಹಾಗೇ ಅನ್ನಿಸುತ್ತಿದೆ. ಇದರಿಂದ ಏನಾಗುತ್ತದೆಂದರೆ, ಸಾರ್ವಜನಿಕರಲ್ಲಿ ಬೇರೆ ಒಂದು ರೀತಿಯ ಅಭಿಪ್ರಾಯ ಮೂಡಲು ಕಾರಣವಾಗುತ್ತದೆ. ಅಲ್ಲದೆ, ಸರ್ಕಾರಕ್ಕೂ ಕೆಟ್ಟ ಹೆಸರು ಬರುತ್ತದೆ. ಹೀಗಾಗಿ, ಎಂತಹ ದೊಡ್ಡ ಅಪರಾಧಿಯೇ ಇರಲಿ, ಅವರಿಗೆ ರಕ್ಷಣೆ ನೀಡುವಂತಾದ್ದು ಆಗಬಾರದು. ಅಂತಹ ಅಪರಾಧಿಗಳ ವಿರುದ್ಧ ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಳ್ಳುವಂತಾದ್ದು, ಹಾಗೂ ಥರೋ ಇನ್‌ವೆಸ್ಟಿಗೇಶನ್ ಮಾಡಬೇಕಾಗುತ್ತದೆ. ಇದು ಇವೊತ್ತು ಸರ್ಕಾರದಿಂದ ಆಗುತ್ತಿಲ್ಲದಿರುವುದು ನನ್ನ ಕೋರಗಾಗಿದೆ. ಬೆಳಗಾಂ ಜೈಲಿನಲ್ಲಿ ಒಂದು ಘಟನೆ ಜರುಗಿದೆ. ಆ ಜೈಲಿನಲ್ಲಿ ಬೇಕಾದ್ದು ದೊರೆಯುತ್ತಿದೆ. ಬೆಳಗಾಂ ಜೈಲಿಗೆ ಸುಮಾರು ಎಂಭತ್ತು ವರ್ಷಗಳ ಇತಿಹಾಸ ಇದೆ. ಅದೊಂದು ಸುಸಜ್ಜಿತ ಜೈಲಾಗಿದ್ದು, ಜೈಲಿನೊಳಗೆ ಮೊಬೈಲು ಫೋನುಗಳು ಓಡಾಡುತ್ತಿವೆ, ಹೊರಗಿನ ಎಲ್ಲಾ ಸೌಲಭ್ಯಗಳು ಒಳಗೆ ಹೋಗುತ್ತಿವೆ. ಜೇಲರ್ ಮತ್ತು ಕೈದಿಗಳ ನಡುವೆ ಒಪ್ಪಂದಗಳಾಗುತ್ತಿವೆ. ಅಲ್ಲಿನ ಜಿಲ್ಲಾಧಿಕಾರಿಗಳು ಜೈಲಿಗೆ ಒಮ್ಮೆ ಭೇಟಿ ನೀಡಿ ಇನ್ಸ್‌ಪೆಕ್ಷನ್ ಮಾಡಿದಾಗ ವಸ್ತುಗಳನ್ನೆಲ್ಲಾ ಹೊರಗೆ ಹಾಕಿಸಿದ್ದಾರೆ. ಡಿ.ಸಿ.ಯವರೇ ಕೆಲವು ವಿಷಯಗಳನ್ನು ಹೊರಹಾಕಿದ್ದಾರೆ. ಇದರ ಬಗ್ಗೆ ಅಲ್ಲಿನ ಸಂಬಂಧಪಟ್ಟ ಯಾವುದೇ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡಿರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ತಾವು ಕ್ಷಮಿಸಬೇಕು. ನನಗೆ ಇಂಟರಪ್ಟ್ ಮಾಡಬೇಕೆನ್ನುವ ಇಂಟೆನ್‌ಶನ್ ಇರಲಿಲ್ಲ. ಕೆಲವು ವಿಷಯಗಳು ಹೋದ ನಂತರ ಮತ್ತೆ ರೀಜಾಯಿಂಡರ್ ಮಾಡತಕ್ಕಂಥಾದ್ದು, ಹೇಳುವುದಕ್ಕೆ ಅವಕಾಶ ಸಿಗುವುದಿಲ್ಲ. ಅದಕ್ಕೋಸ್ಕರ

ಹೇಳುವುದೇನೆಂದರೆ, ಕರೀಂಲಾಲ ಬಗ್ಗೆ ಈಗಾಗಲೇ ಅವರಿಗೆ ಗೊತ್ತಿದೆ. ನಕಲಿ ಸ್ಟಾಂಪ್ ಪೇಪರ್ ಹಗರಣದ ಸಂಬಂಧವಾಗಿ ಸಿಬಿಐನಲ್ಲಿ ಸುಮಾರು ಹನ್ನೆರಡು ವರ್ಷಗಳ ಸೇವೆ ಸಲ್ಲಿಸಿರುವ ಶ್ರೀಕುಮಾರ್ ಎಂಬ ಅಧಿಕಾರಿಯ ನೇತೃತ್ವದಲ್ಲಿ ಒಂದು ವಿಶೇಷ ತನಿಖಾ ತಂಡ ರಚಿಸಿ ತನಿಖೆ ನಡೆಸುತ್ತಿದ್ದೇವೆ. ತನಿಖೆ ಬಹಳ ಒಳ್ಳೆಯ ರೀತಿ ನಡೆಯುತ್ತಿದ್ದು, ಇವೊತ್ತು ಮಹಾರಾಷ್ಟ್ರದವರೂ ಕೂಡ ನಮ್ಮ ರಾಜ್ಯಕ್ಕೆ ಬಂದು ಸಮಾಲೋಚಿಸಿ ಅವರಿಗೆ ಏನು ಮಾಹಿತಿ ಬೇಕೋ ಅದನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಕರೀಂಲಾಲ್‌ನ ಇತಿಹಾಸ ತಮಗೆಲ್ಲರಿಗೂ ಕೂಡ ಗೊತ್ತಿದೆ, 1999ರಲ್ಲಿಯೇ ಫೇಕ್ ಸ್ಟ್ಯಾಂಪ್ ಪತ್ತೆ ಹಚ್ಚುವ ಬಗ್ಗೆ ಕರ್ನಾಟಕ ರಾಜ್ಯದಲ್ಲಿ, ಅದರ ಹಿಂದೆ ಕೂಡ ನಾವು ಅನೇಕ ಸಾರಿ ಅಂತಹ ಘಟನೆಗಳೂ ಕೂಡ ಪೊಲೀಸ್‌ರು ಪತ್ತೆ ಹಚ್ಚಿದ್ದಾರೆ. ಅದನ್ನು ನಾವು ಪತ್ತೆ ಹಚ್ಚಿ ಇದರ ಬಗ್ಗೆ ಎಕ್ಸ್‌ಪೋಸ್ ಮಾಡಿ ಕಲ್ಕತ್ತಾ, ಮಹಾರಾಷ್ಟ್ರ, ಹೈದ್ರಾಬಾದ್‌ನಲ್ಲಿ ನಡೆದಿದೆ ಎನ್ನತಕ್ಕಂಥ ಮಾತು ಇದನ್ನು ನಾವು 2000 ಇಸ್ವಿಯಲ್ಲಿಯೇ ಹೇಳಿದ್ದೇವೆ. ನಾವು ಹೇಳಿದ ಎರಡು ವರ್ಷಗಳ ನಂತರ ಬೇರೆ ಕಡೆ ನಡೆದಿದೆ, ಆ ಶಹಭಾಸ್ ಗಿರಿಯನ್ನು ನೀವು ನಮಗೆ ಕೊಡಬೇಡಿ. ಆಟ್‌ಲೀಸ್ಟ್ ಆಗಿದ್ದಾದರೂ ಕೂಡ, ಯಾರು ಅಂತಹ ಘಟನೆಯನ್ನು ಮಾಡಿದ್ದರೂ, ಯಾರು ಆಕ್ಟಿವಿಟೀಸ್‌ನಲ್ಲಿ ಇನ್‌ವಾಲ್ವ್ ಇದ್ದವರಿಗೆ ಹಿಡಿಯತಕ್ಕಂಥ ಒಂದು ಪ್ರಯತ್ನವನ್ನು ನಾವು ಮಾಡಿದ್ದೇವೆ, ಇವತ್ತು ಯಶಸ್ವಿಯಾಗಿ ಆ ಕೇಸ್‌ಗಳು ನಡೆದಿವೆ, ಅದರ ಲಾಭವನ್ನು ಬೇರೆ ರಾಜ್ಯಗಳವರು ಕೂಡ ಪಡೆದು ಕೊಳ್ಳುತ್ತಿದ್ದಾರೆ. ಏಕೆಂದರೆ ಇನ್‌ಫಾರ್ಮೇಶನ್ ಎಕ್ಸ್‌ಚೇಂಜ್ ಮಾಡಿಕೊಳ್ಳತಕ್ಕಂಥ ಪದ್ಧತಿ ಇದೆ, ನಮ್ಮಲ್ಲಿ ಏನಾದರೂ ಮಾಹಿತಿ ಇದ್ದರೆ ಅವರು ಕೂಡ ಕೇಳಿಕೊಳ್ಳುತ್ತಾರೆ. ಅಥವಾ ಅಲ್ಲೇನಾದರೂ ಇದ್ದರೆ ನಮ್ಮವರೂ ಕೂಡ ಕೇಳಿಕೊಳ್ಳುತ್ತಾರೆ. ನಮ್ಮಲ್ಲಿ ಬಂದು ಆ ಮಹಾರಾಷ್ಟ್ರದವರು ಬಂದು ಮಾಹಿತಿಯನ್ನು ಪಡೆದುಕೊಂಡು ಹೋಗಿರುತ್ತಾರೆ. ಇವತ್ತು ಪ್ರಿಜನ್ಸ್ ಕೂಡ ಟೆಲಿಫೋನ್ ಬಗ್ಗೆ ಯಾವ್ಯಾವ ಕಾನೂನಿನ ಕ್ರಮವನ್ನು ಜರುಗಿಸಬೇಕು, ಎಲ್ಲವನ್ನು ಕೂಡ ನಾವು ತೆಗೆದುಕೊಂಡಿದ್ದೇವೆ. ಆದರೆ ನಾವು ನಮ್ಮ ಮ್ಯಾನುಯಲ್ ಪ್ರಕಾರ ಕೂಡ ನಾವು ಹೋಗಬೇಕಾಗುತ್ತದೆ, ಕೆಲವು ಸಲ, ಪ್ರಿಜನ್ಸ್ ಮ್ಯಾನುಯಲ್ ಇದೆ, ಅದರ ಪ್ರಕಾರ ಹಾಗೂ ನಮ್ಮ ಸರ್ಕಾರದ ಆಜ್ಞೆ ಏನಿದೆ, ಅದು ಕೇಂದ್ರ ಹಾಗೂ ರಾಜ್ಯ ಸರ್ಕಾರದ್ದು ಇರಬಹುದು. ಅದನ್ನು ಪಾಲನೆ ಮಾಡಬೇಕಾಗುತ್ತದೆ. ಅದರ ಅರ್ಥ ಫ್ರೀ ಬಿಡಬೇಕೆಂದು ಅಲ್ಲ, ಏನೇನು ಸವಲತ್ತುಗಳನ್ನು ನಾವು ಮ್ಯಾನುಯಲ್ ಪ್ರಕಾರ ಕೊಡಬೇಕು, ಕೆಲವು ಸಲ ನಾವು ಕೊಡಲೇ ಬೇಕಾಗುತ್ತದೆ. ಕೊಡದೇ ಇದ್ದರೂ ಸಹ ಕೆಲವು ಸಲ ಹ್ಯೂಮನ್ ರೈಟ್ಸ್ ಕಮಿಷನ್‌ದವರು ಅನೇಕ ಸಲ ನಾವು ಈ ಸದನದಲ್ಲಿ ನೋಡಿದ್ದೇವೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ಕ್ಷುಲ್ಲಕ ಕೇಸ್‌ನಲ್ಲಿ ನೀವು ಹ್ಯಾಂಡ್‌ಕಫ್ ಹಾಕಿ ಮೆರೆಸುತ್ತೀರಿ, ಇನ್ನೊಬ್ಬರಿಗೆ ಹಾಗೆ ಬಿಡುತ್ತೀರಿ. ಹೀಗೆ ಅನೇಕ ಪ್ರಶ್ನೆಗಳು ಉದ್ಭವಿಸುತ್ತವೆ. ಅದಕ್ಕಾಗಿ ಇವತ್ತು ನಾವು ಒಂದು ಕಡೆ ಹ್ಯೂಮನ್‌ರೈಟ್ಸ್ ಕಮಿಷನ್‌ಗೂ ಕೂಡ ರೆಸ್ಪೆಕ್ಟ್ ಕೊಡಬೇಕು. ಇನ್ನೊಂದು ಕಡೆ ಇನ್‌ವೆಸ್ಟಿಗೇಶನ್ ಮಾಡಿ ಇಂತಹ ಅಪರಾಧಿಗಳನ್ನು ಬಂಧಿಸಿ ಪತ್ತೆ ಹಚ್ಚಿ ಅದರ ಮಾಹಿತಿಯನ್ನು ತೆಗೆದುಕೊಳ್ಳಬೇಕು. ಇಂತಹ ಘೋರವಾದ ಒಂದು ಎಕನಾಮಿಕಲ್ ಅಫೆನ್ಸ್ ನಡೆದಿದೆ, ಇದಕ್ಕೆ ಕಡಿವಾಣ ಹಾಕುವುದಕ್ಕೆ ಈ ಸರ್ಕಾರ ಕಟ್ಟಿಬದ್ಧ ಇದೆ ಎನ್ನುವುದಕ್ಕೆ ಇಂತಹ ಸಾಕಷ್ಟು ಕೇಸಸ್‌ನ್ನು ಈ ಎರಡು ವರ್ಷದಲ್ಲಿ ನಾವು ಪತ್ತೆಹಚ್ಚಿ ನಿಮ್ಮ ಮುಂದೆ ಇಟ್ಟಿದ್ದೇವೆ, ನೀವು ಅದನ್ನು ಒಪ್ಪಿ ಅಥವಾ ಬಿಡಿ, ಆದರೆ ಸತ್ಯಾಂಶ ಏನೆಂದರೆ, ಇವತ್ತು

ಫೇಕ್ ಸ್ಟಾಂಪ್ ಇರಬಹುದು, ಫೇಕ್ ನೋಟ್ಸ್ ಇರಬಹುದು, ಅಂಟಿಕ್ಸ್ ಇರಬಹುದು, ಬಾಂಬ್‌ಬ್ಲಾಸ್ಟ್ ಕೇಸ್ ಇರಬಹುದು, ನೂರೆಂಟು ಉದಾಹರಣೆಯನ್ನು ಕೊಡಬಹುದು. ಆದರೆ ಅದಕ್ಕೆ ಈಗ ಸಮಯವಿಲ. ಮ್ಯಾನುಯಲ್ ಪ್ರಕಾರ ಹೋಗಬೇಕಾದ ಕೆಲವು ಪದ್ಧತಿ ಇದ್ದ ಕಾರಣ ನಮ್ಮ ರೂಲ್ಸ್‌ನಲ್ಲಿ ಅಮೆಂಡ್‌ಮೆಂಟ್ ಆಗುವವರೆಗೆ ನಾವು ಆ ಕಾನೂನನ್ನು ಮುರಿಯುವುದಕ್ಕಾಗುವುದಿಲ್ಲ. ಆದರೆ ಎಲ್ಲೆಲ್ಲಿ ಅವಶ್ಯಕತೆ ಇದೆ ಅದನ್ನು ಖಂಡಿತವಾಗಿ ಮಾಡುವುದಕ್ಕೆ ನಮ್ಮವರು ಪ್ರಯತ್ನವನ್ನು ಮಾಡುತ್ತಿದ್ದಾರೆ. ಅಂತಹ ಎಲ್ಲಾದರೂ ಲೋಪ ಕಂಡುಬಂದರೆ ಅದನ್ನು ರೆಕ್ಟಿಫೈ ಮಾಡುವುದನ್ನೂ ಕೂಡ ನಾವು ಮಾಡುತ್ತೇವೆ. ಎಲ್ಲವೂ ಕೂಡ ನಮಗೆ ಗೊತ್ತಾಗುತ್ತದೆಂದು ಅಲ್ಲ, ಏನಾದರೂ ಸುಳಿವು ನಿಮ್ಮಲ್ಲಿ ಇದ್ದರೂ ಕೂಡ ಖಂಡಿತವಾಗಿ ನಾವು ಆ ಸುಳಿವನ್ನು ತೆಗೆದುಕೊಂಡು ಅದನ್ನು ಸಂಬಂಧಪಟ್ಟವರಿಗೆ ತಿಳಿಸಿ ಅದನ್ನು ರೆಕ್ಟಿಫೈ ಮಾಡುವುದಕ್ಕೆ ನಾವು ಸಿದ್ದರಿದ್ದೇವೆಂದು ಹೇಳಿ, ಇವತ್ತು ನಮ್ಮ ಕೆಲಸ ಕಾರ್ಯ ಏನಿದೆ, ಆ ಕೆಲಸ ಕಾರ್ಯಗಳು ಆಗಿದ್ದನ್ನು ತಾವು ಒಪ್ಪಿ ಕೊಂಡರೆ ಒಳ್ಳೆಯದಾಗುತ್ತದೆಂದು ಹೇಳಿ ನಾನು ಕೂಡ ಈ ಸಂದರ್ಭದಲ್ಲಿ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಖರ್ಗೆಯವರು ಅವರನ್ನು ಕಸ್ಟಡಿಗೆ ತೆಗೆದುಕೊಂಡ ಮೇಲೆ ನಾವು ಹಲವಾರು ವಿಷಯಗಳನ್ನು ಈಗಾಗಲೇ ಹೊರಗೆ ಚೆಲ್ಲಿದ್ದೇವೆ. ಕೆಲವೊಂದು ಕೆಲಸ ಮಾಡಿದ್ದೇವೆಂದು ಹೇಳಿದರು ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ದಕ್ಷ ಹಾಗೂ ಪ್ರಾಮಾಣಿಕ ಪೊಲೀಸ್ ಅಧಿಕಾರಿಗಳು ಆ ಕರೀಂಲಾಲ್‌ನನ್ನು ಅರೆಸ್ಟ್ ಮಾಡಿ ಸಾಕಷ್ಟು ವಿಷಯಗಳನ್ನು ಹೊರಗೆ ಚೆಲ್ಲಿದ್ದಾರೆ. ಅವನು ಇವತ್ತು ಜೈಲಿನಲ್ಲಿದ್ದಾನೆ. ಇನ್ನು ಎಷ್ಟೊಂದು ಇನ್‌ವೆಸ್ಟಿಗೇಶನ್ ಆಗಬೇಕಾಗಿತ್ತು, ಇನ್ನೂ ಎಷ್ಟು ಹೊಸ ಹೊಸ ವಿಷಯಗಳು ಹೊರಗೆ ಬರಬೇಕಾಗಿತ್ತು, ಇವತ್ತು ಅವನು ಬಂಧನದಲ್ಲಿರುವಾಗಲೇ ಮಹಾರಾಷ್ಟ್ರದಲ್ಲಿ ಡೆವಲಪ್‌ಮೆಂಟ್ಸ್‌ಗಳು ನಡೆಯುತ್ತಿವೆ. ಮೈಸೂರಿನಲ್ಲಿ ಕೂಡ ನಿನ್ನೆ ಸಿಕ್ಕಿವೆ. ಇನ್ನು ಬಹಳಷ್ಟು ವಿಷಯಗಳು ಹೊರಗೆ ಇದ್ದಾವೆ. ಬಹಳಷ್ಟು ಪ್ರಮುಖ ವ್ಯಕ್ತಿಗಳು ಹೊರಗೆ ಬರಬೇಕಾಗಿದೆ, ಅದು ಆಗುತ್ತಿಲ್ಲವೆಂದು ನಮ್ಮ ಕಳಕಳಿ, ಅದು ಆಗಬೇಕು. ಬೇರೆ ಬೇರೆ ಹಗರಣಗಳನ್ನು ಪತ್ತೆಹಚ್ಚಿದ್ದು ಇವೆ, ಕಿಡ್ನಿ ಕಳುವು ಪ್ರಕರಣಗಳು ಇವತ್ತು ನಡೆಯುತ್ತಿವೆ, ತಮಗೆಲ್ಲಾ ಗೊತ್ತಿರಬಹುದು, ಪತ್ರಿಕೆಗಳಲ್ಲಿ ಬಂದಿವೆ, ಮಾನ್ಯ ಮುಖ್ಯ ಮಂತ್ರಿಗಳ ಮಂಡ್ಯ ಜಿಲ್ಲೆಯಲ್ಲಿಯೇ ಹೊಳಲೂರಿನ ಗ್ರಾಮದಲ್ಲಿ ಅಲ್ಲಿ 40 ಕ್ಕಿಂತ ಹೆಚ್ಚು ಜನರ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಕಿಡ್ನಿಯನ್ನು ತೆಗೆದುಕೊಂಡಿದ್ದಾರೆ. ಅವರ ಒಪ್ಪಿಗೆಯಿಂದ ಇರಬಹುದು ಅಥವಾ ಒಪ್ಪಿಗೆ ಇಲ್ಲದೇ ಇರಬಹುದು, ಅದಕ್ಕೆ ಒಂದು ಕಮಿಟಿ ಇದೆ, ಹಿಂದೆ ಕಿಡ್ನಿ ಸ್ಕಾಂಡಲ್ ಆದಾಗ ಕಮಿಟಿ ಮಾಡಿದ್ದು, ಸರ್ಕಾರದವರು ಆ ಕಮಿಟಿ ಯವರು ಸ್ಕ್ರೀನಿಂಗ್ ಮಾಡಿದ ಮೇಲೆ ಅವರು ಯಾರಿಗೆ ಹೇಳುತ್ತಾರೆ ಅವರಿಗೆ ಆಗುತ್ತದೆ. ಆದರೆ ಇಲ್ಲಿ ಏನಾಗಿದೆ ಅಂದರೆ ಒಂದು ಬಿಸಿನೆಸ್ ನಡೆಯುತ್ತಿದೆ. ಯಾರು ಬಡವರು ಇದ್ದಾರೆ, ಹೊಟ್ಟೆಗೆ ಊಟಕ್ಕೆ ಗತಿ ಇಲ್ಲ, ಆ ವ್ಯಕ್ತಿಗೆ 30-40 ಸಾವಿರ ರೂ.ಗಳನ್ನು ಕೊಟ್ಟು, ಕರೆದುಕೊಂಡು ಹೋಗುವ ಏಜೆಂಟ್ ಯಾರಿದ್ದಾರೆ ಅವರಿಗೆ 40-50 ಸಾವಿರ ರೂ.ಗಳು ಸಿಗುತ್ತದೆ. ಇದು ನಡೆಯುತ್ತಿದೆ. ಇದನ್ನು ನೀವು ಕಂಟ್ರೋಲ್ ಮಾಡದಿದ್ದರೆ ಇದು ಇಡೀ ರಾಜ್ಯದಲ್ಲಿ ಪಸರಿಸಬಹುದು. ನಾಳೆ ಆ ಏಜೆಂಟ್ ಮುಖಾಂತರ ಹೋದರೆ ಹೇಗೆ, ಬಡವರು 30-40 ಸಾವಿರ ರೂ.ಗಳು ಸಿಗುತ್ತದೆಂದು ಆ ಕಿಡ್ನಿಯನ್ನು ಮಾರಿಕೊಳ್ಳುವುದು ಏನಿದೆ, ಇದು ಏಜೆಂಟ್ ಮುಖಾಂತರ ಆಗುತ್ತದೆ, ಇದೊಂದು

ದೊಡ್ಡ ದರೋಡೆ. ಇದನ್ನು ನೀವು ತಡೆಹಿಡಿಯುವುದು ಆಗಬೇಕಾಗುತ್ತದೆ. ಯಾರು ಬಿಸಿನೆಸ್ ಮಾಡಿಕೊಂಡಿದ್ದಾರೆ, ಅವರನ್ನು ಕಂಟ್ರೋಲ್ ಮಾಡಬೇಕಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಂಡ್ಯ ಜಿಲ್ಲೆಯಲ್ಲಿ ಆಗಿರುವ ಬಗ್ಗೆ ಈಗ ಸಿಓಡಿ ತನಿಖೆಯನ್ನು ಮಾಡಿಸುತ್ತಿದ್ದೇವೆ. ನಾವು ಇತ್ತೀಚೆಗೆ ಒಂದು ನೋಟಿಫಿಕೇಶನ್‌ನ್ನು ಹೊರಡಿಸಿ ಡಿವೈಎಸ್‌ಪಿಗಳು ಕಂಪ್ಲೇಂಟ್ ಬಂದರೆ ತಕ್ಷಣ ತನಿಖೆಯನ್ನು ಮಾಡುವುದಕ್ಕೆ ಅಧಿಕಾರವನ್ನು ಕೂಡ ಕೊಟ್ಟಿದ್ದೇವೆ. ಕಾನೂನು ಇರುವುದು ಕೇಂದ್ರ ಸರ್ಕಾರದ್ದು, ಆದರೆ ಅದರ ವ್ಯಾಪ್ತಿಯಲ್ಲಿ ತನಿಖೆಯನ್ನು ಮಾಡುವುದಕ್ಕೆ ಪೊಲೀಸ್‌ರಿಗೆ ಅವಕಾಶವನ್ನು ಮಾಡಿಕೊಟ್ಟಿದ್ದೇವೆ. ತಾವು ಹೇಳಿದಂತೆ ಅನೇಕ ಪ್ರಕರಣಗಳು ಇವೆ. ಆದಕ್ಕೆ ಒಂದು ಅಥರೈಜೇಶನ್ ಕಮಿಟಿ ಇದೆ, ಲಾ ಸೆಕ್ರೆಟರಿರವರ ಅಧ್ಯಕ್ಷತೆಯಲ್ಲಿ ಕಮಿಟಿ ಇದೆ. ಇದಕ್ಕೆ ನಾವು ಸಾಕಷ್ಟು ಭದ್ರತೆ ಹಾಗೂ ನಿರಪರಾಧಿಗಳು ಹಣದ ಆಸೆಗಾಗಿ ತಮ್ಮ ದೇಹವನ್ನು ಮಾರಾಟ ಮಾಡಿಕೊಳ್ಳಬಾರದು ಎನ್ನುವುದಕ್ಕೋಸ್ಕರ ಕಟ್ಟೆಚ್ಚರದ ಕ್ರಮವನ್ನೂ ಕೂಡ ಕೈಗೊಂಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇಂತಹ ಕೇಸ್‌ನಲ್ಲಿ ಯಾರೂ ಕಂಪ್ಲೇಂಟ್ ಬಂದು ಕೊಡುವುದಿಲ್ಲ, ತಮ್ಮ ಒಂದು ತೊಂದರೆಯ ಜರೂರು ಇತ್ತು ಎಂದು ಅವರು ಕಿಡ್ನಿಯನ್ನು ಮಾರಾಟ ಮಾಡುತ್ತಾರೆ, ಸಂಬಂಧಪಟ್ಟವರಿಗೆ ಒಂದು ಲಕ್ಷ ರೂ.ಗಳು ಸಿಗಲಿ, ಆದರೆ ಎಜೆಂಟರು 40-50 ಸಾವಿರ ರೂ.ಗಳನ್ನು ತೆಗೆದುಕೊಂಡು ಹೋಗುತ್ತಿದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಅದಕ್ಕಾಗಿ ಒಂದು ಕಮಿಟಿಯನ್ನು ಮಾಡಲಾಗಿದೆ, ಅವರು ಒಂದು ಅರ್ಜಿಯನ್ನು ಕೊಡುತ್ತಾರೆ, ನಮ್ಮ ಎಸ್‌ಪಿ ಮಟ್ಟದಲ್ಲಿ ಅವರಿಂದ ಒಂದು ವರದಿಯನ್ನು ಕಳುಹಿಸಿಕೊಟ್ಟು ನಂತರ ಅವರಿಂದ ಒಂದು ವರದಿಯನ್ನು ತರಿಸಿಕೊಂಡು ಇದರಿಂದ ಪ್ರಾಮಾಣಿಕತೆ ಇದೆ ಎಂದು ಕಂಡ ಬಂದ ಮೇಲೆ ಮುಂದಿನ ತೀರ್ಮಾನವನ್ನು ಕೈಗೊಳ್ಳುತ್ತಾರೆ. ತೀರ್ಮಾನ ತಗೆದುಕೊಳ್ಳುವುದಕ್ಕೆ ಮುಂಚಿತವಾಗಿ ಪೊಲೀಸ್‌ರಿಂದ ಒಂದು ವಿವರವಾದ ವರದಿಯನ್ನು ತೆಗೆದುಕೊಳ್ಳುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಇಂತಹ ಎಜೆಂಟ್ ಗಿರಿಯನ್ನು ಯಾರು ಮಾಡುತ್ತಿದ್ದಾರೆ. ಅದನ್ನು ಕರೆಟ್ಯೆಲ್ ಮಾಡಿ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮೊನ್ನೆ ಒಂದು ಕೇಸ್‌ನಲ್ಲಿ ರಿಜಿಸ್ಟರ್ ಆಗಿದೆ ತನಿಖೆ ನಡೆಯುತ್ತಿದೆ, ನೀವು ಹೇಳಿದ ರೀತಿಯಲ್ಲಿ ಯಾರು ಇದರ ಹಿಂದುಗಡೆ ಇದ್ದಾರೆ ಅಂಥವರನ್ನು ಪತ್ತೆಹಚ್ಚತಕ್ಕಂಥ ಕೆಲಸವನ್ನು ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಎಸ್‌ಪಿ ಪಾಂಡೆಯವರ ಒಂದು ಸ್ಟೇಟ್‌ಮೆಂಟ್ ಇದೆ, "We have not arrested the big fish yet". ಎಂದು ಹೇಳಿದ್ದಾರೆ. ಇದರಲ್ಲಿ ಇನ್ನೂ ದೊಡ್ಡ ದೊಡ್ಡ ಮೀನುಗಳು ಇದ್ದಾವೆ. ಪತ್ರಿಕೆಯಲ್ಲಿ ಹೆಸರನ್ನೂ ಕೂಡ ಹಾಕಿದ್ದಾರೆ, ಅದನ್ನೂ ಕೂಡ ತಮ್ಮ ಗಮನಕ್ಕೆ ಕಳುಹಿಸಿಕೊಡುತ್ತೇನೆ. ಆರ್ಟಿಕಲ್ಸ್ ಎಲ್ಲಾ ವಿವರಗಳು ಇವೆ, ಇವುಗಳೆಲ್ಲಾ ಸರ್ಕಾರ ಗಮನಿಸಬೇಕಾಗುತ್ತದೆ, ಇದಕ್ಕೆ

ಬೇರೆ ಒಂದು ರೀತಿಯ ಒತ್ತಡವನ್ನು ತಂದು ನಿಲ್ಲಿಸಬೇಕಾಗುತ್ತದೆ. ಬಡವರು ಅನಾರೋಗ್ಯಕ್ಕೆ ಪೀಡಿತರಾಗಿ ಅನಾಹುತಕ್ಕೆ ಒಳಗಾಗುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಒಂದು ಕಾನೂನು ಇದೆ, ವಾಲೆಂಟರಿಯಾಗಿ ಕೊಡುವುದಕ್ಕೆ ಅವಕಾಶ ಇದೆ, ಕೊಡುವುದಕ್ಕೆ ಯಾವ್ಯಾವ ಮಟ್ಟದಲ್ಲಿ ತನಿಖೆ ಮಾಡಬೇಕು, ಯಾವ್ಯಾವ ಮಟ್ಟದಲ್ಲಿ ಪರಿಶೀಲನೆ ಮಾಡಬೇಕು ಎನ್ನುವುದರ ಬಗ್ಗೆ ಕಾನೂನು ಇದೆ. ಯಾರೂ ಕೊಯರ್‌ಷನ್‌ನಿಂದ, ಒತ್ತಡಕ್ಕೆ ಮಣಿಯಬಾರದು ಎನ್ನುವ ದೃಷ್ಟಿಯಿಂದ ಎಸ್‌ಪಿ ಮಟ್ಟದ ಅಧಿಕಾರಿಗಳಿಂದಲೇ ತನಿಖೆಯನ್ನು ಮಾಡಿ ವರದಿಯನ್ನು ತರಿಸಿಕೊಂಡು ಆಮೇಲೆ ಪರಿಶೀಲನೆಗೆ ಇಟ್ಟುಕೊಳ್ಳುವ ಒಂದು ವ್ಯವಸ್ಥೆಯನ್ನು ಮಾಡಿರುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಜಳಕಿ ಪ್ರಕರಣದಲ್ಲಿ ತಾವು ನ್ಯಾಯಾಂಗ ತನಿಖೆಗೆ ಆರ್ಡ್‌ರ್ ಮಾಡಿದಿರಿ, ಬೇರೆ ಬೇರೆ ಪ್ರಕರಣಗಳಲ್ಲಿ ಕೂಡ ಆರ್ಡರ್‌ಗಳು ಆಗಿವೆ, ಒಂದು ವಿಷಯವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ನ್ಯಾಯಾಂಗ ತನಿಖೆ ಮಾಡುವುದಕ್ಕೆ ಆಯೋಗಗಳ ನೇಮಕಾವಾಗುತ್ತದೆ. 1 ರಿಂದ 4 ವರ್ಷಗಳವರೆಗೆ ಎನ್‌ಕ್ವಯರಿ ಆಗುತ್ತವೆ, ಇನ್‌ವೆಸ್ಟಿಗೇಶನ್ ಆಗುತ್ತದೆ, ಸಾಕ್ಷಿ ಪುರಾವೆಗಳನ್ನು ತೆಗೆದುಕೊಳ್ಳುತ್ತಾರೆ, ಮುಂದೆ ಆ ರಿಪೋರ್ಟ್ಸ್ ಬಂದ ಮೇಲೆ ಸರ್ಕಾರದ ನೀತಿ ಏನು? ತಾವು ದಯವಿಟ್ಟು ಅದನ್ನು ಹೇಳಬೇಕು.

5.50 ಪಿಎಂ

ಮೊನ್ನೆ ಒಂದು ವಿಷಯವನ್ನು ಪ್ರಸ್ತಾಪ ಮಾಡಿದಾಗ ಮಾನ್ಯ ಗೃಹಮಂತ್ರಿಗಳು ಉತ್ತರ ಕೊಡಲಿಲ್ಲ. ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ಬಹಳಷ್ಟು ಇದಾವೆ. ಎನ್‌ಕ್ವಾಯರಿ ಕಮೀಷನ್‌ಗಳನ್ನು ಸಾಕಷ್ಟು ನೇಮಕ ಮಾಡಿದ್ದಾರೆ. ಅವುಗಳೆಲ್ಲವನ್ನೂ ನಾನು ಹೇಳುವುದಿಲ್ಲ. ಎರಡು ಉದಾಹರಣೆ ನಾನು ಕೊಡುತ್ತೇನೆ. ಭಟ್ಕಳದ ಬಗ್ಗೆ ಜಗನ್ನಾಥ್ ಕಮೀಷನ್ ರಿಪೋರ್ಟ್ ಕೊಟ್ಟಿದ್ದಾರೆ. ಅದು ಏನಾಯಿತು? ಆ ಕಮೀಷನ್‌ದವರು ರಿಪೋರ್ಟ್ ಯಾವಾಗ ಕೊಟ್ಟಿದ್ದಾರೆ? ರಿಪೋರ್ಟನ್ನು 1997ರಲ್ಲಿ ಕೊಟ್ಟಿದ್ದಾರೆ. ಜಗನ್ನಾಥ್‌ಶೆಟ್ಟಿಯವರು ವರದಿಯನ್ನು ಯಾವಾಗ ಕೊಟ್ಟಿದ್ದಾರೆ? ದಿನಾಂಕ 27-2-1997ರಲ್ಲಿ ಕೊಟ್ಟಿದ್ದಾರೆ. ಈ ಸದನದ ಸದಸ್ಯರಾದ ಡಾ॥ ಚಿತ್ತರಂಜನ್‌ರವರ ಕೊಲೆಯಾಯಿತು, ಆದಕ್ಕೊಂದು ಎನ್‌ಕ್ವಾಯರಿ ಕಮೀಷನ್ ಆಯಿತು. ಕೆ. ರಾಮಚಂದ್ರಯ್ಯನವರು ವರದಿಯನ್ನು ಯಾವಾಗ ಕೊಟ್ಟಿದ್ದಾರೆ? ದಿನಾಂಕ 31-3-98 ರಲ್ಲಿ ಕೊಟ್ಟಿದ್ದಾರೆ. 1997ರಲ್ಲಿ ಒಂದು ವರದಿ ಕೊಟ್ಟಿದ್ದಾರೆ, 1998ರಲ್ಲಿ ಒಂದು ಕೊಟ್ಟಿದ್ದಾರೆ. ಕಾನೂನು ಏನು ಹೇಳುತ್ತದೆ? ಯಾವುದೇ ಒಂದು ಎನ್‌ಕ್ವಾಯರಿ ಕಮೀಷನ್‌ದವರು ವರದಿಯನ್ನು ಸರ್ಕಾರಕ್ಕೆ ಸಬ್‌ಮಿಟ್ ಮಾಡಿದ ಮೇಲೆ ಸದನಕ್ಕೆ ಅದನ್ನು ಆರು ತಿಂಗಳೊಳಗೆ ಕೊಡಬೇಕು, ಅದನ್ನು ಸಾರ್ವಜನಿಕರಿಗೆ ಬಹಿರಂಗ ಮಾಡಬೇಕೆನ್ನುವ ಕಾನೂನು ಇದೆ. ಅದನ್ನು ಏಕೆ ಮಾಡಲಿಲ್ಲ? ಅಲ್ಲಿ ಮಹಾರಾಷ್ಟ್ರದಲ್ಲಿ ಶ್ರೀ ಕೃಷ್ಣ ಆಯೋಗದವರು ಬಾಂಬೆಯಲ್ಲಿ ಏನು ಗಲಭೆಯಾಯಿತು ಆ ಸಂದರ್ಭದಲ್ಲಿ ಅವರು ಕೊಟ್ಟಂತಹ ವರದಿಯನ್ನು ಸದನದಲ್ಲಿ ಮಂಡನೆ ಮಾಡಲಿಲ್ಲವೆಂದು ಕಾಂಗ್ರೆಸ್ ಪಕ್ಷದವರು ದೊಡ್ಡ ಗೊಂದಲ ಮಾಡಿದರು. ಗದ್ದಲ ಮಾಡಿದರು ಅಂದರೆ ಸದನ ನಡೆಸಲಿಕ್ಕೆ ಬಿಡಲಿಲ್ಲ.

ನಾವು ಈ ರೀತಿಯಲ್ಲಿ ಇಲ್ಲಿ ಮಾಡಿಲ್ಲ. ರಿಪೋರ್ಟ್ ಸಬ್‌ಮಿಟ್ ಮಾಡಿ ಆರು ತಿಂಗಳಾಯಿತು. ರಿಪೋರ್ಟ್‌ಗಳನ್ನು ಸಬ್‌ಮಿಟ್ ಮಾಡಿ ಎರಡು ಮೂರು ನಾಲ್ಕೈದು ವರ್ಷಗಳಾದರೂ ರಿಪೋರ್ಟ್ ಸದನದಲ್ಲಿ ಸಬ್‌ಮಿಟ್ ಮಾಡಲಿಲ್ಲವೆಂದರೆ ಇದರಲ್ಲಿ ಏನಿದೆ? ಹುಬ್ಬಳ್ಳಿ ಗಲಭೆ ಬಗ್ಗೆ ರಾಜಶೇಖರಮೂರ್ತಿಯವರು ವರದಿಯನ್ನು ಕೊಟ್ಟಿದ್ದಾರೆ. ಆ ವರದಿ ಇನ್ನೂ ಹೊರಗೆ ಬರಲಿಲ್ಲ. ಏನನ್ನು ಮುಚ್ಚಿಡಲಿಕ್ಕೆ ಯಾರನ್ನು ರಕ್ಷಣೆ ಮಾಡುವುದಕ್ಕೆ ಹೊರಟಿದ್ದೀರಿ? ಇದಕ್ಕೆ ಸ್ಪಷ್ಟವಾದ ಉತ್ತರವನ್ನು ಕೊಡಬೇಕಾಗುತ್ತದೆ. ಎನ್‌ಕ್ವಾಯರಿ ಕಮೀಷನ್ ವರದಿ ಏನಾಯಿತು? ಅದರಲ್ಲಿ ಏನಿದೆ ಅದನ್ನು ನೀವು ಯಾವಾಗ ಸಬ್‌ಮಿಟ್ ಮಾಡುತ್ತೀರಿ? ಅದರ ಬಗ್ಗೆ ಸರ್ಕಾರ ದಯವಿಟ್ಟು ಸ್ಪಷ್ಟೀಕರಣವನ್ನು ಮಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಣ್ಣ ನೀರಾವರಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರಿಗೆ ಒಂದು ಭರವಸೆಯನ್ನು ಕೊಡುತ್ತೇನೆ, ಝುಳಕಿ ಪ್ರಕರಣದ ಬಗ್ಗೆ ನಾವೇ ಎನ್‌ಕ್ವಾಯರಿ ಕಮೀಷನ್ ಕಾನ್ಸಿಟ್ಯೂಟ್ ಮಾಡಿದ್ದೇವೆ ಅಲ್ಲ ಆ ರಿಪೋರ್ಟ್ ಬಂದ ತಕ್ಷಣ ಸಬ್‌ಮಿಟ್ ಮಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಅದನ್ನು ಮಾಡಿ. ನಾನು ಹಿಂದಿನದನ್ನು ಹೇಳಲಿಕ್ಕೆ ಹತ್ತಿದ್ದೇನೆ. ಝುಳಕಿದ್ದು ತೆಗೆದುಕೊಂಡು ಏನು ಮಾಡುತ್ತೀರಿ, ಹಿಂದೆ ಆಗಿದ್ದು ಹೇಳಿ. ಅಂದರೆ ಅದನ್ನು ಡಿಸ್‌ಕ್ಲೋಸ್ ಮಾಡಲಿಕ್ಕೆ ಮನಸ್ಸು ಇಲ್ಲವೆಂದು ಅರ್ಥವಾಗುತ್ತದೆ. ಏಕೆ ಅನ್ನುವುದನ್ನು ಹೇಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ : ರಿಪೋರ್ಟ್ ಸಬ್‌ಮಿಟ್ ಮಾಡುವುದಕ್ಕೆ ಅವರ ಸರ್ಕಾರ ಆಗ ಇರುವುದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಅಧಿಕಾರದಲ್ಲಿದ್ದರೆ ನೀವಾದರೂ ಸಬ್‌ಮಿಟ್ ಮಾಡುತ್ತೀರೇನೋ ನೋಡೋಣ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ಆಗ ಇದ್ದರೆ ಖಂಡಿತಾ ಸಬ್‌ಮಿಟ್ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಬಹಳಷ್ಟು ಹಿಂದಿನ ಡಿಬೆಟ್ಸ್ ನೋಡಿದರೆ ಪ್ರತಿಪಕ್ಷದ ನಾಯಕರು ಅರ್ಧ ದಿವಸ ಒಂದು ದಿವಸ ಎರಡು ದಿವಸ ಮಾತನಾಡಿದ್ದಾರೆ. ಮಾನ್ಯ ಖರ್ಗೆಯವರು ಎಷ್ಟು ಸಮಯ ತೆಗೆದುಕೊಂಡಿದ್ದಾರೆಂದು ಡಿಬೆಟ್ಸ್ ನೋಡಿದರೆ ಎರಡೆರಡು ದಿವಸ ಚರ್ಚೆ ಮಾಡಿದ್ದಾರೆ. ನಾವು ಮಾತನಾಡುವುದೇ ಕಡಿಮೆ ಅಂದರೆ ಆದರೂ ನಮಗೆ ಸಮಸ್ಯೆಗಳಾಗುತ್ತವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆ ಜಾಗವನ್ನು ಮಾತನಾಡುವುದಕ್ಕೆ ಇಟ್ಟಿದ್ದೇವೆ. ತಾವು ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್ : ಮತ್ತೊಂದು ವೀರಪ್ಪನ್ ಪ್ರಕರಣ, ವೀರಪ್ಪನ್ ಪ್ರಕರಣ ಏನಾಯಿತು? ಏನಾಗುತ್ತದೆಂದರೆ ಯಾರೋ ವಿಐಪಿ, ವಿವಿಐಪಿಗಳು ಬಂಧನದಲ್ಲಿ ಸಿಕ್ಕಿಹಾಕಿ ಕೊಂಡರೆ ಆಗ ಎಲ್ಲಾ ಚಾಲೂ ಆಗುತ್ತದೆ. ಇಡೀ ಗೌರ್ನಮೆಂಟ್ ಮೆಷಿನರಿ ಎಚ್ಚರವಿರುತ್ತದೆ. ಮತ್ತೆ ನಾರ್ಮಲ್‌ನಲ್ಲಿರುತ್ತದೆ. ಈ ಸದನದಲ್ಲಿ ಅವೊತ್ತು ಹೇಳಿದ್ದೇನೆ. ಡಾ॥ ರಾಜಕುಮಾರ್‌ರವರ ಬಿಡುಗಡೆಯಾದ ಮೇಲೆ. ಇದನ್ನು ಮತ್ತೆ ಚುರುಕುಗೊಳಿಸಿ. ಇದನ್ನು ಮತ್ತೆ ಮುಂದುವರಿಸಬೇಕು. ಏನು ಕಾರ್ಯಕ್ರಮ ಬೇಕೋ ತಮಿಳುನಾಡು ಸರ್ಕಾರದ ಸಹಕಾರ ತೆಗೆದುಕೊಂಡು ತಕ್ಷಣ

ವೀರಪ್ಪನನ್ನು ಬಂಧನ ಮಾಡುವಂತಹದ್ದು ಬೇಗ ಕ್ರಮ ತೆಗೆದುಕೊಳ್ಳುವಂತಹದ್ದು ಆಗಬೇಕು. ನೀವು ಯಾವಾಗ ಲೂಸ್ ಬಿಡುತ್ತೀರಿ, ಯಾವುದೋ ಒಂದು ಸಂದರ್ಭದಲ್ಲಿ ಮತ್ತೆ ಅದೇ ರಿಪೀಟೇಷನ್. ಇದನ್ನು ಸೀರಿಯಸ್ಸಾಗಿ ತೆಗೆದುಕೊಳ್ಳದಿದ್ದರೆ ಮತ್ತೆ ಅನಾಹುತಗಳು ಆಗುತ್ತವೆ. ಕರ್ನಾಟಕ ರಾಜ್ಯಕ್ಕೆ ತೊಂದರೆಯಾಗುತ್ತದೆ. ಏಕೆಂದರೆ ವೀರಪ್ಪನ್ ತಮಿಳುನಾಡಿನವರನು. ಬಹುಶಃ ತಮಿಳುನಾಡಿಗೆ ಹೆಚ್ಚಿಗೆ ತ್ರಾಸ್ ಕೊಡಲಿಕ್ಕಿಲ್ಲ. ವೀರಪ್ಪನ್ ಇಲ್ಲಿ ಕರ್ನಾಟಕ ರಾಜ್ಯದವರಿಗೆ ತೊಂದರೆ ಕೊಡುವುದು ಇದೆ. ಸಾಕಷ್ಟು ಇಲ್ಲಿರುವವರೇ ಬಂಧನ ಆದದ್ದು. ನೀವು ಇದರ ಬಗ್ಗೆ ಏನಾದರೂ ಕ್ರಮ ತೆಗೆದುಕೊಂಡು ವೀರಪ್ಪನನ್ನು ನಾಶ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳದಿದ್ದರೆ ಬಹುಶಃ ನಾಳೆ ಮತ್ತೆ ದುರಂತ ಆಗಬಹುದು. ಅದರ ಬಗ್ಗೆ ಸರ್ಕಾರ ಎಚ್ಚರಿಕೆ ವಹಿಸಬೇಕಾಗುತ್ತದೆ. ಮತ್ತೊಂದು ವಿಚಾರ ಪತ್ರಿಕೆಗಳಲ್ಲಿ ಬಂದಿದೆ. ಡಾ॥ ರಾಜ್‌ಕುಮಾರ್‌ರವರ ಬಿಡುಗಡೆ ಸಂದರ್ಭದಲ್ಲಿ 40 ಕೋಟಿ ರೂಪಾಯಿ ಸಂದಾಯ ಮಾಡಿದ್ದಾರೆಂದು. ಯಾರು ಮಾಡಿದರು ಅದೇನು ಅದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ಏಕೆದರೆ ಇದು ವೇಗ್ ಸ್ಟೇಟ್‌ಮೆಂಟ್ ಅಲ್ಲ ಇದು. ಚೆನ್ನೈನಲ್ಲಿ ಕೋರ್ಟ್‌ನಲ್ಲಿ ಅಲ್ಲಿದ್ದಂತಹ ಅಡ್ವಕೇಟ್ ಓಪನ್ ಸ್ಟೇಟ್‌ಮೆಂಟ್‌ನಲ್ಲಿ ಹೇಳಿರುವಂತಹದ್ದು. 40 ಕೋಟಿ ರೂಪಾಯಿ ಸಂದಾಯ ಮಾಡಿದ್ದೇವೆಂದು. ಅಫಿಡವಿಟ್ ಕೂಡ ಕೊಟ್ಟಿದ್ದಾರೆ. ಹೀಗಾಗಿ ಅದನ್ನು ಯಾರು ಕೊಟ್ಟರು?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ವಿರೋಧಪಕ್ಷದ ನಾಯಕರು ತಮಗೆ ಎಲ್ಲಾ ಗೊತ್ತಿದೆ. ಬಜೆಟ್ ಮಂಡನೆಯನ್ನು ಇಲ್ಲಿ ಮಾಡುತ್ತೇವೆ. ಸ್ವಲ್ಪ ತಾವು ಯಾವ ಹೆಡ್‌ನಲ್ಲಿ ಕೊಟ್ಟಿದ್ದಾರೆಂದು ಹೇಳಿದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಕರ್ನಾಟಕ ಸರ್ಕಾರ ಕೊಟ್ಟಿದೆಯೆಂದು ಅವರು ಹೇಳುತ್ತಾರೆಂದು ನೀವು ಹೇಳುತ್ತೀರಿ. ದಯವಿಟ್ಟು ಯಾವ ಅಕೌಂಟ್, ಯಾವ ಹೆಡ್‌ನಲ್ಲಿ 40 ಕೋಟಿ ರೂ.ಯನ್ನು ನಾವು ಕೊಟ್ಟಿದ್ದೇವೆ ಎಂಬುದನ್ನು ಹೇಳಿದರೆ ನಾನು ನಿಮಗೆ ಶರಣಾಗುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಯಾವ ಹೆಡ್ ಎಂಬುದು ಗುರುತಾಗಲಿಲ್ಲ. ಅದಕ್ಕೆ ನಿಮ್ಮ ಕೇಳಲಿಕ್ಕೆ ಹತ್ತಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಫಾಲ್ಸ್ ಅಲಿಗೇಷನ್. ಪ್ರತಿಯೊಬ್ಬರು ಹೀಗೆ ಮಾಡುವುದು ಸರ್ಕಾರಕ್ಕೆ ಒಂದು ಕೆಟ್ಟ ಹೆಸರು ತರುವುದು ಹೇಳುವುದು. ತಮಗೂ ಕೂಡ ಗೊತ್ತಿದೆ. ಗೊತ್ತಿದ್ದೂ ಕೂಡ 40 ಕೋಟಿ ರೂ. ಕೊಟ್ಟರು, 50 ಕೋಟಿ ರೂ. ಕೊಟ್ಟರು 100 ಕೋಟಿ ಕೊಟ್ಟರು ಅಂದರೆ ಫೇಕ್ ಸ್ಟ್ಯಾಂಪ್‌ಪೇಪರ್ ಪ್ರಿಂಟ್ ಮಾಡಿ ಕೊಟ್ಟ ಹಾಗೆ ಕೊಡುವುದಕ್ಕೆ ಆಗುತ್ತದೆಯೆ?

ಶ್ರೀ ಜಗದೀಶ್ ಶೆಟ್ಟರ್ : ನೋಡಿ ಎಲ್ಲಿ ಯಾರು ಕೊಟ್ಟಿದ್ದಾರೆಂಬುದನ್ನು ರೆಸ್ಪಾನ್ಸಿಬಲ್ ಅಡ್ವಕೇಟ್ ಹೇಳುತ್ತಾನೆಂದರೆ ಅದು ನಿಮಗೆ ಬಿಟ್ಟಿದ್ದು. ನಾನು ಏನೂ ಹೇಳುವುದಿಲ್ಲ. ಯಾರು ಕೊಟ್ಟರೂ ಏನು ಅದರ ಬಗ್ಗೆ ಆತ್ಮವಿಮರ್ಶೆ ಅದೆಲ್ಲಾ ನಿಮಗೆ ಬಿಟ್ಟಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಗೊತ್ತು ಮಾಡಿಕೊಳ್ಳುವುದು ಉತ್ತಮ. ಏಕೆಂದರೆ ನಿಮ್ಮಲ್ಲಿ ಕೇಂದ್ರ ಸರ್ಕಾರ ಇದೆ, ನಮ್ಮಲ್ಲಿ ರಾಜ್ಯ ಸರ್ಕಾರ ಇದೆ. ನೀವು ಇನ್‌ಫರ್ಮೇಶನ್ ತಿಳಿದುಕೊಳ್ಳಿ. ಇದು ಏನಾಗುತ್ತದೆಂದರೆ, ಬೇರೆಯವರು ಮಾತನಾಡುವುದು ಬೇರೆ. ಸುಮ್ಮನೆ ಅನಾವಶ್ಯಕವಾಗಿ ಹೇಳುವುದು ಬೇಡ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇಲ್ಲಿ ನಾನು ಮತ್ತೊಂದು ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ರಾಜ್ಯದಲ್ಲಿ ಎಲ್ಲೋ ಒಂದು ಕಡೆ ಮೆರವಣಿಗೆಯಾಗಲಿ ಎಲ್ಲೋ ಒಂದು ಒಂದು ಪ್ರತಿಭಟನೆ ಮೆರವಣಿಗೆಯಾಗಲಿ ಅಲ್ಲಿದ್ದಂತಹ ರಾಜಕೀಯ ಕಾರ್ಯಕರ್ತರನ್ನು ಇವತ್ತು ಭಾರತೀಯ ಜನತಾಪಾರ್ಟಿ ಇರಬಹುದು, ಜನತಾದಳ ಕಾರ್ಯಕರ್ತರು ಇರಬಹುದು ಮತ್ತೆ ಬೇರೆ ಬೇರೆ ಸಂಘಟನೆಗಳು ಇರಬಹುದು. ಇವತ್ತು ವಿಶ್ವಹಿಂದೂ ಪರಿಷತ್ ಇರಬಹುದು ಬಜರಂಗದಳವಿರಬಹುದು, ಅವರು ಯಾವುದೇ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಂತಹ ಸಂದರ್ಭದಲ್ಲಿ ಪೊಲೀಸ್ ದೌರ್ಜನ್ಯದ ಮುಖಾಂತರ ಅವೊಂದು ಪ್ರತಿಭಟನೆಯನ್ನು ಹತ್ತಿಕ್ಕುವಂತಹ ಕೆಲಸ ನಡೆಯುತ್ತಿದೆ ರಾಜ್ಯದಲ್ಲಿ. ಇತ್ತೀಚೆಗೆ ರಾಜ್ಯದಲ್ಲಿ ಕೆಲವು ಕಡೆ ಬಂದ್‌ಗಳು ಗಲಭೆಗಳು ಆದವು. ಆ ಸಂದರ್ಭದಲ್ಲಿ ರಾಜಕೀಯ ಕಾರ್ಯಕರ್ತರು ಇನ್ನಿತರ ಸಂಘಗಳ ಸಂಘಟನೆಗಳ ಕಾರ್ಯಕರ್ತರನ್ನು ಬಂಧಿಸಿ ಸಾವಿರಾರು ಕೇಸುಗಳನ್ನು ದಾಖಲು ಮಾಡಿದ್ದಾರೆ. ಎಲ್ಲಿಯವರೆಗೆ ಅಂದರೆ ಇವತ್ತು ಒಂದು ಕೇಸು ಹಾಕುವುದು. ಎಕ್ಸ್-ವೈ-ಜಡ್ ತಿಮ್ಮಪ್ಪ ಸೋಮಪ್ಪ ಎಂದು ಹೆಸರು ಹಾಕಿ ಅಂಡ್ ಅದರ್ ಆದರ್ಸ್ ಹಂಡ್ರೆಡ್ ಅಂಡ್ ಅದರ್ ಫೈವ್ ಹಂಡ್ರೆಡ್ ಪರ್ಸನ್ಸ್ ಅನ್ನುವುದು. ಆಮೇಲೆ ಒಂದು ವರ್ಷ ಎರಡು ವರ್ಷಗಳಾದ ಮೇಲೆ ಮತ್ತೆ ಕೇಸು ಹಾಕುವುದೇ ಹಾಕುವುದು. ಯಾವುದೋ ಒಂದು ವಿಡಿಯೋ ತೆಗೆದುಕೊಳ್ಳುವುದು ಅದನ್ನು ನೋಡುವುದು ಕೇಸು ಹಾಕುವುದೇ ಹಾಕುವುದು. ಎಲ್ಲಿಯವರೆಗೆ ಅಂದರೆ, ಹೊಲೆ ಆಲೂರು ಘಟನೆ ನಿಮಗೆ ಹೇಳಿದರೆ, ಅಲ್ಲಿ ಸಣ್ಣಪುಟ್ಟ ಘಟನೆಗಳಾಗಿವೆ. ಮೂರು ಮೂರು ತಿಂಗಳು ಜೈಲಿನಲ್ಲಿದ್ದಾರೆ. ನಿಮಗೆ ಮಾನವೀಯತೆಯಿಲ್ಲ ಎನ್ನುವುದಕ್ಕೆ ಜೈಲಿನಲ್ಲಿರುವಂತಹ ವಿದ್ಯಾರ್ಥಿಗಳು ಅವರ ತಂದೆ ಸತ್ತರೆ ಅವರನ್ನು ಹೊರಗೆ ಬಿಡಲಿಲ್ಲ. ಅಷ್ಟೊಂದು ರೀತಿಯಲ್ಲಿ ಸರ್ಕಾರ ಅಬ್ಜೆಕ್ಷನ್ ಹಾಕಿ ಅವರಿಗೆ ಬೇಲ್ ಸಿಗಲಾರದಂತೆ ಮಾಡಿದೆ. ತಂದೆ ಸತ್ತಿದ್ದಾನೆ, ಮೂರು ಜನ ಮಕ್ಕಳು ಅವರೆಲ್ಲರೂ ಜೈಲಿನಲ್ಲಿದ್ದಾರೆ. ಎಕ್ಸಾಮ್ ಇದೆ, ತಂದೆ ಸತ್ತಿದ್ದಾನೆ ಬಿಟ್ಟಿಲ್ಲ. ಹಿಂದೆ ತುರ್ತು ಪರಿಸ್ಥಿತಿಯಲ್ಲಿ ಯಾರು ಜೈಲಿನಲ್ಲಿದ್ದಾರೆ ಅವರ ತಂದೆ ತಾಯಿಗಳು ಸತ್ತರೆ ಪೆರೋಲ್ ಮೇಲೆ ಬಿಡುತ್ತಿದ್ದರು. ಒಂದು ದಿವಸ ಹೋಗಿ ಬನ್ನಿಯೆಂದು ಬಿಡುತ್ತಿದ್ದರು. ಆದರೆ ಇವತ್ತು ಹೊಳೆ ಆಲೂರು ಘಟನೆ ನೋಡಿದರೆ ಕಣ್ಣೀರು ಹಾಕುವಂತಹದ್ದು. ಜೈಲಿನಲ್ಲಿದ್ದಾರೆ ಆ ಹುಡುಗರನ್ನು ಹೊರಗೆ ಬಿಡಲಿಕ್ಕೆ ಆಗಲಿಲ್ಲ. ಸರ್ಕಾರಕ್ಕೆ ಒಂದಿಷ್ಟು ಮಾನವೀಯತೆ ಇಲ್ಲವೆಂದು ನನಗನ್ನಿಸುತ್ತಿದೆ. ಆ ರೀತಿಯ ಒಂದು ದೌರ್ಜನ್ಯ ಇವತ್ತು ನಡೆಯುತ್ತಿದೆ. ಇವತ್ತು ಎಲ್ಲಾ ಕಾಮನ್, ಯಾರ್‍ಯಾರು ರಾಜಕೀಯ ಕಾರ್ಯಕರ್ತರು ಇದ್ದಾರೆ, ಇಂತಹ ಸಂಘಟನೆಗಳು ಇದಾವೆ ಅವರುಗಳ ಮೇಲೆ 307 ಕೇಸ್ ಕಾಮನ್. 307 ಅಟೆಮ್ ಟು ಮರ್ಡರ್. ಅದು ಕಾಮನ್, ಇನ್ನೊಂದು 426 ಡಕಾಯಿತಿ, ದರೋಡೆ ಕೇಸ್ ಹಾಕುವುದು. ಯಾರು ಪ್ರತಿಭಟನೆ ಕಾರ್ಯಕ್ರಮ ಹಾಕಿಕೊಂಡು ಮೆರವಣಿಗೆ ಮಾಡಿರುತ್ತಾರೆ ಅಂತಹವರ ಮೇಲೆ ಅಟೆಮ್ ಟು ಮರ್ಡರ್ 307 ಕೇಸ್, ಆಮೇಲೆ 426 ಕೇಸ್ ದರೋಡೆ, ಡಕಾಯಿತಿ ಮಾಡಲಿಕ್ಕೆ ಹೊರಟಿದ್ದರು ಅಂತ ಅಂದರೆ ಅವರಿಗೆ ಬೇಲ್ ಸಿಗಬಾರದು. ಮೂರ್‍ನಾಲ್ಕು ತಿಂಗಳು ಅವರು ಜೈಲಿನಲ್ಲಿ ಕೊಳೆಯಬೇಕು. ಅಂದರೆ ರಾಜಕೀಯ ಕಾರ್ಯಕರ್ತರನ್ನು ಹತ್ತಿಕ್ಕುವಂತಹ ಕೆಲಸ ರಾಜ್ಯದಲ್ಲಿ ನಡೆಯುತ್ತಿದೆ. ಇದು ಸರಿಯಿಲ್ಲವೆನ್ನುವ ಮಾತನ್ನು ಹೇಳುತ್ತಿದ್ದೇನೆ. ನಾಳೆ ನಿಮಗೆ ರಾಜ್ಯ ಸರ್ಕಾರಕ್ಕೆ ಇದು ಮುಳುವಾಗುತ್ತದೆ. ಈ ರೀತಿ ನೀವು ರಾಜಕೀಯ ಕಾರ್ಯಕರ್ತರ ಮೇಲೆ ಇನ್ನಿತರ ಸಂಘಟನೆಗಳ ಮೇಲೆ ಈ

ರೀತಿಯ ಪೊಲೀಸ್ ದೌರ್ಜನ್ಯವನ್ನು ಮಾಡಿದರೆ ಅದು ನಿಮ್ಮ ರಾಜ್ಯಸರ್ಕಾರಕ್ಕೆ ಮುಳುವಾಗುತ್ತದೆ. ತುರ್ತುಪರಿಸ್ಥಿತಿಯಲ್ಲಿ ಏನಾಯಿತು ಎನ್ನುವುದನ್ನು ತಾವು ತಿಳಿದುಕೊಳ್ಳಬೇಕು. ಇನ್ನು ಮುಂದಾದರೂ ಈ ರೀತಿಯ ಫಾಲ್ಸ್ ಕೇಸುಗಳನ್ನು ಹಾಕುವಂತಹದ್ದನ್ನು ಯಾವಾಗ ಬೇಕೋ ಆಗ ಅರೆಸ್ಟ್ ಮಾಡುವುದನ್ನು ಇದನ್ನು ನಿಲ್ಲಿಸಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇನೆ. ಇವತ್ತಿಗೂ ನಡೆಯುತ್ತಿದೆ. ಬೆಳಿಗ್ಗೆ ನನ್ನ ಕಡೆಗೆ ಒಬ್ಬರು ಬಂದಿದ್ದರು. ನೀರಾ ಚಳುವಳಿ ಮಾಡಿದಂತಹ ವ್ಯಕ್ತಿಗಳು, ನೀರಾ ಚಳುವಳಿಯಾಗಿ ಎಷ್ಟು ದಿವಸಗಳಾಯಿತು? ಮೂರ್‍ನಾಲ್ಕು ತಿಂಗಳ ಹಿಂದೆ ನೀರಾ ಚಳುವಳಿ ನಡೆಯಿತು. ನೀರಾ ಚಳುವಳಿಯಲ್ಲಿ ಸಾಕಷ್ಟು ಜನರನ್ನು ಅರೆಸ್ಟ್ ಮಾಡಿದ್ದೀರಿ. ಚನ್ನಪಟ್ಟಣದಿಂದ ಇವತ್ತು ಕೆಲವು ರೈತರು ಬಂದಿದ್ದರು. ಇವತ್ತಿಗೂ ಅವರ ಮನೆಗಳಿಗೆ ಪೊಲೀಸರು ಅಡ್ಡಾಡುತ್ತಿದ್ದಾರೆ. ನಿನ್ನದು ಕೇಸ್ ಇದೆ ನಿನ್ನ ಮೇಲೆ ಕೇಸು ಹಾಕುತ್ತಿದ್ದೇವೆಂದು ಪೊಲೀಸರು ಹೇಳುತ್ತಿದ್ದಾರೆ. ಎಫ್‌ಐಆರ್‌ನಲ್ಲಿ ಅವರ ಹೆಸರು ಇಲ್ಲ. ಆದರೆ ಆದರ್ಸ್ ತ್ರಿ ಹಂಡ್ರೆಡ್, ಫೋರ್ ಹಂಡ್ರೆಡ್ ಅದಕ್ಕೆ ಒಬ್ಬೊಬ್ಬರ ಹೆಸರು ಸೇರಿಸುವುದು ಅವರನ್ನು ಅರೆಸ್ಟ್ ಮಾಡಿಕೊಂಡು ಹೋಗುವುದು. ಇಲ್ಲವೆಂದರೆ ರೊಕ್ಕ ಕೊಡು ಎಂದು ಕೇಳುವುದು. ನಿನ್ನ ಮೇಲಿನ ಕೇಸ್ ತೆಗೆಯುತ್ತೇವೆ ಹಣ ಕೊಡು ಇದು ನಡೆಯುತ್ತಿದೆ. ಇದರ ಬಗ್ಗೆ ನೀವು ಗಂಭೀರವಾಗಿ ವಿಚಾರ ಮಾಡಬೇಕು. ಈಗ ಪೊಲೀಸ್ ಸ್ಟೇಷನ್ ಸಾರ್ವಜನಿಕರನ್ನು ದೌರ್ಜನ್ಯ ಮಾಡುವಂತಹ ಸ್ಟೇಷನ್‌ಗಳಾಗಿವೆ. ಸಾರ್ವಜನಿಕರಿಗೆ ಸಹಾಯ ಮಾಡುವುದು ಅಲ್ಲ. ಸಾರ್ವಜನಿಕರಿಗೆ ತೊಂದರೆಕೊಡುವಂತಹ ದೌರ್ಜನ್ಯ ಮಾಡುವಂತಹ ಪೊಲೀಸ್ ಸ್ಟೇಷನ್‌ಗಳಾಗಿವೆ. ಸಾರ್ವಜನಿಕರನ್ನು ವಿಶ್ವಾಸಗೊಳಿಸುವಂತಹ ಪೊಲೀಸ್ ಸ್ಟೇಷನ್‌ಗಳಾಗಬೇಕು. ಅದು ಆಗುತ್ತಿಲ್ಲ. ಇತ್ತೀಚಿಗೆ ಆಗುವಂತಹ ದೌರ್ಜನ್ಯವನ್ನು ಮುಂದುವರಿಸಿದರೆ ಬಹಳ ತೊಂದರೆಯಾಗುತ್ತದೆನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಿ ಕೊನೆಯದಾಗಿ ಇನ್ನೊಂದು ವಿಷಯ. ಇವತ್ತು ಈಗಾಗಲೇ ನಾನು ಹೇಳಿದ್ದೇನೆ. ರಾಜಕೀಯ ಕಾರ್ಯಕರ್ತರು ಮತ್ತು ಸಂಘಟನೆ ಕಾರ್ಯಕರ್ತರು ಸಾವಿರಾರು ಮಂದಿಯನ್ನು ಇವತ್ತು ಅರೆಸ್ಟ್ ಮಾಡಿದ್ದಾರೆ. ಸಣ್ಣಸಣ್ಣ ಸೆಕ್ಷನ್‌ಗಳ ಮೇಲೆ ಅವರನ್ನೆಲ್ಲಾ ಅರೆಸ್ಟ್ ಮಾಡಿದ್ದಾರೆ. ಅವನರನ್ನು ಎಫ್.ಐ.ಆರ್. ಫೈಲ್ ಮಾಡಿದ ಮಾರನೇ ದಿವಸವೇ ಕರೆದುಕೊಂಡು ಹೋಗುತ್ತಾರೆ. ಆದರೆ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಬಳ್ಳಾರಿಯಲ್ಲಿ ನಡೆದಂಥ ಒಂದು ಘಟನೆ. ನಿಮ್ಮ ಮಂತ್ರಿಮಂಡಲದ ಒಬ್ಬರು ಮಂತ್ರಿಗಳು, ರಾಜ್ಯ ಸಚಿವರು ಆ ಒಂದು ಘಟನೆಯಲ್ಲಿ ಇನ್ವಾಲ್ ಆಗಿದ್ದಾರೆ. ಅವರು ಅಪರಾಧಿ ಎಂದು ಎಫ್.ಐ.ಆರ್. ನಲ್ಲಿ ಆರೋಪಿ ನಂಬರ್ ಒಂದು ಇದ್ದಾರೆ. ಆದರೆ ಇವತ್ತಿನವರೆಗೂ ನೀವು ಅವರನ್ನು ಅರೆಸ್ಟ್ ಮಾಡಿಲ್ಲ. ಇವತ್ತಿನವರೆಗೂ ಅವರ ಮೇಲೆ ಯಾವುದೇ ಕಾನೂನು ಕ್ರಮ ತೆಗೆದುಕೊಂಡಿಲ್ಲ. ಇವತ್ತು ನೀರಾ ಚಳುವಳಿಗೆ ಹೋದಂಥ ಒಬ್ಬ ವ್ಯಕ್ತಿ ಅಥವಾ ಯಾವುದೋ ಒಬ್ಬ ವಿಶ್ವಹಿಂದೂ ಪರಿಷತ್ತಿನ ಪ್ರತಿಭಟನೆಕಾರ್ಯಕ್ರಮಕ್ಕೆ ಹೋದಂಥ ವ್ಯಕ್ತಿಯನ್ನು, ಒಂದು ವರ್ಷದ ನಂತರ ಅರೆಸ್ಟ್ ಮಾಡಿದ್ದೀರಿ. ಹೊಸ ಹೊಸದಾಗಿ ಹುಡುಗರನ್ನು ಆವತ್ತು ಅರೆಸ್ಟ್ ಮಾಡಿದ್ದಲ್ಲದೆ ಮತ್ತೆ ಅರೆಸ್ಟ್ ಮಾಡುತ್ತಿದ್ದೀರಿ. ಯಾರು ಅದಕ್ಕೆ ಸಂಬಂಧವಿಲ್ಲ, ಅಂಥವರನ್ನು ಆರಿಸಿ ಇವತ್ತು ಅರೆಸ್ಟ್ ಮಾಡುತ್ತಿದ್ದಾರೆ. ಆದರೆ ಇವತ್ತು ಅಟೆಂಪ್ಟ್ ಟು ಮರ್ಡರ್ ಕೇಸ್ ದಾಖಲಾದಂಥ, ಅಟ್ರಾಸಿಟಿ ಕೇಸ್ ದಾಖಲಾದಂಥ ಒಬ್ಬರು ಮಂತ್ರಿಮಂಡಲದ ಸದಸ್ಯರ ಮೇಲೆ ಕ್ರಮ ತೆಗೆದುಕೊಳ್ಳುವ ಗಟ್ಸ್ ನಿಮಗೆ ಇಲ್ಲವೆಂದರೆ, ಅವರನ್ನು ಸಂರಕ್ಷಣೆ ಮಾಡುವುದಕ್ಕೆ

ನೀವು ಹೊರಟಿದ್ದೀರಿ, ಅದಕ್ಕೇ ಅವರನ್ನು ಅರೆಸ್ಟ್ ಮಾಡಿಲ್ಲವೆಂದು ಹೇಳುಬೇಕಾಗುತ್ತದೆ. ಸಿ.ಓ.ಡಿ. ಎನ್‌ಕ್ವೈರಿ ಮಾಡಿಸುತ್ತಿದ್ದೇವೆ ಎಂದು ಹೇಳಿದಿರಿ. ಆ ಸಿ.ಒ.ಡಿ. ಎನ್‌ಕ್ವೈರಿ ಏನಾಯಿತು? ಹೀಗೆ ಒಬ್ಬನಿಗೆ ಒಂದು ನ್ಯಾಯ, ಮತ್ತೊಬ್ಬರಿಗೆ ಒಂದು ನ್ಯಾಯ ಇವತ್ತು ರಾಜ್ಯದಲ್ಲಿ ನಡೆಯುತ್ತಿದೆ. ಇದು ಇನ್ನು ನಡೆಯುವುದಿಲ್ಲ. ಶೋಷಣೆಗೆ, ದೌರ್ಜನ್ಯಕ್ಕೆ ಒಳಗಾದ ಜನ ಪ್ರತಿಭಟನೆಗೆ ನಿಂತರೆ ಬಯಶಃ ಯಾವ ಸರ್ಕಾರವೂ ನಿಲ್ಲುವುದಿಲ್ಲ. ಹೀಗೆ ಗುಂಡು ಹಾಕುವಂಥಾದ್ದು, ಮತ್ತೊಂದೆಡೆ ಈ ರೀತಿ ದೌರ್ಜನ್ಯ ಮಾಡುವಂಥಾದ್ದು ಏನಿದೆ, ಇದು ಒಂದು ಅರಾಜಕತೆಯತ್ತ ಈ ರಾಜ್ಯಸರ್ಕಾರ ಹೊರಟಿದೆ. ಅದಕ್ಕೆ ಈ ವ್ಯವಸ್ಥೆ ಸುಧಾರಣೆಯಾಗಬೇಕಾಗಿದೆ. ಇನ್ನೊಂದು ನಾನು ಇಲ್ಲಿ ಹೇಳುವಂಥಾದ್ದು ಭಾಲ್ಕಿಯಲ್ಲಿ ನಡೆದ ಘಟನೆ. ಅಲ್ಲಿಯೂ ಸಹಿತ ರಾಜಕೀಯ ಪ್ರಮುಖ ವ್ಯಕ್ತಿಗಳು ಆರೋಪಿಗಳು ಇದ್ದಾರೆ. ಅಲ್ಲಿ ಭಾರತೀಯ ಜನತಾಪಾರ್ಟಿಯ ಒಬ್ಬ ಕಾರ್ಯಕರ್ತನ ಮರ್ಡರ್ ಆಯಿತು. ಅದು ಓಪನ್‌ಮರ್ಡರ್ ಆಗಿದ್ದು, ಪೇಟೆಯಲ್ಲಿ ಮೆರವಣಿಗೆ ಹೋಗುತ್ತಿದ್ದ ಒಬ್ಬ ವ್ಯಕ್ತಿಯನ್ನು ಕರೆದುಕೊಂಡು ಬಂದು ಮನೆಯಲ್ಲಿ ಮರ್ಡರ್ ಮಾಡಿದ್ದಾರೆ. ಆ ಕೊಲೆಯನ್ನು ನೋಡಿದವರು ಇದ್ದಾರೆ, ಸಾಕ್ಷಿಗಳು ಇದ್ದಾರೆ. ಎಫ್.ಐ.ಆರ್. ನಲ್ಲಿ ಐದು ಜನ ಆರೋಪಿಗಳ ಹೆಸರುಗಳು ಬಂದಿವೆ. ಅದರಲ್ಲಿ ಒಬ್ಬ ಮಾಜಿ ಶಾಸಕರು ಇದ್ದಾರೆ; ಮಾಜಿ ಮಂತ್ರಿಯ ಮಕ್ಕಳಿದ್ದಾರೆ. ಆದರೆ ಇವತ್ತಿನವರೆಗೂ ನೀವು ಒಬ್ಬರನ್ನೂ ಅರೆಸ್ಟ್ ಮಾಡಿಲ್ಲ. ಅವರು ನಿರೀಕ್ಷಣಾ ಜಮೀನು ರಿಜೆಕ್ಟ್ ಆಯಿತು ಎಂದು ಹೈಕೋರ್ಟಿಗೆ ಹೋದರು. ಅಲ್ಲಿಂದ ನಿರೀಕ್ಷಣಾ ಜಾಮೀನು ತೆಗೆದುಕೊಂಡು ಹೋದರು. ಹೀಗೆ ಇದು ಪರಿಸ್ಥಿತಿ ಎಲ್ಲಿಯವರೆಗೆ ಬಂದಿದೆ ಎಂದರೆ ಜನರು ಮಾತನಾಡುತ್ತಿದ್ದಾರೆ. ಅವರನ್ನು ರಕ್ಷಣೆ ಮಾಡುತ್ತಿದ್ದಾರೆ, ಅವರ ಮೇಲೆ ಚಾರ್ಜಸ್ ಹಾಕುವುದಿಲ್ಲ, ಅವರನ್ನು ಆರೋಪಪಟ್ಟಿಯಿಂದ ತೆಗೆಯುತ್ತಾರೆ, ಸರ್ಕಾರದಲ್ಲಿ ಈ ವ್ಯವಸ್ಥೆ ನಡೆಯುತ್ತಿದೆ ಎನ್ನುವಂಥ ಆರೋಪ ಕೇಳಿಬರುತ್ತಿದೆ. ಹೀಗೆ ಜನರು ಮಾತನಾಡಿಕೊಳ್ಳುತ್ತಿದ್ದಾರೆ. ಅಂದರೆ ಇವತ್ತು ಆಡಳಿತದಲ್ಲಿ ಇರುವಂಥ ವ್ಯಕ್ತಿಗಳನ್ನು ರಕ್ಷಣೆ ಮಾಡುವಂಥಾದ್ದು ಅಥವಾ ರಾಜಕೀಯ ವಿರೋಧಿಗಳನ್ನು ದೌಜನ್ಯ ಮಾಡುವಂಥಾದ್ದು ರಾಜ್ಯ ಸರ್ಕಾರದಲ್ಲಿ ನಡೆಯುತ್ತಿದೆ. ಇದು ಬಹಳ ದಿವಸ ನಡೆಯುವುದಿಲ್ಲ. ಅದಕ್ಕಾಗಿ ಸರ್ಕಾರ ಏನಾದರೂ ತಿದ್ದಿಕೊಳ್ಳುವಂಥ ಕೆಲಸ ಮಾಡಬೇಕಾಗಿದೆ. ಈ ಭಾಲ್ಕಿ ಘಟನೆ ಬಗ್ಗೆ ಮತ್ತು ಬಳ್ಳಾರಿ ಘಟನೆ ಬಗ್ಗೆ ನಾವು ಭಾರತೀಯ ಜನತಾಪಾರ್ಟಿಯಿಂದ ಮುಖ್ಯಮಂತ್ರಿಗಳಲ್ಲಿಗೆ ನಾವು ನಿಯೋಗವನ್ನು ತೆಗೆದುಕೊಂಡು ಹೋಗಿದ್ದೆವು. ನಮ್ಮ ಅಧ್ಯಕ್ಷರು, ಎಲ್ಲರೂ ಅಲ್ಲಿ ಹೋಗಿದ್ದರು. ಮುಖ್ಯಮಂತ್ರಿಗಳು ನಮ್ಮ ಮುಂದೆಯೇ ಫೋನ್ ಮಾಡಿ ಇದರಲ್ಲಿ ಯಾರ್‍ಯಾರು ದೊಡ್ಡ ವ್ಯಕ್ತಿಗಳೇ ಇರಲಿ, ಅವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಹೇಳಿದರು. ಆದರೆ ಏನೂ ಆಗಲಿಲ್ಲ. ಹೀಗಾಗಿ ಈವತ್ತು ಈ ಗೃಹ ಇಲಾಖೆ ಬಗ್ಗೆ ಹೇಳಲಿಕ್ಕೆ ಹಲವಾರು ವಿಷಯಗಳು ಇವೆ. ಶಿಕ್ಷಣ ಇಲಾಖೆಯಲ್ಲೂ ಸಾಕಷ್ಟು ಮಾತನಾಡಬೇಕಾಗಿದೆ. ನೀರಾವರಿ ಬಗ್ಗೆ ಮಾತನಾಡ ಬೇಕಿತ್ತು. ಆದರೆ ಈಗಾಗಲೇ ವೇಳೆಯಾಗಿರುವುದರಿಂದ ನಾನು ಹೆಚ್ಚಿನ ವೇಳೆ ತೆಗೆದುಕೊಳ್ಳುವುದಿಲ್ಲ. ಆದಕ್ಕಾಗಿ ಈ ವಿಷಯಗಳ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಮಾಡಬೇಕಾಗುತ್ತದೆ. ಅದೂ ಅಲ್ಲದೆ ನಾನು ಮೊಟ್ಟಮೊದಲು ಪ್ರಸ್ತಾಪ ಮಾಡಿದ ಪಾಯಿಂಟ್ಸ್ ಏನಿವೆ, ಬೆಲೆ ಮತ್ತು ಬೆಳೆವಿಮೆ ಮತ್ತು ಇನ್ನಿತರ ವಿಷಯಗಳ ಬಗ್ಗೆ ಸರ್ಕಾರದ ಕಡೆಯಿಂದ ಸ್ಪಷ್ಟೀಕರಣ ಬರಬೇಕೆಂದು ಹೇಳಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ಈ ಸರ್ಕಾರ ಬಂದಮೇಲೆ ನೂರು ದಿವಸ ಅಸೆಂಬ್ಲಿ ನಡೆಸುತ್ತೇವೆ ಎಂದು ಭರವಸೆಯನ್ನು ಕೊಟ್ಟಿದ್ದರು. ದುರ್ದೈವದಿಂದ ಇದನ್ನು ತಲುಪಲಿಕ್ಕೆ ಆಗುತ್ತಿಲ್ಲ. ಈ ಸಾಲಿನಲ್ಲಿ ಸಹಿತ ನಾಲ್ಕು ತಿಂಗಳ ಲೇಖಾನುದಾನ ತೆಗೆದುಕೊಂಡಿದ್ದು, ನಮಗೆ ಯಾರಿಗೂ ಸಹಿತ ಈ ಚರ್ಚೆ ಬಗ್ಗೆ ತೃಪ್ತಿ ಇಲ್ಲ. ಬಹಳ ಪ್ರಮುಖವಾಗಿ ಗೃಹ ಇಲಾಖೆ, ಹಣಕಾಸು ಇಲಾಖೆ, ವಿದ್ಯುತ್ ಇಲಾಖೆ ಮತ್ತು ಶಿಕ್ಷಣ ಇಲಾಖೆ ಬಗ್ಗೆ ನಾವು ಏನು ಚರ್ಚೆ ಮಾಡಬೇಕಿತ್ತು ಆ ಚರ್ಚೆ ಆಗಿಲ್ಲ. ಅದಕ್ಕೆ ಕಾರಣಗಳನ್ನು ಈ ಸಂದರ್ಭದಲ್ಲಿ ಹುಡುಕಿಕೊಂಡು ಹೋದರೆ ಏನೂ ಪ್ರಯೋಜನ ಆಗುವುದಿಲ್ಲ. ಆದ್ದರಿಂದ ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಒಂದು ವಿನಂತಿಯನ್ನು ಮತ್ತು ತಮ್ಮಲ್ಲೂ ಸಹ ವಿಶೇಷವಾಗಿ ಮನವಿ ಮಾಡಿಕೊಳ್ಳುವುದು ಏನೆಂದರೆ ಇನ್ನೂ ಎಂಟು ದಿವಸ ವಿಧಾನಸಭೆ ನಡೆಯುತ್ತದೆ ಎಂದು ಈಗಾಗಲೇ ಘೋಷಣೆ ಮಾಡಿದ್ದೀರಿ. ಕೊನೆಯ ಪಕ್ಷ ಹಣಕಾಸು ಮತ್ತು ವಿದ್ಯುತ್ ಇಲಾಖೆ ಬಗ್ಗೆ ನಾವು ಸ್ವಲ್ಪ ವ್ಯಾಪಕವಾಗಿ ಚರ್ಚೆ ಮಾಡುವುದಕ್ಕೆ ಯಾವುದಾದರೂ ಒಂದು ರೂಪದಲ್ಲಿ ತಾವು ವಿಶೇಷವಾಗಿ ಅನುಮತಿ ಮಾಡಿಕೊಟ್ಟರೆ ನಾವು ನಮ್ಮ ಕೆಲವು ಅಭಿಪ್ರಾಯಗಳನ್ನು ಹೇಳಬಹುದು ಎನ್ನತಕ್ಕದ್ದು ನನ್ನ ಒಂದು ಅಭಿಪ್ರಾಯ. ಮಾನ್ಯ ಮುಖ್ಯಮಂತ್ರಿಗಳು ಇದನ್ನು ಪರಿಗಣಿಸಬೇಕು ಮತ್ತು ತಾವೂ ಕೂಡ ಇದಕ್ಕೆ ಮನ್ನಣೆ ಕೊಡಬೇಕೆಂಬುದು ನನ್ನ ವಿನಂತಿ. ವಿಶೇಷವಾಗಿ ಗೃಹ ಇಲಾಖೆ, ಹಣಕಾಸು ಇಲಾಖೆ ಮತ್ತು ವಿದ್ಯುತ್ ಇಲಾಖೆ ಬಗ್ಗೆ ಚರ್ಚೆ ಆಗಬೇಕು. ಮಾನ್ಯ ವಿರೋಧ ಪಕ್ಷದ ನಾಯಕರು ರಾಜ್ಯದ ಕಾನೂನು ಪರಿಸ್ಥಿತಿಯನ್ನು ಬಹಳ ಚೆನ್ನಾಗಿ ವಿಶ್ಲೇಷಣೆ ಮಾಡಿದ್ದಾರೆ. ರಾಜ್ಯದ ಹಣಕಾಸಿನ ಪರಿಸ್ಥಿತಿ ಏನಿದೆ ಎಂಬುದನ್ನು ಸ್ವತಃ ಮುಖ್ಯಮಂತ್ರಿಗಳೇ ಅನೇಕಡೆ ಹೇಳಿದ್ದಾರೆ. ಆದ್ದರಿಂದ ನಮ್ಮ ಕೆಲವು ಸಲಹೆಗಳನ್ನು, ಅಭಿಪ್ರಾಯಗಳನ್ನು ನಾವು ಕೊಡಬೇಕಾಗುತ್ತದೆ. ಈ ಎಂದು ದಿನಗಳ ಕಾಲದಲ್ಲಿ, ಯಾವುದಾದರೂ ಒಂದು ರೂಪದಲ್ಲಿ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಮೊದಲನೆಯದಾಗಿ ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ಎರಡನೇಯದಾಗಿ, ಅನೇಕ ಗೌರವಾನ್ವಿತ ಸದಸ್ಯರುಗಳು ಅನೇಕ ವಿಚಾರಗಳನ್ನು ಮಾತನಾಡಿದ್ದಾರೆ. ಈಗ ಬಹಳ ಪ್ರಮುಖವಾಗಿ ಯಾವ ಕಾರಣದಿಂದ ಎಂದು ಗೊತ್ತಿಲ್ಲ, ಹಣಕಾಸಿನ ವಿಚಾರ ಬಂದಾಗ ಮಾನ್ಯ ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಡುತ್ತೇನೆ ಎನ್ನತಕ್ಕಂಥ ಮಾತನ್ನು ಹೇಳಿದರು. ಈ 1200 ಕೋಟಿ ರೂಪಾಯಿ ಕೊಡಬೇಕಾದ ಗುತ್ತಿಗೆದಾರರು ಏನಿದ್ದಾರೆ, ಇವತ್ತು ಬೆಳಿಗ್ಗೆ ಸಹಿತ ಮಂಡ್ಯ ಜಿಲ್ಲೆಯಿಂದ ನನ್ನ ಮನೆಗೆ ಬಂದಿದ್ದರು. ನಾನು ಮಾನ್ಯ ಸಚಿವರೊಂದಿಗೆ ಸಹಿತ ದೂರವಾಣಿ ಮೂಲಕ ಮಾತನಾಡಿ ಈ ತರಹ ಗುತ್ತಿಗೆದಾರರು ಬಂದಿದ್ದಾರೆ, ತಾವು ಆತ್ಮಹತ್ಯೆ ಮಾಡಿಕೊಳ್ಳುವ ಸ್ಥಿತಿಗೆ ಹೋಗಿದ್ದೇವೆ. ಏನಾದರೂ ಮಾಡಿ ನಮಗೆ ಒಂದಿಷ್ಟು ದುಡ್ಡನ್ನು ರಿಲೀಸ್ ಮಾಡುವ ಹಾಗೆ ಮಾಡಿ ಎಂದು ಕೇಳುತ್ತಿದ್ದಾರೆ ಎಂದು ಹೇಳಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಸಲಹೆ ಕೊಡತಕ್ಕದ್ದು, ಒತ್ತಾಯ ಮಾಡತಕ್ಕದ್ದು ಏನೆಂದರೆ ನಿಜವಾಗಿ ರಾಜ್ಯ ಸರ್ಕಾರದ ಹಣಕಾಸಿನ ಪರಿಸ್ಥಿತಿ ಏನಿದೆ ಎಂದು ತಾವು ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಬೇರೆ ಯಾರನ್ನೂ ಹೀಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಜನತೆಯನ್ನು ವಿಶ್ವಾಸಕ್ಕೆ ತೆಗೆದುಕೊಂಡು ಇರುವ ಪರಿಸ್ಥಿತಿಯನ್ನು ಅವರಿಗೆ ಹೇಳಿ. ಈ 1200 ಕೋಟಿ ಬಗ್ಗೆ ಗುತ್ತಿಗೆದಾರರ ಬೇಡಿಕೆ ಏನಿದೆ, ಎರಡು-ಮೂರು ವರ್ಷಗಳಿಂದ ಇದು ಇದೆ.

ನಿಜ, ನಮ್ಮ ಸರ್ಕಾರ ಇದ್ದಾಗಲೂ 150-200 ಕೋಟಿ ರೂಪಾಯಿ ಬಾಕಿ ಇತ್ತು. ಅದು ಕ್ಯಾರೀಡ್ ಓವರ್ ಇರಬಹುದು. ತಾವು ಅದನ್ನೂ ಸಹಿತ ಜನರಿಗೆ ತಿಳಿಸಿ ಯಾವ್ಯಾವ ಹೆಡ್‌ನಲ್ಲಿ ಎಷ್ಟೆಷ್ಟು ಬಾಕಿ ಇದೆ, ಏಕೆ ಕೊಡುವುದಕ್ಕೆ ಆಗಿಲ್ಲ ಎನ್ನುವುದನ್ನು ತಿಳಿಸಿ, ಯಾವುದಾದರೂ ಒಂದು ಬ್ಯಾಂಕಿನಿಂದ ಅಥವಾ ಮತ್ತೊಂದರಿಂದ 1200 ಕೋಟಿ ರೂಪಾಯಿ ಸಾಲ ತೆಗೆದುಕೊಂಡು ಮೊಟ್ಟ ಮೊದಲನೆಯದಾಗಿ ಈ ಗುತ್ತಿಗೆದಾರರಿಗೆ ದುಡ್ಡು ಕೊಟ್ಟರೆ ಬಹುಶಃ ಕೆಲಸಗಳು ಪ್ರಾರಂಭ ಮಾಡುವುದಕ್ಕೆ ಅನುಕೂಲವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದನ್ನು ಮಾಡಬೇಕೆಂದು ನಾನು ಪ್ರಮುಖವಾಗಿ ಈ ಸಂದರ್ಭದಲ್ಲಿ ಒತ್ತಾಯ ಮಾಡುವುದಕ್ಕೆ ಬಯಸುತ್ತೇನೆ. ಇನ್ನು ಎರಡನೇಯದಾಗಿ, ಈಗ 1400 ಕೋಟಿ ರೂಪಾಯಿಗಳ ಸಕ್ಕರೆ ದಾಸ್ತಾನು ಇದೆ ಎನ್ನತಕ್ಕಂಥ ಮಾತನ್ನು ನಮ್ಮ ಉಪನಾಯಕರಾದ ಮಾನ್ಯ ಉಮೇಶ್‌ಕತ್ತಿ ಅವರು ಸಕ್ಕರೆ ಇಲಾಖೆ ಬೇಡಿಕೆ ಬಗ್ಗೆ ಮಾತನಾಡುತ್ತಿದ್ದಂಥ ಸಂದರ್ಭದಲ್ಲಿ ಹೇಳಿದ್ದಾರೆ. 1400 ಕೋಟಿ ರೂಪಾಯಿ ದಾಸ್ತಾನು ಇಟ್ಟುಕೊಂಡು ಮತ್ತೆ ಸಕ್ಕರೆ ಕಾರ್ಖಾನೆಗಳು ಕಬ್ಬನ್ನು ಅರೆಯಬೇಕು ಎಂದರೆ ರೈತರಿಗೆ ದುಡ್ಡು ಕೊಡುವುದಕ್ಕೆ ಆಗುತ್ತಿಲ್ಲ. ಅದಕ್ಕೆ ಮಾನ್ಯ ಮಹದೇವ್ ಅವರು ಇವತ್ತು ವಿಧಾನಪರಿಷತ್ತಿನಲ್ಲಿ ನೂರು ಕೋಟಿ ರೂಪಾಯಿಗಳ ಆವರ್ತನಿಧಿಯನ್ನು ಏನೋ ಪ್ರಾರಂಭ ಮಾಡುತ್ತೇವೆ ಎನ್ನತಕ್ಕಂಥ ಭರವಸೆಯನ್ನು ಕೊಟ್ಟಿದ್ದಾರೆ ಎಂದು ಸಂಜೆ ಪತ್ರಿಕೆಯಲ್ಲಿ ಓದಿದೆ. ಆದ್ದರಿಂದ ನಾನು ವಿನಂತಿ ಮಾಡಿಕೊಳ್ಳತಕ್ಕಂಥಾದ್ದು ಏನೆಂದರೆ, ಯಾವುದಾದರೂ ಒಂದು ರೀತಿಯಲ್ಲಿ...

ಶ್ರೀ ಎಂ. ಮಹದೇವ್ (ಪಶುಸಂಗೋಪನೆ ಮತ್ತು ಸಕ್ಕರೆ ಮಂತ್ರಿ) : ಒಂದು ನಿಮಿಷ. ನಾನು ಭರವಸೆ ಕೊಟ್ಟಿಲ್ಲ. ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಈ ವಿಚಾರದಲ್ಲಿ ಚರ್ಚೆಮಾಡಿ ಏನಾದರೂ ಒಂದು ಪ್ರಾಮಾಣಿಕ ಪ್ರಯತ್ನವನ್ನು ಸಂಕಷ್ಟದಲ್ಲಿರತಕ್ಕಂಥ ಈ ಪರಸ್ಥಿತಿಗೆ ಪರಿಹಾರ ಮಾಡುವುದಕ್ಕೆ ಮಾಡುತ್ತೇವೆ ಎಂದು ಹೇಳಿದೆ. ಅಷ್ಟೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಪತ್ರಿಕೆಯನ್ನು ಓದಿ ಅರ್ಥಮಾಡಿಕೊಳ್ಳದಿರುವಷ್ಟು ಬುದ್ಧಿ ಶಕ್ತಿ ನನಗೆ ಇಲ್ಲವೆಂದು ಕಾಣುತ್ತದೆ. ಆದ್ದರಿಂದ ಈ 1400 ಕೋಟಿ ರೂಪಾಯಿ ಸಕ್ಕರೆ ದಾಸ್ತಾನು ಹಾಗೆಯೇ ಉಳಿದರೆ ಇನ್ನು ಸಕ್ಕರೆ ಕಾರ್ಖಾನೆಗಳು ಏನು ಮಾಡುತ್ತವೆ? ರೈತರು ಕಬ್ಬುಬೆಳೆದಿದ್ದಾರೆ. ಬೇರೆ ರಾಜ್ಯಕ್ಕೆ ಕಳುಹಿಸುವುದಕ್ಕೆ ಆಗುವುದಿಲ್ಲ. ಮಹಾರಾಷ್ಟ್ರಕ್ಕೆ ಕಳುಹಿಸೋಣ ಎಂದರೆ ಅಲ್ಲಿಯೂ ಕೂಡ ಇದೇ ಪರಿಸ್ಥಿತಿ ಇದೆ. ನನಗೆ ತಿಳಿದ ಮಟ್ಟಿಗೆ ಅಲ್ಲಿ 35-40 ಸಕ್ಕರೆ ಕಾರ್ಖಾನೆಗಳನ್ನು ಮುಚ್ಚತಕ್ಕಂಥ ಸ್ಥಿತಿಗೆ ಹೋಗಿದ್ದಾರೆ. ಇದಕ್ಕೆ ಒಂದು ಪರಿಹಾರವನ್ನು ಸರ್ಕಾರ ಕೊಡಬೇಕು. ಕಬ್ಬುಬೆಳೆಗಾರರ ಹಿತದೃಷ್ಟಿಯಿಂದ ಈ ಒಂದು ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಇದು ಎರಡನೆಯದು. ಇನ್ನು, ಮೂರನೇಯದಾಗಿ ತಾವು ಪ್ರಧಾನಿಗಳ ಹತ್ತಿರ ನಿಯೋಗವನ್ನು ತೆಗೆದುಕೊಂಡು ಹೋದಿರಿ. ಸಾಮಾನ್ಯವಾಗಿ ಏನು ಮಾಡುತ್ತೇವೆ ಎಂದರೆ ನಿಯೋಗ ಹೋಗಿಬಂದಮೇಲೆ ಮುಖ್ಯಮಂತ್ರಿಗಳು ವಿಧಾನಸಭೆ ನಡೆಯುವ ಸಂದರ್ಭದಲ್ಲಿ ಒಂದು ಹೇಳಿಕೆಯನ್ನು ಮಾಡುತ್ತಾರೆ. ನಾವು ಹೀಗೆ ಹೋಗಿದ್ದೆವು, ಈ ರೀತಿ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇವೆ, ಅದಕ್ಕೆ ಅವರು ಈ ರೀತಿಯಾದ ಉತ್ತರ ಕೊಟ್ಟಿದ್ದಾರೆ ಎಂಬ ಮಾತನ್ನು ಹೇಳುತ್ತೇವೆ. ಆದರೆ ತಾವು ಯಾವು ಕಾರಣಕ್ಕೋಸ್ಕರವೋ ಮಾಡಿಲ್ಲ ಬಹುಶಃ ನಿನ್ನೆ ಕೃಷ್ಣಕಾಂತ್ ಅವರು ತೀರಿಕೊಂಡ ಕಾರಣ ಸಭೆ ನಡೆಯಿಲ್ಲ. ತಾವು ಹೇಳಿಕೆಯನ್ನು ಮಾಡುವುದಕ್ಕೆ ಆಗಿಲಿಲ್ಲ. ತಾವು ಹೇಳಿಕೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು. ಈಗ ನಾನು ಒತ್ತಾಯ ಮಾಡುತ್ತಿದ್ದೇನೆ. ಒಂದು ವಾರದ

ಹಿಂದೆ ನಾನು ಖಾಸಗಿಯಾಗಿ ಮಾನ್ಯ ಘೋರ್ಪಡೆಯವರನ್ನು ಸದನದಲ್ಲಿ ಭೇಟಿಮಾಡಿದ್ದೆವು ಮತ್ತು ಅವರು ತಮ್ಮ ಇಲಾಖೆಯ ಬೇಡಿಕೆಗಳ ಮೇಲೆ ನಡೆದ ಚರ್ಚೆಗೆ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಪ್ರತಿಯೊಂದು ಪಂಚಾಯತಿಯಲ್ಲೂ ಇಷ್ಟೊಂದು ಆಹಾರಧಾನ್ಯಗಳನ್ನು ನಾವು ಇಟ್ಟರೆ ಕೊನೆಪಕ್ಷ ಒಂದು ನೂರು ಜನಕ್ಕಾದರೂ ನಾವು ಕೆಲಸವನ್ನು, ಉದ್ಯೋಗವನ್ನು ಕೊಡಬಹುದು ಎನ್ನತಕ್ಕಂಥ ಮಾತನ್ನ ಹೇಳಿದ್ದಾರೆ. ಈಗ ನಾವು ಜುಲೈ ತಿಂಗಳ ಕೊನೆಯ ದಿವಸದಲ್ಲಿ ಇದ್ದೇವೆ. ಹೊಸ ತಿಂಗಳಿಗೆ ಒಂದು ದಿವಸ ಬಾಕಿ ಉಳಿದಿದೆ. ಮಳೆ ರಾಜ್ಯದಲ್ಲಿ ಎಲ್ಲೂ ಸಹಿತ ಇಲ್ಲ, ಮತ್ತು ರಾಷ್ಟ್ರದಲ್ಲಿ ಸಹಿತ ಈ ಪರಿಸ್ಥಿತಿ ಉದ್ಭವವಾಗಿದೆ. ಕೇಂದ್ರ ಸರ್ಕಾರದವರು ನಿಮಗೆ ಏನು ಸಹಾಯ ಕೊಡಲಿಕ್ಕೆ ಬಯಸಿದ್ದಾರೆ ಮತ್ತು ನೀವು ರಾಜ್ಯ ಸರ್ಕಾರದವರು ನಿಮ್ಮ ಆದ್ಯತಾಕ್ಷೇತ್ರ ಏನು ಎನ್ನತಕ್ಕದ್ದು ನಮಗೆ ಗೊತ್ತಾಗಬೇಕಾಗಿದೆ. ಬಹಳ ಪ್ರಾಮುಖ್ಯವಾಗಿ ಬರಗಾಲ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ತಾವು ಈ ಸಾಲ ವಸೂಲಾತಿ ಮಾಡತಕ್ಕದ್ದನ್ನು ತಕ್ಷಣವೇ ನಿಲ್ಲಿಸಬೇಕೆಂದು ಒತ್ತಾಯವನ್ನು ನಾನು ಮಾಡುತ್ತೇನೆ. ಸಾಲ ವಸೂಲಾತಿ ಮಾಡಿದರೆ ಅವರು ಎಲ್ಲಿಂದ ದುಡ್ಡು ತರುತ್ತಾರೆ? ಬಹಳ ಪ್ರಮುಖವಾದ ಒಂದು ಮಾತನ್ನು ನಾನು ಹೇಳುತ್ತೇನೆ. ಇವತ್ತು ಚನ್ನಪಟ್ಟಣದಿಂದ ಯಾರೋ ಒಬ್ಬ ಐ.ಪಿ.ಸೆಟ್ ಇಟ್ಟುಕೊಂಡವರು, ನೀವು ವಿಧಾನಸಭೆಯಲ್ಲಿ ಮಾತನಾಡಬೇಕು ಎಂದಾಗ ಏನಪ್ಪ ಎಂದು ಕೇಳಿದೆ. ಆದಕ್ಕೆ ಆತ ನೋಡಿ ಕೆ.ಇ.ಬಿ. ಯವರು ಎಂಟೂವರೆ ಸಾವಿರ ರೂಪಾಯಿ ಬಿಲ್ ಕಟ್ಟುವುದಕ್ಕೆ ಕಳುಹಿಸಿದ್ದಾರೆ. ಮಳೆ ಇಲ್ಲ, ಬೆಳೆ ಇಲ್ಲ. ಹೇಗೆ ಸಾರ್ ಕಟ್ಟಲಿ. ಎಂದು ಆತ ಹೇಳಿದ. ಇದು ನಿಜವಾದ ಪರಿಸ್ಥಿತಿ ಆದರಿಂದ ಸಾಲ ವಸೂಲಾತಿಯನ್ನು ತಾವು ನಿಲ್ಲಿಸಬೇಕು. ಕೇಂದ್ರ ಸರ್ಕಾರದಿಂದ ಸಹಕಾರವನ್ನು ಪಡೆದು ಈ ಬಡ್ಡಿ ಮನ್ನಾ ಮಾಡುವುದಕ್ಕೆ ನಿಮಗೆ ಬೇಕಾಗಿರುವುದು ಒಂದು 250 ಕೋಟಿ ರೂಪಾಯಿ. ಆದರಿಂದ ಬಹಳ ದೊಡ್ಡ ಹೊರೆಯಾಗುತ್ತದೆಂದು ನಾನು ತಿಳಿದುಕೊಳ್ಳುವುದಿಲ್ಲ. ಇವತ್ತಿಗೂ ಸಹ ನಾನು ಒತ್ತಾಯ ಮಾಡುತ್ತೇನೆ ಈ ಬಡ್ಡಿ ಮನ್ನಾ ತಾವು ಮಾಡಬೇಕು. ಆಮೇಲೆ ವಿದ್ಯುತ್ ಬಿಲ್ಲನ್ನು ಸಂಗ್ರಹ ಮಾಡತಕ್ಕಂಥಾದ್ದು ಏನು ಇದೆ, ಈ ವಿದ್ಯುತ್ ಬಿಲ್ಲನ್ನು ಸಂಗ್ರಹ ಮಾಡತಕ್ಕಂಥ ವಿಚಾರದಲ್ಲಿ ಇದು ಬಹಳ ಕಷ್ಟ ಇದೆ ರೈತರಿಗೆ. ತೆಂಗು ಬೆಳೆಗಾರರಿಗೆ ಕಷ್ಟ. ಕಬ್ಬು ಬೆಳೆದವರಿಗೆ ಫ್ಯಾಕ್ಟರಿಗಳವರು ದುಡ್ಡು ಕೊಡುತ್ತಿಲ್ಲ. ಇವತ್ತು ನಮ್ಮ ಕುಂತೂರು ಫ್ಯಾಕ್ಟರಿಯಲ್ಲಿ ಏನಾಗಿದೆ ಮತ್ತು ಹಿರಣ್ಯಕಶಪ್ ಫ್ಯಾಕ್ಟರಿಯಲ್ಲಿ ಏನಾಗಿದೆ, ಎಲ್ಲಾ ಸಕ್ಕರೆ ಕಾರ್ಖಾನೆಗಳಲ್ಲಿ ಬಾಕಿ ಇರುವಾಗ ಅವರು ಹೇಗೆ ವಿದ್ಯುತ್ ಬಿಲ್ಲನ್ನು ತಮಗೆ ಕಟ್ಟಲಿಕ್ಕೆ ಆಗುತ್ತದೆ? ಇದಕ್ಕೆ ಯಾವ ರೀತಿ ಪರಿಹಾರ ಕಂಡುಹಿಡಿಯಬೇಕೆನ್ನುವ ಬಗ್ಗೆ ತಾವು ವಿಚಾರ ಮಾಡಬೇಕು. ಇನ್ನು ಬರಗಾಲದ ಪರಿಸ್ಥಿತಿಯನ್ನು ಎದುರಿಸಲಿಕ್ಕೆ ಸಾಕಷ್ಟು ಸಿದ್ಧತೆಗಳನ್ನು ಸರ್ಕಾರ ಮಾಡಿಕೊಂಡಿಲ್ಲ ಎನ್ನತಕ್ಕಂಥಾದ್ದು ನನ್ನ ಒಂದು ಅಭಿಪ್ರಾಯ. ಬಹುಶಃ ನನಗನಿಸುತ್ತದೆ ನಾನು ಒಂದು ಬರಗಾಲವನ್ನು 1967-68ನೇ ಇಸವಿಯಲ್ಲಿ ನಾನು ವಿದ್ಯಾರ್ಥಿ ದಿಸೆಯಲ್ಲಿದ್ದಾಗ ಒಂದಿದ್ದು ಜ್ಞಾಪಕ ನನಗೆ. ಆಮೇಲೆ 1971-72ರಲ್ಲಿ ಇಂತಹ ಒಂದು ಪರಿಸ್ಥಿತಿ ಬಂದಿತ್ತು ಅಂತ ನನಗನ್ನಿಸುತ್ತದೆ. ಈಗ ಮಳೆ ಬಂದರೂ ಸಹ ನಿಮ್ಮ ಹತ್ತಿರ ಯಾರೋ ರೈತರು ಬರುವುದಿಲ್ಲ. ಅವರವರ ಪಾಡಿಗೆ ರೈತರು ತಮ್ಮ ತಮ್ಮ ಕೆಲಸ ಮಾಡಿಕೊಂಡು ಹೋಗುತ್ತಾರೆ. ನಾವು ಸಹ ನಮ್ಮ ನಮ್ಮ ಕ್ಷೇತ್ರಗಳಲ್ಲಿ ಇರುತ್ತೇವೆ. ಆದರೆ ಪರಿಸ್ಥಿತಿ ಬಹಳ ಗಂಭೀರವಾಗಿ ಕಾಣುತ್ತಿದೆ. ಇದರ ಬಗ್ಗೆ ಸಿದ್ಧತೆಯನ್ನು ಮಾಡಿಕೊಳ್ಳುವುದಕ್ಕೆ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯವನ್ನೂ ಸಹ ನಾನು ಈ ಸಂದರ್ಭದಲ್ಲಿ ಮಾಡಿ ವಿದ್ಯುತ್ ಬಿಲ್‌ಯನ್ನು ನೀವು ಈ

ಸಂದರ್ಭದಲ್ಲಿ ಹೆಚ್ಚು ಮಾಡಿದ್ದೀರಿ. ಅದು ಯಾವುದೇ ಕಾರಣಕ್ಕೂ ಸಹ ಆಗಬಾರದು. ವಿದ್ಯುತ್ ಬಿಲ್‌ಯನ್ನು ನೀವು ಹೆಚ್ಚು ಮಾಡಿರುವುದರಿಂದಾಗಿ ಬಹಳ ತೊಂದರೆಯಾಗುತ್ತದೆ. ಇದರಿಂದ ಈಗ ಹಿರಿಯೂರಿನ ಘಟನೆ ಏನು ಇದೆ ಕಾನೂನು ದೃಷ್ಟಿಯಿಂದ ಮಾನ್ಯ ಖರ್ಗೆಯವರು ಒಬ್ಬ ಸೀನಿಯರ್ ಮೆಂಬರ್ ಮತ್ತು ಬೇರೆ ಬೇರೆ ಕಾರಣಗಳಿಂದ ಮತ್ತು ಮಾನ್ಯ ಕೆ ಎಚ್ ರಂಗನಾಥ್ ಅವರ ಕ್ಷೇತ್ರ ಆದು ಅದರಿಂದಾಗಿ ನಾವು ಬೇರೆ ಬೇರೆ ಕನ್ಸಿಡರೇಷನ್‌ಗೋಸ್ಕರ ಸುಮ್ಮನೆ ಇರಬಹುದು. ಆದರೆ ಪರಿಸ್ಥಿತಿ ಏನು ಇದೆ. ಜನರು ಸರ್ಕಾರದ ವಿರುದ್ಧ ಆಕ್ರೋಶವನ್ನು ಒಂದಲ್ಲ ಒಂದು ರೀತಿಯಲ್ಲಿ ತೋರಿಸುತ್ತಿದ್ದಾರೆ ಎನ್ನುವುದನ್ನು ತಾವು ತಿಳಿದುಕೊಳ್ಳಬೇಕಾಗುತ್ತದೆ. ಈಗ ಎರಡು ವರ್ಷಗಳ ಹಿಂದೆ ಈ ರೀತಿ ಆಗುತ್ತದೆ ಅದಕ್ಕೆ ಪ್ರತಿಭಟನೆ ಮಾಡಬೇಕೆಂದು ಹೇಳಿದರೆ ಜನ ಬರುತ್ತಿರಲಿಲ್ಲ. ಇವತ್ತು ಸ್ವಯಂ ಜನ ಬರಬೇಕಾದರೆ ತಾವು ವಿಚಾರ ಮಾಡಬೇಕು. ಮುಖ್ಯಮಂತ್ರಿಗಳಾಗಿರತಕ್ಕಂಥವರು, ಜೊತೆಗೆ ತಾವು ಮೊನ್ನೆ ಮೈಸೂರಿನಲ್ಲಿ ಹೇಳಿದ್ದೀರಿ ಇನ್ನೂ ಏಳೂವರೆ ವರ್ಷಗಳ ಕಾಲ ಕಾಂಗ್ರೆಸ್ ಸರ್ಕಾರವನ್ನು ನಾನು ಕರ್ನಾಟಕದಲ್ಲಿ ಸ್ಥಾಪನೆ ಮಾಡುತ್ತೇನೆಂದು. ಹಾಗಿದ್ದಲ್ಲಿ ಜನರ ಆಕ್ರೋಶ ನಿಮ್ಮ ಸರ್ಕಾರದ ವಿರುದ್ಧ ಇದೆ ಎನ್ನುವುದನ್ನು ತಾವು ತಿಳಿದುಕೊಳ್ಳಬೇಕು. ಮಾನ್ಯ ಜಗದೀಶ್ ಶೆಟ್ಟರ್‌ರವರು ಬಹಳ ಚೆನ್ನಾಗಿ ಹೇಳಿದರು. ಸ್ವಾಮಿ, ನಾನು ತಮಗೆ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಶ್ರೀ ಡಿ ಮಂಜುನಾಥ್ ಅಂತಹವರು, ಉಪಾಧ್ಯಕ್ಷರಾಗಿದ್ದವರು ಹಿರಿಯ ಸದಸ್ಯರು ಮತ್ತು ಅವರು ಈ ಸದನದ ಮಂತ್ರಿಗಳಾಗಿದ್ದಂತಹವರು, ಅವರ ಮೇಲೆ ಅಟೆಂಪ್ಟ್‌ಟು ಮರ್ಡರ್ ಕೇಸ್ ಬುಕ್ ಮಾಡಿದ್ದಾರೆ. ಆಮೇಲೆ 426 ಕೇಸನ್ನು ಬುಕ್ ಮಾಡಿದ್ದಾರೆ. 307 ಕೇಸ್ ಬುಕ್ ಮಾಡಿದ್ದಾರೆ. ತಾವೇ ಯೋಚನೆ ಮಾಡಿ. ನಾನು ಒಬ್ಬ ಕನಕಪುರ ಕ್ಷೇತ್ರದ ಶಾಸಕನಾಗಿರುತ್ತೇನೆ. ಸ್ವಾಭಾವಿಕವಾಗಿ ಜನ ಬಂದು ನನಗೆ ಹೇಳುತ್ತಾರೆ. ದಿನಾ ಬಂದು ನನಗೆ ಹೇಳುತ್ತಾರೆ, ನಾನು ಸುಮ್ಮನೆ ಇರುವುದಕ್ಕೆ ಆಗುತ್ತದೆಯೇ ದಯವಿಟ್ಟು ತಾವು ಹೇಳಿ. ಅನೇಕ ಸಂದರ್ಭಗಳಲ್ಲಿ ನಮಗೆ ಗೊತ್ತಿಲ್ಲದಂತೆ ಕೆಲವು ಘಟನೆಗಳು ನಡೆಯುತ್ತವೆ. You are the Finance Minister. You are responsible for all the Treasury release. Rs. 230 crores is released from the Finance Dept. to the Treasury. ನಿಮ್ಮ ಗಮನಕ್ಕೆ ಬಂದಿಲ್ಲ ಎಂದು ತಾವು ಹೇಳುತ್ತೀರಿ. ಅದೇ ರೀತಿಯಲ್ಲಿ ಅನೇಕ ವಿಚಾರಗಳು ಅವರ ಗಮನಕ್ಕೆ ಬಂದಿರುವುದಿಲ್ಲ ಅವರ ಮೇಲೆ ನೀವು 307 ಕೇಸ್ ಬುಕ್ ಮಾಡುತ್ತೇವೆಂದು ಹೇಳಿದರೆ ಇದಕ್ಕೆ ಏನು ಹೇಳುವುದು? ಅವರನ್ನು ನಂಬರ್ ಒನ್ ಅಕ್ಯೂಸ್ಡ್ ಮಾಡಿದ್ದಾರೆ. ತಾವು ಆ ಫೈಲ್ ತರಿಸಿಕೊಂಡು ಓದಿ. ಆರ್.ಡಿ.ಪಿ.ಆರ್ ಡಿಪಾರ್ಟ್‌ಮೆಂಟ್‌ನವರು ಸಾಯಂಕಾಲ ಆ ಲ್ಯಾಂಡ್‌ನ್ನು ಅಲಾಟ್ ಮಾಡುತ್ತಾರೆ. ಮರುದಿನ ಪೋಲಿಸಿನವರು 300 ಜನ ಅವರಿಗೆ ರಕ್ಷಣೆ ಕೊಡುತ್ತಾರೆ. ಅವರು ಹೋಗಿ ರಸ್ತೆ ಮಾಡಿ ಬಿಲ್ಡಿಂಗ್ ಕಟ್ಟಲಿಕ್ಕೆ ಶುರು ಮಾಡುತ್ತಾರೆ. ಅಂತಹ ತರಾತುರಿಯಲ್ಲಿ ಮಾಡತಕ್ಕಂಥ ಕೆಲಸವಾದರೂ ಏನಿದೆ? ನೀವು ದಯವಿಟ್ಟು ಯೋಚನೆ ಮಾಡಿ. ಅದರಿಂದಾಗಿ ಕಾನೂನಿನ ಪರಿಸ್ಥಿತಿ ನಿಮ್ಮ ಕೈಯಲ್ಲಿ ಇವತ್ತು ಕೆಡುತ್ತಿದೆ. ಜನಗಳ ಆಕ್ರೋಶ ಇದೆ. ಬರಗಾಲ ಅದಕ್ಕೆ ಆ್ಯಡ್ ಆನ್ ಆಗಿದೆ. ವಿದ್ಯುತ್ ಅಭಾವ ಆ್ಯಡ್ ಆನ್ ಆಗಿದೆ. ಇದನ್ನೆಲ್ಲಾ ಗಮನದಲ್ಲಿಟ್ಟುಕೊಂಡು ತಾವು ಪರಿಹಾರವನ್ನು ಕೊಡಬೇಕೆನ್ನುವುದು ನನ್ನ ಒತ್ತಾಯ. ಮತ್ತೆ ಕೊನೆಯದಾಗಿ ಆ ವೀರೇಶ್ ವರದಿ ಬಗ್ಗೆ ತಾವು ಅದಕ್ಕೆ ಏನೇ ಕಾರಣಗಳನ್ನು ಕೊಡಬಹುದು. ಇದೇ ಸದನದಲ್ಲಿ ಚರ್ಚೆಯಾಗತಕ್ಕಂಥ ಸಂದರ್ಭದಲ್ಲಿ

ತಾವು ಹೇಳಿದ್ದು ಏನು? ನಾನು ತಮಗೆ ಸಲಹೆ ಮಾಡಿದ್ದು ತಹಸೀಲ್ದಾರರ ಕಡೆಯಿಂದ ಅವನು ರೈತ ಹೌದೋ ಅಥವಾ ಅಲ್ಲವೋ ಏತಕ್ಕೆ ಸತ್ತ ಎನ್ನುವುದನ್ನು ವಿಚಾರಣೆ ಮಾಡಿ ಎಂದು ಹೇಳಿದ ತಕ್ಷಣವೇ ತಾವು ಒಂದು ಲಕ್ಷ ರೂಪಾಯಿ ಪರಿಹಾರಧನ ಏನು ಹಾಲಿ ಕೊಡುತ್ತಿದ್ದೇವೆ ಅದನ್ನು ನಿಲ್ಲಿಸುತ್ತೇವೆ ವಿರೇಶ್ ವರದಿ ಬರಲಿ ಎಂದು ಹೇಳಿದಿರಿ. ಈಗ ವೀರೇಶ್ ವರದಿಯನ್ನು ಅವರು ಕೊಟ್ಟಿದ್ದಾರೆ. ಆ ವರದಿಯ ವೈಜ್ಞಾನಿಕತೆಯ ಬಗ್ಗೆ ನಾವು ಬೇರೊಂದು ಸದಂರ್ಭದಲ್ಲಿ ಸಮಯವಿದ್ದಾಗ ಚರ್ಚೆ ಮಾಡೋಣ. ಆದರೆ ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥ ರೈತ ಕುಟುಂಬಗಳಿಗೆ ಕೊಡುತ್ತಿದ್ದಂತಹ ಒಂದು ಲಕ್ಷ ರೂಪಾಯಿ ಏನು ಇದೆ ಅದನ್ನು ತಾವು ದಯವಿಟ್ಟು ಕೊಡಬೇಕೆಂದು ಹೇಳಿ ನಾನು ಈ ಸಂದರ್ಭದಲ್ಲಿ ಒತ್ತಾಯವನ್ನು ಮಾಡಿ 4-5 ವಿಚಾರಗಳನ್ನು ನಾನು ಏನು ಪ್ರಸ್ತಾಪ ಮಾಡಿದ್ದೇನೆ ಇದಕ್ಕೆ ಖಚಿತವಾಗಿ ಉತ್ತರವನ್ನು ಕೊಡುತ್ತೀರಿ ಎನ್ನುವ ವಿಶ್ವಾಸ ವ್ಯಕ್ತ ಮಾಡಿ ತಾವು ಸಮಯ ಕೊಟ್ಟಿದ್ದೀರಿ ತಮಗೆ ಧನ್ಯವಾದಗಳು.

ಶ್ರೀ ಎಸ್.ಎಂ ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಚರ್ಚೆಯಲ್ಲಿ ಭಾಗವಹಿಸಿದಂತಹ ವಿರೋಧಪಕ್ಷದ ನಾಯಕರಾದಂತಹ ಶ್ರೀ ಜಗದೀಶ್ ಶೆಟ್ಟರ್‌ರವರು ಜನತಾದಳ ನಾಯಕರಾದ ಶ್ರೀಮಾನ್ಯ ಸಿಂಧ್ಯಾರವರು ಜನತಾದಳದ ಇನ್ನೊಬ್ಬ ನಾಯಕರಾದ ಶ್ರೀ ಚನ್ನಿಗಪ್ಪನವರು, ಶ್ರೀ ಅರಗಜ್ಞಾನೇಂದ್ರರವರು, ಭೈರೇಗೌಡರು, ಬಚ್ಚೇಗೌಡರು, ಶ್ರೀ ಶಿವಾನಂದ ಪಾಟೀಲ್ ಅವರು, ಶ್ರೀ ಹನುಮೇಗೌಡರು, ಶ್ರೀ ರಾಮದಾಸ್ ರವರು, ಶ್ರೀ ಉಮೇಶ್ ಕತ್ತಿಯವರು, ಶ್ರೀ ಎಸ್ ಎಸ್ ಪಾಟೀಲ್ ಅವರು, ಶ್ರೀ ಸೋಮಶೇಖರ್ ರವರು ಮತ್ತು ಯಾರದಾದರೂ ಹೆಸರನ್ನು ಬಿಟ್ಟಿದ್ದರೆ ದಯವಿಟ್ಟು ಉದ್ದೇಶದಿಂದ ಬಿಟ್ಟಿದ್ದೇನೆಂದು ತಾವ್ಯಾರು ಭಾವಿಸಬಾರದು ಎಂದು ನಾನು ತಮ್ಮಲ್ಲಿ ಕೇಳಿಕೊಂಡು ಭೀಕರವಾದ ಬರಗಾಲವನ್ನು ಎದುರಿಸಬೇಕಾದಂತಹ ಪರಿಸ್ಥಿತಿ ಇದೆ. ನಮ್ಮ ರಾಜ್ಯದಲ್ಲಿಯೇ ಅಲ್ಲ, ದೇಶದ ಬಹುತೇಕ ಭಾಗಗಳಲ್ಲಿ ಇಂದು ಮಳೆಯ ವೈಫಲ್ಯತೆಯಿಂದ ಜನ ಕಂಗಾಲಾಗಿದ್ದಾರೆ. ಜನ ನಿರಾಶರಾಗಿದ್ದಾರೆ. ಇಂತಹ ಒಂದು ಅಸಹನೀಯವಾದಂತಹ ಪರಿಸ್ಥಿತಿಯನ್ನು ಎದುರಿಸಲು ಬೇಕಾಗಿರತಕ್ಕಂಥ ಎಲ್ಲಾ ಸಿದ್ದತೆಗಳನ್ನು ಮಾಡಿಕೊಳ್ಳಬೇಕು ಎನ್ನತಕ್ಕಂಥ ಸಲಹೆ ತಾವು ಏನು ಮಾಡಿದ್ದೀರಿ ಅದನ್ನು ನಾನು ಸ್ವಾಗತಿಸುತ್ತೇನೆ. ಆ ಒಂದು ಉದ್ದೇಶದ ಹಿನ್ನೆಲೆಯಲ್ಲಿಯೇ ನಾನು ಮಾನ್ಯ ವಿರೋಧಪಕ್ಷದ ನಾಯಕರು ಮತ್ತು ಈ ಸದನದ ಇತರೇ ಎಲ್ಲಾ ರಾಜಕೀಯ ಪಕ್ಷದ ಮುಖಂಡರುಗಳು ಮೊನ್ನೆ ದೆಹಲಿಗೆ ಹೋಗಿ ದೆಹಲಿಯಲ್ಲಿ ಮಾನ್ಯ ಪ್ರಧಾನ ಮಂತ್ರಿಗಳನ್ನು ಮತ್ತಿತರ ಸಚಿವರನ್ನು ಭೇಟಿ ಮಾಡಿ ಕರ್ನಾಟಕದ ಜನರಿಗೆ ಬಂದಿರತಕ್ಕಂಥ ಈ ಸಂಕಷ್ಟದ ತೀವ್ರ ನಿವೇದನೆಯನ್ನು ಅವರಿಗೆ ಮನವರಿಕೆ ಮಾಡಿ ಕೊಟ್ಟಿದ್ದೇವೆ. ನಾನು ಹೋಗುವ ಮುನ್ನ ಕೇಂದ್ರದ ವ್ಯವಸಾಯ ಸಚಿವರು ನಮ್ಮ ರಾಜ್ಯದ ಸಚಿವರುಗಳ ಮತ್ತು ಅಧಿಕಾರಿಗಳ ಸಭೆಯನ್ನು ಸೇರಿಸಿದ್ದರು. ಆ ಸಭೆಗೆ ಹೋದಂತಹ ಕಾಲದಲ್ಲಿಯೇ ಸುಮಾರು 83 ತಾಲ್ಲೂಕುಗಳಲ್ಲಿ ಈಗಾಗಲೇ ಬರ ಪ್ರಾರಂಭ ವಾಗಿದೆ ಅಲ್ಲಿ ನಾವು ಜನಗಳಿಗೆ ಕುಡಿಯುವ ನೀರು ಒದಗಿಸಬೇಕು, ದುಡಿಯುವ ಕೈಗಳಿಗೆ ಕೆಲಸವನ್ನು ಒದಗಿಸಬೇಕು ಇಂತಹ ವಿಚಾರಗಳನ್ನು ನಮೂದು ಮಾಡಿದಂತಹ ಒಂದು ವಿಜ್ಞಾಪನಾ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ತಲುಪಿಸಿದ್ದೇವೆ. ಪ್ರಧಾನ ಮಂತ್ರಿಗಳ ಅವಗಾಹನೆಗೆ ಈ ಪರಿಸ್ಥಿತಿಯನ್ನು ನಾವು ನೀವು ವಿವರಣೆ ಮಾಡಿ ಹೇಳಿದ್ದೇವೆ. ತತಕ್ಷಣಕ್ಕೆ ನಮಗೆ ಬೇಕಾದಂತಹದ್ದು ಸುಮಾರು 8 ಲಕ್ಷ ಟನ್ ಆಹಾರ ಪದಾರ್ಥಗಳು ಮತ್ತು ಪ್ರಾರಂಭಕ್ಕೆ 563 ಕೋಟಿ ರೂಪಾಯಿಗಳ ಹಣಕಾಸಿನ ಒತ್ತಾಸೆಯನ್ನು

ರಾಜ್ಯ ಸರ್ಕಾರಕ್ಕೆ ಕೊಡಬೇಕು ಎನ್ನತಕ್ಕಂಥ ಒಂದು ಬಿನ್ನಹವನ್ನು ಅವರಿಗೆ ಮಾಡಿಕೊಂಡಿದ್ದೇವೆ. 1968ನೇ ಇಸವಿಯಲ್ಲಿ ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಬರ ಇತ್ತು. ಆಗ ನಾನು ಸಂಸತ್‌ಗೆ ಹೋಗಿದ್ದೆ. ಆ ಬರದ ತೀವ್ರತೆಯನ್ನು ನಾನು ಜನ ಪ್ರತಿನಿಧಿಯಾಗಿ ನೋಡಿದಂತಹ ಒಂದು ಘಟನೆ ಇನ್ನೊಂದು 1972-73ನೇ ಇಸವಿಯಲ್ಲಿ ಭೀಕರವಾದ ಬರಗಾಲ ಉತ್ತರದ ಜಿಲ್ಲೆಗಳಲ್ಲಿ ಬಂತು.

6.20 ಪಿಎಂ

ಆಗಲೂ ಕೂಡ ಆ ಬರ ಪರಿಹಾರ ಕೆಲಸಕಾರ್ಯಗಳನ್ನು ನಾವು ಕೈಗೆತ್ತಿಕೊಳ್ಳತಕ್ಕಂಥ, ಕಾರ್ಯಮಗ್ನವಾಗಿದ್ದಂಥ ಸರ್ಕಾರದ ಒಂದು ಭಾಗವಾಗಿದ್ದೆವು ನಾವು. ಆ ಹಿನ್ನೆಲೆ, ಆ ಅನುಭವ ಮತ್ತು ತಾವು ಈವತ್ತು ಕೊಟ್ಟಿರತಕ್ಕಂಥ ಹತ್ತು ಹಲವಾರು ಸೂಚನೆಗಳು ಇವುಗಳೆಲ್ಲವೂ ಕೂಡ ಈ ಸರ್ಕಾರಕ್ಕೆ ಒಂದು ರೀತಿ ಮಾರ್ಗದರ್ಶನ ಎಂದು ನಾನು ಭಾವನೆ ಮಾಡುತ್ತೇನೆ. ಎಲ್ಲವೂ ನಮಗೆ ತಿಳಿದಿದೆ ಎನ್ನತಕ್ಕಂಥ ಮನೋಭಾವನೆ ಅಲ್ಲ ನಮ್ಮದು. ನಮಗೆಲ್ಲ ಅರ್ಥವಾಗುವುದಿಲ್ಲ, ಅಲ್ಲಿ ನಿಮ್ಮಂಥವರು, ತಿಳಿದಂಥವರು, ಅನುಭವಿಗಳು ಅವರನ್ನು ಕೇಳುತ್ತೇವೆ. ಅವರ ಸಲಹೆಗಳನ್ನು ಸ್ವೀಕರಿಸುತ್ತೇವೆ. ಆ ಸಲಹೆಗಳನ್ನು ಎಷ್ಟರಮಟ್ಟಿಗೆ ನಾವು ಇವತ್ತು ನಮ್ಮ ಚೌಕಟ್ಟು ಏನಿದೆ, ಆ ಹಣಕಾಸಿನ ಚೌಕಟ್ಟಿನಲ್ಲಿ ಹೇಗೆ ಆ ಸಮಸ್ಯೆಗಳನ್ನು ನಾವು ಗಂಭೀರವಾಗಿ ಎದುರಿಸಬೇಕು ಎನ್ನವುದರ ಬಗ್ಗೆ ನಾವು ಮತ್ತು ವಿರೋಧ ಪಕ್ಷದ ಸದಸ್ಯರುಗಳು ಮತ್ತು ಇಲ್ಲಿ ಕುಳಿತಿರತಕ್ಕಂಥ ಈ ಸದಸ್ಯರುಗಳು, ನಾವೆಲ್ಲಾ ಒಟ್ಟಾರೆ ಕಾರ್ಯೋನ್ಮುಖರಾಗತಕ್ಕಂಥಾದ್ದು ಬಹಳ ಅವಶ್ಯಕ. ಒಂದು ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರಾದಂಥ ಜಗದೀಶ್ ಶೆಟ್ಟರ್‌ರವರು ಪ್ರಸ್ತಾಪ ಮಾಡಿದರು. ಅದು ರೇಷ್ಮೆ ಬೆಳೆಗಾರರ ವಿಚಾರದಲ್ಲಿ. ಮಾನ್ಯ ಪ್ರಧಾನ ಮಂತ್ರಿಗಳಿಗೆ ನಾವು ನಿವೇದನೆಯನ್ನು ಮಾಡಿಕೊಳ್ಳುವುದರ ಜೊತೆಗೆ ಈ ಟೆಕ್ಸ್‌ಟೈಲ್ ವಿಭಾಗವನ್ನು ಕೇಂದ್ರ ಸರ್ಕಾರದ ಪರವಾಗಿ ನೋಡಿಕೊಳ್ಳುತ್ತಿರತಕ್ಕಂಥ ಮಾನ್ಯ ಕಾನ್ಸಿರಾಮ್ ರಾಣಾ ಅವರನ್ನೂ ಕೂಡ ಭೇಟಿ ಮಾಡಿ, ಆ ಭೇಟಿಯ ಫಲಶೃತಿಯಾಗಿ ನಮ್ಮ ಸರ್ಕಾರದ ಅಧಿಕಾರಿಗಳು ಮತ್ತು ಕೇಂದ್ರ ಸರ್ಕಾರದ ಅಧಿಕಾರಿಗಳು ಇಬ್ಬರೂ ಸೇರಿ ಒಂದು ಸ್ಕೀಮನ್ನು ಜಾರಿಗೆ ತರುವುದಕ್ಕೆ ಪ್ರಯತ್ನಗಳನ್ನು ನಿನ್ನೆ ಮತ್ತು ಇವತ್ತು ಅಲ್ಲಿ ಮುಂದುವರಿಸಿಕೊಂಡು ಬರುತ್ತಿದ್ದಾರೆ. ಒಟ್ಟಾರೆ ನಮ್ಮ ಉದ್ದೇಶಗಳು, ನಿಮ್ಮ ಉದ್ದೇಶಗಳು ಎರಡೂ ಕೂಡ ಎಲ್ಲಾದರೂ ಒಂದು ಕಡೆ ಸಂಗಮ ಆಗಲೇಬೇಕಾಗುತ್ತದೆ. ಆಗಲೇ ಜನ ಕಲ್ಯಾಣ ಸಾಧ್ಯ. ದುರಾದೃಷ್ಟ ಏನೆಂದರೆ ಈ ಎಲ್ಲಾ ಬೆಳೆಗಳೂ ಅಂದರೆ ರೇಷ್ಮೆ, ಅಡಿಕೆ, ಕಾಫಿ ಮತ್ತು ತಂಬಾಕು ಕರ್ನಾಟಕ ರಾಜ್ಯದಲ್ಲಿ ಶೇಕಡ 70-80 ಭಾಗದಷ್ಟು ಬೆಳೆಯತಕ್ಕಂಥ ವಾಣಿಜ್ಯ ಬೆಳೆಗಳು. ನಮಗೇ ಇಂತಹ ತೊಂದರೆ ಏಕೆ ಬರಬೇಕು ಎಂದು ನಮ್ಮ ಮೇಲೆ ನಮಗೇ ಮರುಕ ಉಂಟಾಗುವುದರ ಜೊತೆಗೆ ಈ ಸಮಸ್ಯೆಗಳ ವಿಚಾರದಲ್ಲಿ ಕೇಂದ್ರದ ಹಣಕಾಸಿನ ಸಚಿವರು ಒಂದು ಮಾತು ಹೇಳಿದರು. ಕಾಫಿ ಬೆಳೆಗಾರರಿಗೆ ಬಂದಿರತಕ್ಕ ತೊಂದರೆ. ಆಗ ಅವರು ಹೇಳಿದರು. We cannot wish away Vietnam. Vietnam has come to stay. Vietnam Coffee is going to be in the market. We will have to learn to compete with the vietnam Coffee. ಎಂಬುದಾಗಿ ನಮಗೆ ಬುದ್ದಿವಾದ ಹೇಳಿದರು. ಅಂದರೆ ಈ ವಾಣಿಜ್ಯ ಬೆಳೆಗಳಿಗಾಗಲೀ ಅಥವಾ ಮತ್ತೊಂದಕ್ಕೇ ಆಗಲೀ ಯಾವಾಗಲಾದರೂ ತೊಂದರೆ

ಬಂದಾಗ ಅಥವಾ ಅಡಿಕೆ ಬೆಲೆ ಕುಸಿಯಬೇಕಾದರೆ, ಒಂದು ತಿಂಗಳ ಕೆಳಗೆ 15-16 ಸಾವಿರ ಇದ್ದಂಥ ಬೆಲೆ ಕುಸಿದಿದೆ. ನಾನು ಯಾರನ್ನೋ ಕೇಳಿದಾಗ ಹದಿನಾರೂವರೆ ಸಾವಿರ ರೂ. ಎಂದು ಹೇಳಿದರು. ಇದ್ದಕ್ಕಿದ್ದ ಹಾಗೆ ಮಾರ್ಕೆಟ್‌ನಲ್ಲಿ ರೇಟ್ ಕುಸಿಯಿತು. ನಮ್ಮ ವಡ್ನಾಳ್ ರಾಜಣ್ಣನವರು ಇದನ್ನು ನನ್ನ ಗಮನಕ್ಕೆ ತಂದರು. ಮತ್ತೆ ಶಾಂತನಗೌಡರು ಇವರುಗಳೆಲ್ಲಾ ಅಡಿಕೆ ಬೆಳೆ ಬೆಳೆಯತಕ್ಕ ಪ್ರದೇಶದಿಂದ ಬಂದವರು. ಅವರು ಹೇಳಿದರು. ಮಾರ್ಕೆಟ್ಟೇ ಕುಸಿದು ಹೋಗಿದೆ ಯಾರೂ ನಮ್ಮ ಅಡಿಕೆಯನ್ನು ಕೇಳುವವರೇ ದಿಕ್ಕಿಲ್ಲವೆಂದರು. ಅದಕ್ಕೆ ಸುಪ್ರೀಂ ಕೋರ್ಟ್ ಕಾರಣವೋ, ಹೈಕೋರ್ಟ್ ಕಾರಣವೋ, ಮಹಾರಾಷ್ಟ್ರ ಸರ್ಕಾರ ಕಾರಣವೋ, ಕೇರಳ ಸರ್ಕಾರ ಕಾರಣವೋ ನಮಗೆ ಗೊತ್ತಿಲ್ಲ. ಆದರೆ, ಒಟ್ಟಾರೆ ಪರಿಸ್ಥಿತಿ ಏನೆಂದರೆ, ಇವತ್ತು ಅಡಿಕೆ ಸಂಕಷ್ಟದಲ್ಲಿದೆ, ಇವತ್ತು ರೇಷ್ಮೆ ಸಂಕಷ್ಟದಲ್ಲಿದೆ. ಇವತ್ತು ಕಾಫಿ ಸಂಕಷ್ಟದಲ್ಲಿದೆ, ಇವತ್ತು ತಂಬಾಕು ಸಂ ಕಷ್ಟದಲ್ಲಿದೆ. ಕಬ್ಬು ಸಂಕಷ್ಟದಲ್ಲಿದೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಸಿಂಧ್ಯರವರು ಮತ್ತು ನನ್ನ ಆತ್ಮೀಯ ಸ್ನೇಹಿತರಾದಂಥ ಉಮೇಶ್ ಕತ್ತಿಯವರು ಹೇಳಿದರು. ಅವರಲ್ಲಿ ನಮ್ಮ ಸಂಬಂಧ ಕಬ್ಬಿನಷ್ಟೇ ಸಿಹಿಯಾಗಿದೆ. ಶ್ರೀ ಮಾನ್ಯ ಉಮೇಶ್ ಕತ್ತಿಯವರು ಇವರು ಕಬ್ಬಿನ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸಿಂಧ್ಯರವರಿಗೆ ಆ ಅಳಕು ಬೇಕಾಗಿಲ್ಲ. ತಾವು ಹೇಳಿರುವುದರಲ್ಲಿ ಬಹಳ ಸತ್ಯ ಇದೆ. ಏಕೆಂದರೆ, ಸುಮಾರು 1600 ಕೋಟಿ ರೂಪಾಯಿಗಳ ದಾಸ್ತಾನು ನಮ್ಮ ಸಕ್ಕರೆ ಕಾರ್ಖಾನೆಗಳಲ್ಲಿ ಇದೆ. ಇದಕ್ಕೆ ಪರಿಹಾರ ಏನು? ನಮ್ಮ ಸಕ್ಕರೆ ಸಚಿವರು ಮಹದೇವ್ ಅವರನ್ನು ಕರೆಸಿ ಕೇಳಿದೆವು. ಇದನ್ನು ನಾವು ಮಾರಲಿಕ್ಕೆ ಸಾಧ್ಯವಿಲ್ಲವೇ ಎಂದು. ಇದು ಗೊತ್ತಿತ್ತು, ಅವರು ಮೊದಲೇ ನನಗೆ ಹೇಳಿದ್ದರು. ಇದಕ್ಕೆ ಕೇಂದ್ರ ಸರ್ಕಾರದವರು ಪರವಾನಗಿ ಕೊಡಬೇಕು. ಮಾನ್ಯ ಕೃಷ್ಣಪ್ಪನವರು ಈ ಸಕ್ಕರೆ ಕಾರ್ಖಾನೆಗಳನ್ನು ನೋಡಿಕೊಳ್ಳುತ್ತಿದ್ದಂಥ ಕಾಲದಲ್ಲಿ ಸುಮಾರು 5-6 ಸಾರಿ ದೆಹಲಿಗೆ ಹೋಗಿದ್ದರು. ಹಲವಾರು ಸಕ್ಕರೆ ಕಾರ್ಖಾನೆಗಳ ಮಾಲೀಕರನ್ನು ಹುಡುಕಿಸಿದ್ದಾರೆ. ಕುಂತೂರು ಇದರಲ್ಲಿ 5 ಕೋಟಿ ರೂಪಾಯಿಗಳನ್ನು ನಮ್ಮ ಸಕ್ಕರೆ ಬೆಳೆಗಾರರಿಗೆ ಕೊಡಲಿಕ್ಕೆ ಪ್ರಯತ್ನಪಟ್ಟಿದ್ದಾರೆ. ಕೆಲವೊಂದು ಕಾರ್ಖಾನೆಗಳಲ್ಲಿ ಯಶಸ್ವಿಯಾಗಿದ್ದಾರೆ. ಕೆಲವು ಕಾರ್ಖಾನೆಗಳಲ್ಲಿ ಯಶಸ್ವಿಯಾಗಲಿಲ್ಲ. ಅದನ್ನು ನಾವು ಒಪ್ಪುತ್ತೇವೆ. ಆದರೆ ಕೇಂದ್ರ ಸರ್ಕಾರದವರು ನಮಗೆ ಈ ಪರವಾನಗಿಯನ್ನು ಕೊಡಬೇಕು. ಆದ್ದರಿಂದ, ನಾನು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಅತ್ಯಂತ ವಿನಯದಿಂದ ಪ್ರಾರ್ಥನೆ ಮಾಡುವುದೇನೆಂದರೆ, ನಾವು ಒಟ್ಟಾರೆ ಕೇಂದ್ರ ಸರ್ಕಾರದ ಮೇಲೆ ನಮ್ಮ ಒತ್ತಾಯವನ್ನು ಹಾಕೋಣ. ಆ ಒತ್ತಾಯದ ಕಾರಣವಾದರೂ ಕೂಡ ನಮಗೆ ಯಾವ ಯಾವ ಕಾರ್ಖಾನೆಗಳಲ್ಲಿ ಭರಿಸಲು ಸಾಧ್ಯವಾಗದೇ ಇರುವಷ್ಟು ಸಕ್ಕರೆ ಶೇಖರಿಸಿದೆ, ಅಲ್ಲಿಯಾದರೂ ಕೂಡ ಲಿಬರಲ್ ಆಗಿ ಕಬ್ಬು ಬೆಳೆಗಾರರ ಹಿತದೃಷ್ಟಿಯಿಂದ ಸಕ್ಕರೆ ರಿಲೀಸಸ್‌ನ್ನು ಮಾಡಬೇಕಾಗಿರತಕ್ಕಂಥ ಅವಶ್ಯಕತೆಯನ್ನು ನಾವು ಅವರ ಗಮನಕ್ಕೆ ತರಬೇಕಾಗಿದೆ. ಆದರೆ, ನಾನು ಹಿಂದೆ ಕೇಂದ್ರ ಸರ್ಕಾರದಲ್ಲಿಯೂ ಕೆಲಸ ಮಾಡಿದ್ದೇನೆ. ಕೇಂದ್ರ ಸರ್ಕಾರ ಕೇವಲ ಕರ್ನಾಟಕ, ಮಹಾರಾಷ್ಟ್ರ ಇವೆರಡು ರಾಜ್ಯಗಳನ್ನೇ ಗಮನದಲ್ಲಿಟ್ಟುಕೊಂಡು ಸಕ್ಕರೆ ರಿಲೀಸ್ ಮಾಡುವುದಕ್ಕಾಗುವುದಿಲ್ಲ. ಅವರು ಪ್ರತಿ ತಿಂಗಳೂ ಕೂಡ ಮೌಲಿಕವಾಗಿ ಎಷ್ಟು ಸಕ್ಕರೆಯನ್ನು ನಮ್ಮ ದೇಶಕ್ಕೆ ಬಿಡುಗಡೆ ಮಾಡಬಹುದು ಎಂದು ಲೆಕ್ಕಾಚಾರ ಮಾಡಬೇಕಾಗುತ್ತದೆ. 1996ನೇ ಇಸವಿಯಲ್ಲಿ ಮತ್ತೆ 1997ನೇ ಇಸವಿಯಲ್ಲಿ ನಾವು ಪಾರ್ಲಿಮೆಂಟಿನಲ್ಲಿ ಪಾಕಿಸ್ಥಾನದಿಂದ ಬಹಳ ದೊಡ್ಡ ಪ್ರಮಾಣದಲ್ಲಿ ಬರುತ್ತಿದ್ದಂಥ ಸಕ್ಕರೆಯನ್ನು ತಡೆಯಲಿಕ್ಕೆ ಇಂಪೋರ್ಟ್ ಡ್ಯೂಟಿಯನ್ನು

ಜಾಸ್ತಿ ಮಾಡಿ ಎಂದು ಆಗ್ರಹ ಪೂರ್ವಕವಾಗಿ ಮಾಡಿದಂಥ ಪ್ರಯತ್ನಗಳು 1998ನೇ ಇಸವಿಯಲ್ಲಿ ಫಲಿಸಿತು. 1998ನೇ ಇಸವಿಯಿಂದ ಹೊರಗಡೆ ದೇಶದಿಂದ ನಮ್ಮ ದೇಶಕ್ಕೆ ಸಕ್ಕರೆ ಬರತಕ್ಕಂಥಾದ್ದು, ನಾವು ಹಾಕಿದಂಥ ಆ ಒಂದು ಇಂಪೋರ್ಟ್ ಡ್ಯೂಟಿಯ ಕಾರಣದಿಂದ ನಿಲ್ಲಿತು ಎನ್ನತಕ್ಕಂಥಾದ್ದು ನಾವು ಅರ್ಥ ಮಾಡಿಕೊಂಡಿರುವ ವಿಚಾರ. ಆದುದರಿಂದ ಒಟ್ಟಾಗಿ ದೇಶದ ಸಕ್ಕರೆ ಬಳಕೆದಾರರು ಏನಿದ್ದಾರೆ, ಅವರನ್ನೂ ಕೂಡ ಅವರು ಗಮನದಲ್ಲಿಟ್ಟು ಕೊಳ್ಳಬೇಕಾಗುತ್ತದೆ. ಅವರನ್ನು ಗಮನದಲ್ಲಿಟ್ಟು ಕೊಳ್ಳದೇ ಹೋದರೆ, ನಾವು ಕೇವಲ ಬೆಳೆಗಾರರನ್ನೇ ಗಮನದಲ್ಲಿಟ್ಟುಕೊಂಡು, ಸಕ್ಕರೆ ಕಾರ್ಖಾನೆಗಳನ್ನು ನಮ್ಮ ಮನಸ್ಸಿನಲ್ಲಿಟ್ಟು ಕೊಂಡು, ನಾವು ಸಕ್ಕರೆ ರಿಲೀಸಸ್‌ನ್ನು ಮಾಡಲಿಕ್ಕೆ ಆಗುವುದಿಲ್ಲ ಅನ್ನತಕ್ಕಂಥಾದ್ದು ಕೂಡ ಇದ್ದ ಕೆಲವು ವರ್ಷಗಳಲ್ಲಿ ನಾನು ಕೊಂಚ ಮಟ್ಟಿಗೆ ಅರ್ಥ ಮಾಡಿಕೊಂಡಿರುವ ವಿಚಾರ. ಇಷ್ಟು ಸ್ಪಷ್ಟ. ಈ ಜಟಿಲವಾಗಿರತಕ್ಕಂಥ ಸಮಸ್ಯೆಗಳಿಗೆ ಸುಲಭವಾದಂಥ ಪರಿಹಾರಗಳು ಇಲ್ಲ. ಪರಿಹಾರಗಳೆಲ್ಲವೂ ಕೂಡ ಬಹಳ ಕಾಂಪ್ಲಿಕೇಟೆಡ್ ಕಾಂಪ್ಲೆಕ್ಸ್ ಇಷ್ಯೂಸ್ ಆರ್ ಇನ್‌ವಾಲ್ವ್ಡ್. ಆದ್ದರಿಂದ, ನಾವು ನೀವು ಜೊತೆಯಲ್ಲಿ ಕೆಲಸ ಮಾಡಿ ಈ ಸಮಸ್ಯೆಗಳನ್ನು ನಾವು ಪರಿಹಾರ ಮಾಡಲಿಕ್ಕೆ ಪ್ರಾಮಾಣಿಕವಾದಂಥ ಪ್ರಯತ್ನಗಳನ್ನು ಮಾಡಬೇಕಾಗಿದೆ. ಈ ಸರ್ಕಾರ ಬಂದು ಎರಡೂವರೆ ವರ್ಷಗಳಲ್ಲಿ ಹಲವಾರು ಕಾರ್ಯಕ್ರಮಗಳನ್ನು ರಾಜ್ಯದ ಮುಂದೆ ಇಟ್ಟಿದೆ. ಆ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಾ ಇದ್ದೇವೆ. ಆಗಿಂದಾಗ್ಗೆ ಪ್ರಸ್ತಾಪಿಸಲ್ಪಡುತ್ತಿರತಕ್ಕಂಥ ವಿಚಾರ ಏನೆಂದರೆ, ನಮ್ಮ ರಾಜ್ಯದ ಹಣಕಾಸಿನ ಪರಿಸ್ಥಿತಿ. ಇದರ ಬಗ್ಗೆ ಸಾಕದಷ್ಟು ಅನುಮಾನಗಳು ಇವೆ. ಅನುಮಾನಗಳು ಸ್ವಾಭಾವಿಕ. ನಾವು ಹಿಂದೆ ವಿರೋಧ ಪಕ್ಷದಲ್ಲಿ ಕುಳಿತಿದ್ದಾಗ, 1985,86,87,88,89 ಅನಂತರ 1994,95,96,97,98, 99ನೇ ಇಸವಿಯಲ್ಲಿ ತಾವು ಈ ದಿವಸ ಯಾವ ಯಾವ ಪ್ರಶ್ನೆಗಳನ್ನು ಈ ದಿವಸ ಫೋಕಸ್ ಕೊಟ್ಟಿದ್ದೀರಿ, ಅದೇ ಪ್ರಶ್ನೆಗಳನ್ನು ನಾವು ನಮ್ಮ ಆಗಿನ ನಾಯಕರಾಗಿದ್ದಂಥ ವಿಧಾನಸಭೆಯಲ್ಲಿ ಶ್ರೀಮಾನ್ ಖರ್ಗೆಯವರು, ಮೇಲ್ಮನೆಯಲ್ಲಿ ಶ್ರೀಮಾನ್ ಹೆಚ್.ಕೆ. ಪಾಟೀಲರವರು ಈ ವಿಚಾರಗಳನ್ನು ....

Sri P.G.R. Sindhia : At last you are defending them.

Sri S.M. Krishna : No, we have always stood behind them. I have stood behind them.

ಆದ್ದರಿಂದ ಆಗ ಈ ವಿಚಾರಗಳಿಗೆ ಜನಗಳಿಗೆ ಇಂಥ ಟೀಕೆಗಳು ಬಾರದೇ ಹೋದರೆ ಅವರಿಗೆ ವಿಚಾರಗಳು ಗೊತ್ತಾಗುವುದಿಲ್ಲ. ಜನಗಳನ್ನು ನಾವು ವಿಶ್ವಾಸಕ್ಕೆ ತೆಗೆದುಕೊಳ್ಳ ಬೇಕಾಗುತ್ತದೆ. ಮಾನ್ಯ ಸಿಂಧ್ಯರವರು ಹೇಳಿದರು, ಪ್ರಜಾಪ್ರಭುತ್ವದಲ್ಲಿ ಜನಗಳನ್ನೇ ನಂಬಬೇಕು, ಅವರು ನಮ್ಮನ್ನು ಕಾಡಿಗೇ ಕಳುಹಿಸಲಿ ಅಥವಾ ವಿಧಾನಸೌಧಕ್ಕೆ ಕಳುಹಿಸಲಿ. ಅಂತಿಮವಾಗಿ ಜನಗಳೇ ನಮ್ಮ ರಕ್ಷಕರು ಅನ್ನತಕ್ಕದ್ದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಅವರನ್ನು ಬಿಟ್ಟು ನಮಗೆ ರಾಜಕಾರಣ ಇಲ್ಲ. ಅವರನ್ನು ಬಿಟ್ಟು ನಮಗೆ ಸಾರ್ವಜನಿಕ ಜೀವನ ಇಲ್ಲ. ಆ ಒಂದು ದೃಷ್ಟಿಯಿಂದ ಈ ವಿಚಾರವನ್ನು ಹೇಳಿದೆ. ನಮ್ಮ ರಾಜ್ಯದಲ್ಲಿ ಇವರು ಬಂದಮೇಲೆ, ಯಾವಾಗ ಬಂದರೋ ಅಷ್ಟು ಇವರು, ವಿಪರೀತ ಸಾಲವಾಗಿ ಹೋಯಿತು, ಎಂದು ಹೇಳುತ್ತಾರೆ. ನಿಜ, ನಾವು ಎರಡೂವರೆ ವರ್ಷದ ಕೆಳಗೆ ಅಧಿಕಾರ ಸ್ವೀಕಾರ ಮಾಡಿದ ಸಂದರ್ಭದಲ್ಲಿಯೇ ನಾನು ಹೇಳಿದ್ದೇನೆ. ವಿಶ್ವಬ್ಯಾಂಕ್‌ನ ಅಧ್ಯಕ್ಷರನ್ನು ಬೆಂಗಳೂರಿಗೆ ಕರೆಸಿದಾಗ, ಹೇಳಿದೆ, ನಾವು ವಿಶ್ವಬ್ಯಾಂಕ್‌ನಿಂದ ಸಾಲವನ್ನು ತೆಗೆಯುತ್ತಾ ಇದ್ದೇವೆ, ಆದರೆ ಸಾಲವನ್ನು ಏತಕ್ಕೆ ತೆಗೆಯುತ್ತಾ ಇದ್ದೇವೆ? ಸಂಬಳ ಕೊಡಲಿಕ್ಕೆ ಅಥವಾ ಮನೆ

ಕಟ್ಟಲಿಕ್ಕೆ, ರಸ್ತೆ ಕಟ್ಟಲಿಕ್ಕೆ, ನಮ್ಮ ಹೆಲ್ತ್ ಸೆಂಟರ್‌ಗಳನ್ನು ಇಂಪ್ರೂವ್ ಮಾಡಲಿಕ್ಕೆ ಇದೆಲ್ಲಾ ಹೊಸದೇನೂ ಅಲ್ಲ. ಸಾಲ ಮಾಡಿದ್ದೇವೆ, ಯಾವ ಧೈರ್ಯದ ಮೇಲೆ ಸಾಲ ಮಾಡಿದ್ದೇವೆ? ಆ ಸಾಲವನ್ನು ತೀರಿಸತಕ್ಕಂಥ ಶಕ್ತಿ ಈ ರಾಜ್ಯಕ್ಕೆ ಇದೆ ಎಂಬ ದೃಷ್ಟಿಯಿಂದ. ಒಂದು ಸಣ್ಣ ಕಂಪ್ಯಾರಿಟಿವ್ ಸ್ಟೇಟ್‌ಮೆಂಟ್‌ನ್ನು ಕೊಟ್ಟರೆ ಬಹುಶಃ ಈ ಸಮಸ್ಯೆಯ ಪೂರ್ಣ ಅರಿವು ನಮಗೆ ಅರ್ಥವಾಗಬಹುದು ಎಂದು ಬಿಸಿನೆಸ್ ಇಂಡಿಯ ಪತ್ರಿಕೆಯ ಒಂದು ಫಿಗರ್‌ನ್ನು ನಮೂದು ಮಾಡುತ್ತಾ ಇದ್ದೇನೆ. 1990ನೇ ಇಸವಿಯಲ್ಲಿ ಕೇಂದ್ರ ಸರಕಾರ ಮಾಡಿದಂಥ ಸಾಲ 3,14,558 ಕೋಟಿ ರೂ.ಗಳು. 2000ನೇ ಇಸವಿಯ ಪೂರ್ಣ ಫಿಗರ್ಸ್ ನನಗೆ ಸಿಗಲಿಲ್ಲ. 2001ನೇ ಸಾಲಿನಲ್ಲಿ ಕೇಂದ್ರ ಸರಕಾರ ಮಾಡಿರತಕ್ಕಂಥ ಒಟ್ಟು ಸಾಲ ಏನು ಅಂದರೆ, 11 ಲಕ್ಷ ಕೋಟಿ, 79 ಸಾವಿರದ 793 ಕೋಟಿ ರೂ.ಗಳು including that three lakhs. ಹೇಗೆ ಗ್ರಾಫ್ ಹೋಗುತ್ತಾ ಇದೆ ಎನ್ನುವುದನ್ನು ಹೇಳುತ್ತಿದ್ದೇನೆ. ಇದು ತಮಗೂ ಗೊತ್ತಿರತಕ್ಕಂಥ ವಿಚಾರವೇ. ಒಟ್ಟಾರೆ ದೇಶದಲ್ಲಿ ರಾಜ್ಯಗಳು ಎಷ್ಟು ಸಾಲವನ್ನು ಮಾಡಿದ್ದಾವೆ ಅಂದರೆ, ಅದು 1990ನೇ ಇಸವಿಯಲ್ಲಿ 36 ಸಾವಿರದ 172 ಕೋಟಿ ರೂಪಾಯಿಗಳು. ಇವೊತ್ತು ನಮ್ಮ ರಾಜ್ಯಗಳೆಲ್ಲವೂ ಒಟ್ಟಿಗೆ ಸೇರಿ ಮಾಡಿರತಕ್ಕಂಥ ಸಾಲ 2,13,000-00 ಕೋಟಿ ರೂ.ಗಳು. ಇದು ಇಡೀ ದೇಶದಲ್ಲಿ. ನಮ್ಮ ರಾಜ್ಯಗಳ ಬಾಬತ್ತು ಈ ಸಾಲವನ್ನು ಮಾಡಿದ್ದೇವೆ. ಹಿಂದೆ ನಾನು ಈ ಫಿಗರ್ಸ್‌ನ್ನು ಕೊಟ್ಟಿದ್ದೇನೆ. ಈಗ ಮತ್ತೆ ಅಂಕಿಅಂಶಗಳನ್ನು ಈ ಚರ್ಚೆಗೆ ಒಂದು ಆಯಾಮ ಬೇಕು, ಆ ಆಯಾಮವನ್ನು ದೊರಕಿಸಿಕೊಡಲಿಕ್ಕೆ ತಾವು ಏನು ವಿಶೇಷವಾದಂಥ ಪ್ರಯತ್ನಗಳನ್ನು ಮಾಡಿದ್ದೀರಿ, ನಾನು ಅದರಲ್ಲಿ ಭಾಗವಹಿಸಲಿಕ್ಕೆ ಈ ವಿಚಾರಗಳನ್ನು ನಮೂದು ಮಾಡಬೇಕಾಗಿದೆ. 2000-01 ನೇ ಇಸವಿಯಲ್ಲಿ ಕರ್ನಾಟಕ ರಾಜ್ಯದ ಒಟ್ಟು ಸಾಲ 22,438 ಕೋಟಿ ರೂ.ಗಳು. ಅದೇ ಸಮಯದಲ್ಲಿ ಆಂಧ್ರಪ್ರದೇಶ ಮಾಡಿದಂಥ ಸಾಲ 35,980 ಕೋಟಿ ರೂ.ಗಳು. ಗುಜರಾತ್ ಸರಕಾರ ಮಾಡಿದಂಥ ಸಾಲ 29,733 ಕೋಟಿ ರೂ.ಗಳು ಕೇರಳ, ನಮಗಿಂತ ಬಹಳ ಸಣ್ಣ ರಾಜ್ಯವಾಗಿರತಕ್ಕಂಥಾದ್ದು ಅವರು 2001ನೇ ಸಾಲಿನಲ್ಲಿ 23,779 ಕೋಟಿ ರೂ.ಗಳು. ಮಹಾರಾಷ್ಟ್ರ ರಾಜ್ಯದವರು 45,000 ಕೋಟಿ ರೂ.ಗಳ ಸಾಲವನ್ನು ಮಾಡಿದ್ದಾರೆ. ಮಹಾರಾಷ್ಟ್ರ ಬಹಳ ಸಂಸತ್ ಭರಿತವಾದಂಥ ದೊಡ್ಡ ರಾಜ್ಯ. 2001-02ನೇ ಸಾಲಿನಲ್ಲಿ ರಿಸರ್ವ್ ಬ್ಯಾಂಕ್‌ನ ಸ್ಟ್ಯಾಟಿಸ್ಟಿಕ್ಸ್ ಪ್ರಕಾರ ಕರ್ನಾಟಕ ರಾಜ್ಯ ಮಾಡಿದಂಥ ಸಾಲ, 22 ರಿಂದ 27 ಸಾವಿರ ಕೋಟಿ ರೂ.ಗಳು ಆಂಧ್ರಪ್ರದೇಶದವರು 44 ಸಾವಿರ ಕೋಟಿ ರೂ.ಗಳು. ಗುಜರಾತ್‌ನವರು ನಾವೇಕೆ ಹಿಂದೆ ಬೀಳಬೇಕೆಂದು 38 ಸಾವಿರ ಕೋಟಿ ರೂ.ಗಳನ್ನು ಸಾಲ ಮಾಡಿದರು. ಕೇರಳ ರಾಜ್ಯದವರು 23 ರಿಂದ 26 ಸಾವಿರ ಕೋಟಿ ರೂ.ಗಳನ್ನು ತೆಗೆದುಕೊಂಡರು. ಮಹಾರಾಷ್ಟ್ರದವರು ಎಲ್ಲರಿಗಿಂತಲೂ ಮುಂದಿರಬೇಕೆಂದು 51 ಸಾವಿರ ಕೋಟಿ ರೂ.ಗಳನ್ನು ಸಾಲವಾಗಿ ತೆಗೆದುಕೊಂಡರು. ಇದರ ರೀ-ಪೇಮೆಂಟ್ ಮಾಡುವುದಕ್ಕೆ ಶಕ್ತಿ ಎಲ್ಲಾ ರಾಜ್ಯಗಳಿಗೆ ಇದೆಯೇ ಇಲ್ಲವೇ ಎನ್ನತಕ್ಕಂಥದ್ದನ್ನು ಪ್ರತಿಯೊಂದು ರಾಜ್ಯದಲ್ಲಿಯೂ ಅಸ್ತಿತ್ವದಲ್ಲಿರತಕ್ಕಂಥ ರಾಜ್ಯ ಸರಕಾರಗಳು ಮಾಡಬೇಕಾಗಿರತಕ್ಕಂಥ ಒಂದು ತೀರ್ಮಾನ. ಮಹಾರಾಷ್ಟ್ರದವರು ಹೇಗೆ ಸಾಲವನ್ನು ತೀರಿಸುತ್ತಾರೆ ಎನ್ನುವುದಕ್ಕೆ ಬದಲಾಗಿ ನಾವು ಕರ್ನಾಟಕದವರು 27 ಅಥವಾ 30 ಸಾವಿರ ಕೋಟಿ ರೂ.ಗಳನ್ನು ಸಾಲ ಮಾಡಿದ್ದೇವೆ ಅದನ್ನು ಹೇಗೆ ತೀರಿಸಬಹುದು ಎನ್ನುವುದಕ್ಕೋಸ್ಕರ ಟ್ರಾನ್ಸ್‌ಫರೆನ್ಸಿಯನ್ನು ಇದರಲ್ಲಿ ಬೆಳೆಸಬೇಕೆನ್ನುವ ದೃಷ್ಟಿಯಿಂದಲೇ ಮಿಡ್‌ಟರ್ಮ್ ಪ್ಲಾನ್ ಒಂದನ್ನು ನಾನು ತಮ್ಮ ಮುಂದಿಟ್ಟೆ. ಅದರಲ್ಲಿ ಈ ವಿಚಾರಗಳೆಲ್ಲವನ್ನೂ ನಮೂದು

ಮಾಡಿದ್ದೇವೆ. ಹೇಗೆ ಸಾಲವನ್ನು ನಾವು ಹೆಚ್ಚಿಸಿಕೊಂಡು ಹೋಗುತ್ತಾ ಇದ್ದೇವೆ, ಅದು ಬುದ್ಧಿಪೂರ್ವಕವಾಗಿ ನಾವು ಮಾಡುತ್ತಾ ಇರತಕ್ಕಂಥ ಕೆಲಸ. ಇನ್ನು ಎರಡು ವರ್ಷಗಳಾದ ಮೇಲೆ, ನಾವು ಈ ದಿವಸ ಕೃಷ್ಣ ಕಣಿವೆಯಲ್ಲಿ ಎಷ್ಟು ಹಣವನ್ನು ನಾವು ಖರ್ಚು ಮಾಡುತ್ತಾ ಇದ್ದೇವೆ, ಆ ಹಣವನ್ನು ಖರ್ಚು ಮಾಡಬೇಕಾದಂಥ ನಮ್ಮ ಈ ಕೆಲಸ ಬಹಳ ಮಟ್ಟಿಗೆ ಕಡಿಮೆಯಾಗುತ್ತದೆ. ಏಕೆಂದರೆ ಕಳೆದ 20 ವರ್ಷಗಳಲ್ಲಿ ನಾವು ಸಹಸ್ರಾರು ಕೋಟಿ ರೂ.ಗಳನ್ನು ಆ ಬಾಗದಲ್ಲಿ ರೂಢಿಸಿದ್ದೇವೆ. ಆ ರೂಢಿಸಿದ ಕಾರಣ ಈ ಕೃಷ್ಣಾ ಎ ಸ್ಕೀಮ್‌ನ 733-734 ಟಿಎಂಸಿ ಎಫ್‌ಟಿ ನೀರನ್ನು ಕನ್ನಡ ನಾಡಿನ ಜನ ಉಪಯೋಗಿಸಿಕೊಳ್ಳತಕ್ಕಂಥ ಒಂದು ಚೌಕಟ್ಟನ್ನು ನಾವು ನೀವು ಎಲ್ಲರೂ ಒಟ್ಟಿಗೆ ಸೇರಿ ಈಗ ಮಾಡಿದ್ದೇವೆ. ಅದರ ಫಲವನ್ನು ಈ ದಿವಸ ಅನುಭವಿಸುವುದಕ್ಕೆ ಸಿದ್ಧರಾಗಿದ್ದಾರೆ. ಸನ್ನದ್ಧರಾಗಿದ್ದಾರೆ. ಅದಕ್ಕೆ ಬೇಕಾದಂಥ ಆತ್ಮವಿಶ್ವಾಸವನ್ನು ನಾವು ಆ ಜನಗಳಿಗೆ ಕೊಡಬೇಕಾದಂಥಾದ್ದು ಬಹಳ ಅವಶ್ಯಕವಿದೆ.

ರಾಜ್ಯದ ಆರ್ಥಿಕ ಪರಿಸ್ಥಿತಿ ನಿರಾಶಾದಾಯಕ ಮಗ್ಗಲಿನಿಂದ ಆಶಾದಾಯವಾದಂಥ ಆಯಾಮದತ್ತ ಹೊರಳಿದೆ ಎನ್ನತಕ್ಕಂಥಾದ್ದು ನನ್ನ ದೃಢ ವಿಶ್ವಾಸ. ಆದರೆ ಇಂಥ ಸೂಕ್ಷ್ಮ ವಿಚಾರದಲ್ಲಿ ನಾವು ಎಚ್ಚರಿಕೆಯಿಂದ ಮುಂದಿನ ದಿನಗಳಲ್ಲಿ ಹೆಜ್ಜೆಗಳನ್ನು ಇರಿಸಬೇಕಾಗಿರತಕ್ಕಂಥಾದ್ದು ಬಹಳ ಅವಶ್ಯಕ. ಅನುತ್ಪಾದಕ ಮತ್ತು ಅನಗತ್ಯ ವೆಚ್ಚಗಳನ್ನು ಕಡಿತಗೊಳಿಸಿ ಕೃಷಿ ನೀರಾವರಿ, ಆರೋಗ್ಯ, ಶಿಕ್ಷಣ, ಸಾಮಾಜಿಕ ನ್ಯಾಯವಲಯ ರಸ್ತೆ ಮತ್ತಿತರ ಮೂಲಸೌಕರ್ಯಗಳಿಗೆ ಹೆಚ್ಚು ಅನುದಾನ ನೀಡಲು ಪ್ರಯತ್ನಿಸಿರುವುದಲ್ಲದೆ ಉದ್ಯೋಗ ಸೃಷ್ಟಿಗೆ ವ್ಯಾಪಕ ಒತ್ತನ್ನು ನೀಡಲಾಗಿದೆ. ಕೆಲವರು ಕಳೆದ ಎರಡೂವರೆ ವರ್ಷಗಳಲ್ಲಿ ನಮ್ಮ ರಾಜ್ಯದ ವರಮಾನದ ಬಗ್ಗೆ ಗಂಭೀರವಾದಂಥ ಅನುಮಾನಗಳನ್ನು ವ್ಯಕ್ತಪಡಿಸಿದ್ದಾರೆ. ಆದರೆ ಒಂದು ರಾಜ್ಯದ ರಾಜಸ್ವ ಜಮೆಯ ಶೇಕಡವಾರು ಪ್ರಮಾಣವನ್ನು ನಾವು ಗುರ್ತಿಸಬೇಕಾಗಿದೆ. ಒಂದು ಕಾಲದಲ್ಲಿ ಶೇಕಡ 11 ಇತ್ತು ಅನಂತರ 15ಕ್ಕೇರಿತು, 2002-03ರಲ್ಲಿ ಇದು ಶೇಕಡ 18ಕ್ಕೆ ಹೋಗುತ್ತದೆಂಬ ನಿರೀಕ್ಷೆಯ ಆಧಾರದ ಮೇಲೆ ನಾವು 2002-03 ಮುಂಗಡಪತ್ರವನ್ನು ಸದನದ ಮುಂದಿಟ್ಟಿದ್ದೇವೆ. ರಾಜಸ್ವ ಜಮೆ ಹೇಗೆ ಪ್ರತಿಯೊಂದು ವರ್ಷವೂ ಹೆಚ್ಚುತ್ತಾ ಹೋಗುತ್ತಿದೆ ಎಂಬುದಕ್ಕೆ ಅದರ ಸೂಕ್ಷ್ಮವಾದ ಒಳನೋಟ ನಮಗೆ ಸಿಗಬೇಕಾಗಿದ್ದರೆ ಆ ಜಮೆಯಲ್ಲಿ ಬಂದಿರುವ 1999-2000ರಲ್ಲಿ 12,410 ಕೋಟಿ ರೂ ರಾಜಸ್ವ ಜಮೆ. 2000-01ರಲ್ಲಿ 14,263 ಕೋಟಿ ರೂ.ಗಳು 2001-02ರಲ್ಲಿ 15,926 ಕೋಟಿ ರೂ.ಗಳು. ನೀವು ಹೇಳಬಹುದು ಪ್ರತಿವರ್ಷವೂ ಆನ್ಯುಯಲ್ ಗ್ರೋಥ್ ಇರುತ್ತದಲ್ಲಾ ಎಂದು. ಕೆಲವು ಸಾರಿ ಆ ನ್ಯಾಚುರಲ್ ಗ್ರೋಥ್ ಇರುವುದಿಲ್ಲ. ಏಕೆಂದರೆ ಬಹಳ ರಾಜ್ಯಗಳಲ್ಲಿ, ಹೆಸರು ಹೇಳುವುದಿಲ್ಲ, ನೆಗೆಟಿವ್ ಗ್ರೋಥ್ ಇದೆ. ಸಂಪದ್ಭರಿತವಾದಂಥ ರಾಜ್ಯಗಳಲ್ಲೂ ನೆಗೆಟಿವ್ ಗ್ರೋಥ್ ಇದೆ ಎಂದು ಈ ಸಮಯದಲ್ಲಿ ತಮಗೆ ಜ್ಞಾಪಿಸಬಯಸುತ್ತೇನೆ. 2002-03ರಲ್ಲಿ ಸುಮಾರು 18,19 ಸಾವಿರ ಕೋಟಿ ರೂ.ಗಳ ರಾಜಸ್ವ ಜಮೆ ಆಗುತ್ತದೆಂಬುದು ನಮ್ಮ ಅನಿಸಿಕೆ. ಆದ್ದರಿಂದ ನಮ್ಮ ತೆರಿಗೆ ಸಂಗ್ರಹದಲ್ಲಿ ನಮಗೇನೇ ಅಡ್ಡಿ ಅಡಚಣೆಗಳು ಬಂದರೂ ನಾವು ಅದಕ್ಕೆ ತೀವ್ರವಾದಂಥ ಗಮನ ಕೊಟ್ಟಿದ್ದೇವೆ. ಆದರಲ್ಲಿ ನಮ್ಮ ಹಿಡಿತ ಸಡಿಲಗೊಳಿಸಿಲ್ಲ ಅನ್ನುವ ಕಾರಣಕ್ಕೋಸ್ಕರ ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಈ ರಾಜಸ್ವ ಜಮೆಗೆ ತಮ್ಮ ಗಮನವನ್ನು ಸೆಳೆಯಲು ಪ್ರಯತ್ನ ಪಡುತ್ತಿದ್ದೇನೆ. ಹಾಗೆಯೇ ಮಾನ್ಯ ಸೋಮಶೇಖರ್ ಒಂದು ಮಾತನ್ನು ಹೇಳಿದರು. ನಾನು ಆಗ ಸದನದಲ್ಲಿದ್ದೆ. ಸಾಮಾಜಿಕ ವಲಯಕ್ಕೆ ನೀವು ಜಾಸ್ತಿ ಒತ್ತನ್ನು ಕೊಟ್ಟಿಲ್ಲ

ಕಳೆದೆರಡೂವರೆ ವರ್ಷದಲ್ಲಿ ಎಂಬ ತಮ್ಮ ಗುರುತರವಾದಂಥ ಅಭಿಪ್ರಾಯ ವ್ಯಕ್ತಪಡಿಸಿದರು. ಅದಕ್ಕೆ ಇಂಡೆಕ್ಸ್ ಯಾವುದು? ಕಳೆದ ಐದಾರು ವರ್ಷಗಳಲ್ಲಿ ಯಾವ್ಯಾವ ವರ್ಷ ಯಾವ್ಯಾವ ಸೆಕ್ಟರ್‌ಗೆ ಎಷ್ಟೆಷ್ಟು ಹಣವನ್ನು ನಮ್ಮ ಆಯುವ್ಯಯದಲ್ಲಿ ಕೊಟ್ಟಿದ್ದೇವೆಂಬ ಒಂದು ಸಿಂಹಾವಲೋಕನವನ್ನು ಮಾಡಿದರೆ ಈ ಸರ್ಕಾರ ಸಾಮಾಜಿಕ ವಲಯಕ್ಕೆ ಯಾವ ಆದ್ಯತೆಯನ್ನು ಕೊಟ್ಟಿದೆ ಎಂಬ ಬಗ್ಗೆ ನಮಗೆ ಹೆಚ್ಚು ಬೆಳಕು ಬರಬಹುದು. 1997-98ರಿಂದ ಯಾವ್ಯಾವ ಬಾಬಿನಲ್ಲಿ ಎಷ್ಟೆಷ್ಟು ಖರ್ಚು ಮಾಡಿದ್ದೇವೆಂಬ ಬಗ್ಗೆ ಕೆಲವು ಅಂಕಿಅಂಶಗಳನ್ನು ಒದಗಿಸಿದರೆ ನಾನು ಏನು ವಾದವನ್ನು ಆವಾದಕ್ಕೆ ಪುಷ್ಟಿ ಸಿಕ್ಕಬಹುದು ಎಂಬ ಕಾರಣಕ್ಕೆ ಈ ಅಂಕಿ ಅಂಶಗಳನ್ನು ತಮ್ಮ ಮುಂದೆ ಇಡುತ್ತಿದ್ದೇನೆ. 1998-99ರಲ್ಲಿ 2438 ಕೋಟಿ ರೂ.ಗಳನ್ನು ವಿದ್ಯಾಭ್ಯಾಸಕ್ಕೆ ಕೊಡುತ್ತಿದ್ದೆವು. 99ರಲ್ಲಿ ಅದು 2882 ಕೋಟಿ ರೂ.ಗೆ ಹೋಯಿತು. 2001ರಲ್ಲಿ ಅದು 3351 ಕೋಟಿ ರೂ.ಗೆ ಹೋಯಿತು. 2001-02 ರಲ್ಲಿ ಅದು 3318 ಕೋಟಿ ರೂ.ಗಳಿಗೆ ಹೋಯಿತು. ಪ್ರಸಕ್ತ ಸಾಲಿನಲ್ಲಿ ನಮ್ಮ ಉದ್ದೇಶ 3700 ಕೋಟಿ ರೂ.ಗಳನ್ನು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಬೇಕೆಂಬ ಕಲ್ಪನೆಯನ್ನು ನಾವು ಮಾಡಿದ್ದೇವೆ. ಹಾಗೆಯೇ ಆರೋಗ್ಯ ವಲಯದಲ್ಲಿ 1998-99ರಲ್ಲಿ 818 ಕೋಟಿ ರೂ. ಇತ್ತು, 99ರಲ್ಲಿ ಅದು 976 ಕೋಟಿ ರೂ.ಗೆ ಹೋಗಿ 2000ದಲ್ಲಿ 1005 ಕೋಟಿ ರೂ.ಯಾಗಿ, 200+02ರಲ್ಲಿ 1181 ಕೋಟಿ ರೂ.ಯಾಗಿ ಅನಂತರ 1160 ಕೋಟಿ ರೂ. ಆಗುತ್ತದೆ. ಇಲ್ಲಿ ಒಂದು ರೀತಿ ಮಗ್ರಾಷ್ ಲೆವೆಲ್ಲಾಗಿರಲು ಕಾರಣವೆಂದರೆ ಹೆಲ್ ಸಿಸ್ಟಂ ಅಭಿವೃದ್ಧಿಗೋಸ್ಕರ ವಿಶ್ವಬ್ಯಾಂಕ್‌ನವರು ಕೊಡುವ 800 ಕೋಟಿ ರೂ.ಗಳು ಈ ವರ್ಷದಿಂದ ಪ್ರಾರಂಭವಾಗುತ್ತದೆ. ಅದನ್ನೂ ಹಿಡಿದರೆ ನಮ್ಮ ಆರೋಗ್ಯ ವಲಯಕ್ಕೆ ಸುಮಾರು 1800 ಕೋಟಿ ರೂ. ಮುಂದಿನ 5 ವರ್ಷದಲ್ಲಿ ಸಿಗುತ್ತದೆ. ಸಮಾಜ ಕಲ್ಯಾಣದಲ್ಲಿ 414 ಕೋಟಿ ರೂ.ನಿಂದ ಪ್ರಾರಂಭ ಮಾಡಿ ಈಗ 610 ಕೋಟಿ ರೂ.ವರೆಗೂ ಹೋಗಿದ್ದೇವೆ. ಈ ವಲಯದಲ್ಲಿ ಇನ್ನೂ ಹೆಚ್ಚು ವಿನಿಯೋಗಿಸಬೇಕೆಂಬುದು ನಮ್ಮ ಕಳಕಳಿ, ಕಾಳಜಿ. ಆದರೆ ಸಂಪನ್ಮೂಲದ ವೈಪರೀತ್ಯದ ಕಾರಣ ನಾವು ಅದನ್ನು ಹೆಚ್ಚು ಮಾಡಲಿಕ್ಕೆ ಆಗಿಲ್ಲ, ಗ್ರಾಮೀಣ ನೀರು ಸರಬರಾಜು ಮತ್ತು ನಗರ ನೀರು ಸರಬರಾಜು ಇವೆರಡೂ ಕೂಡ ಒಂದು ಕಾಲದಲ್ಲಿ 351 ಮತ್ತು 128 ಕೋಟಿ ರೂ. ಇತ್ತು ಅದು 2001-02ರಲ್ಲಿ 317 ಮತ್ತು 331 ಆಯಿತು. ಈಗ ಜಲನಿರ್ಮಲ ಅನ್ನತಕ್ಕಂಥ ಒಂದು ಯೋಜನೆಯಡಿ ಸುಮಾರು ಸಾವಿರ ಕೋಟಿ ರೂ.ಗಳನ್ನು ಗ್ರಾಮೀಣ ನೀರು ಸರಬರಾಜಿಗಾಗಿ ವಿನಿಯೋಗಿಸುವ ಒಂದು ಚೌಕಟ್ಟನ್ನು ನಾವು ಮಾಡಿದ್ದೇವೆ. ಅಂದ ಮೇಲೆ rural water supply, urban water supply, health, education, social welfare social sector ಅಂದರೆ ಯಾವುದು ಇದನ್ನು ಬಿಟ್ಟು? ಇವೆಲ್ಲವೂ ಸೇರಿ ಸೋಷಿಯಲ್ ಸೆಕ್ಟರ್ ಆಗುತ್ತದೆ. ಇನ್ನು ಇರಿಗೇಷನ್ 98-99ರಲ್ಲಿ 2378 ಕೋಟಿ ಖರ್ಚು ಮಾಡುತ್ತಿದ್ದೆವು. ಅದನ್ನು 99-2000ರಲ್ಲಿ 2817 ಕೋಟಿ ರೂ.ಗೆ ತೆಗೆದುಕೊಂಡು ಹೋದೆವು. 2000ರಲ್ಲಿ ಅದನ್ನು 3473 ಕೋಟಿ ರೂ.ಗಳಿಗೆ ತೆಗೆದುಕೊಂಡು ಹೋದೆವು. ಅನಂತರ 2739 ಕೋಟಿ ರೂ. ಈ ವರ್ಷ 3234 ಕೋಟಿ ರೂ. ಎಂದು ಅಂದಾಜು ಮಾಡಿದ್ದೇವೆ ಅದನ್ನು ತಮ್ಮ ಮುಂದಿರುವ ನನ್ನ ಮುಂಗಡಪತ್ರದಲ್ಲಿ ಇರಿಸಿದ್ದೇನೆ. ಅಂದರೆ ನಾವು ನೀರಾವರಿಗೆ ಪ್ರಾಧಾನ್ಯತೆಯನ್ನು ಹಾಗೂ ಆದ್ಯತೆಯನ್ನು ಕೊಟ್ಟಿದ್ದೇವೆ. ಸೋಷಿಯಲ್ ಸೆಕ್ಟರ್‌ಗೆ ನಾವು ಹೆಚ್ಚು ಒತ್ತು ಕೊಟ್ಟಿದ್ದೇವೆ. ಅಂದ ಮೇಲೆ ನಾವು ಸೋಷಿಯಲ್ ಸೆಕ್ಟರ್ ಅನ್ನು ನಾವು ಅನ್ನು ನಾವು ನೆಗ್ಲೆಟ್ ಮಾಡಿದ್ದೇವೆಂಬ ಟೀಕೆಯನ್ನು ಈ ಅಂಕಿಅಂಶಗಳ ಜೊತೆ ಓದಿ ಅನಂತರ ನಿರ್ವಿಕಾರವಾದಂಥ ರೀತಿಯಲ್ಲಿ ನಾವು ನಮ್ಮ ಅನಿಸಿಕೆಗಳಿಗೆ ರೂಪುಕೊಡಬೇಕು.

6.50 ಪಿಎಂ

ತೆರಿಗೆ ಹೇಗೆ ಬಂದಿದೆ ಎನ್ನತಕ್ಕದ್ದಕ್ಕೆ ಸೂಚ್ಯವಾಗಿ ಕೆಲವು ಅಂಕಿಅಂಶಗಳನ್ನು ಕೊಟ್ಟರೆ ವಿಚಾರಗಳನ್ನು ಪೂರ್ಣ ಪ್ರಮಾಣದಲ್ಲಿ ಗ್ರಹಿಸಲಿಕ್ಕೆ ಸಾಧ್ಯ ಎನ್ನತಕ್ಕಂ ಕಾರಣಕ್ಕೋಸ್ಕರ ಕೊಡುತ್ತಿದ್ದೇನೆ. ಈ ಅಂಕಿ ಅಂಶಗಳು ಬಹಳಮಟ್ಟಿಗೆ ಅವಶ್ಯಕ ಎಂದು ನಾನು ಭಾವನೆ ಮಾಡುತ್ತೇನೆ. ವಾಣಿಜ್ಯ ತೆರಿಗೆ ವಿಚಾರ. 1997-98ನೇ ಇಸವಿಯಲ್ಲಿ ಕೇವಲ 4593 ಕೋಟಿ ರೂಪಾಯಿ ಇತ್ತು. ಅದನ್ನು 2001-02ರಲ್ಲಿ 6343 ಕೋಟಿ ರೂ.ಗೆ ತೆಗೆದುಕೊಂಡು ಹೋಗಿದ್ದೇವೆ. ಎಲ್ಲಿಯೂ ಸಡಿಲ ಬಿಡಲಿಲ್ಲ. ನಿಜ, ತಾವು ಹೇಳಿದ ಹಾಗೆ ಇನ್ನೂ ನಾವು ರೂತ್‌ಲೆಸ್ ಆದರೆ, ನಮ್ಮ ಅಧಿಕಾರ ಶಾಹಿಯಲ್ಲಿ ಇನ್ನೂ ಹೆಚ್ಚಿನ ಪ್ರಾಮಾಣಿಕತೆ ಕಂಡು ಬಂದರೆ ಈ ಫಿಗರ್ ಇನ್ನೂ ಮೇಲೆ ಹೋಗಲಿಕ್ಕೆ ಸಾಧ್ಯ ಇದೆ. ಅದು ಎಲ್ಲಾ ಕ್ಷೇತ್ರದಲ್ಲೂ ಇದೆ. ಅದು ಇನ್‌ಕಂ ಟ್ಯಾಕ್ಸ್ ಆಗಲಿ, ಸೆಂಟ್ರಲ್ ಎಕ್ಸೈಜ್ ಆಗಲಿ, ಇದೆರೆಲ್ಲದರಲ್ಲೂ ಕೂಡ ಇದೆ. ಮನುಷ್ಯನ ಸ್ವಭಾವ ಉತ್ತರ-ದಕ್ಷಿಣ; ಪೂರ್ವ-ಪಶ್ಚಿಮ ಎನ್ನತಕ್ಕ ಭೇದಭಾವ ಇಲ್ಲದೇ ಕರ್ನಾಟಕ, ಬಿಹಾರಿ, ಮರಾಠಿ ಎನ್ನತಕ್ಕ ಭೇದಭಾವ ಇಲ್ಲದೇ ಮನುಷ್ಯನ ಸ್ವಭಾವಗಳು ಎಲ್ಲವೂ ಕೂಡ ಒಂದೇ ಅಬಕಾರಿ ವಿಚಾರ. 1997-98ರಲ್ಲಿ ಕೇವಲ 864 ಕೋಟಿ ರೂಪಾಯಿ ಇತ್ತು. ಅದನ್ನು 2001-02ರಲ್ಲಿ 2900 ಕೋಟಿ ರೂ.ಗೆ ನಾವು ತೆಗೆದುಕೊಂಡು ಹೋಗಿದ್ದೇವೆ. ಸಾಲದು ನಿಜ, ಒಪ್ಪುತ್ತೇನೆ. ಇನ್ನೂ ಹೆಚ್ಚಬೇಕು. ಆದರೆ ಹೆಚ್ಚಿಸಲಿಕ್ಕೆ ಏನಾದರೂ ಸಲಹೆ ಸಾಕ್ಷಿಗಳು ಇದ್ದರೆ ಅದನ್ನು ನಮಗೆ ಹೇಳಿಕೊಟ್ಟರೆ, ಅಥವಾ ಸಲಹೆ ಕೊಟ್ಟರೆ ಆ ಸಲಹೆಯನ್ನು ಬಹಳ ವಿನಮ್ರವಾಗಿ ನಾವಿಲ್ಲಿ ಕುಳಿತಿರತಕ್ಕವರು ತೆಗೆದುಕೊಳ್ಳಲಿಕ್ಕೆ ಸಿದ್ಧರಿದ್ದೇವೆ ಎನ್ನತಕ್ಕ ಮಾತನ್ನು ಈ ಸಮಯದಲ್ಲಿ ನಿವೇದನೆ ಮಾಡುತ್ತೇನೆ.

ಮುದ್ರಾಂಕ ಮತ್ತು ನೋಂದಣಿ ವಿಚಾರ. ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರಾದಂತಹ ಶ್ರೀ ಜಗದೀಶ್ ಶೆಟ್ಟರ್‌ಗೆ ಬಹಳ ಅತ್ಯಂತ ಪ್ರಿಯವಾದಂತಹ ಒಂದು ಸಬ್ಜೆಕ್ಟ್. ಬರೇ 609 ಕೋಟಿ ರೂಪಾಯಿ 1997-98ರಲ್ಲಿ ಇತ್ತು. ಆಗ ಬೂಮ್ ಪೀರಿಯಡ್.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸಾರ್, ನಾನು ಇಂಟರ್‌ಫಿಯರ್ ಆಗಲು ಬಯಸುವುದಿಲ್ಲ. ಈ ಅಂಕಿಅಂಶಗಳನ್ನು ತಾವು 1997-98ರಿಂದ ಕೊಡುತ್ತಿದ್ದೀರಿ. ಅದರ ಜೊತೆಗೆ 1993-94ರಲ್ಲಿ ಏನು ಇತ್ತು ಎಂದರೆ ಹೇಳಿದರೆ ಇನ್ನೂ ಸ್ವಲ್ಪ ಹೆಚ್ಚಿನ ಬೆಳಕು ಈ ಸದನಕ್ಕೆ ಚೆಲ್ಲಬಹುದು.

ಶ್ರೀ ಎಸ್.ಎಂ. ಕೃಷ್ಣ : ಸಂಗ್ರಹಿಸಿ ನಾನು ಕಳುಹಿಸಿ ಕೊಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಈಗ ಕೊಟ್ಟರೆ ಅನುಕೂಲ. ತಾವು 1997-98ರದ್ದು ಏಕೆ ಕಾನ್ಸೆಂಟ್ರೇಟ್ ಮಾಡುತ್ತಿದ್ದೀರಿ ಎಂದರೆ ಅದು ಅಧಿಕಾರ ಹಸ್ತಾಂತರ ಆದಂತಹ ವರ್ಷ 1993-94 ಸಹ ಅಧಿಕಾರ ಹಸ್ತಾಂತರ ಆದಂತಹ ವರ್ಷ. ಅದನ್ನು ಕೊಟ್ಟಿದ್ದರೆ ಚೆನ್ನಾಗಿರುತ್ತಿತ್ತು ಎಂಬುದು ನನ್ನ ಭಾವನೆ.

Sri S.M. Krishna : I entirely agree with you. ಆದರೆ ಆ ಫಿಗರ್ಸ್ ಬಂದರೆ ಚಿತ್ರ ಇನ್ನೂ ಸ್ಪಷ್ಟವಾಗಿ ಹೋಗಿ ಬಿಡುತ್ತದೆ. ಆದರೆ ನಾನು ಸಂಗ್ರಹಿಸಿ ತಮಗೆ ಕಳುಹಿಸಿಕೊಡುತ್ತೇನೆ. ಇದಕ್ಕೆ ಸಂಬಂಧಪಟ್ಟಂತಹ ಇನ್ನೂ ಹೆಚ್ಚಿನ ಮಾಹಿತಿಗಳು ಮಾನ್ಯ ಸದಸ್ಯರುಗಳಿಗೆ ಬೇಕು ಎಂದರೆ ಕೊಡುತ್ತೇನೆ. ಏಕೆಂದರೆ these are all open documents. Anybody can cross-check these figures with our revenue, receipts and

expenditure and all that. ಮುದ್ರಾಂಕದ ವಿಚಾರ. 609 ಕೋಟಿ ರೂಪಾಯಿ ಇತ್ತು. ಅದು ಭೂಮ್ ಪೀರಿಯಡ್ ಎಂದು ಹೇಳಿ. ಬೆಂಗಳೂರಿನಲ್ಲಿ ಒಂದೊಂದು ಸ್ಕ್ವೇರ್ ಫೀಟ್‌ಗೆ ಇಷ್ಟು ಎಂದು ಹೇಳಿ ದೊಡ್ಡ ದೊಡ್ಡ ಬಹುಮಹಡಿಗಳನ್ನು ಕಟ್ಟುತ್ತಿದ್ದಂತಹ ಕಾಲ ಅದು. 1995, 96,97,98,99 ಹಾಗೂ 2000ದವರೆಗೆ. 609 ಕೋಟಿ ರೂಪಾಯಿ ಇತ್ತು. ಅದನ್ನು ನಾವು 880 ಕೋಟಿ ರೂಪಾಯಿಗೆ ತೆಗೆದುಕೊಂಡು ಹೋದೆವು. ನಿಜ, ಇನ್ನೂ ಹೆಚ್ಚು ಆಗಬಹುದಾಗಿತ್ತು. ಸಾಧ್ಯ ಇತ್ತು, ಸಾಧ್ಯ ಇಲ್ಲ ಎಂತಲ್ಲ. ಆದರೆ ಆಗಿರತಕ್ಕಂತಹ ಬೆಳವಣಿಗೆ ಏನು ಸಕ್ಸಸ್ ರಿಜಿಸ್ಟರ್ ಆಗಿದೆ, ಅದನ್ನು ನಾವು ಗಮನಿಸದೇ ಹೋದರೆ ವಸ್ತು ನಿಷ್ಠರಾಗಲು ಸಾಧ್ಯವಿಲ್ಲ. ಆ ಕಾರಣಕ್ಕೋಸ್ಕರ ಈ ಫಿಗರ್ಸ್ ಬಹಳ ಮಟ್ಟಿಗೆ ಅನುಕೂಲ ಆಗುತ್ತದೆ, ಇನ್ನು ಸ್ಯಾಲರಿ ಮತ್ತು ಪೆನ್‌ಷನ್ಸ್ ವಿಚಾರ. Debt Servicing as a ratio of revenue receipts. ಅದಕ್ಕೆ ಒಂದು ಶೇಕಡಾವಾರು, ಸಂಬಂಧ ಇರುತ್ತದೆ, ಸೆಕ್ಸಸ್ ಇರುತ್ತದೆ. 1999-2000ರಲ್ಲಿ ಶೇಕಡಾ 37 ಇತ್ತು. 2000-01ರಲ್ಲಿ 32ಕ್ಕೆ ಇಳಿಯಿತು. 2001-02ರಲ್ಲಿ 31ಕ್ಕೆ ಇಳಿಯಿತು. 2002-03ಕ್ಕೆ ಅದನ್ನು 28 ಪರ್ಸೆಂಟ್‌ಗೆ ಇಳಿಸಬೇಕು ಎನ್ನತಕ್ಕ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಅದರಲ್ಲಿ ನಾವು ಯಶಸ್ಸನ್ನು ಪಡೆಯುವಂತಹ ಸಂಪೂರ್ಣವಾದಂತಹ ವಿಶ್ವಾಸ ನಮಗಿದೆ. ಇದು ನಮ್ಮ ಎಕ್ಸ್‌ಪೆಂಡಿಚರ್ ಸೈಡ್. ಕೆಲವರು ಟೀಕೆ ಮಾಡುವಾಗ ನಿಮಗೆ ಎಕ್ಸ್‌ಪೆಂಡಿಚರ್ ಮೇಲೆ ಹಿಡಿತ ಇಲ್ಲ. ಎಕ್ಸ್‌ಪೆಂಡಿಚರ್ ಮೇಲೆ ಹಿಡಿತ ಇಲ್ಲ ಎನ್ನತಕ್ಕದ್ದು, ನಿಮಗೆ ಯಾವಾಗ ಪ್ರೂವ್ ಮಾಡಲಿಕ್ಕೆ ಸಾಧ್ಯ ಎಂದರೆ ಈ ಗ್ರಾಫ್ ಏನು ಇದೆ, ಅದು ಮೇಲೆ ಹೋಗಲಿಕ್ಕೆ ಪ್ರಾರಂಭ ಆದರೆ. ನಿಮ್ಮಿಂದ ನಾವು ಅಧಿಕಾರವನ್ನು ತೆಗೆದುಕೊಂಡಾಗ 37 ಪರ್ಸೆಂಟ್ ಏನು ಗ್ರಾಫ್ ಇತ್ತು, ಅದು ನಮ್ಮ ಕಾಲದಲ್ಲಿ 39,40,41,42 ಪರ್ಸೆಂಟ್ ಆಗಿದ್ದರೆ ತಾವು ಹೇಳತಕ್ಕದ್ದಲ್ಲಿ ಒಂದು ಅರ್ಥ ಇರುತ್ತಿತ್ತು ಆದರೆ ಆ ಗ್ರಾಫ್ ಪ್ರತಿ ವರ್ಷವೂ ಇಳಿಮುಖ ಆಗಿರತಕ್ಕಂಥಹ ಕಾಲದಲ್ಲಿ ತಾವು ಆ ಟೀಕೆಯನ್ನು ಮಾಡಿದಾಗ ಆ ಟೀಕೆಯ ಹಿನ್ನೆಲೆ ಏನು ಎನ್ನತಕ್ಕದ್ದನ್ನು ನಾನು ಸ್ಪಷ್ಟ ಪಡಿಸಲಿಕ್ಕೆ ಈ ಅವಕಾಶವನ್ನು ಉಪಯೋಗಿಸುವುದಿಲ್ಲ. ನಾವು ಪ್ಲಾನ್ ಸೈಜ್‌ನ ಬಗ್ಗೆ ವಿಚಾರ ಮಾಡಬೇಕು. ಪ್ಲಾನ್ ಸೈಜಿನ ಬಗ್ಗೆ ಆಗಿಂದಾಗ್ಗೆ ಸದನಕ್ಕೆ ನಾವು ವಿವರಣೆಗಳನ್ನು ಕೊಟ್ಟಿದ್ದೇವೆ ಆದರೆ ಆ ಪ್ಲಾನ್ ಸೈಜಿನ ಬಗ್ಗೆ ನಾವು ಹೆಚ್ಚು ಗಮನವನ್ನು ಕೆಲವೊಂದು ಸಾರಿ ಕೊಡುತ್ತೇವೆ. ಕೆಲವೊಂದು ಸಾರಿ ನಾವು ಕೊಡುವುದಿಲ್ಲ. ಈ ದಿವಸ ನಮ್ಮ ರಾಜ್ಯದಲ್ಲಿ, ನಮ್ಮ ದೇಶದಲ್ಲಿ ಹಣಕಾಸಿನ ಪರಿಸ್ಥಿತಿಯನ್ನು ಅತ್ಯಂತ ಕಷ್ಟದಾಯಕವಾದಂತಹ ಪರಿಸ್ಥಿತಿಯಲ್ಲಿಯೂ ಕೂಡ ಬಹಳ ವಿಚಕ್ಷಣತೆಯಿಂದ ವೆಚ್ಚದ ಮೇಲೆ ಅಗತ್ಯವಾದಂತಹ ಕಡಿವಾಣವನ್ನು ಹಾಕಿ ಅಭಿವೃದ್ಧಿಯ ಕಾರ್ಯದಲ್ಲಿ ಇನ್ನೂ ನಿರ್ಗಳವಾಗಿ ಹಣ ಒದಗಿಸಿಕೊಡತಕ್ಕ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ನಮ್ಮ ಪ್ಲಾನ್ ಸೈಜನ್ನು ಪ್ರತಿ ವರ್ಷ, ವರ್ಷನೂ ಜಾಸ್ತಿ ಮಾಡಿಕೊಂಡು ಬಂದಿದ್ದಾರೆ ಕೇಂಬ್ರದ ಯೋಜನಾ ಆಯೋಗದವರು. ಕಳೆದ ಮೂರು ವರ್ಷಗಳ ಕಾಲ ಕೇಂದ್ರ ಯೋಜನಾ ಆಯೋಗದ ಉಪಾಧ್ಯಕ್ಷರಾದಂತಹ ಶ್ರೀ ಕೆ.ಸಿ ಪಂತ್ ಅವರ ಜೊತೆಯಲ್ಲಿ ನಾವು ಸಮಾಲೋಚನೆಗಳನ್ನು ಮಾಡುತ್ತಿದ್ದೇವೆ. ಒಂದು ವರ್ಷಕ್ಕಿಂತ ಇನ್ನೊಂದು ವರ್ಷಕ್ಕೆ ನಮ್ಮ ಪ್ಲಾನಿನ ಸೈಜನ್ನು ಅವರು ಹೆಚ್ಚು ಮಾಡಿಕೊಂಡು ಬಂದರೇ ವಿನಹ ನೀವು ಅಭಿಪ್ರಾಯ ಪಟ್ಟಂತೆ ಕೇಂದ್ರ ಸರ್ಕಾರದವರೂ ಅಭಿಪ್ರಾಯ ಫಟ್ಟಿದ್ದರೆ ಇವರು ಅನಗತ್ಯವಾದಂತಹ ವೆಚ್ಚವನ್ನು ಮಾಡುತ್ತಿದ್ದಾರೆ, ಇವರು ಹಣಕಾಸಿನ ವಿತರಣೆಯಲ್ಲಿ, ಹಣಕಾಸಿನ ವ್ಯವಸ್ಥೆಯಲ್ಲಿ ಯೋಗ್ಯವಾದಂತಹ ಹಿಡಿತವನ್ನು ಇಟ್ಟುಕೊಂಡಿಲ್ಲ ಎನ್ನತಕ್ಕದ್ದು ಅವರ

ಅಭಿಪ್ರಾಯವೂ ಆಗಿದಿದ್ದರೆ ನಮಗೆ ಯಾವ ಪ್ರಮಾಣದಲ್ಲಿ ನಮ್ಮ ಯೋಜನಾ ವೆಚ್ಚವನ್ನು ಪ್ರತಿ ವರ್ಷವೂ ಜಾಸ್ತಿ ಮಾಡಿಕೊಂಡು ಬಂದರು, ಆ ಪ್ರಮಾಣಕ್ಕೆ ನಮ್ಮ ಹೋಗಲಿಕ್ಕೆ ಅವರು ಬಿಡುತ್ತಿರಲಿಲ್ಲ ಎನ್ನತಕ್ಕದ್ದನ್ನು ನಾನು ಅತ್ಯಂತ ವಿನಯದಿಂದ ತಮ್ಮಲ್ಲಿ ಸಮರ್ಪಣೆ ಮಾಡಿಕೊಳ್ಳಲು ಇಚ್ಛಿಪಡುತ್ತೇನೆ. ಇದು ಸುಲಭ ಸಾಧ್ಯವಾದಂತಹ ಕೆಲಸ ಹಾಗೆ ಎಂದು ನಾನು ಭಾವನೆ ಮಾಡುವುದಿಲ್ಲ. ನಮ್ಮ ಅಧಿಕಾರಿ ವರ್ಗ, ನಮ್ಮ ಈ ಸರ್ಕಾರ, ಮಂತ್ರಿಗಳು ಅವರುಗಳು ತಮ್ಮ ತಮ್ಮ ಇಲಾಖೆಯಲ್ಲಿ ತೋರಿಸಿದಂತಹ ಅಸಾಧಾರಣಾವಾದಂತಹ ಕರ್ತೃತ್ವ ಶಕ್ತಿ, ಅದರ ಕಾರಣ ಯೋಜನಾ ವೆಚ್ಚದಲ್ಲಿ ಇಷ್ಟೊಂದು ದೊಡ್ಡ ಸುಧಾರಣೆಯನ್ನು ನಾವು ಮಾಡಲಿಕ್ಕೆ ಸಾಧ್ಯವಾಯಿತು. 100 ಪರ್ಸೆಂಟ್ ಹಿಂದಿನ ಎರಡು ವರ್ಷಗಳ ಪ್ಲಾನ್ ಸೈಜ್ ಇದೆ, ಆ ಪ್ಲಾನ್ ಸೈಜಿನಲ್ಲಿ ಕೆಲವೊಂದು ಸಾರಿ 110 ಪರ್ಸೆಂಟ್, ಕೆಲವು ಸಾರಿ 100 ಪರ್ಸೆಂಟ್ ನಾವು ಯಶಸ್ಸನ್ನು ಗಳಿಸಿದ್ದೇವೆ ಎನ್ನತಕ್ಕದ್ದೇ ಸಾಕ್ಷಿ. ಹಣ ಅಭಿವೃದ್ಧಿಗೆ ಬಿಡುಗಡೆ ಆಗುತ್ತಿದೆ. ಇಲ್ಲದೇ ಇದ್ದರೆ ಪ್ಲಾನಿಂಗ್ ಕಮೀಷನ್ನಿನವರು ನೀವು 100 ಪರ್ಸೆಂಟ್ ನಿಮ್ಮ ಕಳೆದ ವರ್ಷದ ಪ್ಲಾನನ್ನು ಇಂಪ್ಲಿಮೆಂಟ್ ಮಾಡುವುದರಲ್ಲಿ ಯಶಸ್ವಿ ಆಗಿದ್ದೀರಿ ಹಾಗೆ ಎಂದು ಹೇಳಿ ಯಾವ ಪ್ಲಾನಿಂಗ್ ಕಮೀಷನ್ನಿನವರೂ ನಮಗೆ ಹೇಳುತ್ತಿರಲಿಲ್ಲ. ಆದ್ದರಿಂದ ಇನ್ನು ಮುಂದಾದರೂ ಕೂಡ ಈ ಹಣಕಾಸಿನ ಭದ್ರತೆ, ಈ ಹಣಕಾಸಿನ ವ್ಯವಸ್ಥೆ ಇವುಗಳ ಬಗ್ಗೆ ಇವತ್ತು ನಾನು ಬಹಳ ಸಂಪದ್ಭರಿತನಾಗಿದ್ದೇನೆ ಎಂದೇನೂ ನಾನು ಭಾವಿಸುವುದಿಲ್ಲ. ಏಕೆಂದರೆ ಪ್ರತಿ ಒಂದು ಕಾಸನ್ನು ಖರ್ಚು ಮಾಡಬೇಕಾಗಿದ್ದರೂ ಕೂಡ ಪ್ರತಿ ಒಂದು ರೂಪಾಯಿಯನ್ನು ಕೂಡ 100 ಸಾರಿ ಯೋಚನೆ ಮಾಡಿ, ಆಲೋಚನೆ ಮಾಡಿ ಅದಕ್ಕೆ ನಾವು ತೀರ್ಮಾನಗಳನ್ನು ತೆಗೆದುಕೊಳ್ಳಬೇಕಾಗಿದೆ. ಆದ್ದರಿಂದ ಗಾಬರಿಗೆ ಕಾರಣ ಇಲ್ಲ, ಕಳವಳಕ್ಕೆ ಕಾರಣ ಇಲ್ಲ. At the same time, ನಾವು ನಿರಾಳವಾಗಿ ಉಸಿರು ಬಿಡಲಿಕ್ಕೆ ಸಾಧ್ಯವಿಲ್ಲ. ಹಾಗೆಂದ ತಕ್ಷಣ Karnataka Government in a financial crisis ಎಂದು ಹೇಳಿ ಯಾರಾದರೂ if they were to come to the conclusion, ಅದು ಅವರ ಲಕ್ಸುರಿ. let it be their luxury.

ಈ ಮಾನ್ಯ ಶಾಸನಸಭೆಯ ಗೌರವಾನ್ವಿತ ಸದಸ್ಯರುಗಳಿಗೆ ನಾನು ಸ್ಪಷ್ಟಪಡಿಸತಕ್ಕದ್ದು ಏನು ಎಂದರೆ ನಮ್ಮ ಹಣಕಾಸಿನ ಪರಿಸ್ಥಿತಿಯ ಬಗ್ಗೆ ನಾವೀಗಾಗಲೇ ಸದನದ ಮುಂದೆ ಇಟ್ಟಿರತಕ್ಕ ಮಧ್ಯ ಕಾಲೀನ ಹಣಕಾಸಿನ ಪರಿಸ್ಥಿತಿಯ ಚೌಕಟ್ಟನ್ನು, ಇದೆಲ್ಲವನ್ನೂ ನಾವು ಊಹೆ ಮಾಡಿದ್ದೇವೆ. ಆ ಊಹೆಯ ಪ್ರಕಾರ, ಆ ಅಂದಾಜಿನ ಪ್ರಕಾರ, ಆ ನೀಲಿ ನಕಾಶೆಯ ಪ್ರಕಾರ, ಆ ರೋಡ್ ಮ್ಯಾಪ್ ಪ್ರಕಾರ ಪ್ರತಿಯೊಂದು ಮೈಲುಗಲ್ಲನ್ನೂ ಕೂಡ ನಾವು ಎಣಿಸುತ್ತಿದ್ದೇವೆ. 2005ನೇ ಇಸವಿಯಲ್ಲಿ ನಮ್ಮ ಡೆಫಿಸಿಟ್ ಏನು 3 ಪರ್ಸೆಂಟಿಗೆ ತಂದು ನಿಲ್ಲಿಸಬೇಕು ಎನ್ನತಕ್ಕದ್ದು, ಅದು ನಾವು ಹಾಕಿಕೊಂಡಿರತಕ್ಕಂತಹ ಒಂದು ಗುರಿ. ಆ ಉದ್ದೇಶವನ್ನು ನಾವು ಸಾಧನೆ ಮಾಡಲಿಕ್ಕೆ ನಾವು ಇದೇ ರೀತಿ ಮುಂದುವರಿದು ಕ್ರಿಯಾಶೀಲರಾಗಿ ಆ ಯಶಸ್ಸನ್ನು ಸಾಧಿಸಬಹುದು ಎನ್ನತಕ್ಕ ವಿಶ್ವಾಸವನ್ನು ನಾನು ಈ ಸಮಯದಲ್ಲಿ ವ್ಯಕ್ತಪಡಿಸಲು ತಮ್ಮ ಮುಂದೆ ಇಚ್ಛಿಪಡುತ್ತೇನೆ. ಮತ್ತೊಂದು ಅಡಿಷನಲ್ ಇನ್‌ಫರ್ಮೇಶನ್ ಹೇಳಲು ನಾನು ಇಚ್ಛಿಪಡುತ್ತೇನೆ. ಮಹಾರಾಷ್ಟ್ರ ಸರ್ಕಾರ ಒಂದನ್ನು ಬಿಟ್ಟರೆ ಮಿಕ್ಕ ಎಲ್ಲಾ ರಾಜ್ಯಗಳ ಸರ್ಕಾರದ ವಾರ್ಷಿಕ ಸೈಜ್ ಏನು ಇದೆ, ಪ್ಲಾನ್ ಸೈಜು ಕರ್ನಾಟಕಕ್ಕಿಂತ ಎಲ್ಲವೂ ಕಡಿಮೆ ಆಗಿದೆಯೇ ಹೊರತು ಕರ್ನಾಟಕಕ್ಕಿಂತ ಹೆಚ್ಚಿನ ಪ್ಲಾನ್ ಸೈಜ್ ಇನ್ಯಾವ ರಾಜ್ಯದಲ್ಲೂ ಇಲ್ಲ. ಮಹಾರಾಷ್ಟ್ರವನ್ನು ಬಿಟ್ಟು. ಇದು ನಾವೆಲ್ಲಾ ಒಟ್ಟಾರೆ

ಹೇಳುವುದು. ನಮ್ಮ ಮಾನ್ಯ ಸದಸ್ಯರುಗಳು ತಮ್ಮ ಸಂತಸವನ್ನು ವ್ಯಕ್ತಪಡಿಸಿದರೆ, ಆದಕ್ಕೆ ಕಾರಣ ಏನು ಎಂದು ಹೇಳಿದರೆ ಈ ಒಂದು ಕೀರ್ತಿಗೆ ನೀವು ನಾವು ಭಾಜನರು. ಮೊದಲು ನಿಮ್ಮನ್ನು ಸೇರಿಸುತ್ತೇನೆ. ಆ ನಂತರ ನಮ್ಮನ್ನು ಸೇರಿಸಿಕೊಳ್ಳುತ್ತಿದ್ದೇವೆ. ನೀವು ನಾವು ಭಾಜನರಾಗಿದ್ದೇವೆ ಎನ್ನುವ ಸಂತೋಷಕ್ಕೋಸ್ಕರ ಅವರು ತಮ್ಮ ಸಂತೋಷವನ್ನು ವ್ಯಕ್ತಪಡಿಸುತ್ತಿದ್ದಾರೆ. ಇನ್ನು ಬ್ಯಾಕ್‌ಲಾಗ್ ಹುದ್ದೆಗಳ ಬಗ್ಗೆ ಈಗಾಗಲೇ ನಾವು ಹಲವಾರು ಸಾರಿ ಹೇಳಿದ್ದೇವೆ. ಇದು ಅಗತ್ಯವಾಗಿ ಆಗಬೇಕಾಗಿರತಕ್ಕ ಒಂದು ಸುಧಾರಣೆ. ಈಗಾಗಲೇ 12 ಸಾವಿರ ವೇಕೆನ್ಸಿಗಳನ್ನು ಒಟ್ಟಾರೆ ಡಿಪಾರ್ಟ್‌ಮೆಂಟ್‌ಗಳಲ್ಲಿ ನಾವು ಗುರುತಿಸಿದ್ದೇವೆ. ಆ 12 ಸಾವಿರ ವೇಕೆನ್ಸಿಗಳ ಜೊತೆ ಇನ್ನೂ ಕೆಲವು ಡಿಪಾರ್ಟ್‌ಮೆಂಟ್‌ನಿಂದ ವೇಕೆನ್ಸಿ ರಿಪೋರ್ಟ್ ಬರಲಿಕ್ಕೆ ಪ್ರಾರಂಭ ಆಗಿದೆ. ಒಟ್ಟಾರೆ ಈ ಸದನಕ್ಕೆ ಮತ್ತೊಮ್ಮೆ ನಾನು ಆಶ್ವಾಸನೆಯನ್ನು ಕೊಡುತ್ತಿದ್ದೇನೆ. ಡಿಸೆಂಬರ್ ಹೊತ್ತಿಗೆ ಈ ಬ್ಯಾಕ್‌ಲಾಗ್ ವೇಕೆನ್ಸಿಗಳನ್ನು ನಾವು ಭರ್ತಿ ಮಾಡುತ್ತೇವೆ ಎಂಬ ವಿಚಾರದಲ್ಲಿ ಬಹಳ ಗಂಭೀರವಾಗಿ ತೆಗೆದುಕೊಂಡಿದ್ದೇವೆ. ಆದಕ್ಕೆ ನಾವು ಪ್ರಯತ್ನಗಳನ್ನು ಮಾಡುತ್ತೇವೆ. ಪ್ರಯತ್ನಗಳನ್ನು ಮಾಡಿ ಆ ಪ್ರಯತ್ನದಲ್ಲಿ ನಾವು ಯಶಸ್ಸು ಪಡೆಯುತ್ತೇವೆ ಎನ್ನತಕ್ಕ ವಿಶ್ವಾಸ ಇದೆ. ಮನೆಗಳು, ರಸ್ತೆಗಳು ಇವುಗಳ ವಿಚಾರ. ರಸ್ತೆಯ ವಿಚಾರದಲ್ಲಿ ಕೆಲವರು ಹಣ ಖರ್ಚು ಆಗಲಿಲ್ಲವಲ್ಲಾ, ನಮಗೆ ಕಾಣುತ್ತಿಲ್ಲವಲ್ಲಾ ಎಂದು ನನ್ನನ್ನು ಪ್ರಶ್ನೆ ಮಾಡುತ್ತಾರೆ. ಆದರೆ ರಸ್ತೆಗಳು ನಿಮ್ಮ ಕಣ್ಣಿಗೆ ಕಾಣಲೇ ಬೇಕಾಗುತ್ತದೆ. ಈಗ ವಿಶ್ವ ಬ್ಯಾಂಕ್‌ನವರಿಂದ ನಾವು ಎರಡು ಸಾವಿರ ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಬಂದಿದ್ದೇವೆ. ಆ ವಿಶ್ವಬ್ಯಾಂಕಿನ ಎರಡು ಸಾವಿರ ಕೋಟಿ ರೂಪಾಯಿಗಳು ಯಾವ ರಸ್ತೆಗಳಿಗೆ ಖರ್ಚಾಗುತ್ತಿದೆ? ಅದರಲ್ಲಿ ನನಗೆ ಬ್ರೇಕ್ ಅಫ್ ಸಿಕ್ಕಿದೆ. ಆ ಬ್ರೇಕ್ ಅಫ್ ಪ್ರಕಾರ ನಾವು ಸಬ್‌ಸ್ಟ್ಯಾನ್ಸಿಯಲ್ ಅಮೌಂಟ್‌ನ್ನು ನಾವು ನಮ್ಮ ರಾಜ್ಯದ ಸಂಪೂರ್ಣ ಚಿತ್ರವನ್ನು ಗಮನದಲ್ಲಿಟ್ಟುಕೊಂಡು ಯಾವ ಭಾಗಗಳು ಹಿಂದುಳಿವೆ, ಆ ಭಾಗಗಳಿಗೆ ಹೆಚ್ಚು ಒತ್ತನ್ನು ಕೊಡಬೇಕು, ಅದಕ್ಕೆ ಹೆಚ್ಚು ಆದ್ಯತೆಯನ್ನು ಕೊಡಬೇಕು ಹಾಗೆಂದು ಹೇಳಿ ನಾವು ನಮ್ಮ ಪ್ರಯತ್ನಗಳನ್ನು ಮುಂದುವರಿಸಿದ್ದೇವೆ. ಅದರ ಪ್ರಕಾರ ಈ ಎರಡು ಸಾವಿರ ಕೋಟಿ ರೂ.ಗಳು ಏನು ವಿಶ್ವ ಬ್ಯಾಂಕಿನಿಂದ ತಂದಿದ್ದೇವೆ, ಅದರಲ್ಲಿ 1500 ಕೋಟಿ ರೂಪಾಯಿಗಳನ್ನು ಉತ್ತರ ಕರ್ನಾಟಕದ ಭಾಗದಲ್ಲಿ ನಾವು ಖರ್ಚು ಮಾಡುತ್ತಿದ್ದೇವೆ. ಕೇವಲ ದಕ್ಷಿಣ ಕರ್ನಾಟಕದಲ್ಲಿ 500 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದೇವೆ. ಇದಕ್ಕೆ ಚಾರಿತ್ರಿಕವಾದಂತಹ ಕಾರಣಗಳು ಇವೆ. ಆ ಚಾರಿತ್ರಿಕವಾದಂತಹ ಕಾರಣಗಳಿಗೋಸ್ಕರ ಈ ಸಿಂಹಪಾಲು ಇವತ್ತು ಉತ್ತರ ಕರ್ನಾಟಕ ಕೆಲವು ಭಾಗಗಳಿಗೆ ಸಿಕ್ಕತಕ್ಕಂಥದ್ದು ನಮಗೆ ವಿಶೇಷವಾದಂತಹ ಸಮಾಧಾನ ತಂದಿರತಕ್ಕಂಥಹ ವಿಚಾರ. ಅಸಮತೋಲನ ಇದೆ, ಅದರ ಬಗ್ಗೆ ಈ ಸದನ ಒಟ್ಟಾರೆ ಈ ಸರ್ಕಾರದ ಮೇಲೆ ತಂದ ಒತ್ತಾಯದ ಕಾರಣ ನಮ್ಮ ಆರ್ಥಿಕ ತಜ್ಞರಾದಂತಹ ಡಾ॥ ಡಿ.ಎಂ. ನಂಜುಂಡಪ್ಪನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿ ನಾವು ಏರ್ಪಾಡು ಮಾಡಿದ್ದೆವು. ಆ ಸಮಿತಿಯವರು ನಮಗೆ ಅತ್ಯಂತ ಕ್ರಿಯಾಶೀಲವಾಂದತಹ ಕೆಲವು ಶಿಫಾರಸ್ಸುಗಳನ್ನು ಮಾಡಿದ್ದಾರೆ. ಆ ಶಿಫಾರಸ್ಸುಗಳನ್ನು ಅಧ್ಯಯನ ಮಾಡಿ, ಆ ಶಿಫಾರಸ್ಸುಗಳ ಪ್ರಕಾರ ನಾವೇನು ಮುಂದಿನ ವರ್ಷಗಳಲ್ಲಿ ಹೇಗೆ ಮುಂದುವರಿಯಬೇಕು ಎನ್ನುವುದಕ್ಕೆ ಆ ಅಧ್ಯಯನ ಮಾಡುತ್ತಿರತಕ್ಕ ತಂಡ ನಮಗೆ ಸೂಕ್ತವಾದಂತಹ ಸಲಹೆಗಳನ್ನು ಕೊಡುತ್ತದೆ. ಆ ಸಲಹೆಗಳು ನಮಗೆ ಬಂದ ತಕ್ಷಣ ಸದನದ ಮುಂದೆ ಬರುತ್ತದೆ. ಆ ನಂತರ ನಾವು ತೆಗೆದುಕೊಳ್ಳತಕ್ಕಂಥಹ ಕ್ರಮಗಳ ಬಗ್ಗೆ ತಮಗೆ ಹೆಚ್ಚು ಪರಿಚಯವನ್ನು ಮಾಡಿ

ಕೊಡುತ್ತೇನೆ. ಕಳೆದ ವರ್ಷ ತೀವ್ರ ವಿದ್ಯುತ್ ಕ್ಷಾಮವನ್ನು ನಾವು ಎದುರಿಸಿದೆವು. ಶಿವಮೊಗ್ಗದಲ್ಲಿ ಮಳೆ ಇಲ್ಲ, ತೀರ್ಥಹಳ್ಳಿಯಲ್ಲಿ ಮಳೆ ಇಲ್ಲ. ಸಾಗರ, ಹೊಸನಗರ, ಇಲ್ಲೆಲ್ಲೂ ಮಳೆ ಇರಲಿಲ್ಲ. ಆದ್ದರಿಂದ ನಮ್ಮ ಜಲಾಶಯಗಳು ತುಂಬಲಿಲ್ಲ. ಜಲಾಶಯಗಳು ತುಂಬದೇ ಇದ್ದುದ್ದರಿಂದ ನಾವು ಹೆಚ್ಚು ಹಣ ಖರ್ಚು ಮಾಡಿ ಬೇರೆ ರಾಜ್ಯಗಳಿಂದ ಕೇಂದ್ರ ಸರ್ಕಾರದಿಂದ ನಾವು ವಿದ್ಯುತ್ತನ್ನು ಖರೀದಿ ಮಾಡಬೇಕಾದಂತಹ ಪರಿಸ್ಥಿತಿ ಉದ್ಭವ ಆಯಿತು. ವರುಣನ ಕೃಪೆ ಈ ವರ್ಷವಾದರೂ ನಮ್ಮ ಮೇಲೆ ಇರುತ್ತದೆ ಹಾಗೆ ಎಂದು ಆಶಿಸಿದ್ದೆವು. ಆದರೆ ಇದುವರೆಗೂ ಕೂಡ ಅಂತಹ ಕೃಪೆ ನಮಗೆ ಕಾಣಲಿಲ್ಲ. ಆದ್ದರಿಂದ ಈ ವರ್ಷವೂ ಕೂಡ ಮತ್ತೆ ಅಂಥಹದೇ ಧಾರುಣವಾದಂತಹ ಪರಿಸ್ಥಿತಿ ಉದ್ಭವ ಆಗಬಹುದು ಎನ್ನುವ ಕಾರಣ ನಾವು ಕೆಲವು ಸೂಕ್ತ ಮುಂಜಾಗ್ರತಾ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕಾಗಿದೆ. ಮಾನ್ಯ ಹಲವಾರು ಸದಸ್ಯರುಗಳು ಗುಣ ಮಟ್ಟದ ವಿದ್ಯುತ್ ಮತ್ತು ಆ ವಿದ್ಯುತ್ ದರಗಳು ಇವುಗಳ ಬಗ್ಗೆ ಈಗಾಗಲೇ ಸಾಕಾದಷ್ಟು ಚರ್ಚೆ ಮಾಡಿದರು. ಆ ಚರ್ಚೆ ಅವ್ಯಾಹತವಾಗಿ ನಿರಂತರವಾಗಿ ನಡೆಯುವಂತಹ ಚರ್ಚೆ. ಮಾನ್ಯ ಪ್ರಧಾನ ಮಂತ್ರಿಯವರ ಭಾಷೆಯಲ್ಲಿಯೇ ಹೇಳಬಹುದಾದರೆ ನಮ್ಮ ದೇಶ ಎದುರಿಸುತ್ತಿರತಕ್ಕಂಥಹ ಅತ್ಯಂತ ತೀವ್ರವಾದಂತಹ ಸಮಸ್ಯೆ ಯಾವುದಾದರೂ ಇದ್ದರೆ, ಅದಕ್ಕೆ ನಾವು ಆದ್ಯತೆಯನ್ನು ಕೊಡಬೇಕೆಂದು ಕೇಳಿದರೆ ಅದು ವಿದ್ಯುತ್ ಕ್ಷೇತ್ರ ಹಾಗೆ ಎಂದು ಹೇಳಿ ಮಾನ್ಯ ಪ್ರಧಾನಮಂತ್ರಿಗಳು ಮುಖ್ಯಮಂತ್ರಿಗಳ ಸಮ್ಮೇಳನದಲ್ಲಿ ಹೇಳಿದಂತಹ ಮಾತುಗಳು. ಆದ್ದರಿಂದ ಈ ತೀವ್ರ ವಿದ್ಯುತ್ ಕ್ಷೇತ್ರದಲ್ಲಿ ಉಂಟಾಗಿರತಕ್ಕಂತಹ ಏನು ಏರಿಳಿತಗಳು ಇದ್ದಾವೆ, ಅದನ್ನು ನಮ್ಮ ರಾಜ್ಯದ ವಿದ್ಯುತ್ ಬೋರ್ಡ್ ಕೆಪಿಟಿಸಿಎಲ್ ಏನು ಇದೆ, ಆ ಕೆಪಿಟಿಸಿಎಲ್‌ನ ಸ್ವಾಸ್ಥವನ್ನು ನಾವು ಉಳಿಸಿಕೊಂಡು ಮುಂದುವರಿಸಿಕೊಂಡು ಒಂದಗೆ ಮಾತ್ರ ಕರ್ನಾಟಕ ರಾಜ್ಯಕ್ಕೆ ಬೆಳಕು ಸಿಗುತ್ತದೆ. ಇಲ್ಲದೇ ಹೋದರೆ ನಾವೆಲ್ಲರೂ ಕೂಡ ಕತ್ತಲಲ್ಲೇ ವ್ಯವಹಾರ ಮಾಡಬೇಕಾದಂತಹ ದಿನಗಳು ಬಹಳ ದೂರ ಉಳಿಯುವುದಿಲ್ಲ. ಒಂದು ಕಡೆ ಪ್ರಕೃತಿ ನಮ್ಮ ಜೊತೆ ಸಹಕಾರ ಮಾಡುತ್ತಿಲ್ಲ. ಇನ್ನೊಂದು ಕಡೆ ನಮ್ಮ ಅವಶ್ಯಕತೆಗಳನ್ನು ಗಮನಿಸಿ ಪ್ರತಿ ಒಂದು ಮೆಗಾವ್ಯಾಟಿಗೂ ನಾವು ಎಷ್ಟೊಂದು ಹಣವನ್ನು ಖರ್ಚು ಮಾಡುತ್ತಿದ್ದೇವೆ? ಅಷ್ಟನ್ನಾದರೂ ಕೂಡ ಪೂರೈಸಿಕೊಡಲಿಕ್ಕೆ ನಮ್ಮ ಕನ್ಸೂಮರ್ಸ್ ಮುಂದೆ ಬರದೇ ಹೋದರೆ ಬಹಳ ತೀವ್ರತರವಾದಂತಹ ಸಮಸ್ಯೆಗಳನ್ನು ನಾವು ಎದುರಿಸಬೇಕಾಗುತ್ತದೆ. ಮಾನ್ಯ ರಾಮದಾಸ್‌ರವರು ಭಾಷಣ ಮಾಡತಕ್ಕಂಥ ಕಾಲದಲ್ಲಿ ಆಗ ನಾನು ಇದ್ದೆ; ತಣ್ಣೀರ್‌ಬಾವಿ ವಿಚಾರವಾಗಿ ಹೇಳುತ್ತಿದ್ದರು, ನೀವು ಹೇಳತಕ್ಕಂಥದ್ದಕ್ಕೆ ನನ್ನ ಪೊಜಿಶನ್ ಕೂಡ ಅದೆ. ಪವರ್ ಪರ್ಚೇಸ್ ಅಗ್ರಿಮೆಂಟ್ ನಾವು ಬರುವಷ್ಟರಲ್ಲಿ ಆಗಿ ಹೋಗಿತ್ತು. ಅದನ್ನು ರಿವೈಸ್ ಮಾಡಬೇಕೆಂದು ನಾವು ಮಾಡಿದ ಪ್ರಯತ್ನದಿಂದಲೇ ಅವರು ಹೈಕೋರ್ಟಿಗೆ ಹೋದರು. ಹೈಕೋರ್ಟಿನಿಂದ ಒಂದು ಸೂಚನೆ ಬಂತು ಹಾಗೂ ನಿರ್ಧಾರ ಬಂತು, ನನ್ನ ಮುಂದೆ ಇದ್ದ ಎರಡೇ ಎರಡು ಆಪ್‌ಷನ್, ಒಂದು ಹೈಕೋರ್ಟ್ ಆಜ್ಞೆಯನ್ನು ಪಾಲಿಸತಕ್ಕಂಥದ್ದು. ಇಲದೇ ಹೋದರೆ ಲಿಟಿಗೇಷನ್ ಮಾಡಿಕೊಂಡು ಮುಂದುವರೆಯ ಬೇಕಾಗಿತ್ತು. ಕೇವಲ ನಮ್ಮ ಅಡ್ವೊಕೇಟ್ ಜನರಲ್ ಒಬ್ಬರನ್ನೇ ಅಲ್ಲ, ಇನ್ನೂ ಎರಡು ಇಂಡಿಪೆಂಡೆಂಟ್ಸ್ ಜ್ಯುಡಿಷಿಯಲ್ ಓಪಿನಿಯನ್ ನಾವು ತೆಗೆದುಕೊಂಡೆವು; ಒಂದು ಅಗ್ರಿಮೆಂಟ್ ಆಗಿದೆ, ಒಂದು ಪವರ್ ಪರ್ಚೇಸ್ ಅಗ್ರಿಮೆಂಟ್ ಆಗಿದೆ, ಅದನ್ನು ರಿವೈಸ್ ಮಾಡಬೇಕಾಗಿದ್ದರೆ ಯುನಿಲ್ಯಾಟರಲ್ಲಿ ಈ ರಾಜ್ಯ ಸರ್ಕಾರಕ್ಕೆ ಮಾಡತತಕ್ಕಂಥ ವಿದ್ಯುತ್ ಮಂಡಲಿಗೆ ಮಾಡತತಕ್ಕಂಥ ಅಧಿಕಾರ ಇದೆಯೇ

ಇಲ್ಲವೇ ಎನ್ನುವುದರ ಬಗ್ಗೆ ನಮಗೆ ಸಿಕ್ಕಂಥ ಅಡ್ವೈಸ್ ಏನು ಅಂದರೆ ಇದರಿಂದ ಈ ಕೇಸ್‌ಗೆ ಏನೂ ಪ್ರಯೋಜನವಾಗುವುದಿಲ್ಲ ಎಂದು ನನ್ನ ಮುಂದೆ ಇರುವಂಥ ಪ್ರಶ್ನೆಗೆ ಲಿಟಿಗೇಷನ್ ಮಾಡಿಕೊಂಡು ಅವನು ವಿದ್ಯುತ್ ಕೊಡುವುದಿಲ್ಲವೆಂದಾಗ ನಾನು ಸುಪ್ರೀಂಕೋರ್ಟಿಗೆ ಹೋಗತಕ್ಕಂಥದ್ದು ಮತ್ತು ರೆಗ್ಯುಲೇಟರಿ ಕಮಿಷನ್ ಇದೆ, ಅದರ ಮುಂದೆ ನಾವು ಪುನಃ ಅಪೀಲ್ ಹಾಕಿದ್ದೇವೆ. ನಮ್ಮ ಅಪೀಲ್ ಏನೆಂದರೆ, ಅವರು ಎಸ್ಕ್ರೋ ಅಕೌಂಟ್ ಅನ್ನು ಏನು ಆಪರೇಟ್ ಮಾಡುತ್ತಿದ್ದಾರೆ, ಇದನ್ನು ನೀವು ನಿಲ್ಲಿಸಬೇಕೆಂದು ನಾವು ಅಪೀಲ್ ಹಾಕಿದ್ದೇವೆ. ಆದ್ದರಿಂದ ಈ ಎಲ್ಲಾ ವಿಚಾರಗಳು ಕೂಡ ಪಾರದರ್ಶಕವಾಗಿಯೇ ನಡೆದಿರತಕ್ಕಂಥದ್ದು. ನಾವು ಕೆಇಆರ್‌ಸಿಗೆ ಏನು ಮನವಿಯನ್ನು ಮಾಡಿದರೂ ಕೂಡ ಯಾರು ಬೇಕಾದರೂ ಅದರ ಕಾಪಿಯನ್ನು ತೆಗೆದುಕೊಳ್ಳಬಹುದು. ಆದ್ದರಿಂದ ಇದರಲ್ಲಿ ಏನೂ ದುರುದ್ದೇಶ ಇರಲಿಲ್ಲ, ಇದರಲ್ಲಿ ಸನ್ನಿವೇಶ ಹಾಗೂ ಸಂದರ್ಭಗಳು ಏನು ಬಂದುವು ಎಂದರೆ, ಆ ಒತ್ತಡಗಳ ಕಾರಣ ಕೆಲವೊಂದು ಸಲ ಕೆಲವು ರಾಜ್ಯಗಳು ಇಂತಹ ಒಂದು ಸುಳಿಗೆ ಸಿಕ್ಕಿಹಾಕಿಕೊಂಡು ಬಿಡುತ್ತವೆ. ಮಹಾರಾಷ್ಟ್ರ ಸರ್ಕಾರ ಎನ್ರಾನ್ ಸುಳಿಗೆ ಸಿಕ್ಕಿ ಹಾಕಿಕೊಂಡಿತೋ ಹಾಗೆಯೇ ನಾನು ಕೋಜೆಂಟ್ರಿಕ್ಸ್ ಸುಳಿಗೆ ಸಿಕ್ಕಿಹಾಕಿಕೊಳ್ಳಲಿಲ್ಲ ಎನ್ನತಕ್ಕಂಥದ್ದು ಒಂದು ಸಮಾಧಾನದ ವಿಚಾರ. ಏಕೆಂದರೆ ಕೋಜೆಂಟ್ರಿಕ್ಸ್‌ದವರು ಹೊರಟು ಹೋದರು, ಕರ್ನಾಟಕದಲ್ಲಿ ವಿದ್ಯುತ್ ಉತ್ಪಾದನೆಯಾಗುವುದಿಲ್ಲ ಹಾಗೆ ಟೀಕೆ ಮಾಡಿದಂಥ ಜನ ಇದ್ದಾರೆ. ಮಾನ್ಯ ಸದಸ್ಯರುಗಳೂ ಆ ವಿಚಾರದಲ್ಲಿ ಬಹುಶಃ ತಮ್ಮದೇ ಆದ ಒಂದು ತೀರ್ಮಾನಕ್ಕೆ ಅವರು ಬಂದಿದ್ದರು. ಕೋಜೆಂಟ್ರಿಕ್ಸ್‌ನ್ನು ಏಕೆ ಕಳುಹಿಸಿದರು ಎಂದು ಮಿಕ್ಕವರ ರಾಜ್ಯದವರ ಅನುಭವದಿಂದ ಕೊಂಚ ಮಟ್ಟಿಗೆ ನಾವು ಬುದ್ಧಿವಂತರಾದೆವು. ಆದ್ದರಿಂದ ನಮಗೆ ಬೇಕಾದಂಥ ವಿದ್ಯುತ್‌ನ್ನು ನಾವೇ ಮಾಡುತ್ತೇವೆ. ಆದರೆ ಪವರ್ ಕಾಸ್ಟ್ ಎಫೆಕ್ಟಿವ್, ಜನರೇಶನ್ ಆಫ್ ಪವರ್, ಕಾಸ್ಟ್ ಎಫೆಕ್ಟಿವ್ ಬೈಯಿಂಗ್ ಆಫ್ ಪವರ್, ಇವೆರಡನ್ನು ನಾವು ಪ್ರಧಾನವಾದಂಥ ತತ್ವಗಳನ್ನಾಗಿ ಮಾಡಿಕೊಂಡು ಈ ವಿದ್ಯುತ್ ವಿತರಣೆ ವಿಚಾರದಲ್ಲಿ ನಾವು ಮುಂದುವರೆಯಬೇಕಾಗಿದೆ. ನಾವು ಹಾಕಿರತಕ್ಕಂಥ ವಿಚಾರಣೆ ಎಸ್ಕ್ರೋ ಬಗ್ಗೆ ದಿ 1-8-2002 ರಂದು ಕೆಇಆರ್‌ಸಿ ಮುಂದೆ ಬರುತ್ತದೆ. ಅವರು ನಮಗೆ ಏನು ನಿರ್ದೇಶನವನ್ನು ಕೊಡುತ್ತಾರೆ, ಅದರ ಆಧಾರದ ಮೇಲೆ ನಾವು ಮುಂದುವರೆಯುತ್ತೇವೆಂದು ಹೇಳುತ್ತಿದ್ದೇನೆ. ಶಾಲಾ ಶಿಕ್ಷಕರನ್ನು ನೇಮಕ ಮಾಡತಕ್ಕಂಥ ವಿಚಾರ, 15 ಸಾವಿರ ಶಾಲಾ ಮಾಸ್ತರ್‌ಗಳನ್ನು ನೇಮಕ ಮಾಡಬೇಕೆಂದು ಈ ಸದನದ ಎಲ್ಲಾ ಭಾಗದಿಂದಲೂ ಕೂಡ ಬಂದಿದ್ದಂಥ ಒತ್ತಾಯವನ್ನು ನಾವು ಗಮನಿಸಿ ಅದಕ್ಕೆ ಪೂರ್ವಭಾವಿಯಾಗಿ ನಾವು ಕಾರ್ಯಗಳನ್ನು ಪ್ರಾರಂಭ ಮಾಡಿದ ತಕ್ಷಣ ಕೆಎಟಿಯವರು ಕಳೆದ 8 ತಿಂಗಳ ಕೆಳಗಡೆ ಅದಕ್ಕೆ ಒಂದು ಸ್ಟೇ ಆರ್ಡರನ್ನು ಕೊಟ್ಟರು. ಇವತ್ತು ಅದೃಷ್ಟವಶಾತ್ ಆ ಸ್ಟೇ ಆರ್ಡರ್ ಖಲ್ಲಾ ಆಗಿದೆ, ಇವತ್ತು ಒಂದು ಸಂತೋಷದ ವಿಚಾರವೇನೆಂದರೆ, ನಾಳೆ ಸಾಯಂಕಾಲದ ಸೂರ್ಯ ಮುಳುಗುವುದರೊಳಗೆ 11250 ಟೀಚರ್‌ಗೆ ಏನು ಲೆಟರ್ ಆಫ್ ಅಪಾಯಿಂಟ್‌ಮೆಂಟ್ ಇದೆ, ಅದು ವಿತರಣೆಯಾಗುತ್ತದೆ. ಇನ್ನುಳಿದ 3750 ಜನ ಶಿಕ್ಷಕರಿಗೆ ಇನ್ನು ಮೂರು ತಿಂಗಳಲ್ಲಿ ಅವರಿಗೆ ಅಪಾಯಿಂಟ್‌ಮೆಂಟ್ ಆರ್ಡರ್‌ನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ ಎನ್ನುವ ವಿಚಾರವನ್ನು ನಾನು ಈ ಸಮಯದಲ್ಲಿ ತಮಗೆ ತಿಳಿಸಲು ಇಚ್ಛೆಪಡುತ್ತೇನೆ. ಹಲವಾರು ವಿಚಾರಗಳ ಬಗ್ಗೆ ಮಾನ್ಯ ಸದಸ್ಯರುಗಳು ಆರೋಗ್ಯದ ವಿಚಾರದಲ್ಲಿ, ಕೃಷಿ ಮತ್ತು ತೋಟಗಾರಿಕೆ ವಿಚಾರದಲ್ಲಿ, ನಗರಾಭಿವೃದ್ಧಿ ವಿಚಾರದಲ್ಲಿ ಹಾಗೂ ಸಾರಿಗೆ ವಿಚಾರದಲ್ಲಿ ತಮ್ಮ ಟೀಕೆಯನ್ನು

ಮಾಡಿರುತ್ತೀರಿ. ತಮ್ಮ ಸಲಹೆಗಳನ್ನು ಕೊಟ್ಟಿದ್ದೀರಿ, ಆ ಸಲಹೆಗಳೆಲ್ಲವನ್ನೂ ಕೂಡ ನಾವು ಗಮನದಲ್ಲಿಟ್ಟುಕೊಂಡು ಇವತ್ತು ಬಜೆಟ್ ಅಧಿವೇಶನದ ಕೊನೆಯ ಹಂತದಲ್ಲಿ ನಾವಿದ್ದೇವೆ. ಮಾನ್ಯ ವಿರೋಧಪಕ್ಷದ ನಾಯಕರಿಗೆ, ವಿರೋಧ ಪಕ್ಷದ ಇತರ ಮುಖಂಡರುಗಳಿಗೆ ನಾನು ಆಭಾರಿಯಾಗಿದ್ದೇನೆ. ಏಕೆಂದರೆ ಚರ್ಚೆ ನಿರೀಕ್ಷಿತವಾದಂಥ ದಿಕ್ಕಿಗೆ ಹೋದರೂ ಕೂಡ ಚರ್ಚೆ ನಡೆಯಿತು. ನಿಮಗೆ ತೋಚಿತಂಥ ಭಾವನೆಗಳಿಗೆ ನೀವು ರೂಪು ಕೊಟ್ಟಿದ್ದೀರಿ, ನಮಗೆ ತೋಚಿದಂಥ ಭಾವನೆಗಳಿಗೆ ನಾವು ರೂಪು ಕೊಡಲಿಕ್ಕೆ ಅವಕಾಶವನ್ನು ಮಾಡಿಕೊಟ್ಟಿದ್ದೀರಿ, ಅದೇ ಪ್ರಜಾಸತೆ ಪ್ರಜಾತಂತ್ರ ಅಥವಾ ಜನತಂತ್ರ ಎನ್ನತಕ್ಕಂಥದ್ದಾಗಿದೆ. ಮುಂದೆ ಕೂಡ ತಾವು ತೋರಿದಂಥ ಸೌಹಾರ್ದತೆ ಮತ್ತು ತಾಳ್ಮೆ ತಾವು ಉಪಯೋಗಿಸಿದ ಭಾಷೆ ಮತ್ತು ಇನ್ನಿತರ ವಿಚಾರಗಳಲ್ಲಿ ತಮ್ಮ ಅಪಾರವಾದಂಥ ರಿಸ್ಪೆಂಟ್‌ಗೋಸ್ಕರ್ ತಮಗೆಲ್ಲರಿಗೂ ನಾನು ಆಭಾರಿಯಾಗಿದ್ದೇನೆ. ಮುಂದಿನ ದಿನಗಳಲ್ಲಿ ಕಷ್ಟದಿನಗಳು ಇವೆ, ಸುಲಭವಾದ ದಿನಗಳು ನನ್ನ ಕಣ್ಣಿಗೆ ಕಾಣುತ್ತಿಲ್ಲ, ಈ ಕಷ್ಟದ ದಿನಗಳನ್ನು ಭರಿಸತಕ್ಕಂಥ ಶಕ್ತಿ ನಮಗೆ ಹಾಗೂ ನಿಮಗೆ ಸಿಗಲಿ ಎಂದು ಮಾನ್ಯ ಅಧ್ಯಕ್ಷರಿಗೆ ಇಷ್ಟು ಹೊತ್ತಿನವರೆಗೆ ತಾವು ಹಾಗೂ ಮಾನ್ಯ ಸಭೆ ನನ್ನ ಈ ನಾಲ್ಕು ಮಾತುಗಳನ್ನು ಕೇಳಿದ್ದಕ್ಕೋಸ್ಕರ ನಮಸ್ಕಾರಗಳನ್ನು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಹೋಮ್ ಮಿನಿಸ್ಟರ್ ಹಾಗೂ ಕೃಷಿ ಸಚಿವರು ವಿಷಯಗಳು ಹಾಗೆಯೆ ಉಳಿದವು ಅವರು ಇಲ್ಲಿಯೇ ಇದ್ದಾರೆ ಏನಾದರೂ ಉತ್ತರಗಳನ್ನು ಕೊಡುತ್ತಾರೆಯೋ ಹೇಗೆ? ಕೆಲವು ವಿಷಯಗಳ ಬಗ್ಗೆ ಕ್ಲಾರಿಫೈ ಆಗಿಲ್ಲ.

ಅಧ್ಯಕ್ಷರು : ಹೋಮ್ ಮಿನಿಸ್ಟರು ಆಗಲೇ ಹೇಳಿದರಲ್ಲಾ, ಕೆಲವು ಪ್ರಶ್ನೆಗಳನ್ನು ಕೇಳಿದಾಗ ಹೇಳಿದರು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಮಾನ್ಯ ಸಿಂಧ್ಯಾರವರು ಎಲ್‌ಒಸಿ ಬಗ್ಗೆ ಒಂದು ಮಾತು ಹೇಳಿದರು ಅದರ ಬಗ್ಗೆ ನಾನು ಸ್ವಾಗತಿಸುತ್ತೇನೆ. ಏಕೆಂದರೆ ಎಲ್‌ಒಸಿ ಎನ್ನತಕ್ಕಂಥದ್ದು ಪ್ರತಿವರ್ಷ ನಡೆದುಕೊಂಡು ಬರತಕ್ಕಂಥ ಒಂದು ವ್ಯವಹಾರ, 1998-99ನೇ ಇಸ್ವಿಯಲ್ಲಿ ನಮ್ಮ ಮೇಜರ್ ಇರಿಗೇಷನ್, ಪಿಡಬ್ಲ್ಯೂಡಿ, ಮೈನರ್ ಇರಿಗೇಷನ್ ಈ ಭಾಗದಲ್ಲಿ ನಾವು ಜಾಸ್ತಿ ಎಲ್‌ಒಸಿ ಗಳನ್ನು ಉಳಿಸಿಕೊಂಡಿರುವಂಥದ್ದು, ಸುಮಾರು 400 ಕೋಟಿ ರೂ.ಗಳು ಎಂದು ಅಂಕಿ-ಅಂಶಗಳನ್ನು ಕೊಟ್ಟರು. ಆ ಅಂಕಿ-ಅಂಶಗಳಿಗೆ ಆಧಾರ ಏನು ಎನ್ನತಕ್ಕಂಥದ್ದು ನನಗೆ ಅರ್ಥವಾಗುತ್ತಿಲ್ಲ. ನನಗೆ ಸಿಕ್ಕಿರತಕ್ಕ ಅಂಕಿ-ಅಂಶಗಳಿಗೆ ಪ್ರಕಾರ ದಿ 1-4-2002ರಲ್ಲಿ 617 ಕೋಟಿ ರೂ.ಗಳು ಉಳಿಕೆ ಇದ್ದುದ್ದು ಜುಲೈ 2002ರವರೆಗೆ 155 ಕೋಟಿ ರೂ.ಗಳನ್ನು ರಿಲೀಸ್ ಮಾಡಿದ್ದರಿಂದ ಈಗ 617 ಕೋಟಿ ರೂ.ನಲ್ಲಿ 155 ಕೋಟಿ ಕೋಟಿ ರೂ. ಕಳೆದರೆ ಇಷ್ಟು ಎಲ್‌ಓಸಿ ಇನ್ನೂ ಬಿಡುಗಡೆ ಮಾಡಬೇಕೆಂಬ ಬಗ್ಗೆ ಸೂಚನೆ ಸಿಕ್ಕುತ್ತದೆ. ನಮ್ಮ ಉದ್ದೇಶವೇನೆಂದರೆ, ಈ ಎಲ್‌ಒಸಿ ಏನು ಪೆಂಡಿಂಗ್ ಇವೆ, ಇದರಿಂದ ಬಹಳ ಜನರಿಗೆ ಬಹಳ ತೊಂದರೆಯಾಗಿದೆ ಎನ್ನುವುದು, ಅದರಲ್ಲಿ ಗುತ್ತಿಗೆದಾರರಿಗೆ ತೊಂದರೆಯಾಗಿದೆ ಎನ್ನುವುದನ್ನು ಸರ್ಕಾರ ಮನಗಂಡಿದ್ದರಿಂದಲೇ ಜುಲೈ ಒಂದೇ ತಿಂಗಳಲ್ಲಿಯೇ ನಾವು 155 ಕೋಟಿ ರೂ.ಗಳನ್ನು ನಾವು ಬಿಡುಗಡೆ ಮಾಡಿದ್ದೇವೆ. ಮುಂದಿನ

ತಿಂಗಳುಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಈ ಹಣವನ್ನು ಬಿಡುಗಡೆ ಮಾಡುವುದರ ಮೂಲಕ ಈ 617 ಕೋಟಿ ರೂ.ಗಳ ಎಲ್‌ಒಸಿ ನಾವು ಏನು ಕೊಡಬೇಕು ಅದನ್ನು ನಾವು ಕೊಟ್ಟು ಪ್ರತಿ ತಿಂಗಳು ಕಡಿಮೆ ಮಾಡಲಿಕ್ಕೆ ನಾವು ನಮ್ಮ ಪ್ರಯತ್ನಗಳನ್ನು ಮುಂದುವರೆಸುತ್ತೇವೆ ಎನ್ನತಕ್ಕಂಥ ಮಾತನ್ನು ಹೇಳಲು ಇಷ್ಟ ಪಡುತ್ತೇನೆ.

7.20 ಪಿಎಂ

ಕೆಲವರು Indian Association of Amusement Parks, Industries for reduction of entertainment tax ಅವರಿಂದ ನಮಗೆ ಒಂದು ನಿವೇದನೆ ಬಂದಿತ್ತು. ಈ ಬಾಬಿನಲ್ಲಿ ಕೇವಲ 26 ಲಕ್ಷ ರೂಪಾಯಿಗಳೋ, 46 ಲಕ್ಷ ರೂಪಾಯಿಗಳೋ ನಮಗೆ ಸಿಗುತ್ತಿತ್ತು. ಆ 46 ಲಕ್ಷ ರೂಪಾಯಿಗಳನ್ನು ನಾವು ಪಡೆಯಬೇಕಾಗಿದ್ದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ಈ exemption limit ಏನು 100 ರೂಪಾಯಿಗಳಿಗೆ ನಾವು ಸೀಮಿತ ಮಾಡಿದ್ದೆವೋ ಅದನ್ನು 250 ರೂಪಾಯಿಗಳಿಗೆ ಹೆಚ್ಚು ಮಾಡಬೇಕೆಂದು ಇದ್ದೇವೆ. ಟೀ ನಲ್ಲಿ ಬ್ರಾಂಡೆಡ್ ಟೀ ಮತ್ತು ನಾನ್ ಬ್ರಾಂಡೆಡ್ ಟೀ, ಇವೆರಡಕ್ಕೂ ಒಂದು distinction ಮಾಡಿ, artifical distinction ಮಾಡಿ ಶೇಕಡ 12ರಷ್ಟು ಏನು ನಾವು ನಮೂದು ಮಾಡಿದ್ದೆವೋ ಆ ಶೇಕಡ 12ರಷ್ಟಕ್ಕೆ ಬದಲಾಗಿ ಬ್ರಾಂಡೆಡ್ ಅಂಡ್ ನಾನ್ ಬ್ರಾಂಡೆಡ್ ಎಲ್ಲಾದ್ದಕ್ಕೂ ಒಂದೇ ರೀತಿಯ tax exemption ಮಾಡಬೇಕು. Footwear manufacturers and dealer's Association ನವರು ಒಂದು ನಿವೇದನೆಯನ್ನು ಮಾಡಿಕೊಂಡಿದ್ದರು. ಆ ನಿವೇದನೆ ಪ್ರಕಾರ 100 ರೂಪಾಯಿಗಳಿಗೆ ಕೆಳಗೆ ಇರತಕ್ಕಂಥ ಪ್ರತಿಯೊಂದಕ್ಕೂ ಕೂಡ ಸೇಲ್ಸ್ ಟ್ಯಾಕ್ಸ್ ಅನ್ನು ಹಾಕದೇ ಮನ್ನಾ ಮಾಡಲಾಗಿದೆ. 100 ರೂಪಾಯಿಗಳ ಕೆಳಗೆ ಯಾವ ಚಪ್ಪಲಿ, ಶೂಸ್ ಇರುತ್ತದೋ, ಅದಕ್ಕೆ sales tax exemption ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಪೆಪ್ಪರ್ ಮತ್ತು ಕಾರ್ಡ್‌ಮಮ್‌ಗೆ ಶೇಕಡ 8ರಷ್ಟು ತೆರಿಗೆ ಎಂದು ನನ್ನ ಮುಂಗಡ ಪತ್ರದಲ್ಲಿ ನಮೂದು ಆಗಿತ್ತು. ಅದನ್ನು ಶೇಕಡ 4ರಷ್ಟಕ್ಕೆ ಇಳಿಸಲಿಕ್ಕೆ ನಾನು ಸದನದ ಅಪ್ಪಣೆಯನ್ನು ಕೇಳುತ್ತಿದ್ದೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನದೊಂದು ಮನವಿ ಇದೆ. ಪಶು ಆಹಾರದ ಮೇಲೆ ಸೇಲ್ಸ್ ಟ್ಯಾಕ್ಸ್ ಶೇಕಡ 2ರಷ್ಟು ಮತ್ತು ಟಿ.ಓ.ಟಿ. ಶೇಕಡ 3ರಷ್ಟು ಇದೆ. ಹೀಗೆ ಒಟ್ಟಾರೆಯಾಗಿ ಪಶು ಆಹಾರದ ಮೇಲೆ ಶೇಕಡ 5ರಷ್ಟು ತೆರಿಗೆ ಇದೆ. ಇದರಿಂದಾಗಿ ಪಶು ಆಹಾರದ ಬೆಲೆ ಜಾಸ್ತಿಯಾಗಿದೆ. ಟಿ.ಓ.ಟಿ. ಪಶು ಆಹಾರದ ಮೇಲೆ ಎರಡು ಭಾರಿ ಬೀಳುತ್ತಿದೆ. ದಯವಿಟ್ಟು ಇದನ್ನು ಮನ್ನಾ ಮಾಡಬೇಕು.

ಶ್ರೀ ಎಸ್.ಎಂ. ಕೃಷ್ಣ : ಈಗ ಪಶು ಆಹಾರದ ಮೇಲೆ ಟರ್ನ್ ಓವರ್ ಟ್ಯಾಕ್ಸ್ ಹಾಕಿಲ್ಲ.

ಶ್ರೀ ಬಿ.ಎನ್. ಬಚ್ಚೇಗೌಡ : ಹಾಗಿದ್ದರೆ ಸರಿ ಸ್ವಾಮಿ.

ಶ್ರೀ ಎಸ್.ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಕೋಟಿ ಮೇಲೆ ಹೇಳಿಕೊಳ್ಳುತ್ತಾ ಹೋದರು. ಉದಾಹರಣೆಗಾಗಿ, ನಾನು ಎಲ್ಲಾ ಹೇಳಲಿಕ್ಕೆ ಹೋಗುವುದಿಲ್ಲ, ಅದಕ್ಕೆ ವೇಳೆ ಇಲ್ಲ. ಗ್ರಾಮೀಣಾಭಿವೃದ್ಧಿ ನಾನು ಮಾತನಾಡುವಾಗ ಹೇಳಿದ್ದೆ, ವರ್ಷೇ ವರ್ಷೇ ತಾವು ಕಡಿಮೆ ಮಾಡಿಕೊಳ್ಳುತ್ತಾ ಹೊರಟಿದ್ದೀರಿ. ಇದ್ದ ದುಡ್ಡನ್ನೂ ಸಂಪೂರ್ಣವಾಗಿ ಬಿಡುಗಡೆ ಮಾಡಿಲ್ಲ. ಕೇಂದ್ರ ಸರ್ಕಾರದಿಂದ ಬರತಕ್ಕಂಥ ದುಡ್ಡನ್ನೆಲ್ಲಾ ತಾವು ತೆಗೆದುಕೊಂಡಿಲ್ಲ. ಅದಕ್ಕೆ

ಕಾರಣವೇನು ಎಂದು. ಉದಾಹರಣೆಗಾಗಿ, ಹಿಂದೆ ಅದು ಮುರೂವರೆ ಇದ್ದುದ್ದು, ನಮ್ಮ ಕಾಲಕ್ಕೆ ಅದು ಯೋಜನೆಯಲ್ಲಿ ನಾಲ್ಕು ಇತ್ತು, ತಾವು ಇಲ್ಲೇನು ವಿಭಾಗವಾರು ಯೋಜನಾ ಹಂಚಿಕೆಯನ್ನು ಮಾಡಿದ್ದೀರಿ, ಇಲ್ಲಿ 2.74 ಮಾಡುತ್ತಿದ್ದೀರಿ. 4 ಎಂದು ಹೇಳಿಕೊಳ್ಳುತ್ತಾ ಬಂದಿದ್ದೀರಿ. ತಮ್ಮ ಅವಧಿಯಲ್ಲಿ ಇಳಿಸಿಕೊಳ್ಳುತ್ತಾ ಬಂದಿದ್ದೀರಿ. ಅಂಕಿ ಕೋಟಿಯಲ್ಲಿ ಲೆಕ್ಕ ಆಗಿರಬಹುದು, ಆದರೆ ಯೋಜನೆಯನ್ನು ಯಾವ ಪ್ರಕಾರ ಏರಿಸಿದ್ದೀರೋ ಆ ಪ್ರಕಾರ ಗ್ರಾಮೀಣಾಭಿವೃದ್ಧಿಗೆ ಹೆಚ್ಚು ಹಣ ತಾವು ಕೊಟ್ಟಿಲ್ಲ. ಅನಂತರ ನಿಮ್ಮ ಪ್ರಕಾರವೇ ಸುಮಾರು, ಇವತ್ತೇನೂ ಕಷ್ಟ ಕಾಣುವುದಿಲ್ಲ, ಇನ್ನೂ ಸುಮಾರು 2-3 ವರ್ಷಗಳ ಕಾಲ ನಡೆಯಬಹುದು. ತಾವೇ ಕೊಟ್ಟಂತಹ ಮಾಹಿತಿ ಪ್ರಕಾರ 2005ನೇ ಇಸವಿಗೆ ಈ ಸಾಲ 54,000 ಕೋಟಿ ರೂಪಾಯಿಗಳಾಗುತ್ತದೆ. ತಾವೇ ನಮಗೆ ಪಗಾರ ಇಲ್ಲದಂತೆ ಆಗುತ್ತದೆ ಎಂದೆಲ್ಲಾ ಅದರಲ್ಲಿ ಹೇಳಿದ್ದೀರಿ. ಅದಕ್ಕೇನು ಮಾಡಿದ್ದೀರಿ? ಖರ್ಚು ಅನ್ನು ಕಡಿಮೆ ಮಾಡಿಕೊಳ್ಳುವುದರ ಬಗ್ಗೆ ಏನನ್ನೂ ಹೇಳಲಿಲ್ಲ. ಆಮೇಲೆ, ತಾವು ಕೆಲವು ಹೇಳಬೇಕೆಂದು ಹೇಳಿದಿರಿ. ತಾವು ಆಯೋಗಗಳನ್ನು ನೇಮಿಸಿದಿರಿ. ಉದಾಹರಣೆಗೆ ಮಾನ್ಯ ಮೊಯ್ಲಿಯವರ ಆಯೋಗ. ಸುಮಾರು ಅಬಕಾರಿ ಒಂದರಲ್ಲೇ 1000 ಕೋಟಿ ರೂಪಾಯಿಗಳು ಸೋರಿಕೆಯಾಗುತ್ತಿದೆ ಎಂದು ಅವರು ಹೇಳಿದ್ದಾರೆ. ಆದರೆ ನಿಮ್ಮ ಮಂತ್ರಿಗಳು ಅದನ್ನು ಒಪ್ಪುತ್ತಿಲ್ಲ. ಅವರು ಹೇಗೆ ಹೇಳಿದರೋ ಏನೋ, ಅವರು ಹೇಳಿರುವುದು ಸರಿಯಲ್ಲ ಎನ್ನುವಂತಹ ಮಾತನ್ನು ಹಿಂದೊಮ್ಮೆ ಇದರ ಬಗ್ಗೆ ಹೇಳುವಾಗ ಹೇಳಿದ್ದರು. ಇವೆಲ್ಲವಕ್ಕೂ ಕೂಡ ತಮ್ಮಿಂದ ಸರಿಯಾಗಿ ಉತ್ತರ ಬರಲಿಲ್ಲ. ಆಡಳಿತ ವೆಚ್ಚವನ್ನು ಕಡಿಮೆ ಹೇಗೆ ಮಾಡುತ್ತೀರಿ ಏನು ಮಾಡುತ್ತೀರಿ ಎಂಬುದನ್ನು ತಾವು ಹೇಳಲಿಲ್ಲ. ಸುಮಾರು 20-30 ಸಾವಿರ ಹುದ್ದೆಗಳನ್ನು, ಡಿವಿಷನಲ್ ಕಮೀಷನರ್ ಹುದ್ದೆ, ಇವೆಲ್ಲವನ್ನೂ ಕಡಿಮೆ ಮಾಡಲು ನಾವು ಹೇಳಿದ್ದೆವು. ಅವುಗಳು ಯಾವುವನ್ನೂ ಮಾಡಲಿಲ್ಲ. ಅವೆಲ್ಲಾ ಹಾಗೆಯೇ ಇನ್ನೂ ಮುಂದುವರೆದಿವೆ. ಉದಾಹರಣೆಗೆ, ಸಹಕಾರಿ ಇಲಾಖೆಯಲ್ಲಿ ಮತ್ತೆ ಜಾಯಿಂಟ್ ರಿಜಿಸ್ಟ್ರಾರ್ ಪೋಸ್ಟ್ ಹೆಚ್ಚು ಮಾಡಿದ್ದೀರಿ. ಈ ರೀತಿಯಾಗಿ ಹೆಚ್ಚು ಮಾಡಲಿಕ್ಕೆ ಹೊರಟಿದ್ದೀರಿ. ಆ ದೃಷ್ಟಿಯಿಂದ ಏನು ಕಡಿಮೆ ಮಾಡುತ್ತೀರಿ, ಮುಂಬರತಕ್ಕಂಥ ಕಷ್ಟಗಳನ್ನು ಯಾವ ರೀತಿಯಾಗಿ ಅದನ್ನು ಕಡಿಮೆ ಮಾಡುತ್ತೀರಿ ಎನ್ನುವುದರ ಬಗ್ಗೆ ತಮ್ಮಿಂದ ವಿವರಣೆ ಬರಲಿಲ್ಲ. ಅದನ್ನು ಹೇಳಬೇಕೆಂದು ಕೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೇ, ಇಲ್ಲಿ ಬೆಳೆ ವಿಮೆ ಬಗ್ಗೆ ನಾವು ಸ್ಪಷ್ಟನೆ ಕೇಳಿದ್ದೆವು. ಮಾನ್ಯ ಕೌಜಲಗಿಯವರು ಕಳೆದ ವಾರ ಇದರ ಬಗ್ಗೆ ಡಿಸ್ಕಷನ್ ಆದಂತಹ ಸಂದರ್ಭದಲ್ಲಿ ಜುಲೈ 15ನೇ ತಾರೀಖಿನೊಳಗಾಗಿ 55 ಕೋಟಿ ರೂಪಾಯಿಗಳನ್ನು ನಾವು ಬಿಡುಗಡೆ ಮಾಡುತ್ತೇವೆ ಮತ್ತು ಈ ತಿಂಗಳ ಅಂತ್ಯಕ್ಕೆ ರೈತರ ಕೈಗೆ ಹಣ ಹೋಗಿ ಮುಟ್ಟುತ್ತದೆ ಎಂದು ಹೇಳಿದ್ದರು. ಜುಲೈ 15ಕ್ಕೆ ಹಣ ಬಿಡುಗಡೆಯಾಗಿದೆಯೇ ಅಥವಾ ಪುನಃ ಯಾವಾಗ ಬಿಡುಗಡೆಯಾಗಿದೆ? ಎಷ್ಟು ಹಣ ಬಿಡುಗಡೆಯಾಯಿತು? ಅದರ ಬಗ್ಗೆ ಸ್ಪಷ್ಟನೆಯನ್ನು ಇವತ್ತು ಸರ್ಕಾರ ಮಾಡಲಿಲ್ಲ. ಅದರ ವಿವರವನ್ನು ಕೊಡಬೇಕು. ಬೆಳೆ ವಿಮೆಯನ್ನು ಹೊಸದಾಗಿ ಮಾಡಿಸಲು 31ನೇ ತಾರೀಖು ಅಂದರೆ ನಾಳೆ ಲಾಸ್ಟ್ ಡೇಟ್ ಆಗಿದೆ. ಬರಗಾಲ ಬಿದ್ದಿದೆ, ಆದ್ದರಿಂದ ಕೆಲವು ಕಡೆ ವಿಮೆಯನ್ನೇ ಮಾಡಿಸಲಿಕ್ಕಿಲ್ಲ, ಅದು ಬೇರೆ ವಿಚಾರ. ಆದರೆ ಎಲ್ಲಿ ರೈತರು ಯಾವ ಕಡೆ ಕೆಲವೊಂದು ಮಾಡಿದ್ದಾರೆ, ಅಂತಹಕ್ಕಾದರೂ ಅವಕಾಶ ಕೊಡಬೇಕು. ಕೇಂದ್ರ ಸರ್ಕಾರದ ಕೃಷಿ ಸಚಿವರಾದ ಮಾನ್ಯ ಅಜಿತ್ ಸಿಂಗ್‌ರವರು ನಿನ್ನೆ ಸಭೆಯೊಂದನ್ನು ಕರೆದಿದ್ದರು. ಆ ಸಂದರ್ಭದಲ್ಲಿ ಅವರು

ಕೆಲವೊಂದು ಘೋಷಣೆಗಳನ್ನು ಮಾಡಿದರು. ಅದರಲ್ಲಿ ಈ ಬೆಳೆ ವಿಮೆ ಅವಧಿಯನ್ನು ವಿಸ್ತರಣೆ ಮಾಡುತ್ತೇವೆ ಎನ್ನುವಂಥಾದ್ದನ್ನು ಸಹ ಹೇಳಿದರು. ಅದರ ಬಗ್ಗೆ ಕೇಂದ್ರ ಸರ್ಕಾರದಿಂದ ಸ್ಪಷ್ಟನೆ ಏನಾದರೂ ಬಂದಿದೆಯೇ? ಅದರ ಬಗ್ಗೆ ಕೂಡ ನಮ್ಮ ರೈತ ಬಾಂಧವರಿಗೆ ಮಾಹಿತಿ ಹೋಗಬೇಕಾಗಿದೆ. ವಿದ್ಯುತ್ ದರದ ಬಗ್ಗೆ ಸ್ಪಷ್ಟೀಕರಣ ಸರ್ಕಾರದ ಕಡೆಯಿಂದ ಬರಲಿಲ್ಲ. ಹೋಮ್ ಮಿನಿಸ್ಟರ್ ಸಭೆಗೆ, ಕೆಲವೊಂದು ವಿಷಯಕ್ಕೆ ಅವರು ಮಾತನಾಡುವುದೇ ಬೇಡ ಎಂದು ನಿರ್ಧರಿಸಿದ್ದಾರೆಂದು ನನಗನ್ನಿಸಿರುವ ಮಟ್ಟಿಗೆ ಕಾಣುತ್ತಿದೆ. ಏನ್‌ಕ್ವೈರಿ ಕಮಿಷನ್ ಇತ್ಯಾದಿ ಬಗ್ಗೆ ಲಾಸ್ಟ್ ವೀಕ್ ಕೂಡ ನಾನು ಮಾತನಾಡಿದ್ದೆ. ಆಗಲೂ ಸಹ ಅವರು ಅದನ್ನೇನೂ ಗಂಭೀರವಾಗಿ ತೆಗೆದುಕೊಳ್ಳಲಿಲ್ಲ. ಬಹುಶಃ ಸರ್ಕಾರ ಡಿಸೈಡ್ ಮಾಡಿರಬೇಕು, ನಾವು ಹೀಗೆಯೇ ನಡೆದುಕೊಂಡು ಹೋಗುತ್ತೇವೆ, ವಿರೋಧ ಪಕ್ಷದ ನಾಯಕರು ಅಥವಾ ವಿರೋಧ ಪಕ್ಷದವರು ಹೀಗೆಯೇ ಹೇಳಿಕೊಳ್ಳುತ್ತಾ ಹೋಗುತ್ತೀರಿ, ಇದು ಇದೇ ರೀತಿ ನಡೆಯಲಿ ಎಂದು ಇರಬಹುದು. ಇದರಲ್ಲಿ ನನಗನ್ನಿಸುವ ಮಟ್ಟಿಗೆ ಸ್ವಲ್ಪ ನೆಗ್ಲಿಜೆನ್ಸ್ ಕೂಡ ಇರಬಹುದು. ಉತ್ತರವನ್ನೇ ಕೊಡುವುದೇ ಬೇಡ ಎನ್ನುವಂತಹ ನೆಗ್ಲಿಜೆನ್ಸ್ ಕೂಡ ಇರಬಹುದು. ಸರ್ಕಾರ ಅದೇ ರೀತಿ ನಡೆದುಕೊಂಡು ಹೋದರೆ, ಜನ ಅದಕ್ಕೆ ಪಾಠ ಕಲಿಸುತ್ತಾರೆ. ಅದಕ್ಕೆ ನಾನೇನೂ ಹೇಳಲಿಕ್ಕೆ ಆಗುವುದಿಲ್ಲ. ಇನ್ನೊಂದು ಬಹುಮುಖ್ಯವಾಗಿ ಇವತ್ತು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, 2900 ಕೋಟಿ ರೂಪಾಯಿಗಳು ಈ ಒಂದು ಅಬಕಾರಿ ಬಾಬ್ತಿನಿಂದ ಹೆಚ್ಚಿನ ಆದಾಯ ಬರುತ್ತಿದೆ ಎಂದು. ನನಗನ್ನಿಸುತ್ತಿದೆ, ಮಾನ್ಯ ವೀರಪ್ಪ ಮೊಯ್ಲಿಯವರು ಸರ್ಕಾರವೇ ರಚಿಸಿದ್ದ ತೆರಿಗೆ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ವರದಿಯನ್ನೇನು ಕೊಟ್ಟಿದ್ದಾರೆಯೋ, ಅದರಲ್ಲಿ ಸ್ಪಷ್ಟವಾಗಿ ಈ ಅಬಕಾರಿ ಇಲಾಖೆಯಿಂದ 1400 ಕೋಟಿ ರೂಪಾಯಿಗಳಷ್ಟು ಹಣ ಸೋರಿ ಹೋಗುತ್ತಿದೆ ಎಂದು ಹೇಳಿದ್ದಾರೆ. ಮುಖ್ಯವಾಗಿ ಅವರು ಬೊಟ್ಟು ಮಾಡಿದ್ದು ಸೆಕೆಂಡ್ಸ್ ಮತ್ತು ಥರ್ಡ್ಸ್, ಮಾನ್ಯ ಮುಖ್ಯಮಂತ್ರಿಗಳು ಸಾಕಷ್ಟು ಸಲ ಕೆಲವು ಕಡೆ ಪ್ರಸ್ತಾಪವನ್ನೂ ಮಾಡಿದ್ದಾರೆ. ಹುಬ್ಬಳ್ಳಿಯಂತಹ ನಗರದಲ್ಲಿ ಏನು ನಡೆಯುತ್ತಿದೆ ಎನ್ನುವುದು ಇನ್ನೂ ಇವತ್ತಿನವರೆಗೂ, ಮಾನ್ಯ ಖರ್ಗೆಯವರಿಗೂ ಸಾಕಷ್ಟು ನಾನು ಗಮನಕ್ಕೆ ತೆಗೆದುಕೊಂಡು ಬಂದೆ, ಇವತ್ತಿನವರೆಗೂ ಒಂದು ಪೈಸೆಯಷ್ಟೂ ಇಂಪ್ರೂವ್‌ಮೆಂಟ್ ಇಲ್ಲ. ಹುಬ್ಬಳ್ಳಿ ಎಂದೂ ಸುಧಾರಣೆ ಆಗುವುದಿಲ್ಲ. ಎಲ್ಲಾ ಕಡೆ ಸೆಕೆಂಡ್ಸ್ ಮತ್ತು ಥರ್ಡ್ಸ್ ನಡೆಯುತ್ತಿದೆ. ಅನಧಿಕೃತವಾಗಿ ಲೈಸೆನ್ಸ್ ಇಲ್ಲದೇ ನಡೆಯುವುದು ಸಹ ಇದೆ. ಇದು ಇಡೀ ರಾಜ್ಯದಲ್ಲಿ ಎಲ್ಲಾ ಕಡೆ ನಡೆಯುತ್ತಿದೆ. ಹುಬ್ಬಳ್ಳಿ ಒಂದು ಉದಾಹರಣೆ ಅಷ್ಟೇ. ಅದನ್ನು ಯಾವಾಗಿನಿಂದಲೋ ನಾನು ಹೇಳಿಕೊಂಡು ಬಂದಿದ್ದೇನೆ. ಅದನ್ನು ನಿಮಗೆ ಸುಧಾರಣೆ ಮಾಡಲಿಕ್ಕೆ ಆಗಿಲ್ಲ. ಇಲ್ಲಿ ಸೋರಿ ಹೋಗುತ್ತಿದೆ, ಇವತ್ತು ವೀರಪ್ಪ ಮೊಯ್ಲಿಯವರು ಹೇಳಿದ್ದು ಇಂತಹವನ್ನೇ. ಇದನ್ನು ಮಾಡಬಹುದಾಗಿತ್ತು. 2900 ಕೋಟಿ ರೂಪಾಯಿಗಳ ಆದಾಯ ಎಂದು ತಾವು ಹೇಳುತ್ತಿದ್ದೀರಿ. ಸರಿಯಾಗಿ ವ್ಯವಸ್ಥಿತ ರೀತಿಯಿಂದ ಕಂಟ್ರೋಲ್ ಮಾಡಿದ್ದರೆ ಇದೇ ಒಂದು ಬಾಬಿನಲ್ಲಿ 4000 ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಆದಾಯ ಬರುತ್ತದೆ. ಅದನ್ನು ಮಾಡಬಹುದಾಗಿತ್ತಲ್ಲವೇ? ಆದರೆ ಅದು ಆಗಲಿಲ್ಲ. ಎಲ್ಲಿ ವೀಕ್‌ನೆಸ್ ಇದೆ? ಅದನ್ನು ಕಟ್ಟುನಿಟ್ಟಾಗಿ ಮಾಡುವಂತಾದ್ದು ಆಗಬೇಕಾಗುತ್ತದೆ. ಕೆಲವೊಂದು ವಿಷಯದ ಬಗ್ಗೆ, ಬರಗಾಲ ಪರಿಸ್ಥಿತಿಯ ಬಗ್ಗೆ ಸ್ಪಷ್ಟನೆ ಸರ್ಕಾರದಿಂದ ಬರಲಿಲ್ಲ. ಅದಕ್ಕೆ ಏನು ಸಿದ್ಧತೆ ಆಗಿದೆ? ಎಷ್ಟು ಹಣ ರಿಲೀಸ್ ಮಾಡಿದ್ದೀರಿ ಎಂಬ ಮಾಹಿತಿ ಬರಲಿಲ್ಲ. ಇದರ ಬಗ್ಗೆ ಮಾಹಿತಿ ಕೊಡಬೇಕಾಗುತ್ತದೆ. ಏಕೆಂದರೆ

ರಾಜ್ಯದಲ್ಲಿ ಬಹಳ ಗಂಭೀರವಾದಂತಹ ಪರಿಸ್ಥಿತಿ ಇದೆ. ಅದರ ಬಗ್ಗೆ ಮಂತ್ರಿಗಳು ಯಾರೂ ಕೂಡ ಉತ್ತರ ಕೊಡಲಿಲ್ಲ ಅಥವಾ ಅದರ ಬಗ್ಗೆ ಸ್ಪಷ್ಟನೆ ಮಾಡಲಿಲ್ಲ. ಬಹಳ ಮಹತ್ವದ ವಿಷಯಗಳ ಬಗ್ಗೆ ಸರ್ಕಾರದ ಕಡೆಯಿಂದ ಸ್ಪಷ್ಟೀಕರಣ ಬರಲಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಪ್ರೆಸೆಂಟ್ ಫೈನಾನ್ಷಿಯಲ್ ಪೊಸಿಷನ್ ಇತ್ಯಾದಿ ಕೆಲವೊಂದು ವಿಷಯಗಳ ಬಗ್ಗೆ ಸಾಕಷ್ಟು ವಿಚಾರಗಳನ್ನು ಇಲ್ಲಿ ಹೇಳಿದರು. ನಾನು ಅವರಿಗೆ ಅದಕ್ಕಾಗಿ ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಆದರೆ ಬಹು ಮುಖ್ಯವಾಗಿ ಇವತ್ತು ಇಮ್ಮೀಡಿಯೇಟ್ಲಿ ಏನು ಆಗಬೇಕಾಗಿದೆ ಎನ್ನುವುದರ ಬಗ್ಗೆ ಏನೂ ಹೇಳಲಿಲ್ಲ. ಕಾಂಟ್ರಾಕ್ಟರ್ಸ್‌ಗಳ ಬಗ್ಗೆ ಹೇಳಿದರು. ಇವತ್ತು ಒಂದೂವರೆ ತಿಂಗಳಿನಿಂದ ಚೆಕ್ಸ್ ಬ್ಯಾಂಕ್‌ನಲ್ಲೇ ಇವೆ. ಕೆಲವೊಂದು ವಿಷಯಗಳ ಬಗ್ಗೆ ಅದರಲ್ಲೂ ಬಹಳ ಮಹತ್ವದ ವಿಷಯಗಳ ಬಗ್ಗೆ ಸರ್ಕಾರದಿಂದ ಸ್ಪಷ್ಟೀಕರಣ ಬರಲಿಲ್ಲ. ಆ ಸ್ಪಷ್ಟೀಕರಣವನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಮುಖ್ಯಮಂತ್ರಿಗಳು ಬಹಳ ಚಾಣಾಕ್ಷರು. ಬಹಳ ಜಾಣತನದ ಉತ್ತರವನ್ನೂ ಸಹಿತ ಅವರು ಕೊಟ್ಟಿದ್ದಾರೆ. ಜೊತೆಗೆ, ಖರ್ಗೆ ಸಾಹೇಬರು ಮತ್ತು ಹೆಚ್.ಕೆ. ಪಾಟೀಲರು ಏನೇನು ಮಾತನಾಡುತ್ತಿದ್ದರೋ ಅದರ ಬಗ್ಗೆ ಒಗ್ಗಟ್ಟಿನ ಪ್ರದರ್ಶನವನ್ನೂ ಮಾಡಿದ್ದಾರೆ. ಒಂದು ರೀತಿಯಲ್ಲಿ ಇದು ಮೆಚ್ಚತಕ್ಕದ್ದೇ. 2-3 ಸಮಾಧಾನಕರವಾದಂತಹ ವಿಚಾರಗಳನ್ನೂ ಸಹ ಅವರು ಹೇಳಿದ್ದಾರೆ. ನಾವು ಇದನ್ನು ಹೇಳದೇ ಹೋದರೆ, ಅವರು ನೋಡಿ ಇಷ್ಟು ಹೇಳಿದರೂ ಇವರಿಗೆ ಸಮಾಧಾನ ಇಲ್ಲ, ವಿರೋಧ ಪಕ್ಷದವರು ಬರೀ ಸಭಾತ್ಯಾಗ, ಪ್ರಚಾರದಲ್ಲೇ ಇರುತ್ತಾರೆಂದು ಅವರು ನಮ್ಮನ್ನು ಟೀಕೆ ಮಾಡುತ್ತಾರೆ, ನಾವು ಹೋದ ಮೇಲೆ. ಈ ಬ್ಯಾಕ್‌ಲಾಗ್ ಹುದ್ದೆಗಳನ್ನು ಡಿಸೆಂಬರ್ ತಿಂಗಳಿನೊಳಗಾಗಿ ತುಂಬತಕ್ಕಂಥ ಮಾತನ್ನು ಏನು ಹೇಳಿದ್ದೀರಿ, ಅದು ಸಮಾಧಾನಕರವಾಗಿರತಕ್ಕಂಥ ವಿಚಾರ. ಉತ್ತರ ಕರ್ನಾಟಕಕ್ಕೆ ವಿಶೇಷವಾಗಿ 1500 ಕೋಟಿ ರೂಪಾಯಿಗಳನ್ನು ರಸ್ತೆಗಳನ್ನು ಸುಧಾರಣೆ ಮಾಡಲಿಕ್ಕೆ ವಿಶ್ವಬ್ಯಾಂಕಿನ ಸಾಲವನ್ನು ಕೊಟ್ಟು, 500 ಕೋಟಿ ರೂಪಾಯಿಗಳನ್ನು ನಮ್ಮ ಭಾಗಕ್ಕೆ ಅಂದರೆ ಹಳೇ ಕರ್ನಾಟಕಕ್ಕೆ ತೆಗೆದುಕೊಂಡು, ನಿಮ್ಮ ಜಿಲ್ಲೆಗೆ 300 ಕೋಟಿ ರೂಪಾಯಿಗಳನ್ನು ತೆಗೆದುಕೊಂಡಿರುವ ಬಗ್ಗೆ ನನಗೆ ಸಮಾಧಾನ ಇದೆ. ಅದರ ಬಗ್ಗೆಯೂ ಕೂಡ ನಾನು ಸಮಾಧಾನವನ್ನು ವ್ಯಕ್ತ ಮಾಡಲಿಕ್ಕೆ ಬಯಸುತ್ತೇನೆ. ಇನ್ನು ಶಾಲಾ ಶಿಕ್ಷಕರ ನೇಮಕಾತಿ ಬಗ್ಗೆ ಹೇಳುವುದಾದರೆ, ಮಾನ್ಯ ದೇಶಪಾಂಡೆಯವರು ಈ ಕಡೆ ಇದ್ದಾಗ ಸುಮಾರು 1 ಲಕ್ಷಕ್ಕೂ ಹೆಚ್ಚು ಶಿಕ್ಷಕರ ನೇಮಕಾತಿಯಾಗಿತ್ತು. ಈಗ 15 ಸಾವಿರ ಜನಕ್ಕೆ ಕೊನೆಗೂ ಸಹಿತ ನೇಮಕಾತಿ ಮಾಡಿಕೊಳ್ಳತಕ್ಕಂಥ ಅವಕಾಶ ತಮಗೆ ಸಿಕ್ಕಿದೆ. ಇದರ ಬಗ್ಗೆ ನಾನು ಸಮಾಧಾನವನ್ನು ವ್ಯಕ್ತ ಮಾಡುತ್ತೇನೆ. ಆದರೆ 2-3 ಸತ್ಯಕ್ಕೆ ದೂರವಾದಂತಹ ವಿಚಾರಗಳನ್ನು ಅವರು ಹೇಳಿದ್ದಾರೆ. ನಾನು ಇಲ್ಲಿ ಒಂದು ಶಾಸಕಾಂಗ ಪಕ್ಷದ ನಾಯಕನಾಗಿರುವುದರಿಂದ ಇದನ್ನು ಹೇಳಬೇಕಾಗುತ್ತದೆ. ತಾವು ಪ್ಲಾನ್ ಸೈಜ್ ಯಾವಾಗಲೂ ಕಟ್ ಆಗಿಲ್ಲವೆಂದು ಹೇಳುತ್ತೀರಿ. ನನಗೆ ಇನ್ನೂ ಈ ಪ್ಲಾನಿಂಗ್ ಫೈನಾನ್ಸ್ ಪೋರ್ಟ್‌ಫೋಲಿಯೋ ಡೀಲ್ ಮಾಡುವುದಕ್ಕೆ ಅವಕಾಶ ಸಿಕ್ಕಿಲ್ಲ. ನನಗೆ ಗೊತ್ತಿರುವಂತೆ ಕಳೆದ 50 ವರ್ಷಗಳಲ್ಲಿ ಕರ್ನಾಟಕದ ಪ್ಲಾನ್ ಸೈಜ್ ಯಾವತ್ತೂ ಸಹಿತ ಕಟ್ ಆಗಿಲ್ಲ. ಅದು ಜಾಸ್ತಿ ಆಗಿಕೊಂಡೇ ಹೋಗಿದೆ. ಶೇಕಡ 37ರಿಂದ ಶೇಕಡ 27ಕ್ಕೆ ಸ್ಯಾಲರಿ ಎಕ್ಸ್‌ಪೆಂಡೀಚರ್ ಏಕೆ ಕಡಿಮೆಯಾಗಿದೆ ಎಂದರೆ, ವೇಕೆನ್ಸಿಗಳನ್ನು ನೀವು ತುಂಬಿಲ್ಲ. ವೇಕೆನ್ಸಿಗಳನ್ನು ನೀವು ತುಂಬದಿರುವುದರಿಂದ ಪ್ಲಾನ್

ಎಕ್ಸ್‌ಪೆಂಡಿಚರ್ ಶೇಕಡ 28 ಕಡಿಮೆಯಾಗಿದೆಯೇ ಹೊರತು ಆದರಿಂದ ಬಹಳ ದೊಡ್ಡ ಕಡಿತವೇನೂ ಆಗಿಲ್ಲ. ತಾವು ಹೇಳಿದ ಹಾಗೆ ಇದಕ್ಕೆ ಇನ್ನೂ ಬಹಳ ಸ್ಕೋಪ್ ಇದೆ. 1993-94ರ ಅಂಕಿ ಅಂಶಗಳನ್ನು ತಾವು ಕೊಡಲಿಕ್ಕೆ ಹೋಗಲಿಲ್ಲ. ಇದಿಷ್ಟೂ ವಿಚಾರಗಳನ್ನು ಹೇಳಿ, ನಮ್ಮ ಕೆಲವು ಒತ್ತಾಯಗಳಿವೆ. ನಮ್ಮ ಮೊದಲನೇ ಒತ್ತಾಯ, ಮಾನ್ಯ ಸೋಮಶೇಖರ್‌ರವರು ತಮ್ಮ ಹೆಲಿಕಾಪ್ಟರ್ ದುರುಪಯೋಗ ಬಹಳ ಆಗುತ್ತಿದೆ, ಡಿಪಿಎಆರ್‌ನಿಂದ ತಾವು ಹಿಡಿತ ಕಳೆದುಕೊಳ್ಳುತ್ತಿದ್ದೀರಿ ಅದರ ಬಗ್ಗೆ ಒಂದು ವಿಚಾರಣೆ ಆಗಬೇಕು ಎಂದು ಹೇಳಿದ್ದಾರೆ. ಯಾರಿಗೂ ಗೊತ್ತಿಲ್ಲದ ಹಾಗೆ ತೆಗೆದುಕೊಂಡು ಹೋದರು, ಆ್ಯಕ್ಸಿಡೆಂಟ್ ಮಾಡಿದರು, ಎಂಟು ಕೋಟಿ ರೂಪಾಯಿ ಆಗುತ್ತದೆ ಎಂದರೆ, it does not speak well of your administration. ಇದರ ಬಗ್ಗೆ ಒಂದು ತನಿಖೆ ಯಾರು ತಪ್ಪಿತಸ್ಥರಿದ್ದಾರೆ ಅವರನ್ನು ಮನೆಗೆ ಕಳುಹಿಸುವ ಕೆಲಸ ಆಗಬೇಕೆಂದು ಹೇಳಿದರು. ತಾವು 500 ಕೋಟಿ ರೂಪಾಯಿ ಏನು ಹೇಳುತ್ತಿದ್ದೀರಿ ಇದನ್ನು ನಾವು ಒಪ್ಪುವುದಿಲ್ಲ. ಎಲ್‌ಒಸಿಯ 617 ಕೋಟಿ ರೂಪಾಯಿ ಅದರಲ್ಲಿ ನಾವು 150 ಕೋಟಿ ರೂಪಾಯಿ ಈ ತಿಂಗಳಲ್ಲಿ ರಿಲೀಸ್ ಮಾಡಿದ್ದೇವೆ, ಇನ್ನು 460 ಕೋಟಿ ರೂಪಾಯಿಗಳನ್ನು ಇನ್ನು ನಾಲ್ಕೈದು ತಿಂಗಳಲ್ಲಿ ರಿಲೀಸ್ ಮಾಡುತ್ತೇವೆಂದರೆ, ಈ ಅಂಕಿ ಅಂಶಗಳನ್ನು ನಾವು ಒಪ್ಪುವುದಿಲ್ಲ. ಏಕೆಂದರೆ, ಮೈನರ್ ಇರಿಗೇಷನ್, ಇರಿಗೇಷನ್ ಡಿಪಾರ್ಟ್‌ಮೆಂಟ್‌ಗೆ ಸಂಬಂಧಪಟ್ಟ ಹಾಗೆ ತಾವು ಹೇಳಿರುವುದು ಸತ್ಯಾಂಶ ಇರಬಹುದು. ಆದರೆ ಜಿಲ್ಲಾ ಪಂಚಾಯತ್‌ಗಳಲ್ಲಿ ಮಾಡಿರತಕ್ಕಂತಹ ಕೆಲಸ ಏನಿದೆ ಅದನ್ನೆಲ್ಲಾ ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ತರಿಸಿಕೊಂಡು ಇದನ್ನು ಮಾಡಿದ್ದಾರೇನೋ ಗೊತ್ತಿಲ್ಲ, ಕಂಟ್ರಾಕ್ಟ್‌ದಾರರು ಖಚಿತವಾಗಿ ಹೇಳಿದ್ದಾರೆ. ಮಂಡ್ಯ ಜಿಲ್ಲೆಯ ಗುತ್ತಿಗೆದಾರರು ಬೆಳಿಗ್ಗೆ ನನ್ನ ಹತ್ತಿರ ಬಂದಿದ್ದರು, ಸುಮಾರು 48 ಕೋಟಿ ರೂಪಾಯಿ ಬಾಕಿ ಇದೆ. ಇದನ್ನು ನೀವು ಖಚಿತವಾಗಿ ಮುಂದಿನ ಆರು ತಿಂಗಳ ಒಳಗಡೆ ಈ ವರ್ಷದ ಎಲ್ಲಾ ಎಲ್‌ಒಸಿಗಳನ್ನು ಬಿಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎನ್ನತಕ್ಕಂತಹ ಭರವಸೆ ಕೊಡಬೇಕು. ಮಾನ್ಯ ಡಿ. ಮಂಜುನಾಥ್ ಮತ್ತಿತರರ ಮೇಲೆ ಹಿರಿಯೂರಿನಲ್ಲಿ ನಡೆಯುತ್ತಿರತಕ್ಕಂತಹ ಅನ್ಯಾಯವನ್ನು ತಡೆಗಟ್ಟುತ್ತೇವೆ ಎನ್ನತಕ್ಕಂತಹ ಭರವಸೆಯನ್ನು ಕೊಡಬೇಕು. 307 ನಂತರ ಕೇಸ್‌ಗಳನ್ನು ನಾಯಕರ ಮೇಲೆ ಹಾಕುವುದು ರಾಜಕೀಯ ಸೇಡಿನ ಮನೋಭಾವದಿಂದ ಹಾಕಿದ ಹಾಗಾಗುತ್ತದೆ. ಬರಗಾಲದ ಪರಿಸ್ಥಿತಿ ಎದುರಿಸುವುದಕ್ಕೆ ತಾವು ಏನು ಮಾಡಿದ್ದೀರಿ ಎಂಬುದನ್ನು ಹೇಳಲಿಲ್ಲ. ನೀವು ಬಹಳ ಬುದ್ಧಿವಂತರು ನೀವು. ಬರಗಾಲ ಭೀಕರವಾಗಿದೆ, ಕೇಂದ್ರ ಸರ್ಕಾರದ ನಿವೇದನೆ, ರೇಷ್ಮೆ ಬೆಳೆಗಾರರ ವಿಚಾರ ನಾವೂ ಅವರೂ ಸೇರಿಕೊಂಡು ಒಂದು ಸ್ಕೀಮ್ ಮಾಡುತ್ತಿದ್ದೇವೆ. ಸಕ್ಕರೆ ಕೇಂದ್ರ ಸರ್ಕಾರ ಪರವಾನಗಿ ಕೊಡಬೇಕು. ಎಲ್ಲಾ ಆ ಕಡೆ ಬೊಟ್ಟು ಮಾಡಿ ತೋರಿಸುತ್ತಿದ್ದೀರೇ ಹೊರತು ನೀವು ಏನು ಮಾಡುತ್ತೀರಿ? ನಾಳೆ ಇಲ್ಲ ನಾಡಿದ್ದು ಓಟ್ ಆನ್ ಅಕೌಂಟ್ ಮುಗಿಯುತ್ತದೆ. ತಾವು ಎಷ್ಟು ಹಣವನ್ನು ಇದಕ್ಕೋಸ್ಕರ ಕೊಡುತ್ತೀರಿ ಎಂಬುದನ್ನು ಹೇಳುತ್ತಿಲ್ಲ. ರೈತರ ಆತ್ಮಹತ್ಯೆ ವಿಚಾರವನ್ನು ನಾನು ಪ್ರಸ್ತಾಪ ಮಾಡಿದೆ, ಅದಕ್ಕೂ ಕೂಡ ದುಡ್ಡು ಬಿಡುಗಡೆ ಮಾಡುತ್ತೇವೆನ್ನುವ ಮಾತನ್ನು ಹೇಳಲಿಲ್ಲ. ಸಕ್ಕರೆ ದಾಸ್ತಾನು 1400 ಕೋಟಿ ರೂಪಾಯಿಯಷ್ಟು ಇದೆ. ನಮ್ಮ ಮಾಜಿ ಸಕ್ಕರೆ ಮಂತ್ರಿಗಳು ಸಲಹೆ ಮಾಡಿದ್ದಾರೆ. ನೀವು ಸಾಫ್ಟ್ ಲೋನ್ ತೆಗೆದುಕೊಂಡು ಸಕ್ಕರೆ ಕಾರ್ಖಾನೆಗಳಿಗೆ ಕೊಡಿಸಿ ಎಂದು ಹೇಳಿದ್ದಾರೆ. ಅದರ ಬಗ್ಗೆ ಪರಿಶೀಲನೆ ಮಾಡುವ ಭರವಸೆಯಾದರೂ ತಾವು ಕೊಡಬೇಕೆಂದು ನಾನು ಮತ್ತೊಮ್ಮೆ ಆಗ್ರಹ ಮಾಡಿ, ಈ ವಿದ್ಯುತ್

ಬೆಲೆಯನ್ನು ಯಾವುದೇ ಕಾರಣಕ್ಕೂ ಹೆಚ್ಚಿಸಬಾರದು. ಕೆಲವು ಸಾರಿ ಅದು ನೆಗೆಟೀವ್ ರಿಯಲೈಸೇಷನ್ ಆಗುತ್ತದೆ. ಹೆಚ್ಚಿಗೆ ಮಾಡಿದಷ್ಟೂ ಕೂಡ ನೆಗೆಟೀವ್ ರಿಯಲೈಸೇಷನ್ ಆಗುತ್ತದೆ, ತೊಂದರೆಯಾಗುತ್ತದೆ, ಅದನ್ನು ಮಾಡುವುದಕ್ಕೆ ಹೋಗಬಾರದು, ತಡೆಗಟ್ಟಬೇಕು ಎಂಬುದು ನನ್ನ ಆಗ್ರಹ.

ಶ್ರೀ ಸಿ. ಚನ್ನಿಗಪ್ಪ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಬಹಳ ಚೆನ್ನಾಗಿ ಹೇಳಿದ್ದಾರೆ. ಅದು ಒಪ್ಪತಕ್ಕ ವಿಚಾರ. ಆದರೆ ಮೊನ್ನೆ ಅವರು ದೆಹಲಿಗೆ ನಿಯೋಗ ತೆಗೆದುಕೊಂಡು ಹೋಗಿ ರೇಷ್ಮೆ ಬೆಳೆಗಾರರಿಗೆ ಆಗಿರುವ ಅನ್ಯಾಯ ಮತ್ತು ತಂಬಾಕು ಬೆಳೆಗಾರರಿಗೆ ಆಗಿರುವಂತಹ ಅನ್ಯಾಯ, ಅಡಿಕೆ ಮತ್ತು ಹೊಗೆ ಸೊಪ್ಪಿನ ಬಗ್ಗೆ ಆಗಿರುವಂತಹ ಅನ್ಯಾಯದ ಬಗ್ಗೆ ನಾವು ಸರಿದೂಗಿಸುತ್ತೇವೆಂದು ಮಾನ್ಯ ಪ್ರಧಾನ ಮಂತ್ರಿಗಳಿಗೆ ಕೇಳಿ ಆಶ್ವಾಸನೆ ಪಡೆದುಕೊಂಡು ಬಂದು ಆಯಿತು. ಆದರೆ ಅವರು ತಮ್ಮ ಬಡ್ಜೆಟ್ ಉತ್ತರದಲ್ಲಿ ಹೇಳಬೇಕಾದರೆ ರೈತರ ಎಷ್ಟು ಹಣವನ್ನು ನಾವು ನಮ್ಮ ರಾಜ್ಯದ ವತಿಯಿಂದ ಕೊಡುತ್ತೇವೆ, ಅವರಿಗೆ ಆದಂತಹ ನಷ್ಟವನ್ನು ಭರಿಸುತ್ತೇವೆಂಬ ಬಗ್ಗೆ ಅವರು ಏನೂ ಆಶ್ವಾಸನೆ ಕೊಡಲಿಲ್ಲ. ಅದೇ ರೀತಿ ಬರಗಾಲದ ಬಗ್ಗೆ ಕೂಡ 800 ಟನ್ ಆಹಾರಧಾನ್ಯ ಕೇಳಿದ್ದೇವೆ, 550 ಕೋಟಿ ರೂಪಾಯಿ ಹಣವನ್ನು ಕೇಳಿದ್ದೇವೆಂದು ಹೇಳಿದರು, ಮಾನ್ಯ ಪ್ರಧಾನ ಮಂತ್ರಿಗಳು ಆದರ ಬಗ್ಗೆ ಯೋಚನೆ ಮಾಡುತ್ತೇನೆಂದು ನಮ್ಮ ಮುಂದೆ ಹೇಳಿದರು. ಡೆಲಿಗೇಷನ್ ತೆಗೆದುಕೊಂಡು ಹೋಗಿ ಕೇಳಿದ್ದು ಬಹಳ ಚೆನ್ನಾಗಿತ್ತು ಅದು ಬಹಳ ಸಂತೋಷದ ವಿಚಾರ. ಅದಕ್ಕೆ ಸೂಕ್ತವಾದ ಉತ್ತರವನ್ನು ಮಾನ್ಯ ಮುಖ್ಯ ಮಂತ್ರಿಗಳು ತಿಳಿಸಬೇಕೆಂದು ಸನ್ಮಾನ್ಯ, ಮುಖ್ಯಮಂತ್ರಿಗಳಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಶ್ರೀ ಉಮೇಶ್ ವಿ ಕತ್ತಿ : ಮಾನ್ಯ ಅಧ್ಯಕ್ಷರೆ, ಸಕ್ಕರೆ ಬಗ್ಗೆ ರಾಜ್ಯದಲ್ಲಿ ಸುಮಾರು 1400 ಕೋಟಿ ರೂಪಾಯಿಗಳಷ್ಟು ಸಕ್ಕರೆ ದಸ್ತಾನು ಇದೆ. ಈ ಭಾಗದಲ್ಲಿ ಈಗಾಗಲೇ ಹಂಗಾಮು ಪ್ರಾರಂಭವಾಗಿದೆ. ಅಕ್ಟೋಬರ್‌ದಿಂದ ಉತ್ತರ ಕರ್ನಾಟಕದಲ್ಲಿ ಹಂಗಾಮು ಪ್ರಾರಂಭವಾಗುತ್ತಿದೆ. ಸಕ್ಕರೆ ದಾಸ್ತಾನು ಇರುವುದರಿಂದ ಈಗಾಗಲೇ ನಬಾರ್ಡ್‌ನವರು ಎಲ್ಲಾ ಸಕ್ಕರೆ ಕಾರ್ಖಾನೆಗಳಿಗೆ ವರ್ಕಿಂಗ್ ಕ್ಯಾಪಿಟಲ್ ರಿಸ್ಟ್ರಿಕ್ಷನ್ ಮಾಡಿದ್ದಾರೆ. ಅವರು ಟೈಟಾಗಿ ಆಪರೇಟ್ ಮಾಡುತ್ತಿದ್ದಾರೆ. ಈಗಾಗಲೇ ಇದ್ದಂತಹ ಸಕ್ಕರೆ ಅದರ ಮೇಲೆ ತೆಗೆದುಕೊಂಡ ಸಾಲ ವರ್ಕಿಂಗ್ ಕ್ಯಾಪಿಟಲ್ ಮುಗಿದು ಹೋಗಿದೆ. ಮುಂದಿನ ಹಂಗಾಮು ಪ್ರಾರಂಭ ಮಾಡುವುದಕ್ಕೆ ಸಾಲ ತೆಗೆದುಕೊಳ್ಳುವುದಕ್ಕೆ ಯಾವ ಬ್ಯಾಂಕೂ ಸಾಲ ಕೊಡುವ ಪರಿಸ್ಥಿತಿಯಲ್ಲಿಲ್ಲ. ರೈತರ ಬಾಕಿ ಹಳೆಯ ಬಾಕಿ ಸುಮಾರು 120 ಕೋಟಿ ರೂಪಾಯಿಗಳಷ್ಟು ಬಾಕಿ ಕೊಡಬೇಕಾಗಿದೆ. ಮುಂದಿನ ಹಂಗಾಮು ಪ್ರಾರಂಭ ಮಾಡಿದರೆ ಶುಗರ್ ಕೇನ್ ಕಂಟ್ರೋಲ್ ಆ್ಯಕ್ಟ್ ಪ್ರಕಾರ 15 ದಿನಗಳ ಒಳಗಾಗಿ ನಾವು ರೈತರಿಗೆ ಬಿಲ್ ಕೊಡಬೇಕಾಗಿದೆ. ಸಕ್ಕರೆ ದಾಸ್ತಾನು ಇರುವುದರಿಂದ ಬಿಲ್ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಇದರ ಹೊರತು ರಾಜ್ಯ ಸರ್ಕಾರ ರೈತರಿಗೆ ಸಹಾಯ ಕೊಡಬೇಕು. ಸಕ್ಕರೆ ಕಾರ್ಖಾನೆಗೆ ಸಹಾಯ ಕೊಡಬೇಕು. ಅಡಿಕೆ ಮತ್ತು ರೇಷ್ಮೆ ತಂಬಾಕಿಗೆ ಬೆಂಬಲ ಬೆಲೆ ಘೋಷಣೆ ಮಾಡುವುದಕ್ಕೆ ಸಾಧ್ಯ. ಆದರೆ ಸಕ್ಕರೆ ಕಾರ್ಖಾನೆ ಒಂದು ಸಾರಿ ಬಂದ್ ಆದರೆ ಮುಂದಿನ ದಿನಗಳಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯ. ಆದರೆ ಸಕ್ಕರೆ ಕಾರ್ಖಾನೆ ಒಂದು ಸಾರಿ ಬಂದ್ ಆದರೆ ಮುಂದಿನ ದಿನಗಳಲ್ಲಿ ಸಕ್ಕರೆ ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗಲಿಕ್ಕಿಲ್ಲ. ಇದರ ಬಗ್ಗೆ ಬಹಳ ಗಂಭೀರವಾಗಿ ಚಿಂತನೆ ಮಾಡಿ, ಇವತ್ತು ಒಂದು ಟನ್

ಸಕ್ಕರೆಯನ್ನು ಕಾರ್ಖಾನೆಗಳು ಮುಗಿಸಿದ್ದೇ ಆದರೆ ರಾಜ್ಯ ಸರ್ಕಾರಕ್ಕೆ ಸುಮಾರು 700 ರಿಂದ 800 ರೂಪಾಯಿಗಳಷ್ಟು ಆದಾಯ ಬರುತ್ತದೆ. ಅಬಕಾರಿ ಇಲಾಖೆ ಇರಬಹುದು, ಪರ್ಚೇಸ್ ಟ್ಯಾಕ್ಸ್ ಇರಬಹುದು, ಇನ್ನಿತರ ಬಾಬುಗಳಿಂದ ಸುಮಾರು 700 ರಿಂದ 800 ರೂಪಾಯಿಗಳಷ್ಟು ಆದಾಯ ಒಂದು ಟನ್ ಕಬ್ಬಿನಿಂದ ಬರುತ್ತಿದೆ. ಕೇಂದ್ರ ಸರ್ಕಾರದ ಜೊತೆ ಮಾತನಾಡಿ ಈ ಆವರ್ತ ನಿಧಿ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ತಾವು ಕೂಡಲೇ ಸಕ್ಕರೆ ಕಾರ್ಖಾನೆಗಳ ಉಳಿವಿಗಾಗಿ, ರೈತರ ಉಳಿವಿಗಾಗಿ ಧಾವಿಸಬೇಕೆಂದು ತಮ್ಮ ಮುಖೇನ ವಿನಂತಿ ಮಾಡುತ್ತೇನೆ. ತಮಗೆ ಬರುವಂತಹ ಟ್ಯಾಕ್ಸ್‌ನಲ್ಲಿ ಸಾವಿರ ಕೋಟಿ ರೂಪಾಯಿಯಷ್ಟು ಆವರ್ತ ನಿಧಿ ಇಟ್ಟುಕೊಂಡು ಸಕ್ಕರೆ ಕಾರ್ಖಾನೆಗಳಿಗೆ ಸಾಫ್ಟ್ ಲೋನ್ ರೂಪದಲ್ಲಿ ಸಾಲ ಕೊಟ್ಟರೆ ಮುಂದಿನ ದಿನಗಳಲ್ಲಿ ನಾವು ಕಾರ್ಖಾನೆಗಳನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಬರುವ ಮುಂದಿನ ಹಂಗಾಮಿನಲ್ಲಿ ನಾವು ಕಾರ್ಖಾನೆ ಗಳನ್ನು ಸ್ಥಾಪನೆ ಮಾಡುವುದಕ್ಕೆ ಸಾಧ್ಯವಿಲ್ಲ. ರೈತರು ಬೀದಿ ಪಾಲಾಗಬಹುದು, ಅದಲ್ಲದೆ ರಾಜ್ಯ ಸರ್ಕಾರದ ಆದಾಯಕ್ಕೂ ಹೊಡೆತ ಬೀಳುತ್ತದೆ. ಅದರ ಬಗ್ಗೆ ತಾವು ಗಂಭೀರ ಚಿಂತನೆ ಮಾಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ತಮಗೆ ಮತ್ತೊಮ್ಮೆ ವಿನಂತಿ ಮಾಡುತ್ತೇನೆ.

ಶ್ರೀ ಬಿ. ಸೋಮಶೇಖರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯ ಮಂತ್ರಿಗಳು ಆಯವ್ಯಯದ ವಿಚಾರದಲ್ಲಿ ಸ್ಪಷ್ಟೀಕರಣ ಕೊಡುವಾಗ ನನಗಾದರೂ ಸಮಾಧಾನಕರವಾಗಿ ಉತ್ತರ ಆಗಿಲ್ಲ. ಒಂದು ಸಮಾಧಾನ ಏನೆಂದರೆ, ಬಹಳ ವಿನಮತ್ರೆಯಿಂದ ನಮಗೆ ಸಮಾಧಾನವಾಗಿ ಆಗತಕ್ಕಂತಹ ರೀತಿಯಲ್ಲಿ ಹೇಳಿದ್ದಾರೆ. ಆದರೆ ವಾಸ್ತವಾಂಶದಲ್ಲಿ ಹೇಳುವುದಾದರೆ ಅದು ಅಷ್ಟು ಸಮಾಧಾನಕರವಾಗಿಲ್ಲ. ಏಕೆಂದರೆ, ಈ ಮೂರು ವರ್ಷದ ನಿಮ್ಮ ಸರ್ಕಾರದ ಅವಧಿಯಲ್ಲಿ ಹೋ ವರ್ಕ್ ಮಾಡಿ ಮೂರು ವರ್ಷದ ಬಜೆಟ್ ಪುಸ್ತಕಗಳನ್ನು ಇಟ್ಟುಕೊಂಡು ನೋಡಿದಾಗ ಯಾವ್ಯಾವ ಕ್ಷೇತ್ರದಲ್ಲಿ ಎಷ್ಟೆಷ್ಟು ಆಗಿದೆ ಎಂದು ನೋಡಿದಾಗ ಅದರಲ್ಲಿ ಸೋಷಿಯಲ್ ಸೆಕ್ಟಾರ್‌ನಲ್ಲಿ ಎರಡು ಇಲಾಖೆ ಬರುತ್ತದೆ, ಒಂದು ಹೌಸಿಂಗ್ ಮತ್ತು ಇನ್ನೊಂದು ಸೋಷಿಯಲ್ ವೆಲ್‌ಫೇರ್ ಮತ್ತು ಎಸ್‌ಸಿಎಸ್‌ಟಿ ಇವೆರಡರಲ್ಲಿ ಬಿಟ್ಟರೆ ಬೇರೆ ಎಲ್ಲಾ ಕಡೆಗೆ ಸುಮಾರು 37.30 ರಿಂದ 31-89 ಪರ್ಸೆಂಟೇಜ್ ಇದೆ. ಎರಡು ಕ್ಷೇತ್ರಗಳು ಬಿಟ್ಟರೆ ಸುಮಾರು ಐದೂವರೆ ಪರ್ಸೆಂಟ್ ಇಳಿಕೆಯಾಗಿದೆ. ಅದನ್ನು ತಾವು ಜಸ್ಟಿಫೈ ಮಾಡಿಕೊಂಡಿದ್ದೀರಿ, ಅದು ಒಪ್ಪುವುದಕ್ಕೆ ಸಾಧ್ಯವಿಲ್ಲ. ಈ ಅಸೆಟ್ಸ್ ಕ್ರಿಯೇಷನ್ ಅಂಡ್ ಕ್ಯಾಪಿಟಲ್ ಡಿಸ್ಬರ್ಸ್‌ಮೆಂಟ್‌ನಲ್ಲಿ ಸುಮಾರು 403 ಕೋಟಿ ರೂಪಾಯಿ ಕಡಿತ ಆಗಿದೆ. ಅಭಿವೃದ್ಧಿ ಏನು ಮಾಡುತ್ತೇನೆಂದು ಹೇಳಿದ್ದೀರಿ, 430 ಕೋಟಿ ರೂಪಾಯಿ ಅಸೆಟ್ಸ್ ಕ್ರಿಯೇಷನ್‌ನಲ್ಲಿ ಕಡಿತವಾಗಿದೆ. ಇನ್ನೊಂದು ನಾನು ತಮ್ಮಲ್ಲಿ ಕೇಳಿತಕ್ಕಂಥದ್ದು, ತಮ್ಮ ಬಾಷಣದಲ್ಲಿ ಒಂದು ಹೇಳಿದ್ದೀರಿ, ಎರಡು ಲಕ್ಷ ಮನೆಗಳನ್ನು ವೀಕರ್ ಸೆಕ್ಷನ್‌ಗೆ ಕಟ್ಟಿಸಿಕೊಡುತ್ತೇವೆ, ಅದರಲ್ಲಿ 50 ಭಾಗ ರೂರಲ್ ಆಶ್ರಯದಲ್ಲಿ ಎಸ್‌ಸಿಎಸ್‌ಟಿಯವರಿಗೆ ಕೊಡುತ್ತೇವೆ, ಒಂದು ವರ್ಷಕ್ಕೆ ಒಂದು ಲಕ್ಷ ರೂಪಾಯಿ ಮನೆಗಳನ್ನು ನಾವು ಕೊಡುತ್ತೇವೆ ಎನ್ನತಕ್ಕಂತಹ ಆಶ್ವಾಸನೆಯನ್ನು ಬಜೆಟ್‌ನಲ್ಲಿ ಕೊಟ್ಟಿದ್ದೀರಿ. ಆದರೆ ಆ ಹಣವನ್ನು ನಿಗದಿ ಮಾಡಿದ್ದೀರಾ, ಮಾಡುತ್ತೀರಾ ಎನ್ನತಕ್ಕಂತಹ ಮಾತು ಒಂದು, ಏಕೆಂದರೆ ತಾವು ಬಡವರಿಗೆ ಮನೆ ಕಟ್ಟುವುದಕ್ಕೆ ಬಹಳ ಆದ್ಯತೆ ಕೊಡುತ್ತಾ ಬಂದಿದ್ದೀರಿ. ಆದರೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಒಂದು ಲಕ್ಷ ಮನೆಗಳನ್ನು ಒಂದು ವರ್ಷಕ್ಕೆ ಕೊಡುತ್ತೇವೆಂದು ಹೇಳಿದ್ದೀರಿ,

ಅದಕ್ಕೆ ಹಣ ಒದಗಿಸಿಕೊಡುತ್ತೀರಾ ಎಂಬುದನ್ನು ಹೇಳಬೇಕು. ಅದರ ಜೊತೆಗೆ ಗಂಗಾ ಕಲ್ಯಾಣ ಯೋಜನೆಗೆ ಕಾಗೋಡು ತಿಮ್ಮಪ್ಪನವರು ಇದ್ದಾಗ ಒಂದು ವರ್ಷಕ್ಕೆ ಐದು ಸಾವಿರ ಗಂಗಾ ಕಲ್ಯಾಣ ಬಾವಿಗಳನ್ನು ತೋಡಿಸುತ್ತೇವೆಂದು ಹೇಳಿದಿರಿ, ಆದರೆ ಹೋದ ವರ್ಷದ್ದು 30 ಕೋಟಿ ರೂಪಾಯಿ ಇದೆ ಕೊಟ್ಟಿಲ್ಲ, ಈ ವರ್ಷ 38 ಕೋಟಿ ರೂ. ಆಗುತ್ತದೆ. ಆದಕ್ಕೆ ತಾವು ಏನು ಕೊಟ್ಟಿದ್ದೀರಿ ಆ ಹಣ ಬಿಡುಗಡೆ ಸಂಪೂರ್ಣವಾಗಿ ಮಾಡುತ್ತೀರಿ ಎಂದು ಹೇಳುತ್ತೇನೆ. ಬ್ಯಾಕ್‌ಲಾಗ್ ಹುದ್ದೆಗಳು ಏನಿವೆ ಅದನ್ನು ಡಿಸೆಂಬರ್‌ನಲ್ಲಿ ತುಂಬುತ್ತೇವೆಂದು ಹೇಳಿದಿರಿ. ಬ್ಯಾಕ್‌ಲಾಗ್ ಹುದ್ದೆಗಳನ್ನು ಸರಿಯಾಗಿ ಐಡೆಂಟಿಫೈ ಮಾಡುತ್ತಿಲ್ಲ. ಕೆಲವೊಂದನ್ನು ಪರಿವರ್ತನೆ ಮಾಡುತ್ತಿದ್ದಾರೆ. ಅದರ ಬಗ್ಗೆ ಸ್ವಲ್ಪ ಕಟ್ಟುನಿಟ್ಟಿನ ಸೂಚನೆಗಳನ್ನು ಕೊಡಬೇಕು. ಕೊನೆಯದಾಗಿ, ನಾನು ಕೇಳುವುದೇನೆಂದರೆ, ನಾನು ಇದನ್ನು ಪ್ರಸ್ತಾಪ ಮಾಡಿದಾಗ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇರಲಿಲ್ಲ. ಕಂಪ್ಯಾಷನೇಟ್ ಗ್ರೌಂಡ್ಸ್ ನೌಕರಿ ಅಂದರೆ ಮಾನವೀಯತೆಯ ಆಧಾರದ ಮೇಲೆ ಸರ್ವೀಸ್‌ನಲ್ಲಿ ಇದ್ದಾಗ ಮೃತ ಪಟ್ಟ ಸರ್ಕಾರಿ ನೌಕರರ ಕುಟುಂಬ ವರ್ಗದವರಿಗೆ ಉದ್ಯೋಗ ಕೊಡತಕ್ಕ ಒಂದು ಯೋಜನೆಯಾಗಿದೆ. ನಮ್ಮ ಸರ್ಕಾರ ಇದ್ದಾಗ, ಓರ್ವ ಸರ್ಕಾರಿ ನೌಕರ ಮೃತನಾದಾಗ ಅವರ ಮಗ ಏನಾದರೂ ಇದ್ದು, ಸರ್ಕಾರಿ ನೌಕರ ಸತ್ತಾಗ ಅವನಿಗೆ 18 ವರ್ಷ ಆಗದೇ ಇದ್ದರೆ, ಅವನಿಗೆ 18 ವರ್ಷ ಆಗುವವರೆಗೆ ಕಾಯ್ದು, ಅವನಿಗೆ 18 ವರ್ಷ ಆದ ತಕ್ಷಣ ಅವನಿಗೆ ಅಪಾಯಿಂಟ್‌ಮೆಂಟ್ ಕೊಡಬೇಕು ಎಂದು ನಾವು ಮಾಡಿದ್ದೆವು. ಆದರೆ ನಿಮ್ಮ ಸರ್ಕಾರ ಕಂಪ್ಯಾಷಿನೇಟ್ ಗ್ರೌಂಡ್ಸ್ ಅಪಾಯಿಂಟ್‌ಮೆಂಟ್ ಒದಗಿಸುವ ಸರ್ಕ್ಯುಲರ್‌ಗೆ ಅಮೆಂಡ್‌ಮೆಂಟ್ ಮಾಡಿ, 18 ವರ್ಷ ಆಗದೇ ಇದ್ದರೂ ಸರ್ಕಾರಿ ನೌಕರ ಮೃತ ಪಟ್ಟ ಒಂದು ವರ್ಷದೊಳಗಾಗಿ ಸರ್ಕಾರಕ್ಕೆ ನೇಮಕಾತಿಗಾಗಿ ಅರ್ಜಿಯನ್ನು ಸಲ್ಲಿಸಬೇಕು ಎಂದು ಮಾಡಿದ್ದೀರಿ. 18 ವರ್ಷ ಆಗುವವರೆಗೆ ಕಾಯತಕ್ಕ ಅವಶ್ಯಕತೆ ಇಲ್ಲವೆಂದು ಈಗ ತಿದ್ದುಪಡಿ ಮಾಡಲಾಗಿದೆ. ಇದರಿಂದ ಉದ್ದೇಶ ಸಫಲವಾಗುವುದಿಲ್ಲ. ಆದುದರಿಂದ ದಯವಿಟ್ಟು ಅದನ್ನು ಅಮೆಂಡ್‌ಮೆಂಟ್ ಮಾಡಿ, 18 ವರ್ಷ ಆದ ನಂತರ ಅವನನ್ನು ಯಾವಾಗಲಾದರೂ ಕೆಲಸಕ್ಕೆ ತೆಗೆದುಕೊಳ್ಳಬಹುದು ಎಂದು ಮಾಡಬೇಕೆಂದು ನಾನು ಕೋರುತ್ತೇನೆ. ಅದರ ಬಗ್ಗೆ ತಾವು ಆಶ್ವಾಸನೆ ಕೊಡಿ.

ಶ್ರೀ ಎ. ರಾಮದಾಸ್ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ರಾಜ್ಯದ ಹಣಕಾಸಿನ ಬಗ್ಗೆ ಇಲ್ಲಿ ಬೆಳಕನ್ನು ಚೆಲ್ಲಿದ್ದಾರೆ. ನಾನು ಈ ಸಮಯವನ್ನು ಅದರ ಬಗೆಗಿನ ಚರ್ಚೆಗೆ ತೆಗೆದುಕೊಳ್ಳಲಿಕ್ಕೆ ಹೋಗುವುದಿಲ್ಲ. ನಾನು ಮಾನ್ಯ ಅದ್ಯಕ್ಷರ ಮತ್ತು ಮಾನ್ಯ ಮುಖ್ಯಮಂತ್ರಿಗಳ ಅಪ್ಪಣೆಯನ್ನು ನಾನು ಕೇಳಲಿಕ್ಕೆ ಇಚ್ಛೆ ಪಡುತ್ತಿದ್ದೇನೆ. ವಿಶೇಷವಾಗಿ ರಾಜ್ಯದಲ್ಲಿ ಇರುವಂತಹ ಹಣಕಾಸಿನ ಪರಿಸ್ಥಿತಿಯ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮದೇ ಆದಂತಹ ವಿಚಾರಗಳನ್ನು ನಮ್ಮ ಮುಂದೆ ಇಟ್ಟಿದ್ದಾರೆ. ನಮ್ಮ ಮನಸ್ಸಿನಲ್ಲಿ ರಾಜ್ಯದ ಹಿತದೃಷ್ಟಿಯಿಂದ ಇನ್ನೂ ಕೆಲವಾರು ಕ್ಲಾರಿಫಿಕೇಷನ್‌ಗಳನ್ನು ಈ ದಿಸೆಯಲ್ಲಿ ಕೇಳಬೇಕಾದ ಅವಶ್ಯಕತೆ ಇದೆ ಎಂದು ಅನಿಸಿದೆ. 8ನೇ ತಾರೀಖಿನೊಳಗಾಗಿ ಒಂದು ದಿವಸ ಅದರ ಬಗ್ಗೆ ಚರ್ಚೆಗೆ ಅವಕಾಶ ಮಾಡಿ ಕೊಟ್ಟರೆ, ನಾನು ಆ ಸಮಯವನ್ನು ಚರ್ಚೆಗಾಗಿ ಉಪಯೋಗಿಸಿಕೊಳ್ಳಬಹುದು ಎನ್ನುವಂತ ಅಂಶವನ್ನು ಮಾತ್ರ ನಾನು ಇಲ್ಲಿ ಹೇಳಬಯಸುತ್ತೇನೆ. ಸಮಯ ಇಲ್ಲದಿರುವುದರಿಂದ ನಾನು ಕೇಳಬೇಕೆಂದಿರುವ ಬಹಳಷ್ಟು ಕ್ಲಾರಿಫಿಕೇಷನ್ಸ್‌ಗಳನ್ನು ನಾನು ಇಲ್ಲಿ ಕೇಳಲಿಕ್ಕೆ ಹೋಗುವುದಿಲ್ಲ. ವಿದ್ಯುತ್ ಕ್ಷೇತ್ರದ ಬಗ್ಗೆ ತಾವು ಹೇಳಿದ ಹಾಗೆ ನಮ್ಮ ಆಸೆ ಇರುವುದೂ ಕೂಡ ಗ್ರಾಮೀಣ ಪ್ರದೇಶದಲ್ಲಿರುವಂತಹ

ಬಂಧುಗಳು ಯಾರಿದ್ದಾರೆ, ಅದರಲ್ಲೂ ವಿಶೇಷವಾಗಿ ರೈತರಿಗೆ ಆಗುತ್ತಿರತಕ್ಕಂಥ ಸಮಸ್ಯೆ ಏನಿದೆ, ಇದನ್ನು ಪರಿಹಾರ ಮಾಡಲಿಕ್ಕೆ ನಾವು ಮತ್ತು ನೀವು ಇಬ್ಬರೂ ಸೇರುವಂತಹ ವಿಚಾರ. ಈ ಬಗ್ಗೆ ಏನಾದರೂ ಘೋಷಣೆ ಮಾಡುತ್ತೀರಿ ಎಂದು ನಾವು ನಿರೀಕ್ಷಣೆ ಮಾಡಿದ್ದೆವು. 2300 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ತಾವು ವಿದ್ಯುತ್ ತೆಗೆದಿಟ್ಟಿದ್ದರಲ್ಲಿ ಕೇವಲ 1300 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಇದರ ಹೊರೆಯನ್ನು ಮತ್ತೆ ಗ್ರಾಹಕನ ಮೇಲೆ ಹಾಕುವಂತಹ ವ್ಯವಸ್ಥೆಗಳು ಆಗಿವೆ. ಅದನ್ನಾದರೂ ಕೊಡುತ್ತೀರಿ ಎಂದು ನಾವು ಅಂದುಕೊಂಡಿದ್ದೆವು. ಶೇಕಡ 16.5 ರಷ್ಟು ವಿದ್ಯುತ್ ದರ ಏರಿಸಿದಿರಿ. ಇದರಿಂದಾಗಿ 788 ಕೋಟಿ ರೂಪಾಯಿಗಳನ್ನು ಗ್ರಾಹಕರಿಂದ ತೆಗೆದುಕೊಂಡಿದ್ದೀರಿ. ಒಂದೇ ಫೈನಾನ್‌ಷಿಯಲ್ ಇಯರ್‌ನಲ್ಲಿ ಮತ್ತೊಂದು ಬಾರಿಗೆ ನಿಮ್ಮ ಸರ್ಕಾರ 487 ಕೋಟಿ ರೂಪಾಯಿಗಳು ಬೇಕು ಎಂದು ಹೇಳಿ, ಕೆ.ಇ.ಆರ್.ಸಿ. ಮುಂದೆ ಫೈಲ್ ಮಾಡಿ, ಈ ವರ್ಷದಲ್ಲೇ ಮತ್ತೆ ಶೇಕಡ 12.5 ರಷ್ಟು ವಿದ್ಯುತ್ ದರವನ್ನು ಏರಿಸುವಂತಹ ವ್ಯವಸ್ಥೆಗೆ ಏನು ಹೋಗಿದೆ, ಇದನ್ನಾದರೂ ಹಿಂದಕ್ಕೆ ತೆಗೆದುಕೊಳ್ಳುತ್ತೀರಿ ಎನ್ನುವಂತಹ ಆಸೆ ನಮ್ಮ ಮನಸ್ಸಿನಲ್ಲಿತ್ತು. ಆದರ ಬಗ್ಗೆ ತಮ್ಮಿಂದ ಏನೂ ಕೂಡ ಬಂದಿಲ್ಲ ಎನ್ನುವಂತಹ ಅಂಶವನ್ನು ಹೇಳುತ್ತಾ, ವಿದ್ಯುತ್ ಕ್ಷೇತ್ರದ ಬಗ್ಗೆ ಹೆಚ್ಚು ವಿಷಯಗಳನ್ನು ಆಮೇಲೆ ಹೇಳುತ್ತೇನೆ. ನಾನು ಆರೋಗ್ಯ ಇಲಾಖೆಯ ಬಗ್ಗೆ ಹೇಳುತ್ತಿರುವಾಗ, ಇಲಾಖೆಗೆ ಒಳ್ಳೆಯ ಮಂತ್ರಿಗಳು ಬಂದಿದ್ದಾರೆ. ಟ್ರಾನ್ಸ್‌ಫರೆನ್ಸಿ ವಿಚಾರವನ್ನು ನೀವು ಹೇಳುತ್ತಿದ್ದಿರಿ. ಪ್ರಮೋಷನ್ ಪಾಲಿಸಿಯಲ್ಲಿ ಆಗುತ್ತಿರುವಂತಹ ಎಲ್ಲಾ ವಿಚಾರಗಳನ್ನು ಹೇಳದೆ, ಕೇವಲ ಗುರುತರವಾದಂತಹ ಒಂದು ಆಪಾದನೆಯನ್ನು ದಾಖಲೆಗಳ ಸಮೇತ ನಿಮ್ಮ ಮುಂದೆ ಇಟ್ಟೆ. 50 ಸಾವಿರ ರೂಪಾಯಿಗಳನ್ನು ಉನ್ನತ ಮಟ್ಟದ ಅಧಿಕಾರಿಗಳು ಕೇಳಿದಂತಹ ದಾಖಲೆಗಳನ್ನು ನಿಮ್ಮ ಮುಂದೆ ಕೊಟ್ಟಿದ್ದೇನೆ. ಅವುಗಳನ್ನು ನಾನು ನಿಮಗೆ ಕಳುಹಿಸಿ ಕೊಡುತ್ತಿದ್ದೇನೆ. ಆದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದನ್ನು ಹೇಳಬೇಕು.

ಶ್ರೀ ಆರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಈ ಭಾಗದಿಂದ ಬಜೆಟ್ ಮೇಲೆ ನಾವು ಮಾತನಾಡುವಾಗ ವಿಶೇಷವಾಗಿ ಕೇಂದ್ರದಿಂದ ಕೊಟ್ಟಿರತಕ್ಕಂಥ ಹಣವನ್ನು ಆಯಾ ವರ್ಷದಲ್ಲಿ ಖರ್ಚು ಮಾಡುವುದಿಲ್ಲ. ಅದು ಲ್ಯಾಪ್ಸ್ ಆಗಿ ಹೋಗುತ್ತಿದೆ. ನಮ್ಮ ರಾಜ್ಯದ ಅಭಿವೃದ್ಧಿಗೆ ಅದನ್ನು ಬಳಸಿಕೊಳ್ಳುತ್ತಿಲ್ಲ ಎನ್ನುವಂತಹ ವಿಚಾರವನ್ನು ಪ್ರಧಾನವಾಗಿ ನಾವು ಪ್ರಸ್ತಾಪ ಮಾಡಿದ್ದೆವು. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಂದ ಯಾವುದೇ ವಿಚಾರವೂ ಕೂಡ ಬರಲಿಲ್ಲ. ವಿಶೇಷವಾಗಿ ಇದರ ಬಗ್ಗೆ ಎಲ್ಲರೂ ಹೇಳಿದ್ದಾರೆ. ಮೊನ್ನೆ ಕೂಡ ನಾವು ತಮ್ಮೊಟ್ಟಿಗೆ ಒಂದು ಸುತ್ತಿನ ಚರ್ಚೆಯನ್ನೂ ಮಾಡಿದ್ದೇವೆ, ತಾವೂ ಕೂಡ ದೆಹಲಿಗೆ ಹೋಗಿದ್ದೀರಿ. ಕೆಂಪು ಅಡಿಕೆ ಬೆಳೆಗಾರರಿಗೆ ಒಂದು ರಕ್ಷಣೆಯನ್ನು ತಾವು ಇವತ್ತು ಘೋಷಣೆ ಮಾಡುತ್ತೀರಿ ಎಂದು ನಾವೆಲ್ಲಾ ಬಹಳ ಜನ ಭಾವಿಸಿದ್ದೆವು. ಮಾರುಕಟ್ಟೆ ಬಂದ್ ಆಗಿ ಈಗಾಗಲೇ 15 ದಿವಸವಾಯಿತು. ಇದು ಇನ್ನೂ ಓಪನ್ ಆಗಿಯೇ ಇಲ್ಲ. ಬಿಳಿ ಅಡಿಕೆಯನ್ನು ಏನು ಬೆಂಬಲ ಬೆಲೆಯ ವ್ಯಾಪ್ತಿಗೆ ಒಳಪಡಿಸುತ್ತೇವೆ ಎಂದು ಹೇಳಿದ್ದೀರಿ, ಇವತ್ತು ಕೇಂದ್ರ ಸರ್ಕಾರ ಮುಂದೆ ಕೂಡ ಅದು ಇದೆ, ಅದು ಆಗುತ್ತದೆ. ಆದರೆ ಕೆಂಪು ಅಡಿಕೆ ಬೆಳೆಗಾರರಿಗೆ ಒಂದು ರಕ್ಷಣೆಯನ್ನು ತಾವು ಈ ಸಂದರ್ಭದಲ್ಲಿ ಘೋಷಣೆ ಮಾಡಬೇಕೆಂದು ನಾವು ನಿರೀಕ್ಷೆ ಮಾಡಿದ್ದೇವೆ. ಅವರಿಗೆ ಕೂಡ ರಕ್ಷಣೆ ಬೇಕು. ಹಾಗೆಯೇ ಇನ್ನೊಂದು ವಿಚಾರವನ್ನು ಎಲ್ಲರೂ ಕೂಡ ಹೇಳಿದ್ದೇವೆ. ಕೊಟ್ಟಂತಹ ಹಣ ಸದ್ಬಳಕೆಯಾಗದೇ ಸಾಕಷ್ಟು ಅಪವ್ಯಯ

ಆಗಿರತಕ್ಕ ಪ್ರಕರಣಗಳ ಬಗ್ಗೆ ಸಿ.ಎ.ಜಿ ವರದಿ ಕಳೆದ 10-12 ವರ್ಷಗಳಿಂದ ಹಾಗೆಯೇ ಇದೆ. ಅಂತಹ ಯಾವುದೇ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳದೇ ಖರ್ಚು ಮಾಡಿದಂತಹ ಹಣವೂ ಕೂಡ ಸದ್ಬಳಕೆ ಆಗದೇ ಇರುವಂತಹದ್ದರ ಬಗ್ಗೆ ಸರ್ಕಾರ ಮುಂದಿನ ದಿನಗಳಲ್ಲಿ ಯಾವ ರೀತಿಯ ಕಠಿಣವಾದಂತಹ ಕ್ರಮವನ್ನು ಜರುಗಿಸುತ್ತದೆ ಎನ್ನುವುದನ್ನೂ ಕೂಡ ತಾವು ದಯವಿಟ್ಟು ಹೇಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಆರ್. ಯಾವಗಲ್ : ಮಾನ್ಯ ಅಧ್ಯಕ್ಷರೇ, ರೈತರ ಕಷ್ಟ ಬಹಳ ಗಂಭೀರವಾಗಿದೆ ಎಂಬುದು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಬಂದಿದೆ ಎಂದು ನಾನು ತಿಳಿದುಕೊಳ್ಳಬೇಕು. ಎಲ್ಲಾ ವರ್ಗದ ಕಾರ್ಮಿಕರು ಇರಬಹುದು ಅಥವಾ ಬೇರೆ ವರ್ಗದ ಜನ ಇರಬಹುದು, ಈ ವರ್ಷ ಬರುವ ವರ್ಷದಲ್ಲಿ ಈಗಾಗಲೇ ಏನು ಲಕ್ಷಣ ಕಾಣುತ್ತಿದೆ, ಒಂದು ರೀತಿಯಿಂದ ಅವರನ್ನು ಆ ಪರಿಸ್ಥಿತಿಯಿಂದ ಹೊರಗಡೆಗೆ ತರಲಿಕ್ಕೆ ಬಹಳ ವ್ಯವಸ್ಥಿತವಾದಂತಹ ಗಂಭೀರ ಪ್ರಯತ್ನವನ್ನು ಮಾಡುವಂತಹ ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದರ ಬಗ್ಗೆ ಅವರ ಗಮನ ಸೆಳೆಯುತ್ತೇನೆ. ಅದರ ಜೊತೆಗೆ, ಈ ಬೆಳೆ ವಿಮಾ ಯೋಜನೆ ಏನು ಮುಗಿಯುತ್ತಿದೆ, ಅದನ್ನು ಮುಂದುವರೆಸಬೇಕು. ಇರುವಂತಹ ಪದ್ಧತಿಯಲ್ಲಿ ಕೆಲವು ಪ್ರದೇಶಗಳಲ್ಲಿ ಕೆಲವು ತಾಲ್ಲೂಕುಗಳ ಕೆಲವು ಹೋಬಳಿಗಳಲ್ಲಿ ಇದೇ ವಿಧವಾದಂತಹ ಬೆಳೆಯನ್ನು ಬೆಳೆಯಬೇಕು ಅಥವಾ ಅದಕ್ಕೆ ಮಾತ್ರ ನಾವು ಇನ್‌ಶ್ಯೂರೆನ್ಸ್ ಮಾಡಿಕೊಡುತ್ತೇವೆ ಎನ್ನುವಂತಹ ಸರ್ಕಾರಿ ಘೋಷಣೆ ಅಥವಾ ನೋಟಿಫಿಕೇಷನ್ ಅಥವಾ ಇಲಾಖೆಯ ನೋಟಿಫಿಕೇಷನ್ ಏನಿದೆ, ಅದರಿಂದ ಬಹಳ ಕಷ್ಟ ಇದೆ. ಉದಾಹರಣೆಗೆ ಹೇಳುವುದಾದರೆ, ನಮ್ಮದೇ ಪ್ರದೇಶದಲ್ಲಿ ನನ್ನ ತಾಲ್ಲೂಕಿನಲ್ಲಿ ಗೋವಿನ ಜೋಳ ಮತ್ತು ಹತ್ತಿಯ ಬೆಳೆ ಮಾತ್ರ ನೋಟಿಫಿಕೇಷನ್ ಆದಂತಹ ಬೆಳೆಗಳು. ಆದರೆ ಈ ವರ್ಷ ಮುಂಗಾರು ಮಳೆ ಸ್ವಲ್ಪ ಆಗಿದ್ದುದರಿಂದ ಸಾಕಷ್ಟು ಜನ ವ್ಯಾಪಕ ಪ್ರದೇಶದಲ್ಲಿ ಹಸಿರು ಬೆಳೆಯನ್ನು ಮಾಡಿದರು. ಆದರೆ ಅದಕ್ಕೆ ವಿಮೆ ಇಳಿಸಲಿಕ್ಕೆ ಸಾಧ್ಯವಾಗಿಲ್ಲ. ಬಹಳ ಕಷ್ಟದಲ್ಲಿದ್ದಾರೆ. ಅದನ್ನು ಏನಾದರೂ ಮಾಡಿ ಬದಲಾಯಿಸಿ ಆ ಒಂದು ವಿನಾಯಿತಿ ಕೊಟ್ಟು, ಆ ಬೆಳೆ ವಿಮೆಯನ್ನು ಮಾಡಲಿಕ್ಕೆ ದಯವಿಟ್ಟು ತಾವು ಕ್ರಮವನ್ನು ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಹೆಚ್ಚು ಸದಸ್ಯರು ಕ್ಲಾರಿಫಿಕೇಷನ್ ಕೇಳಲು ನಾನು ಅವಕಾಶ ಕೊಡುವುದಿಲ್ಲ. ಈ ಕಡೆಗೆ ಆರು ಜನಕ್ಕೆ ಮತ್ತು ಆ ಕಡೆಗೆ ಆರು ಜನಕ್ಕೆ ಅವಕಾಶ ಮಾಡಿಕೊಟ್ಟಿದ್ದೇನೆ. ಕೇಳುತ್ತಾ ಹೋದರೆ ಇದು ಮುಗಿಯುವುದೇ ಇಲ್ಲ. ಎಲ್ಲರೂ ಕೂಡ ಕ್ಲಾರಿಫಿಕೇಷನ್ ಕೇಳಬಹುದು. ಆ ಶಕ್ತಿ ನಿಮ್ಮೆಲ್ಲರಲ್ಲೂ ಇದೆ. I know that. ಈಗ ಸಮಯ ಇಲ್ಲ. ದಯವಿಟ್ಟು ಸಹಕರಿಸಿ. ಕಡೆಯದಾಗಿ ಮಾನ್ಯ ಶಿವಾನಂದ ಪಾಟೀಲ್‌ರವರು ಮಾತ್ರ ಕ್ಲಾರಿಫಿಕೇಷನ್ ಕೇಳಿ.

ಶ್ರೀ ಶಿವಾನಂದ ಪಾಟೀಲ್ : ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಏಕೆಂದರೆ, ಕಳೆದ 2-3 ವರ್ಷದ ಇತಿಹಾಸದಲ್ಲಿ ನನಗೆ ಅನ್ನಿಸಿದಂತೆ ರೆವಿನ್ಯೂ ರೆಸಿಟ್ಸ್‌ನಲ್ಲಿ ಎರಡೇ ಎರಡು ವರ್ಷದಲ್ಲಿ 3500 ರಿಂದ 4000 ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಿನ ಹಣವನ್ನು ರಾಜಸ್ವಕ್ಕೆ ಸಂದಾಯ ಮಾಡತಕ್ಕ ಪ್ರಯತ್ನವನ್ನು ತಾವು ಮಾಡಿದ್ದೀರಿ ಎಂಬುದು ತಮ್ಮ ಅಂಕಿ ಅಂಶಗಳ ಮೂಲಕ ನನಗೆ ಗೊತ್ತಾಗುತ್ತಿದೆ. ಈ ಅಂಕಿ ಅಂಶಗಳು ನಿಜವಾಗಿದ್ದರೆ ನಾನು ಈ ಸಂದರ್ಭದಲ್ಲಿ ಒಂದು ವಿನಂತಿಯನ್ನು ನಾನು

ತಮ್ಮಲ್ಲಿ ಮಾಡಿಕೊಳ್ಳುತ್ತೇನೆ. ರಾಜ್ಯದಲ್ಲಿ ಭೀಕರ ಬರಗಾಲದ ಛಾಯೆ ಬಿದ್ದಂತಹ ಸಂದರ್ಭದಲ್ಲಿ ತಾವು ನಿಯೋಗವೊಂದನ್ನು ತೆಗೆದುಕೊಂಡು ಕೇಂದ್ರ ಸರ್ಕಾರದ ಬಳಿಗೆ ಹೋಗಿದ್ದೀರಿ. ಆ ಸಂದರ್ಭದಲ್ಲಿ ತಾವು ಏಳು ಲಕ್ಷ ಟನ್ ಆಹಾರ ಧಾನ್ಯವನ್ನು ರಾಜ್ಯಕ್ಕೆ ಕೊಡುವಂತೆ ಕೇಳಿಕೊಂಡಿದ್ದೀರಿ. ಅಕಸ್ಮಾತ್ ಅವರು ಏನಾದರೂ ಏಳು ಲಕ್ಷ ಟನ್ ಆಹಾರ ಧಾನ್ಯವನ್ನು ತಮಗೆ ಕೊಟ್ಟರೆ, ಅದಕ್ಕೆ ತಾವು ಮ್ಯಾಚಿಂಗ್ ಗ್ರಾಂಟ್ ಅನ್ನು ಕೊಡಬೇಕಾಗುತ್ತದೆ. ಎಷ್ಟು ಕಾಳು ಕೊಡುತ್ತೀರಿ, ಅದರ ಅರ್ಧದಷ್ಟು ಸ್ಯಾಲರಿ ಕಾಂಪೊನೆಂಟ್ ಅನ್ನು ತಾವು ಕೊಡಬೇಕಾಗುತ್ತದೆ. ಈ ದಿಸೆಯಲ್ಲಿ ಆಂಧ್ರ ಪ್ರದೇಶ ಸರ್ಕಾರ ಈಗಾಗಲೇ 20 ಲಕ್ಷ ಟನ್‌ಗಳಷ್ಟು ಆಹಾರ ಧಾನ್ಯಗಳನ್ನು ಎತ್ತಿದೆ. ಆ ಏಳು ಲಕ್ಷ ಟನ್ ಆಹಾರ ಧಾನ್ಯವನ್ನು ಸಂಪೂರ್ಣವಾಗಿ ಕೊಟ್ಟರೆ, ತಾವು ಅದನ್ನು ಉಪಯೋಗ ಮಾಡಲಿಕ್ಕೆ ಸಶಕ್ತರಾಗಿದ್ದೀರಾ ಎಂಬುದನ್ನು ಸಭೆಯ ಗಮನಕ್ಕೆ ತರಬೇಕೆಂದು ತಮ್ಮ ಮೂಲಕ ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನಿನ್ನೆಯೇ ಕ್ಯಾಬಿನೆಟ್ ಸಬ್ ಕಮಿಟಿ ಈ ವಿಷಯದಲ್ಲಿ ವಿಚಾರ ವಿನಿಮಯ ಮಾಡಿದೆ ಎಂದು ನಾನು ಕೇಳಿದ್ದೇನೆ. ಆಹಾರ ಧಾನ್ಯಗಳನ್ನು ಕೊಟ್ಟ ಸಂದರ್ಭದಲ್ಲಿ ಅಷ್ಟು ಹಣ ಕೊಡಲಿಕ್ಕೆ ನಮಗೆ ಆಗಲಿಕ್ಕಿಲ್ಲ ಎನ್ನುವಂತಹ ಅಭಿಪ್ರಾಯ ಅಲ್ಲಿ ವ್ಯಕ್ತವಾಗಿದೆ ಎಂದು ತಿಳಿದು ಬಂದಿದೆ. ಆದ್ದರಿಂದ ದಯ ಮಾಡಿ ಈ ಒಂದು ವಿಚಾರದ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೇ, ನನ್ನದೊಂದು ಸಣ್ಣ ಬೇಡಿಕೆ ಇದೆ. ಮಾನ್ಯ ಮುಖ್ಯಮಂತ್ರಿಗಳು ಅತ್ಯಂತ ಉತ್ತಮವಾಗಿ ಕಳೆದ 15 ದಿವಸಗಳಿಂದ ಸದನದಲ್ಲಿ ನಡೆದ ಚರ್ಚೆಗೆ ಎಲ್ಲರಿಗೂ ಉತ್ತರವನ್ನೂ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದರೂ ಸಹ ಒಂದು ವಿಷಯದ ಬಗ್ಗೆ ಹೇಳುವುದನ್ನು ಮಾತ್ರ ಮರೆತು ಬಿಟ್ಟಿದ್ದಾರೆ. ಮಲೆನಾಡು ಅಭಿವೃದ್ಧಿ ಮಂಡಳಿಗೆ ಸ್ವಲ್ಪ ಹೆಚ್ಚಿನ ಅನುದಾನವನ್ನು ಬಿಡುಗಡೆ ಮಾಡಬೇಕು ಎನ್ನುವುದು ನನ್ನ ಕೋರಿಕೆಯಾಗಿದೆ.

ಅಧ್ಯಕ್ಷರು : ದಯವಿಟ್ಟು ಎಲ್ಲರೂ ಕುಳಿತುಕೊಳ್ಳಿ. ಕ್ಲಾರಿಫಿಕೇಷನ್ ಸಾಕು. ಈಗಾಗಲೇ ಸಮಯವಾಗಿದೆ. ಈಗ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ವಿ. ಕೃಷ್ಣಪ್ಪ : ಬಯಲು ಸೀಮೆ ಅಭಿವೃದ್ಧಿ ಮಂಡಳಿಗೂ ಹೆಚ್ಚು ಅನುದಾನ ಕೊಡಬೇಕು.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರುಗಳು ಹಲವಾರು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ವಿರೋಧ ಪಕ್ಷದ ನಾಯಕರು ಕ್ರಾಪ್ ಇನ್‌ಶ್ಯೂರೆನ್ಸ್ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. 118 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅದರಲ್ಲಿ ರಾಜ್ಯ ಸರ್ಕಾರದ ಶೇರ್ 59 ಕೋಟಿ ರೂಪಾಯಿಗಳು. ಅದು ವಿತರಣೆಯಾಗುತ್ತಿದೆ. ಯಾವುದಾದರೂ ಭಾಗದಲ್ಲಿ ಅದು ವಿತರಣೆಯಾಗಲಿಲ್ಲ ಎನ್ನುವಂತಹ ದೂರುಗಳು ಇದ್ದರೆ, ಅದನ್ನು ದಯವಿಟ್ಟು ನಮಗೆ ಕಳುಹಿಸಿ ಕೊಟ್ಟರೆ ಅದಕ್ಕೆ ನಾವು ಗಮನ ಕೊಡುತ್ತೇವೆ. ಮಾನ್ಯ ಸಿಂಧ್ಯಾರವರು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರತಕ್ಕಂಥ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ವೀರೇಶ್ ಕಮಿಟಿಯ ವರದಿ ಮಂತ್ರಿ ಮಂಡಲದ ಮುಂದೆ ಇದೆ. ಅತಿ ಶೀಘ್ರದಲ್ಲೇ ಅದರ ಬಗ್ಗೆ ಮಂತ್ರಿ ಮಂಡಲ ಒಂದು ನಿರ್ಣಯವನ್ನು ತೆಗೆದುಕೊಳ್ಳುತ್ತದೆ.

ಮಾನ್ಯ ಕತ್ತಿಯವರು ಶುಗರ್ ಆವೃತ್ತ ನಿಧಿಯೊಂದನ್ನು ಮಾಡಬೇಕು, ಅದಕ್ಕೆ ಸಾಫ್ಟ್ ಲೋನ್ ಕೊಡಬೇಕೆಂದು ಹೇಳಿದ್ದಾರೆ. ಆವೃತ್ತ ನಿಧಿ ಎನ್ನತಕ್ಕಂಥ ತತ್ವವನ್ನು ನಾನು ಒಪ್ಪುತ್ತೇನೆ.

7.50 ಪಿಎಂ

ಆ ನಿಧಿಗೆ ನಾವು ಹಣವನ್ನು ಹೇಗೆ ಸಂಯೋಜಿಸಬೇಕು ಎನ್ನುವುದರ ಬಗ್ಗೆ ಮಾತುಕತೆಗಳನ್ನು ನಡೆಸುತ್ತಿದ್ದೇವೆ. ಕಬ್ಬು ಬೆಳೆಗಾರರು ಯಾರಿದ್ದಾರೆ, ಅವರು ಕಾರ್ಖಾನೆಗಳಿಗೆ ಕೊಡತಕ್ಕಂಥ ಹಣದ ಒಂದು ಭಾಗವನ್ನು ಈ ಒಂದು ಕಾರ್ಪಸ್ ಅಮೌಂಟ್‌ಗೋಸ್ಕರ ತೆಗೆದಿಡಬೇಕೆನ್ನುವ ದೃಷ್ಟಿಯನ್ನು ನಾವು ಇಟ್ಟುಕೊಂಡಿದ್ದೇವೆ. ಅದು ಅಗತ್ಯ ಬಿದ್ದಾಗ ತಮ್ಮ ಹಾಗೂ ಇತರ ಸದಸ್ಯರುಗಳ ಸಲಹೆಯನ್ನು ಪಡೆಯುತ್ತೇವೆ. ಮಾನ್ಯ ಶೆಟ್ಟರ್ ಅವರು, ವೀರಪ್ಪ ಮೊಯಿಲಿ ಅವರ ಅಧ್ಯಕ್ಷತೆಯಲ್ಲಿ ಟ್ಯಾಕ್ಸ್ ರೆಫಾರ್ಮ್ಸ್ ಕಮಿಟಿ ಏನಿದೆ, ಇನ್ನು ಹೆಚ್ಚು ಹಣ ತೆರಿಗೆ ರೂಪದಲ್ಲಿ ಬರಬೇಕು, ಎನ್ನುವುದರ ಬಗ್ಗೆ ಹೇಳಿದರು. ಆದರೆ ಒಂದು ವಿಚಾರವನ್ನು ಮಾನ್ಯ ವಿರೋಧ ಪಕ್ಷದ ನಾಯಕರು ಗಮನಿಸಬೇಕು. ಕಳೆದ ಮೂರು ವರ್ಷಗಳಲ್ಲಿ ಶೇಕಡ 28ರಷ್ಟು ಅನ್ಯಾಯಲ್ ಗ್ರೋಥ್ ರೇಟ್ ಆಫ್ ಟ್ಯಾಕ್ಸ್ ಇನ್ ಎಕ್ಸೈಜ್ ಆಗಿರತಕ್ಕಂಥಾದ್ದು ಇದೆ. ಸಾಧಾರಣವಾಗಿ ಹತ್ತು ಪರ್ಸೆಂಟ್ ಅಕ್ಸೆಪ್ಟಬಲ್ ರೇಷಿಯೋ ಆದರೆ 28 ಪರ್ಸೆಂಟ್ ಆವರೇಜ್ ಗ್ರೋಥ್ ರೇಟ್ ಏನಿದೆ ಇದು ಅಸಾಧಾರಣ ಬೆಳವಣಿಗೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದು ಸಾಧ್ಯವಾಗಿರುವುದನ್ನು ಸಭೆಯ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ. ಮರ್ಜರ್ ಆಫಅ ಸೇಲ್ಸ್ ಟ್ಯಾಕ್ಸ್, ವಿತ್ ಎಕ್ಸೈಜ್ ಮಾಡಿದ್ದರಿಂದ ನಾವು ಇನ್ನೂ ಹೆಚ್ಚು ಹಣವನ್ನು ಕ್ರೋಢೀಕರಿಸುವುದಕ್ಕೆ ಸಾಧ್ಯವಾಯಿತು. ಹುಬ್ಬಳ್ಳಿ-ಧಾರವಾಡ ಮತ್ತಿತರ ಭಾಗಗಳಲ್ಲಿ ಈ ಸೆಕೆಂಡ್ಸ್ ಹಾವಳಿ ಜಾಸ್ತಿಯಾಗುತ್ತಿದೆ. ಅನಧಿಕೃವಾದಂತಹ ವ್ಯಾಪಾರಸ್ಥರು ಹುಟ್ಟಿಕೊಳ್ಳುತ್ತಿದ್ದಾರೆಂದು ಆಗಿಂದ್ದಾಗೆ ನಮ್ಮ ಗಮನಕ್ಕೆ ವಿಚಾರಗಳನ್ನು ತರುತ್ತಿದ್ದೀರಿ. ಇದಕ್ಕೆ ಕಠಿಣವಾದಂತಹ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ಆದುದರಿಂದ ನಾವು ಮುಂದೆ ತೆಗೆದುಕೊಳ್ಳತಕ್ಕಂಥ ಎಲ್ಲಾ ಕ್ರಮಗಳಿಗೂ ಕೂಡ ತಮ್ಮ ಬೆಂಬಲ ಇರುತ್ತದೆಂಬ ಪ್ರೆಸಂಷನ್ ಮೇಲೆ ನಾನು ಮುಂದುವರೆಯುತ್ತಿದ್ದೇನೆ. ಮಾನ್ಯ ಶಿವಾನಂದ ಪಾಟೀಲ್‌ರವರು ಆಹಾರ ಧಾನ್ಯಗಳ ವಿಚಾರ ಪ್ರಸ್ತಾಪ ಮಾಡಿದರು. ಅದು ಅತ್ಯಂತ ಪ್ರಮುಖವಾದಂತಹ ವಿಚಾರ. ಎಂಟು ಲಕ್ಷ ಟನ್ ಫಾರ್ ವರ್ಕ್ಸ್ ಪ್ರೋಗ್ರಾಂ ಅನ್ನು ಮಾಡುವಾಗಲೇ ನಾವು ಡೆವಲಪ್‌ಮೆಂಟ್ ಕಮಿಷನರ್ ಅವರಿಗೆ ಸೂಚನೆಯನ್ನು ಕೊಟ್ಟಿದ್ದೆ. ಅವರು ಕೊಟ್ಟ ತಕ್ಷಣ ಇದನ್ನು ಉಪಯೋಗಿಸಿ ನಮ್ಮ ಜನಗಳಿಗೆ ಕೆಲಸ ಒದಗಿಸತಕ್ಕಂಥ ಕೆಲಸ ಏನಿದೆ ಇದಕ್ಕಿಂತಲೂ ಹೆಚ್ಚಿನ ಮಹತ್ವದ ಕಾರ್ಯ ಸರ್ಕಾರದ ಮುಂದೆ ಇಲ್ಲ. ಆದುದರಿಂದ ನಮ್ಮ ಕೊನೆಯ ರೂಪಾಯಿಯನ್ನು ಇದಕ್ಕೋಸ್ಕರ ನಾವು ತಡೆಹಿಡಿದ್ದು, ಈ ಎಂಟು ಲಕ್ಷ ಟನ್ ಆಹಾರ ಧಾನ್ಯಗಳನ್ನು ನಾವು ಮುಂದಿನ ತಿಂಗಳಲ್ಲಿ ಉಪಯೋಗಿಸಿಕೊಳ್ಳಬೇಕೆಂದು ಏನು ಒಂದು ದೃಢ ನಿರ್ಧಾರ ಇದೆ ಅದನ್ನು ಸಫಲಗೊಳಿಸುವುದಕ್ಕೋಸ್ಕರ ಮಾನ್ಯ ಗೃಹ ಸಚಿವರ ಅಧ್ಯಕ್ಷತೆಯಲ್ಲಿ ಒಂದು ಕ್ಯಾಬಿನೇಟ್ ಸಬ್ ಕಮಿಟಿ ಇದೆ. ಆ ಸಬ್ ಕಮಿಟಿ ಎಂಟೈರ್ ರಿಲೀಫ್ ಆಪರೇಷನ್ ಏನಿದೆ ಬರ ಪರಿಹಾರ ರಿಲೀಫ್ ಆಪರೇಷನ್ ಅದರ ಪೂರ್ಣ ಜವಾಬ್ದಾರಿಯನ್ನು ಅವರು ಪಡೆದಿರುತ್ತಾರೆ. ಆದುದರಿಂದ ತಮ್ಮ ಈ ಕಳಕಳಿಯನ್ನು ನಾನು ಗುರುತಿಸಬಲ್ಲೆ. ಅರ್ಥ ಮಾಡಿಕೊಳ್ಳಬಲ್ಲೆ. ಅದಕ್ಕೆ ನಾವೆಲ್ಲರೂ ಶ್ರಮಿಸಬೇಕು ಎಂದು ಹೇಳಿ ಮತ್ತೆ ಕೆಲವು ಸಲಹೆಗಳು ಬಂದವು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ನಾವು ಲಾಸ್ಟ್‌ನಲ್ಲಿ ಮಾತನಾಡಿದ್ದೇವೆ. ಎಲ್ಲಾ ಮರೆತಿರಿ. ಅದು ಎಲ್ಲೂ ರೆಫರ್ ಆಗಲೆ ಇಲ್ಲ.

ಗೊಂದಲ

ಶ್ರೀ ಎಸ್.ಎಂ. ಕೃಷ್ಣ : ಮಾನ್ಯ ಸುಬ್ಬಾರೆಡ್ಡಿಯವರು ಮಾಡಿರತಕ್ಕಂಥ ಹಲವಾರು ಸಲಹೆಗಳು ಏನಿವೆ, ಆ ಸಲಹೆಗಳನ್ನೆಲ್ಲಾ ಸ್ವಾಗತಿಸಿ, ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಬೆಳೆ ವಿಮೆ ಅವಧಿ ವಿಸ್ತರಣೆ ಬಗ್ಗೆ ಏನೂ ಸ್ಪಷ್ಟೀಕರಣ ಬರಲಿಲ್ಲ.

ಶ್ರೀ ವಿ.ಎಸ್. ಕೌಜಲಗಿ : ಮಾನ್ಯ ಅಧ್ಯಕ್ಷರೆ, ಮೊದಲನೆ ದಿವಸ ತಾವು ಇಲ್ಲಿ ಇವಲಿಲ್ಲ. ಮಾನ್ಯ ಅಜಿತ್ ಸಿಂಗ್ ಅವರು ಮೀಟಿಂಗ್ ಕರೆದಾಗ ನಾನು ಹೋಗಿದ್ದೆ. ಇದನ್ನೇ ಅವರಿಗೆ ರಿಕ್ವೆಸ್ಟ್ ಮಾಡಿಬಿಟ್ಟು ಒಂದು ತಿಂಗಳು ಹೆಚ್ಚಿಗೆ ಕೊಡಿ, ಆಗಸ್ಟ್ 31ರವರೆಗೆ ಎಂದು ಹೇಳಿದಾಗ ಅದಕ್ಕೆ ಅವರು ನಾವು ಪರಿಶೀಲನೆ ಮಾಡುತ್ತೇವೆಂದು ಹೇಳಿದರು. ಇನ್ನುವರೆಗೆ ನಮಗೆ ಅವರಿಂದ ಏನೂ ಕಮ್ಯೂನಿಕೇಷನ್ ಬಂದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ನಾವು ಹೇಳುತ್ತಲೇ ಇದ್ದೇವೆ, ಅದಕ್ಕೆ ಸರ್ಕಾರ ಸ್ಪಂದನ ಕೊಟ್ಟಿಲ್ಲ. ವಿದ್ಯುತ್ ಏರಿಕೆ ಬಗ್ಗೆ ಮಾನ್ಯ ಸದಸ್ಯರು ಸ್ಪಷ್ಟೀಕರಣ ಕೇಳಿದರು. ಮತ್ತೆ 12.5 ಪರ್ಸೆಂಟ್‌ನವರೆಗೂ ಇನ್‌ಕ್ರೀಸ್ ಮಾಡಬೇಕೆಂದು ಸರ್ಕಾರದ ಪ್ರಪೋಸಲ್ ಕೊಟ್ಟಿದೆ. ಹೀಗಾಗಿ ಇವತ್ತು ವಿದ್ಯುತ್ ದರ ಏರಿಕೆ ಬಗ್ಗೆ, ಬರಗಾಲ ಚಿಂತನೆ ಬಗ್ಗೆ ಸರ್ಕಾರದ ಸ್ಪಷ್ಟೀಕರಣ ಬರಲಿಲ್ಲ. ಮತ್ತು ರಾಜಕೀಯ ವ್ಯಕ್ತಿಗಳ ಮೇಲೆ ದೌರ್ಜನ್ಯ ನಡೆಯುವಂತದ್ದರ ಬಗ್ಗೆ ಸರ್ಕಾರದ ಕಡೆಯಿಂದ ಸ್ಪಷ್ಟನೆ ಬರಲಿಲ್ಲ. ರೈತ ವಿರೋಧಿ ಧೋರಣೆಯನ್ನು ಸರ್ಕಾರ ಅನುಕರಣೆ ಮಾಡುತ್ತಿದೆ. ಬರಗಾಲ ಪರಿಸ್ಥಿತಿ ಬಗ್ಗೆ ಮಾತನಾಡುವುದಕ್ಕೆ ಸಿದ್ಧವಿಲ್ಲ. ವಿದ್ಯುತ್ ದರ ಏರಿಕೆ ಮಾಡುತ್ತಿದ್ದಾರೆ. ರಾಜಕೀಯ ಕಾರ್ಯಕರ್ತರ ಮೇಲೆ ದೌರ್ಜನ್ಯ ನಡೆಯುತ್ತಿದೆ. ಹೀಗಾಗಿ ಇದನ್ನು ನಾವು ಪ್ರತಿಭಟನೆ ಮಾಡುತ್ತಾ, ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಭಾರತೀಯ ಜನತಾ ಪಾರ್ಟಿ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಮಗೆ ಸಭಾತ್ಯಾಗ ಮಾಡಬೇಕು ಎನ್ನುವ ಉದ್ದೇಶ ಇಲ್ಲ. ಆದರೆ ಪ್ರತಿಭಟನೆ ಮಾಡಬೇಕೆಂದು ಇದ್ದೇವೆ. ಏಕೆಂದರೆ ಆಂಧ್ರ ಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಹೋಗಿದ್ದರು. ಅವರು ಹೋದಂತಹ ಸಂದರ್ಭದಲ್ಲಿ ಕಾಂಗ್ರೆಸ್ ಪಾರ್ಟಿ ಹಣದಿಂದ ಅಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವಂತಹ ರೈತರಿಗೆ ದುಡ್ಡು ಕೊಟ್ಟಿದ್ದೀರಿ. ಇಲ್ಲಿ ನಾವು ರಾಜ್ಯ ಸರ್ಕಾರದ ಬೊಕ್ಕಸದ ಜವಾಬ್ದಾರಿಯನ್ನು ತೆಗೆದುಕೊಂಡ ಸಂದರ್ಭದಲ್ಲಿ ಒಂದು ಲಕ್ಷ ರೂಪಾಯಿ ಕೊಡುತ್ತಿದ್ದೆವು. ನಾವು ಎರಡೂವರೆ ವರ್ಷದಿಂದ ಹೇಳುತ್ತಿದ್ದೇವೆ, ವೀರೇಶ್ ವರದಿ ಆಯಿತು. ಆ ವರದಿ ಬಂದು ಆರು ತಿಂಗಳಾಯಿತು. ನಿಮ್ಮ ಸಚಿವ ಸಂಪುಟದ ಮುಂದೆ ಇದನ್ನು ಇನ್ನು ಪರಿಶೀಲನೆ ಮಾಡುತ್ತಿದ್ದೀರಿ. ಇದು ಒಂದು ವಿಚಾರವಾಯಿತು. ಎಐಸಿಸಿಯಿಂದ ಆಂಧ್ರಪ್ರದೇಶದ ಕಾಂಗ್ರೆಸ್ ಪಾರ್ಟಿ ಅಧ್ಯಕ್ಷರು ರೈತರಿಗೆ ನಾವು ಪುಕ್ಕಟೆಯಾಗಿ ಕರೆಂಟ್ ಕೊಡುತ್ತೇವೆ ಎಂದರೆ ಅದಕ್ಕೆ ಒಪ್ಪಿಗೆ ಎಂದು ಹೇಳುತ್ತೀರಿ. ಇಲ್ಲಿ ಹದಿಮೂರುವರೆ ಪರ್ಸೆಂಟ್ ಹೆಚ್ಚಿಗೆ ಮಾಡಿದ್ದೀರಿ. ಇದು ಯಾವ ನ್ಯಾಯ? ಮತ್ತೆ ಬರಗಾಲದ ವಿಚಾರದಲ್ಲಿ ತಾವು ಮಾನ್ಯ ಖರ್ಗೆಯವರ ಅಧ್ಯಕ್ಷತೆಯಲ್ಲಿ ಕ್ಯಾಬಿನೇಟ್ ಸಬ್ ಕಮಿಟಿ ಮಾಡಿದ್ದೀರಿ.

What is that you going to give to the drinking water, employment affirmation scheme? ಡ್ರಿಂಕಿಂಗ್ ವಾಟರ್‌ಗೆ ಎಷ್ಟು ಕೊಡುತ್ತಿದ್ದೀರಿ? ಎಂಪ್ಲಾಯ್‌ಮೆಂಟ್ ಅಫರ್ಮೇಷನ್ ಸ್ಕೀಮ್‌ನಲ್ಲಿ ಎಷ್ಟು ಜನರೇಷನ್ ಮಾಡಿದ್ದೀರಿ? We would like to know. ಇದನ್ನೂ ಸಹ ತಿಳಿದುಕೊಳ್ಳುವುದಕ್ಕೆ ಆಗದೆ ಹೋದರೆ ಹೇಗೆ? ಇನ್ನು ಹೆಲಿಕಾಪ್ಟರ್ ಫ್ಯೂಯೂಸ್ ಆಗಿದೆ. ಆಕ್ಸಿಡೆಂಟ್ ಆಗಿದೆ. ಅದರ ಬಗ್ಗೆ ಎನ್‌ಕ್ವೈರಿಯಾಗಬೇಕು ಎನ್ನುವಂತಹ ಮಾತನ್ನು ಸಹ ಹೇಳಿದೆ. ಅದಕ್ಕೂ ಸಹ ತಮ್ಮಿಂದ ಉತ್ತರ ಇಲ್ಲ. ಇನ್ನು ಬಹಳ ಪ್ರಮುಖವಾಗಿ ನಮ್ಮ ಪೊಲಿಟಿಕಲ್ ಪಾರ್ಟಿಯಿಂದ ವರ್ಕರ್ಸ್ ಅನ್ನು ಹೆರ್ಯಾಸ್ ಮಾಡಿ ಮರ್ಡರ್, ಅಟೆಂಪ್ಟ್ ಕೇಸ್ ಅನ್ನು ಮಂಜುನಾಥ್ ಅವರ ಮೇಲೆ ಹಾಕಿದ್ದೀರಿ. ಅದನ್ನು ವಿತ್‌ಡ್ರಾ ಮಾಡಬೇಕು ಎಂದಾಗ ಅದಕ್ಕೆ ಉತ್ತರ ಬಾರದೆ ಹೋದರೆ, ಇದನ್ನು ನಾವು ತೀವ್ರವಾಗಿ ಪ್ರತಿಭಟನೆ ಮಾಡುತ್ತೇವೆ.

(ಈ ಹಂತದಲ್ಲಿ ಜನತಾ ದಳ(ಯು) ಸದಸ್ಯರುಗಳು ಸಭಾತ್ಯಾಗ ಮಾಡಿದರು)

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇಷ್ಟೆಲ್ಲಾ ಉತ್ತರ ಕೇಳಿ, ವಾಕೌಟ್ ಮಾಡುವುದು ಎಂದರೆ, ಬರೀ ರಾಜಕೀಯ.

ಅಧ್ಯಕ್ಷರು : ಬೆಳಿಗ್ಗೆಯಿಂದ ಏಕೆ ಮಾತನಾಡಬೇಕಾಗಿತ್ತು. ಏನೇನು ಮಾತನಾಡಬೇಕು ಎಲ್ಲಾ ಮಾತನಾಡಿದರು. ಉತ್ತರ ತೆಗೆದುಕೊಂಡರು. ಮುಖ್ಯಮಂತ್ರಿಗಳು ನಿಂತಿದ್ದಾರೆ, ಅವರು ಏನು ಉತ್ತರ ಕೊಡುತ್ತಾರೋ ಕೇಳಿ.

ಗೊಂದಲ

ಶ್ರೀ ಸಿ. ಚೆನ್ನಿಗಪ್ಪ : ಮಾನ್ಯ ಅಧ್ಯಕ್ಷರೆ, ನಾನು ಒಪ್ಪಿಕೊಳ್ಳುತ್ತೇನೆ, ಇಲ್ಲ ಎಂದು ಅಲ್ಲ. ನನ್ನ ನಿವೇದನೆ..... ನಾನು ಧರಣಿ ಮಾಡುವುದಿಲ್ಲ, ಸಭಾತ್ಯಾಗ ಮಾಡುವುದಿಲ್ಲ. ಉತ್ತರ ಬೇಕು.

ಅಧ್ಯಕ್ಷರು : ಈಗ 2002-03ನೇ ಸಾಲಿನ ಅನುದಾನ ಬೇಡಿಕೆಗೆ ಸಂಬಂಧಿಸಿದಂತೆ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತೇನೆ. ಪ್ರಸ್ತಾಪ ಏನೆಂದರೆ;

"ದಿ : 31.3.2003ರಂದು ಕೊನೆಗೊಳ್ಳುವ ಆರ್ಥಿಕವರ್ಷದಲ್ಲಿ ಬರುವ ಅಭಿಯಾಚನೆ ಕ್ರಮಾಂಕ ಸಂಖ್ಯೆ 1 ರಿಂದ 45 47 ರಿಂದ 53 ಮತ್ತು 56 ರಿಂದ 62ರವರೆಗೆ ಸಂಬಂಧಿಸಿದ ಸಂದಾಯವಾಗುವ ವೆಚ್ಚವನ್ನು ಭರಿಸಲು ಸರ್ಕಾರಕ್ಕೆ (ರಾಜಸ್ವ ಖಾತೆಯಲ್ಲಿ ಹಾಗೂ ಬಂಡವಾಳ ಖಾತೆಯಲ್ಲಿ ಮಂಜೂರು ಮಾಡಿದ ಮೊಬಲಗನ್ನು ಸೇರಿದಂತೆ) ಬೇಡಿಕೆ ಪಟ್ಟಿಯಲ್ಲಿ ನಮೂದಿಸಿದ ಮೊಬಲಿಗಿಗೆ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಬೇಡಿಕೆಗಳಿಗೆ ಮಂಜೂರಾತಿ ನೀಡಲಾಯಿತು.

(ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ 14 - ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವರಮಾನ, ವೃತ್ತಿಗಳು, ಮಾರಾಟ ಮತ್ತು ಇತರೆ ಸೇವೆಗಳ ಮೇಲಿನ ತೆರಿಗೆಗಳು"

ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 13,324.93 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 15 – ವಿಶ್ರಾಂತಿ ವೇತನ ಮತ್ತು ಇತರೆ ನಿವೃತ್ತಿ ಸೌಲಭ್ಯಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿಶ್ರಾಂತಿ ವೇತನ ಮತ್ತು ಇತರೆ ನಿವೃತ್ತಿ ಸೌಲಭ್ಯಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,93,818.07 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 16 – ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸರ್ಕಾರಿ ನೌಕರರಿಗೆ ಸಹಾಯ ಮತ್ತು ವಿವಿಧ ಸಾಲಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,800.00 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,313.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 17 – ಖಜಾನೆ ಮತ್ತು ಲೆಕ್ಕಗಳ ಆಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಖಜಾನೆ ಮತ್ತು ಲೆಕ್ಕಗಳ ಆಡಳಿತ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 5,932.62 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 18 – ಇತರೆ ವಿವಿಧ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಇತರೆ ವಿವಿಧ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 37.24 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 20 – ಪೊಲೀಸ್ ಜಾಗೃತದಳ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪೊಲೀಸ್ ಜಾಗೃತದಳ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,443.78 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 21 – ಬೆಂಗಳೂರು ಅಭಿವೃದ್ಧಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬೆಂಗಳೂರು ಅಭಿವೃದ್ಧಿ ಯೋಜನೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ....-............ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 9,810.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 22 – ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯಪಾಲರು, ಮಂತ್ರಿಗಳು ಮತ್ತು ಲೋಕಸೇವಾ ಆಯೋಗ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,093.79 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 23 – ಸಚಿವಾಲಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಚಿವಾಲಯ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 7,272.85 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 24 – ಸಾಮಾನ್ಯ ಆಡಳಿತ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಾಮಾನ್ಯ ಆಡಳಿತ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 4,268.22 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 62 – ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಮತ್ತು ಬೆಂಗಳೂರು ಮಹಾನಗರ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಲಿ ಮತ್ತು ಬೆಂಗಳೂರು ಮಹಾನಗರ ಪ್ರಾದೇಶಿಕ ಅಭಿವೃದ್ಧಿ ಪ್ರಾಧಿಕಾರ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 14,263.00 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ

18,200.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 32 – ಒಳಾಡಳಿತ
(ಪೊಲೀಸ್ ಜಾಗೃತದಳ ಹೊರತುಪಡಿಸಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಒಳಾಡಳಿತ (ಪೊಲೀಸ್ ಜಾಗೃತದಳ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 85,686.26 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 2,190.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 39 – ಸಣ್ಣ ನೀರಾವರಿ (ಅಂತರ್ಜಲ ಹೊರತುಪಡಿಸಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಣ್ಣ ನೀರಾವರಿ (ಅಂತರ್ಜಲ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 8,428.25 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 11,141.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 38 – ಭಾರಿ ಮತ್ತು ಮಧ್ಯಮ ನೀರಾವರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಭಾರಿ ಮತ್ತು ಮಧ್ಯಮ ನೀರಾವರಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 10,901.58 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,93,460.26 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 44 – ಲೋಕೋಪಯೋಗಿ ಕಾಮಗಾರಿ (ಬಂದರು ಮತ್ತು ಒಳನಾಡು ಸಾರಿಗೆ ಹೊರತುಪಡಿಸಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೋಕೋಪಯೋಗಿ ಕಾಮಗಾರಿ (ಬಂದರು ಮತ್ತು ಒಳನಾಡು ಸಾರಿಗೆ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 67,962.16 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 87,483.90 ಲಕ್ಷ ರೂ.ಗಳಿಗಿಂತ ಮೀರಿದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 3 - ಪಶುಸಂಗೋಪನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪಶುಸಂಗೋಪನೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 17,027.12 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10.00 ಲಕ್ಷ ರೂ.ಗಳಿಗಿಂದ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 53 - ಸಕ್ಕರೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಕ್ಕರೆ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 36.29 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 887.80 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 30 - ಅರಣ್ಯ, ಜೀವಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಅರಣ್ಯ, ಜೀವಪರಿಸ್ಥಿತಿ ಶಾಸ್ತ್ರ ಮತ್ತು ಪರಿಸರ' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 30,100.25 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,035.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 49 - ಮಹಿಳಾ ಮತ್ತು ಶಿಶು ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಹಿಳಾ ಮತ್ತು ಶಿಶು ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 26,246.91 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 100.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 37 - ನಗರಾಭಿವೃದ್ಧಿ (ಬೆಂಗಳೂರು ಅಭಿವೃದ್ಧಿ ಯೋಜನೆಗಳನ್ನು ಹೊರತುಪಡಿಸಿ) ನಗರಾಭಿವೃದ್ಧಿ ಪ್ರಾಧಿಕಾರಗಳ ಮತ್ತು ನಗರ ಯೋಜನಾ ಇಲಾಖೆ, ಮುನಿಸಿಪಲ್ ಕಾರ್ಪೋರೇಷನ್‌ಗಳು (ಬೆಂಗಳೂರು ಮಹಾನಗರ ಪಾಲಿಕೆ ಹೊರತುಪಡಿಸಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರಾಭಿವೃದ್ಧಿ ಪ್ರಾಧಿಕಾರಿಗಳು (ಬೆಂಗಳೂರು ಅಭಿವೃದ್ಧಿ ಯೋಜನೆಗಳನ್ನು ಹೊರತುಪಡಿಸಿ) ನಗರಾಭಿವೃದ್ಧಿ ಪ್ರಾಧಿಕಾರಗಳ ಮತ್ತು ನಗರ ಯೋಜನಾ ಇಲಾಖೆ, ಮುನಿಸಿಪಲ್ ಕಾರ್ಪೋರೇಷನ್‌ಗಳು (ಬೆಂಗಳೂರು ಮಹಾನಗರ ಪಾಲಿಕೆ ಹೊರತುಪಡಿಸಿ) " ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 74,678.49

ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,415.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 48 – ಸಮಾಜ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಮಾಜ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 54,398.35 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 6,654.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 51 – ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 80,791.07 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 3,716.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 33 – ವಾರ್ತಾ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಾರ್ತಾ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,137.73 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 45 – ಸಹಕಾರ (ಕೃಷಿ ಮಾರುಕಟ್ಟೆ ಹೊರತುಪಡಿಸಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಹಕಾರ (ಕೃಷಿ ಮಾರುಕಟ್ಟೆ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 4,880.22 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,618.33 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 6 – ಗಣಿ ಮತ್ತು ಭೂ ವಿಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಗಣಿ ಮತ್ತು ಭೂ ವಿಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,438.48 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 56 - ಅಂತರ್ಜಲ (ಜಲಸಂಪನ್ಮೂಲ ಇಲಾಖೆಯಿಂದ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಅಂತರ್ಜಲ (ಜಲ ಸಂಪನ್ಮೂಲ ಇಲಾಖೆಯಿಂದ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,084.15 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 40 - ರಾಜ್ಯ ಶಾಸಕಾಂಗ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯ ಶಾಸಕಾಂಗ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,851.53 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 41 - ನ್ಯಾಯ ಪರಿಪಾಲನೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನ್ಯಾಯ ಪರಿಪಾಲನೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 13,980.77 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 1 - ಕೃಷಿ (ಮಲೆನಾಡು ಅಭಿವೃದ್ಧಿ ಮಂಡಳಿ ಹೊರತುಪಡಿಸಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕೃಷಿ (ಮಲೆನಾಡು ಅಭಿವೃದ್ಧಿ ಮಂಡಳಿ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 45,844.27 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 5 - ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಮಾ.ತಂ ಬಿಟ್ಟು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಭಾರಿ ಮತ್ತು ಮಧ್ಯಮ ಪ್ರಮಾಣದ ಕೈಗಾರಿಕೆಗಳು (ಮಾ.ತಂ ಬಿಟ್ಟು)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 26,133.33 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 30,482.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 7 - ಚಿಕ್ಕಪುಟ್ಟ ಉದ್ಯಮಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಚಿಕ್ಕಪುಟ್ಟ ಉದ್ಯಮಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 17,371.11 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 600.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 42 - ಕಂದಾಯ (ವಕ್ಫ, ಹಜ್ ಮತ್ತು ಮುಜರಾಯಿ ಹೊರತುಪಡಿಸಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಂದಾಯ (ವಕ್ಫ, ಹಜ್ ಮತ್ತು ಮುಜರಾಯಿ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 56.932.06 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 0.65 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 31 - ಸಾರಿಗೆ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಾರಿಗೆ ಸೇವೆಗಳು' ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 14,657.04 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 35 - ಕೃಷಿ ಮಾರುಕಟ್ಟೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕೃಷಿ ಮಾರುಕಟ್ಟೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 4,001.73 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 43 - ಯೋಜನೆ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ (ವಿಜ್ಞಾನ ಮತ್ತು ತಂತ್ರಜ್ಞಾನ ಹೊರತುಪಡಿಸಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯೋಜನೆ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ (ವಿಜ್ಞಾನ ಮತ್ತು ತಂತ್ರಜ್ಞಾನ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,109.70 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 5.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 2 - ತೋಟಗಾರಿಕೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ತೋಟಗಾರಿಕೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 9,884.10 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 36 - ವಸತಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಸತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 19,504.93 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 10.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 47 - ಕಾರ್ಮಿಕ ಮತ್ತು ವಕ್ಫ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕಾರ್ಮಿಕ ಮತ್ತು ವಕ್ಫ್" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 16,320.25 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 50 - ವೈದ್ಯಕೀಯ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವೈದ್ಯಕೀಯ ಶಿಕ್ಷಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 25,632.02 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 250.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 8 - ರೇಷ್ಮೆ ವ್ಯವಸಾಯ ಮತ್ತು ವಸ್ತ್ರೋದ್ಯಮಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರೇಷ್ಮೆ ವ್ಯವಸಾಯ ಮತ್ತು ವಸ್ತ್ರೋದ್ಯಮಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 16,90[illegible].51 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 494.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 29 - ಆಹಾರ ಮತ್ತು ನಾಗರೀಕ ಸರಬರಾಜು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಆಹಾರ ಮತ್ತು ನಾಗರೀಕ ಸರಬರಾಜು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 32,365.37 ಲಕ್ಷ ರೂ. ಗಳಿಗಿಂತ

ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 530.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 9 - ಉನ್ನತ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಉನ್ನತ ಶಿಕ್ಷಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 58,210.80 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 34.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 10 - ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ವೃತ್ತಿಪರ ಶಿಕ್ಷಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಹಾಗೂ ವೃತ್ತಿಪರ ಶಿಕ್ಷಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,20,689.56 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 468.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 27 - ಮುಜರಾಯಿ (ವಕ್ಫ್ ಮತ್ತು ಹಜ್ ಹೊರತುಪಡಿಸಿ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮುಜರಾಯಿ (ವಕ್ಫ್ ಮತ್ತು ಹಜ್ ಹೊರತುಪಡಿಸಿ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,074.85 ಲಕ್ಷ ರೂ. ಗಳಿಗಿಂತ (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 60 - ನಗರ ಪುರಸಭೆಗಳು, ಪಟ್ಟಣ ಪುರಸಭೆಗಳು ಮತ್ತು ಟೌನ್ ಪಂಚಾಯತ್‌ಗಳು (ನಗರಾಭಿವೃದ್ಧಿ ಇಲಾಖೆಯಿಂದ)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಗರ ಪುರ ಸಭೆಗಳು, ಪಟ್ಟಣ ಪುರಸಭೆಗಳು ಮತ್ತು ಟೌನ್ ಪಂಚಾಯತ್‌ಗಳು (ನಗರಾಭಿವೃದ್ಧಿ ಇಲಾಖೆಯಿಂದ)" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1152.76 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 400.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 59 - ವಯಸ್ಕರ ಶಿಕ್ಷಣ ಮತ್ತು, ಸಾರ್ವಜನಿಕ ಗ್ರಂಥಾಲಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಯಸ್ಕರ ಶಿಕ್ಷಣ ಮತ್ತು ಸಾರ್ವಜನಿಕ ಗ್ರಂಥಾಲಯ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,806.70 ಲಕ್ಷ ರೂ.ಗಳಿಗಿಂತ

ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 11 - ಲೇಖನ ಸಾಮಗ್ರಿ ಮತ್ತು ಮುದ್ರಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಲೇಖನ ಸಾಮಗ್ರಿ ಮತ್ತು ಮುದ್ರಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,237.49 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 12 - ಯುವಜನ ಸೇವೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಯುವಜನ ಸೇವೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 1,808.24 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 34 - ಪ್ರವಾಸೋದ್ಯಮ ಮತ್ತು ಹಜ್

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಪ್ರವಾಸೋದ್ಯಮ ಮತ್ತು ಹಜ್" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,224.00 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 52 - ಮಾಹಿತಿ ತಂತ್ರಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮಾಹಿತಿ ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 802.00 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 26 - ಸಣ್ಣ ಉಳಿತಾಯ, ರಾಜ್ಯ ಲಾಟರಿ ಮತ್ತು ವಿಮೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಸಣ್ಣ ಉಳಿತಾಯ, ರಾಜ್ಯ ಲಾಟರಿ ಮತ್ತಪ ವಿಮೆ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 51,372.54 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ....-.......... ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 58 - ನಾಗರೀಕ ವಿಮಾನಯಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ನಾಗರೀಕ ವಿಮಾನಯಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 60.00 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ....-............ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 57 - ಮೂಲಭೂತ ಸೌಕರ್ಯಗಳ ಅಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೂಲಭೂತ ಸೌಕರ್ಯಗಳ ಅಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 100.00 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 13 - ಕನ್ನಡ ಮತ್ತು ಸಂಸ್ಕೃತಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಕನ್ನಡ ಮತ್ತು ಸಂಸ್ಕೃತಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,998.27 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 150.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 19 - ರಾಜ್ಯ ಅಬಕಾರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ರಾಜ್ಯ ಅಬಕಾರಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 3,980.01 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 28 - ಬಂದೀಖಾನೆ, ಗೃಹ ರಕ್ಷಣಾದಳ, ನಾಗರೀಕ ರಕ್ಷಣೆ ಮತ್ತು ಸೈನಿಕರ ಕಲ್ಯಾಣ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಬಂದೀಖಾನೆ, ಗೃಹ ರಕ್ಷಣಾದಳ, ನಾಗರೀಕ ರಕ್ಷಣೆ ಮತ್ತು ಸೈನಿಕರ ಕಲ್ಯಾಣ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 7,312.97 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 40.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 4 - ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 13,403.34 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 1,58.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 61 - ವಿಜ್ಞಾನ ಮತ್ತು ತಂತ್ರಜ್ಞಾನ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿಜ್ಞಾನ ಮತ್ತು ತಂತ್ರಜ್ಞಾನ" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 162.75 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ......-............ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ 25 - ವಿದ್ಯುಚ್ಛಕ್ತಿ ಯೋಜನೆಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ 31-3-2003 ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ "ವಿದ್ಯುಚ್ಛಕ್ತಿ ಯೋಜನೆಗಳು" ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ 2,46,041.16 ಲಕ್ಷ ರೂ. ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ 700.00 ಲಕ್ಷ ರೂ.ಗಳಿಗಿಂತ ಮೀರದ ಮೊತ್ತವನ್ನು (ಲೇಖಾನುದಾನವಾಗಿ ಮಂಜೂರಾದ ಮೊತ್ತವೂ ಸೇರಿದಂತೆ) ಮಂಜೂರು ಮಾಡುವುದು.

3. ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕ, 2002

(ಮಂಡನೆಗೆ ಅನುಮತಿ ಕೋರಿಕೆ)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "2002ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿಯನ್ನು ಕೋರುತ್ತೇನೆ."

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ, "2002ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, "2002ರ ಕರ್ನಾಟಕ ಧನವಿನಿಯೋಗ (ಸಂಖ್ಯೆ 2) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ"

ಅಧ್ಯಕ್ಷರು : ವಿಧೇಯಕವನ್ನು ಮಂಡಿಸಲಾಯಿತು.